THE BOOK WAS DRENCHED

TEXT PROBLEM WITHIN THE BOOK ONLY

UNIVERSAL LIBRARY
OU_200165
UNIVERSAL LIBRARY

# ಮಗಳ ಮದುವೆ

( ಸ್ವತಂತ್ರ ಸಾಮಾಜಿಕ ಕಾದಂಬರಿ )

‘ ಆನಂದಕಂದ ’

ಸಪ್ಟೆಂಬರ್ ೧೯೫೨

ಶರತ್ ಪ್ರಕಾಶನ ಮಂದಿರ, ಧಾರವಾಡ

ಪ್ರಕಾಶಕರು :
ಶ್ರೀ ಎಸ್. ಡಿ. ಧರ್ಮಟ್ಟಿ
ಶರತ್. ಪ್ರಕಾಶನ ಮಂದಿರ, ಧಾರವಾಡ

ಬೆಲೆಯ ವಿವರ :

ಸಾದಾ ಪ್ರತಿಗೆ : ೪—೦—೦
ಉತ್ತಮ ಪ್ರತಿಗೆ : ೪—೧೨—೦

(ಇದರ ಎಲ್ಲ ಬಗೆಯ ಅಧಿಕಾರಗಳೂ ಲೇಖಕರ ಅಧೀನದಲ್ಲಿವೆ.)

ಮುದ್ರಕರು :
ಶ್ರೀ ಎಸ್. ಎಲ್. ಜೋಶಿ
ಮೋಹನ ಮುದ್ರಣಾಲಯ, ಧಾರವಾಡ

★

ಬಹಳ ವರ್ಷಗಳ ತರುವಾಯ, ಮತ್ತೆ ಕಾದಂಬರೀ ಲೇಖನಕ್ಕೆ ಕೈಯಿಕ್ಕಿದ್ದೇನೆ. ನಾನು ಕಾದಂಬರಿಯನ್ನು ಬರೆಯದೆ ಇರುವುದನ್ನು ಕುರಿತು, ಈ ಮೊದಲಿನ ನನ್ನ ಕಾದಂಬರಿಗಳನ್ನು ಓದಿ ಮೆಚ್ಚಿದ ವಾಚಕಮಿತ್ರರನೇಕರು, ಕಳವಳ ಪಟ್ಟು ಆಗಾಗ ನನಗೆ ಕಾಗದ ಬರೆದುದುಂಟು. ಕೆಲವು ಸ್ನೇಹಿತರಂತೂ ‘ನೀವು ಕಾದಂಬರಿ ಬರೆಯುವುದನ್ನು ನಿಲ್ಲಿಸಿದುದು ಕನ್ನಡ ಸಾಹಿತ್ಯಕ್ಕೊಂದು ದೊಡ್ಡ ಹಾನಿ!’ ಎಂದು ಬರೆದು ತಿಳುಹಿದುದೂ ಉಂಟು. ಹಾಗೆ ಅವರಿಗೆ ಎನಿಸಿದುದಕ್ಕೆ ಕಾರಣ, ನಿಜವಾಗಿಯೂ ನನ್ನ ಕಾದಂಬರಿಗಳಲ್ಲಿಯ ಗುಣವೋ. ನನ್ನ ವಿಷಯಕವಾದ ವಿಶ್ವಾಸವೋ! ಇನ್ನೊಂದು ಮೋಜಿನ ವಿಷಯವೆಂದರೆ, ಒಬ್ಬ ‘ಸುಪ್ರಸಿದ್ಧ’ ಲೇಖಕರು, ಇನ್ನಾವ ವಿಚಾರದಲ್ಲಿಯೋ ನನ್ನನ್ನು ಆಕ್ಷೇಪಿಸಿ ನುಡಿಯುತ್ತಿರುವಾಗ, ಕಾದಂಬರಿ ಬರೆಯುವ ಪ್ರತಿಭೆ ನನ್ನದು ಬತ್ತಿ ಹೋಗಿರುವುದೆಂದು ಉಪಹಾಸದ ಮಾತನ್ನಾಡಿರುವರಂತೆ. ‘ಅಶಾಂತಿ ಪರ್ವ’ದ ತರುವಾಯ ೧೭–೧೮ ವರ್ಷಗಳಲ್ಲಿ ನಾನು ಬೇರೆ ಕಾದಂಬರಿ ಬರೆಯದಿದ್ದುದು ನಿಜ; ಆದರೆ ನನ್ನ ಪ್ರತಿಭೆ ಬತ್ತಿದೆಯೋ ಜೀವಂತವಾಗಿದೆಯೋ ಎಂಬುದನ್ನು, ನನ್ನನ್ನು ಆಕ್ಷೇಪಿಸಿದ ಸಾಹಿತ್ಯಿಕ ಮಿತ್ರರು, ಈ ಕಾದಂಬರಿಯನ್ನು ಓದಿ ಪರೀಕ್ಷೆ ಮಾಡಲಿ! ನಾನೀಗ ಕಾದಂಬರೀ ಲೇಖನಕ್ಕೆ ಮತ್ತೆ ಕೈಹಾಕಿರುವೆನೆಂಬ ವಿಷಯ ಅವರಿಗೆ ತಿಳಿದಿದ್ದರೆ, ಬಹುಶಃ ಹಾಗೆ ನನ್ನನ್ನು ಉಪಹಾಸ ಮಾಡುತ್ತಿರಲಿಲ್ಲವೆಂದು ನನ್ನ ಭಾವನೆ.

ಇದೊಂದು ಸಾಮಾಜಿಕ ಕಥಾವಸ್ತುವನ್ನು ಒಳಗೊಂಡ ಕಾದಂಬರಿ. ೧೯೩೦ನೆಯ ಇಸ್ವಿಯ ರಾಜಕೀಯ ಚಳವಳಿಯ ವಾತಾವರಣವನ್ನು ಹಿನ್ನೆಲೆಗೆ ಇಟ್ಟುಕೊಂಡು, ಉತ್ತರ ಕರ್ನಾಟಕದ ಜನಜೀವನದ ಚಿತ್ರದ ವಿವಿಧ ಮಾದರಿಗಳನ್ನು ಇದರಲ್ಲಿ ರೂಪಿಸಲಾಗಿದೆ. ಕಥಾವಸ್ತುವಿನ ಕಾಲಪರಿಮಿತಿಯು ೨೪–೨೫ ದಿನಗಳಿಗಿಂತ ಹೆಚ್ಚಾಗಿ ಇಲ್ಲ. ಕಥಾಪಾತ್ರಗಳ

ಅಂತಃಸ್ವರೂಪದ ವಾಸ್ತವ ಚಿತ್ರಣವನ್ನೇ ಈ ಕಾದಂಬರಿಯ ವೈಶಿಷ್ಟ್ಯವನ್ನಾಗಿ ಮಾಡಿತೋರಿಸಬೇಕೆಂಬ ಗುರಿ ನನ್ನದು. ಅದು ಎಷ್ಟರ ಮಟ್ಟಿಗೆ ಸಾಧಿಸಿದ್ದೆ-ಯೆಂಬುದನ್ನು, ಸಹೃದಯ ವಾಚಕರು ಸರಿಯಾಗಿ ಕಂಡುಹಿಡಿಯಬಹುದು.

ಇದರಲ್ಲಿ ನಿರೂಪಿತವಾದ ಕಥೆ, ಒಂದು ವಿಶಿಷ್ಟವಾದ ನೆಲೆಯನ್ನು ಮುಟ್ಟಿ ಒಂದು ಕಾದಂಬರಿಯನ್ನು ಸಂಪೂರ್ಣಗೊಳಿಸಿದೆಯೆಂದು ನನ್ನ ಅಭಿಪ್ರಾಯ. ಆದರೆ ಇದೇ ಕತೆಯಲ್ಲಿಯ ಪ್ರಮುಖ ಪಾತ್ರಗಳ ಮುಂದಿನ ಜೀವನದ ಬೆಳವಣಿಗೆಯನ್ನು ಪವಣಿಸಿ, ಮತ್ತೊಂದು ಕಾದಂಬರಿಯನ್ನು ಬರೆಯಬೇಕೆಂಬ ಬಯಕೆಯನ್ನೂ ಇರಿಸಿಕೊಂಡಿದ್ದೇನೆ. ಇದರ ಮಟ್ಟಿಗೆ ಇದೊಂದು ಸಂಪೂರ್ಣ ಕಾದಂಬರಿಯಾದಂತೆ, ಅದರಷ್ಟಕ್ಕೆ ಅದೂ ಒಂದು ಪ್ರತ್ಯೇಕ ಸಂಪೂರ್ಣ ಕಾದಂಬರಿಯಾಗುವುದೆಂದು ನನ್ನ ವಿಶ್ವಾಸ. ಎರಡನ್ನೂ ಕೂಡಿಸಿ ಓದಿದರೆ, ಅವು ಒಂದು ದೀರ್ಘ ಜೀವನದ ಪೂರ್ವಾರ್ಧ-ಉತ್ತರಾರ್ಧಗಳೂ ಎನಿಸಬಹುದು. ಅನೇಕ ವಾಚಕರ ದೃಷ್ಟಿಯಿಂದ ಇದರಲ್ಲಿ ಅಪೂರ್ಣವಾದಂತೆ ತೋರಬಹುದಾದ ಕುಮುದಾ-ರತ್ನಾಕರರ ಜೀವನವು, ಆ ಕಾದಂಬರಿಯಲ್ಲಿ ಪೂರ್ಣವಾಗಿರುವುದು—ಎನಿಸುವಂತೆ ಚಿತ್ರಿತವಾಗುವುದು. ಅದರೊಂದಿಗೆ ಈ ಕಾದಂಬರಿಯಲ್ಲಿಯ ಉಪಪಾತ್ರಗಳಾಗಿರುವ ಕಾವೇರಿ, ರಂಗಣ್ಣ, ವೆಂಕಣ್ಣರ ಮುಂದಿನ ಚರಿತ್ರವೂ ಆನುಷಂಗಿಕವಾಗಿ ರೂಪುಗೊಳ್ಳು-ವುದು.

ಕಾದಂಬರಿಗೆ ಭೌಗೋಲಿಕ ಹಿನ್ನೆಲೆಯನ್ನಾಗಿ ಯಾವ ಪ್ರದೇಶವನ್ನು ಆಯ್ದುಕೊಳ್ಳಲಾಗುವುದೊ, ಆ ಪ್ರದೇಶದಲ್ಲಿ ಜನರು ಆಡುವ ದಿನಬಳಕೆಯ ಮಾತನ್ನೇ ಸಾಮಾಜಿಕ ಕಾದಂಬರಿಯ ಪಾತ್ರಗಳ ಬಾಯಲ್ಲಿ ಹಾಕುವುದು ಹೆಚ್ಚು ಒಳ್ಳೆಯದು. ಇದರಿಂದ ಒಂದು ಬಗೆಯ ಸಹಜಸೌಂದರ್ಯದ ಸಿದ್ಧಿಯುಂಟಾಗಿ, ಪಾತ್ರಗಳು ಹೆಚ್ಚು ಸಜೀವವಾಗಿ ತೋರುವುವು. ಈ ನಂಬುಗೆಯಿಂದಲೇ ನಾನು, ಈ ಕಾದಂಬರಿಯಲ್ಲಿ ಬರುವ ಪಾತ್ರಗಳ ಬಾಯಿಂದ, ಉತ್ತರ ಕರ್ನಾಟಕದ ಬಳಕೆಯ ಕನ್ನಡ ಭಾಷೆಯನ್ನೇ ಆಡಿಸಿದ್ದೇನೆ.

ನಾನು ನಿರೀಕ್ಷಿಸಿದುದಕ್ಕಿಂತ ಹೆಚ್ಚು ಈ ಕಾದಂಬರಿಯ ಪುಟಸಂಖ್ಯೆ ಬೆಳೆದು ನಿಂತಿತು. 'ಮಗಳ ಮದುವೆ'ಯನ್ನು ಮಾಡಲು ಹೊರಟ ಇಂದಿನ

ಮಧ್ಯಮ ತರಗತಿಯ ತಂದೆಯಂತೆ,ವೆಚ್ಚದ ಮುಂಗಡ ಪತ್ರಿಕೆಯ ಲೆಕ್ಕತಪ್ಪಿ ಹಣಕ್ಕಾಗಿ ಪೇಚಾಡುವಂತಾಯಿತು. ಆದರೆ ನಾನು ಒಂದೆ ಒಂದು ಕಾಗದ ಬರೆದು ಬಿನ್ನವಿಸಿಕೊಳ್ಳಲು, ನಮ್ಮಂತಹ ಸಾಹಿತ್ಯಿಕರನ್ನು ಉದಾರದೃಷ್ಟಿಯಿಂದ ನೋಡುವ ಹೃದಯವಿದ್ದ **ಡಾಕ್ಟರ್ ಭಗೀರಥರಾವ್ ದೇಶಪಾಂಡೆ ಎಂ. ಬಿ. ಬಿ. ಎಸ್.** ( ಸದ್ಯ ರಾಯಚೂರಿನಲ್ಲಿದ್ದಾರೆ ) ಅವರು, ಕಡಿಮೆ ಬಿದ್ದಷ್ಟು ಹಣವನ್ನು ಒದವಿಸಿಕೊಟ್ಟರು. ಅದಕ್ಕಾಗಿ ನಾನೂ ಈ ಕಾದಂಬರಿಯ ಪ್ರಕಾಶಕರೂ—ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಅವರಿಗೆ ಸಲ್ಲಿಸುತ್ತೇವೆ. ಶ್ರೀಯುತರು ಉದಾರರಾಗಿ ನಿಂತರೆ, ಸಾಹಿತ್ಯಿಕರಿಗೆ ಯಾವ ಕೊರತೆಯಾದೀತು ?

ಈ ಹೊಸ ಕಾದಂಬರಿಯನ್ನೂ ಕನ್ನಡಿಗರು, ಈ ಮೊದಲಿನ ನನ್ನ ಕಾದಂಬರಿಗಳಂತೆಯೆ ಮೆಚ್ಚಿ ಪುರಸ್ಕರಿಸುವರೆಂದು ನನ್ನ ಭರವಸೆ.

‘ ಜಯಂತಿ ’ ಕಾರ್ಯಾಲಯ
ಧಾರವಾಡ.

**—ಆನಂದಕಂದ.**

# ಪ್ರಕಾಶಕರ ಎರಡು ಮಾತು

★

ಪ್ರಕಾಶನಕ್ಕೆ ವಿಲಂಬವಾದರೂ ೩೪೧ಪುಟಗಳ ಈ ರಸಪೂರ್ಣ ಕಾದಂಬರಿಯನ್ನು ಕನ್ನಡವಾಚಕಲೋಕಕ್ಕೆ ಸಮರ್ಪಿಸಲು ಸಂತೋಷವೆನಿಸು-ತ್ತದೆ. ಕಾದಂಬರಿ ಬರೆಯುವುದನ್ನೇ ಬಿಟ್ಟಿದ್ದ 'ಆನಂದಕಂದ'ರನ್ನು ಮತ್ತೆ ಕಾದಂಬರೀ ಲೇಖನಕ್ಕೆ ತೊಡಗಿಸಿದುದು ನಮ್ಮ ಪ್ರಕಾಶನ ಮಂದಿರದ್ದೊಂದು ವೈಶಿಷ್ಟ್ಯವಾಗಿದೆ. ನಮ್ಮ ಮುಂದಿನ ಪ್ರಕಟನೆ ಇದೇ ಲೇಖಕರ **'ಕುಮುದಾ'** ಎಂಬ ಹೆಸರಿನ ಸಾಮಾಜಿಕ ಕಾದಂಬರಿ ಅದನ್ನು ಈ 'ಮಗಳ ಮದುವೆ'ಯ ಮುಂದಿನ ಭಾಗವೆಂದೂ ಹೇಳಬಹುದು. ಅದಾದ ಮೇಲೆ, ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ ಒಂದು ಸುಂದರ ಕಾದಂಬರಿಯನ್ನು ಕೊಡ-ಬೇಕೆಂದಿದ್ದೇವೆ.

ಈ ಕಾದಂಬರಿಯಲ್ಲಿ ಅಚ್ಚಿನ ದೋಷಗಳು ಉಳಿಯದಂತಾಗಬೇಕೆಂದು ಎಷ್ಟೊಂದು ಹಾರಯಿಸಿದರೂ, ನಮ್ಮ ಪ್ರಯತ್ನ ಮೀರಿ ಕೆಲವೊಂದು ಅಚ್ಚಿನ ದೋಷ ಉಳಿದುಕೊಂಡಿವೆ. ಅವು ತೀರ ಮಹತ್ತ್ವದ ದೋಷಗಳೇನೂ ಅಲ್ಲ, ಸುಲಭವಾಗಿ ಸರಿಪಡಿಸಿಕೊಂಡು ಓದಬಹುದು. ಆದರೆ ೨೫ ಮತ್ತು ೨೭ ನೆಯ ಪರಿಚ್ಛೇದಗಳಲ್ಲಿ ಮೂರು ನಾಲ್ಕು ಕಡೆಗೆ 'ಸುಭದ್ರೆ' ಎಂದು ಇರಬೇಕಾದಲ್ಲಿ 'ಭಾಗೀರಥಿ' ಎಂದು ತಪ್ಪಾಗಿ ಬಿದ್ದಿದೆ. ಹೀಗೆಯೇ 'ಗೋಪಾಲರಾಯರು'ಎಂದು ಇರಬೇಕಾದಲ್ಲಿ 'ಅನಂತರಾಯರು' ಎಂದು ಬಿದ್ದಿದೆ (ಪು. ೨೮೦) ೩೦೨ ನೆಯ ಪುಟದಲ್ಲಿ ೧ನೆಯ ಸಾಲಿನಲ್ಲಿ 'ಮುಡಿ' ಎಂದಿರಬೇಕಾದಲ್ಲಿ ಕಣ್ಣು ತಪ್ಪಿನಿಂದ ನಡುವೆ ಸೊನ್ನೆಯೊಂದು ಬಿದ್ದು ಅಪಾರ್ಥವನ್ನುಂಟುಮಾಡುತ್ತದೆ. ಇವುಗಳನ್ನು ತಿದ್ದಿ ಸರಿಪಡಿಸಿಕೊಳ್ಳಬೇಕೆಂದು ಬಿನ್ನಹ.

ಸಮಾಜದಲ್ಲಿ ಸದಭಿರುಚಿಯನ್ನೂ ಸಾಂಸ್ಕೃತಿಕ ಪ್ರೀತಿಯನ್ನೂ ಹರಡು ವಂತಹ ಲಲಿತಸಾಹಿತ್ಯಗ್ರಂಥಗಳನ್ನೆ ಹೆಚ್ಚಾಗಿ ಪ್ರಕಟಿಸಬೇಕೆಂಬುದು ನಮ್ಮ ಮಂದಿರದ ಮುಖ್ಯ ಉದ್ದೇಶವಾಗಿದೆ. ಕನ್ನಡನಾಡಿನಲ್ಲಿಯ ಎಲ್ಲ ಸಾಹಿತ್ಯ ಸಂಸ್ಥೆಗಳೂ, ಪುಸ್ತಕಭಾಂಡಾರಗಳೂ, ಶಾಲೆ-ಕಾಲೇಜುಗಳೂ, ಸಾಹಿತ್ಯಪ್ರಿಯ ವಾಚಕರೂ ಮಂದಿರದ ಗ್ರಾಹಕಸದಸ್ಯರಾಗಿ, ಅದರ ಉತ್ತಮ ಸಾಹಿತ್ಯ ಪ್ರಚಾರಕಾರ್ಯದಲ್ಲಿ ಸಹಕರಿಸಬೇಕೆಂದು ಕೋರುವೆವು.

ಶ. ಪ್ರ. ಮಂದಿರ ಧಾರವಾಡ<br>ತಾ. ೨೫-೯-೧೯೫೨

—ಪ್ರಕಾಶಕರು

# ಮಗಳ ಮದುವೆ
( ಸ್ವತಂತ್ರ ಸಾಮಾಜಿಕ ಕಾದಂಬರಿ )

# ಮದುವೆ

“ ಗಂಡುಸೇ ಆಗಲಿ, ಹೆಂಗುಸೇ ಆಗಲಿ, ಒಂಟಿಗನಾಗಿ ಬಾಳುವುದೆಂದರೆ ಅದು ಅಪೂರ್ಣಜೀವನ ! ಒಂದೇ ಗಾಲಿಯ ರಥವಿದ್ದಂತೆ ! ಗಂಡು-ಹೆಣ್ಣಿನ ಜೊತೆಯ ಬಾಳೇ ಪೂರ್ಣಜೀವನ. ಗಂಡು ಹೆಣ್ಣಿನ ಸುಖಕ್ಕಾಗಿ, ಹೆಣ್ಣು ಗಂಡಿನ ಸುಖಕ್ಕಾಗಿ, ತನ್ನ ಜೀವನದ ಆಹುತಿಯನ್ನು ಬೇಳುತ್ತಿರಬೇಕು ! ದಾಂಪತ್ಯಜೀವನ-ವೆಂದರೆ ಇದೊಂದು ಆನಂದಯಜ್ಞ. ಆಹುತಿ ಹೆಚ್ಚು ಹೆಚ್ಚಾದಂತೆ, ಆನಂದದ ಅಭಿವೃದ್ಧಿಯಾಗುವುದು. ಪರಸ್ಪರ ಜೀವನಹೋಮ ವಿಲ್ಲದೆ ಹೋದರೆ, ಆ ದಾಂಪತ್ಯ ಬರೀ ಕಾಳ್ಗಿಚ್ಚಾಗಿ ಪರಿಣಮಿಸು-ವುದು. ಧರ್ಮದಲ್ಲಿಯೂ ಅರ್ಥದಲ್ಲಿಯೂ ಕಾಮದಲ್ಲಿಯೂ ಗಂಡು-ಹೆಣ್ಣು ಒಬ್ಬರನ್ನೊಬ್ಬರು ಅನುಸರಿಸಿಯೇ ನಡೆಯಬೇಕು. ಧರ್ಮ-ಅರ್ಥಗಳನ್ನು ಬಿಟ್ಟು ದಂಪತಿಗಳು, ಬರೀ ಕಾಮದ ಕೈಗೊಂಬೆಗಳಾದರೂ ತಮ್ಮ ಜೀವನವನ್ನು ತಾವೇ ಹೋಳಿಯಾಡಿ ದಂತೆ ಆದೀತು ! ಗಂಡು-ಹೆಣ್ಣಿನ ಮದುವೆಯೆಂದರೆ, ಅದೊಂದು ಕಾಮವ್ಯವಹಾರದ ಕರಾರುನಾಮೆಯಲ್ಲ; ಅಪೂರ್ಣ ಜೀವನದ ಅತೃಪ್ತಿಯನ್ನು ಪೂರ್ಣಜೀವನದಿಂದ ಕಳೆದುಬಿಡುವ ಯೋಗ-ಸಾಧನ ! ಈ ರಹಸ್ಯವನ್ನು ತಿಳಿದುಕೊಳ್ಳದೆ ಹೋದರೆ, ಮದುವೆ ಮದುವೆಯೆನ್ನಿಸಿಕೊಳ್ಳಲಾರದು; ಜೀವನದಲ್ಲಿ ಸುಖ-ಸಮಾಧಾನ ಗಳೂ ಸಿಕ್ಕಲಾರವು.

—ರತ್ನಾಕರ

# ಮಗಳ ಮದುವೆ

★

## ೧ನೆಯ ಪರಿಚ್ಛೇದ

"ನಮ್ಮ ಕಾವೇರೀದೊಂದು ಲಗ್ನ ಎಂದು ಕೂಡಿಬಂದೀತೋ ಅಂತ ಅನಿಸಿಹೋಗೇದ ನೋಡ್ರಿ ತುಂಗಮ್ಮಾ! ಇಂದ ನೋಡಲಿಕ್ಕೆ ಬರುವವರೂ ಅಂದರ ಹತ್ತೊಂಬತ್ತನೆಯವರು! ಇವರ ಮನಸಿಗರೇ ಬರತಾಳೋ ಇಲ್ಲೋ ನಮ್ಮ ಹುಡುಗೀ–ಅಂತ, ನನ್ನ ಎದೀ ಹಾಂಗs ಧಡಧಡಿಸಲಿಕ್ಕೆ ಹತ್ತೇದ!"

"ನೋಡ್ರಿ ವೇಣಕ್ಕಾ, ಹಣೆಯುಕ್ಕಿ ಒದಗಿ ಬಂದರ, ಹಡೆದವರನ್ನೂ ಕೇಳೂದಿಲ್ಲ–ಅಂತ ಗಾದಿ ಅದ, ಕೇಳೀದಿರೊ ಇಲ್ಲೋ? ಇಂದಿಲ್ಲ ನಾಳೆ ಬಂದೀತು ಆದರ ಯೋಗ! ನಿಮ್ಮ ಕಾವೇರೀನು ರೂಪದಿಂದ ಕಾಡs? ಆಕೀ ಕಣ್ಣೇನು, ಮೂಗೇನು, ಉಂಗರುಂಗರ ಕೂದಲೇನು..... ಮಂಗಲಗೌರಿ ಆಗ್ಯಾಳ ಹುಡುಗಿ! ನಾ ಖರೇ ಅಂದರ ಹೇಳತೀನಿ ನೋಡ್ರಿ! ಮದಿವೀ ಮಾಡಬೇಕಾದ ಗಂಡಸುಮಗ ನನಗಿದ್ದರ, ನಾ ಯಾರ ಮಾತೂ ಕೇಳತಿದ್ದಿಲ್ಲ. ಕಾವೇರಿನ್ನ ನಿಶ್ಚಯ ಮಾಡಿ, ಅಕ್ಕೀಕಾಳು ಹಾಕಿ, ಮನೀಗೆ ಸೊಸಿನ್ನ ಮಾಡಿಕೊಂಡು ಬಿಡತಿದ್ದೆ!"

"ಆಹಾ! ಅಬಬಬೀ, ನಮ್ಮ ಅವ್ವ ಮಾತಾಡತಾಳ ಕೇಳ್ರಿಲ್ಲೆ! ಮದಿವೀ ಮಾಡಬೇಕಾದ ಗಂಡಸು ಮಗಾ ಇಲ್ಲಂತಲೇ ಇಂಥಾ ಮಾತು ಆಡಲಿಕ್ಕೆ ಬರತದ. ಅಂಥಾ ಗಂಡಸುಮಗನ ತಾಯಾಗಿದ್ದರ, ಈ ಮಂಗಲಗೌರೀಯಂಥಾ ಎಷ್ಟು ಮಂದಿ ಕಾವೇರಿಯರನ್ನ ನೋಡಿ ಮುಖಾ ಮುರಿದು ಮನೆಗೆ ಬರತಿದ್ದಳೋ ಏನೋ ನಮ್ಮವ್ವ!"

"ನಿನ್ನ ಮಾತೇನೂ ಸುಳ್ಳಲ್ಲ ನೋಡು ಕುಮ್ಮಾ! ಕಾವೇರಿಯ ರೂಪ, ಗುಣ, ಸಿಸ್ತು–ಇವನ್ನೆಲ್ಲಾ ಹಗಲು ಹನ್ನೆರಡು ತಾಸೂ ಹೊಗಳತಿದ್ದವಳು

ಸುದ್ದಾ, ಆಕಿನ್ನ ತಮ್ಮ ಮನಿಗೆ ತಂದುಕೊಳ್ಳಬೇಕಂದರ ಹಿಂದ ಮುಂದ ನೋಡಿದರು. ಇಂಗ್ಲಿಷ್ ಕಲಿತಾಕಿನ್ನ ತಮ್ಮ ಮಗ ಅಪೇಕ್ಷಿಸತಾನ–ಅಂತ ಕೆಲವು ಜನ ಬಿಟ್ಟರು; ನಮಗ ತಕ್ಕ ವರದಕ್ಷಿಣೀ–ವರೋಪಚಾರ ನಿಮ್ಮಿಂದ ಕೊಡಲಿಕ್ಕೆಲ್ಲಿ ಸಾಧ್ಯ ?–ಅಂತ ಕೆಲವು ಜನ ಬಿಟ್ಟರು. ಅಂತೂ ಹೀಂಗಾಗಿ ನಮ್ಮ ಕಾವೇರೀ ಲಗ್ನ, ಗಣಪತೀ ಲಗ್ನದ ಹಾಂಗ, ಮುಂದ ಮುಂದಕ್ಕs ಬಿದ್ದುಕೋತs ನಡದsದ !"

"ಆ ಹುಡಿಗೀ ಮಾತು ಕೇಳಿ, ನನ್ನೂ ಮಿಕ್ಕವರ ಮಾಲಿಕೀ ಒಳಗs ಪೋಣಿಸಲೀರೇನು ವೇಣಕ್ಕಾ ? ನಾನೂ ಹೆಣ್ಣಿನ ತಾಯಿ ಅಂಬುದನ್ನ ಮರೀ ಬ್ಯಾಡ್ರಿ ! ಹೆಣ್ಣಿನ ತಾಯಂದಿರ ಕಷ್ಟ-ಸುಖಾ ಏನಂಬೂದು ನನಗೂ ತಿಳಿತsದ."

"ಅವ್ವಾ ಇಲ್ಲಿ ನೋಡು ! ಗಂಡಿನ ತಾಯಂದಿರs ಹೆಣ್ಣಿನ ತಾಯಂದಿರೂ ಇರತಾರ; ಹೆಣ್ಣಿನ ತಾಯಂದಿರs ಗಂಡಿನ ತಾಯಂದಿರೂ ಇರತಾರ ! ಆದರ ಅವರೆಲ್ಲಾರೂ ಗಂಡಿನ ಮದಿವಿ ಆಗೂ ಕಾಲಕ್ಕ, ಬರೇ ಗಂಡಿನ ತಾಯಂದಿರೇ ಆಗತಾರ; ಹೆಣ್ಣಿನ ತಾಯಂದಿರೂ ತಾವು ಇದ್ದೀವಿ-ಅಂಬೂದನ್ನ ಮರೆತೇ ಬಿಡತಾರ ! ಯಾಕ ಅಬಚೀ, ನಾ ಹೇಳೂ ಮಾತು ಖರೇನೋ ಸುಳ್ಳೋ !"

"ಸಂಪೂರ್ಣ ಖರೆ ಅದ, ಕುಮುದಾ ನಿನ್ನ ಮಾತು ! ವಯಸ್ಸಿನಿಂದ ಸಣ್ಣವಳಾದರೂ, ಹತ್ತು ಜನ ಮುದುಕರನ್ನ ಮುರಿದು ಮಾಡ್ಯಾನ ನೋಡು ದೇವರು ನಿನ್ನ. ಎಷ್ಟಂದರೂ ನೀನು ಇಂಗ್ಲಿಷ್ ಕಲಿತಾಕಿ ! ನಮ್ಮ ಕಾವೇರೀ ಹಾಂಗs ನೀನು ?"

ವೇಣಕ್ಕ ವಿಷಾದದ ನಿಟ್ಟುಸಿರನ್ನು ಹಾಕಿದರು. ಆಗಲೆ ಗೋಡೆಯ ಗಡಿಯಾರ 'ಢಣ್ ಢಣ್ ಢಣ್' ಎಂದು ಮೂರುಗಂಟೆಗಳನ್ನು ಬಾರಿಸಿತು. ಗಂಟೆಯ ಸಪ್ಪಳು ವೇಣಕ್ಕನ ಎದೆಯ ಬಡಿತವನ್ನು ಹೆಚ್ಚಿಸಿತು. ನಡುಗುವ ಸ್ವರದಲ್ಲಿಯೆ ಅವರೆಂದರು :

"ಓ ! ಮೂರು ಹೊಡೆದೇ ಬಿಟ್ಟಿತಲ್ಲ ! ಕಚೇರಿಯಿಂದ ಈಗಲೆ ಅವರು ಬರುವರು. ಮೂರುವರೆ ಗಂಟೆಗೆ ಸರಿಯಾಗಿ ಕಾವೇರಿಯನ್ನ ನೋಡಲಿಕ್ಕೆ ಬರತೀವೀ ಅಂತ ಹೇಳ್ಯಾರಂತ. ನಾನಂತೂ ಎಲ್ಲ ಸಿದ್ಧತೆಯನ್ನೂ ಮಾಡಿ ಇಟ್ಟುಬಿಟ್ಟೇನಿ !"

ಅಹುದು ಸಿದ್ಧತೆಯೇನೋ ಎಲ್ಲ ಆಗಿದೆ. ಪಡಸಾಲೆ ಚಿಕ್ಕದೇ ಆದರೂ ಅಚ್ಚುಕಟ್ಟಾಗಿ ಅಣಿಗೊಂಡಿದೆ. ಇದ್ದ ಎರಡು ಮೂಸಲು ಖುರ್ಚಿಗಳು ಗೋಡೆಗೆ ಹೊಂದಿ ಓರಣವಾಗಿ ನಿಂತುಕೊಂಡಿವೆ ನೆಲಕ್ಕೆ ಬಣ್ಣಬಣ್ಣದ ಜಮುಖಾನೆಯನ್ನು ಹಾಸಿ, ಮೂರು ನಾಲ್ಕು ತಕ್ಕೆಗಳನ್ನು ಇರಿಸಲಾಗಿದೆ. ಹತ್ತಿರವೆ ಹೆಚ್ಚು ಬೆಳಕು ಬೀಳುವ ಸ್ಥಳದಲ್ಲಿ, ಇನ್ನೊಂದು ಚಿಕ್ಕ ಜಮುಖಾನೆಯನ್ನು ಹಾಸಿಡಲಾಗಿದೆ. ಅಡಿಗೆಯ ಮನೆಯಲ್ಲಿ ಏನೇನನೋ ಕರಿದ ಹುರಿದ ಕಂಪು ಮನೆಯಲ್ಲೆಲ್ಲ ವ್ಯಾಪಿಸಿ ಸುಳಿಯುತ್ತಲಿದೆ. ನೆರೆಮನೆಯಿಂದ ತೆಗೆದುಕೊಂಡು ಬಂದ ಕಪ್ಪು-ಬಸಿಗಳು, ಕಿಟಲಿ, ತಟ್ಟೆಗಳು ಅಡಿಗೆಮನೆಯ ಶೋಭೆಯನ್ನು ಹೆಚ್ಚಿಸಿವೆ. ಕಾವೇರಿ ಕಿರುಮನೆಯಲ್ಲಿ ಕುಳಿತುಕೊಂಡು, ತಾನು ಉಡಬೇಕಾದ ಸೀರೆ, ತೊಡಬೇಕಾದ ಝಂಪರು, ಮುಡಿಯ ಬೇಕಾದ ಹೂಮಾಲೆಗಳನ್ನು ಅಣಿಗೊಳಿಸುವುದರಲ್ಲಿದ್ದಾಳೆ. ತೆರೆದ ಕನ್ನಡಿಪೆಟ್ಟಿಗೆಯ ಬಳಿಯಲ್ಲಿಯೇ ಸ್ನೋ, ಪಾವಡರ್ ಡಬ್ಬಿಗಳು, ಕಲಸುಗುಂಕುಮದ ಕರಡಿಗೆ ಇವೆ.

ಬೇಗನೆ ಬರುವುದಕ್ಕೆ ಹೇಳಿ ಕಳುಹಿದುದರಿಂದಲೆ ಕುಮುದಾ, ಅವಳ ತಾಯಿ ತುಂಗಮ್ಮ ಎರಡುವರೆ ಗಂಟೆಗೆ ಸರಿಯಾಗಿ ವೇಣಕ್ಕನ ಮನೆಗೆ ಬಂದಿದ್ದರು. ಅಷ್ಟರಲ್ಲಿ ವೇಣಕ್ಕ ಎಲ್ಲ ಸಿದ್ಧತೆಯನ್ನೂ ಮಾಡಿ ಮುಗಿಸಿದ್ದುದನ್ನು ನೋಡಿಕೊಂಡು, ಇನ್ನೂ ಅವಕಾಶವಿದ್ದುದರಿಂದ, ನಡುಮನೆಯಲ್ಲಿ ಹಾಸಿದ್ದ ಕಂಬಳಿಯ ಮೇಲೆ ಕುಳಿತುಕೊಂಡು ಮಾತನಾಡಲು ತೊಡಗಿದ್ದರು. ಈ ಮೊದಲು ಕೇಳಿದ ಸಂಭಾಷಣ ಈ ಮೂವರಲ್ಲಿ ನಡೆದುದು.

ವೇಣಕ್ಕನ ಗಂಡ ಗೋಪಾಲರಾಯರು ಸಬ್‌ರಜಿಸ್ಟ್ರಾರ್ ಕಚೇರಿಯಲ್ಲಿ ಕಾರಕೂನರಾಗಿದ್ದರು. ಉಂಡು ತಿಂದು ಇರಲು ಅನುಕೂಲವಾಗುವಷ್ಟು ಸಂಬಳ ಸಿಕ್ಕುತ್ತಿದ್ದಿತು. ತುಂಬ ಸಂಪ್ರದಾಯನಿಷ್ಠರು. ಸಬ್‌ರಜಿಸ್ಟ್ರಾರ್ ಆಫೀಸುಗಳೆಂದರೆ 'ಮಾಮೂಲು' ತೆಗೆದುಕೊಳ್ಳುವುದರಲ್ಲಿ ಹೆಸರಾದುವುಗಳಲ್ಲವೆ ? ಅಂತಹ ಆಫೀಸಿನಲ್ಲಿದ್ದರೂ ಗೋಪಾಲರಾಯರು ಮಾಮೂಲಿಗೆ ಕೈಯೊಡ್ಡುವವರಲ್ಲ; ನ್ಯಾಯವಾಗಿ ತಮಗೆ ಸಲ್ಲುವ ಸಂಬಳದಲ್ಲಿಯೆ ತೃಪ್ತರಾಗಿರುವವರು. ಕಾವೇರಿ ಇವರಿಗೆ ಹಿರಿಯ ಮಗಳು. ಸಂಪ್ರದಾಯವಂತರಾದ ಇವರು, ತಮ್ಮ ಮಗಳ ಮದುವೆಯನ್ನು ಬೇಗನೆ ಮಾಡಿಬಿಡಬೇಕೆಂದು

ಆವಳ ಹನ್ನೆರಡನೆಯ ವಯಸ್ಸಿನಲ್ಲಿಯೆ ವರಸಂಶೋಧನೆಗೆ ತೊಡಗಿದರಾದರೂ, ಈಗವಳಿಗೆ ಹದಿನೇಳನೆಯ ವರ್ಷ—ಇದುವರೆಗೂ ಅವರ ವರಸಂಶೋಧನೆಯು ಸತ್ರ ನಡೆದೇ ಇರುವುದು.

ಕಾವೇರಿಯಲ್ಲದೆ ರಾಯರಿಗೆ ಇನ್ನೂ ಎರಡು ಹೆಣ್ಣು, ಒಂದು ಗಂಡು ಮಕ್ಕಳಿವೆ. ಹೆಣ್ಣುಮಕ್ಕಳು ಹದಿಮೂರು ಹನ್ನೊಂದು ವರ್ಷದವರು. ಕೊನೆಯ ಗಂಡುಮಗನಿಗೆ ಎಂಟುವರ್ಷದ ವಯಸ್ಸು. ಇಂದು ಕಾವೇರಿ-ಯನ್ನು ನೋಡಲು ಬರುವರೆಂಬ ಮಾತನ್ನು, ರಾಯರು ಹೆಂಡತಿಗೆ ಗುಟ್ಟಾಗಿ ಹೇಳಿದ್ದರಾದರೂ, ಅದು ಹೇಗೋ ಎಲ್ಲ ಮಕ್ಕಳಿಗೂ ಗೊತ್ತಾಗಿಹೋಯಿತು. ಅವರೆಲ್ಲ ಸಂಭ್ರಮದಿಂದ ಕುಣಿದಾಡಿದರು ನಡುವಿನ ತುಂಟ ಹುಡುಗಿ ಗೋದಾವರಿಯಂತೂ ಹೀಗೆ ಮಾತನಾಡಿದಳು :

" ನಮ್ಮ ಕಾವೇರಕ್ಕಗ ಗಂಡ ಸಿಗಲಿ, ಬಿಡಲಿ ! ಆದರ, ಆಕಿನ್ನ ನೋಡ-ಲಿಕ್ಕೆ ಬರೂ ಗಂಡಸಗಳ ಸಲುವಾಗಿ ನಮಗೆ ಸವಿಸವಿ ತಿಂಡಿ ಮಾತ್ರ ತಿನಲಿಕ್ಕೆ ಸಿಗತದ !"

" ಹುಚ್ಚುಖೋಡೀ !" ಎಂದು ವೇಣಕ್ಕ ಗೋದಾವರಿಯನ್ನು ಬೈದು ಸುಮ್ಮನೆ ಕೂಡಿಸಿದರಾದರೂ ' ಈ ಹುಡುಗಿ ಹೀಗೇಕೆ ಮಾತಾಡಿದಳು ! ' ಎಂದು ಒಳಗೊಳಗೆ ನೊಂದುಕೊಂಡರು. ನೊಂದಜೀವಕ್ಕೆ ಶಕುನಾಪಶಕುನದ ಸಂದೇಹ ಬಹಳವಲ್ಲವೆ ?

ಹಿರಿಯವಳಿಗೆ ತಿಂಡಿಯ ಆಶೆ ಇರದೆ ಹೋದರೂ, ಅಕ್ಕನನ್ನು ನೋಡಲು ಬರುವವರನ್ನು ನೋಡುವ ಆಶೆ. ಕಿರಿಯವರಿಬ್ಬರಿಗೂ ತಿಂಡಿಯ ಆಶೆ. ಆದುದರಿಂದಲೇ ಅವರೆಲ್ಲ ಅಂದಿನ ಶಾಲೆಯನ್ನು ತಪ್ಪಿಸಬೇಕೆಂದು ಹೆಣಗಾಡಿದರು. ಆದರೆ ತಾಯಿ-ತಂದೆಗಳಿಬ್ಬರೂ ಶಾಲೆಯನ್ನು ತಪ್ಪಿಸ-ಬಾರದೆಂದು ಬುದ್ಧಿ ಹೇಳಿ ಸಿಟ್ಟುಮಾಡಿದರು. ಆಗ ಅವರೆಲ್ಲ ಅಳುಮೋರೆ ಮಾಡಿಕೊಂಡೇ ಶಾಲೆಗೆ ಹೋದರು. ಅವರ ಅಸಮಾಧಾನವನ್ನು ಕಂಡ ವೇಣಕ್ಕನ ಹೃದಯ ಕರಗಿಹೋಯಿತು. ಇದ್ದುಬಿಡಿರೆಂದು ಹೇಳುವುದಕ್ಕೆ ಮನಸ್ಸೂ ಕುಣಿದಾಡಿತು. ಆದರೆ ತಿಂಗಳ ಕೊನೆಯ ದಿನಗಳ ನೆನಪು, ಅವರ ಬಾಯಿಂದ ಮಾತುಗಳನ್ನು ಹೊರಡಿಸಲಿಲ್ಲ. ' ನೋಡಲಿಕ್ಕೆ ಬರುವವರು ಎಷ್ಟು ಜನರೋ ಏನೋ ! ಮನೆಯಲ್ಲಿರುವ ಸಾಮಾನೂ ಅಷ್ಟಕ್ಕಷ್ಟೇ ! ಈ

ಮ್ಮೂವರಾದರೂ ಕಡಿಮೆಯಾಗಲಿ !' ಎಂದು ಯೋಚಿಸಿ, ಬಿಸಿಯುಸಿರನ್ನು ಚೆಲ್ಲಿ ಸುಮ್ಮನಾದರು. ಮಕ್ಕಳೆಲ್ಲ ಶಾಲೆಗೆ ಹೋದಮೇಲೆ, ಬರಲಿರುವ ಅಭ್ಯಾಗತರಿಗಾಗಿ ತಿಂಡಿ-ತೀರ್ಥದ ಸಿದ್ಧತೆ ನಡೆಯಿಸಿದಾಗ, ಮಕ್ಕಳ ಕರುಣಾ ಪೂರ್ಣ ಮುಖಗಳು ಕಣ್ಣಿಗೆ ಕಟ್ಟಿದಂತಾಗಿ, ಕರುಳನ್ನು ಹಿಂಡಿದಂತಾಯಿತು ವೇಣಕ್ಕನಿಗೆ.

ಮೂರ.ಗಂಟೆಯಾಗಿ ಐದು ನಿಮಿಷವಾಗಿರಬಹುದು; ಗೋಪಾಲ-ರಾಯರು ಮನೆಗೆ ಬಂದರು. ಬರುವಾಗ ದಾರಿಯಲ್ಲಿ ಹೇಳಿಯೆ ಬಂದಿದ್ದರೇನೊ ! ಎರಡು ಮೂರು ನಿಮಿಷಗಳಲ್ಲಿಯೆ ಪುರೋಹಿತ ಗುಂಡಾಚಾರ್ಯರು ಅವರ ಹೆಂಡತಿ ಗಂಗಾಬಾಯಿ—ಇಬ್ಬರೂ ಬಂದರು. ವೇಣಕ್ಕ ಗಂಗಾಬಾಯಿ-ಯನ್ನು ಸ್ವಾಗತಿಸಿ ಕುಳ್ಳಿರಿಸಿದರು. ಗೋಪಾಲರಾಯರು, ಪಡಸಾಲೆಯಲ್ಲಿಯ ಕುರ್ಚಿಗಳ ಮೇಲೆ ಕುಳಿತುಕೊಂಡರು. ರಾಯರು ಮಾತನಾಡಲು ತೊಡಗಿ-ದರು :

" ನೋಡ್ರಿ ಆಚಾರ್ರs ! ಈಗಿನ ದಿನದಾಗ, ನಮ್ಮಂಥವರಿಗೆ ಹೆಣ್ಣು-ಮಕ್ಕಳ ಮದಿವೀ ಮಾಡೋದಂದರ, ಒಂದು ದೊಡ್ಡ ಸಮಸ್ಯಾನೇ ಆಗಿ ಕೂತsದ. ಹಳೇ ತರದ ಮನಿತನಗಳಿಗೆ ಕೊಡಬೇಕಂದರ ಅಲ್ಲೆ ಒಳ್ಳೆಯ ವರಾ ಸಿಗೂದಿಲ್ಲ; ಇನ್ನ ಹೊಸಪದ್ಧತಿಯವರಿಗೆ ಕೊಡಬೇಕಂದರ, ಅವರು ನಮ್ಮ ಹಳೆಯ ತರದವರ ಮನೀ ಕನ್ಯಾ ಒಪ್ಪೂದಿಲ್ಲ. ಏನಮಾಡಬೇಕಂಬೂದs ತಿಳೀವಾಂಗ ಆಗೇದ !"

ಆಚಾರ್ಯರು ತಾತ್ತ್ವಿಕಭಾವದ ಧ್ವನಿಯಲ್ಲಿ ಹೇಳಲು ತೊಡಗಿದರು :

" ಈಗ ಕಾಲವೇ ತಲೀ ಕೆಳಗಾಗಿ ಹೋಗೇದ ರಾಯರ ! ಈಗ ಹಳೇ-ತರದವರೂ ಅಂದರ ಕೆಲಸಕ್ಕ ಬಾರದವರಾಗಿ ಹೋಗ್ಯಾರ ! ಹೊಸಪದ್ಧತಿ-ಯವರ ತಲೀಮ್ಯಾಲೇ ಚವರ ಬೀಸಲಿಕ್ಕೆ ಹತ್ತ್ಯೇದ, ಚವರ !"

" ಯಾಕ ಬೀಸಬಾರದು ಹೇಳ್ರಿ ಆಚಾರ್ರ ? ಈಗ ನಿಮ್ಮ ಮನೀ ವಿಷಯಾನs ತೊಗೊಳ್ರಿ ! ನಿಮ್ಮ ಹಿರೇ ಮಗಾ ಧಡ್ಡ ಹೋರಟಾ ಅಂತ, ಅವನ್ನ ವೈದಿಕ ವೃತ್ತಿಗೆ ಹಚ್ಚಬೇಕೂ—ಅಂತೀರಿ. ಸಣ್ಣಾಂವಾ ಬುದ್ಧಿವಂತ ಇದ್ದಾನ; ಅವನ್ನ ಇಂಗ್ಲಿಷ್ ಸಾಲಿಗೆ ಕಳಿಸಲಿಕ್ಕೆ ಹತ್ತೀರಿ. ನನ್ನ ಸ್ಪಷ್ಟ-ಮಾತಿಗೆ ಸಿಟ್ಟಿಗೇಳ ಬ್ಯಾಡ್ರಿ ನೀವು ಮತ್ತ. ತಿಳೀತೇನು ? ನಿಮ್ಮ ಹೀರೆ ಮಗ್ಗ

ಒಳ್ಳೇ ಕನ್ಯಾ ಯಾರು ಕೊಡಬೇಕು ? ಅಲ್ಲದೆ ನಿಮ್ಮ ಸಣ್ಣ ಮಗಾ, ಎಂಥಾ ಒಳ್ಳೆಯದಿದ್ದರೂ ಸಂಪ್ರದಾಯವಂತರ ಕನ್ಯಾ ಯಾಕ ಮಾಡಿಕೋತಾನ ? ಎಲ್ಲಾ ಹೀಂಗs ಆಗೇದ ನೋಡ್ರಿ !”

ಆಚಾರ್ಯರು ನಗುತ್ತ ಹೇಳಿದರು :

“ ಹಹಹ ! ನೀವು ಹೇಳಿದ ಮಾತು ಹದಿನಾರಾಣೆ ಸತ್ಯನೋಡ್ರಿ ರಾಯರ ! ಎಲ್ಲಾ ಕಡೇನೂ ಹೀಂಗs ಆದದ್ದೇನೂ ಸುಳ್ಳಲ್ಲ. ಇಂದ ಬರತಾರಲಾ, ಇವರು ಯಾವೂರವರಂದಿರಿ ?”

“ ರಾಮದುರ್ಗದ ಹತ್ತರ ಯಾವುದೋ ಹಳ್ಳಿಯವರು. ಹಳ್ಳಿಯವ-ರಾದರೇನು ? ಹುಡುಗ ಇಂಗ್ಲಿಷ್ ಕಲಿತು ಇಂಟರ್ ಪರೀಕ್ಷಾ ಪಾಸ್ ಮಾಡ್ಯಾನಂತ. ಈಗ ಇದೇ ಊರ ಕೋರ್ಟಿನೊಳಗ ಸೆಕ್ಯಾಸ್ ರೈಟರ್ ಕೆಲಸಾ ಮಾಡತಾನಂತ. ಹಳ್ಳಿಯೊಳಗ ಭೂಮಿ–ಸೀಮಿಯೂ ತಕ್ಕ ಮಟ್ಟಿಗೆ ಅದs ಅಂತ. ಇಬ್ಬರೇ ಅಣ್ಣತಮ್ಮಂದಿರು; ಹಿರಿಯಂವ ವಿಶೇಷ ಕಲಿತಿಲ್ಲವೋ ಏನೋ; ಹಳ್ಳಿಯೊಳಗs ಇದ್ದುಕೊಂಡು ಹೊಲಾ–ಮನೀ ನೋಡಿಕೋತಾನಂತ....”

ಆಚಾರ್ಯರು ನಡುವೆಯೆ ಕೇಳಿದರು :

“ ಆತನ ಲಗ್ನ ಆಗೇದೇನು ?”

“ ಇನ್ನೂ ಆಗಿಲ್ಲ. ಹ್ಯಾಂಗ ಆಗಬೇಕೂ ಹೇಳ್ರಿ ! ಈಗ ಹಳ್ಳೀ ಊರವರು ಸುದ್ದಾ ಹಳ್ಳ್ಯಾಗಿರುವ ವರಕ್ಕ ಕನ್ಯಾ ಕೊಡಲಿಕ್ಕೆ ಸಿದ್ಧರಾಗೂ-ದಿಲ್ಲ. ಇದು ಹುಡುಗ ಕಲಿತು ಕೆಲಸಾ ಮಾಡಲಿಕ್ಕೆ ಹತ್ಯಾನಂತ, ಹೆಣ್ಣಿದ್ದವರೆಲ್ಲಾ ಇವನ ಸುತ್ತ-ಮುತ್ತ ಸುಳಿದಾಡಲಿಕ್ಕೆ ಹತ್ಯಾರ. ಏನೇನೋ ಪ್ರಯತ್ನಾ ಮಾಡಿ, ನಮ್ಮ ಕಾವೇರಿನ್ನ ನೋಡಿಕೊಂಡು ಹೋಗಲಿಕ್ಕೆ ಒಪ್ಪಿಸೀನಿ; ಏನೇನಾಗತದೋ ನೋಡಬೇಕು ! ಎಲ್ಲಾ ದೇವರ ಮನಸಿಗೆ ಬರಬೇಕು. ”

ಟಾಂಗಾ ಬರುವ ಸಪ್ಪಳು ಕೇಳಿಸಿತು. ‘ಹಾಂ ! ಬಂದರು ಕಾಣಿಸತದ’ ಎಂದು ಗಡಬಡಿಸಿ ರಾಯರು ಮೇಲಕ್ಕೆದ್ದರು. ಆಚಾರ್ಯರೂ ಅವರನ್ನು ಹಿಂಬಾಲಿಸಿದರು. ತಲೆಬಾಗಿಲ ಮುಂದೆ ಎರಡು ಟಾಂಗಾಗಳು ನಿಂತಿದ್ದುವು. ನಾಲ್ವರು ತರುಣರು ಗಾಡಿಯಿಂದಿಳಿದು ನಿಂತರು. ರಾಯರೂ ಆಚಾರ್ಯರೂ

ಅವರನ್ನು ಸ್ವಾಗತಿಸಿ ಕರೆದುಕೊಂಡು ಬಂದು, ಹಾಸಿದ್ದ ಜಮಖಾನೆಯ ಮೇಲೆ ಕುಳ್ಳಿರಿಸಿದರು. ವರನಾಗಿ ಬಂದವನು ಮುಖ್ಯಸ್ಥಳದಲ್ಲಿ ಕುಳಿತು-ಕೊಂಡ. ಜೊತೆಗೆ ಬಂದ ಮೂವರೂ ಅವನ ಅಕ್ಕಪಕ್ಕದಲ್ಲಿ ಕುಳಿತು-ಕೊಂಡರು. ವರನ ಬಲಗಡೆಗೆ ಕುಳಿತುಕೊಂಡ ತರುಣನ ರೂಪು-ವೇಷ-ಭೂಷಣಗಳು ತುಂಬ ಆಕರ್ಷಕವಾಗಿದ್ದುವು. ಗೌರವರ್ಣದ ಸುಂದರವಾದ ಮುಖ, ನಿಡಿದಾದ ಮೂಗು, ಕಳೆಯುಳ್ಳ ಕಣ್ಣುಗಳು, ತಲೆಯ ಮೇಲೆ ಓರಣವಾಗಿ ಬಾಚಿ ಬೈತಲೆ ತೆಗೆದ ಕ್ರಾಪು. ಉಟ್ಟುದು ಶುಭ್ರವರ್ಣದ ಖಾದಿಯ ಧೋತರ; ತೊಟ್ಟುದು ಅಂತಹದೇ ಒಂದೇ ಖಾದಿಯ ಶರ್ಟು. ಮೆಲುನಗೆ, ಸ್ವಲ್ಪವೇ ತುಟಿಗಳನ್ನು ಅರಳಿಸಿ, ಕಣ್ಣುಗಳಲ್ಲಿಯೂ ಸುಳಿದಾ-ಡುತ್ತಲಿದೆ.

ಪುರೋಹಿತರು ಒಳಗೆ ಹೋಗಿ, ಹಚ್ಚಿಟ್ಟ ಊದಿನಕಡ್ಡಿಯ ಪಾತ್ರೆ-ಯನ್ನು ಹೊರಗೆ ತಂದಿಟ್ಟರು. ಬೆಡಗು ಇಲ್ಲದೆ ಹೋದರೂ ಗುಣದಿಂದ ಕೀರ್ತಿಯನ್ನು ಪಸರಿಸುವ ಕುಲೀನ ಕನ್ಯೆಯರಂತೆ ಊದಿನ ಕಡ್ಡಿಗಳು, ಮನೆಯಲ್ಲೆಲ್ಲ ತಮ್ಮ ಮಧುರಗಂಧವನ್ನು ಪಸರಿಸಲು ತೊಡಗಿದುವು. ಪುರೋಹಿತರ ಹೆಂಡತಿ ಕನ್ಯೆಯನ್ನು ಕರೆದುಕೊಂಡು ಹೊರಗೆ ಬಂದರು. ಕಾವೇರಿ ಸಹಜಸುಂದರಿ; ಅದರಲ್ಲಿಯೂ ಷೋಡಶೀ ತರುಣಿ. ಆಡಂಬರ ವಿಲ್ಲದಿದ್ದರೂ ಅಚ್ಚುಕಟ್ಟಾಗಿ ಅಲಂಕಾರ ಮಾಡಿಕೊಂಡಿದ್ದಳು. ಹೊರಗೆ ಬಂದವಳೇ ಎಲ್ಲರಿಗೂ ನಮಸ್ಕಾರವನ್ನು ಮಾಡಿ, ತನಗಾಗಿಯೆ ಹಾಸಿ ಇರಿಸಿದ ಜಮಖಾನೆಯ ಮೇಲೆ ಲಜ್ಜಾವತಿಯಾಗಿ ಕುಳಿತುಕೊಂಡಳು. ಬಂದಿದ್ದ ತರುಣರೆಲ್ಲರೂ ಸಂಕೋಚಭಾವ ತುಂಬಿದ ನೋಟಗಳಿಂದ, ಕದ್ದು ಕದ್ದು ಕನ್ಯೆಯ ಕಡೆಗೆ ನೋಡಲು ತೊಡಗಿದರು. ಕಾವೇರಿ ದೃಷ್ಟಿಗಳನ್ನು ತಗ್ಗಿಸಿದ್ದರೂ, ತನ್ನ ಮುಖವು ಸರಿಯಾಗಿ ಕಾಣುವಂತೆ ಕುಳಿತಿದ್ದಳು. ಪುರೋಹಿತರು ನಿಃಸಂಕೋಚಭಾವದಿಂದ ಕನ್ಯೆಗೆ ವರನನ್ನು ಗುರುತುಮಾಡಿ ಕೊಟ್ಟರು. ಕಾವೇರಿ ಮಿಂಚಿನಂತೆ ಒಂದೆ ಒಂದು ಸಲ ಆತನನ್ನು ದೃಷ್ಟಿ-ಗಳನ್ನೆತ್ತಿ ನೋಡಿದಳಾದರೂ, ಕೂಡಲೆ ತುಂಬಿದ ನಾಚಿಕೆಯಿಂದ ಕಿರುನಗೆ ನಗುತ್ತ ತಲೆ ತಗ್ಗಿಸಿದಳು. ಖಾದೀಧಾರಿ ತರುಣ ಸುಮ್ಮಗೆ ಕುಳಿತಿದ್ದ. ಇನ್ನಿಬ್ಬರಲ್ಲಿಯ ಒಬ್ಬ ಕೇಳಿದ : 'ನಿಮ್ಮ ಹೆಸರೇನು ?'

ಕಾವೇರಿ ಮೆಲುದನಿಯಲ್ಲಿ ತನ್ನ ಹೆಸರನ್ನು ಹೇಳಿದಳು. ಇನ್ನೊಬ್ಬ ಕೇಳಿದ :

" ನೀವು ಸಾಲೆಗೆ ಹೋಗುತ್ತೀರಾ ?"

" ಇಲ್ಲ " ಕಾವೇರಿಯ ಉತ್ತರ.

" ಏನು ? ಸಾಲೀ ಇಷ್ಟರಲ್ಲಿಯೆ ಬಿಟ್ಟುಬಿಟ್ಟಿದ್ದೀರಾ ?"

" ಸಾಲೀ ಬಿಟ್ಟು ನಾಲ್ಕು ವರ್ಷ ಆಯಿತು. ಕನ್ನಡ ಆರನೆಯ ಈಯುತ್ತೆ ಪಾಸಾದ ಕೂಡಲೆ ಸಾಲೀ ಬಿಡಬೇಕಾತು !"

ಪುರೋಹಿತರು ಹೇಳಲು ತೊಡಗಿದರು :

" ಮನಿಗೆಲಸದೊಳಗ ಭಾಳ ನಿಪುಣ ಇದ್ದಾಳ. ಮತ್ತ ಕಸೂತಿ ಹೆಣಿಕಿ, ಹೊಲಿಗಿ—ಇದರಾಗಂತೂ ಈಕೀ ಕೈಹಿಡಿಯುವವರು ಯಾರೂ ಇಲ್ಲ. ಒಬ್ಬಾಕಿಯೇ ಬೇಕಾದ್ದಾಂಗ ಮನೀ ತೂಗಿಸಿಕೊಂಡು ಹೋಗಬಲ್ಲಳು !"

ಮೊದಲು ಪ್ರಶ್ನೆ ಕೇಳಿದವನೇ ಮತ್ತೆ ಕೇಳಿದ :

" ಹಾಗಾದರ ಇಂಗ್ಲಿಷ್ ಸಾಲೆಗೆ ಹೋಗೇ ಇಲ್ಲವೇನು ನೀವು ?"

" ಇಲ್ಲ. " ಕಾವೇರಿಯೆಂದಳು.

ಮತ್ತೊಬ್ಬ ಕೇಳಿದ :

" ಸಂಗೀತ, ನರ್ತನ ಇವುಗಳದೇನಾದರೂ ಪರಿಚಯುವಿದೆಯೆ ?"

ಕಾವೇರಿ ಉತ್ತರಕೊಡುವುದಕ್ಕೆ ಮೊದಲೇ ಗೋಪಾಲರಾಯರು ಹೇಳಿದರು :

" ನಮ್ಮದು ಸಂಪ್ರದಾಯನಿಷ್ಠರ ಮನಿತನ. ಸಂಗೀತ ನೃತ್ಯ ಯಾವುದನ್ನೂ ಕೇಳಬಾರದು. ನೀವು !"

ವರನಾಗಿ ಬಂದವನ ಮುಖದಲ್ಲಿ ಅತೃಪ್ತಿ-ಅಸಮಾಧಾನಗಳು ಸುಳಿದಾಡಿದುವು. ಅದನ್ನು ನೋಡಿದ ಪುರೋಹಿತರ ಮುಖದ ಮೇಲೆ ನಿರಾಶೆಯ ರೇಷೆಗಳು ಮೂಡಿದುವು. ' ಸರಿ, ಇನ್ನು ಒಳಗೆ ಹೋಗಬಹುದು !' ಎಂದ ನಿರೀಕ್ಷಕರ ಒಪ್ಪಿಗೆ ದೊರೆತಮೇಲೆ, ಕಾವೇರಿ ಮತ್ತೊಮ್ಮೆ ಎಲ್ಲರಿಗು ನಮಸ್ಕಾರ ಮಾಡಿ, ಮೇಲುನಡೆಯಿಂದ ಒಳಕ್ಕೆ ನಡೆದಳು.

ಸ್ವಲ್ಪವೇಳೆಯಲ್ಲಿಯೇ ಕುಮುದಾ, ತಿಂಡಿಯ ತಟ್ಟೆಗಳನ್ನು ಇರಿಸಿದ್ದ ಟ್ರೇ ತೆಗೆದುಕೊಂಡು ಹೊರಗೆ ಬಂದಳು. ಎಲ್ಲರ ಎದುರೂ ಒಂದೊಂದು

ತಟ್ಟೆಯನ್ನು ಇರಿಸಲು ತೊಡಗಿದಳು. ಬಂದಿದ್ದ ತರುಣರೆಲ್ಲರೂ ಕುಮುದೆ-ಯನ್ನು ತಮ್ಮ ಕಳ್ಳನೋಟಗಳಿಂದ ಚುಚ್ಚಲು ತೊಡಗಿದರು. ಕುಮುದೆಗೆ ಇನ್ನಾರ ಕಡೆಗೂ ಲಕ್ಷ್ಯವೇ ಇರಲಿಲ್ಲ. ತಟ್ಟೆಗಳನ್ನಿರಿಸಿ, ಬರಿಯದಾದ ಟ್ರೇ ತೆಗೆದುಕೊಂಡು, ಅವಳು ಒಳಗೆ ಹೋಗಿಬಿಟ್ಟಳು. ಖಾದೀಧಾರಿ ತರುಣ ನೊಬ್ಬನನ್ನುಳಿದು, ಮಿಕ್ಕ ಮೂವರೂ ಕುತೂಹಲದ ನೋಟದಿಂದ ಒಬ್ಬರನ್ನೊಬ್ಬರು ನೋಡಿ, ತುಟಿಯಲ್ಲಿಯೆ ತುಂಟನಗೆಯನ್ನು ತೇಲಿಸಿದರು. ಖಾದೀಧಾರಿ ತರುಣ, ತನ್ನ ಸಹಜ ಗಂಭೀರಭಾವದಲ್ಲಿಯೇ ಇದ್ದ. ಎಲ್ಲರೂ ತಿಂಡಿಯನ್ನು ತಿನ್ನಲು ತೊಡಗಿದರು. ಕುಮುದಾ ಮತ್ತೆ ಕಪ್ಪು-ಬಸಿಗಳನ್ನಿರಿ-ಸಿದ ಟ್ರೇಯನ್ನೊಂದು ಕೈಯಲ್ಲಿಯೂ ಚಹವು ತುಂಬಿದ ಕಿಟ್ಟಲಿಯನ್ನೊಂದು ಕೈಯಲ್ಲಿಯೂ ತೆಗೆದುಕೊಂಡು ಹೊರಕ್ಕೆ ಬಂದಳು. ಏತಕ್ಕಾಗಿಯೋ ಮೇಲೆ ಮುಖ ಮಾಡಿದ ಆ ಖಾದೀಧಾರಿ ತರುಣ ಅವಳನ್ನು ನೋಡಿದ. ನಸುವೇಳೆ ಅವಳಲ್ಲಿಯೆ ನೋಟ ನಿಲ್ಲಿಸಿದ. ಕುಮುದೆಯೂ ಕಾವೇರಿಯ ಸಮವಯಸ್ಕಳು. ಶಿಕ್ಷಣದ ಚುರುಕು ಮುಖದ ಮೇಲೆಲ್ಲ ಆಟವಾಡುತ್ತಲಿದೆ. ವೇಷ-ಭೂಷಣ-ಗಳಲ್ಲಿಯೂ ಸೌಂದರ್ಯದ ಆಧುನಿಕತೆ ಒಡೆದುತೋರುತ್ತಲಿದೆ. ಕಾವೇರಿಗಿಂತ ನಿಲುವಿಕೆಯಲ್ಲಿ ನಸುವೆ ಎತ್ತರ; ಪುಷ್ಟವಾದ ದೇಹದಾಕಾರ. ಬಣ್ಣ ಆಕರ್ಷಕವಾದುದಲ್ಲವಾದರೂ ಕಣ್ಣು-ಮೂಗುಗಳಲ್ಲಿಯ ಚೆಲುವಿನ ಸಿರಿ-ವಂತಿಕೆ ಆಕರ್ಷಕವಾದುದು. ತನ್ನನ್ನು ಎವೆಯಿಕ್ಕದೆ ನೋಡುತ್ತಿರುವ ತರುಣ ನನ್ನು ಕುಮುದೆಯೂ ಅರೆನಿಮಿಷ ನೋಡಿದಳು. ಕೂಡಲೆ ವಸ್ತುಸ್ಥಿತಿಯ ಅರಿವು ಉಂಟಾಗಿ, ಮುಂದುವರಿದು ಬಂದು, ಎಲ್ಲರೆದುರೂ ಕಪ್ಪು-ಬಸಿಗಳನ್ನಿ-ರಿಸಿ, ಚಹವನ್ನು ಹಾಕಲು ತೊಡಗಿದಳು. ಖಾದೀಧಾರಿ ತರುಣನ ಕಪ್ಪಿನಲ್ಲಿ ಚಹವನ್ನು ಹಾಕುತ್ತಿರುವಾಗ, ಕಿಟ್ಟಲಿಯ ಸೊಂಡಿಲಿಂದ ಹೆಚ್ಚಾಗಿ ಕಸುವಿ-ನಿಂದ ನುಗ್ಗಿದ ಚಹವು, ಆ ತರುಣನ ಕಾಲ ಮೇಲೆ ಬಿದ್ದಿತು; ಕೂಡಲೆ ಕುಮುದಾ ವಿಷಾದದ ಧ್ವನಿಯಲ್ಲಿ 'ಅಯ್ಯೊ! ಕ್ಷಮಿಸಿ' ಎಂದು ಹೇಳಿದಳು. ತಟ್ಟನೆ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಕರವಸ್ತ್ರವನ್ನು ತೆಗೆದು ಆತನ ಕೈಗೆ ಕೊಡುತ್ತ 'ಒಮ್ಮೆಲೆ ಚಹಾ ಜೋರಿನಿಂದ ಹೊರಗೆ ಬಂತು! ಕಾಲು ಸುಟ್ಟಿತೋ ಏನೋ!' ಎಂದಳು. ತರುಣ ಮೆಲುನಗೆ ನಗುತ್ತ 'ಛೇ ಛೇ! ಸುಡುವಷ್ಟು ಬಿಸಿಯೇನೂ ಇರಲಿಲ್ಲ! ಪರವಾ ಇಲ್ಲ!' ಎಂದು ಆ ಕರವಸ್ತ್ರ-ವನ್ನು ಕೈಗೆ ತೆಗೆದುಕೊಂಡು ಒರಸಿಕೊಂಡನು.

ಪುರೋಹಿತರು ನಗು-ನಗುತ್ತ ನುಡಿದರು :

" ಇದು ಇಂಗ್ಲಿಷ್ ಕಲಿತವರ ಕೆಲಸದ ಶಿಸ್ತು ನೋಡಿರಿ ! ನೆಟ್ಟಗೆ ಚಹಾ ಹಾಕಿಕೊಡಲಿಕ್ಕೆ ಬರಂಗಿಲ್ಲ; ಇವರು ಅಡಿಗೀ-ಅಂಬಲೀ ಹ್ಯಾಂಗ ಮಾಡತಾರೋ ದೇವರಿಗೇ ಗೊತ್ತು !"

ಕುಮುದಾ ನಾಚಿಕೆಯ ನಗೆ ನಗುತ್ತ ಹಾಗೆಯೇ ಹೊರಟು ಹೋದಳು. ಚಹ ಕುಡಿಯುತ್ತಲೇ ಆ ತರುಣ ಕೇಳಿದ :

" ಇವರು ಇಂಗ್ಲಿಷ್ ಕಲಿತಾರೇನು ?"

" ಬರೇ ಕಲೀತಾರಿಷ್ಟs ಯಾಕ ರಾಯರs ! ಈ ಸಲ ಮ್ಯಾಟ್ರಿಕ್ ಪರೀಕ್ಷಾಕ್ಕ ಕೂತಾರ; ಪಾಸಾದರಂದರ ನಾಳೆ ಕಾಲೇಜಕ್ಕ ಹೋಗಿ ಕಲಿತು ಬಿ. ಎ., ಎಂ. ಎ. ಆಗವರು !" ಪುರೋಹಿತರು ಆಡಿದ ಮಾತಿನ ವಿಡಂಬನೆಯ ಧ್ವನಿಯನ್ನು ಕೇಳಿ ತರುಣ ನಕ್ಕು ನುಡಿದ :

" ಸರಿ ಸರಿ !"

ತಾಂಬೂಲಸೇವನೆಯಾದ ಮೇಲೆ ಎಲ್ಲರೂ ಎದ್ದು ಅಪ್ಪಣೆ ಪಡೆದು ಕೊಂಡು ಹೊರಟರು. ಟಾಂಗಾ ಹತ್ತುವಾಗಲೆ ಪ್ರಶ್ನೆಕೇಳಿದ ತರುಣ ಪುರೋಹಿತರನ್ನು ಕರೆದು ಹೇಳಿದ :

" ನಿಮ್ಮನ್ನ ನಿರಾಶೆಗೊಳಿಸಬೇಕಾಗಿ ಬಂದದ್ದಕ್ಕಾಗಿ ವಿಷಾದ ಅನಿಸತದ. ನಮ್ಮ ಮಿತ್ರ ಇಂಗ್ಲಿಷ್ ಕಲಿತ ಹುಡಿಗಿನ್ನ ಅಪೇಕ್ಷಿಸತಾನ. ಥ್ಯಾಂಕ್ಸ್ !"

ಟಾಂಗಾಗಳು ಮುಂದುವರೆದುವು. ಪುರೋಹಿತರು ಒಳಗೆ ಬಂದ ಮೇಲೆ ಗೋಪಾಲರಾಯರಿಗೆ, ಆ ಗಂಡಿನ ಮಿತ್ರ ಹೇಳಿದ ಕೊನೆಯ ಮಾತನ್ನು ಹೇಳಿದರು. ಗೋಪಾಲರಾಯರ ಮುಖ ಬಾಡಿ ಬತ್ತಿಯಾಗಿ ಹೋಯಿತು. ಪುರೋಹಿತರು ಸಮಾಧಾನದ ಮಾತುಗಳನ್ನೆಷ್ಟು ಹೇಳಿದರೂ ಅವರ ಅಸಮಾಧಾನ ಕಡಿಮೆಯಾಗಲಿಲ್ಲ. ಆದರೂ ಹೆಂಗುಸರಿಗೆ ಮಾತ್ರ ಈ ಮಾತು ಗೊತ್ತಾಗಲಿಲ್ಲ. ಎಲ್ಲರೂ ತಂತಮ್ಮ ಮನೆಗಳಿಗೆ ಹೊರಟುಹೋದರು. ಶಾಲೆಬಿಟ್ಟಮೇಲೆ, ಮಕ್ಕಳು ಹಸಿದು ಆತುರದಿಂದ ಮನೆಗೆ ಬಂದಾಗ, ನಿರೀಕ್ಷಿಸಿದ ತಿಂಡಿ-ತೀರ್ಥಗಳನ್ನು ಕಾಣದೆ, ಉಪ್ಪು-ಕಾರದವಲಕ್ಕಿಯನ್ನು ತಿಂದು ಹಸಿವೆಯನ್ನು ತಣಿಸಿಕೊಂಡರು.

## ೨ ನೆಯ ಪರಿಚ್ಛೇದ

"ಇಂದು ಕಾವೇರಿನ್ನ ನೋಡಲಿಕ್ಕೆ ಇನ್ನೊಬ್ಬ ವರ ಬಂದು ಹೋದ."

"ಇಂದು ಇನ್ನೊಬ್ಬ ಬಂದುಹೋದ; ನಾಳೆ ಮತ್ತೊಬ್ಬ ಬರತಾನೆ; ನಾಡದು ಮಗದೊಬ್ಬ ಬರಬಹುದು. ನಮ್ಮ ಗೋಪಾಲರಾಯನ ಮನೀ ಅಂದರ, ವರಗಳ ಅತಿಥಿಶಾಲೆ ಆಗಿ ಕೂತ್ತದ. ದಿನಕ್ಕೊಬ್ಬ ಬರತಾನ ಪರಿವಾರ ಸಹಿತ. ಆದರ, ಉಪಚಾರ, ತಿಂಡಿ, ತೀರ್ಥ ಹೊಡೀತಾನ. ಉಪಕಾರ ಕೂಡಾ ಸ್ಮರಿಸದೆ ಹೊರಟು ಹೋಗತಾನ. ನನಗ ಅನಿಸತ್ತದ : ಆ ಗೋಪಾಲರಾಯ ಆ ಗಂಡುಗಳದೆಲ್ಲಾ ಹಿಂದಿನ ಜನ್ಮದ ಋಣಾ ತೀರಿಸ-ತಾನs ಅಂತ !"

"ನಿಮ್ಮದೊಂದು ಹುಚ್ಚುಚ್ಚಾರದ ಮಾತs ! ಎಲ್ಲಾರೂ ಹಾಂಗs ಇರತಾರೇನು ? ಇಂದಿನದು ಹೊಂದೂ ಹಾಂಗ ಕಾಣಿಸತ್ತದ. ಹೊಂದದs ಏನ ಮಾಡತ್ತದ ! ಕಾವೇರಿ ಏನು ಕುರೂಪಿ ಹುಡಿಗೇ ? ನೂರು ಮಂದೀ-ಯೊಳಗ ಎದ್ದು ಕಾಣಿಸೂವಂಥಾ ಚೆಲುವಿ ?"

"ಬರೇ ಚೆಲುವಿಕೀ ತೊಗೊಂಡೇನು ತೊಳಕೊಂಡು ಕುಡಿತಾರs ? ಇದು ಇಪ್ಪತ್ತನೆಯ ಶತಮಾನ ತಿಳೀತಿಲ್ಲೊ ? ನಮ್ಮ ಮದಿವೀ ಕಾಲದಾ-ಗೊಂದು ನಿರ್ವಾಹನs ಇದ್ದಿದ್ದಿಲ್ಲ. ತಾಯಿ-ತಂದೀ ನೋಡಿ ಮಾಡಿದ ಮೊದ್ದು ಹುಡುಗೀ ಕೂಡಾನs ಹ್ಯಾಂಗೋ ಬಾಳ್ವೇ ಮಾಡಿಕೊಂಡು ಬರ-ಬೇಕಾಯ್ತು !"

"ಹುಂ ! ಮೊದ್ದು ಹುಡುಗಿ ! ಆ ಮೊದ್ದು ಹುಡಿಗ್ಗೆ ಮರುಳಾಗೇ, ನಾಚಿಕಿ ಇಲ್ಲದೆ ಮೂರು ಮೂರು ದಿನಕ್ಕ ಮಾವನ ಮನಿಗೆ ಓಡೋಡಿ ಬರತಿದ್ದಿರಿ. ತಾಯಿ-ತಂದೀ ಬೈದರೂ ಕೇಳತಿದ್ದಿಲ್ಲ !"

"ಹ ಹ್ಹs ಹ್ಹs ಹ್ಹ !" ಅನಂತರಾಯರು ನಕ್ಕುಬಿಟ್ಟರು. ಅನಂತ-ರಾಯರು ತುಂಗಮ್ಮನ ಯಜಮಾನರು; ಕುಮುದೆಯ ತಂದೆ. ಅವರು ಅದೇ ನಗರದಲ್ಲಿಯ 'ಭುವನೇಶ್ವರಿ ಬ್ಯಾಂಕ್'ನಲ್ಲಿ ಅಸಿಸ್ಟಂಟ್ ಮ್ಯಾನೇಜ-ರಾಗಿದ್ದರು. ತಿಂಗಳ ವೆಚ್ಚಕ್ಕೆ ಹೆಚ್ಚಾಗಿ ಉಳಿಯುವಷ್ಟು ಕೈತುಂಬ ಸಂಬಳ ಸಂಪಾದಿಸುತ್ತಲಿದ್ದರು. ಇವರಿಗೆ ಹಳೆಯ ರೀತಿ-ನೀತಿಗಳೆಲ್ಲ ಹುಡಿಮಣ್ಣು; ಹೊಸ ರೀತಿ-ನೀತಿಗಳೆಂದರೆ ಪಡಿಹೊನ್ನು ! ಎಂತಲೆ ನಗರದ ಒಳಭಾಗದಲ್ಲಿಯೆ

ಆದರೂ, ಸುಂದರವಾದ ವಿಶಾಲವಾದ ಮನೆಯನ್ನು ಬಾಡಿಗೆಗೆ ಹಿಡಿದಿದ್ದರು. ಮನೆಯಲ್ಲಿ ವಿದ್ಯುದ್ದೀಪ. ಎಲ್ಲೆಲ್ಲಿಯೂ ಆಧುನಿಕ ಉಪಕರಣಗಳು; ಫರ್ನಿಚರುಗಳು ಹೆಂಡತಿ ತುಂಗಮ್ಮ ಹಳೆಯ ವಿಚಾರದವಳಾಗಿದ್ದರೂ, ರಾಯರ ಒತ್ತಾಯ ಆಕೆಯನ್ನು ಹೊಸಬಗೆಯ ವೇಷ-ಭೂಷಣದವರನ್ನಾಗಿ ಮಾಡಿದ್ದಿತು. ಕುಮುದೆಯ ಬೆನ್ನ ಮೇಲೆ ಒಂದರ ಹಿಂದೊಂದರಂತೆ ಐದು ಮಕ್ಕಳನ್ನು ಹೆತ್ತಳಾದರೂ, ಅವೆಲ್ಲ ಭೂಮಿಗಿಳಿದು ಬಂದ ಸ್ವಲ್ಪದಿನಗಳಲ್ಲಿಯೆ ಉತ್ತರಪೂಜೆ ಮಾಡಿಸಿಕೊಂಡು ಸ್ವಸ್ಥಾನಕ್ಕೆ ತೆರಳಿದ್ದುವು. ಬಹುಶಃ ಅವೆಲ್ಲ, ಅಮ್ಮನ ವಿಚಾರದಂತಿರಬೇಕೋ, ಅಪ್ಪನ ವಿಚಾರದಂತಿರಬೇಕೋ ?– ಎಂಬುದು ತಿಳಿಯದೆ, ಈ ವಿಚಾರಗಳ ತೊಡಕೇ ತಮಗೆ ಬೇಡವೆಂದು ತಮ್ಮ ಅವತಾರವನ್ನು ಸಮಾಪ್ತಿಗೊಳಿಸಿರಬಹುದು. ಕುಮುದಾ ಮಾತ್ರ ಮೊದಲಿನಿಂದಲೂ ಅಪ್ಪನ ಪ್ರೀತಿಗೆ ಪಾತ್ರಳಾದವಳು; ತಿಳಿಯಲು ತೊಡಗಿದಾಗಿನಿಂದಲೂ ಅಪ್ಪನ ವಿಚಾರಗಳನ್ನೆ ಪುರಸ್ಕರಿಸುತ್ತಲಿದ್ದವಳು. ಮಗಳ ಹನ್ನೊಂದನೆಯ ವಯಸ್ಸಿನಲ್ಲಿಯೆ ಮದುವೆಯ ವಿಚಾರವನ್ನು ತುಂಗಮ್ಮ ತೆಗೆದಾಗ, ರಾಯರು ಉಪಹಾಸದ ನಗೆಯನ್ನು ನಕ್ಕು ಅವಳ ಹಳೆಯತನವನ್ನು ಹೀಗಳೆದರು. ಮಗಳನ್ನು ಇಂಗ್ಲಿಷ್ ಶಾಲೆಗೆ ಕಳುಹುವುದು ಬೇಡವೆಂದು ತುಂಗಮ್ಮ ಎಷ್ಟು ಹಟಹಿಡಿದು ಹೇಳಿದರೂ ಕೇಳದೆ, ಕುಮುದೆಯನ್ನು ಇಂಗ್ಲಿಷ್ ಶಾಲೆಗೆ ಕಳುಹಲು ತೊಡಗಿದರು. ಯಾವಾಗಲೂ ತುಂಗಮ್ಮನದು ಒಂದು ಬಗೆಯ ಮಾತಾದರೆ, ತಂದೆ–ಮಗಳು ಇಬ್ಬರದೂ ಇನ್ನೊಂದು ಬಗೆಯ ಮಾತು.

ಇಂದು ವೇಣಕ್ಕನ ಮನೆಗೆ ಹೋದಾಗ, 'ನಮ್ಮ ಕುಮುದಾನ್ನ ನೋಡಲಿಕ್ಕೊ ಹೀಂಗಽ ಎಂದು ವರ ಬಂದು ಕುಳಿತಾನು' ಎಂಬ ಭಾವನೆ ತುಂಗಮ್ಮನ ಮನದಲ್ಲಿ ಹಲವಾರು ಸಲ ಬಂದು ಬಂದು ಹೋಯಿತು. ಆದರೆ ತಮ್ಮ ಹಾರಯಿಕೆ, ಬೇಗನೆ ಫಲಿಸುವುದು ಸಾಧ್ಯವಿಲ್ಲವೆಂಬುದನ್ನು ನೆನೆದುಕೊಂಡು, ಒಳಗೊಳಗೇ ಕಳವಳಿಸುವರು. ರಾತ್ರಿ ಅನಂತರಾಯರು ಕ್ಲಬ್ಬಿನಿಂದ ಮನೆಗೆ ಬಂದು, ಊಟಮುಗಿಸಿ, ಪಡಸಾಲೆಯಲ್ಲಿಯ ವಿರಾಮಾಸನದಲ್ಲಿ ವಿಶ್ರಮಿಸಿದಾಗ, ತುಂಗಮ್ಮ ಬಳಿಯಲ್ಲಿಯೆ ಬಂದು ಕುಳಿತು, ವೇಣಕ್ಕನ ಮನೆಯ ಕನ್ಯಾ ನಿರೀಕ್ಷಣೆಯ ಮಾತನ್ನು ಪ್ರಾರಂಭಿಸಿದಳು. ಪ್ರಾರಂಭಿಸಿದ ಮಾತು,

ರಾಯರ ಮದುವೆಯಾದ ಹೊಸತರಲ್ಲಿಯ ಪ್ರಣಯದ ಹುಚ್ಚಾಟವನ್ನು ನೆನಪು ಮಾಡಿಕೊಡುವ ರಸಪ್ರಸಂಗದ ವರೆಗೂ ಬಂದಿತು. ಹೆಂಡತಿಯ ವ್ಯಂಗ್ಯ-ಮಾತುಗಳನ್ನು ಕೇಳಿ ರಾಯರು ಗಟ್ಟಿಯಾಗಿ ನಕ್ಕರು; ನಕ್ಕು ಹೇಳಿದರು :

"ಇದು ನೋಡು ! ನಿನ್ನ ಮಾತು ಸುಳ್ಳಲ್ಲ ! ನನ್ನ ಕಣ್ಣೆದುರು ಇರುವಾಗ ನೀನು ಮೊದ್ದುಮೊದ್ದಾಗಿ ತೋರತಿದ್ದಿಯಾದರೂ, ಕಣ್ಣ ಮುಂದೆ ಇಲ್ಲದಾಗ ಮುದ್ದು-ಮುದ್ದಾಗಿ ಕಂಡು, ನ್ನೈಮರೆಯಿಸಿ ಬಿಡತಿದ್ದಿ. ಅದಕ್ಕs ತಾಯಿಾ-ತಂದಿಗಳಿಗೆ ಹೇಳದs ಕೇಳದs, ಮಾವನ ಮನೀ ಕಡೆಗೆ ಜಿಗತಾ ಕೊಡತಿದ್ದೆ. ಮತ್ತ ನಿಮ್ಮ ಅಪ್ಪ, ಹಳೇ ಸಂಪ್ರದಾಯದವನಾದರೂ ಒಳ್ಳೇ ಮನುಷ್ಯ ! ನನ್ನ ಮನಸನ್ನ ಚೆನ್ನಾಗಿ ತಿಳಿದುಕೊಂಡು ಬಿಟ್ಟಿದ್ದರು. ನಾನು ನಿಮ್ಮ ಮನಿಗೆ ಬಂದಾಗೆಲ್ಲಾ ಪ್ರೀತಿಂದs ಸ್ವಾಗತಿಸತಿದ್ದರು !"

"ಅವರ್ಹಾಂಗs ನೀವೂ ನಿಮ್ಮ ಅಳಿಯನ್ನ ಪ್ರೀತಿಂದs ಎಂದ ಸ್ವಾಗತಿಸತೀರೋ ಅಂತ ನನಗ ಅನಿಸತsದ ಹಗಲೆಲ್ಲಾ !"

"ಮತ್ತೆ ಬಂದಿ ಹೌದಲ್ಲೋ ನೀನು ನಿನ್ನ ಮೂಲ ಪಲ್ಲವಿಗೆ !" ಗಟ್ಟಿ-ಯಾಗಿ ಕೆಮ್ಮುತ್ತ "ಮಕ್ಕಳ ಮದಿವಿಗೇ ಅಂದರ ನೀವು ಹೆಂಗಸರು ಬಡಕೋತೀರಿ !" ಎಂದು ನುಡಿದು ಅನಂತರಾಯರು, ಕೆಮ್ಮು-ಕೆಮ್ಮುತ್ತಲೇ 'ಕುಸುಮಾ' ಎಂದು ಕೂಗಿದರು. ತನ್ನ ಕೋಣೆಯಲ್ಲಿ ಯಾವುದೋ ಪುಸ್ತಕವನ್ನು ಒದುತ್ತ ಕುಳಿತಿದ್ದ ಕುಸುಮಾ, ಅವಸರದಿಂದ ಹೆಜ್ಜೆಯಿಕ್ಕುತ್ತ ತಂದೆಯ ಬಳಿಗೆ ಬಂದಳು. ಕೈಯಲ್ಲಿ ಹಿಡಿದಿದ್ದ ಕರಡಿಗೆಯೊಳಗಿಂದ ಗುಳಿಗೆಯೊಂದನ್ನು ತೆಗೆದು ರಾಯರ ಕೈಯಲ್ಲಿ ಕೊಟ್ಟಳು. ರಾಯರು ಗಡಬಡಿಯಿಂದ ಅದನ್ನು ನುಂಗಿ, ಒಂದು ಬಟ್ಟಲು ನೀರನ್ನು ಕುಡಿದರು. ಒಂದೆರಡು ನಿಮಿಷಗಳಲ್ಲಿಯೇ ಕೆಮ್ಮು ಕಡಿಮೆಯಾಯಿತು. ಮತ್ತೆ ರಾಯರು ಮಾತನಾಡಲು ತೊಡಗಿದರು :

"ಅಲ್ಲs ! ಕಾವೇರೀ ಮದಿವಿ ಹೊಂದೂಹಾಂಗ ಕಾಣಿಸತsದ ಅಂದಿ ! ನೋಡಲಿಕ್ಕೆ ಬಾದವರು ಯಾವ ಊರವರು ?"

"ಅಲ್ಲಿಲ್ಲೋ ರಾಮದುರ್ಗದ ಹತ್ತರ ಒಂದು ಹಳ್ಳಿಯೂರವರಂತ !"

“ ಅಹುದಲ್ಲೋ ? ನನಗ್ಗೊತ್ತು ! ಕತ್ತಿ ತಪ್ಪಿಸಿಕೊಂಡರ ಹಾಳು ಗ್ವಾಡ್ಯಾಗs ಹೋಗಬೇಕು. ಕಾವೇರಿಯಂಥಾ ಕಲಿಯದ ಕನ್ಯಾಗಳದು, ಹಳ್ಳೀ ಊರ ವರನ ಕೂಡಾನs ಹೊಂದಿಕಿ ಆಗಬೇಕು !”

ಬಳಿಯಲ್ಲಿಯೆ ನಿಂತ ಕಾವೇರಿ ಉಪಹಾಸದ ಮೆಲುನಗೆಯನ್ನು ನಕ್ಕು ಬಿಟ್ಟಳು. ತುಂಗಮ್ಮ ಅಭಿಮಾನದ ಧ್ವನಿಯಲ್ಲಿ ಹೇಳಲು ತೊಡಗಿದಳು :

“ ಅದ್ಯಾಕ ನಾ ನೋಡಿದಿನಲಾ! ಹುಡುಗ ಚೆಲೋ ಇದ್ದಾನ. ಇಂಟರ್ ಪರೀಕ್ಷಾ ಪಾಸಮಾಡ್ಯಾನಂತ ! ಹಳ್ಳೀ ಊರಾಗ ಹುಟ್ಟಿದ್ದರ ಏನು ತಪ್ಪಾತು ? ಈಗ ಇದೇ ಊರೊಳಗ ಕಚೇರ್‍ಯಾಗ ಕಾರಕೂನಿಕೀ ಕೆಲಸಾ ಮಾಡತಾನಂತ !”

ಬೆರಗಿನ ಧ್ವನಿಯಲ್ಲಿ ರಾಯರು ಮಾತನಾಡಿದರು :

“ ಇಂಟರ್ ಪರೀಕ್ಷಾ ಪಾಸ್ ಆಗ್ಯಾನ, ಕಾರಕೂನಿಕೀ ಕೆಲಸಾ ಮಾಡತಾನ ! ಇಂಥಾಂವಾ ಕಾವೇರಿನ್ನ ಮದಿವೀಮಾಡಿಕೊಳ್ಳಿಕ್ಕೆ ಒಪ್ಪಿಗೋತಾನ ?”

“ ಒಪ್ಪಿಗೋಳದs ಏನು ಮಾಡತಾನ ? ಎಲ್ಲಾರೂ ಸಿಮ್ಮಾಂಗs ಹಟವಾದಿಗಳs ಇರತಾರೇನು ?”

ಕುಮುದಾ ನಡುವೆಯೆ ಮಾತನಾಡಿದಳು :

“ ಆ ವರಾ ಕಾವೇರಿನ್ನ ಒಪ್ಪಿಗೊಳ್ಳಲಿ. ಬಿಡಲಿ ! ನನಗೇನೂ ಆ ವರಾ ಮನಸಿಗೆ ಬರಲಿಲ್ಲ ನೋಡು ಕಾಕಾ ! ಅವನ ಆ ಕಪ್ಪು ಮೈಬಣ್ಣ ಏನು ! ದಪ್ಪದಪ್ಪ ಗಲ್ಲಾ-ತುಟೀ ಏನು ! ತಂಬಾಕು ತಿಂದು ಕೆಂಪಾದ ಹಲ್ಲೇನು ! ನನಗಂತೂ ಅಂವ ಒಬ್ಬ ನಿಗ್ರೋನ ಹಾಂಗ ಕಂಡ ! ಕಲೀದಿದ್ದರೂ ಏನಾತು ? ಕಾವೇರಿ ಬಣ್ಣದ ಗೊಂಬೀಯಂಥಾ ಹುಡುಗಿ ! ಅಂಥಾಕಿನ್ನ ಆ ಕೋತಿ-ಕೊಳ್ಳಿಗೆ ಕಟ್ಟೋದದನ ?”

ಅಸಹನೆಯ ಸ್ವರದಲ್ಲಿ ತುಂಗಮ್ಮ ಹೇಳಿದರು :

“ ನಿನಗ, ನಿಮ್ಮ ತಂದಿಗೆ ಯಾರು ಮನಸಿಗೆ ಬರತಾರ ಅಂತ ತಿಳಿದೀದಿ ಕುಮುದಾ ? ಯಾರೂ ಮನಸಿಗೇ ಬರೂದಿಲ್ಲ. ಅದಕ್ಕs ನಿನ್ನ ಲಗ್ನದ್ದೊಂದು ನನಗ ಬಗೀಹರೀದ ಚಿಂತೀನs ಆಗೇದ ! ಯಾಕ, ಆ ಹುಡುಗ್ಗ ಏನಾಗೇದ ? ಬೇಕಾದ್ಹಾಂಗ ಘಟ್ಟಿಮುಟ್ಟ ಇದ್ದಾನ........ನೌಕರೀ ಮಾಡಿ ರೂಪಾಯಿ ಘಳಿಸತಾನ. ಭೂಮಿಾ-ಸೀಮಿಾನೂ ಅದs ಅಂತ !”

" ನಾ ಒಲ್ಲೆ ನಮ್ಮವ್ವಾ ! ಕುಲಾ ಹೀನ ಇದ್ದರೂ ವರಾ ಹೀನ ಇರ-ಬಾರದೆಂತ, ನಮ್ಮ ಕೆಲಸದಾಕಿ ಆಗಾಗ ಅಂತಿರತಾಳ ಕೇಳೀದೀ ಇಲ್ಲೋ ? ಇನ್ನೂ ಆ ಇನ್ನೊಬ್ಬರು ಚೆ....ನ್ನಾಗಿ ಇದ್ದರು ನೋಡು : ಆ ವರನ ಬಲ-ಬದಿಗೆ ಖಾದೀ ಉಡಿಗಿ-ತೊಡಿಗೀ ಹಾಕಿಕೊಂಡು ಕೂತಿದ್ದರು ನೋಡು ! ಅಂಥವರು ಹಳ್ಳಿಯ ಊರವರು ಆದರೂ ಆಗವೊಲ್ಲರ್‍ಯಾಕ; ವರ ಅನಿಸಿ-ಗೊಳ್ಳಿಕ್ಕೆ ಯೋಗ್ಯರಿದ್ದಾರ...."

ತುಂಗಮ್ಮ ನಿಡುನೋಟಗಳಿಂದ ಕುಮುದೆಯತ್ತ ನೋಡಿದರು. ಕುಮುದೆಯ ಗಲ್ಲಗಳು ನಸುಗೆಂಪಾಗಿ ಕಂಡುವು. ಕಣ್ಣುಗಳಲ್ಲಿ ಎನೋ ಒಂದು ಬಗೆಯ ಆಶೆ ಆಟವಾಡುತ್ತಲಿದ್ದಿತು. ರಾಯರು ಕೇಳಿದರು :

" ಆತ ಎಲ್ಲಿಯವನಂತ ಆ ಖಾದೀಬಾವಾ ? ಮೊದಲ ಬೂದೀಬಾವಾಗಳು ಇರತಿದ್ದರಂತ; ಈಗ ಖಾದೀಬಾವಾಗಳು ಹೆಚ್ಚಾಗಲಿಕ್ಕೆ ಹತ್ತ್ಯಾರ ! ವರಾ ಎಷ್ಟss ಚೆಲೋ ಇರಲಿ; ಖಾದೀಬಾವಾ ಇದ್ದರ ನಾಯೇನು ಪಾಸ್ ಮಾಡೂದಿಲ್ಲ ನೋಡು ಕುಮುದಾ ! ಇಂದ ಮನ್ಸ್ಯಾಗ ಇದ್ದರ, ನಾಳೆ ಸೆರೆ-ಮನ್ಯಾಗ ಇರತಾರ; ಇಂಥವರಿಗಿಂತಾ ಕಷ್ಟಗನss ಇರವೊಲ್ಲನ್ಯಾಕ; ಕಾರ-ಕೂನಿಕೀ ಮಾಡಿ ಕೈತುಂಬಾ ಸಂಬಳಾ ತಂದು, ಸುಖೀನಂಬಿ ಇರುವವನss ನನಗ ಒಪ್ಪಿಗಿ ಆಗತಾರ !"

" ಸದಾಶಿವಗ ಅದೇ ಧ್ಯಾನಂತ ಹೇಳತಾರಲಾ ! ನಿಮಗ ಯಾವಾಗಲೂ ಕಾರಕೂನಿಕೀ–ಸಂಬಳಾ–ರೂಪಾಯಿ ಇಷ್ಟss ಕಣ್ಣುಮುಂದ ಕುಣೀತಾವ. ಹೇಳಿಕೇಳಿ ಬ್ಯಾಂಕಿನ ಮ್ಯಾನೇಜರು ನೀವು ! ಯಾವಾಗ ನೋಡಿದಾಗ, ಕಣ್ಣ ಮುಂದ ಕಾರಕೂನರು, ಇಲ್ಲದಿದ್ದರ ರೂಪಾಯಿ ಇಷ್ಟss ಇರತಾವ. ನಮ್ಮ ಕುಮುದಾನ್ನೂ ಒಬ್ಬ ಕಾರಕೂನಗ ಕೊಡತಿರೋ, ಏನು ರೂಪಾಯಿಯಾ ರಾಶಿಗೇ ಕೊಡಬೇಕಂತೀರೋ ?"

ರಾಯರು ' ಹಾ ಹಾ ಹಾ !' ಎಂದು ಉಪಹಾಸದ ನಗೆಯನ್ನು ನಕ್ಕು ಬಿಟ್ಟರು. ನಗೆಯೊಡನೆಯೆ ಮತ್ತೆ ಕೆಮ್ಮಿಗೆ ಮೊದಲಾಯಿತು. ಕುಮುದಾ ಇನ್ನೊಂದು ಗುಳಿಗೆಯನ್ನು ರಾಯರ ಕೈಗೆ ಕೊಟ್ಟಳು. ರಾಯರು ಕೆಮ್ಮಿನೊಂದಿಗೆ ಹೋರಾಡುತ್ತ, ಪ್ರಯತ್ನಪೂರ್ವಕವಾಗಿ ಗುಳಿಗೆಯನ್ನು ನುಂಗಿ,

ನೀರನ್ನು ಕುಡಿದರು. ಕೆಮ್ಮು ಸ್ವಲ್ಪ ಕಡಿಮೆಯಾಯಿತು. ತುಂಗಮ್ಮ ಮತ್ತೆ ಮಾತನ್ನು ಪ್ರಾರಂಭಿಸಿದರು :

" ಇತ್ತೀತ್ತಲಾಗ ನಿಮಗ ಇಂಥಾ ಕೆಮ್ಮು ಮ್ಯಾಲೇ ಮ್ಯಾಲೆ ಬರಲಿಕ್ಕೆ ಹತ್ತೇದ. ಬರೇ ಹೀಂಗ ಗುಳಿಗೀ ನುಂಗಿ ನೀರುಕುಡಕೋತನ ಕೂತರ ಏನಾದ್ಹಾಂಗಾತು ? ಒಬ್ಬ ಒಳ್ಳೇ ವೈದ್ಯಗನರೇ ಪ್ರಕೃತೀ ತೋರಿಸಿರಿ ! ಸುಡುಗಾಡು, ಮುಂಜಾವಿನಿಂದ ಸಂಜೀತನಕಾ ಬ್ಯಾಂಕಿನ ಕಾಗದ-ಪತ್ರ ನೋಡೂದು ಆಗತನದ ! ಸಂಜೀ ಕಡೆ ಕ್ಲಬ್ಬಿನೊಳಗ ಹೋಗಿ ಕೂತುಕೊಂಡಿರೆಂದರ, ನಾಕುತಾಸು ರಾತ್ರಿ ಆದರೂ ಮನೀಗೆ ಬರೂದಿಲ್ಲ. ಇಂದನ ಸೂರ್ಯ ಯಾವ ಕಡೆ ಉದಯ ಆಗ್ಯಾನೋ ! ಸ್ವಲ್ಪ ಲಗೂನನ ಮನಿಗೆ ಬಂದೀರಿ ! ಒಂದು ಸಭಾ ಬ್ಯಾಡಾ, ಒಂದು ಸಂಭ್ರಮ ಬ್ಯಾಡಾ !"

" ಇರಲಿ ಬಿಡನ ಅವ್ವಾ ! ತಂತಮ್ಮ ಮನಸಿಗೆ ಯಾವುದು ಆರಾಮ ಅನಿಸತನದ, ಅದನ್ನ ಮಾಡತಾರ ಎಲ್ಲಾರೂ ! ಅಪ್ಪನ್ನ ಇನ್ನ ನೀ ನಿರ್ಬಂಧ ದೊಳಗ ಇಡುವಾಕೇನು ?"

" ನನ್ನ ನಿರ್ಬಂಧದೊಳಗ ಅವರ್ಯಾಕ ಇರತಾರವ್ವಾ ? ಹಿಂದ ನಿರ್ಬಂಧ ದಾಗ ಇಟ್ಟಿದ್ದರ, ಇನ್ನ ಮುಂದೆ ನಿರ್ಬಂಧದಾಗ ಇಡಲಿಕ್ಕಾದೀತು ! ಕೆಮ್ಮಿನದಸಿಂದ ಎಷ್ಟು ತ್ರಾಸಾಗತನದ ನೋಡಿದಿಲ್ಲೋ ? ದೇವರು ಎಲ್ಲಾನೂ ಒಳ್ಳೇದು ಮಾಡಲಿ ! ನನಗಂತೂ ನಿನ್ನ ಮದವೀದನ ಹತ್ತೇದ ನೋಡು ! ಲಗೂನನ ನಿನ್ನ ತಲೀಮ್ಯಾಲ ಅಕ್ಕೀಕಾಳು ಬಿದ್ದರ ಸಾಕು; ನಾನು ನೋಡಿ, ಮುತ್ತೈದಿ ಸಾವಿತ್ರಿ ಆಗಿ ಕಣ್ಣುಮುಚ್ಚಬೇಕಂತೀನಿ !"

" ನೋಡು ಕುಮುದಾ, ಇಕೀಗೆ ನಿನ್ನ ಮದಿವೀದೊಂದು ಹುಚ್ಚನ ಹಿಡದನದ. ಶಿಕ್ಷಣದ ಬೆಲೀ ಗೊತ್ತಿರದ ಅಶಿಕ್ಷಿತ ಹೆಂಗಸರಿಗೆಲ್ಲಾ ಮದಿವೀ-ಮಕ್ಕಳೂ–ಅಂದರ ಆಯ್ತು. ಜೀವನದ ಆದರ್ಶ ಸಾಧಿಸಿ ಹೋಯ್ತು !" ರಾಯರು ನುಡಿದರು. ಕೂಡಲೆ ತುಂಗಮ್ಮ ಹೇಳಿದರು :

" ಹೆಂಗಸರ ಹೃದಯ ನಿಮ್ಮ ಗಂಡಸರಿಗೇನು ಗೊತ್ತು ? ಎಷ್ಟು ಕಲಿತರೂ ಏನಾತು ? ಕೊನಿಗೂ ಹೆಂಗಸರಿಗೆ ತಾಯಿಯಾಗಬೇಕನ್ನೊ ಬಯಕಿ ಏನೂ ತಪ್ಪೂಹಾಂಗಿಲ್ಲ. ಹೆಣ್ಣಿನ ತಾಯಿತನದ ವಿದ್ಯಾ, ಸಾಲ್ಯಾಗ ಕಲಿಸಿದರ ಬರೂದಿಲ್ಲ. ಅದನ್ನ ಕಟಿಕೊಂಡನ ಹುಟ್ಟಿರತಾರ ಹೆಣ್ಣುಮಕ್ಕಳು ! ಈಗ

ನಮ್ಮ ಕುಮುದಾಗ ಮದಿವಿ ಬ್ಯಾಡಾಗೇದೇನು ? ನಿಮ್ಮ ಮಾತು ಕೇಳಿ, ಹೊರಗ್ನ ಮಾತ್ರ ಬ್ಯಾಡಂತಾಳ ಖರೆ !"

ಕುಮುದಾನ ಎದೆ ದಡದಡಿಸಿತು. ಮೈಗೆ ನಡುಕ ಬಂದು ಮುಳ್ಳೆದ್ದಂತಾಯಿತು. ಅಪ್ಪನ ಕಡೆಗೆ ಒಂದು ವಿಚಿತ್ರದೃಷ್ಟಿಯನ್ನು ಬೀರಿ ನಿಟ್ಟಿಸಿದಳು. ಆಗ ಆ ನೋಟದಲ್ಲಿ ತಿರಸ್ಕಾರವಿರಲಿಲ್ಲ; ತನ್ನ ಹೃದಯವನ್ನು ಕಾಣುವ ಸೂಕ್ಷ್ಮತೆ ಇವಳಲ್ಲಿಯೂ ಇದೆಯೆ ?–ಎಂಬ ಆಶ್ಚರ್ಯಭಾವ ತುಂಬಿದ್ದಿತು. ಇದ್ದುದಿದ್ದಹಾಗೆಯೆ ದೂರದಿಂದ ಸಾಮೂಹಿಕ ಧ್ವನಿಯಲ್ಲಿ ಹಾಡು ಕೇಳಲು ತೊಡಗಿತು :

" ಮಾತೃಭೂಮಿ ಜನನಿ ನಿನ್ನ ಚರಣಸೇವೆ ಮಾಡುವಾ ! "

ಒಂದೆ ಒಂದು ಮಧುರಕಂಠ ಮುಂದಿನ ಚರಣವನ್ನು ಹೇಳಿದುದು ಕೇಳಿಸಿತು :

" ಪರಮ ಹರುಷದಿಂದ ನಿನ್ನ ಸುಖಕೆ ಪ್ರಾಣ ನೀಡುವಾ !"

ಮತ್ತೆ ಸಮೂಹಧ್ವನಿ ಅದೇ ಚರಣವನ್ನು ಉಗ್ಗಡಿಸಿತು:

" ಪರಮ ಹರುಷದಿಂದ ನಿನ್ನ ಸುಖಕೆ ಪ್ರಾಣ ನೀಡುವಾ ! "

ಕಿವಿ ನಿಮಿರಿಸಿ ಕೇಳಿ ಕುಮುದಾ ನುಡಿದಳು :

" ಇಂದ ಯಾಕ ನಗರ ಸಂಕೀರ್ತನೀ ಹೊರಡಿಸ್ಯಾರೋ ! ಎಲ್ಲ್ಯಾದರೂ ಸಾರ್ವಜನಿಕ ಸಭಾ-ಗಿಭಾ ಅದನೋ ಏನೋ ! "

" ಮಾಡಲಿಕ್ಕೆ ಉದ್ಯೋಗ ಇಲ್ಲದವರ ಕೆಲಸ ! ಹೀಂಗ ಹಾಡಿಕೋತ ಬೀದಿ ಬೀದಿ ತಿರುಗಿದರ ಎಲ್ಲಿರೆ ಬ್ರಿಟಿಶರು ಅಂಜತಾರೇನು ? ಜರ್ಮನ್ ಕೈಸರನಂಥಾ ಬಲಾಢ್ಯ ವೀರನ್ನ ಹುಟ್ಟಡಗಿಸಿ ಬಿಟ್ಟವರು, ಈ ಕೊಡಿಯರಿವೀ ಕಪ್ಪು ಜನಕ್ಕ ಸೊಪ್ಪು ಹಾಕತಾರ ? ಎಲ್ಲಾ ಮೂರ್ಖತನದ ಕಾರಭಾರ !...."

ಅನಂತರಾಯರು ಇನ್ನೂ ಏನೇನು ಮಾತನಾಡುವವರಿದ್ದರೋ; ನಗರ ಸಂಕೀರ್ತನೆಯ ಮೆರೆವಣಿಗೆ ಮನೆಯ ಹತ್ತಿರ-ಹತ್ತಿರಕ್ಕೇ ಬಂದಿತ್ತು. ಒಂದೆ ಒಂದು ಮಧುರಕಂಠದ ಧ್ವನಿಯಲ್ಲಿ ಹಾಡಿನ ಚರಣ ಕೇಳಿಸಿತು :

" ಹಿಂದ ಮಾತೆ, ಬಂಧುಭಾವದಿಂದ ನಿನ್ನ ಮಕ್ಕಳು...."

ಕುಮುದಾ ಗಡಬಡಿಯಿಂದ ಹೆಜ್ಜೆಯಿಕ್ಕುತ್ತ ಮುಂಬಾಗಿಲ ಕಡೆಗೆ ಓಡಿದಳು. ತುಂಗಮ್ಮನೂ ಎದ್ದು ಅವಸರದಿಂದ ನಡೆಯುತ್ತ ಅಲ್ಲಿಗೆ ಬಂದಳು. ಅನಂತರಾಯರೂ ಎದ್ದು ಬೇಸರದ ಜಡವಾದ ಅಡಿಗಳನ್ನಿಡುತ್ತ ಬೀದಿಯ

ಬಾಗಿಲ ಬಳಿ ಬಂದರು. ಮೆರೆವಣಿಗೆ ನಿದಾನವಾಗಿ ಮುಂದುವರಿಯುತ್ತ-ಲಿದ್ದಿತು. ಮೂವರೂ ಬೀದಿಯ ಜಗುಲಿಯ ಮೇಲೆ ನಿಂತು, ಮೆರೆವಣಿಗೆಯ ನೆರವಿಯನ್ನು ನೋಡಲು ತೊಡಗಿದರು; ಸ್ವಯಂಸೇವಕರು ಕೈಯಲ್ಲಿ ರಾಷ್ಟ್ರ-ಧ್ವಜವನ್ನು ಹಿಡಿದುಕೊಂಡು, ನಾಲ್ಕು ಸಾಲುಗಳಲ್ಲಿ ಓರಣವಾಗಿ ನಡೆಯು-ತ್ತಿದ್ದಾರೆ. ಎಲ್ಲರಿಗಿಂತ ಮುಂದೆ ಇರುವ ಸ್ವಯಂಸೇವಕ ಹಾಡನ್ನು ಸುಸ್ವರ-ದಲ್ಲಿ ಹೇಳುತ್ತಲಿದ್ದಾನೆ; ಮಿಕ್ಕವರು ಒಟ್ಟುಗೂಡಿ ಅವನು ಹೇಳಿದುದನ್ನೇ ಉಗ್ಗಡಿಸುತ್ತಲಿದ್ದಾರೆ. ಮೆರೆವಣಿಗೆಯ ಮುಂಗಡೆಯಲ್ಲಿ ಇಬ್ಬರು ಪೆಟ್ರೋ-ಮ್ಯಾಕ್ಸ್ ದೀಪ ಹೊತ್ತು ನಡೆದಿದ್ದಾರೆ. ಈ ದೃಶ್ಯವನ್ನು ನೋಡಿ ಕುಮುದೆಯ ಹೃದಯವರಳಿ ಮೈ ಜುಮ್ಮೆಂದಿತು. ಮುಂದಾಳು ಹಾಡಿನ ಚರಣ ಹೇಳತೊಡಗಿದ:

"ಕೆಟ್ಟಗಣ್ಣಿನಿಂದ ನೋಳ್ಪ ದುಷ್ಟ ಜನರಿಗಂಜದೆ!"

ಕುಮುದಾ ಹಾಡು ಹೇಳುವವನ ಕಡೆಗೆ ನೋಡಿದಳು. ನೋಡಿಯೆ ನೋಡಿದಳು. ಆ ಮೇಲೆ ಸಂಭ್ರಮದ ಸ್ವರದಲ್ಲಿ ಹೇಳಿದಳು:

"ಕಾಕಾ! ಅಲ್ಲಿ ನೋಡು! ಆ ಹಾಡು ಹೇಳತಾ ಇದ್ದಾರಲ್ಲಾ ಮುಂಗಡೆಯಲ್ಲಿ? ಅವರೇ ನೋಡು, ಇಂದ ಕಾವೇರಿನ್ನ ನೋಡಲಿಕ್ಕೆ ಬಂದ-ವರ ಕೂಡ ಬಂದವರು! ನಾ ಆಗs ಹೇಳಿದೆನಲ್ಲಾ!"

ರಾಯರು ತುಂಗಮ್ಮ ಇಬ್ಬರೂ ಆತನ ಕಡೆಗೆ ನೋಡಲು ತೊಡಗಿದರು. ನೋಡು-ನೊಡುತ್ತಿದ್ದಂತೆಯೇ ಮೆರೆವಣಿಗೆ ಮುಂದೆಸಾಗಿ, ದೂರಹೋಯಿತು. ಮೂವರೂ ಬೀದಿಯ ಜಗುಲಿಯಿಂದಿಳಿದು ಮನೆಯ ಒಳಕ್ಕೆ ನಡೆದರು.

## ೩ ನೆಯ ಪರಿಚ್ಛೇದ

ಸಾಧನಕೆರೆಯಲ್ಲಿ ಗೋವೆಯ ದಾರಿಗೆ ಹೊಂದಿ ಇರುವ ವಿಶಾಲವಾದ ಕಾಂಪಾವುಂಡಿನಲ್ಲಿ, ಮುಖ್ಯ ಬಂಗಲೆಯ ಬಲಗಡೆಗೊಂದು ಹೊರಕೋಣೆ. ಕೋಣೆಯೊಳಗಿನ ವ್ಯವಸ್ಥೆಯನ್ನು ನೋಡಿದರೆ, ಮದುವೆಯಿನ್ನೂ ಆಗದ ತರುಣನಾವನೋ ಅಲ್ಲಿ ವಾಸಿಸುತ್ತಿರಬಹುದೆಂಬುದು ಒಡೆದು ತೋರುವುದು. ಗೋಡೆಗೆ ಹೊಂದಿ ಇರುವ ಟೇಬಲ್ಲಿನ ಮೇಲೆ ಮುಸುಕಿದ ಧೂಳಿಯಲ್ಲಿ 'ಚಲಚ್ಚಿತ್ರ ಪ್ರಪಂಚ' 'ಕಾಮರಾಜ್ಯ' ಪತ್ರಿಕೆಗಳೂ ನಾಲ್ಕಾರು ಪುಸ್ತಕ-ಗಳೂ ಅಸ್ತವ್ಯಸ್ತವಾಗಿ ಬಿದ್ದಿರುವುವು. ಮೇಜಿನ ಮೇಲುಗಡೆಯ ಗೋಡೆಯ

ಮೇಲೆ, ಸುಪ್ರಸಿದ್ಧ ಚಲಚ್ಚಿತ್ರ ತಾರಾಮಣಿಗಳ ಚಿತ್ರಗಳು ವಿವಿಧಭಂಗಿಯಲ್ಲಿ ನಿಂತು, . ತರುಣರ ಭಾವವನ್ನು ಉದ್ರೇಕಗೊಳಿಸುವ ಗುಣದಿಂದ ಕೂಡಿ, ನೇತಾಡುತ್ತಿರುವುವು. ಅದಕ್ಕೆ ಎದುರುಗಡೆಯ ಗೋಡೆಗೆ ಹೊಂದಿ ಹಾಸಿದ್ದ ಚಾಪೆಯ ಮೇಲೆ, ಅಸ್ತವ್ಯಸ್ತವಾಗಿ ಸುತ್ತಿದ ಹಾಸಿಗೆಯ ಸುರುಳಿ ಒಪ್ಪುತ್ತಿ-ರುವುದು. ಚಾಪೆಯ ಅಕ್ಕಪಕ್ಕದಲ್ಲಿ ಸೇದಿ ಒಗೆದ ಸಿಗರೇಟಿನ ತುಂಡುಗಳೂ ಕೊರೆದು ಒಗೆದ ಕಡ್ಡಿಗಳೂ ಸೂರೆಯಾಗಿರುವುವು. ಟೇಬಲ್ಲಿನ ಹತ್ತಿರ ಒಂದು ಹಳೆಯದಾದ ಖುರ್ಚಿ, ಹೇಗೆ ಹೇಗೋ ಮುಖಮಾಡಿಕೊಂಡು ನಿಂತಿರುವುದು. ಗೋಡೆಯ ಗೂಟಗಳ ಸಾಲುಗಳ ಮೇಲೆ, ಬಳಸಿ ಬಳಸಿ ಮಾಸಿದ ಬಟ್ಟೆಗಳೂ, ಬಳಸಬೇಕಾದ ಒಗೆದ ಬಟ್ಟೆಗಳೂ, ಒಂದರಲ್ಲೊಂದು ಸೇರಿಕೊಂಡು ಜೋಲು-ತ್ತಿರುವುವು. ಬಾಗಿಲೊಳಗೆ ಹೊಕ್ಕಕೂಡಲೆ ಕಣ್ಣಿಗೆ ಬೀಳುವ ಎದುರು ಮೂಲೆಯೊಂದರಲ್ಲಿ ಚಿಕ್ಕ ನೆಲಮಾಡ; ಅದರಲ್ಲಿ ಚಹಕ್ಕೆ ಬೇಕಾಗುವ ಸಲಕರಣೆಗಳೆಲ್ಲ ವ್ಯವಸ್ಥೆಯಿಲ್ಲದೆ ಕುಳಿತುಕೊಂಡಿರುವುವು. ಅದರ ಬಳಿಯ-ಲ್ಲಿಯೆ ಒಂದು ಸ್ಟೋವ್; ಅದು ಯಾವ ಧಾತುವಿನಿಂದ ಮಾಡಿರಬಹು-ದೆಂಬುದು ತಿಳಿಯದಷ್ಟು ಕಿಲುಬು, ಕೊಳೆ, ಕಾಡಿಗೆ—ಅದಕ್ಕೆ ಅಂಟಿಕೊಂಡಿವೆ. ಹಗಲುಹೊತ್ತಿನಲ್ಲಿ ಯಾವಾಗ ಹೋಗಿ ನೋಡಿದರೂ ಆ ಕೋಣೆಯಲ್ಲಿ ಕಣ್ಣಿಗೆ ಬೀಳುವುದು ಈ ವ್ಯವಸ್ಥೆ. ಈ ಕೋಣೆಯಲ್ಲಿ ಇರುತ್ತಿದ್ದವನು, ಜಿಲ್ಲಾ ಕೋರ್ಟಿನಲ್ಲಿ ಹೊಸತಾಗಿ ಕೆಲಸಕ್ಕೆ ಸೇರಿದ ಒಬ್ಬ ತರುಣ. ವೆಂಕಣ್ಣ ಎಂದು ಅವನ ಹೆಸರಾದರೂ, ಗೆಳೆಯರೆಲ್ಲ ಆತನನ್ನು ಕರೆಯುವುದು 'ಗಂಧರ್ವ' ಎಂದು. ಏಕೆಂದರೆ ವೆಂಕಣ್ಣನಿಗೆ ತುಂಬ ಹಾಡಿನ ಹುಚ್ಚು. ಅದರಲ್ಲಿಯೂ ಮಹಾರಾಷ್ಟ್ರದಲ್ಲಿ ಸುಪ್ರಸಿದ್ಧನಾಗಿದ್ದ 'ಬಾಲಗಂಧರ್ವ'ನ ಸಂಗೀತವೆಂದರೆ ಆಯಿತು; ಅದನ್ನು ಬಣ್ಣಿಸುವುದರಲ್ಲಿ ಮೈಮರೆತು ಬಿಡುವನು. 'ಬಾಲ-ಗಂಧರ್ವ' ಹಾಡುವ ಅನೇಕ ಹಾಡುಗಳನ್ನು ಅವನು ಆಗಾಗ ಗುಣಗುಣಿಸು-ತ್ತಿರುವುದೂ ಉಂಟು. ಗೆಳೆಯರು ಒತ್ತಾಯ ಪಡಿಸಿದಾಗ, ತನಗೆ ಬಂದಂತೆ ಹಾಡಿ, ಅವರಿಂದ ಹೊಗಳಿಕೆಯ ಮಾಲೆಯನ್ನು ಪಡೆದು ಹೆಮ್ಮೆ ಪಟ್ಟುದೂ ಉಂಟು. ವೆಂಕಣ್ಣನೇ ವರನಾಗಿ, ಮೊನ್ನೆಯ ದಿನ ಗೋಪಾಲರಾಯರ ಮಗಳು—ಕಾವೇರಿಯನ್ನು ನೋಡಲು ಹೋದವ. ಅಂದು ಅವನು ಕ್ರಾಪನ್ನು ಅಚ್ಚುಕಟ್ಟಾಗಿ ಹಿಕ್ಕಿದ್ದನಾದರೂ, ಕೋಣೆಯಲ್ಲಿರುವಾಗ ನೋಡಿದರೆ ಅವನ

ಕ್ರಾಪು ಕೆದರಿದುದಾಗಿಯೇ ಕಾಣುತ್ತಿದುವುದು. ನಿಲುವಿಕೆ ಅಷ್ಟೇನು ಎತ್ತರ-ದ್ದಲ್ಲ. ಮೈಬಣ್ಣ ಕಾಡಿಗೆಗಪ್ಪೇನೂ ಅಲ್ಲ. ಅಗಲವಾದ ಮುಖದಲ್ಲಿ ಉಬ್ಬು-ಗಲ್ಲಗಳು ಒಡೆದು ಕಾಣುವುವು. ಮೂಗು ಮೊಂಡವಾದರೂ ಕಣ್ಣುಗಳು ವಿಶಾಲವಾಗಿದ್ದು ಹೊಳಪಿನಿಂದ ತುಂಬಿದ್ದುವು. ಮೇಲುಗಡೆಯ ಮುಂಬಲ್ಲು ಸ್ವಲ್ಪ ಮುಂದೆ ಸಾಗಿದುದರಿಂದ, ಅವುಗಳನ್ನು ಮುಚ್ಚಬೇಕಾದರೆ, ತುಟಿ-ಗಳೆರಡೂ ಪ್ರಯತ್ನವನ್ನೇ ಮಾಡಬೇಕಾಗುತ್ತಿತ್ತು.

ವೆಂಕಣ್ಣ ಮಂದಬುದ್ಧಿಯವನೇನೂ ಅಲ್ಲ. ನಾಲಗೆಯು ಹದನಾದುದು. ಯಾವ ಸಂದರ್ಭದಲ್ಲಿ ಯಾವ ಬಗೆಯಿಂದ ನಡೆದುಕೊಳ್ಳಬೇಕೆಂಬ ವ್ಯವಹಾರ ಚಾತುರ್ಯವೂ ಅವನಲ್ಲಿರುವುದು. ಆದುದರಿಂದಲೆ ಕೆಲಸಕ್ಕೆ ಸೇರಿದ ಸ್ವಲ್ಪ ದಿನಗಳಲ್ಲಿಯೆ ಮೇಲಧಿಕಾರಿಗಳ ಮೆಚ್ಚಿಕೆಗೆ ಪಾತ್ರನಾದ. ಸರಿವರಯದವ-ರಲ್ಲಿ ಅನೇಕರ ಗೆಳೆತನವನ್ನೂ ಗಳಿಸಿದ. ಅವನ ಈ ಗುಣವೇ ಗೋಪಾಲ-ರಾಯರ ಕಿವಿಗೆ ತಾಗಿ, ವೆಂಕಣ್ಣನನ್ನು ಅಳಿಯನನ್ನಾಗಿ ಮಾಡಿಕೊಳ್ಳಬಹು-ದೆಂಬ ಆಶೆಯನ್ನು ಹುಟ್ಟಿಸಿತು, ಅದಕ್ಕಾಗಿಯೆ ಕಾವೇರಿಯನ್ನು ನೋಡಲು ಅವನನ್ನು ಮನೆಗೆ ಸ್ವಾಗತಿಸಿದರು. ಪರಿಣಾಮವೇನಾಯಿತೆಂಬುದನ್ನು ಇಲ್ಲಿ ಬೇರೆ ಹೇಳಬೇಕಾದುದೇನೂ ಇಲ್ಲ.

ರವಿವಾರಕ್ಕೊಮ್ಮೆ ಇಳಿಹೊತ್ತಿನಲ್ಲಿ, ವೆಂಕಣ್ಣನ ಕೋಣೆಯಲ್ಲಿ ಗೆಳೆಯರ ಕೂಟ ಕೂಡುತ್ತಿತ್ತು. ಹರಟೆ, ಹಾಡು, ವಿನೋದ, ಚಹಾ-ತಿಂಡಿ, ಸಿಗರೇಟು ಎಲ್ಲವೂ ನಡೆಯುವುದು. ಗೆಳೆಯರು ಬರುವ ರವಿವಾರ ದಿನ ಮಾತ್ರ ಕೋಣೆಯ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ಕಾಣುವುದು. ಅಂದು ಟೇಬಲ್ಲಿನ ಮೇಲೆ ಧೂಳು ಮರೆಯಾಗಿರುವುದು! ಪತ್ರಿಕೆ-ಪುಸ್ತಕಗಳು ಒಂದರ ಮೇಲೆ ಒಂದು ಹೊಂದಿಕೊಂಡು, ಮೇಜಿನ ಒಂದು ಬದಿಯಲ್ಲಿ ಕುಳಿತಿರುವುವು. ಸುತ್ತಿಟ್ಟ ಹಾಸಿಗೆಯ ಸುರುಳಿ ಅಚ್ಚುಕಟ್ಟಾಗಿ ಇರುವುದು. ನೆಲದ ಕಸವೆಲ್ಲ ಕಾಣದಂತಾಗಿ, ಅಗಲವಾಗಿ ಹಾಸಿಕೆ ಹಾಕಲಾಗಿರುವುದು. ಶನಿವಾರ ಸಂಜೆಗೆ ಅಗಸ ಬಂದು ಮಾಸಿದ ಬಟ್ಟೆಗಳನ್ನು ಒಯ್ಯುತ್ತಿದ್ದುದ-ರಿಂದ, ಗೂಟದ ಸಾಲಿನ ಮೇಲೆ ಬರೀ ಒಗೆದ ಬಟ್ಟೆಗಳೇ ಕಾಣುತ್ತಿದ್ದುವು. ನೆಲೆಮಾಡದಲ್ಲಿಯ ಚಹದ ಸಲಕರಣೆಗಳಲ್ಲಿಯೂ ಒಂದು ಬಗೆಯ ಓರಣವು ಕಣ್ಣಿಗೆ ಬೀಳುವುದು. ಇಷ್ಟೆಲ್ಲವಾದರೂ, ಸ್ಟೋವಿನ ಸ್ವರೂಪದಲ್ಲಿ ಯಾವ

ಬದಲಾವಣೆಯೂ ಆಗಿರುವುದಿಲ್ಲ. ಅದು ಅಜ್ಞಾತವಾಸದಲ್ಲಿಯ ಪಾಂಡವ-ರಂತೆ, ತನ್ನ ಮೂಲಸ್ವರೂಪವನ್ನು ಮರೆಮಾಡಿಕೊಂಡೇ ಕುಳಿತಿರುವುದು.

ಇಂದು ಆದಿತ್ಯವಾರದ ಇಳಿಹೊತ್ತು. ಅರೆದೋಳಿನ ಅಂಗಿಯೊಂದನ್ನು ಹಾಕಿಕೊಂಡಿದ್ದ–ಕೆದರಿದ ತಲೆಯ–ವೆಂಕಣ್ಣ, ತನ್ನ ಕೋಣೆಯ ಬಾಗಿಲಲ್ಲಿ ನಿಂತುಕೊಂಡು, ಗೆಳೆಯರ ಬರುವನ್ನು ನಿರೀಕ್ಷಿಸುತ್ತಲಿದ್ದ. ನಾಲ್ಕು ಗಂಟೆಗೆ ಸರಿಯಾಗಿ ಶೀನಪ್ಪ, ಬಳವಂತ ಇಬ್ಬರೂ ಕೂಡಿಕೊಂಡು ಬಂದರು. ವೆಂಕಣ್ಣ ನಗುನಗುತ್ತಲೇ ಅವರನ್ನು ಸ್ವಾಗತಿಸಿ, ಒಳಗೆ ಕರೆತಂದು ಹಾಸಿಗೆಯ ಮೇಲೆ ಕುಳ್ಳಿರಿಸಿದ. ತಾನು ಮತ್ತೆ ಬಾಗಿಲ ಬಳಿಯಲ್ಲಿಯೆ ಬಂದು ನಿಂತುಕೊಂಡ. ವೆಂಕಣ್ಣ ಕನ್ಯಾನಿರೀಕ್ಷಣೆಗೆಂದು ಗೋಪಾಲರಾಯರ ಮನೆಗೆ ಹೋದಾಗ, ಈ ಶೀನಪ್ಪ, ಬಳವಂತ ಇಬ್ಬರೂ ಇದ್ದರು. ಇವರಿಬ್ಬರೂ ವೆಂಕಣ್ಣನ ಕಚೇರಿಯಲ್ಲಿಯ ಸಹೋದ್ಯೋಗಿಗಳು; ಹತ್ತಿರದ ಗೆಳೆಯರು. ಪ್ರತಿ ರವಿವಾರ ಇಲ್ಲಿಗೆ ತಪ್ಪದೆ ಬರುವವರು.

ಕುಳಿತಲ್ಲಿಂದಲೇ ಶೀನಪ್ಪ ಮಾತನಾಡಿದ :

" ಏನು ಗಂಧರ್ವಾ ! ಇಂದ ರಾಮುಭಾವು ಊರೊಳಗಿಲ್ಲ. ದತ್ತೂಗ ಚಳಿಜ್ವರಾ ಬಂದು ಮಲಗಿಕೊಂಡಾನ. ಇಂದೇನೂ ಅವರಿಬ್ಬರೂ ಬರೂ-ಹಾಂಗಿಲ್ಲ. ಅಂದ ಮ್ಯಾಲ ಯಾರ ದಾರೀ ಕಾಯುತೀ ನೀ ಇನ್ನೂ !"

ನಿಂತಲ್ಲಿಂದಲೆ ಹೊರಳಿನೋಡುತ್ತ ವೆಂಕಣ್ಣ ಹೇಳಿದ :

" ಇಂದ ಆ ರತ್ನಾಕರರಾಯನಿಗೂ ಬಾ ಅಂತ ಹೇಳೀನಿ. ಅಂವ ಬರಬಹುದೂ ಅಂತ ದಾರೀ ನೋಡತಾ ಇದ್ದೀನಿ !"

" ಯಾರು ? ರತ್ನಾಕರರಾಯ ? ಅಂವೇನು ಬರತಾನೋ ! ದೇಶಭಕ್ತ ಬಚ್ಚಾ ಏನಪಾ ಅಂವ ! ಅವರ ಗಾಂಧಿನ್ನಂತೂ ಸರಕಾರದವರು ಹಿಡಿದು ಬಿಟ್ಟರು. ಈಗ ಉಪ್ಪು ಮಾರೂ ಸಭಾಬಿಟ್ಟು ಇಲ್ಲಿಗೆ ಬರತಾನs ?"

" ಇಲ್ಲೋ, ಬರಲಿಕ್ಕೆ ಹೇಳೀನಿ ! ಬಾದೇ ಬರತೀನಂತ ಖಂಡಿತ ಹೇಳ್ಯಾನಂವ ! "

" ಏನೋ ಅಪ್ಪಾ, ನಾ ಏನ ಹೇಳಲಾರೆ ಬಿಡು....ಬಂದಾನಂತ ! ಇಂದಂತೂ ಆದಿತ್ಯವಾರ; ಎಲ್ಲಾರಿಗೂ ಸೂಟಿ ! ಅಂದ ಮ್ಯಾಲ, ಇಂದ ಯಾವ

ಪ್ಯಾಟ್ಯಾಗಾದರೂ ಸಭಾ ಕೂಡಿಸಿ, ಲೆಕ್ಚರ್ ಹೊಡದು ಉಪ್ಪಿನ ಚೀಟೀ ಮಾರುವವನನ ಅಂವ!"

"ಇಲ್ಲಿಲ್ಲ! ಇನ್ನೂ ಏನೋ ನನ್ನ ಕೂಡಾ ಮಾತಾಡೂದು ಅದಽ ಅಂತ! ನಮ್ಮ ಅಣ್ಣಾನ ಜೀವದ ಗೆಳ್ಯಾ ಆತ. ಇಬ್ಬರೂ ಕೂಡೇ ಕಾಲೇಜದೊಳಗ ಇದ್ದರು. ಇಬ್ಬರೂ ಕೂಡೇ ಕಾಲೇಜ ಬಿಟ್ಟು ದೇಶಸೇವಾಕ್ಕ ಹೊರಬಿದ್ದು ಬಂದರು. ಅದೇನೋ, ನಮ್ಮ ಅಣ್ಣಾ ಹಳ್ಳೀ ಸುಧಾರಿಸತೀನೀ ಅಂತ ಹಳ್ಳೀ ಹಿಡಿದು ಕೂತ. ಇಂವ ಮಾತ್ರ ಸ್ವರಾಜ್ಯ ಚಳವಳೀ ಮಾಡತಃ ಅಲ್ಲೀ ಇಲ್ಲೀ ಸುತ್ತಾಡತಾ ಇರತಾನ. ಆದರ ಇಬ್ಬರಲ್ಲೂ ಗೆಳೆತನಾ ಅಂದರ ಅಷ್ಟಿಷ್ಟಲ್ಲ. ಒಂದೇ ಹೊಟ್ಟೆಂದಽ ಹುಟ್ಟಿದ ಅಣ್ಣ-ತಮ್ಮರು ಕೂಡಾ ಅಷ್ಟು ಪ್ರೀತಿಂದ ನಡಕೊಳ್ಳಲಿಕ್ಕಿಲ್ಲ ನೋಡು."

ಬಳವಂತ ತಿರಸ್ಕಾರದ ಧ್ವನಿಯಲ್ಲಿ ಮಾತನಾಡಿದ:

"ಅದೆಲ್ಲಾ ಆತೋ ಗಂಧರ್ವಾ! ಹೀಂಗ ಸಭಾಮಾಡಿ ಉಪ್ಪಿನ ಚೀಟೀ ಮಾರಾಟಾ ಮಾಡಿದರ, ಹಿಂದುಸ್ತಾನಕ್ಕ ಸ್ವರಾಜ್ಯ ಸಿಗತಽದ? ನನಗಂತೂ ಅನಿಸತಽದ.... ಇದೊಂದು ತಲಿತಿರಕರ ಆಟಾ....ಅಂತ! ಯಾಕೋ ಸೀನೂ?"

ಅನುಮತಿಯ ಧ್ವನಿಯಲ್ಲಿ ಶೀನಪ್ಪ ಹೇಳಿದ:

"ಬರೇ ತಲಿತಿರಕರಾಟಾ ಅನಬ್ಯಾಡ; ಹುಚ್ಚರ ಹುಚ್ಚಾಟಾ ಅನ್ನು! ಆ ಗಾಂಧೀ ಒಬ್ಬ ಕೈತುಂಬಾ ಹಣಾ ಸಂಪಾದಿಸಿಕೊಡುವ ಬ್ಯಾರಿಸ್ಟರಿಕೀ ಬಿಟ್ಟು, ಅರೆಬತ್ತಲೆ ಅಡ್ಡಾಡಿಕೋತಽ ಏನೇನೋ ಬಡಬಡಿಸತಾನ! ಅವನ ಬಡಬಡಿಕೀ ಎಲ್ಲಾ ತಲ್ಯಾಗ್ಹಾಕಿಕೊಂಡು, ನಮ್ಮ ಈ ಹುಚ್ಚರ ತಂಡ ಏನೇನೋ ಮಾಡಿಕೋತಽ ಓಡಾಡತಽದ! ಸರಕಾರದವರು ಸುಳ್ಳಽ ಇವರನ್ನ ಹಿಡಿಹಿಡಿದು ಜೇಲಿಗೆ ಕಳಿಸತಾರ; ಅದಕಿಂತಾ ಇವರನ್ನೆಲ್ಲಾ ಹುಚ್ಚರ ಆಸ್ಪತ್ರಿಗೆ ಹಾಕಿದರ ಒಳ್ಳೇದಾದೀತೂ ಅಂತ ಅನಿಸತಽದ ನನಗ!"

ಬಳವಂತನ ಮಾತಿಗೆ ಶೀನಪ್ಪ ವೆಂಕಣ್ಣಾ ಇಬ್ಬರೂ ಗಟ್ಟಿಯಾಗಿ ನಕ್ಕರು. ನಗುವುದಾದ ಮೇಲೆ ಶೀನಪ್ಪ ಮಾತನಾಡಿದ:

"ಹೀಂಗೂ ಇರಬಹುದೇಳೋ ಬಾಳು! ಸರಕಾರದ ಮನಸಿನ್ಯಾಗ ಇವರನ್ನೆಲ್ಲಾ ಹುಚ್ಚರ ಆಸ್ಪತ್ರಿಗೆ ಹಾಕಬೇಕಂತಽ ಇದ್ದೀತು; ಆದರ ಇಷ್ಟೆಲ್ಲಾ ಮಂದಿನ್ನ ಒಯ್ದು ಇಡಲಿಕ್ಕೆ ಆಸ್ಪತ್ರೀ ಒಳಗ ಸ್ಥಳಾ ಆರೇ ಬೇಕೋ ಬ್ಯಾಡೋ!

ಅದಕಂತs ಇವರನ್ನ ಹಿಡಿಹಿಡಿದು ಜೇಲಿಗೆ ಕಳಿಸಲಿಕ್ಕೆ ಹತ್ತ್ಯೇದ ಕಾಣಿಸತsದ! ಇನ್ನ ಅವಕ್ಕ ' ಜೇಲು ' ಅಂಬೂ ಹೆಸರು ತಗದು ' ಹುಚ್ಚರ ಆಸ್ಪತ್ರೀ ' ಅಂತ ಬೋರ್ಡು ಬರಿಸಿ ಹಚ್ಚಿಸಿದರ ಆತು ! "

ವೆಂಕಣ್ಣ ನಗು-ನಗುತ್ತಲೇ ಹೇಳಿದ :

" ಆ ಬೋರ್ಡು ಬರಿಯೂ ಕೆಲಸಾ ನಿನ್ನ ಕಡೇನs ತೊಗೊಳಲೇ ಬಾಳೂ! ಹ್ಯಾಂಗೂ ನೀ ಡ್ರಾಯಿಂಗ್ ಪರೀಕ್ಷಾ ಪಾಸ್ ಆಗೀದಿ! ಅದರ ಸದುಪಯೋಗರೇ ಆಗಲೀಗ ! "

ಶೀನಪ್ಪ ಸಂಗರ್ಭ ಬದಲಿಸುವ ಉದ್ದೇಶದಿಂದಲೋ ನಿರುದ್ದೇಶ ದಿಂದಲೋ, ಮಾತನಾಡಲು ತೊಡಗಿದ :

" ಆದೆಲ್ಲಾ ಆತು ಬಿಡೋ ! ಮೊನ್ನೆ ನಾವು ಹೆಣ್ಣು ನೋಡಲಿಕ್ಕೆ ಹೋದಾಗ, ನಮಗ ಚಹಾ ತಂದುಕೊಟ್ಟಳಲ್ಲಾ—ಆ ಹುಡುಗಿ ಯಾರಪಾ ಆಕಿ ?"

ಬಳವಂತ ಕೆಣಕುದನಿಯಲ್ಲಿ ಕೇಳಿದ :

" ಯಾಕೋ, ಆಕಿ ಯಾಕ ನೆನಪಾದಳೋ ಈಗ ? ನೀನೂ ಬಲೇ ರಸಿಕನಪಾ !"

" ಹಾಂಗಲ್ಲೋ ? ಆಕೀ ಮದಿವಿ ಆದ್ಹಾಂಗ ಕಾಣಿಸಲಿಲ್ಲ ಇನ್ನೂ.... ಅಲ್ಲ ?"

ನಿಂತುಕೊಂಡಲ್ಲಿಂದಲೇ ವೆಂಕಣ್ಣ ಹೇಳಿದ :

" ಯಾಕ ? ನಿನಗ ಮಾಡಿಕೋಬೇಕಂತ ಮನಸಾಗೇದೇನು ? ಸುರುಚೀ ಸುನೀತೀ ಇಬ್ಬರನ್ನು ಮಾಡಿಕೊಂಡು, ಉತ್ತಾನಪಾದ ರಾಜಾ ಆಗಿ ಮೆರೀ-ಬೇಕಂತೀ ಏನಲೇ ಶೀನೂ !"

" ಹಾಂಗಲ್ಲೋ, ನಾ ಒಂದು ಹೇಳಬೇಕಂದರ, ನೀವೋಂದು ಏನೇನೋ ಕಲ್ಪನಾಮಾಡಿ ಮಾತಾಡತೀರಿ ! ನಿನ್ನೆ ಪ್ಯಾಟ್ಯಾಗ ಕಾಂಗ್ರೆಸ್ಸಿನವರು ಸಭಾ ಮಾಡಿರಲಿಲ್ಲs ? ಅದಕ್ಕ ನಾನೂ ಹೋಗಿದ್ದಿನೇನಪಾ ! ಸಾವಿರ ಗಟ್ಲೆ ಜನಾ-ಸೇರಿದ್ದರು. ಕಾಲೇಜಿಗೆ ಹೋಗೂ ಹುಡುಗ-ಹುಡುಗಿಯರಂತೂ ತುಂಬಿ ಬಿಟ್ಟಿದ್ದರು. ನಾ ಹೋಗಿ, ಹೆಂಗಸರು ಕೂತುಗೊಂಡಿರೂ ಸ್ಥಳದ ಹತ್ತರನೇ ಕೂತುಕೊಂಡೆ...."

ಬಳವಂತ ನಡುವೆಯೇ ಹೇಳಿದ :

" ಅಂಥಾ ಜಾಗಾನs ಹುಡುಕಿ ಕೂಡೂ ಮಗಾ ನೀನು !" .ವೆಂಕಣ್ಣ ಗಟ್ಟಿಯಾಗಿ ನಕ್ಕುಬಿಟ್ಟ. ಶೀನಪ್ಪ ಮಾತನ್ನು ಮುಂದುವರಿಸಿದ :

" ಹಾಂಗಲ್ಲೋ ! ನಾನು ಹೇಳೂ ಮಾತರೇ ಪೂರಾ ಕೇಳ್ರಿಲಾ ! ಆ ಹೆಂಗಸರ ಗುಂಪಿನಾಗ ಒಂದು ಕಡೆ, ನಮಗ ಅಂದು ಚಹಾ ಕೊಟ್ಟ ಹುಡುಗೀನೂ ಕೂತುಕೊಂಡಿದ್ದಳೇನಪಾ !"

ಬಳವಂತ ನಡುವೆ ಹೇಳಿದ :

" ಅಷ್ಟು ಮಂದಿಯೊಳಗ ಆಕಿ ಆಬ್ಬಾಕೇ ನಿನ್ನ ಕಣ್ಣಿಗೆ ಕಂಡಳೇನಪಾ ಮಗನs "

" ಆಕಿ ಒಬ್ಬಾಕೇ ಯಾಕೋ....ಎಲ್ಲಾರನ್ನೂ ನೋಡಿದೇ ಅನ್ನು...."

ಬಳವಂತ ಬಾಯಿ ಹಾಕಿದ :

" ಅದು ನಿನ್ನ ಚಟಾನs ಅನ್ನು ! ನಿನ್ನ ಹೇಣ್ತಿ ಕುಗೂಪಿ ಇದ್ದಾಳಂತ, ಕಂಡ ಹೆಂಗಸರ ಕಡೇ ಕಣ್ಣು ಹಾಕೂದೊಂದು ನಿನ್ನ ಸ್ವಭಾವನೇ ಆಗಿ ಹೋಗೇದ !"

" ಹಾಂಗಲ್ಲೋ....ಬಾಯಿ ಅದs ಅಂತ ಬೇಕಾದ್ದು ಮಾತಾಡಿದರ ಆಯ್ತೇನು ? ಏನೋ ! ಹೊಸತಾಗಿ ಆದ ಗುರುತಿನ ಮುಖಾ ಕಂಡಿತೂ ಅಂತ ಅವಳ ಕಡೆ ನಾನು ನೋಡಿದೇ ಅನ್ನು ! ಆಗ ನಿಮ್ಮ ರತ್ನಾಕರರಾಯ, ವ್ಯಾಸಪೀಠದ ಮ್ಯಾಲ ಎದ್ದುನಿಂತು, ಲಕ್ಚರ್ ಕೊಡಲಿಕ್ಕೆ ಹತ್ತಿದ್ದ ಏನಪಾ ! ಈ ಹುಡುಗಿ ಕಣ್ಣು ಕದಲಿಸದs ಅವನ ಕಡೇನು ನೋಡತs ಕೂತಿದ್ದಳು...."

ಬಳವಂತ ನಡುವೆಯೆ ಕೇಳಿದ :

" ಯಾಕ ? ನಿನ್ನ ಕಡೆ ನೋಡ್ಯುಲಿಲ್ಲೇನು ಆಕಿ ? "

" ನನ್ನ ಕಡೇ ಏನು ನೋಡತಾಳೊ ! ರತ್ನಾಕರ ಆಡೂ ಮಾತಿನೊಳಗ ಹಾಂಗs ಗುಂಗಾಗಿ ಹೋಗಿಬಿಟ್ಟಿದ್ದಳು. ಅವನ ಹುರುಪಿನ ಮಾತಿನಿಂದ ಆಕೀ ಮಾರೀಮ್ಯಾಲ ಹುರುಪಿನ ಕಳೆ ಮೂಡತಿತ್ತು. ಅಂವ ದೇಶದ ದುಸ್ಥಿತೀ ಬಣ್ಣಿಸಿ ಮಾತಾಡುವಾಗ, ಆಕೀ ಕಣ್ಣಾಗ ಹನೀ ಕಾಣಿಸತಿತ್ತು. ಅಂವ ಏನಾದರೂ ನಗೀಮಾತು ಆಡಿದರ, ಆಕೀ ಮಾರೀ ಮ್ಯಾಲ ಮಲ್ಲಿಗೀ ಹೂ ಅರಳತಿತ್ತು.... "

ಒಮ್ಮೆಲೆ ವೆಂಕಣ್ಣಾ ಮಾತನಾಡಿದ:

"ಭಲೇ, ನೀನೂ ಒಳ್ಳೇ ಕವೀ ಆಗಿಬಿಟ್ಟೇಳು!"

ಬಳವಂತ ಹೇಳಿದ:

"ಅಂದರ? ಏನಂತೀ ಏನು ನೀನು? ನಮ್ಮ ಶೀನೂ ಅಂದರ ಏನಂತ ತಿಳಿದೀದೀ? ಅವನ ಕಾರಕೂನಿಕೀ ಲೇಖಣೀ, ಇನ್ನ ಕಾಪೀ ಮಾಡೂದನ್ನ ಬಿಟ್ಟು ಕವಿತಾನs ಬರೀತ್ವದ, ನೋಡತಿರು ನೀನು! ನಮ್ಮ ಇಂಗ್ಲಿಷ್ ಮಾಸ್ತರು ಆಗಾಗs ನಮಗ ಹೇಳತಿದ್ದರು: 'ಮಾನವನ ಅತೃಪ್ತ ಕಾಮನೆಗಳಿಂದಲೆ ಲಲಿತಕಲೆಗಳು ಹುಟ್ಟಿ ಬೆಳೆಯುವುವು!' ಅಂತ. ಆ ಶಂಖಿನೀ ಮಾರೀ ಸಾವಿತ್ರಿನ್ನ ಕಟಗೊಂಡ ಇಂವಗ, ಯಾವ ಕಾಮನಾ ಹ್ಯಾಂಗ ತೃಪ್ತಿ ಆಗಬೇಕು ಹೇಳು! ಅದಕ್ಕs ಇವನೂ ಇನ್ನಮ್ಯಾಲ ಕವಿರಾಜನs ಆಗತಾನ!"

"ಹಾಂಗಲ್ಲೋ! ನಾ ಕಣ್ಣಲೇ ನೋಡಿದ್ದು ಹೇಳ್ಳಿಕ್ಕೆ ಹತ್ತೀನೇನ್ರೆಪಾ! ರತ್ನಾಕರರಾಯ ತನ್ನ ಲಕ್ಚರು ಮುಗಿಸಿ ಕೆಳಗ ಕೂತುಕೊಂಡರೂ, ಈಕೀ ಕಣ್ಣೇನೂ ಅವನ ಮುಖದ ಕಡಿಂದs ಕದಲಲಿಲ್ಲ! ನನಗ ಅದು ಆಶ್ಚರ್ಯದ ಮಾತಾಗಿ ಕಂಡಿತು. ಅದಕ್ಕs ಕೇಳಿದೆ, ಆಕೀ ಮದಿವಿ ಆದ್ಹಾಂಗ ಕಾಣಿಸೂಡಿಲ್ಲಾಂತ!"

ಬಳವಂತ ಕೇಳಿದ:

"ಯಾಕ? ಮದಿವಿ ಆದ ಹೆಂಗಸರು ಹೀಂಗ ಇನ್ನೊಬ್ಬರ ಮುಖದ ಕಡೇ ನೋಡೂದಿಲ್ಲೇನು? ನೋಡಬಾರದೇನು?"

"ಹಾಂಗಲ್ಲೋ...." ಎಂದು ಮಾತನ್ನು ಆರಂಭಿಸುತ್ತಿರುವಾಗಲೇ ಸಾಯುಕಲ್ಲಿನ ಗಂಟೆಯ ಸಪ್ಪಳ ಕೇಳಿಸಿತು. ವೆಂಕಣ್ಣಾ "ಓ! ಬಂದಿಯಾ? ಬಾ, ಬಾ! ನಾವು ನಿನ್ನ ದಾರೀನs ಕಾಯುತಿದ್ದಿವಿ!" ಎಂದು ರತ್ನಾಕರನನ್ನು ಸ್ವಾಗತಿಸಿದ. ಸೈಕಲನ್ನು ಅಲ್ಲಿಯೆ ಹೊರಗೋಡೆಗೆ ನಿಲ್ಲಿಸಿ, ರತ್ನಾಕರ ಒಳಕ್ಕೆ ಬಂದ. ಹಾಸಿಗೆಯ ಸುರುಳಿಗೆ ಹೊಂದಿ ಕುಳಿತುಕೊಂಡ. ವೆಂಕಣ್ಣಾ ಸ್ಟೋವ್ ಹೊತ್ತಿಸಿ ಚಹದ ಸಿದ್ಧತೆಗೆ ತೊಡಗಿದ. ಆಗ ರತ್ನಾಕರ ಸಲುಗೆಯ ಸ್ವರದಲ್ಲಿ ನುಡಿದ:

" ಅಲ್ಲಪಾ ವೆಂಕಣ್ಣಾ ! ನಿನ್ನ ಮನೀಗೆ ಬಂದಾಗ, ನಿನ್ನ ಕೈಯ ಚಹಾ ಕುಡಿಯೂ ಪ್ರಸಂಗಾ ತಪ್ಪಿಸಲಾ! ನಿನ್ನ ಮನೀ ಕಂಕಣದ ಕೈ, ಚಹಾ ಮಾಡಿಕೊಡಬೇಕಪಾ ಇನ್ನ! "

ವೆಂಕಣ್ಣ ನಾಚಿಕೆಯ ನಗೆ ನಗುತ್ತ ಎಸರಿಗೆ ಸಕ್ಕರೆ ಹಾಕುವುದರಲ್ಲಿದ್ದ. ಬಳವಂತ ಮಾತನಾಡಿದ :

" ಇನ್ನೊಮ್ಮೆ ನೀವು ಬರೂದರೊಳಗ ಅದು ಸಿಕ್ಕೀತೇಳ್ರಿ! ಹೆಣ್ಣು ನೋಡಲಿಕ್ಕೆ ಹತ್ತ್ಯಾನ! ಮನಸಿಗೆ ಒಪ್ಪಿಗಿ ಆಗೂದs ತಡಾ! ಮೂರು ದಿನದೊಳಗs ಮದಿವೀಕಾರ್ಯ ಮುಗಿಸಿ ಬಿಡೋಣ! "

ಶೀನಪ್ಪ ಹೇಳಲು ತೊಡಗಿದ :

" ಇಂವಗ ನಾವು ' ಗಂಧರ್ವ ' ಅಂತ ಕರೀತೀವಿ; ಗೊತ್ತದs ಇಲ್ಲೋ ನಿಮಗ? ಇಂವಗ ಹಾಡಿನ ನಾದ ಬಹಳ. ಅದಕ್ಕ ಹಾಡಲಿಕ್ಕೆ ಕುಣೀಲಿಕ್ಕೆ ಬರೂವಂಥಾ ಕನ್ಯಾನs ಬೇಕಂತ ಹಟಾ ಹಿಡಿದು ಬಿಟ್ಟಾನ. ಈಗ ಐದಾರು ಕಡೆಗೆ ಹೋಗಿ ನೋಡಿ ಬಂದಿವಿ; ಒಂದು ಕನ್ಯಾ ಏನೂ ಇಂವಗ ಪಾಸ್ ಅನಿಸಲಿಲ್ಲ....ಅದಾತು ರಾಯರ! ನಿನ್ನಿನ ಸಭಾದಾಗ ನೀವು ಭಾಷಣ ಮಾಡಿದಿರಲ್ಲಾ! ಏನ ಭಾಷಣರೆಪಾ ಅದು! ಕೇಳತಿರೂವಾಗ, ನನ್ನ ಮೈಯಂತೂ ಕ್ಷಣಕ್ಷಣಕ್ಕ ' ಜುಮ್ ಜುಮ್ ' ಅಂತಿತ್ತು! "

ರತ್ನಾಕರ ಬರೀ ಮುಗುನಗೆ ನಕ್ಕ. ವೆಂಕಣ್ಣ ಆಗ ಕಿಟಲಿಯಲ್ಲಿ ಚಹಾ ಸೋಸುತ್ತಿದ್ದ. ಎಲ್ಲರ ಲಕ್ಷ್ಯವೂ ಅತ್ತಕಡೆಗೆ ಹೋಯಿತು. ಬಳವಂತ ಎದ್ದು ಹೋಗಿ ಕಪ್ಪು-ಬಸಿಗಳನ್ನು ಅಣಿಗೊಳಿಸಲು ತೊಡಗಿದ. ವೆಂಕಣ್ಣ ಚಹ ಸೋಸುವುದನ್ನು ಮುಗಿಸಿ, ನೆಲೆಮಾಡದೊಳಗಿಂದ ಬಿಸ್ಕೀಟಿನ ಪೊಟ್ಟಣ-ವನ್ನು ತೆಗೆದು, ಒಂದು ತಳಿಗೆಯಲ್ಲಿ ಅವನ್ನೆಲ್ಲ ಹಾಕಿ, ಹಾಸಿಗೆಯ ನಡುವೆ ತಂದಿಟ್ಟ. ಬಳವಂತ ಕಪ್ಪುಗಳಲ್ಲಿ ಚಹ ತುಂಬಿ ತುಂಬಿ, ಬಿಸ್ಕೀಟಿನ ತಟ್ಟೆಯ ಬಳಿಯಲ್ಲಿಯೆ ತೆಗೆದುಕೊಂಡು ಬಂದ- ವಿಶೇಷ ಮಾತು-ಕತೆಗಳು ಇಲ್ಲದೆ ಬಿಸ್ಕೀಟು-ಚಹಗಳ ಸೇವನೆಯ ಕಾರ್ಯಕ್ರಮ ನಡೆಯಿತು. ಅದಾದ ಮೇಲೆ ಎಲ್ಲರೂ ಲವಂಗ-ಅಡಿಕೆಗಳನ್ನು ಬಾಯಾಡಿಸತೊಡಗಿದರು. ರತ್ನಾಕರನು ನಿದಾನವಾಗಿ ಮಾತನ್ನಾರಂಭಿಸಿದ :

" ನೋಡು, ವೆಂಕಣ್ಣಾ! ಮೊನ್ನೆ ನಾವು ನೋಡಿದೆವಲ್ಲ.... ಆ ಗೋಪಾಲರಾಯರ ಮಗಳನ್ನ.... ಕಾವೇರಿಯೆಲ್ಲವೇ ಅವಳ ಹೆಸರು....! ಸರಿ, ಆ ಹುಡುಗಿ ಚೆನ್ನಾಗಿದ್ದಾಳೆ. ಒಳ್ಳೇ ಮನೆತನದಲ್ಲಿ ಪಳಗಿದ ಹುಡುಗಿ. ನೋಡಲಿಕ್ಕೂ ಚೆಲುವಿಯಿದ್ದಾಳೆ! ನೀನು ಆಕೆನ್ನ ಒಪ್ಪಿಗೋಬೇಕಾಗಿತ್ತು ನೋಡು!"

ಬಳವಂತ ಉತ್ತರಿಸಿದ:

"ಅದೆಲ್ಲಾ ಆಯ್ತು ರಾಯರ! ನಮ್ಮ ವೆಂಕಣ್ಣಾ ಕಲಿತ ಹುಡುಗಿನ್ನ ಮಾಡಿಕೋ ಬೇಕಂತಾನ; ಆಕೀಗೆ ಸಂಗೀತ, ನರ್ತನ ಗೊತ್ತಿರಬೇಕೂ ಅಂತಾನ! ನಾವು ಮೊನ್ನೆ ನೋಡಿದ ಹುಡುಗಿಗೆ ಇಂಗ್ಲೀಷ್ ಬರೂದಿಲ್ಲ; ಸಂಗೀತದ ಗಂಧ ಇಲ್ಲ...."

" ಸರಿಸರಿ! ತಿಳಿದ್ಹಾಂಗಾತು ಬಿಡ್ರಿ, ನಿಮ್ಮ ಮಾತಿನ ಅಭಿಪ್ರಾಯ!" ಎಂದು ನುಡಿದು ರತ್ನಾಕರ ತನ್ನ ಮಾತನ್ನು ಮುಂದುವರಿಸಿದ:

" ನೋಡು ವೆಂಕಣ್ಣಾ! ಕಲಿತ ಹೆಣ್ಣು, ಸಂಗೀತ-ನರ್ತನ ಗೊತ್ತಿರುವ ಹೆಣ್ಣು ಇದ್ರು, ಅವಳಲ್ಲಿ ಗೃಹಿಣಿಯಾಗುವ ಗುಣಗಳೂ ಇದ್ದರೆ, ಅಂತಹ ಹೆಣ್ಣಿನೊಂದಿಗೆ ಮದುವೆಯಾಗಿ ಸಂಸಾರವನ್ನು ಸುಖಮಯವಾಗಿ ನಡಿಸಬಹುದು—ಅನ್ನು! ಆದರ, ಇಂದ ನಮ್ಮ ಹೆಂಗಸರಿಗೆ ಸಿಕ್ಕತಾ ಇರುವ ಶಿಕ್ಷಣಕ್ಕೂ ಸಂಗೀತ-ನರ್ತನದ ಶಿಕ್ಷಣಕ್ಕೂ ಗೃಹಿಣೀತ್ವಕ್ಕೂ ಯಾವ ಸಂಬಂಧನೂ ಇಲ್ಲವಾಗಿ ಕೂತsದ. ಇಂದ ನಾಡಿನೊಳಗ, ಆರ್ಥಿಕ ದೃಷ್ಟಿಯಿಂದ ನೋಡಿದರ, ನಮ್ಮ-ನಿಮ್ಮಂಥಾ ಮಧ್ಯಮ ತರಗತೀ ಜನಾನs ಹೆಚ್ಚಾಗಿ ಇದ್ದೀವಿ. ಕಲಿತ ಹೆಣ್ಣಿನ ಅಥವಾ ಕಲಾವತಿಯಾದ ಹೆಣ್ಣಿನ ಕೂಡ ಸಂಸಾರ ಸಾಗಿಸಬೇಕಂದರ, ಅದು ಬಹಳ ತುಟ್ಟಿಯದಾಗತsದ—ಅಂಬೂ ವಿಚಾರ ನಾವು ಮಾಡಲಿಕ್ಕೆ ಬೇಕು. ಶ್ರೀಮಂತರು ತಮ್ಮ ದುಡ್ಡಿನ ಬಲದಿಂದ, ಎಂಥಾ ಹೆಣ್ಣಿನ ಹೊಣೆಯನ್ನೂ ಹೊರಬಹುದನ್ನು! ಆದರ, ನಮ್ಮಂಥಾ ಶ್ರೀಮಂತರೂ ಬಡವರೂ ಅಲ್ಲದ ನಡುವಿನವರಿಗೆ ಸಂಸಾರ ಸಾಗಿಸಬೇಕಂದರ, ಒಳ್ಳೇ ಗೃಹಿಣಿಯರಿಂದ ಮಾತ್ರ ಸಾಧ್ಯ ಆದ—ಅಂಬೂದನ್ನ ತಿಳಕೋಬೇಕು ನಾವು!"

" ರಾಯರ ಮಾತು ಸುಳ್ಳೇನೂ ಅಲ್ಲ ವೆಂಕಣ್ಣಾ!" ಶೀನಪ್ಪನೆಂದ.

"ಎಲೆಲೇ! ರಾಯರು ಇಲ್ಲಿಯೂ ತಮ್ಮ ಲೆಕ್ಚರನ್ನ ಸುರೂಮಾಡಿ ಬಿಟ್ಟರಲಾ!" ಎಂದು ಬಳವಂತ ಅಣಕದ ಧ್ವನಿಯಲ್ಲಿ ನುಡಿದ. ರತ್ನಾಕರ ತನ್ನ ಸಹಜ ಭಾವದಲ್ಲಿಯೆ ಹೇಳಲು ತೊಡಗಿದ:

"ನೋಡು ವೆಂಕಣ್ಣಾ, ನಮ್ಮ ಮಧ್ಯಮ ತರಗತಿಯ ಕುಟುಂಬ-ಗಳಲ್ಲಿ, ಇಂಗ್ಲಿಷ್ ವಿದ್ಯೆಯೂ ಹೆಚ್ಚಿನ ಉಪಯೋಗಕ್ಕೆ ಬರುವುದಿಲ್ಲ; ಸಂಗೀತ-ನರ್ತನಗಳೂ ಹೆಚ್ಚಿನ ಉಪಯೋಗಕ್ಕೆ ಬರುವುದಿಲ್ಲ. ಇಂತಹ ಕುಟುಂಬ-ಗಳಲ್ಲಿ ಹೆಣ್ಣು, ಕೈಹಿಡಿದ ಗಂಡನಿಗೆ ಒಳ್ಳೆಯ ಹೆಂಡತಿಯಾಗಬೇಕು; ಹೆತ್ತ ಮಗುವಿಗೆ ಒಳ್ಳೆಯ ತಾಯಿಯಾಗಬೇಕು. ಬಂದ ಸೊಸೆಯಂದಿರಿಗೆ ದಾರಿಯ ದೀಪವಾಗಬೇಕು. ನಮ್ಮ ಮನೆಯ ಹೆಂಗಸರನ್ನೇನು ನಾವು ಸರಕಾರೀ ನೌಕರಿಗೆ ಕಳುಹುವಂತಿಲ್ಲ; ಸಂಗೀತ-ನರ್ತನಗಳ ಕಚೇರಿ ಮಾಡಲಿಕ್ಕೆ ಕಳುಹು ವಂತಿಲ್ಲ. ಮಧ್ಯಮ ತರಗತಿಯ ಕುಟುಂಬದ ಪ್ರತ್ಯಕ್ಷ ಜೀವನಕ್ಕ ಇವುಗಳ ಉಪಯೋಗ ಏನು ಆಗೂಹಾಂಗದ ನೋಡು!"

"ಯಾಕ? ಹೆಂಗಸರು ಮನ್ಯಾಗನ ದುಡೀಬೇಕಂಬೂದು ಅವರ ಹಣ್ಯಾಗ ಬರೆದಿರತದೇನು? ಅವರೂ ಸರಕಾರೀ ನೌಕರೀ ಮಾಡಬಹುದು; ಸಂಗೀತ ಕಚೇರೀ ನಡಿಸಬಹುದು; ನಾಟಕಾ-ಸಿನೆಮಾದೊಳಗ ಪಾತ್ರವಹಿಸ ಬಹುದು!" ವೆಂಕಣ್ಣ ತನ್ನ ಅಭಿಪ್ರಾಯ ಹೊರಗೆ ಹಾಕಿದ.

"ಸರಿ! ಇದನ್ನೆಲ್ಲಾ ಅವರು ಮಾಡಬೇಕಂದರ, ಒಳ್ಳೆಯ ಹೆಂಡತಿ-ತನವನ್ನ ನೀವು ಅವರಿಂದ ಅಪೇಕ್ಷಿಸುವುದನ್ನ ಬಿಡಬೇಕಾಗತ್ತದ. ಇದಕ್ಕ ನಿನ್ನ ಒಪ್ಪಿಗಿ ಅದನ ಏನು?"

"ಎರಡನ್ನೂ ಸಾಧಿಸಿಕೊಂಡಿರಲಿಕ್ಕೆ ಸಾಧ್ಯ ಅದನ ಅಂತ ನನಗನಿಸ-ತದ!" ವೆಂಕಣ್ಣನೆಂದ.

"ಅನಿಸುವದು ಬ್ಯಾರೇ; ಪ್ರತ್ಯಕ್ಷ ಸ್ಥಿತಿ ಬ್ಯಾರೇ ಅದ ವೆಂಕಣ್ಣಾ! ನಮ್ಮ ತರುಣರ ತಲ್ಯಾಗಿನ ಇಂಥಾ ಅಸ್ವಾಭಾವಿಕ ಕಲ್ಪನೆಗಳೇ ನಮ್ಮ ಸಮಾಜದ ವ್ಯವಸ್ಥಾ ಎಲ್ಲಾ ಹಾಳು ಮಾಡಲಿಕ್ಕೆ ಹತ್ತೇದ...."

ಬಳವಂತ ಸಿಡುಕಿನ ದನಿಯಲ್ಲಿ ಹೇಳಿದ:

"ನಮಗ ಇಂಥಾ ಲೆಕ್ಚರ್ ಕೇಳಿಕೇಳಿ ಸಾಕಾಗೇದೇಳ್ರಿ! ಮದಿವೀ ಮಾಡಿಕೊಳ್ಳಾವಾ ವೆಂಕಣ್ಣ....ನೀವಲ್ಲ ನೀವು ಮದಿವೀ ಮಾಡಿಕೊಳ್ಳೂ

ಮುಂದ ನಿಮಗ ಬೇಕಾಗುವಂಥಾ ಹೆಣ್ಣು ಆರಿಸಿಕೊಳ್ರಿ, ವೆಂಕಣ್ಣಾ ಮದಿವೀ ಮಾಡಿಕೊಳ್ಳುವಾಗ, ಅಂವ ತನ್ನ ಮನಸಿಗೆ ಬಂದಂಥಾ ಹೆಣ್ಣು ಆರಿಸಿಗೋ-ತಾನ! ಈಗಿನ ದಿವಸದಾಗ, ವೈಯಕ್ತಿಕ ಸ್ವಾತಂತ್ರ್ಯ ಇರಬೇಕ್ರೆಪಾ!"

"ವೈಯಕ್ತಿಕ ಸ್ವಾತಂತ್ರ್ಯಕ್ಕಿಂತಾನೂ ಸಾಮಾಜಿಕ ಸುರಕ್ಷಿತಾದ ಕಡೆಗೆ ಹೆಚ್ಚು ಮಹತ್ತ್ವದ ದೃಷ್ಟೀ ಕೊಡಬೇಕಾಗತದ ರಾಯರ ನಮಗ! ಗಂಡು-ಹೆಣ್ಣಿನ ಮದಿವೀ ಅಂದರ ಅದು ಕೇವಲ ವ್ಯಕ್ತಿ-ವ್ಯಕ್ತಿಗಳಿಗೆ ಸಂಬಂಧಿಸಿದ ಮಾತಷ್ಟೇ ಅಲ್ಲ. ಇಡಿ ಸಮಾಜಕ್ಕೆ ಸಂಬಂಧಿಸಿದ ವ್ಯಾಪಕ-ವಾದ ತತ್ತ್ವ ಅದರಲ್ಲಿ ಹುದುಗಿಕೊಂಡದ!"

ಬಳವಂತ ಮತ್ತೆ ಮಾತನಾಡಿದ:

"ಯಾಕ ರಾಯರ? ತತ್ತ್ವಾಗಿತ್ತ್ವ ಬಹಾಳ ಹೊರಬೀಳಲಿಕ್ಕೆ ಹತ್ಯಾವ? ಗೋಪಾಲರಾಯರು ವಕೀಲೀ ಫೀ ಕೊಟ್ಟು ತಮ್ಮನ್ನ ಇಲ್ಲಿಗೆ ಕಳಿಸ್ಯಾರೋ ಏನು?"

ವೆಂಕಣ್ಣಾ ಗಟ್ಟಿಯಾಗಿ ನಕ್ಕು ಬಿಟ್ಟ. ಆ ನಗೆ ಬಳವಂತನ ಮಾತಿಗೆ ಒಪ್ಪಿಗೆ ಕೊಡುವಂತಹದಾಗಿತ್ತು. ನೋಡಿ ರತ್ನಾಕರ ಮನದಲ್ಲಿ ನೊಂದು-ಕೊಂಡ. ಜುಗುಪ್ಸೆ ಪಟ್ಟ. ಆದರೂ ಯಾವ ಭಾವವನ್ನೂ ಹೊರಕ್ಕೆ ಹಾಕದೆ ಸ್ವಾಭಾವಿಕ ಧ್ವನಿಯಲ್ಲಿಯೆ ಹೇಳಿದ:

"ಸರಿ! ನಾನಿನ್ನು ನನ್ನ ಈ ಮಾತು ಮುಗಿಸತೀನಿ ಏನೋ, ಮೊನ್ನೆಯ ದಿನ ಆ ಹುಡುಗಿಯ ರೂಪ-ಗುಣಗಳನ್ನೂ ಅವಳ ತಂದೆ-ತಾಯಿಂದಿರ ಕರುಣಾಸ್ಥಿತಿಯನ್ನೂ ನೋಡಿ, ನಾಲ್ಕು ಮಾತುಗಳನ್ನ ಆಡಬೇಕೆನಿಸಿತು.... ಅಂತೇ ಆಡಿದೆ. ಆದರ ನಿಮ್ಮ ಮನಸ್ಸು ಒಲಿಸುವಷ್ಟು ಶಕ್ತಿ ನನ್ನೊಳಗ ಇನ್ನೂ ಬಂದಿಲ್ಲಾ ಅಂಬೂದು, ಈಗ ನನಗ ಗೊತ್ತಾದ್ಹಾಂಗ ಆತು! ಇನ್ನೇನು ವೆಂಕಣ್ಣಾ! ನನಗ ಬ್ಯಾರೇ ಕೆಲಸ ಅವ! ಬರತೀನೀ ಅಂತ ಒಪ್ಪಿಗೊಂಡಿದ್ದೇ ಅಂತ, ಬಾಡಿಗೀ ಸೈಕಲ್ಲು ತೊಗೊಂಡು ಬಂದೇನಿ ಬ್ಯಾರೇ. ಇದನ್ನ ಲಗೂನ ಮುಟ್ಟಿಸಬೇಕು ನಾನು ಬರಲೇ ಹಾಗಾದರೆ?"

ಎಲ್ಲರೂ ರತ್ನಾಕರನ ಕಡೆಗೆ ನೋಡಿದರು ಮಾತ್ರ. ಮಾತನೇನೂ ಆಡಲಿಲ್ಲ. ಅವರ ನೋಟದಲ್ಲಿಯ ಒಪ್ಪಿಗೆಯ ಭಾವವನ್ನು ಅರಿತುಕೊಂಡು ಆತ ಹೇಳಿದ:

" ತುಂಬ ಅಭಿನಂದನೆ ವೆಂಕಣ್ಣಾ ! ಸೊಗಸಾದ ಟೀ ಕೊಟ್ಟೆ ! ಒಳ್ಳೇದು ನಾನು ಬರುತ್ತೇನೆ ! " ರತ್ನಾಕರ ಎದ್ದು ಬಿಟ್ಟ. ವೆಂಕಣ್ಣ ಎದ್ದು ಬಾಗಿಲ ವರೆಗೆ ಅವನನ್ನು ಕಳುಹಲು ಬೆನ್ನು ಹತ್ತಿದ. ಸೈಕಲನ್ನೇರಿ ರತ್ನಾಕರ ಸುತ್ತುಗೋಡೆಯನ್ನು ದಾಟುವುದನ್ನು ನೋಡಿ ಒಳಗೆ ಬಂದ. ಬರು-ಬರುತ್ತಿರುವಾಗಲೇ ವೆಂಕಣ್ಣ ಹೇಳಿದ :

" ಈ ದೇಶಭಕ್ತರು ಅನಿಸಿಕೊಳ್ಳುವವರ ಹಣೇಬಾರಾನೇ ಇಷ್ಟು. ಜಗತ್ತಿಗೆಲ್ಲಾ ಉಪದೇಶಮಾಡೋ ಗುತ್ತಿಗಿ ತಮ್ಮ ಕಡೇನಃ ಇದ್ದವರ್ಹಾಂಗ ಮಾತಾಡ್ತಾರ ! "

ಬಳವಂತ ಇಸ್ಪೀಟ್ ಪ್ಯಾಕನ್ನು ತೆಗೆದುಕೊಂಡು, ಅವನ್ನು ಕೆಳಗೆ ಮೇಲೆ ಮಾಡು-ಮಾಡುತ್ತಲೇ ನುಡಿದ :

" ಹುಚ್ಚ....ಮಕ್ಕಳು ! "

## ೪ನೆಯ ಪರಿಚ್ಛೇದ

ಇಂದು ಚೈತ್ರಶುದ್ಧ ಪೌರ್ಣಿಮೆ. ರಾಮಭಕ್ತ ಹನುಮಂತನ ಹುಟ್ಟಿದ ದಿನ. ನಗರದಲ್ಲಿಯ ಪ್ರತಿಯೊಂದು ಮಾರುತಿ ದೇವಾಲಯದಲ್ಲಿಯೂ ಜಯಂತ್ಯುತ್ಸವದ ಸಂಭ್ರಮ. ಕೆರೆಯ ಹನುಮಂತ ದೇವರ ಗುಡಿಯಲ್ಲಿ ನಡೆಯುವ ಜಯಂತ್ಯುತ್ಸವವಂತೂ ತುಂಬ ಜನಪ್ರಿಯವಾದುದು ನಿನ್ನೆಯ ಸಾಯಂಕಾಲದಿಂದಲೂ ಉತ್ಸವದ ಸಿದ್ಧತೆ ಅಲ್ಲಿ ನಡೆದಿದೆ ಅಂಗಳದ ತುಂಬ ಹಾಕಿದ ವಿಶಾಲವಾದ ಚಪ್ಪರ, ತಳಿರು-ತೋರಣಗಳಿಂದ ಅಲಂಕೃತವಾಗಿದೆ. ಚಪ್ಪರದ ನಡುವೆ, ಭಕ್ತರೊಬ್ಬರು ಹೊಸತಾಗಿಯೆ ಮಾಡಿಸಿ ಕೊಟ್ಟ ಬೆಳ್ಳಿಯ ತೊಟ್ಟಿಲು, ಬಣ್ಣದ ರೇಶಿಮೆಯ ಹಗ್ಗದೊಂದಿಗೆ ಸಜ್ಜುಗೊಂಡು ಜೋಲು-ತ್ತಿದೆ. ಸೂರ್ಯೋದಯಕ್ಕೆಂದರೆ ಹನುಮಂತನ ಜನ್ಮೋತ್ಸವ ನಡೆಯಬೇಕು; ಆದುದರಿಂದ ಬೆಳಗಿನ ಐದುಗಂಟೆಯಿಂದಲೂ ದೇವಾಲಯದಲ್ಲಿ ಉತ್ಸವದ ಚಟುವಟಿಕೆಗಳು ನಡೆದಿದ್ದುವು. ಪೂಜಾರಿ ಗೋವಿಂದಾಚಾರ್ಯರಂತೂ ಉತ್ಸವದ ಉತ್ಸಾಹಮೂರ್ತಿಗಳೇ ಆಗಿದ್ದರು. ತಮ್ಮ ದೇವರ ವಿಷಯದಲ್ಲಿ ಆಚಾರ್ಯರಿಗೆ ತುಂಬ ಶ್ರದ್ಧೆ; ಅಲ್ಲದೆ ಪ್ರತಿವರ್ಷವೂ ಈ ಜಯಂತಿಯ ಉತ್ಸವದಲ್ಲಿ ಬರುವ ಕಾಣಿಕೆಗಳಿಂದ ಆಚಾರ್ಯರ ಸಂಸಾರ ಆರುತಿಂಗಳ

ವರೆಗೆ ಸುಸೂತ್ರವಾಗಿ ಸಾಗುವುದು. ಭಕ್ತರ ಅಭೀಷ್ಟಗಳನ್ನು ಸಲ್ಲಿಸು-ವುದರಲ್ಲಿ ಕೆರೆಯ ಹನುಮಪ್ಪನಂತೂ ಎತ್ತಿದ ಕೈ. ಮಿಕ್ಕದಿನಗಳಲ್ಲೆಲ್ಲ ನಾಸ್ತಿಕವಾದವನ್ನೆತ್ತಿ ಹಿಡಿದು ಜಗಳವಾಡುವ ಕಾಲೇಜಿನ ತರುಣ ವಿದ್ಯಾರ್ಥಿ-ಗಳು ಕೂಡ, ಪ್ರತಿ ಶನಿವಾರದಿನ ಈ ದೇವಾಲಯಕ್ಕೆ ಬಂದು, ಕಾಯಿ ಒಡೆಸಿಕೊಂಡು ಹೋಗುವರು; ಎಂದ ಮೇಲೆ ಭಾವುಕ ಜನರಲ್ಲಿ ಈ ದೇವರ ವಿಷಯದಲ್ಲಿ ಇನ್ನೆಷ್ಟು ಭಕ್ತಿಯಿರಬೇಡ? ಎಂತಲೆ ಮುಂಬೆಳಗಿನ ಐದು ಗಂಟೆಗೇ ದೇವಾಲಯವು ಸ್ತ್ರೀ-ಪುರುಷ ಭಕ್ತಗಣದಿಂದ ತುಂಬಿಹೋಗಿದ್ದಿತು. ಗುಡಿಯೊಳಗೆ ಅರ್ಚಕ ಆಚಾರ್ಯರು, ಜಯಂತಿದಿನದ ವಿಶೇಷ ಪೂಜೆಯ ಕಾರ್ಯದಲ್ಲಿ ತೊಡಗಿದ್ದರು ಹೊರಗೆ ಚಪ್ಪರದಲ್ಲಿ ಹರಿದಾಸರೊಬ್ಬರ 'ಹನುಮಜ್ಜನ್ಮ' ಕಥೆಯ ಕೀರ್ತನ ಕಾರ್ಯಕ್ರಮ ನಡೆದಿದ್ದಿತು. ಹೆಂಗುಸರ ನೆರವಿಯಲ್ಲಿ ವೇಣಕ್ಕ-ಕಾವೇರಿಯರೂ ಕಾಣುತ್ತಲಿದ್ದಾರೆ.

ಸೂರ್ಯೋದಯದ ಕಾಲದ ಕೊನೆಯ ನಿಮಿಷ ಸಮಾಪಿಸಿತು. ಹರಿದಾಸರು ನಿಧಾನವಾಗಿ ಹೇಳುತ್ತಲಿದ್ದ ಕತೆಯನ್ನು ವಾಯುವೇಗದಿಂದ ಜಗಿಸುತ್ತ ವಾಯುಪುತ್ರನ ಜನನಪ್ರಸಂಗವನ್ನೇ ಬಾಯಲ್ಲಿ ತೆಗೆದು-ಕೊಂಡಿದ್ದರು. ಅರ್ಚಕರು ಒಳಗಿನ ಕಾರ್ಯಕಲಾಪವನ್ನೆಲ್ಲ ತೀರಿಸಿ, ಉತ್ಸವಮೂರ್ತಿಯನ್ನು ವಾದ್ಯವೈಭವಗಳೊಂದಿಗೆ ಹೊರಗೆ ತಂದು ಜೋಲಾಡುತ್ತಿರುವ ತೊಟ್ಟಿಲಲ್ಲಿ ಮಲಗಿಸಿದರು. ಪೂರ್ವಸೂಚನೆಯಿಂದಲೋ ಏನೋ! ವೇಣಕ್ಕ-ಕಾವೇರಿಯರ ಬಳಿಯಲ್ಲಿ ಕುಳಿತಿದ್ದ ಹತ್ತೆಂಟು ಜನ ಸುಮಂಗಲೆಯರು ಎದ್ದು ತೊಟ್ಟಿಲ ಬಳಿಗೆ ಹೋದರು ಅವರೆಲ್ಲ ಸುಮಾರಾಗಿ ಕಾವೇರಿಯ ಸರಿವಯದವರೇ! ಮದುವೆಯಾದುದರಿಂದ ಅವರು ಅಯ್ದೆ-ತನದ ಅಧಿಕಾರವನ್ನು ಪಡೆದವರಾಗಿದ್ದರು. ಅವರೆಲ್ಲ ಎದ್ದುಹೋದುದನ್ನು ನೋಡಿ ವೇಣಕ್ಕ, ಒಂದು ಬಗೆಯ ದೈನ್ಯಭಾವ ಬೆರೆತ ನೋಟಗಳಿಂದ ಕಾವೇರಿಯನ್ನು ನೋಡಲು ತೊಡಗಿದಳು. ಕಾವೇರಿಯೂ ನೋವು ತುಂಬಿದ ನೋಟಗಳಿಂದ ತಾಯಿಯನ್ನು ಒಂದು ಸಲ ನೋಡಿ, ಮೆಲ್ಲಗೆ ನಿಟ್ಟುಸಿರು ಬಿಟ್ಟು ತಲೆಯನ್ನು ಬಾಗಿಸಿದಳು.

ಹೊಸ ತೊಟ್ಟಿಲನ್ನು ದೇವರಿಗೆ ಮಾಡಿಸಿಕೊಟ್ಟ ಮಂದಾಕಿನಿ, ತುಂಬ ಸಂಭ್ರಮದಿಂದ ತೊಟ್ಟಿಲ ಬಳಿ ಬಂದು ನಿಂತಿದ್ದಳು. ನಾಲ್ಕೈದು ತಿಂಗಳ

ಕುರ್ಚಿಯ ಮೇಲೆ ಕುಳಿತುಕೊಂಡಿದ್ದರು. ಸ್ವಲ್ಪ ವೇಳೆಯಲ್ಲಿಯೆ ವೇಣಕ್ಕನೂ ಅಲ್ಲಿಯೆ ಬಂದು ಹಾಸಿದ್ದ ಕಂಬಳಿಯ ಮೇಲೆ ಕುಳಿತುಕೊಂಡಳು. ಇಬ್ಬರೂ ಒಬ್ಬರ ಕಡೆಗೊಬ್ಬರು ನೋಡಿದರು. ವಿಷಾದಪೂರಿತವಾದ ಮೆಲುನಗೆ ಇಬ್ಬರ ತುಟಿಗಳನ್ನೂ ಅರಳಿಸಿತು. ವೇಣಕ್ಕ ತುಂಬಿದೆದೆಯಿಂದ ಮಾತನಾಡಲು ತೊಡಗಿದರು:

"ನಮ್ಮ ಜೀವನದಾಗ, ಈ ಹಬ್ಬ-ಹರಿದಿನಗಳ ಸುಖಾ ಕಾಣುವ ದಿವಸ ಬರತಾವ್ರೋ ಇಲ್ಲೋ ಅನಿಸಿಬಿಟ್ಟೈತದ ನನಗಂತೂ!"

"ಯಾಕ? ಈಗೇನಾತು? ಈ ಸುಖಾ—ದುಃಖಾ ಅಂಬೂವೆಲ್ಲಾ ನಮ್ಮ ನಮ್ಮ ಮನಸ್ಸಿನ ತಿಳಿವಳಿಕೀ ಮ್ಯಾಲ ಅವಲಂಬಿಸಿರತಾವ ನೋಡು! ಎಲ್ಲಾ ಮಾಡಸೋದು ಬಿಡಿಸೋದು ಆ ಪರಮಾತ್ಮನ ಇಚ್ಛಾದ ಕೈಯೊಳಗಿನ ಮಾತು. ಜಗತ್ತಿನ ಸೂತ್ರಧಾರಿ ಆತ ಆತನ ಸಂಕಲ್ಪದಂತೆ ಎಲ್ಲಾ ನಡೀ-ತಿರತಾವ! ನಮ್ಮ ಕೈಯೊಳಗ ಏನೂ ಇಲ್ಲ!"

ತಾವು ಆಡುತ್ತಿರುವ ಈ ಮಾತುಗಳೆಲ್ಲ ನಿರಾಶಾಜೀವನದ ಅಭಾವ-ವೈರಾಗ್ಯದ ಮಾತುಗಳೆಂಬ ಅರಿಕೆ ಗೋಪಾಲರಾಯರಿಗೆ ಇರಲಿಲ್ಲವೆಂದಲ್ಲ; ಆದರೆ ಹೆಂಡತಿಯೆದುರು ಇಂತಹ ಮಾತುಗಳನ್ನು ಆಡದೆ ಗತಿಯೆ ಇರಲಿಲ್ಲ. ಪ್ರತಿಯೊಂದು ವ್ಯಕ್ತಿಗೂ ನಿಶ್ಚಿಂತೆಯಿಂದ ಬಹುಕಾಲ ಬದುಕಬೇಕೆಂದು ಉತ್ಕಟವಾದ ಅಪೇಕ್ಷೆ; ಆದುದರಿಂದಲೆ ಸ್ವಕರ್ಮದ ಪರಿಣಾಮವಾಗಿಯೋ ಪರಿಸ್ಥಿತಿಯ ಪರಿಣಾಮವಾಗಿಯೋ ಬರುವ ದುಃಖ-ಚಿಂತೆಗಳ ಹೊಣೆಯನ್ನು ಹೊರಿಸಿ, ಇಲ್ಲದ ಸಮಾಧಾನವನ್ನು ಎಳೆದು ತರುವುದಕ್ಕೆ ವ್ಯಕ್ತಿಗಳಾದ ನಾವೆಲ್ಲ ದೇವರೆಂಬ ಅವ್ಯಕ್ತವ್ಯಕ್ತಿಯನ್ನು ಕಲ್ಪಿಸಿಕೊಂಡಿರುವೆವು. ಈ ದೇವರ ಕಲ್ಪನೆ ನಮಗಿರದಿದ್ದರೆ, ಜಗತ್ತಿನಲ್ಲಿ ಸಮಾಧಾನದ ಬದುಕೇಬುದೇ ಕಾಣುತ್ತಿರಲಿಲ್ಲ.

ವೇಣಕ್ಕ ನಿರಾಶೆಯ ಸ್ವರದಲ್ಲಿ ಹೇಳಲು ತೊಡಗಿದಳು:

"ಆ ಜಗತ್ತಿನ ಸೂತ್ರಧಾರಿ, ನಮಗಾಗಿ ಏನಾದರೂ ಸಂಕಲ್ಪ ಮಾಡ್ಯಾನೋ ಇಲ್ಲೋ! ನಮ್ಮ ಕಾವೇರೀ ಹಣಿಯೊಳಗ ಮದಿವೀ ಬರೆಹಾ ಬರೆದೇ ಇಲ್ಲೇನು ಬ್ರಹ್ಮ! ಕಾವೇರೀ ವಾರಿಗೀ ಹುಡುಗರೆಲ್ಲಾ ಮದಿವಿ ಆಗಿ ಆಗಿ, ಒಂದು-ಎರಡು ಮಕ್ಕಳ ತಾಯಂದಿರು ಆದರು. ಆದರ ನಮ್ಮ ಹುಡಿಗಿ

ಮಾತ್ರ ಇನ್ನೂ ಕೊಡುಗೂಸಾಗೇ ಕೂತಾಳ! ಜನದು ಆಡೂ ಮಾತುಗಳನ್ನ ಕೇಳಿದರ, ನನ್ನ ಕರಳಿಗೆ ಬರೀ ಕೊಟ್ಟಾಂಗ ಆಗತ್ತದ!"

"ಅಲ್ಲಾ, ನಮ್ಮ ಕಾವೇರಿ ಏನು ತಪ್ಪು ಮಾಡ್ಯಾಳಂತ ಜನಾ ಮಾತಾಡತಾರ? ಕಾವೇರೀ ವಾರಿಗೀ ಹುಡಗಿಯರು ಕೆಲವರದು ಲಗ್ನ ಆಗಿರಬಹುದು; ಅವರಿಗೆ ಮಕ್ಕಳೂ ಆಗಿರಬಹುದು; ಆದರ, ಕಾವೇರೀಗಿಂತಾ ಹೆಚ್ಚು ವಯಸ್ಸಾದ ಎಷ್ಟೋ ಹುಡುಗಿಯರು. ಲಗ್ನ ಆಗದs ಇದ್ದಾರಂಬೂದನ್ನ ಜನಾ ನೋಡೂದಿಲ್ಲೇನು? ಈಗ ಕುಮುದಾ ಇಲ್ಲೇನು? ನಮ್ಮ ಕಾವೇರಿಗಿಂತಾ ಆಕಿಯೇನು ಚಿಕ್ಕಾಕಿ ಅಲ್ಲ!"

"ಕುಮುದಾ ಕಲಿತು ಕಾಲೇಜಿಗೆ ಹೋಗೂ ಹುಡುಗಿ; ಕಾವೇರಿ ಕಲಿಯದ ಹುಡುಗಿ! ಕುಮುದಾನ ತಂದಿ, ಮಗಳ ಮದಿವೀ ಮಾಡಬೇಕಂದರ, ಬೇಕಾದಷ್ಟು ವರದಕ್ಷಿಣೀ ವರೋಪಚಾರಾ ಕೊಟ್ಟು ಇಂದs ಮಾಡಿ ಬಿಡಬಹುದು. ನಮಗೆಲ್ಲಿ ಹಾಂಗದ ಹೇಳ್ರಿ ಪರಿಸ್ಥಿತಿ! ಅಲ್ಲದೆ ಕುಮುದಾನ ತಂದೀ ಸಿರಿವಂತಿಕಿ, ಜನದ ಬಾಯಿಗೆ ಬೀಗಾ ಹಾಕತ್ತದ; ನಮ್ಮ ಬಡತನ, ಜನದ ನಾಲಿಗ್ಗೆ ನೂರು ನೂರು ನಾಲಿಗೀ ಶಕ್ತೀ ಕೊಡತ್ತದ."

ಗೋಪಾಲರಾಯರು ಬೆದರುನುಡಿಯಲ್ಲಿ ಕೇಳಿದರು:

"ಯಾಕ? ಯಾರು ಏನು ಅಂದರೇನು? ನಮ್ಮ ಕಾವೇರಿಯಂಥಾ ಹುಡುಗಿನ್ನೂ ಆಡಿಕೊಳ್ಳುವ ಜನಾ ಇದ್ದಾರಂದ ಮ್ಯಾಲ, ಬದುಕೂದು ಕಠಿಣನೇ ಅದ ಸಮಾಜದೊಳಗ!"

"ಆಡಿಕೊಳ್ಳುವವರಿಗೆ ನಮ್ಮ ಕಾವೇರಿಯೇನು? ಪ್ರತ್ಯಕ್ಷ ಸೀತಾ-ಸಾವಿತ್ರಿಯರೇನು? ಅದರೆ ಳಗ ಇಂದಿನ ದಿನಗಳೊಂದು ಸುಡುಗಾಡು ಬಂದು ಕೂತಾವ! ಬೇಗನೆ ಮದಿವಿ ಆಗದ ಕನ್ಯಾಗಳ ಸಂಖ್ಯಾ ಹೆಚ್ಚಾಗೇದ. ಮದಿವಿ ಆಗದ ಕನ್ಯಾಗಳು ಅಂದರ ಜೀವ ಇಲ್ಲದ ಬಣ್ಣದ ಗೊಂಬಿಗಳೇನೂ ಅಲ್ಲ. ಅದರೊಳಗ, ಬೇಕಾದ ಬ್ಯಾಡಾದ ಕಥೀ-ಕಾದಂಬರೀ ಓದತಾವ; ನಾಟಕಾ-ಸಿನೇಮಾ ನೋಡತಾವ; ಸ್ವತಂತ್ರ ಆಗಿ ಎಲ್ಲಿ ಬೇಕಾದಲ್ಲೆ ತಿರುಗಾಡಲಿಕ್ಕೆ ಹೋಗತಾವ. ಇದರ ಪರಿಣಾಮ ಎಂತೆಂಥಾ ಕಥಿಗಳನ್ನ ಹುಟ್ಟಿಸಲಿಕ್ಕೆ ಹತ್ತೇದ ಕೇಳತೀರಿಲ್ಲೋ? ಎಲ್ಲಾ ಕನ್ಯಾಗಳೂ ತಪ್ಪು ಮಾಡದಿದ್ದರೂ ಎಲ್ಲಾರೂ ಆಡಿಕೊಳ್ಳೂ ಜನದ ಬಾಯಿಗೆ ಬೀಳೂದೇನೂ ತಪ್ಪೂದಿಲ್ಲ.

ಮದಿವೀ ಕೋಟೀ ಕಟ್ಟಿಕೊಂಡು ಎಂತೆಂಥಾ ತಪ್ಪು ಮಾಡಿದರೂ ನಡೀತsದ ನಮ್ಮ ಸಮಾಜದಾಗ; ಆದರ ಮದಿವಿಯಾಗದ ಹೆಣ್ಣು ಮನೀ ಹಿಡಿದು ಕೂತರ, ದಿನಕ್ಕೊಂದು ಕಲ್ಪಿತ ಕಥೀ ಹುಟ್ಟತಾವ!...."

ರಾಯರು ನಡುವೆಯೇ ಕೇಳಿದರು:— "ಏನು? ಆಯ್ತರೇ ಏನು ಈಗ?"

ವೇಣಕ್ಕ ಗುಡಿಯಲ್ಲಿ ನಡೆದ ಸಂಗತಿಯನ್ನೆಲ್ಲ ವಿವರಿಸಿದರು. ತಮ್ಮ ಬಳಿಯಲ್ಲಿಯೆ ಇದ್ದ ಆ ಪ್ರೌಢೆ ಮಾತನಾಡಿದ "…. ಮದಿವಿ ಆಗದs ಮಕ್ಕಳ ತಾಯಂದಿರು ಆಗೂ ಕಥಿಗೋಳs ದಿನಾದಿನಾ ಕಿವಿಗೆ ಬೀಳಲಿಕ್ಕೆ ಹತ್ತ್ಯಾವ. ಹೆಣ್ಣು-ಮಕ್ಕಳನ್ನ ಹೆತ್ತ ತಾಯಿ-ತಂದಿಗಳಿಗೇ ಬುದ್ಧಿ ಇಲ್ಲ...." ಎಂಬ ಕಹಿನುಡಿಯನ್ನೂ ಹೇಳಿದರು. ಕೇಳಿ, ಗೋಪಾಲರಾಯರು ಸುಮ್ಮಗೆ ಕುಳಿತರು ಯೋಚನಾಮುದ್ರೆಯಿಂದ. ವೇಣಕ್ಕ ಮತ್ತೆ ಹೇಳಲು ತೊಡಗಿದರು :

"ಜನರು ಹೆಚ್ಚಿನ ಕಥಿಗಳನ್ನ ಹುಟ್ಟಿಸೂದರೊಳಗs, ನಮ್ಮ ಕಾವೇರೀ ಮದಿವಿ ಆಗಬೇಕು. ಒಮ್ಮೆ ಜನರ ಬಾಯಾಗ ಹೆಸರು ಕೆಟ್ಟಿತಂದರ, ಮುಂದ ಏನಾದೀತು ಹೇಳಲಿಕ್ಕೆ ಬರೂದಿಲ್ಲ. ಅದರೊಳಗ ನಾವಂತೂ ಹೇಳಿ ಕೇಳಿ ಬಡವರು!"

"ತಾ ಶುದ್ಧ ಇದ್ದರ, ಸೂಳಿಗೇರ್ಯಾಗ ಮನೀಕಟ್ಟಿಸಬಹುದು ಅಂತ ಗಾದೀ ಮಾತಿರೂದನ್ನ ಕೇಳೀದೀ ಇಲ್ಲೋ ನೀನು?"

"ಅವೆಲ್ಲಾ ಹಿಂದಿನ ಕಾಲದ ಹಳೇಗಾದೀ ಮಾತು! ಇಂದ ಎಲ್ಲಾ ಬದಲಾಗೇದ;ಆಡಿಕೊಳ್ಳುವವರ ಬಾಯಾಗ ಸಿಕ್ಕರ, ಅರುಂಧತೀ-ಅನಸೂಯಾ ಸುದ್ಧಾ ನೀತಿಗೇಡಿಗಳಾಗಿ ನಿಲ್ಲತಾರ! ಹೋದ ವರ್ಷ ನೋಡಿದಿರಿಲ್ಲೋ ಎಂಥಾ ಬಂಗಾರದಂಥಾ ಹುಡುಗಿ, ಆ ಕುಲಕರ್ಣ್ಯಾರ ಕುಸುಮಾ! ಪಾಪ-ಜನರ ಬಾಯಾಗ ಸಿಕ್ಕು, ಭಾಂವೀ ಬಿದ್ದು, ವ್ಯರ್ಥ ಜೀವಾ ಕಳಕೊಂಡಿತು!....

ಗೋಪಾಲರಾಯರು ಕಂಗೆಟ್ಟುಹೋದರು. ಏನು ಮಾತನಾಡಬೇಕೆಂಬುದೇ ಅವರಿಗೆ ತಿಳಿಯಲಿಲ್ಲ. ಶೂನ್ಯದೃಷ್ಟಿಯುವಳಾಗಿ ಅವರು ಸುಮ್ಮನೆ ಕುಳಿತಿದ್ದರು; ವೇಣಕ್ಕನೂ ದೈನ್ಯದ ಮೂರ್ತಿಯಾಗಿ ಕುಳಿತಿದ್ದರು. ಒಂದೆರಡು ನಿಮಿಷ ತಡೆದು ಗೋಪಾಲರಾಯರು ನುಡಿದರು :

" ಎಲ್ಲಾ ವಿಚಿತ್ರ ಕಾಲವೇ ಬಂದsದ. ಹಳೇ ರೀತೀ ಹಿಡಿದು ಜೀವನಾ ನಡಿಸಬೇಕಂದರ, ಹೊಸಾಕಾಲ ಏಟು ಹಾಕತsದ. ಹೊಸಾರೀತೀ ಅನುಸರಿಸಿ ಜೀವನಾ ನಡಿಸಬೇಕಂದರ, ನಮ್ಮ ಆರ್ಥಿಕ ಪರಿಸ್ಥಿತಿ ಏಟುಹಾಕತsದ! ಹಳೇ ಆಚಾರ-ವಿಚಾರಾ ಹೊಗಳೂ ಮಂದಿ ನಮ್ಮಲ್ಲಿ ಬೇಕಾದಷ್ಟು ಅದs; ಆದರೂ, ಪ್ರತ್ಯಕ್ಷ ಕೃತಿಯೊಳಗ, ಹೊಸ ಆಚಾರ-ವಿಚಾರಗಳಿಗೇ ಬೆಲೀ ಕೊಡೂದು ನಡದsದ. ಇಂಥಾ ಕಾಲದೊಳಗ, ಪ್ರಾಮಾಣಿಕ ಅಭಿಪ್ರಾಯಕ್ಕ ಅವಕಾಶ ಹ್ಯಾಂಗ ಸಿಗಬೇಕು? ಈಗಿನ ಸಿನೇಮಾ-ನಾಟಕದ ಜಗತ್ತಿನೊಳಗ ನಾವೆಲ್ಲಾರೂ ಸಿನೇಮಾ-ನಾಟಕದಲ್ಲಿಯ ಜೀವನದ್ಹಾಂಗs ನಡಕೋ-ಬೇಕಾಗೇದ! ಒಳಗ ಇರೂದು ಒಂದು; ಹೊರಗ ತೋರಿಸೋದು ಒಂದು! ಬಣ್ಣಗಾರಿಕೀನs ಬೇಡತsದ ಸಮಾಜ. ಆದರ, ನಮ್ಮಂಥಾ ಜನಕ್ಕ ಈ ಬಣ್ಣಗಾರಿಕೀ ಖರ್ಚು ವೆಚ್ಚ ನಡೀಬೇಕು ಹ್ಯಾಂಗ? ಅಂತs ನಮ್ಮ ಕಾವೇ-ರಿನ್ನ ನಾವು ಬಣ್ಣದ ಬೀಸಣಕೀ ಮಾಡಲಿಲ್ಲ; ಮನೀ ನಡಿಸಿಕೊಂಡು ಹೋಗೂ ಗರತಿನ್ನ ಮಾಡಬೇಕಂಬೂ ಗುರಿಯಿಂದ ಹೊರಟೆವಿ. ಆದರ ಲೋಕೆಲ್ಲಾ ಬಣ್ಣದ ಬೀಸಣಿಕೀನs ಬೇಡತsದಂಬೂದು ನಮಗ ಮೊದಲs ತಿಳೀಲಿಲ್ಲ. ಈಗ ಹೊತ್ತು ಮೀರಿ ತಿಳಿದು ಪಶ್ಚಾತ್ತಾಪ ಪಡಬೇಕಾಗೇದ. ಈ ನಮ್ಮ ತಪ್ಪಿಗಾಗಿ ನಮ್ಮ ಕಾವೇರಿ ಯಾವ ಪ್ರಾಯಶ್ಚಿತ್ತ ಅನುಭವಿಸ-ಬೇಕಾಗತsದೋ ಏನೋ! ದೇವರು ಎಲ್ಲಾ ಒಳ್ಳೇದು ಮಾಡಬೇಕು!"

ವೇಣಕ್ಕ ನಿರಾಶೆಯ ಕಟುಮಾತುಗಳನ್ನಾಡಿದಳು:

" ನಮಗ ದೇವರಿರೂದು ಬರೇ ಪೂಜಿ-ನೈವೇದ್ಯಾ ಮಾಡಿಸಿಕೊಳ್ಳಲಿಕ್ಕೆ! ಒಳ್ಳೇದು ಮಾಡೂದು ಆತಗ ಮರೆತೇ ಹೋಗೇದೋ ಏನೋ!"

ಇದ್ದುದಿದ್ದ ಹಾಗೆಯೇ ಅಂಚೆಯಾಳು ಬಂದು, ಕಟ್ಟೋಲೆ (ಕವರ್) ಯೊಂದನ್ನು ಒಗೆದು ಹೋದ. ಯಾರ ಪತ್ರದ ನಿರೀಕ್ಷೆಯೂ ಇಲ್ಲದ ಗೋಪಾಲರಾಯರಿಗೆ ಆಶ್ಚರ್ಯವಾಯಿತು. ಅದೇ ಭಾವದಲ್ಲಿಯೆ ಎದ್ದು-ಹೋಗಿ ಪತ್ರವನ್ನು ಕೈಯಲ್ಲಿ ತೆಗೆದುಕೊಂಡರು. ವಿಳಾಸದ ಕೈಬರೆಹ ಅಪರಿಚಿತವಾದುದು. ಮೇಲಕ್ಕೆ ಕಣ್ಣಾಡಿಸಿದರು ಒಂದೆ ಒಂದು ಅಂಚೆಯ ಮುದ್ರೆ—ಅದೇ ನಗರದ ಅಂಚೆಯದು. ರಾಯರ ಆಶ್ಚರ್ಯ, ಉದ್ಗಾರ ತೆಗೆಯಿತು;

" ಅಂ ! ಇದ್ಯಾರ ಪತ್ರ ! ನನಗೆ ಕಟ್ಟೋಲೆ ಬರೆಯುವ ಪುಣ್ಯವಂತ ಯಾರಿರಬಹುದು ? " ವೇಣಕ್ಕ ಕೂತೂಹಲದಿಂದ ಗಂಡನ ಕಡೆಗೆ ನೋಡುತ್ತಿದ್ದರು.

## ೫ನೆಯ ಪರಿಚ್ಛೇದ

ನಿನ್ನೆಯ ರಾತ್ರಿ ಕೆಮ್ಮು ಹೆಚ್ಚು ಸಲ ಬಂದುದರಿಂದ, ಅನಂತರಾಯರಿಗೆ ತುಂಬ ಅಶಕ್ತತೆ ಬಂದುಬಿಟ್ಟಿದ್ದಿತು. ಅದಕ್ಕಂತಲೇ ಇಂದು ರಜೆ ತೆಗೆದುಕೊಂಡು ಮನೆಯಲ್ಲಿಯೆ ಉಳಿದಿದ್ದರು; ಯಾವಾಗಲೂ ರಾಯರಿಗೆ ಮನೆಯಲ್ಲಿಯೆ ಇರುವುದೆಂದರೆ ಬೇಸರದ ವಿಷಯ. ಕುಮುದೆಯು ಒತ್ತಾಯಕ್ಕಾಗಿ ಒಂದು ದಿನದ ರಜೆಯ ಚೀಟಿಯನ್ನು, ನಿರ್ವಾಹವಿಲ್ಲದೆ ಕಳುಹಿದ್ದರು.

ಚೈತ್ರದ ಬೇಸಗೆಯ ಸೆಕೆಗೆ ರಾಯರ ಮನೆಯಲ್ಲಿ ಎಡೆಯಿರಲಿಲ್ಲ. ಮಹಡಿಯ ಮನೆಯಾದುದರಿಂದ, ಕೆಳನೆಲೆಯಲ್ಲಿ ಸ್ವಾಭಾವಿಕವಾಗಿ ತಂಪು ಹವೆ ಆಡುತ್ತಿರುವುದು. ಇನ್ನೂ ಹೆಚ್ಚಿಗೆ ಬೇಕೆಂದರೆ, ಹಾಗೇ ಸ್ವಲ್ಪ ವಿದ್ಯುತ್ತಿನ ಗುಂಡಿಯನ್ನು ಒತ್ತಿದರಾಯಿತು; ಬೀಸಣಿಗೆ ತಿರುಗುತ್ತ ತಂಗಾಳಿಯನ್ನು ತೂರಲು ತೊಡಗುವುದು. ಇಳಿಹೊತ್ತಿನ ನಾಲ್ಕುಗಂಟೆಯಾದರೂ ಬಿಸಿಲ ಬೇಗೆ ಆರಿರಲಿಲ್ಲ. ಗಾಳಿಯಿರದುದರಿಂದ, ಗಿಡ-ಮರಗಳೆಲ್ಲ ಹೊರಗೆ ಅಚಲವಾಗಿ ನಿಂತುಬಿಟ್ಟಿರುವುವು. ಆದರೆ ಅನಂತರಾಯರ ಮನೆಯ ಪಡಸಾಲೆ ಮಾತ್ರ ಮಹಾಬಳೇಶ್ವರದ ಸಾನುಪ್ರದೇಶದ ಸುಖಾನುಭೂತಿಯನ್ನು ಕೊಡುತ್ತಿತ್ತು. ರಾಯರು ವಿಶ್ರಾಮಾಸನವೊಂದರ ಮೇಲೆ-ಕಣ್ಣೆದುರು ಟೈಮ್ಸ್ ಪತ್ರಿಕೆ ಹಿಡಿದು-ಕುಳಿತುಕೊಂಡಿದ್ದರು. ಕುಮುದಾ ಕೋಕೋದ ಕಪ್ಪನ್ನು ತೆಗೆದುಕೊಂಡು ತಂದೆಯ ಬಳಿ ಬಂದಳು. ರಾಯರು ಆಕೆಯ ದಾರಿಯನ್ನೇ ಕಾಯುತ್ತಿದ್ದರೇನೊ ! ಕೈಯಲ್ಲಿಯ ಪತ್ರಿಕೆಯನ್ನು ಎಡಪಕ್ಕದ ಕಾಲು ಚೌಕಿಯ ಮೇಲೆ ಚೆಲ್ಲಿ, ಕೋಕೋ ಕಪ್ಪನ್ನು ಕೈಯಲ್ಲಿ ತೆಗೆದುಕೊಂಡರು. ಅದನ್ನು ಕೈಯಲ್ಲಿ ಹಿಡಿದುಕೊಂಡೇ ಹೇಳಿದರು :

" ಇಂದ ಪೆಪರಿನೊಳಗ ಸುದ್ದೀ ಬರದಾನ; ಮುಂಬಯಿಯೊಳಗ ನೂರಾಎಪ್ಪತ್ತೈದು ಮಂದಿ ಸತ್ಯಾಗ್ರಹಿಗಳನ್ನ ಹಿಡಿದು, ಸರಕಾರ ಸೆರೆಮನೆಗೆ ಕಳಿಸಿತಂತ ನೋಡು, ಕುಮುದಾ ! "

ಜಡವಾದ ಧ್ವನಿಯಿಂದ ಕುಮುದಾ ಹೇಳಿದಳು ;

" ಹುಂ, ಕಳಿಸಿದ್ವೀತಾದೀತು! ಹೇಳಿಕೇಳಿ ಬ್ರಿಟಿಷ್ ಸರಕಾರ! ಪಾಶವೀಶಕ್ತಿ ಬೇಕಾದಷ್ಟು ಹತ್ತರ ಅದ. ಅದರ ಉಪಯೋಗ ಮಾಡತೈದ. ಇಂದ ನೂರಾಎಪ್ಪತ್ತೈದು ಮಂದಿನ್ನ ಸೆರೆಮನೆಗೆ ಕಳಿಸಿತು; ನಾಳೆ ಸಾವಿರದಾ ಎಪ್ಪತ್ತೈದು ಮಂದಿನ್ನೂ ಕಳಿಸಬಹುದು. "

ತಿರಸ್ಕಾರದ ಧ್ವನಿಯಲ್ಲಿ ರಾಯರು ಮಾತನ್ನಾರಂಭಿಸಿದರು :

" ಈ ಹಿಂದುಸ್ತಾನದ ಮೂರ್ಖ ಮಂದಿಗೆ ಇಷ್ಟೂ ತಿಳೀಬಾರದೇನು ? ಬ್ರಿಟಿಷ್ ಸರಕಾರ ಎಂಥಾ ಬಲಶಾಲಿಯಾದದ್ದು....ತಾವು ಎಷ್ಟೊಂದು ಬಲಹೀನರು! ಹೀಂಗಿದ್ದೂ ಅವರ ವಿರುದ್ಧ, ಏನೇನೋ ಹುಚ್ಚನ್ಹಾಂಗ ಚಳವಳೀ ನಡಿಸ್ಯಾರಲ್ಲ! ಹುಲೀ ಹಿಂಡಿನ ಮುಂದ ಇಲೀ ಹಿಂಡು ಏನು ಮಾಡಬಲ್ಲದು ? ವ್ಯರ್ಥ ತಮ್ಮ ಜೀವನಾ ಹಾಳುಮಾಡಿಕೊಡತಾವೈ ತೀರಿತು ಈ ಹುಚ್ಚು ಚಳವಳಿಗಾರರು ! "

ಸಹಿಸಲಾರದ ಸ್ವರದಲ್ಲಿ ಕುಮುದಾ ಹೇಳಿದಳು :

" ಕಾಕಾ, ನಿಮ್ಮಂಥಾ ಜನರೂ ಹೀಂಗ ಮಾತಾಡತಿರೂದನ್ನ ಕಂಡು ನನಗ ಕೆಟ್ಟ ಅನಿಸತೈದ! ನಮ್ಮ ಹಿಂದುಸ್ತಾನದ ಜನಾ ಇಲೀ ಹಿಂಡೂ ಅಂತ ಅಂತೀರಲ್ಲಾ ! ನಿಮ್ಮಂಥವರೆಲ್ಲಾ ಹೀಂಗ ಅಂದುಅಂದೇ ನಮ್ಮ ಜನರನೆಲ್ಲಾ ಇಲೀ ಹಿಂಡು ಮಾಡಿ ಕೂತಿದ್ದಿರಿ! ಯಾವಾಗಲೂ ಬ್ರಿಟಿಶರ ಬಲದ ಪವಾಡಾ ಹಾಡೂ ನಿಮ್ಮಂಥಾ ಭಟ್ಟಂಗಿಗೋಳು, ಹಿಂದುಸ್ತಾನದ ಇತಿಹಾಸದ ಕಡೆ ಕಣ್ಣು ತೆಗೆದು ನೋಡಿದ ಹಾಂಗೈ ಕಾಣೂದಿಲ್ಲ ನಮ್ಮ ದೇಶದೊಳಗ ಎಂಥೆಂಥಾ ವೀರಾಧಿವೀರರು ಆಗಿ ಹೋಗ್ಯಾರಂಬೂದು ಗೊತ್ತದ ಏನು ? ಒಬ್ಬನೈ ಒಬ್ಬ ಪ್ರತಾಗಸಿಂಗನ ಕಥೀ ಕೇಳಿದರ ಸಾಕು; ಹಿಂದುಸ್ತಾನ ಎಂಥಾ ಶಕ್ತಿಶಾಲಿಯಾದ ಪವಿತ್ರ ದೇಶಾ ಅನ್ನೂದು ಗೊತ್ತಾಗತೈದ ! "

" ಓಹೋಹೋ ! " ಎಂದು ರಾಯರು ನಕ್ಕು ಮಾತನಾಡಿದರು :

" ಹಿಂದಿಂದು ತಗದು ಹಿತ್ತಲಾಗ ಅತ್ತರಂತ! ಹಿಂದಿಂದು ತೊಗೊಂಡು ಮಾಡೋದೇನು ? ಅಂದೆಲ್ಲಾ ವಿಜಾಪುರ ಇತ್ತು; ಗೋಳಗುಮ್ಮಟ ಇತ್ತು ! ಇಂದೇನು ಅದ? ಇಂದ ದಿಲ್ಲೀ ಅಲ್ಲೀ ಆದಿಲಶಹಾನ ಜೋಡಿ ಜಗಳಾಡ-ಬೇಕಾಗಿಲ್ಲ; ಬ್ರಿಟಿಷರ ಬಾಂಬಿನ ಜೋಡಿ ಜಗಳಾಡಬೇಕಾಗತೈದ ತಿಳೀತಿಲ್ಲೊ ? "

ನಗೆ-ರೋಷ ಎರಡೂ ಬೆರೆತ ಧ್ವನಿಯಲ್ಲಿ ಕುಮುದಾ ನುಡಿದಳು :

" ದಿಲ್ಲಿಯೊಳಗ ಅಲ್ಲೀ ಆದಿಲಶಾಹೀನ್ನ ಎಲ್ಲ್ಯಾಂವನ್ನ ತಂದಿರಿ ಕಾಕಾ ನೀವು ? ನಮ್ಮ ಜನರಲ್ಲಿರುವ ಹಿಂದುಸ್ತಾನದ ಇತಿಹಾಸದ ಜ್ಞಾನಕ್ಕ ಪ್ರತಿ-ನಿಧೀ ಹಾಂಗ ಅದ ನೋಡ್ರಿ ನಿಮ್ಮ ಮಾತು! ಇನ್ನ ಬ್ರಿಟಿಶರ ಬಾಂಬಿನ ಹೆದರಿಕೀ ವಿಷಯ! ನಮ್ಮ ಜನರಲ್ಲಿ ಮಲಗಿ ನಿದ್ರಿಸುತ್ತಿದ್ದ ಆತ್ಮಶಕ್ತಿ ಎಚ್ಚರಗೊಂಡರ, ಬ್ರಿಟಿಶರ ಬಾಂಬು ಇದ್ದಲ್ಲೇ ಹುಡಿಗೂಡಿ ಹೋಗತಾವ ತಿಳೀತಿಲ್ಲೊ ? "

" ಅಬಾಬಾಬಾ ! ನೀನೂ ಆ ಕಾಂಗ್ರೆಸ್ಸಿನ ಖಾದೀಬಾವಾಗಳ ಹಾಂಗ, ಭಾಷಣಾ ಬಿಗೀಲಿಕ್ಕೆ ಸುರೂ ಮಾಡೀದಿ ಅಲ್ಲಾ ! " ಅನಂತರಾಯರಾಡಿದ ಈ ಉಪರೋಧಿಕ ಮಾತುಗಳನ್ನು ಕೇಳಿ, ಕುಮುದಾ ಅಭಿಮಾನ-ಆವೇಶ-ಗಳಿಂದ ಹೇಳಿದಳು :

" ನಾ ಏನು ಭಾಷಣಾ ಮಾಡತೀನಿ ನನ್ನ ತಲಿ! ಆ ದಿನಾ ಅಕ್ಕೀಪ್ಯಾಟೀ ಬಯಲೊಳಗ, ರತ್ನಾಕರ ಭಾಷಣಾ ಮಾಡಿದ : ಅದನ್ನ ಕೇಳಬೇಕಾಗಿತ್ತು ನೀವು ! ಸತ್ತ ಹೆಣದೊಳಗ ಸುದ್ಧಾ ಜೀವಾ ತುಂಬುವಂಥಾ ಭಾಷಣ ಅದು ! ಅಂದಿನ ಅವನ ಮಾತು ಕೇಳಿದ್ದರ, ಎಂಥಾ ದೇಶದ್ರೋಹಿಗಳೂ ಸಹಿತ ದೇಶಭಕ್ತರಾಗಿ ಬ್ರಿಟಿಶರಿಗೆ ವಿರೋಧಿಗಳಾಗಿ ನಿಲ್ಲಬೇಕು ! "

ಅಣಕದ ಧ್ವನಿಯಲ್ಲಿಯೇ ಮತ್ತೆ ಅನಂತರಾಯರು ಮಾತನಾಡಿದರು :

" ಹೂಂ ಹೂಂ ! ಅಂವ ಯಾರಂವಾ....ಅಂಥಾ ರತ್ನಾಕರ ? ಈ ಮೂರ್ಖ ದೇಶಭಕ್ತರು ಇಲ್ಲದ್ದ್ಹೊಂದು ಹೇಳಿ, ನಿಮ್ಮಂಥಾ ತಿಳಿಗೇಡಿ ಹುಡು-ಗರ ತಲೀ ಕೆಡಸತಾರ ! ಬುದ್ಧಿ ಇದ್ದವರು ಅವರ ಜೊಳ್ಳುಮಾತಿನ ಭ್ರಮೆಗೆ ಯಾತಕ್ಕೆ ಬಿದ್ದಾರು ಹೇಳು ಕುಮುದಾ ! ಜವಾಬ್ದಾರೀ ಅಂಬೂದು ಆ ದೇಶಭಕ್ತರಿಗೂ ಗೊತ್ತಿರೂದಿಲ್ಲ; ನಿಮ್ಮಂಥಾ ಹುಡುಗರಿಗೂ ಗೊತ್ತಿರೂದಿಲ್ಲ. ಅಂತಲೇ ಅವರ ಚಳವಳಿಯೆಲ್ಲಾ ನಿಮ್ಮಂಥಾ ಹುಡುಗರ ಮ್ಯಾಲ ಅವಲಂಬಿ-ಸಿಕೊಂಡು ನಿಂತದ. ತಿಳಿದ ಹಿರಿಯರು ಅವರ ಮಾತನ್ನ ಯಾತಕ್ಕ ಕೇಳಲಿಕ್ಕೆ ಹೋದಾರು ? "

" ತಿಳಿದ ಹಿರಿಯರೂ ಅಂತ ಯಾರಿಗಂತೀರಿ ಕಾಕಾ ನೀವು ? ದೇಶದ ಪಾರತಂತ್ರ್ಯದ ಕಲ್ಪನಾ ಕೂಡ ಇಲ್ಲದ, ಸರಕಾರದ ಕಚೇರ್‍ಯಾಗ

ಕಾರಕೂನಿಕೀ ಮಾಡಿ, ಕೂಲೀ ಪಡೆದು ಸಂಸಾರ ಸಾಗಿಸೋ ಹೇಡಿ-ಗಳನ್ನೆಲ್ಲಾ ನೀವು ಹಿರಿಯರಂತ ತಿಳಿದೀರೇನು? ಅವರು ಹಿರಿಯರಲ್ಲ; ಸ್ವಾರ್ಥಸಾಧಿಸುವ ಹದ್ದುಗಳು! ಇಂಥವರಿಂದ ರಾಷ್ಟ್ರದ ಕಲ್ಯಾಣ ಹ್ಯಾಂಗ ಆದೀತು? ಆರುಸಾವಿರ ಮೈಲಿನ ಮ್ಯಾಲಿಂದ ಬಂದ ಮುಷ್ಟಿತುಂಬಾ ಜನರು, ಹಿಂದುಸ್ತಾನದ ಹಿರಿಯರನ್ನೆಲ್ಲಾ ಹುಳುಗಳ ಹಾಂಗ ಮಾಡಿಬಿಟ್ಟಿದ್ದರೂ, ಅದರ ಎಗ್ಗು ಅವರಿಗೇನೂ ಇಲ್ಲ. ಹಸಿವಿಗೆ ತುತ್ತು ಕೂಳು ಸಿಗತದ ಅನ್ನೋ ಮೋಹದೊಳಗ, ದೇಶದ ಪಾರತಂತ್ರ್ಯದ ಬಲೀನ ಹೆಚ್ಚೆಚ್ಚು ಬಿಗೀಮಾಡಿ-ಕೋತs ಹೊರಟಾರ! ಭಾರತಕ್ಕ ಸ್ವಾತಂತ್ರ್ಯಸುಖದ ಭವಿಷ್ಯವೇ ಇಲ್ಲ-ದ್ಹಾಂಗ ಮಾಡ್ಯಾರ! ಕಾಕಾ, ನೀವು ರತ್ನಾಕರನ ಭಾಷಣಾ ಕೇಳಬೇಕಾಗಿತ್ತು! ಆತ ಇಷ್ಟೊಂದು ತೇಜಸ್ವಿ ಇದ್ದಾನಂಬೂದು ನನಗೇನೂ ಗೊತ್ತಿದ್ದಿಲ್ಲ ಬಿಡಿರಿ!"

ರಾಯರು ಸ್ವಲ್ಪ ಮೆತ್ತಗಿನ ಧ್ವನಿಯಲ್ಲಿ ಕೇಳಿದರು:

"ರತ್ನಾಕರ ಅಂದರ ಯಾರು? ಎಲ್ಲಿಯವರು?"

ಹೆಮ್ಮೆಯ ಧ್ವನಿಯಲ್ಲಿ ಕುಸುಮಾ ಹೇಳಿದಳು:

"ಆ ದಿನದ ಮೆರೆವಣಿಗೆಯಲ್ಲಿ ಹಾಡು ಹೇಳತಾ ಹೊರಟಿದ್ದರಲ್ಲ; ಆ ಖಾದೀಧಾರಿ ತರುಣರು? ಅಂದು ಕಾವೇರಿಯನ್ನ ನೋಡಲಿಕ್ಕೆ ಬಂದ ಗಂಡಿನ ಜೊತೆಗೆ ಬಂದಿದ್ದವರೆಂದು ತೋರಿಸಿದ್ದೆನಲ್ಲ....ಅವರು!"

"ಓ, ಆತನೇ? ಅವನೂ ಭಾಷಣ ಕೊಡತಾನೇನು? ಪಾಪ, ನೋಡಿ-ದರ ಒಳ್ಳೇ ಬುದ್ಧಿವಂತನ ಹಾಂಗ ಕಾಣಿಸತಾನ! ಈ ಕಾಂಗ್ರೆಸಿನವರು ಅಂಥಾ ತರುಣರನೆಲ್ಲಾ ಮಂಕುಬೂದೀ ಚೆಲ್ಲಿ ಮಬ್ಬಿಗೆ ಹಾಕಿ ಬಿಡತಾರ! ಪಾಪ! ಸುಮ್ಮನs ಕಾಲೇಜಿನೊಳಗ ಕಲಿತು, ಪರೀಕ್ಷಾ ಪಾಸುಮಾಡಿ, ಎಲ್ಲ್ಯಾರೆ ಸರಕಾರೀ ನೌಕರೀ ಹಿಡಿದು ಸುಖವಾಗಿ ಸಂಸಾರಾ ಮಾಡಬಾರದs? ಅದನ್ನ ಬಿಟ್ಟು ಈ ಖಾದೀ ತೊಟಗೊಂಡು ತನ್ನ ಕರಿಯರೆಲ್ಲಾ ಬೂದೀ ಮಾಡಿ-ಕೊಳ್ಳೋ ದುರ್ಬುದ್ಧಿ ಅಂವಗ ಎಲ್ಲೀದು ಬಂದು ಹೊಕ್ಕಿತೋ ಏನೋ! ಹುಡುಗ ಮಾತ್ರ ತೇಜಸ್ವೀ ಹುಡುಗ ಇದ್ದಾನ; ನಾ ಏನೂ ಇಲ್ಲ ಅನಲಿಕ್ಕಿಲ್ಲ! ಅಂಥಾ ಹುಡುಗೊಬ್ಬ ಸರಳ ಹಾದೀ ಹಿಡಿದಾಂವ ಇದ್ದರ, ನಿಜವಾಗಿಯೂ

ನೋಡು ಕುಮುದಾ, ಅಂವನ್ನ ನನ್ನ ಮನೀ ಅಳಿಯನ್ನ ಮಾಡಿಕೊಂಡು ಬಿಡತಿದ್ದೆ. ”

ತಂದೆಯ ಮಾತಿನ ಕೊನೆ ಮಗಳ ಮುಖದಲ್ಲಿ ನಾಚಿಕೆಯನ್ನು ಹೇರಿತು. ಆ ನಾಚಿಕೆ ಕುಮುದೆಯ ಮೊದಲಿನ ಭಾವಾವೇಶವನ್ನು ಕಡಿಮೆ ಮಾಡಿತು; ತಂದೆಯ ಕಡೆಗೆ ಪ್ರೀತಿಯಿಂದ ನೋಡಲು ಹಚ್ಚಿತು. ಆಗ ಕುಮುದಾ, ತಂದೆಯ ಮುಖದಲ್ಲಿ ಕೇವಲ ತಂದೆತನವನ್ನು ಮಾತ್ರ ಕಂಡಳು. ಇದುವರೆಗೆ ಅಲ್ಲಿ ಕಾಣುತ್ತಲಿದ್ದ ದೇಶದ್ರೋಹಿತ್ವದ ಭಾವವನ್ನದು ಮರೆಮಾಡಿ ತಾನೆ ತಾನಾಗಿ ವ್ಯಾಪಿಸಿದ್ದಿತು. ಒಮ್ಮೆಲೆ ನೆನಪಿಗೆ ಬಂದಂತೆ ಆಕೆ ಕೇಳಿದಳು :

“ ಇದೇನು ಕಾಕಾ ! ಮಾತಿನಲ್ಲಿ ನೀವು ಕೋಕೋ ಕುಡಿಯುವುದನ್ನ ಮರೆತೇ ಬಿಟ್ಟಿದ್ದೀರಲ್ಲ; ತಣ್ಣಗಾಗಿ ಹೋಯಿತೋ ಏನೋ ! ”

“ ಏನು ? ನಾನು ಕೋಕೋ ಕುಡಿಯಲೇ ಇಲ್ಲ ಅಲ್ಲವೆ ? ನೋಡು ಕುಮುದಾ ! ಮಾತಿನ ಹುಚ್ಚು ಅಂದರ ಹೀಂಗ ಆದ ! ನೀ ಯಾವಾಗ ಕೋಕೋ ತಂದುಕೊಡತೀಯೋ ಅಂತ ದಾರೀನೋಡತನs ಕೂತುಕೊಂಡಿದ್ದೆ; ಆದರ ಮಾತಿನ ಭರದೊಳಗ, ಕೈಯಾಗಿನ ತುಂಬಿದ ಕಪ್ಪು ಯಾವಾಗ ಟೀಪಾಯ ಮ್ಯಾಲ ಇಟ್ಟೆನೋ ಏನೋ ನೆನಪs ಇಲ್ಲ ! ”

“ ನನಗೂ ಲಕ್ಷ್ಯಕ್ಕs ಬರಲಿಲ್ಲ.... ಹಾಂಗs ಏನೇನೋ ಮಾತು ಬೆಳಸಿದೆ. ಎಲ್ಲಾ ತಣ್ಣಗಾಗಿ ಹೋಗೇದ ಕೋಕೋ ! ತಡೀರಿ, ಒಳಗ ಒಲೀಮ್ಯಾಲ ಬಿಸೀ ಹಾಲು ಅವ. ಬ್ಯಾರೇ ಒಂದು ಕಪ್ಪು ಮಾಡಿಕೊಂಡು ಬರತೀನಿ ! ” ಎಂದು ನುಡಿದವಳೇ ಕುಮುದಾ ಎದ್ದು ಒಳಗೆ ನಡೆದಳು. ಅನಂತರಾಯರು ಹುಬ್ಬನ್ನು ಸಂಕುಚಿತಗೊಳಿಸಿಕೊಂಡು, ಹಾಗೆಯೆ ಏನೇನನೋ ಯೋಚಿಸುತ್ತಿರುವವರಂತೆ, ಕುರ್ಚಿಯ ಮೇಲೆ ಒರಗಿಕೊಂಡರು. ಬಹುತರವಾಗಿ ಅವರು ಕುಮುದೆಯಾಡಿದ ದೇಶಭಕ್ತಿಯ ಮಾತುಗಳನ್ನು ಕುರಿತು ಯೋಚಿಸುತ್ತಿದ್ದರೇನೋ ! ಸ್ವಲ್ಪ ವೇಳೆಯಲ್ಲಿಯೆ ಕುಮುದಾ, ಬೇರೆಯ ಕೋಕೋ ತುಂಬಿದ ಕಪ್ಪನ್ನು ತೆಗೆದ.ಕೊಂಡು ಬಂದಳು. ತಂದೆಯ ಕೈಗೆ ಕೊಡುತ್ತ ಹೇಳಿದಳು :

" ತಗೊಳ್ರಿ ಇದನ್ನ....ತಾಜಾ ಕೋಕೋ ! ಇದೇ ಈಗ, ವೇಣಕ್ಕ ಕಾವೇರಿ ಇಬ್ಬರೂ ಹಿತ್ತಲ ಬಾಗಿಲಿಂದ ಬಂದು ಒಳಗ ಅವ್ವನ ಹತ್ತರ ಕೂತಾರ. ಏನೋ ಮಾತಾಡಬೇಕಾಗೇದಂತ; ನನಗ ಕೂಡಲೆ ಬರಲಿಕ್ಕೆ ಹೇಳ್ಯಾರ ! ಹೋಗಲೇ ?"

ರಾಯರು ಕೋಕೋ ಕಪ್ಪನ್ನು ಬಾಯಿಗೆ ತಗುಲಿಸುತ್ತ ನುಡಿದರು :

" ಯಾತಕ್ಕ ಬಂದಾರ ? ಮತ್ತೆ ಗೋಪಾಲರಾಯರ ಮನಿಗೆ ಯಾರಾದರೂ ಕನ್ಯಾನಿರೀಕ್ಷಣಕ್ಕ ಬರುವವರಿದ್ದಾರೇನು ? ಹಾಂಗಿದ್ದರ ನನಗೂ ಹೇಳು, ನಾನೂ ಬರತೀನಿ !"

ಕುಮುದಾ ನಗುನಗುತ್ತ ಒಳಗೆ ಹೋದಳು. ಅನಂತರಾಯರು ಕಪ್ಪನ್ನು ಒರಿಯದನ್ನಾಗಿ ಮಾಡಿ ಕೆಳಗಿಟ್ಟು, ಮತ್ತೆ ಟೈಮ್ಸ್ ಪತ್ರಿಕೆಯನ್ನು ಕೈಗೆ ತೆಗೆದುಕೊಂಡು ಕಣ್ಣ ಮುಂದೆ ಹಿಡಿದರು.

* * * * *

ಕುಮುದಾ ಒಳಗೆ ಹೋದಾಗ, ವೇಣಕ್ಕ ಕಾವೇರಿ ನಡುಮನೆಯಲ್ಲಿ ಕುಳಿತುಕೊಂಡಿದ್ದರು. ತುಂಗವ್ವ ಅವರ ಬಳಿಯಲ್ಲಿಯೆ ಕುಳಿತಿದ್ದಳು. ಪ್ರಾರಂಭದ ಯೋಗಕ್ಷೇಮ—ಅಡಿಗೆಯೂಟದ ಮಾತುಗಳು ನಡೆದಿದ್ದುವು. ಕುಮುದೆಯೂ ಬಂದು ಅವರ ಬಳಿಯಲ್ಲಿಯೆ ಕುಳಿತಳು. ಕಾರಣವೇನೂ ಇಲ್ಲದೆ ಈ ತಾಯಿ ಮಗಳು ಇಬ್ಬರೂ ಸೇರಿ ತಮ್ಮ ಮನೆಗೆ ಬರಲಾರರೆಂಬುದು ಕುಮುದೆಗೆ ಗೊತ್ತು. ಎಂತಲೇ ಆಕೆ ನಗು-ನಗುತ್ತ ಕೇಳಿದಳು :

" ಇದೇನು ಅಬಚೀ, ಇಂದ ಇಬ್ಬರೂ ಕೂಡಿ ಬಂದೀರಿ ? ಮತ್ತೆ ಯಾರರೇ ಕಾವೇರಿನ್ನ ನೋಡಲಿಕ್ಕೆ ಬರುವವರು ಇದ್ದಾರೇನು ? ಈಗ ಕಾಕಾ ಹೇಳಿದರು : ಕಾವೇರಿನ್ನ ನೋಡಲಿಕ್ಕೆ ಬರುವವರು ಇದ್ದರ, ತಾವೂ ಬರತಾರಂತ ಚಹಾಕುಡೀಲಿಕ್ಕೆ ನಿಮ್ಮ ಮನಿಗೆ !"

ಎಲ್ಲರೂ ನಕ್ಕರಾದರೂ ವೇಣಕ್ಕನ ನಗೆಯಲ್ಲಿ ವಿಷಾದ ತುಂಬಿಸಿಂತಿತ್ತು; ಕಾವೇರಿಯ ನಗೆಯಲ್ಲಿ ವಿಷಾದ, ನಾಚಿಕೆ ಎರಡೂ ಬೆರೆತುಕೊಂಡಿದ್ದುವು. ನಗೆ ನಿಂತ ಮೇಲೆ, ಗಂಭೀರಭಾವದವರಾಗಿ ವೇಣಕ್ಕ ಮಾತನಾಡಿದರು :

" ಈಗ ನಿಮ್ಮಿಬ್ಬರ ಕೂಡ ಒಂದು ವಿಷಯದ ಬಗ್ಗೆ ಮಾತಾಡಿ, ನಿಮ್ಮ ಅಭಿಪ್ರಾಯ ಕೇಳಿಕೊಂಡು ಹೋಗಲಿಕ್ಕೆ ಬಂದೀನಿ ತುಂಗವ್ವಾ ! ಈ ಊರಾಗ

ನಮ್ಮ ಸುಖ-ದುಃಖದ ಮಾತನ್ನ ನೀವಾರೇ ಅಷ್ಟು ಸಹಾನುಭೂತಿಯಿಂದ ಕೇಳ ತೀರಿ ಅಂತ, ಆಗಾಗ ನಿಮ್ಮ ಕಡೆ ಓಡೋಡಿ ಬರಬೇಕಾಗತದ. ಮಿಕ್ಕ ಜನಾ ಎಲ್ಲಾ ಚಾಷ್ಟೀ ಮಾತು ಆಡಿ ಮನಸು ನೋಯಿಸವರೇ ಹೊರತು, ಒಬ್ಬರೂ ಸಹಾಯ-ಸಹಕಾರ ಕೊಡಲಿಕ್ಕೆ ಬರೂದಿಲ್ಲ. ”

ಕುಮುದಾ ಕುತೂಹಲದ ನೋಟಗಳಿಂದ ವೇಣಕ್ಕನ ಕಡೆಗೆ ನೋಡಲು ತೊಡಗಿದಳು; ತುಂಗಮ್ಮ ಮರುಕದ ಧ್ವನಿಯಲ್ಲಿ ನುಡಿದಳು :

“ ವೇಣಕ್ಕಾ ನಿಮ್ಮ ಮಾತು ಸುಳ್ಳಲ್ಲ ನೋಡ್ರಿ ! ಯಾರಿಗೆ ಯಾರೂ ಒಬ್ಬರಿಗೊಬ್ಬರು ಕೊಟ್ಟು ನಡಿಸಲಿಕ್ಕೆ ಸಾಧ್ಯ ಇರೂದಿಲ್ಲ; ಆದರೂ ಒಬ್ಬರ ಅನುವು-ಆಪತ್ತಿನ ವ್ಯಾಳ್ಯಾದೊಳಗ ಮಂದಿ, ಬಾಯಿ ಮುಚಿಕೊಂಡು ಸುಮ್ಮನ ಇದ್ದರೂ ದೊಡ್ಡದೊಂದು ಉಪಕಾರ ಮಾಡಿದ್ಹಾಂಗ ಆಗತದ. ಅಷ್ಟನ್ನೂ ಮಾಡೂದಿಲ್ಲ ಜನ. ತಮಗೂ ಒಮ್ಮಿಲ್ಲ ಒಮ್ಮೆ ಅನುವು-ಆಪತ್ತು ಬರಬಹುದಂಬೂದರ ಕಲ್ಪನಾನs ಇರೂದಿಲ್ಲ. ಅದರೊಳಗ ಹೆದರಿನಡಿಯುವವರ ಮ್ಯಾಲ ಕಪ್ಪೀ ಚೆಲ್ಲುವವರಂತೂ ನಮ್ಮ ಸಮಾಜದೊಳಗ ಬಹಳ ಮಂದಿ !”

“ ನಾವು ಬಡವರ್‍ರಿವ್ವಾ ! ಜನದೊಳಗ ಹೆದರಿಕೊಂಡs ಜೀವನಾ ನಡಿಸಬೇಕಾಗತದ ನಮಗ ! ನಿಮ್ಮಂಥವರ ಶ್ರೀಮಂತಿಕಿ, ಜನದ ಬಾಯಿ ಮುಚ್ಚಿಸಿ ಬಿಡತ್ತದ; ನಮ್ಮಂಥವರ ಬಡತನ ಅವರ ಒಂದು ಬಾಯಿಗೆ ಹತ್ತು ಬಾಯಿಯ ಬಲಾ ಕೊಡತದ. ಬಡವರ ಮನ್ಯಾಗೂ ಹೆಣ್ಣು ಗಂಡು ಮಕ್ಕಳು ಇರತಾವ; ಕೊಡು-ಕೊಂಬೋದರ ಸಲುವಾಗಿ ಜನರ ಸಂಬಂಧನೂ ಬರತದ. ಅದಕ್ಕ ಯಾರಿಗೂ ಕೆಟ್ಟ ಮಾತಾಡಿ ಮಾರೀ ಕೆಡಿಸಿಗೋ ಬಾರದಂತ ನಾವು ಬಾಯಿಮುಚ್ಚಿಕೊಂಡಿದ್ದರೂ, ಮಂದೀ ಕಡಿಂದ ಕೆಟ್ಟ ಮಾತಾಡಿಸಿಕೊಂಡು ನಮ್ಮ ಮಾರೀ ಕೆಟ್ಟ ಮಾಡಿಕೋ ಬೇಕಾಗತದ !”

ಕಾವೇರಿ ಮೌನಿಯಾಗಿದ್ದುಕೊಂಡೇ ನಿಟ್ಟುಸಿರನ್ನು ಚೆಲ್ಲಿದಳು. ಕುಮುದಾ ಮಾತನಾಡಿದಳು :

“ ನಮ್ಮ ಮನೀ ಅನ್ನಾ ಉಂಡು ಇನ್ನೊಬ್ಬರಿಗೆ ಯಾಕ ಅಂಜಿಕೊಂಡು ನಡೀಬೇಕು ಅಬಚೀ ನಾವು ? ತಿರುಗೀ ಮುರುಗೀ ಬರೂದು ಮಕ್ಕಳ ಮದಿವೀ ಮುಂಜಿವೀ ಮಾತು ! ಆದರ ಹೆದರಕೀ ತಗದೊಗೆದು ಬಿಟ್ಟರ, ನಾವು

ಯಾರಿಗೂ ಹೆದರಬೇಕಾಗಿಲ್ಲ. ಕಾವೇರೀ ಮದಿವೀ ಸಲುವಾಗಿ ಮುಂದಿಗೆ ನೀವಿಷ್ಟು ಅಂಜಲಿಕ್ಹತ್ತೀದೀರಿ. ಹೋಗಲಿ, ಕಾವೇರಿಗೆ ಮದಿವೀನೇ ಬ್ಯಾಡ ! ಆಕಿಗೆ ಇನ್ನೇನಾದರೂ ಕಲಿಸಿ, ತನ್ನ ಹೊಟ್ಟೀ ತಾನು ತುಂಬಿಕೊಳ್ಳಲಿಕ್ಕೆ ಸಮರ್ಥಳಾಗೂ ಹಾಂಗ ಮಾಡಿ ಬಿಟ್ರೀ ಆಯ್ತು. ನನಗಂತೂ ಅನಿಸಿ ಹೋಗೇದ; ಈ ಕನ್ಯಾ ನೋಡಲಿಕ್ಕೆ ಬರೂದು, ಹುಚ್ಚುಚ್ಚಾರ ಪ್ರಶ್ನೀ ಕೇಳೂದು, ತಾವು ಕೋತೀ ಮುಖದವರಿದ್ದರೂ ನಕ್ಷತ್ರದಂಥಾ ಹೆಣ್ಣುಮಕ್ಕಳಿಗೆಲ್ಲಾ ಇಲ್ಲದ ಹೆಸರಿಟ್ಟು ಹೋಗೂದು-ಇದೆಲ್ಲಾ ಹೋಗಬೇಕಾದರ, ಕೆಲವು ದಿನ ಹೆಣ್ಣುಮಕ್ಕಳು ಲಗ್ನಾ ಆಗದs ಹಾಂಗs ಇದ್ದುಬಿಡಬೇಕೂ ಅಂತ !"

ವೇಣಕ್ಕ ದೈನ್ಯಧ್ವನಿಯಲ್ಲಿ ಹೇಳಿದರು :

" ಹಾಂಗ ಹ್ಯಾಂಗಾದೀತು ಬಾಳಾ ಕುಮುದಾ ! ಹೆಣ್ಣು ಅಂದರ ತಾಯಿಾ-ತಂದಿಗೆ ಒಂದು ಹುಣ್ಣು ಹುಟ್ಟಿದ್ಹಾಂಗ. ಯೋಗ್ಯ ವರಾ ನೋಡಿ ಮದಿವೀ ಮಾಡಿಕೊಟ್ಟಾಗs ಆ ಹುಣ್ಣಿನ ನೋವು ಇಲ್ಲದ್ಹಾಂಗ ಆಗೂದು. ಇನ್ನೂ ಸಣ್ಣ ಹುಡುಗಿ ನೀನು.... ಪರಿಸ್ಥಿತಿ ನೋಡಿ ಬೇಸತ್ತು. ಏನೋ ಮಾತಾಡತೀ ಆಯ್ತು. ಎಷ್ಟು ಕಲಿತರೂ ಏನಾತು ? ಹೆಣ್ಣಿಗೆ ತಾಯಾಗೂದೇನೂ ತಪ್ಪಿದ್ದಲ್ಲ. ಇದನ್ನ ತಿಳಕೊಂಡ ತಾಯಿಾ-ತಂದಿ, ತಮ್ಮ ಹೆಣ್ಣುಮಕ್ಕಳಿಗಾಗಿ ಮಿಡುಕಾಡಬೇಕಾಗತದ ತಾಯಿಾ ! ಈಗ ನಿನ್ನ ಮಾತs ತೊಗೊಂಡು ನೋಡು ! ನೀನು ಕಾಲೇಜ ಕಲಿತು ಬಿ. ಎ —ಎಂ. ಎ. ಆದರೂ, ಮದಿವೀ ಮಾಡಿಕೊಳ್ಳೋದು ಬಿಡಲಿಕ್ಕೆ ಸಾಧ್ಯ ಅದ ಏನು ? ನಿಮ್ಮ ತಾಯಿಗೆ ಈ ಮಾತು ಒಪ್ಪಿಗಿ ಆದೀತೇನು ?"

ಏನೋ ನೆನಪಾದಂತಾಗಿ, ಎದೆಯಲ್ಲಿ ಜುಮ್ಮೆಂದು ಕುಮುದಾ ಸುಮ್ಮಗೆ ಕುಳಿತಳು. ಕಾವೇರಿ ತನ್ನ ದೈನ್ಯದೃಷ್ಟಿಗಳನ್ನು ಅತ್ತಿತ್ತ ಹೊರಳಿಸಿ, ಎಲ್ಲರ ಮುಖಗಳ ಕಡೆಗೂ ನೋಡುತ್ತಲಿದ್ದಳು. ತುಂಗಮ್ಮ ಮಾತನಾಡಲು ತೊಡಗಿದರು :

" ನೋಡ್ರಿ ವೇಣಕ್ಕಾ, ಈಗ ಈ ಕಲಿತ ಮಂದೀದೊಂದು ಇದs ಮಾತಾಗೇದ. ಹೆಣ್ಣುಮಕ್ಕಳ ಮದಿವೀ ಬ್ಯಾಗನ ಮಾಡಿಬಿಡಬೇಕಂದರ, ಸುಧಾರಕ ತಾಯಿ-ತಂದೇದಿರೂ ಸಿದ್ಧರಾಗೂದಿಲ್ಲ; ಹುಡುಗಿಯರೂ ಸಿದ್ಧರಾಗೂದಿಲ್ಲ. ಮುಂದ ಪಶ್ಚಾತ್ತಾಪ ಆಗಿ, ಮದಿವೀ ಮಾಡಿಬಿಡಬೇಕಂದರ, ಕಲಿತ ಹೆಣ್ಣಿಗೆ

ತಕ್ಕ ವರಗಳು ಸಿಗೂದಿಲ್ಲ; ಅಂಥಾ ಇಂಥಾ ವರನ ಕೈ ಹಿಡೀಲಿಕ್ಕೆ ಆ ಹೆಣ್ಣಿನ ಮನಸು ಒಪ್ಪೂದಿಲ್ಲ. ಹೀಂಗಾಗಿ, ಮದಿವೀ ಮಾಡಿಕೋಬೇಕಂಬೂ ಮನಸ್ಸಿದ್ದರೂ ಆ ಹೆಣ್ಣು ಮದಿವೀ ಕಾಣವೆ ಮರಗತನ ಜೀವನಾ ಸಾಗಿಸ ಬೇಕಾಗತದ. ಇದನ ಊರೊಳಗ ನೋಡೀದಿರೋ ಇಲ್ಲೋ? ಬಿ. ಎ. ಎಂ. ಎ. ಪಾಸಾದ ಮುದಿಕನ್ಯಾಗಳು ಎಷ್ಟು ಜನರಿದ್ದಾರ? ಎಲ್ಲಾ ಸರಳ ನಡದರ ಸರಿ; ಏನಾರೇ ಹೆಚ್ಚೂ ಕಡಿಮಿ ಆದರ, ಮನಿತನದ ಮಾನಾ ಅಂಬೂದು ಉಳಿದೀತೇನು? ಅದಕ್ಕs ನಾನು ಗಂಟು ಬಿದ್ದೀನಿ : ಕುಮುದಾನ ಮದಿವೀನೂ ಆದಷ್ಟು ಲಗೂನs ಮಾಡಿಬಿಡೂಣೂ–ಅಂತ!"

ವೇಣಕ್ಕ ಹೇಳಿದರು :

"ಕುಮುದಾನ ಲಗ್ನದ್ದೇನು ದೊಡ್ಡಮಾತು ಬಿಡ್ರಿ ತುಂಗಮ್ಮಾ! ಕಲಿತ ಹುಡುಗಿ; ಚೆಲಿವಿ ಇದ್ದಾಳ; ಶ್ರೀಮಂತರ ಮಗಳು! ಆಕೀ ಲಗ್ನಕ್ಕ ಯಾತರ ಪ್ರತಿಬಂಧ ಅದ? ಏನ ಬರೂ ಅಡ್ಡಿ-ಆತಂಕಗಳೆಲ್ಲಾ ನಮ್ಮಂಥವ-ರಿಗೆ ಬರತಿರತಾವ. ಅದು ಇರಲಿ! ಈಗ ಒಂದು ವಿಷಯದ ಬಗ್ಗೆ ಮಾತನಾಡ ಬೇಕಾಗೇದ : ಅಂದ ಕನ್ಯಾನೋಡಲಿಕ್ಕೆ ಒಬ್ಬ ಕಪ್ಪುವರಾ ಬಂದಿದ್ದನಲ್ಲಾ! ಆತನ ಜೋಡಿ ಬಂದಿದ್ದರಲ್ಲಾ ಒಬ್ಬರು ಖಾದೀ ಹಾಕಿಕೊಂಡವರು! ಅವರ ಹೆಸರು ಅದೇನs ಕಾವೇರೀ....ಅಂ....ಹುಂ! ಅವರ ಹೆಸರು ರತ್ನಾಕರ ರಾಯರಂತ. ಅವರದ್ದೊಂದು ಪತ್ರ ಬಂದsದ ನಮ್ಮ ಮನಿಗೆ!"

'ರತ್ನಾಕರ' ಎಂಬ ಹೆಸರು ಕಿವಿಗೆ ಬಿದ್ದೊಡನೆಯೆ ಕುಮುದಾ ಚಕಿತ-ಳಾದಳು. ಆತುರ ತುಂಬಿದ ಕಣ್ಣುಗಳಿಂದ ಕಾವೇರಿಯ ಕಡೆಗೆ ನೋಡಲು ತೊಡಗಿದಳು. ತುಂಗಮ್ಮ ಕೇಳಿದರು :

"ಏನಂತ ಬರದಾರ ಪತ್ರದೊಳಗ? ಅಂದ ಒಲ್ಲೇ ಅಂತ ಹೇಳಿ ಹೋದ ಆ ವರ, ಈಗ ಮನಸು ತಿರುಗಿ, ಕಾವೇರಿನ್ನ ಮಾಡಿಕೋತೀನಿ ಅಂತ ಒಪ್ಪ್ಯಾನಂತೇನು!"

"ಛೇಛೇ! ಆ ಮಾತೇನೂ ಇಲ್ಲ ಆ ಪತ್ರದೊಳಗ!"

"ಹಾಂಗಾದರ ತಾನs ಮಾಡಿಕೋತಾನಂತೇನು?" ತುಂಗಮ್ಮ ಹೀಗೆ ಕೇಳಿದೊಡನೆಯೆ ಕುಮುದೆಯ ಕರುಳಿಗೆ ಕೆಂಜಿಗ ಕಡಿದಂತಾಯಿತು. ಎದೆ ಡಡಡಡಿಸಿತು ತಾನು ಏನು ಕೇಳಬೇಕಾಗುವುದೋ ಎಂದು ಅಸ್ಥಿರ ಭಾವ-

ದವಳಾಗಿ, ಮೈಯನ್ನೆಲ್ಲ ಕಿವಿಯಾಗಿಸಿಕೊಂಡು ಕುಳಿತಳು. ಒಂದೆರಡು ಸಲ ಚೆಲುವೆಯಾದ ಕಾವೇರಿಯ ಮುಖದತ್ತ ಸ್ಪರ್ಧೆಯ ನೋಟಗಳನ್ನು ಬೀರಿ ಹಿಂತೆಗೆದುಕೊಂಡಳು. ವೇಣಕ್ಕ ಹೇಳಿದರು:

“ ಅಂಥಾ ಗಂಡನ್ನ ಪಡಿಯೂ ಭಾಗ್ಯ ನಮ್ಮ ಕಾವೇರೀ ಹಣಿಯೊಳಗ ಹ್ಯಾಂಗ ಬರದಾನ್ರೆವಾ ಬ್ರಹ್ಮ ! ಕುಮುದಾ, ಈ ಪತ್ರ ತೆಗೆದುಕೋ ! ನೀನೇ ಇದರಲ್ಲಿ ಬರೆದದ್ದನೆಲ್ಲಾ ಓದಿ ಹೇಳು ! ಈ ಪತ್ರದೊಳಗ ಬರದದ್ದನ್ನ ಓದಿ, ಏನ ಮಾಡಬೇಕಂಬೂದು ನನಗ ತಿಳೀದ್ಹಾಂಗ ಆದದ್ದರಿಂದಲೇ ನಿಮ್ಮ ಕಡಿಗೆ ಓಡಿ ಬಂದೀನಿ. ಓದವ್ವಾ ಕುಮುದಾ ! ”

ಕುಮುದಾ ಆತುರಭಾವದಿಂದಲೆ ಪತ್ರದ ಮಡಿಕೆಯನ್ನು ಬಿಚ್ಚಿ ನೋಡಿದಳು; ಹಿಂದೆ ಮುಂದೆ ಹೊರಳಿಸಿ ನಿಟ್ಟಿಸಿದಳು. ಸುಂದರವಾದ ಅಕ್ಷರ-ಗಳಲ್ಲಿ ಬರೆದ ಸುದೀರ್ಘವಾದ ಪತ್ರವದು. ಓದಲು ಪ್ರಾರಂಭಿಸಿದಳು:

‘ ಸ್ವರಾಜ್ಯಭವನ ’ ನಗರ ವಿಸ್ತರಣ
ತಾ.. ೧೭—೬—೧೯೩೦ ಇಸ್ವಿ.

“ ಸವಿನಯ ನಮಸ್ಕಾರಗಳು

ಹಿರಿಯರಾದ ಗೋಪಾಲರಾಯರೆ,

ನನ್ನ ಈ ಅನಿರೀಕ್ಷಿತ ಪತ್ರ ತಮ್ಮನ್ನು ಆಶ್ಚರ್ಯಗೊಳಿಸಬಹುದು. ನಾನು ತಮಗೆ ಸಂಪೂರ್ಣ ಅಪರಿಚಿತನಾಗಿದ್ದರೂ, ಸ್ವಲ್ಪ ಪರಿಚಿತನೂ ಆಗಿ-ದ್ದೇನೆ. ಅಂದು ನನ್ನ ಸ್ನೇಹಿತ ಶ್ರೀ. ವೆಂಕಣ್ಣಾ, ತಮ್ಮ ಮಗಳನ್ನು ನೋಡ-ಲಿಕ್ಕೆ ಬಂದಿದ್ದಾಗ, ಆತನ ಜೊತೆಗೆ ನಾನೂ ಬಂದಿದ್ದೆ. ನನ್ನ ಖಾದಿಯ ಉಡಿಗೆ-ತೊಡಿಗೆಗಳನ್ನು ಅಂದು ನೋಡಿದ್ದ ತಮಗೆ, ಈ ಪತ್ರ ಬರೆಯು-ತ್ತಿರುವ ನನ್ನ ರೂಪ ನೆನಪಿಗೆ ಬರಬಹುದು. ನನ್ನ ಹೆಸರು ‘ ರತ್ನಾಕರ ’ ಎಂದಿದೆ. ಶ್ರೀ. ವೆಂಕಣ್ಣಾನ ಅಣ್ಣಾ ನನ್ನ ಹತ್ತಿರದ ಮಿತ್ರ ಆ ಸಂಬಂಧ-ದಿಂದಲೇ ನಾನಂದು ಆತನೊಂದಿಗೆ ತಮ್ಮಲ್ಲಿಗೆ ಕನ್ಯಾನಿರೀಕ್ಷಣೆಗೆಂದು ಬಂದಿದ್ದೆ. ನಾನೊಬ್ಬ ಸಮಾಜಸೇವಕ. ಅಂದು ತಮ್ಮಲ್ಲಿ ನಡೆದ ಕನ್ಯಾನಿರೀಕ್ಷೆಯ ನಾಟಕವೂ ಅದರ ವಿಷಾದಾಂತವೂ ನನ್ನ ಮನಸ್ಸಿಗೆ ತುಂಬ ನೋವನ್ನು ಉಂಟುಮಾಡಿದುವು.

ನಮ್ಮ ನಾಡಿನಲ್ಲಿ ಎಲ್ಲ ತರುಣರೂ ಮದುವೆ ಮಾಡಿಕೊಳ್ಳಬೇಕೆಂದು ಹಂಬಲಿಸುವರೇನೋ ನಿಜ; ಆದರೆ ಮದುವೆಯೆಂದರೇನೆಂಬುದನ್ನು ಸರಿಯಾಗಿ

ಅರ್ಥಮಾಡಿಕೊಂಡು ನಡೆಯುವವರು ತೀರ ಅಪೂರ್ವ. ತನ್ನ ಕೈ ಹಿಡಿಯಬೇಕಾದ ಕನ್ಯೆ ಹೀಗೆ ಹೀಗೆ ಇರಬೇಕೆಂದು ಏನೇನೋ ಹುಚ್ಚು ಹುಚ್ಚು ಕಲ್ಪನೆಗಳನ್ನು ಮಾಡಿಕೊಂಡು ತರುಣರು, ಕೈಗೆ ಸಿಕ್ಕ ಎಂತೆಂತಹ ರತ್ನಗಳನ್ನೂ—ಅವುಗಳ ಬೆಲೆ ತಿಳಿದುಕೊಳ್ಳದೆ—ಹೇಗೆ ಎಸೆದು ಬಿಡುತ್ತಾನೆಂಬುದನ್ನು ನಾನು ಅನೇಕ ಸಲ ನೋಡಿದ್ದೇನೆ; ಮೊನ್ನೆಯ ದಿನ ತಮ್ಮ ಮನೆಯಲ್ಲಿಯೂ ಅದನ್ನು ಕಣ್ಣಾರೆ ಕಂಡು ಕಳವಳಪಟ್ಟಿದ್ದೇನೆ. ಜೊತೆಗಾತಿಯನ್ನಾಗಿ ಮಾಡಿಕೊಳ್ಳಲಿರುವ ಕನ್ಯೆಯ ಕುಲೀನತೆ, ಬೆಳೆದ ವಾತಾವರಣ, ಸುಸಂಸ್ಕೃತ ಮನಸ್ಸು, ಸೌಮ್ಯಸ್ವಭಾವ, ದೇಹದ ಆರೋಗ್ಯ, ಸಹಜಸೌಂದರ್ಯ ಇವುಗಳ ಕಡೆಗೆ ನೋಡಿ ಆಯ್ದುಕೊಂಡರೆ, ವೈವಾಹಿಕ ಜೀವನ ಸುಖಮಯವಾಗುವುದೆಂಬುದರ ಕಲ್ಪನೆ ನಮ್ಮಲ್ಲಿ ಬಹಳ ತರುಣರಲ್ಲಿಲ್ಲ. ಎಂತಲೇ ತಮ್ಮ ಹುಚ್ಚು ಆಭಾಸಾತ್ಮಕ ಅಪೇಕ್ಷೆಗಳಿಗನುಸಾರವಾದ ಕನ್ಯೆಯನ್ನು ಆರಿಸಲು ಹವಣಿಸುವರು. ಹೊರಮಿಂಚಿಗೆ ಮರುಳಾಗಿ ಒಳಗಿನ ಜೊಳ್ಳುಪೊಳ್ಳುತನಗಳ ಕಡೆಗೆ ದೃಷ್ಟಿಯನ್ನೇ ಹರಿಸರು. ಬೆಳ್ಳಗಿರುವುದೆಂದು ಬೆಣಚುಗಲ್ಲನ್ನು ಆರಿಸುವರೇ ಹೊರತು, ಚಿನ್ನದ ಅದಿರುಗಲ್ಲನ್ನು ಕಣ್ಣೆತ್ತಿ ನೋಡದಿರುವರು ಹೀಗಾದುದರಿಂದಲೇ ಪ್ರೀತಿವಿವಾಹವೆಂದು ಮಾಡಿಕೊಂಡ ಸಂಸಾರದಲ್ಲಿಯೂ ದ್ವೇಷ-ವೈಷಮ್ಯಗಳ ತಾಂಡವ ನಡೆದು, ಸಾರವಿಲ್ಲದ ದಾಂಪತ್ಯಜೀವನವು ಎಲ್ಲೆಲ್ಲಿಯೂ ಕಣ್ಣಿಗೆ ಬೀಳುತ್ತಲಿದೆ. ಇಂತಹ ಸಾರರಹಿತ ಸಂಸಾರಗಳು ನಮ್ಮ ಸಮಾಜವೃಕ್ಷದ ಬೇರಿಗೆ ಬೆನ್ನೀರೆರೆದು ಅದನ್ನು ನಿಷ್ಫಲಗೊಳಿಸುತ್ತಲಿದೆಯೆಂಬ ಸಂಗತಿ, ನಮ್ಮ ಎಂತೆಂತಹ ಸಮಾಜ ಧುರೀಣರೆನಿಸಿಕೊಳ್ಳುವವರ ತಲೆಯಲ್ಲಿಯೂ ಬರಲೊಲ್ಲದಾಗಿದೆ. ದೇಶದ ದುರ್ದೈವ. ರಾಷ್ಟ್ರದ ಸಮಾಜದ ಪ್ರಗತಿಗೆ ಮೂಲಕಾರಣವಾದ ಸಾಂಸಾರಿಕ ಜೀವನವು ಸುಖಮಯವಾಗಬೇಕಾದರೆ, ನಮ್ಮಲ್ಲಿಯ ಹೆಣ್ಣು-ಗಂಡುಗಳಲ್ಲಿ—ಹಿರಿಯರಲ್ಲಿ—ಆಯ್ಕೆಯ ಕಲ್ಪನೆ ತೀರ ಬದಲಾಗಬೇಕಾಗಿದೆ. ಗಂಡು ಹೆಣ್ಣನ್ನು ಆರಿಸುವುದರಲ್ಲಷ್ಟೇ ಈ ಬದಲಾವಣೆ ಬೇಕೆಂದಲ್ಲ; ಹೆಣ್ಣಿಗೆ ಗಂಡನ್ನು ಆರಿಸುವ ತಾಯಿ-ತಂದೆಗಳ ಭಾವನೆಯಲ್ಲಿಯೂ ಸಂಪೂರ್ಣ ಬದಲಾವಣೆಯಾಗಬೇಕಾದುದು ಅನಿವಾರ್ಯವಾಗಿದೆ. ಸಿರಿವಂತಿಕೆಯ ಮೋಹದಿಂದ ಹೀನವರನಿಗೆ ಕನ್ಯೆಯನ್ನು ಕೊಡುವುದು ತಪ್ಪೆನಿಸುವಂತೆಯೇ, ಹೊರಮಿಂಚಿನ

ಮೋಹದಿಂದ ಸಂಸ್ಕೃತಿಹೀನ ಕನ್ಯೆಯನ್ನು ಕೈಹಿಡಿಯಬಯಸುವುದೂ ತಪ್ಪೆನಿಸುವುದು.' ತಪ್ಪೆನಿಸುವುದಿಷ್ಟೇ ಅಲ್ಲ; ಈ ತಪ್ಪು, ಸಂಬಂಧಿತ ವ್ಯಕ್ತಿಗಳ ಬಾಳನ್ನೇ ಹಾಳುಮಾಡುವುದು.

ತಮ್ಮ ವಿಷಯವನ್ನೂ ತಮ್ಮ ಮನೆತನದ ವಿಚಾರವನ್ನೂ ಕೇಳಿ ಅರಿತಿದ್ದೇನೆ. ತಮ್ಮ ದಾಕ್ಷಿಣ್ಯಸ್ವಭಾವವನ್ನು ನನ್ನ ಸೂಕ್ಷ್ಮದೃಷ್ಟಿಗಳಿಂದ ಕಂಡುಕೊಂಡೂ ಇದ್ದೇನೆ. ತಮ್ಮ ಮಗಳನ್ನು ಅಂದು ನೋಡಿದ ನನಗೆ, 'ಇವಳು ಎಂತಹ ಒಳ್ಳೆಯ ವಾತಾವರಣದಲ್ಲಿ ಬೆಳೆದಿರಬಹುದು!' ಎನಿಸಿತು. ಆಕೆಯ ನಿಷ್ಕಲ್ಮಷವಾದ ಮುಖಭಾವದಲ್ಲಿ ಶಾಲೀನತೆ ಒಡೆದು ತೋರುತ್ತಿದ್ದಿತು. ಚೆಲುವಿನಲ್ಲಿಯೂ ಪ್ರಕೃತಿದೇವಿ ತಮ್ಮ ಮಗಳನ್ನು ದರಿದ್ರಳನ್ನಾಗಿಸಿಲ್ಲ. ಇಷ್ಟೆಲ್ಲ ಬಣ್ಣನೆಯ ಮಾತುಗಳನ್ನು ಬರೆಯುತ್ತಿರುವುದನ್ನು ನೋಡಿ, ತಮ್ಮ ಮಗಳನ್ನು ನಾನೇ ಮದುವೆಯಾಗಲು ಅಪೇಕ್ಷಿಸುತ್ತಿದ್ದೇನೆಂದು ದಯೆಯಿಟ್ಟು ಭಾವಿಸಬೇಡಿ. ಆದರೆ, ಅಂತಹ ಲಕ್ಷಣವತಿ ಗುಣವತಿಯಾದ ಹುಡುಗಿ, ಯೋಗ್ಯವರನ ಕೈಹಿಡಿಯಬೇಕೆಂದು ಮಾತ್ರ ನನ್ನ ಮನಸ್ಸು ಅಪೇಕ್ಷಿಸುತ್ತದೆ. ವೆಂಕಣ್ಣ ತಮ್ಮ ಮಗಳನ್ನು ನಿರಾಕರಿಸಿದುದು ಆಕೆಯ ಸುದೈವವೇ ಎಂದು ನಾನು ತಿಳಿದುಕೊಂಡಿದ್ದೇನೆ ಏಕೆಂದರೆ, ಮಗಳ ಮದುವೆಯ ಆತುರದಲ್ಲಿರುವ ತಾವು, ತಮ್ಮ ಕಲ್ಪನೆಯಂತೆ ಅವನಲ್ಲಿಯ ವರನೆನಿಸುವ ಕೆಲವು ಸಾಂಪ್ರದಾಯಿಕ ಲಕ್ಷಣಗಳನ್ನು ಒಪ್ಪಿಕೊಂಡುದರಿಂದ, ಅವನ ಒಪ್ಪಿಗೆ ದೊರೆತಿದ್ದರೆ ಮಗಳನ್ನು ಕೊಟ್ಟು ಮದುವೆ ಮಾಡಿಯೇ ಮಾಡುತ್ತಿದ್ದಿರಿ. ಇದರಿಂದ ತಮ್ಮ ಮಗಳ ಭವಿಷ್ಯವೇನೂ ಸುಖಮಯವೆನಿಸುತ್ತಿರಲಿಲ್ಲವೆಂದು ಹೇಳಿದರೆ, ನನ್ನನ್ನು ದಯೆಯಿಟ್ಟು ವಿಪರೀತವಾಗಿ ಭಾವಿಸಬೇಡಿ. ಅಪರಿಚಿತರಾದ ತಮಗೆ ಇಷ್ಟೆಲ್ಲ ಮಾತುಗಳನ್ನು ಬರೆಯುವುದು ಲೋಕದ ದೃಷ್ಟಿಯಿಂದ ಅಧಿಕಪ್ರಸಂಗವೆನಿಸುವುದೆಂಬುದರ ಕಲ್ಪನೆ ನನಗೆ ಪೂರ್ಣವಾಗಿ ಇದೆ. ಆದರೂ ಸಮಾಜಸೇವೆಯ ಬುದ್ಧಿ, ಆಗಾಗ ನನ್ನ ಕಡೆಯಿಂದ ಇಂತಹ ಅಧಿಕಪ್ರಸಂಗತನದ ಕಾರ್ಯಗಳನ್ನು ಮಾಡಿಸುತ್ತದೆ.

ವರಶೋಧನೆಗಾಗಿ ನಿರ್ವಿಣ್ಣರಾದ ತಮಗೆ, ತಮ್ಮ ಮಗಳಿಗೆ ಯೋಗ್ಯನಾದ ವರನೊಬ್ಬನನ್ನು ತೋರಿಸಿಕೊಡಬೇಕೆಂದು ಬಯಸಿ ಈ ಕಾಗದ

ಬರೆದಿರುವೆನು. ನನ್ನ ಮನದ ನಿಲುವೆಯೇನೆಂಬುದು ತಮಗೆ ಅರಿಕೆಯಾಗ-ಬೇಕೆಂಬ ಅಪೇಕ್ಷೆಯಿಂದಲೆ, ಪತ್ರದ ಪ್ರಾರಂಭದಲ್ಲಿ, ನಾನು ಕಂಡುಕೊಂಡ ಕೆಲವೊಂದು ತಾತ್ತ್ವಿಕ ಸಂಗತಿಗಳನ್ನು ನಿರೂಪಿಸಿರುವೆನು.

ನಾನು ತಮಗೆ ತೋರಿಸಬೇಕೆಂದಿರುವ ವರ ಇನ್ನಾರೂ ಅಲ್ಲ. ಮೊನ್ನೆ ಮೊನ್ನೆ ತಮ್ಮಲ್ಲಿಗೆ ಬಂದಿದ್ದ ವೆಂಕಣ್ಣನ ಅಣ್ಣನಾತ. ವೆಂಕಣ್ಣನಿಗಿಂತ ಮೂರುವರ್ಷಕ್ಕೆ ಹಿರಿಯ. ನಾನೂ ಅವನೂ ಸೇರಿ ಕಾಲೇಜಿನಲ್ಲಿ ಓದುತ್ತಿ-ದ್ದೆವು. ತುಂಬ ಬುದ್ಧಿವಂತ; ವಿವೇಕಿಯಾದ ಜೀವ; ತುಂಬ ಆದರ್ಶವಾದಿ. ವ್ರತನಿಷ್ಠ ಜೀವನಪಾಡುದರಿಂದ, ಆರೋಗ್ಯಶಾಲಿಯೂ ಆಗಿದ್ದಾನೆ. ರೂಪವೂ ಚೆನ್ನಾಗಿದೆ. ಮದುವೆಯಾದರೆ ಗಂಡ-ಹೆಂಡತಿ ಉಂಡುಕೊಂಡು ತೃಪ್ತಿಯಿಂದ ಸಂಸಾರ ಸಾಗಿಸುವಷ್ಟು ಆತನ ದುಡಿಮೆಯಿದೆ. ಜ್ಯೂನಿಯರ್ ಬಿ. ಎ. ತರಗತಿಯಲ್ಲಿ ಓದುತ್ತಿರುವಾಗಲೇ, ನಾಡ ನಾಯಕರ ಕರೆಗೆ ಓಕೊಟ್ಟು ಕಾಲೇಜನ್ನು ಬಿಟ್ಟು, ತನ್ನ ಹಳ್ಳಿಗೆ ಹೊರಟುಹೋದ. ಅಲ್ಲಿ ತನ್ನ ಸ್ವಂತ ದುಡಿಮೆಯಿಂದಲೇ, ಸ್ವಾವಲಂಬಿಯಾಗಿ ಹೊಟ್ಟೆಹೊರೆದುಕೊಳ್ಳುತ್ತ, ಹಳ್ಳಿ-ಗರ ಉದ್ಧಾರದ ಕಾರ್ಯವನ್ನೂ ನಡೆಯಿಸಿದ್ದಾನೆ. ಹಳ್ಳಿಗರೆಲ್ಲ ಅವನನ್ನು ತಮ್ಮ ಪ್ರಾಣವೆಂದು ಭಾವಿಸಿದ್ದಾರೆ. ತಮ್ಮ ಮಗಳು ಆತನ ಜೊತೆಗಾತಿ-ಯಾದರೆ, ಆಕೆಯ ಜೀವನವೂ ಸುಖಮಯವಾದೀತು; ಅವನ ಜೀವನವೂ ಸರಾಗವಾಗಿ ಸಾಗೀತು. ಮನೆಯಲ್ಲಿ ಇನ್ನಾರೂ ಇಲ್ಲ; ವಿಧವೆಯಾದ ಚಿಕ್ಕಮ್ಮ ಒಬ್ಬಾಕೆ ಇದ್ದಾರೆ. ತಂದೆ-ತಾಯಿಗಳಿರುವಾಗ, ಈ ಚಿಕ್ಕಮ್ಮನಿಗೆ ಅವನನ್ನು ದತ್ತಕನನ್ನಾಗಿ ಮಾಡಿದುದರಿಂದ, ಅವನ ಆಸ್ತಿ-ವೃತ್ತಿಗಳು ಬೇರೆ ಯಾಗಿಯೇ ಇವೆ. ದತ್ತಕ ತೆಗೆದುಕೊಂಡ ಚಿಕ್ಕಮ್ಮ, ವಂಶಾಭಿವೃದ್ಧಿಯ ಅಪೇಕ್ಷೆಯಿಂದ ಆತನಿಗೆ ಮದುವೆ ಮಾಡಿಕೊಳ್ಳೆಂದು ಒಂದೆ ಸವನೆ ಗಂಟು-ಬಿದ್ದಿದ್ದಾಳೆ. ಆದರೆ, ಆದರ್ಶನಿಷ್ಠನಾದ ಆತನಿಗೆ ತಕ್ಕ ಕನ್ಯೆಯು ಇದು-ವರೆಗೂ ದೊರೆತಿಲ್ಲವಾದುದರಿಂದ, ಮದುವೆ ಮಾಡಿಕೊಂಡಿಲ್ಲ. ಮದುವೆಯಾಗಿ ಚಿಕ್ಕಮ್ಮನ ಅಪೇಕ್ಷೆಯನ್ನೂ ಪೂರಯಿಸಬೇಕಾಗಿದೆ ಅವನಿಗೆ. ತಕ್ಕ ಕನ್ಯೆ ಸಿಕ್ಕರೆ, ಮದುವೆ ಮಾಡಿಕೊಳ್ಳುವುದಾಗಿಯೂ ಹೇಳುತ್ತಾನೆ. ತಾವು ತಮ್ಮ ಮಗಳನ್ನು ಆತನಿಗೆ ಕೊಡುವುದಾಗಿ ವಿಚಾರ ಮಾಡಿದರೆ, ತಮಗೆ ಎಲ್ಲ ಬಗೆಯ ಸಹಕಾರ-ಸಹಾಯಗಳನ್ನೂ ನಾನು ಕೊಡಬಲ್ಲೆ. ಆತ ಇರುವ

ಊರು ಹಳ್ಳಿ; ಸರಕಾರದ ನೌಕರಿಯನ್ನೇನೂ ಮಾಡುವುದಿಲ್ಲ. ಪಟ್ಟಣಕ್ಕೆ ಬಂದು ಮನೆಮಾಡಿಕೊಂಡಿರಬೇಕೆಂಬ ಆಕಾಂಕ್ಷೆಯವನೂ ಅಲ್ಲ. ಇವೆಲ್ಲ ಸಂಗತಿಗಳನ್ನೂ ಲಕ್ಷ್ಯದಲ್ಲಿ ಇರಿಸಿಕೊಂಡು ವಿಚಾರಮಾಡಬೇಕು. ತಮಗೆ ಆ ವರನು ಒಪ್ಪಿಗೆಯೆನಿಸಿದರೆ, ಮೇಲೆ ಬರೆದ ನನ್ನ ವಿಳಾಸಕ್ಕೆ ಕಾಗದ ಬರೆದು ತಿಳುಹಬೇಕು. ಒಪ್ಪಿಗೆಯಾಗದಿದ್ದರೆ ಉತ್ತರ ಬರೆಯದಿದ್ದರೂ ಸರಿಯೆ. ತಮ್ಮ ಮೇಲೆ ನನ್ನ ಒತ್ತಾಯ ಯಾವ ಬಗೆಯದೂ ಇಲ್ಲ. ಬೇರೆ ಒಳ್ಳೆಯ-ವರ ದೊರೆತು, ತಮ್ಮ ಮಗಳ ಮದುವೆ ಬೇಗನೆ ಆದರೂ ನನಗೆ ಸಂತೋಷ.

ತಮ್ಮ ವಿಶ್ವಾಸದ

**ರತ್ನಾಕರ ನಾಯ್ಕ."**

ವಿವಿಧ ಅನುಭಾವಗಳನ್ನು ವ್ಯಕ್ತಗೊಳಿಸುತ್ತ, ನಡುನಡುವೆ ನಿಂತು ನಿಂತು, ಕುಮುದಾ ಪತ್ರವನ್ನು ಓದಿ ತೋರಿಸಿದಳು. ಓದುವುದು ಮುಗಿದ ಮೇಲೆ, ಒಂದೆರಡು ನಿಮಿಷ ಯಾರೂ ಏನನೂ ಮಾತನಾಡಲಿಲ್ಲ. ಕಾವೇರಿ ಆಶಾಪೂರಿತ ದೃಷ್ಟಿಗಳಿಂದ ತಾಯಿಯ ಕಡೆಗೊಮ್ಮೆ, ತುಂಗಮ್ಮನ ಕಡೆ-ಗೊಮ್ಮೆ ನೋಡುತ್ತ ಕುಳಿತಿದ್ದಳು ಕುಮುದೆಯು ಪತ್ರದ ಅಕ್ಷರಗಳಲ್ಲಿಯೆ ತನ್ನ ಕಣ್ಣುಗಳನ್ನು ತೊಡಕಿಸಿದ್ದಳು. ತುಂಗಮ್ಮ ಮಾತನಾಡಿದರು :

"ಎಷ್ಟು ಚೆಂದಾಗಿ ಪತ್ರಾ ಬರದಾನ್ರೇ ವೇಣಕ್ಕಾ? ಕುಮುದಾ, ಆ ದಿನಾ ನೀನು ಕಾಲಮ್ಯಾಲ ಚಹಾ ಚೆಲ್ಲಿದ ರತ್ನಾಕರ ಇವನs ಕಾಣಸತದ ಅಲ್ಲ? ಪತ್ರಾ ಬರದದ್ದು ನೋಡಿದರ, ಎಂಥಾ ಶಾಣ್ಯಾ ಇದ್ದಾಂಗ ಕಾಣಿಸತಾನ; ಆದರ, ಸರಕಾರೀ ನೌಕರೀ ಮಾಡೂದು ಬಿಟ್ಟು, ಚಳವಳೀ ಒಳಗ ಯಾಕ ಸೇರ್ಯಾನೋ ಏನೋ ! "

ಈಗ ಕುಮುದಾ ತನ್ನ ಆಶೆಯ ಕಣ್ಣುಗಳಿಂದ ತಾಯಿಯನ್ನು ನೋಡಿದಳು. ಬಂದ ನಿಟ್ಟುಸಿರನ್ನು ಕಡಿ-ಕಡಿದು ಚೂರುಚೂರು ಮಾಡಿ ಹೊರಕ್ಕೆ ಹಾಕಿದಳು; ಬಳಿಕ ಹೇಳಿದಳು :

" ಎಲ್ಲಾರೂ ಮಾಡುವಷ್ಟು ಸರಕಾರೀ ನೌಕರೀಪುರೇ ಎಲ್ಲಿರತಾವ? ಅಲ್ಲದs, ಎಲ್ಲಾರೂ ಸರಕಾರೀ ನೌಕರೀ ಮಾಡಿಕೋತs ಹೊರಟರ, ನಮ್ಮ ದೇಶಕ್ಕ ಸ್ವಾತಂತ್ರ್ಯ ಸಿಗೂದರೇ ಹ್ಯಾಂಗ ? "

ಕಾವೇರಿ ತಟ್ಟನೆ ನುಡಿದಳು:

"ನಿಜಾ ಅದ ನಿನ್ನ ಮಾತು ಕುಮುದಾ! ಸರಕಾರೀ ನೌಕರೀ ಮಾಡುವವರಷ್ಟs ಮನುಷ್ಯರೂ ಅಂಬೂ ತಿಳಿವಳಿಕಿ, ನಮ್ಮೊಳಗಿಂದ ಹೋಗ-ಬೇಕಾಗೇದ! ಅದರಂತೇ ಹಳ್ಳಿ-ಪಟ್ಟಣದ ವಿಚಾರ! ಪಟ್ಟಣದೊಳಗ ಇರುವವ-ರಷ್ಟs ಹೆಚ್ಚಿನವರೂ ಅಂಬೂ ಭಾವನಾ ತೀರಾ ತಪ್ಪನಿಸತsದ! ಒಂದು ಗುಲಾಬೀ ಗಿಡಾ ಇರತsದ ಅನ್ನು! ಅದನ್ನ ಹಳ್ಳೀ ಊರ ಹಿತ್ತಲೊಳಗ ಹಚ್ಚಿದರ, ಅದಕ್ಕ ಹೂ ಆಗೂದಿಲ್ಲೇನು? ಅಲ್ಲಿ ಅರಳಿದ ಹೂವಿಗೆ ಸುಗಂಧ ಇರೂದಿಲ್ಲೇನು?"

ಕುಮುದಾ ಮೆಲುನಗೆ ನಗುತ್ತ ಹೇಳಿದಳು:

"ಅಬಚೀ, ನಿಮ್ಮ ಮಗಳ ಮನಸಿನ ಅಭಿಪ್ರಾಯ ತಿಳೀತೋ ಇಲ್ಲೋ? ಇನ್ನ ಯಾತಕ್ಕ ಹೆಚ್ಚಿಗೆ ವಿಚಾರ ಮಾಡತೀರಿ? ಹಳ್ಳೀ ಊರೊಳಗ ಇದ್ದರೂ ಸುಶಿಕ್ಷಿತರಿದ್ದಾರ; ಉಣ್ಣಲಿಕ್ಕೆ ತಿನ್ನಲಿಕ್ಕೆ ತೊಂದರೆ ಪಡಬೇಕಾದ ಕಾರಣೆಲ್ಲ. ಅಂದಮ್ಯಾಲ ಯಾಕ ಒಪ್ಪಿಕೊಳ್ಳಬಾರದು ನೀವು?"

ವೇಣಕ್ಕ ಹೇಳಿದರು:

"ನನಗ ಯಾವುದೂ ತಿಳಿವ್ಹಾಂಗಾಗೇದs ಕುಮುದಾ! ಹೆಣ್ಣು ಹೆತ್ತ ಕರುಳು! ಏನು ಮಾಡಿದರ ಕಾವೇರೀ ಜೀವನ ಸುಖವಾದೀತಂಬೂದು ಬಗೀಹರಿದ್ಹಾಂಗ ಆಗೇದ. ಮುನ್ಯಾಗ ಅವರಂತೂ ವರಾ ಹುಡುಕಿ ಹುಡುಕಿ ಬ್ಯಾಸತ್ತು ಹೋದದ್ದರಿಂದ, ಈ ಪತ್ರಕ್ಕ ಒಪ್ಪಿಗೀ ಉತ್ತರಾ ಬರೆದುಕಳಿಸ-ಬೇಕಂತ ನಿರ್ಣಯಿಸಿಕೊಂಡು ಬಿಟ್ಟಾರ ಹಡೆದವರ ತ್ರಾಸ ತಪ್ಪಿಸೂ ಉದ್ದೇಶದಿಂದಲೋ ಏನೋ, ಈಕೀನೂ ಅವರ ಮಾತು ಎತ್ತಿ ಹಿಡೀಲಿಕ್ಕೆ ಹತ್ಯಾಳ! ನಾ ಏನು ಮಾಡಲಿ ತುಂಗವ್ಮಾ!"

ತುಂಗಮ್ಮ ಹೇಳಿದರು:

"ಇನ್ನೇನೂ ಮಾತಬ್ಯಾಡ್ರಿ! ಅವರಿಗೆ ಒಪ್ಪಿಗೀ ಉತ್ತರಾ ಬರೆಸಿರಿ. ಬಂದು ಅವರು ಹುಡುಗಿನ್ನ ನೋಡಲಿ; ನೀವೂ ಹುಡುಗನ್ನ ನೋಡ್ರಿ! ಅನುಕೂಲ ಕಾಲ ತಾನಾಗೇ ಕೂಡಿ ಬಂದಿರೂ ಹಾಂಗ ಕಾಣಿಸತsದ. ದೇವರು ಯಾರ್‍ಯಾರ ಮುಖಾಂತರವೋ ಹ್ಯಾಂಗಹ್ಯಾಂಗೋ ಸಹಾಯ ಮಾಡಿಸತಿರತಾನ. ಈ ರತ್ನಾಕರ ಅಂದರ ನಿಮಗ ದೇವದೂತನೇ ಸರಿ!"

ತಾಯಿಯ ಕೊನೆಯ ಮಾತು, ಕುಮುದೆಯ ಹೃದಯವನ್ನು ಅಲುಗಿಸಿದಂತೆ ಮಾಡಿತು. ತುಂಗಮ್ಮನಾಡಿದ ಮಾತು ಕಾವೇರಿಯ ಮುಖದಿಂದ ಸಮಾಧಾನದ ನಿಟ್ಟುಸಿರನ್ನು ಹೊರಡಿಸಿತು. ವೇಣಕ್ಕನ ಮನಸ್ಸಿನ ಉಯ್ಯಾಲೆಯಾಟ ಮಾತ್ರ ಏನು ಮಾಡಿದರೂ ಒಂದು ನೆಲೆಗೆ ಬಂದು ನಿಲ್ಲಲೊಲ್ಲದು.

## ೬ನೆಯ ಪರಿಚ್ಛೇದ

ನಗರದ ಹೊರವಳಯದಲ್ಲಿ ರೈಲ್ವೆನಿಲ್ದಾಣದ ಬಳಿಯ ಭವ್ಯವಾದ ಬಂಗಲೆಯೆ ಇತ್ತೀಚೆಗೆ 'ಸ್ವರಾಜ್ಯಭವನ' ಎಂಬ ಹಲಗೆಯನ್ನು ಹಚ್ಚಿಕೊಂಡಿದೆ. ಜಿಲ್ಲಾ ಕಾಂಗ್ರೆಸ್ ಕಚೇರಿ, ಈ ಬಂಗಲೆಯ ಒಂದು ಭಾಗದಲ್ಲಿದೆ. ಮಿಕ್ಕ ಭಾಗದಲ್ಲೆಲ್ಲ ಸತ್ಯಾಗ್ರಹ ಚಳವಳಿಯ ಕೆಲಸಗಾರರೂ ಸ್ವಯಂಸೇವಕರೂ ವಸತಿ ಮಾಡಿಕೊಂಡಿದ್ದಾರೆ. ಇವರೆಲ್ಲ ಕೆಲಸದ ಮೇಲೆ ಇರುವಾಗ, ಹೊರಗೆ ಹೋಗಿರುವರು; ಕೆಲಸ ತೀರಿದ ಮೇಲೆ ಈ ಭವನದಲ್ಲಿ ಬಂದು ತಂಗುವರು. ಕೆಲಸಗಾರರಿಗೂ ಸ್ವಯಂಸೇವಕರಿಗೂ ಸ್ನಾನ–ಊಟ–ಉಪಾಹಾರಗಳ ಏರ್ಪಾಡೂ ಇಲ್ಲಿಯೆ ಆಗಿರುವುದು. ಸ್ವಯಂಸೇವಕರ ನಾಯಕನಾದ ರತ್ನಾಕರನಿಗಾಗಿ ಪ್ರತ್ಯೇಕವಾಗಿ ಕಿರುಮನೆಯೊಂದನ್ನು ನಿಯಮಿಸಿ ಕೊಡಲಾಗಿದೆ. ಅಲ್ಲಿಯೇ ಅವನ ಬಿಡಾರ. ಮಹಾತ್ಮಾಜಿಯವರು ಉಪ್ಪಿನ ಕಾಯಿದೆಯನ್ನು ಮುರಿಯುವ ಸತ್ಯಾಗ್ರಹವನ್ನು ಘೋಷಿಸಿ, ದಾಂಡಿಯಲ್ಲಿ ಬಂಧಿತರಾಗಿ ಕೆಲವೆ ದಿನಗಳಾಗಿವೆ. ಹಿಂದೆ ನಡೆಯಿಸಿದ ಉಗ್ರವಾದ ಕಾನೂನುಭಂಗದ ಚಳವಳಿಯನ್ನು ಒಮ್ಮೆಲೇ ಉಪಸಂಹರಿಸಿಕೊಂಡು, ಇದೀಗ ಉಪ್ಪನ್ನು ಮನೆ-ಮನೆಯಲ್ಲಿ ಮಾಡಿ ಮಾರಾಟ ಮಾಡುವ ಸಾಂಕೇತಿಕ ಕಾನೂನುಭಂಗ ಚಳವಳಿಯನ್ನು ಪ್ರಾರಂಭಿಸಿದುದಕ್ಕಾಗಿ, ಗಾಂಧಿಯವರನ್ನು ಅನೇಕರು ಬೀಳುಗಳೆಯುತ್ತಲಿದ್ದಾರೆ ಈ ಚಳವಳಿಯ ಚೇಷ್ಟೆಯೆಬ್ಬಿಸಿ ನಗೆಯಾಟವಾಡುವ ಹಿರಿಯರಿಗೂ ಕೊರತೆಯಿರಲಿಲ್ಲ. ಗಾಂಧಿಯವರ ಏಕನಿಷ್ಠ ಅನುಯಾಯಿಗಳನೇಕರಿಗೂ ಈ ಸಾಂಕೇತಿಕ ಕಾನೂನ ಭಂಗದ ಚಳವಳಿಯ ಅರ್ಥ ಸರಿಯಾಗಿ ಆಗಿರಲಿಲ್ಲ ಆದರೂ ಗಾಂಧೀಜಿಯವರ ವಿಷಯದಲ್ಲಿರುವ ಅಚಲಶ್ರದ್ಧೆಯ ಮೂಲಕ, ಅವರ ಮಾತಿನಂತೆ ನಡೆದುಕೊಳ್ಳಲು ಸಿದ್ಧರಾಗಿದ್ದರು ಸರಕಾರವು ಕೂಡ ಈ ಚಳವಳಿಯ ಅರ್ಥವನ್ನು ಸಂಪೂರ್ಣ

ವಾಗಿ ಮಾಡಿಕೊಳ್ಳದೆ, ಅದರ ಕಡೆಗೆ ಔದಾಸೀನ್ಯದಿಂದಲೇ ನೋಡುತ್ತಿದ್ದಿ-ತಾದರೂ, ಗಾಂಧೀಜಿಯವರ ರಾಜಕಾರ್ಯ ಚತುತ್ವತಿಯ ಅನುಭವ ಅದಕ್ಕಿದ್ದುದರಿಂದ, ದೇಶದ ಎಲ್ಲಕಡೆಯ ಆಡಳಿತದ ಅಧಿಕಾರಿಗಳಿಗೂ ಪೂರ್ವ-ಜಾಗೃತಿಯ ಗುಪ್ತಸೂಚನೆಗಳನ್ನು ಕಳುಹಿದ್ದಿತು.

ಸ್ವರಾಜ್ಯಭವನದಲ್ಲಿ ನೆಲಸಿದ ಕೆಲಸಗಾರರೂ ಸ್ವಯಂಸೇವಕರೂ ರಾಷ್ಟ್ರಸೇವಾವ್ರತದ ದೀಕ್ಷೆಯನ್ನು ಪಡೆದವರು. ದೇಶಕ್ಕಾಗಿ ಮಾಡಬೇಕಾಗಿದ್ದ ತ್ಯಾಗದ ಸಂದರ್ಭವನ್ನರಿತು, ಎಲ್ಲರೂ ತಂತಮ್ಮ ಜೀವನದ ವ್ಯವಸಾಯ ಉದ್ಯಮಗಳನ್ನೂ ಶಾಲೆ-ಕಾಲೇಜುಗಳ ಶಿಕ್ಷಣವನ್ನೂ ಬಿಟ್ಟು, ಹೋರಾಟಕ್ಕಾಗಿ ಸಿದ್ಧರಾಗಿ ಬಂದವರು; ದೇಶದ ಸ್ವಾತಂತ್ರ್ಯದ ಎದುರು ಮನೆ-ಮಾರು, ಮಡದಿ-ಮಕ್ಕಳು—ಯಾವುದನ್ನೂ ಯಾರನ್ನೂ ಗಣಿಸದೆ, ಸರಕಾರ ಕೊಡಬಹುದಾದ ಕಷ್ಟ-ನಷ್ಟಗಳನ್ನು ಸಹಿಸಲು ಸಿದ್ಧರಾಗಿ ಬಂದ ಗಟ್ಟಿಗರು. ರತ್ನಾಕರನಂತಹ ವೀರತ್ಯಾಗಿಗಳೂ ಅವರಲ್ಲಿ ಹಲವು ಜನರು. ಆದರೆ ರತ್ನಾಕರನಲ್ಲಿರುವಂತಹ ಬುದ್ಧಿವೈಭವವೂ ಆತ್ಮಸಂಸ್ಕಾರವೂ ಕಾರ್ಯಕಾರಿ ಶಕ್ತಿಯೂ ಕಷ್ಟಸಹಿಷ್ಣುತೆಯೂ ಒಟ್ಟುಗೂಡಿ ಇರುವ ಕೆಲಸಗಾರರು ಮಾತ್ರ ವಿರಳರೆಂದೇ ಹೇಳಬಹುದು.

ರತ್ನಾಕರ ಮನೆಯಿಂದ ಶ್ರೀಮಂತನೇನೂ ಅಲ್ಲ. ಮಧ್ಯಮತರಗತಿಯ ಮನೆತನವೊಂದರಲ್ಲಿ ಹುಟ್ಟಿ ಬೆಳೆದವನು. ಚಿಕ್ಕತನದಲ್ಲಿಯೇ ತಂದೆ ಗತಿಸಿದುದರಿಂದ, ತಾಯಿಯ ಪಾಲನೆಯಲ್ಲಿ ಬಳೆದವನು. ತಂದೆಯ ಮರಣದ ತರುವಾಯ ಇವನ ತಾಯಿ ಸುಖವನ್ನೇನೂ ಕಾಣಲಿಲ್ಲ. ಸಾಲಕೊಟ್ಟ ಸಾವುಕಾರರಿಗೆ ಇದ್ದ ನಾಲ್ಕು ಹೊಲಗಳನ್ನು ಒತ್ತೆಯೆಂದು—ಅವರ ವಶಕ್ಕೆ—ಕೊಡಬೇಕಾಯಿತು. ಊರಲ್ಲಿಯ ದಾಯಾದಿಗಳೂ ಸಹಾನುಭೂತಿಯಿಂದ ನೋಡುವಂತಹ ಸುಸ್ವಭಾವಿಗಳಾಗಿ ಇರಲಿಲ್ಲವಾದುದರಿಂದ, ದುಃಖದ ದಾರಿಯಲ್ಲಿಯೆ ಅವಳು ತನ್ನ ಬದುಕನ್ನು ನಡೆಯಿಸಬೇಕಾಯಿತು. ತಾಯಿಯ ಅಣ್ಣ—ಎಂದರೆ ರತ್ನಾಕರನ ಸೋದರ ಮಾವ, ಹುಬ್ಬಳ್ಳಿಯ ಗಿರಣಿಯೊಂದರಲ್ಲಿ ಕಾರಕೂನನಾಗಿ ಇದ್ದ. ಸ್ವಂತದ ಹಳ್ಳಿ ಸತ್ತಿಗೆರೆಯಲ್ಲಿ ಹೊಟ್ಟೆ ತುಂಬಿಕೊಂಡಿರುವುದು ಕಷ್ಟವೆನಿಸಿದುದರಿಂದಲೂ, ಒಬ್ಬನೇ ಒಬ್ಬ ಮಗನಾದ ರತ್ನಾಕರನ ಭವಿಷ್ಯವನ್ನು ರೂಪಿಸಬೇಕಾಗಿ ಇದ್ದುದರಿಂದಲೂ, ರತ್ನಾಕರನ ತಾಯಿ ಹುಬ್ಬಳ್ಳಿಗೆ

ಬಂದು ಅಣ್ಣನ ಮನೆಯಲ್ಲಿಯೆ ನಿಂತುಕೊಂಡಳು. ದಾಸರು ಒಂದು ಮುತ್ತಿ-ನಂತಹ ತತ್ತ್ವದ ಮಾತನ್ನು ಹೇಳಿದ್ದಾರೆ ಗೊತ್ತೇ ? 'ಶಕ್ತನಾದರೆ ನಂಟರೆಲ್ಲ ಹಿತರು; ಅಶಕ್ತನಾದರೆ ಆಪ್ತಜನರೆ ವೈರಿಗಳು!' ರತ್ನಾಕರನ ತಾಯಿಗೆ ಈ ದಾಸರ ಮಾತಿನ ಅನುಭವ ಸಂಪೂರ್ಣವಾಗಿ ಬಂದಿತು. ಅಣ್ಣ ತನ್ನವನಾದರೆ ಅಣ್ಣನ ಹೆಂಡತಿ ತನ್ನವಳೇ ? ಸಾಮಾನ್ಯ ಸಂಸಾರಿಗೆ ಹೆಂಡತಿ ಹೆಚ್ಚಿನವಳೋ, ತಂಗಿ ಹೆಚ್ಚಿನವಳೋ ? ಸಂಸಾರದಲ್ಲಿ ನಿತ್ಯ ಭೋಗಿಸಬೇಕಾದ ಕಹಿಬಾಳಿಗಿಂತ ತಂಗಿಯ ಪ್ರೀತಿಯ ಸಿಹಿಯನ್ನು ಕಳೆದುಕೊಳ್ಳುವುದು ಇದ್ದುದರಲ್ಲಿ ಅನು-ಕೂಲವಲ್ಲವೆ ? ಹುಬ್ಬಳ್ಳಿಗೆ ಬಂದು ಅಣ್ಣನ ಮನೆಯಲ್ಲಿ ಮೂರು ವರ್ಷ-ಗಳನ್ನು ಕಳೆಯುವುದರಲ್ಲಿಯೇ, ರತ್ನಾಕರನ ತಾಯಿಗೆ, ತಾವು ಅರೆಹೊಟ್ಟೆ ಬರಿಹೊಟ್ಟೆಯಿಂದ ಜೀವನ ನಡೆಯಿಸಿದರೂ ಅಡ್ಡಿಯಿಲ್ಲ—ಬೇರೆ ಮನೆ ಮಾಡಿಕೊಂಡು ಇರುವುದರಲ್ಲಿಯೆ ಕ್ಷೇಮವಿದೆ—ಎನಿಸಿತು. ಆಗ ರತ್ನಾಕರ-ನಿಗೆ ಹತ್ತುವರ್ಷದ ವಯಸ್ಸು. ಕನ್ನಡ ನಾಲ್ಕನೆಯ ತರಗತಿಯನ್ನು ಮುಗಿಸಿ, ವಿದ್ಯಾರ್ಥಿವೇತನದ ಪರೀಕ್ಷೆಗೆ ಕುಳಿತು, ಅದರಲ್ಲಿಯೂ ಗೆಲವನ್ನು ಪಡೆದಿದ್ದ. ಸರಿ, ತಾಯಿ-ಮಗನ ಬೇರೆ ಮನೆಯ ಜೀವನ ಪ್ರಾರಂಭ-ವಾಯಿತು; ಅದರೊಂದಿಗೆ ರತ್ನಾಕರನ ಮಾಧ್ಯಮಿಕ ಶಿಕ್ಷಣವೂ ಮೊದಲಾ-ಯಿತು. ಹಳ್ಳಿಯಿಂದ ಬರುವ ಅಲ್ಪ ಸ್ವಲ್ಪ ಹೊಲದ ಹಣ, ಕರುಣೆದೋರಿ ಕೊಟ್ಟರೆ ಸೋದರಮಾವನ ಸ್ವಲ್ಪ ನೆರವು—ಇವುಗಳಿಂದ ರತ್ನಾಕರನ ಮನೆ-ತನ ಮುಂದುವರೆಯಿತು. ನೆರೆ-ಹೊರೆಯ ಮನೆಗಳಲ್ಲಿ ಆಗಾಗ ಕೆಲಸಕ್ಕೆ ಹೋಗಿ, ತಾಯಿ ತರುತ್ತಿದ್ದ ದುಡಿಮೆಯ ಪ್ರತಿಫಲವೂ ಸಂಸಾರದ ಕೊರತೆ-ಯನ್ನು ಕಳೆಯಲು ನೆರವಾಗುತ್ತಿತ್ತು. ಬುದ್ಧಿವಂತನಾದ ವಿವೇಕಿಯಾದ ರತ್ನಾಕರನೊಬ್ಬನೇ ತಾಯಿಯ ಜೀವಿತದ ಆಶೆಗೆ ಪೋಷಕ. ಮಗನ ಶುಭ-ಭವಿಷ್ಯದ ಬಗೆಗೆ ಆ ತಾಯಿಗೆ ತುಂಬುನಂಬುಗೆ; ಎಂತಲೇ ರತ್ನಾಕರನನ್ನು ತನ್ನ ಕಣ್ಣಗೊಂಬೆಯಂತೆ ನೋಡಿಕೊಳ್ಳುತ್ತ ಆ ತಾಯಿ, ತನ್ನ ಕಷ್ಟದ ಬಾಳಿನಲ್ಲಿಯೆ ಸುಖದ ಕನಸನ್ನು ಕಾಣುತ್ತ, ಸಂಸಾರವನ್ನು ಮುಂದುವರೆ-ಸಿದ್ದಳು.

ತಾಯಿಯ ಆಶೆಯನ್ನು ಭಂಗಿಸುವ ಮಗನಲ್ಲವೆಂಬುದನ್ನು ರತ್ನಾಕರ ತನ್ನ ನಡೆವಳಿಕೆಯಿಂದ ತೋರಿಸುತ್ತ ಹೊರಟಿದ್ದ. ಮಾಧ್ಯಮಿಕ ಶಾಲೆಯ

ಕೊನೆಯ ತರಗತಿಯ ವರೆಗೂ ಅವನು ತನ್ನ ವಿದ್ಯಾರ್ಥಿವೇತನ ಕಳೆದು-ಕೊಂಡಿರಲಿಲ್ಲ. ಶಾಲೆಯ ಎಲ್ಲ ಚಟುವಟಿಕೆಗಳಲ್ಲಿಯೂ ಮುಂದಾಳಾಗಿ ನಿಲ್ಲುವನು. ದಿನದ ಪಾಠಗಳಲ್ಲಂತೂ ಸರಿಯೇ ಸರಿ! ಚರ್ಚಾಸಭೆಯಲ್ಲಿ ರತ್ನಾಕರನ ವಾದವೇ ಗೆಲ್ಲುವುದು. ಲೇಖನಸ್ಪರ್ಧೆಗಳಲ್ಲಿ ರತ್ನಾಕರನನ್ನು ಮೀರಿಸಿದವರಿಲ್ಲ. ಆಟ ಪಾಟಗಳಲ್ಲಿಯೂ ಹಿಂದೆ ಬೀಳುವವನಲ್ಲ. ಆದುದ-ರಿಂದಲೆ ಶಾಲೆಯ ಅಧ್ಯಾಪಕರಿಗೆಲ್ಲ ರತ್ನಾಕರನೆಂದರೆ ಅಚ್ಚು-ಮೆಚ್ಚಿನ ವಿದ್ಯಾರ್ಥಿ. ಬುದ್ಧಿವಂತಿಕೆ ಆತನ ಬಡತನದ ಬಾಳನ್ನು ಎಲ್ಲರ ಕಣ್ಣಿಂದಲೂ ಮರೆಮಾಡಿತು. ಎಂತಲೇ ಅನೇಕ ಜನ ಶ್ರೀಮಂತ ವಿದ್ಯಾರ್ಥಿಗಳು ಕೂಡ ರತ್ನಾಕರನಿಗೆ ಗೆಳೆಯರಾಗಿದ್ದರು.

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ರತ್ನಾಕರ ಕೇಂದ್ರಕ್ಕೆ ಮೊದಲನೆಯವನಾಗಿ ಉತ್ತೀರ್ಣನಾದನೆಂಬ ವರ್ತಮಾನ ಬಂದ ದಿನ, ತಾಯಿ ತಾನು ಅನುಭವಿಸಿದ ದುಃಖವನ್ನೆಲ್ಲ ಮರೆತುಬಿಟ್ಟಳು. ರತ್ನಾಕರನ ಸೋದರಮಾವನಿಗೂ ತುಂಬ ಹೆಮ್ಮೆಯೆನಿಸಿತು. ಆತನ ಹೆಂಡತಿಗೆ ಕೂಡ ಆ ದಿನ ರತ್ನಾಕರನ ವಿಷಯದಲ್ಲಿ ಸೌಹಾರ್ದದ ಸೆಲೆಯೊಡೆಯಿತು. ಮದುವೆಯ ವಯಸ್ಸಿಗೆ ಬಂದಿದ್ದ ತಮ್ಮ ಹಿರಿಯ ಮಗಳು ಸುಭದ್ರೆಗೆ, ಬೇರೆ ಕಡೆಗೆ ವರನನ್ನು ನೋಡಬೇಕಾದ ಕಾರಣವೇನೂ ಇಲ್ಲವೆಂಬ ಭಾವನೆ ಆಕೆಯ ಹೃದಯವನ್ನು ಹಗುರುಗೊಳಿಸಿತು. ಪರೀಕ್ಷೆಯ ತೀರ್ಮಾನ ತಿಳಿದ ಮರುದಿನವೇ ಮನೆಯಲ್ಲಿ ಸತ್ಯನಾರಾಯಣನ ಪೂಜೆಯನ್ನು ಮಾಡಿಸಿ, ರತ್ನಾಕರನಿಗೂ ಅವನ ತಾಯಿಗೂ ಔತಣ ಹೇಳಿಸಿದಳು. ರತ್ನಾಕರನು ಮನೆಗೆ ಊಟಕ್ಕೆ ಬಂದಾಗ, ಆ ಸೋದರತ್ತೆ, ರತ್ನಾಕರನನ್ನು ಅಳಿಯತನದ ಆದರಭಾವದಿಂದಲೇ ಕಂಡಳು. ಸುಭದ್ರೆಯಂತೂ ಧನ್ಯಭಾವ ತುಂಬಿದ ಕಣ್ಣುಗಳಿಂದ ಆಗಾಗ ರತ್ನಾಕರ-ನನ್ನು ನೋಡುವಳು; ಏನೇನನ್ನೋ ನೆನೆದುಕೊಂಡು, ನಾಚಿಕೆಯ ಮೆಲು-ನಗೆಯನ್ನು ತಳೆಯುವಳು.

ಅದೇ ವರ್ಷ ರತ್ನಾಕರ ಕಾಲೇಜನ್ನು ಸೇರಿದ. ವಿದ್ಯಾರ್ಥಿವೇತನ-ವಂತೂ ಅವನ ಬೆನ್ನು ಬಿಟ್ಟಿರಲಿಲ್ಲ. ಕಾಲೇಜಿನ ಮುಖ್ಯ ವಿದ್ಯಾರ್ಥಿವೇತನ-ವಲ್ಲದೆ, ಬೇರೆಯ ಎರಡು ಉಪವೇತನಗಳೂ ಅವನಿಗೆ ದೊರೆತಿದ್ದುವು. ಬಡತನದ ಜೀವನದ ಅಭ್ಯಾಸವಿದ್ದುದರಿಂದ, ಕಾಲೇಜು ಜೀ[illegible]ದ ಕಾಲದಲ್ಲಿ

ಊಟ-ಉಡಿಗೆ-ಪುಸ್ತಕ ಮೊದಲಾದುವುಗಳ ಯಾವ ಕೊರತೆಯೂ ಅವನನ್ನು ಭಾಧಿಸಲಿಲ್ಲ. ಎಲ್ಲವನ್ನೂ ಹೇಗೋ ಹೇಗೋ ನಡೆಯಿಸಿಕೊಂಡು ಹೋಗಿ, ತಾಯಿಗೆ ಬರೆಯುವ ಪ್ರತಿಯೊಂದು ಪತ್ರದಲ್ಲಿಯೂ ತಾನು ಸೌಖ್ಯವಾಗಿ ಇದ್ದೇನೆಂದು ಬರೆದು ತಿಳುಹುತ್ತಿದ್ದ.

ಕಾಲೇಜಿಗೆ ಬಂದ ಮೊದಲ ವರ್ಷದಲ್ಲಿಯೆ ರತ್ನಾಕರನಿಗೆ ರಂಗಣ್ಣನ ಪರಿಚಯವಾಯಿತು. ಈತ ಕಾಲೇಜಿಗೆ ಒಂದು ವರ್ಷ ಹಳಬನಾಗಿದ್ದರೂ, ರತ್ನಾಕರನ ತರಗತಿಯ ವಿದ್ಯಾರ್ಥಿಯೆ ಆಗಿದ್ದ. ಮೊದಲನೆಯ ವರ್ಷ ಪ್ರೀವಿಯಸ್ ಪರೀಕ್ಷೆಯಲ್ಲಿ ನಾಪಾಸಾದುದರಿಂದ, ಈ ವರ್ಷ ಮತ್ತೆ ಅದೇ ತರಗತಿಯಲ್ಲಿಯೇ ಓದಲು ಸಿದ್ಧನಾಗಿ, ಅದೇ ಕಾಲೇಜಿನಲ್ಲಿಯೆ ಶಿಕ್ಷಣ ಮುಂದುವರಿಸಿದ್ದ. ಇದ್ದುದರಲ್ಲಿಯೆ ರಂಗಣ್ಣ ಅನುಕೂಲವಂತ. ತಿಂಗ-ತಿಂಗಳಿಗೂ ಮನೆಯಿಂದ ಅಂಚೆಯ ಮುಖಾಂತರ ಹಣ ಬರುತ್ತಿತ್ತು. ಖಾನಾವಳಿಯಲ್ಲಿ ಊಟ ಮಾಡುತ್ತಿದ್ದ; ವಸತಿಗಾಗಿ ನಗರವಿಸ್ತರಣದಲ್ಲಿಯೆ ಒಂದು ಕೋಣೆಯನ್ನು ಹಿಡಿದಿದ್ದ. ರತ್ನಾಕರ-ರಂಗಣ್ಣರಲ್ಲಿ ಪರಿಚಯ ಬೆಳೆದ ಮೇಲೆ, ರತ್ನಾಕರ ಬಹಳ ದಿನಗಳ ವರೆಗೇನೂ ಪ್ರತ್ಯೇಕವಾಗಿ ಇರಲಿಲ್ಲ. ರಂಗಣ್ಣನ ಪ್ರಶಸ್ತವಾದ ಕೋಣೆಯಲ್ಲಿಯೇ ತನ್ನ ಬೀಡಾರವನ್ನೂ ಹಾಕಿದ. ರಂಗಣ್ಣನ ಜೀವನವೂ ಸರಳವಾದುದು, ಶಾಂತವಾದುದು. ಸ್ವಭಾವ ಸೌಮ್ಯ-ವಾದುದು ಹೊರಗಿನ ಯಾವ ಗಡಬಡಿಯೂ ಅವನಿಗೆ ಬೇಕಾಗದು. ಮಹಾತ್ಮಾಗಾಂಧೀಜಿಯವರ ನಿಃಸೀಮಭಕ್ತ. ವಾರವಾರವೂ ಬರುವ 'ಯಂಗ್ ಇಂಡಿಯಾ' ಪತ್ರಿಕೆಯನ್ನು ಭಕ್ತಿಯಿಂದ ಮನಸ್ಸುಕೊಟ್ಟು ಓದುವನು. ಗಾಂಧೀಜಿಯವರು ಬರೆದ ಗ್ರಂಥಗಳನ್ನೆಲ್ಲ ಆತನ ಅಭ್ಯಾಸದ ಟೇಬಲ್ಲಿನ ಮೇಲೆ ನೋಡಬಹುದಾಗಿದ್ದಿತು. ಅದೇ ಟೇಬಲ್ಲಿನ ಮೇಲೆ ಕನ್ನಡಿಯ ಕಟ್ಟನಲ್ಲಿ ಹಾಕಿದ -ಮಹಾತ್ಮಾಜಿಯವರ- ಛಾಯಾಚಿತ್ರವೊಂದಿದ್ದು, ರಂಗಣ್ಣ ಅದಕ್ಕೆ ನಿತ್ಯವೂ ಹೂಗಳನ್ನೇರಿಸಿ ಪೂಜಿಸುತ್ತಿದ್ದನು. ಆತನ ಗಾಂಧೀ ಸಾಹಿತ್ಯವಾಚನದ ಹಂಬಲವೇ, ಪ್ರೀವಿಯಸ್ ಪರೀಕ್ಷೆಯಲ್ಲಿ ಮೊದಲನೆಯ ವರ್ಷ ಅವನನ್ನು ನಾಪಾಸ್ ಮಾಡಿತೆಂದು ಜನ ಮಾತನಾಡುತ್ತಿದ್ದರು.

ರಂಗಣ್ಣನ ಸ್ವಭಾವ-ಸಹವಾಸಗಳು ರತ್ನಾಕರನಿಗೆ ತುಂಬ ಇಷ್ಟವೆನಿ-ಸಿದುವು. ಇಬ್ಬರೂ ಒಂದೆ ಕಡೆಗೆ ಉಣ್ಣುವರು; ಒಂದೆ ಕಡೆಗೆ ಇರುವರು; ಒಂದೆ ತರಗತಿಯಲ್ಲಿ ಓದುವರು. ಇಬ್ಬರ ಪಾಠವೂ ಸರಾಗವಾಗಿ ಸಾಗಿತು.

ವರ್ಷದ ಕೊನೆಯ ಪರೀಕ್ಷೆಯಲ್ಲಿ ಇಬ್ಬರೂ ಉತ್ತೀರ್ಣರಾದರು; ಆದರೆ ರತ್ನಾಕರ ಎಂದಿನಂತೆ ಮೊದಲನೆಯ ತರಗತಿಯಲ್ಲಿ—ರಂಗಣ್ಣ ಸಾಮಾನ್ಯ ತರಗತಿಯಲ್ಲಿ. ಈ ವೈಷಮ್ಯ ಗಾಂಧೀತತ್ತ್ವಜ್ಞಾನದಿಂದ ಸಂಸ್ಕಾರಗೊಂಡ ರಂಗಣ್ಣನಲ್ಲಿ ಯಾವ ಸ್ಪರ್ಧೆ-ಮತ್ಸರಗಳನ್ನೂ ಹುಟ್ಟಿಸಲಿಲ್ಲ. ಬೇಸಗೆಯ ಬಿಡುವಿನಲ್ಲಿ ರಂಗಣ್ಣ ರತ್ನಾಕರನನ್ನು ತನ್ನ ಹಳ್ಳಿ ಮುದ್ದಾಪುರಕ್ಕೂ ಕರೆದುಕೊಂಡು ಹೋಗಿದ್ದ. ಆಗಲೇ ರಂಗಣ್ಣನ ತಮ್ಮ ವೆಂಕಣ್ಣನ ಪರಿಚಯವೂ ರತ್ನಾಕರನಿಗೆ ಆಯಿತು. ವೆಂಕಣ್ಣನು ಆಗ ಬೆಳಗಾಂವಿಯಲ್ಲಿ-ತನ್ನ ಸೋದರತ್ತೆಯ ಬಳಿಯಲ್ಲಿ—ಇದ್ದುಕೊಂಡು, ಅಲ್ಲಿಯೆ ಇಂಗ್ಲಿಷ್ ಶಾಲೆಗೆ ಹೋಗುತ್ತಿದ್ದ. ಆಗ ಅವನು ಓದುತ್ತಿದ್ದುದು ಹೈಸ್ಕೂಲಿನ ಆರನೆಯ ತರಗತಿಯಲ್ಲಿ. ಆಗಿನ ಅವನ ಕ್ರಾಪು, ಸೂಟು, ಬೂಟು, ಹ್ಯಾಟುಗಳನ್ನು ನೋಡಿದವರಿಗೆ, ಹುಡುಗ ತುಂಬ ಸೊಗಸುಗಾರ – ಎನಿಸುವಂತಿದ್ದ. ರಂಗಣ್ಣನ ಮನೆಯಲ್ಲಿ ಹೆಚ್ಚು ಜನರಾರೂ ಇರಲಿಲ್ಲ. ಹೆಂಡತಿ ತೀರಿಹೋದುದರಿಂದ ಒಂದು ಬಗೆಯ ವಾನಪ್ರಸ್ಥಜೀವನವನ್ನು ನಡೆಯಿಸಿದಂತಿದ್ದ ತಂದೆ, ಗಂಡನನ್ನು ಕಳೆದುಕೊಂಡ ಚಿಕ್ಕಮ್ಮ ಇಬ್ಬರೇ ಇಬ್ಬರು. ಸುಸಂಸ್ಕೃತ ಹೃದಯದ ತಂದೆಗೆ, ಇದ್ದ ಇಬ್ಬರು ಮಕ್ಕಳೂ ಸುಶಿಕ್ಷಿತರಾಗಬೇಕೆಂದು ಅಪೇಕ್ಷೆ. ಆದುದರಿಂದಲೇ ತಮ್ಮ ಯಾವ ತೊಂದರೆಯನ್ನೂ ಗಣನೆಗೆ ತಾರದೆ, ಇಬ್ಬರನ್ನೂ ಪಟ್ಟಣದಲ್ಲಿರಿಸಿ, ಇಂಗ್ಲಿಷ್ ಕಲಿಸಲು ಮನಸ್ಸು ಮಾಡಿದ್ದರು. ರತ್ನಾಕರ ಬಿಡುವಿನ ಕೆಲವು ದಿವಸಗಳನ್ನು ಮುದ್ದಾಪುರದಲ್ಲಿ ಕಳೆದು, ಆ ಮೇಲೆ ತಾಯಿಯನ್ನು ಕಾಣಲು ಹುಬ್ಬಳ್ಳಿಗೆ ಹೊರಟುಬಂದಿದ್ದ.

ಇಬ್ಬರ ವಿದ್ಯಾರ್ಥಿಜೀವನವೂ ಮೊದಲನೆಯ ವರ್ಷದಂತೆ ಎರಡನೆಯ ವರ್ಷವೂ ಸಾಗಿತು. ಆಗಲೂ ರಂಗಣ್ಣನಿಗೆ ಗಾಂಧಿಯವರ ವಿಚಾರ-ತತ್ತ್ವಜ್ಞಾನಗಳ ಅಭ್ಯಾಸದ ಕಡೆಗೇ ವಿಶೇಷ ಲಕ್ಷ್ಯ. ರತ್ನಾಕರನೂ ಅದನ್ನು ನೋಡುತ್ತಿದ್ದನಾದರೂ ಆತನ ಹರಿತವಾದ ಬುದ್ಧಿ-ಚುರುಕುತನಗಳು, ಎಲ್ಲ ಲೌಕಿಕದಲ್ಲಿಯೂ ಓಡಾಡುತ್ತಿದ್ದುವು ತತ್ತ್ವಜ್ಞಾನಕ್ಕಿಂತ ರಾಜಕಾರ್ಯದಲ್ಲಿ ಆತನಿಗೆ ಹೆಚ್ಚಿನ ಆಸಕ್ತಿ. ಆದುದರಿಂದಲೇ ರತ್ನಾಕರ, ತನ್ನ ಹೆಚ್ಚಿನ ಓದನ್ನು ಆ ದೃಷ್ಟಿಯಿಂದಲೆ ಓದುತ್ತಿದ್ದ. ಮದರಾಸಿನ ಹಿಂದೂ ಪತ್ರಿಕೆ, ಮುಂಬಯಿಯ ' ಕ್ರಾನಿಕಲ್ ' ' ಟೈಮ್ಸ್ ಆಫ್ ಇಂಡಿಯಾ ' ಪುಣೆಯ ಮರಾಠಿ ಪತ್ರಿಕೆ ' ಕೇಸರಿ, '

ಗಾಂಧೀಜಿಯವರ 'ಯಂಗ್ ಇಂಡಿಯಾ' ಎಲ್ಲವನ್ನೂ ರಾಜಕಾರ್ಯದ ಅಭ್ಯಾಸದ ದೃಷ್ಟಿಯಿಂದಲೇ ನೋಡುತ್ತಿದ್ದ.

ಇದೇ ವರ್ಷದ ಪೌಷ್ಯಮಾಸದಲ್ಲಿ, ಇದ್ದುದಿದ್ದ ಹಾಗೆಯೆ ರಂಗಣ್ಣನ ತಂದೆ ತೀರಿಹೋದ ಕಾಗದ ಬಂದಿತು. ಮೃದುಹೃದಯದ ರಂಗಣ್ಣ ತುಂಬ ನೊಂದುಕೊಂಡ. ಸಣ್ಣ ಹುಡುಗರಂತೆ ತಂದೆಯನ್ನು ನೆನೆ-ನೆನೆದು ಅಳಲು ತೊಡಗಿದ. ಆಗ ರತ್ನಾಕರ ಅವನನ್ನು ಕರೆದುಕೊಂಡು ಮತ್ತೊಮ್ಮೆ ಮುದ್ದಾಪುರಕ್ಕೆ ಹೋದ. ಉತ್ತರಕ್ರಿಯೆಯ ಎಲ್ಲ ವಿಧಿಗಳು ಮುಗಿಯುವ ವರೆಗೂ ರಂಗಣ್ಣನ ಜೊತೆಯಲ್ಲಿಯೆ ಇದ್ದ. ಆಗ ಕೂಡಿದ ರಂಗಣ್ಣನ ಆಪ್ತೇಷ್ಟರೆಲ್ಲರ ಪರಿಚಯವೂ ರತ್ನಾಕರನಿಗಾಯಿತು. ಎಲ್ಲರೊಂದಿಗೂ ಹೊಂದಿಕೊಂಡು ಹೋಗುವ ಸ್ವಭಾವದ ಮೂಲಕ, ರತ್ನಾಕರ ಎಲ್ಲರಿಗೂ ತಮ್ಮವನೇ ಆಗಿಬಿಟ್ಟ. ಉತ್ತರಕ್ರಿಯೆಯ ದಿನಗಳು ಮುಗಿದ ಮೇಲೆ, ರತ್ನಾಕರ ರಂಗಣ್ಣನಿಗೆ ಅನೇಕ ರೀತಿಯಲ್ಲಿ ಸಮಾಧಾನದ ಮಾತುಗಳನ್ನು ಹೇಳಿ ಪಟ್ಟಣಕ್ಕೆ ಕರೆದುತಂದು, ಕಾಲೇಜಿನ ಅಭ್ಯಾಸಕ್ಕೆ ತೊಡಗಿಸಿದ. ತಂದೆಯ ಅಗಲಿಕೆಯ ದುಃಖದ ನೆನಪು ಆತನಿಗೆ ಆಗದಂತೆ ಎಚ್ಚರದಿಂದ ಅವನನ್ನು ನೋಡಿಕೊಳ್ಳುತ್ತಿದ್ದ.

ಇಂಟರ್ ಪರೀಕ್ಷೆಯಲ್ಲಿಯೂ ಇಬ್ಬರೂ ಉತ್ತೀರ್ಣರಾದರು. 'ಯಥಾಪೂರ್ವಮಕಲ್ಪಯೇತ್!' ರತ್ನಾಕರ ಮೊದಲನೆಯ ತರಗತಿ; ರಂಗಣ್ಣ ಸಾಮಾನ್ಯ ತರಗತಿ. ಅವನ ತಮ್ಮ ವೆಂಕಣ್ಣ, ಆ ವರ್ಷ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ನಾಪಾಸಾಗಿದ್ದ. ಬೇಸಗೆಯ ಬಿಡುವಿನ ಕೊನೆಯ ದಿನಗಳಲ್ಲಿ ರತ್ನಾಕರ ರಂಗಣ್ಣನೂರಿಗೆ ಹೋದ. ಅವನಲ್ಲಿ ತಲೆದೋರಿದ್ದ ಔದಾಸೀನ್ಯವನ್ನು ತೊಡೆದು ಹಾಕಿ, ಮತ್ತೆ ತನ್ನ ಜೊತೆಗೆ ಕಾಲೇಜಿಗೆ ಕರೆದು ಕೊಂಡು ಬಂದ. ವೆಂಕಣ್ಣ ಮತ್ತೆ ಬೆಳಗಾಂವಿಗೇ ಹೊರಟು ಹೋದ. ರತ್ನಾಕರ ಹಳ್ಳಿಗೆ ಹೋದಾಗ, ವೆಂಕಣ್ಣ ಅವನೊಂದಿಗೆ ಆಡುವ ಮಾತುಗಳೆಂದರೆ ನಾಟಕ, ಚಲಚ್ಚಿತ್ರ, ನಟ-ನಟಿಯರು, ಅವರ ಸಂಗೀತ-ಅಭಿನಯಗಳು ಇವುಗಳನ್ನು ಕುರಿತುವುಗಳೇ. ರತ್ನಾಕರನಿಗೆ ಇವೆಲ್ಲ ಪ್ರೀತಿಯ ವಿಷಯಗಳಲ್ಲವಾದರೂ, ವೆಂಕಣ್ಣನ ಹರಟೆಯಲ್ಲಿ ಪ್ರೀತಿಯಿಂದ ಭಾಗವಹಿಸಿ, ಆತನ ಸ್ವಭಾವ-ಅಭಿರುಚಿಗಳನ್ನು ಅರಿತುಕೊಳ್ಳುತ್ತಿದ್ದನು. ನಡು-ನಡುವೆ ಆತನಿಗೆ ಕರ್ತವ್ಯಜಾಗೃತಿಯ ಸೂಚನೆಗಳನ್ನೂ ಕೊಡುತ್ತಿದ್ದನು. ವೆಂಕಣ್ಣ ಇವನ ಸೂಚನೆಗಳನ್ನು ಲಕ್ಷ್ಯಿಸುತ್ತಿದ್ದನೋ ಇಲ್ಲವೊ!

ರತ್ನಾಕರ, ರಂಗಣ್ಣ ಇಬ್ಬರ ಜ್ಯೂನಿಯರ್ .ಬಿ. ಎ. ವರ್ಷದ ಮೊದ-ಲನೆಯ ಆರುತಿಂಗಳು ಕಳೆದುವು. ಆಗಲೆ ರಂಗಣ್ಣನ ಹಳ್ಳಿಯ ಭಾಗದತ್ತ ತೀಕ್ಷ್ಣವಾದ ಬರಗಾಲ ಬಿದ್ದಿದೆಯೆಂಬ ವರ್ತಮಾನ ಬಂದಿತು ರಾಮದುರ್ಗದ ನಾಡೆಂದರೆ ಯಾವಾಗಲೂ ಬರಗಾಲದ ನಾಡು. ಈ ವರ್ಷ ಒಂದೆ ಒಂದು ಮಳೆಯೂ ಬೀಳದುದರಿಂದ, ಭೂಮಿ ಬೀಜಗಳನ್ನು ಕೂಡ ಕಂಡಿರಲಿಲ್ಲ. ಜನರಿಗೆ ಕಾಳಿಲ್ಲ, ದನಗಳಿಗೆ ಮೇವಿಲ್ಲ. ಕೆರೆ-ಬಾವಿಗಳೆಲ್ಲ ಬತ್ತಿಹೋದುದ-ರಿಂದ ಅನೇಕ ಕಡೆಗೆ ಕುಡಿಯಲು ನೀರು ಕೂಡ ಸಿಕ್ಕುತ್ತಿರಲಿಲ್ಲ. ರಾಷ್ಟ್ರೀಯ ಮಹಾಸಭೆಯ ಮುಂದಾಳುಗಳು ಅಲ್ಲಿ ಪರಿಹಾರೋಪಾಯವನ್ನುಕೈಕೊಂಡು, ಆ ಕಾರ್ಯಕ್ಕಾಗಿ ಸ್ವಯಂ ಸೇವಕರನ್ನು ಅಪೇಕ್ಷಿಸಿ ಪತ್ರಿಕೆಯಲ್ಲಿ ಪ್ರಕಟನೆ ಕೊಟ್ಟರು. ಮಹಾತ್ಮಾಜಿಯವರ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿಯೂ ರಾಮದುರ್ಗ ಭಾಗದ ಬರಗಾಲದ ವಿಷಯದಲ್ಲಿ ತುಂಬ ಪರಿಣಾಮಕಾರಿ-ಯಾದ ಲೇಖನ ಪ್ರಕಟವಾಯಿತು. ಆಗ ರಂಗಣ್ಣ ತುಂಬ ಅಸ್ಥಿರಮನಸ್ಕನಾದ. ತನ್ನ ಹಳ್ಳಿಗರ ಕಷ್ಟ-ನಷ್ಟಗಳ ಪರಿಹಾರ ಕಾರ್ಯದಲ್ಲಿ ತಾನೂ ಭಾಗವಹಿಸ ಬೇಕೆಂಬ ಸಂಕಲ್ಪವನ್ನು ಗಟ್ಟಿಗೊಳಿಸಿದ. ಇದರಿಂದ ಆತನ ಮನಸ್ಸನ್ನು ತಿರುಗಿಸುವುದು ರತ್ನಾಕರನಿಗೆ ಅಸಾಧ್ಯವಾಯಿತು; ತಿರುಗಿಸಬಾರದೆಂದೂ ಎನಿಸಿತು. ಮೌನದಿಂದಲೇ ಸಮ್ಮತಿಯನ್ನು ಸೂಚಿಸಿದ. ರಂಗಣ್ಣ ತನ್ನ ಕಾಲೇಜಿನ ಅಭ್ಯಾಸದ ಆಶೆಯನ್ನು ಬಿಟ್ಟು ಮರುದಿನವೇ ತನ್ನ ಹಳ್ಳಿಗೆ ಹೋಗಿ, ಪರಿಹಾರ ಸಮಿತಿಯ ಕಾರ್ಯದಲ್ಲಿ ಸೇರಿಕೊಂಡ. ರತ್ನಾಕರನಿಗೂ ಹೋಗ-ಬೇಕೆನಿಸಿತಾದರೂ, ಅವನ ಜ್ಞಾನಾಭಿಲಾಷೆಯೂ ಅದಕ್ಕೆ ಸದ್ಯ ದೊರೆತಿರುವ ಅನುಕೂಲ ಪರಿಸ್ಥಿತಿಯ ವಿಚಾರವೂ ಹೊಯ್ದಾಡುವ ಮನವನ್ನು ತಡೆದು ಹಿಡಿದುವು. ಆದರೂ ಎರಡು ಮೂರು ಸಲ ರಂಗಣ್ಣನ ಹಳ್ಳಿಗೆ ಹೋಗಿ ಅಲ್ಲಿ ನಡೆದಿರುವ ಪರಿಹಾರಕಾರ್ಯವನ್ನು ಪ್ರತ್ಯಕ್ಷವಾಗಿ ನೋಡಿಬಂದ. ರಂಗಣ್ಣನ ಕಾರ್ಯ ತುಂಬ ಪ್ರಭಾವಶಾಲಿಯಾಗಿದ್ದಿತು. ಆತನ ಪ್ರಾಮಾ-ಣಿಕ ಜನಸೇವೆ ತನು-ಮನ-ಧನದಿಂದಲೂ ನಡೆದಿತ್ತು. ರತ್ನಾಕರ ಅವನ ಕಾರ್ಯವನ್ನು ನೋಡಿ, ಸಂತೋಷಪಟ್ಟು, ಒಳಗೊಳಗೆ ಧನ್ಯತೆಯನ್ನು ಸಲ್ಲಿಸಿ ಮರಳಿ ಬಂದಿದ್ದನು. ಮರುವರ್ಷದ ಸುಗ್ಗಿಯ ವರೆಗೂ ಈ ಪರಿಹಾರ ಸಮಿತಿಯ ಕಾರ್ಯ ಅಬಾಧಿತವಾಗಿ ನಡೆಯಬೇಕಾಗಿದ್ದಿತಾದುದರಿಂದ, ಆ

ವರ್ಷ ರಂಗಣ್ಣ ಕಾಲೇಜಿಗೆ ಮರಳುವುದಿಲ್ಲವೆಂಬುದನ್ನು ರತ್ನಾಕರನು ಅರಿತು ಕೊಂಡ. ಕಾಲೇಜಿನ ವರ್ಷ ಮುಗಿದು ಬೇಸಗೆಯ ಬಿಡುವಾಗಲು, ಒಂದೆರಡು ದಿನ ಮಾತ್ರ ಹುಬ್ಬಳ್ಳಿಗೆ ಹೋಗಿ ತಾಯಿಯ ಬಳಿಯಲ್ಲಿದ್ದು, ಆ ಮೇಲೆ ಅವಳ ಒಪ್ಪಿಗೆಯನ್ನು ಪಡೆದುಕೊಂಡು ರತ್ನಾಕರ, ತಾನೂ ಮುದ್ದಾ-ಪುರಕ್ಕೆ ಹೋದ; ಬಿಡುವು ಮುಗಿಯುವ ವರೆಗೂ ಸ್ವಯಂಸೇವಕನಾಗಿದ್ದು-ಕೊಂಡು ರಂಗಣ್ಣನ ಕಾರ್ಯದಲ್ಲಿ ಸಹಕರಿಸಿದ. ಬಿಡುವಿನ ಕೊನೆಯ ದಿನ ಬಂದಾಗ, ರಂಗಣ್ಣ ಬರುವುದು ಸದ್ಯದಲ್ಲಿಯಂತೂ ಸಾಧ್ಯವಿಲ್ಲವೆಂಬುದನ್ನು ಮನಗಂಡು, ಅನಿವಾರ್ಯವಾಗಿ ತಾನೊಬ್ಬನೇ ಮರಳಿಬಂದು ಕಾಲೇಜಿಗೆ ಸೇರಿಕೊಂಡ.

ರಂಗಣ್ಣ ಇಲ್ಲದ ಏಕಾಕಿ ಜೀವನ ರತ್ನಾಕರನಿಗೆ ಭಣಭಣವೆನಿಸಲು ತೊಡಗಿತು. ಆದರೆ ಆತನು ನಡೆಯಿಸಿದ ಜೀವನಸಾರ್ಥಕತೆಯ ಕಾರ್ಯದ ಸ್ಮರಣೆ ಅವನಿಗೆ ಸಮಾಧಾನವನ್ನು ಒದವಿಸುತ್ತಿದ್ದಿತು. ಆ ವರ್ಷ ಮಳೆಗಾಲ ಚೆನ್ನಾಗಿ ಕೆಲಸ ಮಾಡಲು ತೊಡಗಿತು. ಎಲ್ಲ ಕಡೆಯಲ್ಲಿಯಂತೆ ರಾಮದುರ್ಗ ನಾಡಿನಲ್ಲಿಯೂ ಮಳೆಯಾಗಿ, ಭೂಮಿ ಬೀಜವನ್ನು ಕಂಡಿತು. ಜನರು ದುಃಖದ ಜೀವನದಲ್ಲಿಯೆ ಭವಿಷ್ಯಸುಖದ ಆಶೆಯ ಸಮಾಧಾನವನ್ನು ಕಂಡುಕೊಂಡರು. ರತ್ನಾಕರನಿಗೆ ಬರೆದ ರಂಗಣ್ಣನ ಪತ್ರವೊಂದು ಹೀಗಿದ್ದಿತು :

" ಪ್ರಿಯ ರತ್ನಾಕರ,

ನನ್ನ ಶಿಕ್ಷಣದ ಆಶೆಯನ್ನು ಬಿಟ್ಟುಬಿಟ್ಟೆ. ಹಳ್ಳಿಯ ಜೀವನ ನನ್ನ ಹೃದಯವನ್ನು ಸೆಳೆದುಕೊಂಡುಬಿಟ್ಟಿದೆ. ಹಳ್ಳಿಗರ ಸುಖದ ಬದುಕಿಗಾಗಿ, ಹನ್ನೆರಡು ತಿಂಗಳೂ, ಹಗಲಿರುಳೂ ಮಾಡಬೇಕಾದ ಕೆಲಸಗಳು ಬೇಕಾ-ದಷ್ಟು ಇವೆ. ನನ್ನ ಮುಂದಿನ ಜೀವನವನ್ನು ಹಳ್ಳಿಯ ಸೇವಕನಾಗಿಯೆ ಕಳೆಯಬೇಕೆಂದು ಸಂಕಲ್ಪಿಸಿದ್ದೇನೆ. ಅದಕ್ಕಾಗಿ ನಾನು ಮೊದಲು ಸ್ವಾವ-ಲಂಬಿಯಾಗಿ ಬದುಕಬೇಕು. ಎಂತಲೇ ನಾನು ನನ್ನ ಕೆಲವೊಂದು ಭೂಮಿಯ ವ್ಯವಸಾಯವನ್ನು ನಾನೇ ಮಾಡಿಸಬೇಕೆಂದು ನಿರ್ಣಯಿಸಿದ್ದೇನೆ. ಅದಕ್ಕಾಗಿ ಸಿದ್ಧತೆಯನ್ನೂ ನಡೆಯಿಸಿದ್ದೇನೆ ನಿನ್ನ ನೆನಪು ನನಗೆ ಆಗಾಗ ಆಗುವುದು.

ನಿನ್ನ ಜೀವನದ ಗುರಿಯೇನೆಂಬುದು ನನಗೆ ತಿಳಿದಿಲ್ಲ. ಜೀವನದುದ್ದಕ್ಕೂ ನಾನು ನೀನು ಕೂಡಿಕೊಂಡೇ ಇದ್ದರೆ ಎಷ್ಟು ಒಳಿತಾಗುವುದೆಂದು ಆಗಾಗ ನನ್ನ ಮನಸ್ಸಿನಲ್ಲಿ ವಿಚಾರ ಬಂದು ಬಂದು ಹೋಗುತ್ತದೆ. ಆದರೆ ನನ್ನ ಸಂತೋಷದ ಈ ಸ್ವಾರ್ಥವಿಚಾರ, ನಿನ್ನ ಸಂಕಲ್ಪಕ್ಕೂ ಆದರ್ಶ ಸಾಧನೆಗೂ ತಡೆಯಾಗುವುದು ಬೇಡ. ನಿನ್ನ ಜೀವನದ ಆದರ್ಶವಾವುದೋ ಅತ್ತಕಡೆಗೆ ನೀನೂ ಸಾಗಬಹುದು; ಆದರೆ ಸಮಯ ದೊರೆತಾಗಲಾದರೂ ಕೆಲದಿನ ಇಬ್ಬರೂ ಕೂಡಿ ಇರೋಣ.

ನಿನ್ನವನಾದ

ರಂಗಣ್ಣ "

ಪತ್ರವನ್ನೋದಿದಾಗ ರತ್ನಾಕರನಿಗೆ ಸಮಾಧಾನವೂ ಆಯಿತು. ಅಸಮಾಧಾನವೂ ಆಯಿತು. ರಂಗಣ್ಣನ ಸಾತ್ತ್ವಿಕ ಜೀವ ತನಗೆ ತಕ್ಕ ಕಾರ್ಯರಂಗವನ್ನು ಕಲ್ಪಿಸಿಕೊಂಡಿತೆಂದು ಸಮಾಧಾನ; ಆ ಸಾತ್ತ್ವಿಕ-ಸುಸಂಸ್ಕೃತ ಜೀವ ತನ್ನಿಂದ ದೂರವಾಯಿತಲ್ಲ—ಎಂದು ಅಸಮಾಧಾನ. ಆದರೂ ತನ್ನದೊಂದು ಗುರಿಯನ್ನು ನಿರ್ಣಯಿಸಿಕೊಂಡಿದ್ದ ಆ ಜ್ಞಾನಲಾಲಸಿ, ಎರಡನೆಯ ವರ್ಷದ ಬಿ. ಎ. ಅಭ್ಯಾಸವನ್ನು ಮನಃಪೂರ್ವಕವಾಗಿ ನಡೆಯಿಸಿದ. ರಂಗಣ್ಣ ಹಿಡಿದ ಕೋಣೆಯನ್ನೇ ತನ್ನದನ್ನಾಗಿ ಮಾಡಿಕೊಂಡ.

ಚಳಿಗಾಲದ ಬಿಡುವಿನಲ್ಲಿ ರತ್ನಾಕರ ಮುದ್ದಾಪುರಕ್ಕೆ ಹೋದಾಗ, ರಂಗಣ್ಣ ಮನೆಯಲ್ಲಿ ಕಸುಬನ್ನು ಪ್ರಾರಂಭಿಸಿದುದನ್ನು ಕಣ್ಣಾರೆ ನೋಡಿದ. ಉತ್ತಮವಾದ ಎರಡು ಜಾತಿಯ ಎತ್ತುಗಳನ್ನು ಕೊಂಡಿದ್ದ. ಕೃಷ್ಣಾತೀರದ ಕಾಳೆಮ್ಮೆಯೊಂದು ಮನೆಯಲ್ಲಿ ಹಾಲ ಹೊಳೆ ಹರಿಸುತ್ತಿದ್ದಿತು. ದುಡಿಯಲಿಕ್ಕೆ ಮನೆಯಲ್ಲಿ ಇಬ್ಬರು ಆಳುಗಳಿದ್ದರು. ರಂಗಣ್ಣ ತಾನೂ ಆಗಾಗ ಹೊಲಕ್ಕೆ ಹೋಗಿ ಆಳುಗಳೊಂದಿಗೆ ಕೆಲಸ ಮಾಡುವನು. ಆದರೆ ಹಳ್ಳಿಗರ ಸುಖಜೀವನಕ್ಕಾಗಿ ಸುಶಿಕ್ಷಿತನಾದ ತಾನು ಏನೇನು ಮಾಡಬೇಕಾಗಿದೆಯೆಂಬುದನ್ನು ವಿಚಾರಿಸುತ್ತಿರುವನು. ಅವರಿಗಿರುವ ಕೊರತೆಗಳಾವುವೆಂಬುದನ್ನು ಸೂಕ್ಷ್ಮವಾಗಿ ಅಭ್ಯಾಸಿಸುತ್ತಿರುವನು. ರತ್ನಾಕರನಿಗೆ ಇದೆಲ್ಲವನ್ನೂ ನೋಡಿ ತುಂಬ ಸಂತೋಷವಾಯಿತು. ರಂಗಣ್ಣನ ತಮ್ಮ ಮ್ಯಾಟ್ರಿಕ್

ಪಾಸಾದ ಮೇಲೆ, ಕೊಲ್ಲಾಪುರ ಕಾಲೇಜಿಗೆ ಹೆಸರುಹಚ್ಚಿರುವನೆಂಬುದು ರತ್ನಾಕರನಿಗೆ ಆಗಲೆ ಗೊತ್ತಾಯಿತು.

ಮುದ್ದಾಪುರದಿಂದ ಮರಳಿಬಂದು ಬಿ. ಎ. ಅಭ್ಯಾಸವನ್ನು ರಭಸದಿಂದ ನಡೆಯಿಸಿದ. ಎರಡನೆಯ ವರ್ಷವಾದುದರಿಂದಲೂ, ಜೊತೆಗಾರನಾದ ರಂಗಣ್ಣನ ಅಭಾವದ ಔದಾಸೀನ್ಯದಿಂದಲೂ ರತ್ನಾಕರ, ಕಾಲೇಜಿನ ಬೇರೆ ಯಾವ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿರಲಿಲ್ಲ. ಪರೀಕ್ಷೆ ಮುಗಿಯಿತು. ಪರಿಣಾಮದ ಬಗೆಗೆ ರತ್ನಾಕರನಿಗೆ ಸಂಶಯವೇ ಇರಲಿಲ್ಲ. ಪರೀಕ್ಷೆ ಮುಗಿಸಿ-ಕೊಂಡು ರಂಗಣ್ಣನ ಊರಿಗೆ ಹೋದ. ಆಗ ರಂಗಣ್ಣನ ಹೊಸ ಕಾರ್ಯ ಕಲಾಪಗಳು ಪ್ರಾರಂಭವಾಗಿದ್ದುವು. ಸಮೃದ್ಧವಾದ ಸುಗ್ಗಿಯಾದುದರಿಂದ, ರಂಗಣ್ಣನ ಮನೆ ಕಾಳಿನ ಚೀಲಗಳಿಂದ ತುಂಬಿತ್ತು. ಜನರೂ ತಮ್ಮ ಅನ್ನ ವನ್ನು ತಾವು ಉಂಡುಕೊಂಡು ಸುಖ-ಸಮಾಧಾನಗಳಲ್ಲಿದ್ದರು. ರಂಗಣ್ಣ ಮನೆಯಲ್ಲಿ ರಾತ್ರಿಯ ಶಾಲೆಯನ್ನು ಪ್ರಾರಂಭಿಸಿದ್ದ. ಊರೊಳಗಿನ ಹುಡುಗ ರಲ್ಲದೆ ಕೆಲವು ಜನ ಹಿರಿಯರೂ ಕಲಿಯಲಿಕ್ಕೆ ಬರುತ್ತಿದ್ದರು. ಹಳ್ಳಿಗರ ಆರೋಗ್ಯದ ಹೊಣೆಯನ್ನೂ ಹೊತ್ತುಕೊಳ್ಳಬೇಕೆಂದು ರಂಗಣ್ಣ, ಹೋಮಿಯೊ ಪಥಿ, ಆಯುರ್ವೇದ ವಿಷಯಕವಾದ ಪುಸ್ತಕಗಳನ್ನು ತರಿಸಿ ಅಭ್ಯಾಸವನ್ನು ನಡೆಯಿಸಿದ್ದ. ಬೆಳಗು–ಸಂಜೆಗಳಲ್ಲಿ ತನ್ನ ಮನೆಯ ಅಂಗಳದಲ್ಲಿಯೆ ಸಾರ್ವಜನಿಕ ಪ್ರಾರ್ಥನೆಗಳನ್ನು ನಡೆಯಿಸುತ್ತಿದ್ದ. ಹಳ್ಳಿಯ ಹಲವು ಜನ ಹಿರಿಯರು, ಕಿರಿಯರು ಬಂದು ಅದರಲ್ಲಿ ಭಕ್ತಿಯಿಂದ ಭಾಗವಹಿಸುತ್ತಿದ್ದರು. ಹೆಂಗಸರ ನಿರುದ್ಯೋಗದ ವೇಳೆಯನ್ನು ಉಪಯುಕ್ತ ಉದ್ಯೋಗಕ್ಕಾಗಿ ಬಳಸಿಕೊಳ್ಳಬೇಕೆಂದು, ಎಲ್ಲರಿಗೂ ನೂಲಲು ಹಚ್ಚಬೇಕೆಂದು ಪೂರ್ವಯೋಜನೆ ನಡೆದಿದ್ದಿತು. ಇವೆಲ್ಲ ಕಾರ್ಯಕಲಾಪಗಳಲ್ಲಿ ರತ್ನಾಕರನ ಬಿಡುವಿನ ದಿನಗಳು ಓಡುತ್ತ ಓಡುತ್ತಲೇ ನಡೆದಿದ್ದುವು. ಪರೀಕ್ಷೆಯ ಪರಿಣಾಮದ ದಿನಗಳು ಹತ್ತಿರ ಬರಲು, ರತ್ನಾಕರ ಮುದ್ದಾಪುರವನ್ನು ಬಿಟ್ಟು ಹುಬ್ಬಳ್ಳಿಗೆ ಬಂದ. ಮಗನ ಮುಖವನ್ನು ಕಂಡ ತಾಯಿಯ ಮುಖ ಹಿಗ್ಗಿ ಇಷ್ಟಗಲವಾಯಿತು.

ಬಿ.ಎ ಪರೀಕ್ಷೆಯ ಪರಿಣಾಮ ಗೊತ್ತಾಯಿತು. ರತ್ನಾಕರ ಮೊದಲಿಗ-ನಾಗಿ ಉತ್ತೀರ್ಣನಾಗಿದ್ದ. ಇತಿಹಾಸ-ಅರ್ಥಶಾಸ್ತ್ರವಿಷಯಕ್ಕಾಗಿ ಇಟ್ಟ ವಿಶ್ವವಿದ್ಯಾನಿಲಯದ ಬಹುಮಾನ ರತ್ನಾಕರನಿಗೆ ದೊರೆತಿದ್ದಿತು. ತಾಯಿಗಾದ

ಆನಂದ ಅವಳ ಹೃದಯದಲ್ಲಿ ಹಿಡಿಸದಂತಾಯಿತು. ಮಗನ ಮೇಲಿನ ದೃಷ್ಟಿಯನ್ನು ತೆಗೆದು, ಬಾಳೆಹಣ್ಣನ್ನು ನಿವಾಳಿಸಿ ಎಲ್ಲಿಯೋ ಚೆಲ್ಲಿಬಂದರು.

ತಾಯಿಯ ಹೇಳಿಕೆಯಂತೆ ರತ್ನಾಕರ ಸೋದರಮಾವನ ಮನೆಗೆ ಹೋಗಿ, ಸೋದರಮಾವನಿಗೂ ಆತನ ಹೆಂಡತಿಗೂ ನಮಸ್ಕಾರ ಮಾಡಿ ಪರೀಕ್ಷೆಯ ಪರಿಣಾಮವನ್ನು ತಿಳುಹಿದ. ಇಬ್ಬರೂ ಮನವಾರೆ ಸಂತೋಷಪಟ್ಟರು. ಬೇಡಬೇಡವೆಂದರೂ ಸೋದರತ್ತೆ ಕಾಫೀಗೆ ಎಸರಿಟ್ಟಳು. ಸಂಭ್ರಮದಿಂದ ಕೂಗಿ, ಸುಭದ್ರೆಯನ್ನು ಕರೆದು, ರತ್ನಾಕರನ ಪರೀಕ್ಷೆ ಪಾಸಾದ ಸಂಗತಿಯನ್ನು ಆತುರದಿಂದ ತಿಳುಹಿದಳು. ಸುಭದ್ರಾ ಒಳಗೆ ಕುಳಿತಲ್ಲಿಂದಲೇ ತನ್ನ ಅರಳಿದ ಕಣ್ಣುಗಳಿಂದ ರತ್ನಾಕರನನ್ನು ನೋಡುತ್ತಿದ್ದಳು.

* * * * *

ಕಾಲೇಜಿನ ಹೊಸವರ್ಷ ಪ್ರಾರಂಭವಾಯಿತು. ರತ್ನಾಕರನಿಗೆ ಫೆಲೋಶಿಪ್ಪು ಸಿಕ್ಕುವಂತಿದ್ದುದರಿಂದ ಆತ ಕಾಲೇಜಿನ ದಾರಿಯನ್ನುಹಿಡಿದು ಎಂ. ಎ. ತರಗತಿಗೆ ಹೆಸರನ್ನು ಹಚ್ಚಿದ. ಫೆಲೋಶಿಪ್ಪು ಸಹಜವಾಗಿಯೆ ಸಿಕ್ಕುಬಿಟ್ಟಿತು. ಕ್ಲಬ್ಬಿನಲ್ಲಿ ಊಟ ಮಾಡಿಕೊಂಡು, ಅಲ್ಲಿಯೆ ಒಂದು ಕೋಣೆಯಲ್ಲಿ ಇರಲು ತೊಡಗಿದನು. ಫೆಲೋಶಿಪ್ಪಿನ ಹಣ ತಿಂಗ-ತಿಂಗಳೂ ದೊರೆಯುತ್ತಿದ್ದಿತು; ಅಲ್ಲದೆ ಸಾಲದ ಹಣವೆಲ್ಲ ಸಂದಾಯವಾದುದರಿಂದ, ಇದೇ ವರ್ಷ ಆತನ ಹೊಲಗಳೆಲ್ಲ ಸಾವುಕಾರರ ಅಧಿನವನ್ನು ಬಿಟ್ಟು ಅವನ ಅಧಿಕಾರಕ್ಕೆ ಬಂದಿದ್ದುವು. ಆದುದರಿಂದ ರತ್ನಾಕರನು ಈಗ ಹಣಕ್ಕಾಗಿ ಯಾವ ಯೋಚನೆಯನ್ನೂ ಮಾಡಬೇಕಾಗಿರಲಿಲ್ಲ. ತಾಯಿಗೂ ತನ್ನ ಅನ್ನವನ್ನು ತಾನು, ಸುಖದಿಂದ ಮನೆಯಲ್ಲಿ ಉಂಡುಕೊಂಡು ಇರಲು ಅನುಕೂಲವಾಗಿದ್ದಿತು; ತಾನೂ ನಿಶ್ಚಿಂತೆಯಿಂದ ಇದ್ದುಕೊಂಡು ತನ್ನ ಅಭ್ಯಾಸವನ್ನು ನಡೆಯಿಸುವಂತೆ ಆಗಿದ್ದಿತು.

೧೯೨೧ನೆಯ ಇಸವಿಯಲ್ಲಿದ್ದ ಕಾಂಗ್ರೆಸ್ಸಿನ ಅಸಹಕಾರ ಚಳವಳಿಯ ರಭಸ ಕಡಿಮೆಯಾಗುತ್ತ, ಕಡಿಮೆಯಾಗುತ್ತ ೧೯೨೫ನೆಯ ಇಸವಿಯಲ್ಲೆಂದರೆ ಅದು ನಿರ್ಜೀವವಾಗಿ ಹೋಗಿದ್ದಿತು. ಕಾಂಗ್ರೆಸ್ಸಿನ ಮುಖ್ಯ ಮುಖ್ಯ ಮುಂದಾಳುಗಳಲ್ಲಿಯೆ ಅಸಹಕಾರವಿಷಯಕವಾದ ವಿಶ್ವಾಸ ಕಡಿಮೆಯಾಗಿ, ಅವರು ಪ್ರತಿಯೋಗಿ ಸಹಕಾರಿತೆಯನ್ನು ಬೆಂಬಳಿಸಿ ಹೊರಟಿದ್ದರು. ಅಸಹಕಾರ

ಸಮಯದಲ್ಲಿ ಉದ್ಯೋಗ ಬಿಟ್ಟು ರಾಷ್ಟ್ರಕಾರ್ಯಕ್ಕಾಗಿ ನಿಂತ ವಕೀಲರೂ ಶಾಲೆ-ಕಾಲೇಜುಗಳಿಗೆ ಶರಣು ಹೊಡೆದು ಸ್ವಯಂಸೇವಕರಾಗಿದ್ದ ವಿದ್ಯಾರ್ಥಿಗಳೂ, ಸದ್ಯದ ನಿರ್ಜೀವ ವಾತಾವರಣದ ಮೂಲಕ ಕಂಗೆಟ್ಟುಹೋಗಿದ್ದರು. ಅಸಹಕಾರ ಚಳವಳಿ ಕೆಲಸಕ್ಕೆ ಬಾರದಂತಾಗಿತ್ತು; ಪ್ರತಿಯೋಗಿ ಸಹಕಾರಿತೆಯ ಬೆನ್ನು ಹತ್ತಿದ ಮುಂದಾಳುಗಳೆದುರು ಹೋರಾಟದ ಕಾರ್ಯಕ್ರಮವೇನೂ ಇರಲಿಲ್ಲ. ಕಾಂಗ್ರೆಸಿನ ಪ್ರಾಮಾಣಿಕ ಕಾರ್ಯಕರ್ತರೂ ಸ್ವಯಂಸೇವಕರೂ ಕೈಮುಚ್ಚಿ ಕುಳಿತುಕೊಂಡು, ನಿರಾಶೆಯ ನಿಟ್ಟುಸಿರುಗಳನ್ನು ಬಿಡಲು ತೊಡಗಿದರು. ಪಶ್ಚಾತ್ತಾಪದ ಮಾತುಗಳನ್ನಾಡುವ ಅಶಕ್ತ ಮನಸ್ಕರೂ ಬೇಕಾದಷ್ಟು ಜನರು; ಏಕೆಂದರೆ ವಕೀಲಿಯನ್ನು ಬಿಡದೆ ಚಳವಳಿಯ ಕಾಲದಲ್ಲಿಯೂ ತಮ್ಮ ವ್ಯವಸಾಯವನ್ನು ಬಿಡದಿರುವವರು, ಬೇಕಾದ ಹಾಗೆ ಹಣ ಗಳಿಸುತ್ತ ಸುಖಜೀವನ ಸಾಗಿಸಿ, ಸಮಾಜದಲ್ಲಿ ಪ್ರತಿಷ್ಠೆ ಗಳಿಸುತ್ತಿದ್ದರು. ಕಾಲೇಜನ್ನು ಬಿಡದೆ ವಿದ್ಯಾಭ್ಯಾಸವನ್ನು ಮುಂದುವರಿಸಿದ ವಿದ್ಯಾರ್ಥಿಗಳು, ಇಮ್ಮಡಿ ಮುಮ್ಮಡಿ ಪದವಿಗಳನ್ನು ಪಡೆದುಕೊಂಡು, ಸರಕಾರದ ನೌಕರಿಯನ್ನು ಪಡೆದೋ, ವಕೀಲಿ-ಡಾಕ್ಟರಿಯನ್ನಾರಂಭಿಸಿಯೋ, ಸ್ವತಂತ್ರ ಜೀವನ ನಡೆಯಿಸಿ ಸಂತೋಷದಿಂದಿರುತ್ತಿದ್ದರು. ಆದರೆ ಚಳವಳಿಯ ಕಾಲದಲ್ಲಿ ಸ್ವಾರ್ಥತ್ಯಾಗ ಮಾಡಿದ ಕೆಲಸಗಾರರಿಗೂ ಸ್ವಯಂಸೇವಕರಿಗೂ ಹಣದ ಗಳಿಕೆಯಿಲ್ಲ; ಎಂತಲೇ ಸಮಾಜದಲ್ಲಿ ಪ್ರತಿಷ್ಠೆಯಿಲ್ಲ. ನಡೆಯಿಸಬೇಕೆಂದರೆ ಹೋರಾಟದ ಕಾರ್ಯ-ಕ್ರಮಗಳಿಲ್ಲ. ಮಹಾತ್ಮಾಜಿಯವರ ವಿಧಾಯಕ ಕಾರ್ಯಕ್ರಮಗಳು ಅವಿ-ಚ್ಛಿನ್ನವಾಗಿ ಇದ್ದುವಾದರೂ, ಈ ರಜೋವೃತ್ತಿಯ ಸಾಹಸಪ್ರಿಯ ಕೆಲಸಗಾರ-ರಿಗೆ ಅವುಗಳಲ್ಲಿ ಸಮಾಧಾನವಿಲ್ಲ. ದೇಶದ ರಾಜಕೀಯ ಪರಿಸ್ಥಿತಿ ಇಷ್ಟೊಂದು ನಿರಾಶಾಮಯವಾಗಿದ್ದರೂ, ರಂಗಣ್ಣನಂತಹ ವಿಧಾಯಕ ಕಾರ್ಯಕರ್ತರಿಗೆ ಮಾತ್ರ ನಿರಾಶೆಯೆಂಬುದರ ಕಲ್ಪನೆಯೂ ಇರಲಿಲ್ಲ. ರಾಜಕೀಯ ಸ್ವಾತಂತ್ರ್ಯ-ಕ್ಕಿಂತ ಜನಸಾಮಾನ್ಯರ ಸಂಸ್ಕೃತಿಪುನರುಜ್ಜೀವನವೇ ದೇಶಕ್ಕೆ ಹೆಚ್ಚು ಆವಶ್ಯಕವಾಗಿದೆಯೆಂದು ಅವರ ನಂಬುಗೆ. ಆದುದರಿಂದಲೇ ಅವರಿಗೆ ರಜೋ-ವೃತ್ತಿಯ ಹೋರಾಟದ ಆವಶ್ಯಕತೆಯೆನಿಸಲಿಲ್ಲ; ಕೆಲಸವಿಲ್ಲವೆಂದು ಕೈಮು-ಚ್ಚಿಕೊಂಡು ಕುಳಿತುಕೊಳ್ಳಬೇಕಾದ ಸಂದರ್ಭವೂ ಇರಲಿಲ್ಲ. ರಂಗಣ್ಣ ತನ್ನ ಹಳ್ಳಿಯಲ್ಲಿ ದಿನದಿನಕ್ಕೂ ಹೊಸ ಹೊಸ ಚೈತನ್ಯವನ್ನು ತುಂಬುತ್ತ

ಹೊರಟಿದ್ದ. ಕ್ರಿಸ್‌ಮಸ್ ಬಿಡುವಿನಲ್ಲಿ ರತ್ನಾಕರ ರಂಗಣ್ಣನೂರಿಗೆ ಹೋದಾಗ, ಅಲ್ಲಿಯ ಉತ್ಸಾಹದಾಯಕ ವಾತಾವರಣವನ್ನು ನೋಡಿ, ಕೆಡಹುವ ಕಾರ್ಯಕ್ಕಿಂತ ಕಟ್ಟುವ ಕಾರ್ಯವೇ ಹೆಚ್ಚು ಪ್ರಯೋಜನಕಾರಿಯೆಂಬುವರ ಸತ್ಯತೆಯನ್ನು ಕಂಡುಕೊಂಡ.

ಪ್ರತಿಯೋಗಿ ಸಹಕಾರಿತಾವಾದಿಗಳಾದ ರಾಜಕೀಯ ಧುರೀಣರ ಕಾರ್ಯದ ನಿಷ್ಪ್ರಯೋಜಕತೆಯನ್ನು ಪೂರ್ತಿಯಾಗಿ ಕಂಡುಕೊಂಡ ಮಹಾತ್ಮಾಜಿಯುವರು, ಮತ್ತೆ ಸೊಂಟಬಿಗಿದು ರಂಗದ ಮೇಲೆ ಬಂದರು. ಹೋರಾಟದ ಕಾರ್ಯಕ್ರಮವಿಲ್ಲದೆ ಜನತೆಯಲ್ಲಿ ಚೈತನ್ಯ ತಲೆದೋರದೆಂಬುದನ್ನು ರಾಷ್ಟ್ರೀಯ ಮಹಾಸಭೆಗೆ ಮನವರಿಕೆ ಮಾಡಿಕೊಟ್ಟು, ಮತ್ತೆ ಹೋರಾಟದ ಚಳವಳಿಯನ್ನು ಆರಂಭಿಸುವ ಸೂತ್ರಚಾಲಕತ್ವವನ್ನು ತಮ್ಮ ಕಡೆಗೆ ತೆಗೆದುಕೊಂಡರು. ಕಾಯದೇಭಂಗದ ಹೋರಾಟವನ್ನಲ್ಲದೆ ಇನ್ನಾವುದನ್ನೂ ಪ್ರಾರಂಭಿಸುವಂತಿರಲಿಲ್ಲ. ಜನರಲ್ಲಿ ಉತ್ಸಾಹವನ್ನು ಹೆಚ್ಚಿಸಿ, ರಾಷ್ಟ್ರೀಯ ಮಹಾಸಭೆಯ ಕಡೆಗೆ ಜನತೆಯ ಲಕ್ಷ್ಯವನ್ನೆಳೆಯಬೇಕೆಂದು, ೧೯೩೦ ನೆಯ ಜನವರಿ ೨೬ನೆಯ ತಾರೀಖಿನ ದಿನ, ಭಾರತದ ಸಂಪೂರ್ಣ ಸ್ವಾತಂತ್ರ್ಯ ಸಾಧನೆಯ ನಿರ್ಣಯದ ಘೋಷಣೆಯು ಭಾರತಾದ್ಯಂತ ನಡೆಯುವಂತೆ ಏರ್ಪಾಡು ನಡೆಯಿತು.

ಎಲ್ಲ ಕಡೆಯಲ್ಲಿಯಂತೆ ರತ್ನಾಕರನಿದ್ದ ಪಟ್ಟಣದಲ್ಲಿಯೂ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆಯ ಸಭೆ ಜರುಗಿತು. ಕರ್ನಾಟಕ ಪ್ರಾಂತದ ಮಹಾನಾಯಕರೆಲ್ಲ ಅಂದಿನ ಸಭೆಯಲ್ಲಿ ಮಾತನಾಡಿ, ಹೊಸ ಚಳವಳಿಗೆ ಕಾರ್ಯಕರ್ತರೂ ಸ್ವಯಂಸೇವಕರೂ ಹಿಂಡು-ಹಿಂಡಾಗಿ ಬಂದು ಸೇರಬೇಕೆಂಬ ಮಾತನ್ನು ಪರಿಣಾಮಕಾರಿಯಾದ—ಭಾವನೆಯನ್ನು ಬಡಿದೆಬ್ಬಿಸುವ—ರೀತಿಯಲ್ಲಿ ನಿರೂಪಿಸಿದರು. ಇಚ್ಛೆಯಿದ್ದವರೆಲ್ಲ ಹೆಸರು ಕೊಡಬೇಕೆಂದು ಸಭೆಯಲ್ಲಿಯೆ ಜನತೆಯನ್ನು ಆಹ್ವಾನಿಸಿದರು. ಅಂದಿನ ಸಭೆಯಲ್ಲಿ ಮೊದಲಿಗನಾಗಿ ಎದ್ದು ಹೆಸರನ್ನು ಕೊಟ್ಟವನೆಂದರೆ ರತ್ನಾಕರ. ಇದನ್ನು ಕಂಡ ಕೆಲವು ಜೊತೆಯ ವಿದ್ಯಾರ್ಥಿಗಳು ಆಶ್ಚರ್ಯಪಟ್ಟರು; ಇನ್ನು ಕೆಲವರು ಕಳವಳ ಪಟ್ಟರು; ಹಲವರು ಮೂರ್ಖತನವಿದೆಂದು ಬೈದುಬಿಟ್ಟರು. ರತ್ನಾಕರನಿಗೆ ಇವರ ಸ್ತುತಿ, ಆಶ್ಚರ್ಯ, ಕಳವಳ, ನಿಂದೆ—ಯಾವುದರ

ಕಡೆಗೂ ಲಕ್ಷ್ಯವಿರಲಿಲ್ಲ. ತನ್ನ ಕರ್ತವ್ಯದ ಬಗ್ಗೆ ಮನವನ್ನು ಗಟ್ಟಿಗೊಳಿಸಿ-ಕೊಂಡಿದ್ದ. ಕಾಲೇಜಿನ ಪ್ರಿನ್ಸಿಪಾಲರು ಪ್ರತ್ಯೇಕವಾಗಿ ಕರೆಯಿಸಿ ನೀಡಿದ ಉಪದೇಶಾಮೃತವೂ ಅವನ ನಿಶ್ಚಯದ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ. ಅಂದೆಯೆ ರತ್ನಾಕರ, ಕ್ಲಬ್ಬಿನಲ್ಲಿಯ ಕೋಣೆಯನ್ನೂ ಬಿಟ್ಟ; ಊಟಕ್ಕೆ ಹೋಗುವುದನ್ನೂ ಬಿಟ್ಟ. ಹೊಸ ಚಳವಳಿಯ ಕಾರ್ಯಕರ್ತರಿ-ಗಾಗಿ ಪ್ರಾರಂಭಿಸಿದ ' ಸ್ವರಾಜ್ಯಭವನ 'ಕ್ಕೆ ತನ್ನ ಪಯಣವನ್ನು ಬೆಳಸಿದ.

ಅಂದೆಯೆ ರಾತ್ರಿ ಕುಳಿತು ರತ್ನಾಕರ ತಾಯಿಗೆ ಒಂದು ಕಾಗದ ಬರೆದ:

" ಪೂಜ್ಯ ತಾಯಿಯವರ ಅಡಿಗೆ ರತ್ನಾಕರನ ಪ್ರಣಿಪಾತಗಳು.

ಅಮ್ಮಾ,

ನನ್ನ ಈ ಕಾಗದದಲ್ಲಿಯ ಸಂಗತಿಯನ್ನೋದಿ ಯಾವ ರೀತಿಯಲ್ಲಿಯೂ ಮನಸ್ಸಿಗೆ ನೋವನ್ನುಂಟುಮಾಡಿಕೊಳ್ಳಲಾಗದೆಂದು ಬೇಡಿಕೊಳ್ಳುವೆನು.

ನಾನಿನ್ನು ನನ್ನ ಕರ್ತವ್ಯಕ್ಕೆ ಸಿದ್ಧನಾಗಿ ಮುಂದಡಿಯನ್ನು ಇಡ-ಬೇಕಾಗಿದೆ. ನೀನು ನನ್ನಂತಹ ಒಬ್ಬ ಮಗನನ್ನು ಹೆತ್ತು ಬೆಳೆಯಿಸಿ, ಬೇಕಾದ ಸಂಸ್ಕಾರವನ್ನು ಕೊಡಿಸಿ, ತಾಯಿತನದ ಕರ್ತವ್ಯದಿಂದ ಮುಕ್ತಳಾದೆ. ಇನ್ನು ನಾನು ನನ್ನ ಕರ್ತವ್ಯವನ್ನು ಅರಿತು ಜರುಗಿಸಬೇಕಾಗಿದೆ. ತನ್ನ ಅನ್ನವನ್ನು ತಾನು ಸಂಪಾದಿಸಿ ತಿಂದು, ಸುಮ್ಮನೆ ಸಾವು ಬಂದಾಗ ಸತ್ತುಹೋಗುವ ಮಕ್ಕಳನ್ನು ಹಡೆಯುವ ತಾಯಿ ನಿಜವಾದ ತಾಯಿ ಎನಿಸಳು. ನಿನ್ನನು ನಾನು ಅಂತಹ ಸಾಮಾನ್ಯ ತಾಯಿ ಎಂದು ಭಾವಿಸಿಲ್ಲ.

ಇಂದು ಭಾರತದಲ್ಲಿ ಹುಟ್ಟಿದ ಪ್ರತಿಯೊಬ್ಬ ತರುಣನಿಗೂ ಭಾರತದ್ದ ಸ್ವಾತಂತ್ರ್ಯಯುದ್ಧವು ಕರ್ತವ್ಯವಾಗಿದೆಯೆಂಬ ಮಾತು ನನಗೆ ಮನವರಿಕೆ-ಯಾಗಿದೆ. ಅದಕ್ಕೆ ಬೇಕಾಗುವ ಬುದ್ಧಿಬಲ—ದೇಹಬಲಗಳನ್ನು ನಿನ್ನ ಪುಣ್ಯ ನನಗೆ ಒದಗಿಸಿಕೊಟ್ಟಿದೆ. ನಾನೀಗ ಕರ್ತವ್ಯಪಾಲನೆಯ ಸಂಕಲ್ಪ ಮಾಡಿ-ದ್ದೇನೆ. ಈ ಸಂಕಲ್ಪ ಸಿದ್ಧಿಸುವುದಕ್ಕೆ ನಿನ್ನ ಶುಭಾಶೀರ್ವಾದಗಳನ್ನು ಹಾರ-ಯಿಸುತ್ತಲಿದ್ದೇನೆ.

ಪ್ರತಿಯೊಬ್ಬನಿಗೂ ತಾಯಿಯಷ್ಟೇ ತಾಯಿನಾಡೂ ಪೂಜ್ಯದೈವತ ವಾಗಿರುವುದು. ತಾಯ ವಿಷಯಕವಾದ ಕರ್ತವ್ಯಭಾರವಿರುವಂತೆಯೇ ತಾಯಿನಾಡಿನ ವಿಷಯಕವಾದ ಕರ್ತವ್ಯಭಾರವೂ ಇರುತ್ತದೆ. ನಿನ್ನ

ವಿಷಯಕವಾದ ಕರ್ತವ್ಯದ ಹೊರೆ ನನ್ನ ಮೇಲೆ ಅಷ್ಟೊಂದು ಭಾರ ಹಾಕಿಲ್ಲ. ಏಕೆಂದರೆ ಇಂದು ನಿನ್ನ ಹೊಟ್ಟೆಯ ಚಿಂತೆಯನ್ನು ನಾನು ಮಾಡಬೇಕಾಗಿಲ್ಲ; ನಿನ್ನ ಹೊಟ್ಟೆ ತುಂಬಿ ಹೆಚ್ಚಾಗುವಷ್ಟು, ಹೇಗೂ ಹೊಲದ ಉತ್ಪತ್ತಿ ಬರುತ್ತದೆ. ಕರ್ತವ್ಯಜಾಗೃತಿಯುಳ್ಳ ಮಗನು ಇದ್ದಾನೆಂಬ ಸಮಾಧಾನವನ್ನು ನೀನು ತಳೆದರೆ ಸಾಕು; ಆಜನ್ಮ ನೀನು ಸಂತೋಷದಿಂದಲೆ ಜೀವಿಸಬಹುದು. ಆದರೆ ತಾಯಿನಾಡಿನ ದುರ್ದಶೆಯನ್ನು ನೋಡು ! ಯಾರೋ ಎಲ್ಲಿಂದಲೋ ಬಂದು ಆದರ ಮೇಲೆ ಒತ್ತಾಯದ ಒಡೆತನ ನಡೆಯಿಸಿದ್ದಾರೆ. ನಾಡಿಗರಲ್ಲಿಯ ಮಾನವತೆಯನ್ನು ಕಳೆದು ಹಾಕಿ, ಅವರನ್ನು ಕೇವಲ ಕುರಿಯ ಮರಿಗಳಂತೆ ಮಾಡಿದ್ದಾರೆ. ಹಗಲಿರುಳು ದುಡಿದರೂ ಜನತೆಯದು ಹಸಿದ ಹೊಟ್ಟೆ. ಆದರ ದುಡಿಮೆಯ ಫಲವನ್ನು ಉಂಡು ತೇಗುವವರು ಯಾರೊ ಯಾರೋ! ಈ ಪರಿಸ್ಥಿತಿಯನ್ನು ಹೊಡೆದೋಡಿಸಿದ ಹೊರತು ತಾಯಿನಾಡಿನ ದುಃಖ-ದೈನ್ಯಗಳು ದೂರವಾಗುವಂತಿಲ್ಲ. ಅದಕ್ಕಾಗಿ ದೇಶದ ತರುಣರೆಲ್ಲ ಎದ್ದು ಹೋರಾಟ ನಡೆಯಿಸಬೇಕಾಗಿದೆ. ಆ ಹೋರಾಟದಲ್ಲಿ ಸೇರುವುದಕ್ಕೆ ನಾನೂ ಮಹಾತ್ಮಾಜಿಯವರ ಸತ್ಯಾಗ್ರಹಸೈನ್ಯದಲ್ಲಿ ಸೇರುವುದಾಗಿ ನಿರ್ಣಯಿಸಿದ್ದೇನೆ. ಸದ್ಯ ನನ್ನ ಕಾಲೇಜಿನ ಅಭ್ಯಾಸವನ್ನು ನಿಲ್ಲಿಸಿ, ದೇಶದ ಸೇವಕನಾಗಲು ಸನ್ನದ್ಧನಾಗಿದ್ದೇನೆ.

ಇಂದು ನಮ್ಮಲ್ಲಿಯ ಎಲ್ಲ ತಾಯಂದಿರೂ ಪಡುವ ಅಪೇಕ್ಷೆಯೆಂದರೆ: ತಮ್ಮ ಮಕ್ಕಳು ದೊಡ್ಡವರಾಗಿ ಕಲಿತು ದೊಡ್ಡ ಪರೀಕ್ಷೆಯಲ್ಲಿ ಪಾಸಾಗಬೇಕು—ಸರಕಾರದ ದೊಡ್ಡ ನೌಕರಿ ಮಾಡಬೇಕು—ಮದುವೆ ಮಾಡಿಕೊಂಡು ಮಕ್ಕಳನ್ನು ಹಡೆಯಬೇಕು—ಇದೆಲ್ಲ ವೈಭವವನ್ನು ತಾವು ಕಣ್ಣಾರೆ ಕಂಡು ಸಂತೋಷಪಡಬೇಕು. ಸರಿ! ಇದೇ ಅಲ್ಲವೆ? ಎಲ್ಲ ತಾಯಂದಿರ ಅಪೇಕ್ಷೆಯಂತೆಯೆ ನಿನ್ನ ಅಪೇಕ್ಷೆಯೂ ಇದೆಯಲ್ಲವೆ? ಇದ್ದರೆ ಅದು ಅಸ್ವಾಭಾವಿಕವೇನೂ ಅಲ್ಲ. ನನ್ನ ಇಂದಿನ ಸಂಕಲ್ಪದಿಂದ ನಿನ್ನ ಅಪೇಕ್ಷೆಗೆ ಭಂಗಬಂದು ನಿನಗೆ ವ್ಯಥೆಯುಂಟಾಗುವುದೆಂಬುದನ್ನು ನಾನು ಬಲ್ಲೆ; ಆದರೆ ನಿನ್ನನ್ನು—ಒಬ್ಬಳೆ ಒಬ್ಬಳನ್ನು—ಸಮಾಧಾನಗೊಳಿಸುವ ಕೆಲಸವನ್ನು ಮಾತ್ರ ಮಾಡಬೇಕೊ? ಕೋಟ್ಯವಧಿ ಮಕ್ಕಳ ದುಃಖದಿಂದ ದುಃಖಿತಳಾದ ತಾಯಿನಾಡನ್ನು ಸಮಾಧಾನಗೊಳಿಸುವ ಕೆಲಸವನ್ನು ಮಾಡಬೇಕೋ?

ನೀನೇ ವಿಚಾರಮಾಡಿ ನೋಡು! ನೈಮಿತ್ತಿಕವಾದ ಈ ಹೋರಾಟದಲ್ಲಿ ಗೆಲವು ಪಡೆದು ಬಂದ ಮೇಲೆ ನಿನ್ನ ಅಪೇಕ್ಷೆಯನ್ನೂ ಪೂರಯಿಸಲಿಕ್ಕಾಗಬಹುದು; ಆದರೆ ಈಗ ನಿನ್ನ ಅಪೇಕ್ಷೆಯನ್ನು ಪೂರಯಿಸುವುದರಲ್ಲಿ ಕೃತಕೃತ್ಯತೆಯನ್ನು ಕಂಡುಕೊಂಡು ಕುಳಿತು ಬಿಟ್ಟರೆ, ದೇಶಮಾತೆಯ ಅಪೇಕ್ಷೆಯನ್ನು ಪೂರಯಿಸಲೇ ಬೇಕಾದ ನಾನು, ಕರ್ತವ್ಯದಲ್ಲಿ ಲೋಪವನ್ನು ಮಾಡಿದಂತಾಗುವುದಿಲ್ಲವೆ?

ಮಹಾತ್ಮರ ತಪಶ್ಶಕ್ತಿ ದೊಡ್ಡದು; ಭಾರತಮಾತೆಯೂ ನಿರ್ಭಾಗ್ಯಳಲ್ಲ; ಆದುದರಿಂದ ನಡೆಯಿಸಬೇಕಾಗಿರುವ ಸ್ವಾತಂತ್ರ್ಯದ ಹೋರಾಟ ಬಹಳ ಕಾಲವೇನೂ ನಡೆಯಲಾರದು. ಸಹನೆಯ ಮೂರ್ತಿಯಾದ ನೀನು, ಈಗಲೂ ಸಹನೆಯಿಂದ ಇರುವೆಯೆಂಬ ನಂಬುಗೆ ನನಗಿದೆ. ತಾಯಿ ಕಸ್ತೂರಬಾ ಅವರ ಚರಿತ್ರೆ ನಿನ್ನ ಕಣ್ಣೆದುರಿಗಿರಲಿ! ಗಂಡ, ಮಕ್ಕಳು—ಎಲ್ಲರನ್ನೂ ದೇಶಕ್ಕಾಗಿ ನೀಡಿಬಿಟ್ಟಿದ್ದಾರೆ. ನೇಹರೂ ಮಾತೆಯ ಮಹಾತ್ಯಾಗವೂ ನಿನ್ನ ಲಕ್ಷ್ಯದಲ್ಲಿರಲಿ!

ನಿನ್ನ ಮುದ್ದಿನ ಮಗ
**ರತ್ನ"**

ಪತ್ರವನ್ನು ಓದಿಸಿ ಕೇಳಿದಾಗ, ರತ್ನಾಕರನ ತಾಯಿಗೆ ದುಃಖವಾಯಿತೋ ಸಮಾಧಾನವೆನಿಸಿತೋ ಯಾವುದೂ ಗೊತ್ತಾಗುವಂತಿರಲಿಲ್ಲ. ಮಗನ ನಡೆವಳಿಕೆಯ ವಿಷಯದಲ್ಲಿ ತುಂಬ ನಂಬುಗೆಯವಳಿಗೆ. ಆತ ಎಂದೂ ತಪ್ಪುದಾರಿಯನ್ನು ತುಳಿಯಲಾರನೆಂದು ಆಕೆಗೆ ಸಂಪೂರ್ಣ ವಿಶ್ವಾಸ. ಆದರೆ ತಾಯ ಹೃದಯ ಕಂಡ ಭವಿಷ್ಯದ ಚಿತ್ರವೆಲ್ಲ ಸದ್ಯ ಅಳಿಸಿಹೋದಂತಾದುದು ಆ ತಾಯಿಗೆ ಹೆಚ್ಚಾಗಿ ಅಸಮಾಧಾನವನ್ನೇ ಉಂಟುಮಾಡಿರಬೇಕು.

ರತ್ನಾಕರನ ಸೋದರಮಾವ, ಸೋದರತ್ತೆ ಈ ಮಾತನ್ನು ಕೇಳಿದರು. 'ಮೂರ್ಖ ಹುಡುಗರ ಸಂಗತಿ' ಎಂದು ಸೋದರಮಾವ ಸಿಡುಕಿನ ಮಾತನಾಡಿ ಸುಮ್ಮಗಾದರು. ಸುಭದ್ರೆಯ ಮದುವೆಯ ವಿಚಾರದಲ್ಲಿ ನಿಶ್ಚಿಂತರಾಗಿದ್ದ ಸೋದರತ್ತೆ ಮಾತ್ರ, ಮಗಳ ಮದುವೆಯ ಚಿಂತೆಯನ್ನು ಮಾಡಲು ತೊಡಗಿದರು. ರತ್ನಾಕರನ ದೇಶಭಕ್ತಿ ಅವರಿಗೆ ತುಂಬ ನಿರಾಶೆಯನ್ನುಂಟು-

ಮಾಡಿತು. ಬೇರೆ ವರಗಳ ಮುಖಗಳು ಅವರ ಕಣ್ಣೆದುರು ಬಂದು ಬಂದು ಹೋಗಲು ತೊಡಗಿದುವು.

* * * *

ಸ್ವಲ್ಪ ದಿನಗಳಲ್ಲಿಯೆ ಮಹಾತ್ಮಾಜಿಯವರ ಉಪ್ಪಿನ ಸತ್ಯಾಗ್ರಹದ ಯೋಜನೆ ಪ್ರಕಟವಾಯಿತು. ೧೯೩೦ನೆಯ ಮಾರ್ಚ್ ೧೧ ನೆಯ ತಾರೀಖಿಗೆ ದಾಂಡಿಯ ಸತ್ಯಾಗ್ರಹಯಾತ್ರೆಗೆ, ಆರಿಸಿದ ಅನುಯಾಯಿಗಳೊಂದಿಗೆ ಹೊರಟೇ ಬಿಟ್ಟರು. ಭಾರತದ ಜನತೆಯಲ್ಲಿ ಮತ್ತೆ ರಾಜಕೀಯ ಕುತೂಹಲ ಕೆರಳಿತು. ಮಹಾತ್ಮರ ದಾಂಡೀಯಾತ್ರೆ, ಭಾರತೀಯರ ಮನವನ್ನು ಆಕರ್ಷಿ-ಸಿತು. ಯಾತ್ರೆಯ ೨೪ ದಿನವೂ ವಿಚಾರಾಂದೋಲನದಲ್ಲಿದ್ದ ಸರಕಾರ, ಮಹಾತ್ಮರು ದಾಂಡಿಯನ್ನು ತಲ್ಪಿದ ದಿನ, ಎಂದರೆ ಎಪ್ರಿಲ್ ೫ ನೆಯ ದಿನ ಅವರನ್ನು ಹಿಡಿದು ಬಂಧನಬಲ್ಲಿರಿಸಿತು. ಭಾರತದಲ್ಲಿ ರಾಜಕೀಯ ಹೋರಾಟದ ಉರಿ ಮತ್ತೆ ಹೊತ್ತಿನಿಂತಿತು. ಸುಸಂಘಟಿತವಾಗಿ ಚಳವಳಿಯನ್ನು ನಡೆಯಿಸಬೇಕೆಂಬ ಪ್ರಯತ್ನ ಭಾರತದ ಎಲ್ಲ ಭಾಗಗಳಲ್ಲಿಯೂ ನಡೆಯಿತು. ಗಾಂಧೀಜಿಯವರ ಪ್ರೀತಿಯ ಪ್ರಾಂತವಾದ ಕರ್ನಾಟಕದಲ್ಲಿಯೂ ಆ ಪ್ರಯತ್ನ ವ್ಯವಸ್ಥಿತವಾಗಿ ನಡೆದಿದ್ದಿತೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ರತ್ನಾಕರನೂ ಈ ಸಂಘಟನೆಯಲ್ಲಿ ಮುಖ್ಯಪಾತ್ರವನ್ನು ವಹಿಸಿದ್ದ. ಆತನ ಬುದ್ಧಿವಂತಿಕೆಯ ಯೋಜನೆಗಳು, ಹಿರಿಯ ಮುಂದಾಳುಗಳನ್ನೂ ತಲೆದೂಗಿಸಹಚ್ಚುತ್ತಿದ್ದುವು. ಕರ್ನಾಟಕದಲ್ಲಿಯೂ ಉಪ್ಪಿನ ಸತ್ಯಾಗ್ರಹದ ಸಭೆಗಳು ನಿತ್ಯನಿತ್ಯ ನಡೆಯುತ್ತಿದ್ದುವಾದರೂ, ರತ್ನಾಕರ ಇನ್ನೂ ಪ್ರತ್ಯಕ್ಷ-ವಾಗಿ ಕಾನೂನುಭಂಗ ಮಾಡಿರಲಿಲ್ಲ. ಹಿರಿಯರ ಅಪೇಕ್ಷೆಯಂತೆ ಆತನು ಯೋಜಕನಾಗಿ, ಸೆರೆಮನೆಗೆ ಹೋಗದೆ ಹೊರಗೇ ಉಳಿಯಬೇಕಾಗಿದ್ದಿತು. ಹಗಲಿರುಳೂ ಈ ಸತ್ಯಾಗ್ರಹದ ರಾಜಕೀಯವನ್ನು ತಲೆಯಲ್ಲಿ ತುಂಬಿಕೊಂಡಿ-ರುವನಾದರೂ, ಸಮಾಜಹಿತಬುದ್ಧಿಯ ಆತನ ಹೃದಯ, ಸಾಮಾಜಿಕ ವ್ಯಕ್ತಿಗಳ ಜೀವನದ ಕಷ್ಟ-ನಷ್ಟಗಳನ್ನೂ ತನ್ನಲ್ಲಿ ತುಂಬಿಕೊಳ್ಳುತ್ತಿತ್ತು. ಎಂತಲೇ ಅವನು, ಅಂತಹ ಹೋರಾಟದ ಉಗ್ರಕಾಲದಲ್ಲಿಯೂ, ಗೋಪಾಲ-ರಾಯರ ಮಗಳ ಮದುವೆಯ ಸಮಸ್ಯೆಯನ್ನರಿತು, ಅದನ್ನು ಬಿಡಿಸುವುದಕ್ಕೆ

ನೆರವು ಕೊಡಲು ಸಿದ್ಧನಾಗಿದ್ದನು, ಈ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿಯೂ ಅನೇಕ ಮದುವೆ-ಮುಹೂರ್ತಗಳು ನಿರಾತಂಕವಾಗಿ ನಾಡಿನಲ್ಲಿ ನಡೆಯುತ್ತಿರುವಾಗ, ಪಾಪ! ಗೋಪಾಲರಾಯರ ಮಗಳ ಲಗ್ನವೂ ಆಗಿ, ಅವರ ಚಿಂತೆ ಕಡಿಮೆಯಾದರೆ ತಪ್ಪೇನು?

## ೭ನೆಯ ಪರಿಚ್ಛೇದ

ಹಗಲು ನಾಲ್ಕು ಗಂಟೆ ಕಳೆದು ಹೋಗಿದೆ. ರತ್ನಾಕರನ ಕೋಣೆಯಲ್ಲಿ ಇಬ್ಬರು ಕಾರ್ಯಕರ್ತರೊಂದಿಗೆ ರತ್ನಾಕರನು ಮಾತನಾಡುತ್ತ ಕುಳಿತಿದ್ದಾನೆ. ಮಹಾತ್ಮಾಜಿಯವರ ಬಂಧನದಿಂದ ಅನೇಕ ಕಾರ್ಯಕರ್ತರ ಮನಃಸ್ಥಿತಿ ಸೇನಾಪತಿಯನ್ನು ಕಳೆದುಕೊಂಡ ಸೈನಿಕರ ಮನಃಸ್ಥಿತಿಯಂತಾಗಿ ಹೋಗಿದೆ. ಯಾವಾಗಲೂ, ಮುಂದಾಳುಗಳ ಮಾತನ್ನು ಕೇಳಿ ಸ್ಫೂರ್ತಿಗೊಂಡು ರಾಜಕೀಯ ಚಟುವಟಿಕೆಗಳಲ್ಲಿ ಧುಮ್ಮಿಕ್ಕಿದವರ ರೀತಿಯೇ ಹಾಗೆ. ಮುಂದಾಳು ಇರುವ ವರೆಗೆ ಉತ್ಸಾಹದಿಂದ ಇವರು ಕಾರ್ಯಮಾಡುವರು; ಮುಂದಾಳು ಕಣ್ಮರೆಯಾಗಿ ಬಿಟ್ಟರೆ, ಸಂದೇಹ-ನಿರಾಶೆಗಳು ಇವರನ್ನು ಕಂಗೆಡಿಸಿಬಿಡುವುವು. ಸ್ವಯಂಸ್ಫೂರ್ತಿಯ ಪ್ರಾಮಾಣಿಕ ಕಾರ್ಯಕರ್ತರಿಗೆ ಮುಂದಾಳುಗಳ ಬೆಂಬಲ ಬೇಕೇಬೇಕು—ಎಂದಿರುವುದಿಲ್ಲ. ತಾವು ಸಾಧಿಸಬೇಕಾದ ಆದರ್ಶದ ಸ್ಪಷ್ಟವಾದ ಕಲ್ಪನೆಯಿದ್ದರೆ ಸಾಕು; ಏಕಾಕಿಗಳಾಗಿಯೇ ಧೈರ್ಯದಿಂದ, ಆದರ್ಶಸಾಧನೆಗಾಗಿ ಕಾರ್ಯಮಾಡುವರು. ಅನುಯಾಯಿವರ್ಗದಲ್ಲಿ ಈ ಬಗೆಯ ಕಾರ್ಯಕರ್ತರ ಸಂಖ್ಯೆ ಹೆಚ್ಚಿದಾಗಲೇ ಯಾವುದೊಂದು ಕ್ರಾಂತಿಕಾರಕ ಚಟುವಟಿಕೆ ಮುಂದುವರೆದು ಗೆಲವನ್ನು ಪಡೆಯುವುದು. ಹೀಗಿರದೆ, ಮುಂದಾಳುಗಳು ಕಣ್ಣಮುಂದೆ ಇರುವಾಗಷ್ಟೇ ಅವರ ಹೇಳಿಕೆಯಂತೆ ನಡೆಯುವ ಅನುಯಾಯಿ ವರ್ಗವಿರುವಲ್ಲಿ, ಯಾವ ಚಟುವಟಿಕೆಯೂ ಕೊನೆಯ ವರೆಗೂ ನಡೆದು ಗೆಲವನ್ನು ಪಡೆಯಲಾರದು. ವಿಜಯನಗರ ಸಾಮ್ರಾಜ್ಯದ ಪತನದ ಇತಿಹಾಸ, ಈ ಮಾತಿಗೆ ಪ್ರತ್ಯಕ್ಷ ಸಾಕ್ಷಿ ನುಡಿಯುತ್ತ ನಿಂತುಕೊಂಡಿದೆ. ಒಬ್ಬನೇ ಒಬ್ಬ ರಾಮರಾಜ ಕಣ್ಮರೆಯಾದ; ಶಕ್ತಿಯ ಸಮುದ್ರದಂತೆ ಇದ್ದ ಆತನ ಸೇನಾಸಮೂಹ ಕಂಗೆಟ್ಟು, ರಣರಂಗದಿಂದ ಕಾಲ್ದೆಗೆಯಿತು; ಒಂದೆ ಒಂದು ಕ್ಷಣದಲ್ಲಿ ಸೋತುಹೋಗಲಿರುವ ವಿರೋಧಿಸೈನ್ಯ, ಜಯವನಿತೆಯ ಕೈಯನ್ನು

ಹಿಡಿಯಿತು. ರಾಮರಾಜನ ಸೈನ್ಯದಲ್ಲಿ, ರಾಮರಾಜನನ್ನು ಮೀರಿಸುವಂತಹ ವೀರಾಧಿವೀರರು ಇರಲಿಲ್ಲವೆಂತಲ್ಲ. ಆದರೆ ಅವರೆಲ್ಲರ ವೀರ, ದೊರೆಯಾದ ರಾಮರಾಜನ ಅಸ್ತಿತ್ವದಲ್ಲಿ ಮಾತ್ರ ಮೆರೆಯುವಂತಹದು. ರಾಮರಾಜ ಹೋದರೆ, ಇನ್ನೊಬ್ಬ ಕನ್ನಡ ರಾಜನನ್ನು ಕರ್ನಾಟಕ ಸಾಮ್ರಾಜ್ಯಸಿಂಹಾಸನದ ಮೇಲೆ ಕುಳ್ಳಿರಿಸಿ, ಕನ್ನಡರಾಜ್ಯವನ್ನು ಉಳಿಸಿಕೊಳ್ಳಬೇಕೆಂಬ ಭಾವನೆ ವ್ಯಕ್ತಿ-ವ್ಯಕ್ತಿಗಳ ಹೃದಯದಲ್ಲಿಯೂ ಅಂದು ಮೂಡಿ ನಿಂತಿದ್ದರೆ, ರಕ್ಕಸತಂಗಡಿಗೆಯ ಕಾಳೆಗವು ಕನ್ನಡಿಗರಿಗೆ ದುರಂತವಾಗಿ ಪರಿಣಮಿಸುತ್ತಿರಲಿಲ್ಲ; ವಿಜಯನಗರದ ರಾಜ್ಯ ಹಾಳಾಗುತ್ತಿರಲಿಲ್ಲ. ಅಂದಿನ ಕಾಲ ಕಳೆದು ನಾಲ್ಕೈದು ನೂರು ವರ್ಷಗಳಾಗಿ ಹೋಗಿದ್ದರೂ, ಜನಸಾಮಾನ್ಯರಲ್ಲಿರುವ ಅಂದಿನ ಆ ಸಹಜದೌರ್ಬಲ್ಯ ಈಗಲೂ ಕಡಿಮೆಯಾಗಿಲ್ಲ. ಎಂತಲೆ ಗಾಂಧೀಜಿಯವರ ಬಂಧನವು, ಈಗ ಅನೇಕಜನ ಕಾರ್ಯಕರ್ತರ ಮನಸ್ಸನ್ನು ಉಯ್ಯಾಲೆಯಾಡಿಸುತ್ತಲಿದೆ. ಹೃದಯದ ನಿರ್ಧಾರವನ್ನು ಅಲ್ಲಾಡಿಸುತ್ತಲಿದೆ. ಈಗ ರತ್ನಾಕರನ ಬಳಿಯಲ್ಲಿ ಕುಳಿತು ಮಾತನಾಡುತ್ತಿರುವ ಇಬ್ಬರು ಕಾರ್ಯಕರ್ತರೂ ಇಂತಹ ಉಯ್ಯಾಲೆಯಾಡುವ ಮನದವರೇ ಆಗಿದ್ದಾರೆ. ಅವರಿಬ್ಬರಲ್ಲಿಯ ಒಬ್ಬ, ಮುಂಡರಿಗೆಯ ತರುಣ ಕಾರ್ಯಕರ್ತ ಗೋಪೀನಾಥ; ಇನ್ನೊಬ್ಬ ನರಗುಂದದ ಬಸವರಾಜ. ಇಬ್ಬರೂ ಈಗ ನಿರಾಶೆ-ಸಂದೇಹಗಳಲ್ಲಿಯೆ ದಿನಗಳನ್ನು ಕಳೆಯುತ್ತಲಿದ್ದಾರೆ. ರತ್ನಾಕರನು ಅವರನ್ನು ವಿಶ್ವಾಸದಿಂದ ತನ್ನ ಕೋಣೆಗೆ ಬರಮಾಡಿಕೊಂಡು ವಿಚಾರ-ಚರ್ಚೆ ನಡೆಯಿಸಿದ್ದಾನೆ:

"ಏನು ಗೋಪೀನಾಥರಾಯರೆ, ನಾವೆಲ್ಲ ಈ ರಾಜಕೀಯ ಚಳುವಳಿಯಲ್ಲಿ ಯಾತಕ್ಕಾಗಿ ಸೇರಿದ್ದೇವೆ ?" ರತ್ನಾಕರನು ಕೇಳಿದ.

"ಯಾತಕ್ಕಾಗಿ ಅಂದರೇನ್ರೀ ? ಸ್ವರಾಜ್ಯ-ಸ್ವಾತಂತ್ರ್ಯ ಸಂಪಾದಿಸಲಿಕ್ಕೆ !" ಗೋಪೀನಾಥ ಉತ್ತರವಿತ್ತ.

"ಸರಿಯಾಗಿದೆ ನಿಮ್ಮ ಮಾತು ! ಇನ್ನೊಂದು ಮಾತು ನಿಮ್ಮನ್ನ ಕೇಳ್ತೀನಿ : ಸ್ವರಾಜ್ಯ ಸ್ವಾತಂತ್ರ್ಯ ಗಾಂಧಿಯವರಿಗಷ್ಟೇ ಬೇಕಾಗ್ಯಾವೋ ? ಏನು ನಿಮಗೂ ಬೇಕಾಗ್ಯಾವೋ ?" ರತ್ನಾಕರನ ಪ್ರಶ್ನೆಯಿದು.

"ಗಾಂಧೀಜಿಯವರಿಗಷ್ಟೇ ಬೇಕಾಗ್ಯಾವೋ—ಅಂದರೇನ್ರೀ ? ಇಡೀ ಭಾರತದೇಶದ ಜನತೆಗೆಲ್ಲಾ ಬೇಕಾಗ್ಯಾವ !" ಬಸವರಾಜ ಆವೇಶದಿಂದಲೇ ಹೇಳಿದ.

" ಸರಿ! ಹಾಂಗಾದರ ಹೇಳ್ರಿ: ಭಾರತದೇಶದ ಜನತಾ—ಅಂದರ ಗಾಂಧೀಜಿಯುವರು ಒಬ್ಬರೇ ಏನು? ಅವರೊಬ್ಬರಿಗೇ ಸ್ವರಾಜ್ಯ-ಸ್ವಾತಂತ್ರ್ಯ ಬೇಕಾಗ್ಯಾವ ಏನು?"

ಗೋಪೀನಾಥ ನುಡಿದ:

" ಹಾಂಗ ಹ್ಯಾಂಗ ಆದೀತು? ನಾವೆಲ್ಲಾರೂ ಭಾರತದ ಜನರು! ನಮಗೆಲ್ಲಾರಿಗೂ ಅವು ಬೇಕು!"

" ಅಹುದಲ್ಲೊ? ನಮಗ ಬೇಕಾದದ್ದನ್ನ ಸಂಪಾದಿಸಲಿಕ್ಕೆ ನಾವೆಲ್ಲಾರೂ ದುಡೀಬೇಕೋ, ಗಾಂಧೀಜಿಯುವರೊಬ್ಬರು ದುಡಿದರ ಸಾಕೋ!" ರತ್ನಾಕರ ಕೆಣಕುನುಡಿಯಿಂದ ಕೇಳಿದ.

" ಪಾಪ, ಒಬ್ಬರಿಂದ ಆದೀತೇನು? ನಾವೆಲ್ಲಾರೂ ದುಡೀಲಿಕ್ಕೇ ಬೇಕು!" ಗೋಪೀನಾಥ ಹೇಳಿದ.

" ಇನ್ನೊಂದು ವಿಷಯ: ಗಾಂಧೀಜಿಯುವರು ನಮ್ಮಲ್ಲಿ ಇರದಿದ್ದರ, ನಮಗ ಸ್ವರಾಜ್ಯ ಸ್ವಾತಂತ್ರ್ಯ ಬೇಕಾಗತಿದ್ದುವೋ ಇಲ್ಲೋ?" ರತ್ನಾಕರ ಕೇಳಿದ.

" ಬೇಕಾಗದ ಏನ್ರೀ? ಪ್ರತಿಯೊಬ್ಬ ಮನುಷ್ಯನಿಗೂ ಸ್ವತಂತ್ರ ಆಗಿ ಇರೂದಂದರ, ಅವನ ಜನ್ಮಸಿದ್ಧ ಹಕ್ಕು! ಪರಾಧೀನ ಆಗಿ ಇರೂದಂದರ ಅದರೊಳಗ ಮನುಷ್ಯತ್ವನೇ ಇರೂದಿಲ್ಲ!" ಬಸವರಾಜ ಮಾತನಾಡಿದ; ಆಗ ರತ್ನಾಕರ ಹೇಳಿದ:

" ಭಲೆ! ಬೀಜದ ಮಾತು ಇದು! ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕಾಗಿರುವ ಸ್ವಾತಂತ್ರ್ಯಸಾಧನೆಗಾಗಿ ಪ್ರತಿಯೊಬ್ಬನೂ ಕೆಲಸಮಾಡಬೇಕಾಗತದ-ಅಂಬೂದನ್ನ ಒಪ್ಪತೀರಿ ಅಂದ್ಹಾಂಗಾತು ನೀವು! ಅಂದಮ್ಯಾಲ, ತಾನು ಮಾಡಬೇಕಾಗಿರುವ ಆವಶ್ಯಕ ಕರ್ತವ್ಯದ ಸಲುವಾಗಿ, ಯಾವನೇ ಆಗಲಿ-ಇನ್ನೊಬ್ಬನ ಮುಖದ ಕಡೆ ಯಾಕ ನೋಡಬೇಕು ನಾವು? ಹಸಿವಿ—ನಿಜವಾದ ಹಸಿವಿ ಆಯಿತಂದರ, ಚಿಕ್ಕ ಮಗು ಸಹಿತ, ತಾಯಿಾ ದಾರೀ ಕಾಯದ, ಮುಂದ ಇರುವ ತುತ್ತಿನ ಕಡೆ ಹವಣಿಸತಿರತದ. ಈಗ ನಮಗ ನಿಜವಾದ ಸ್ವಾತಂತ್ರ್ಯದ ಹಸಿವಿ ಆಗಿದ್ದರ, ನಾವು ಯಾವ ಮುಂದಾಳುಗಳ ದಾರಿಯನ್ನೊ ಕಾಯದೆ, ವೈಯಕ್ತಿಕವಾಗಿ ನಿಷ್ಠೆಯಿಂದ ರಾಜಕೀಯ ಚಟುವಟಿಕೆಗಳನ್ನ

ನಡಿಸಬೇಕು. ಕೊರವ ಕುಣಿಸುವ ಕೋತಿಗಳಾಗಬಾರದಲ್ಲವೇ ಮನುಷ್ಯರು? ಬಹಳವೆಂದರೆ ಜನಸಾಮಾನ್ಯರಿಗೆ ಗುರಿಯ ಬಳಿ ಹೋಗುವ ದಾರಿಯು ಸ್ಪಷ್ಟ ಕಲ್ಪನೆ ಬೇಕು. ಈ ಕಾಲದ ನಾಯಕರಾಗಿ ಮಹಾತ್ಮಾಜಿಯವರು ನಮಗೆ ಆ ದಾರಿಯನ್ನು ನಿಚ್ಚಳವಾಗಿ ತೋರಿಸಿಕೊಟ್ಟಿದ್ದಾರೆ. ನಡೆದು ಹೋಗಬೇಕಾದ ವಿವರ-ವಿವರಗಳನ್ನೂ ತಿಳುಹಿಬಿಟ್ಟಿದ್ದಾರೆ. ಈಗ ನಾವು ನಮ್ಮ ಕಾಲು-ಗಳಿಂದಲೇ ನಡೆದು ಆ ಗುರಿಯನ್ನು ಮುಟ್ಟಬೇಕಾಗಿದೆ ಇಷ್ಟೆ! ಆ ಮಹಾತ್ಮಾಜಿಯವರು ನಮ ಬಳಿಯಲ್ಲೇ ಇದ್ದರೂ ಸರಿ, ನಮ್ಮಿಂದ ದೂರವಾದರೂ ಸರಿ, ನಡೆಯಬೇಕಾದದ್ದು, ನಡೆದು ಮುಂದುವರಿಯಬೇಕಾದದ್ದು ನಮ್ಮ ಕರ್ತವ್ಯ! ಗಾಂಧೀಜಿಯವರು ಕೊನೆಯವರೆಗೂ ನಮ್ಮಿಂದ ಅಗಲಿದರೆಂದು ತಿಳಿಯೋಣ! ಆಗ ನಾವು ಧೈರ್ಯಗೆಟ್ಟು ಕುಳಿತುಬಿಡಬೇಕೋ, ಕರ್ತವ್ಯಪಥದಲ್ಲಿ ನಡೆಯುತ್ತಿರಬೇಕೋ—ನೀವೇ ವಿಚಾರ ಮಾಡಿ ನೋಡಿರಿ, ಬಸವರಾಜ ! ”

ರತ್ನಾಕರನ ಉಪನ್ಯಾಸದ ಧಾಟಿಯ ಮಾತಿನ ಪರಿಣಾಮ, ಬಸವ-ರಾಜನ ಮೇಲೆ ಆಯಿತೇನೋ! ಆತ ಸುಮ್ಮಗೆ ಕುಳಿತುಬಿಟ್ಟ. ಆಗ ಗೋಪೀನಾಥ ಮತ್ತೆ ಕೇಳಿದ :

“ ಮಹಾತ್ಮಾಜಿಯವರು ಇಲ್ಲದೆ, ನಮ್ಮಿಂದ ಯಾವ ಕಾರ್ಯವಾದೀತು ರತ್ನಾಕರರಾವ್ ? ”

“ ಯಾಕೆ ? ಮಹಾತ್ಮಾಜಿಯವರಿಲ್ಲದೆ ನೀವು ಊಟ ಮಾಡುತ್ತಿಲ್ಲವೆ ? ಉಸಿರಾಡಿಸುತ್ತಿಲ್ಲವೆ ? ಮಲಗಿ ನಿದ್ರೆ ಮಾಡುತ್ತಿಲ್ಲವೆ ? ಒಂದು ವೇಳೆ ಇಲ್ಲಿಯ ಕಾರ್ಯ ಬಿಟ್ಟು ಮನೆಗೆ ಹೋದಿರೆಂದರೆ, ಹೆಂಡಿರು-ಮಕ್ಕಳೊಂದಿಗೆ ಸಂಸಾರ ಮಾಡುವುದಿಲ್ಲವೆ ? ಹೊಟ್ಟೆ ತುಂಬಿಕೊಳ್ಳುವುದಕ್ಕಾಗಿ ಯಾವುದಾದರೂ ಕೆಲಸ ಮಾಡುವುದಿಲ್ಲವೆ ? ಇವೆಲ್ಲಕ್ಕೂ ಮಹಾತ್ಮರ ಸಾನ್ನಿಧ್ಯದ ಆವಶ್ಯಕತೆ ಇಲ್ಲದಿರುವಾಗ, ಈ ರಾಜಕಾರ್ಯಕ್ಕೆ ಮಾತ್ರ ಮಹಾತ್ಮರ ಸಾನ್ನಿಧ್ಯದ ಆವಶ್ಯಕತೆಯಿದೆಯೇನು ? ಅದಕ್ಕೇ ನಾನು ಆಗಾಗ ಅನ್ನುತ್ತಿರುವುದು: ನಮ್ಮಲ್ಲಿಯ ಬಹಳ ಜನರಿಗೆ ಇನ್ನೂ ಸ್ವರಾಜ್ಯ-ಸ್ವಾತಂತ್ರ್ಯಗಳ ಅಗತ್ಯದ ಕಲ್ಪನೆ ನಿಜವಾಗಿ ಆಗಿಲ್ಲ. ದಾಕ್ಷಿಣ್ಯಕ್ಕಾಗಿಯೋ ಒತ್ತಾಯಕ್ಕಾಗಿಯೋ ಕೀರ್ತಿಯ ಹಂಬಲ-ದಿಂದಲೋ ದೇಶಸೇವಕರ ಸೋಗು ಹಾಕುತ್ತಾರೆ; ಬಿಕ್ಕಟ್ಟಿನ ಸಂದರ್ಭ ಬಂದಾಗ, ಹಾಕಿದ ಸೋಗನ್ನು ಕಳಚಿ, ಮೂಲಸ್ವರೂಪವನ್ನು ಪ್ರಕಟಿಸು-

ತ್ತಾರೆ. ಗೋಪೀನಾಥ, ನಿಮ್ಮ ಮೇಲೆ ನಾನು ಒತ್ತಾಯ ಮಾಡಲಾರೆ. ಸ್ವಾತಂತ್ರ್ಯಸಾಧನೆಯೆಂದರೆ, ಮೋಕ್ಷಸಾಧನೆಯಷ್ಟೇ ದುರ್ಗಮದಾರಿಯದಾಗಿದೆ. ತ್ಯಾಗ. ತಪಸ್ಸು-ಶ್ರದ್ಧೆಗಳಿಲ್ಲದೆ ಸ್ವಾತಂತ್ರ್ಯವೂ ಸಿಕ್ಕುವುದಿಲ್ಲ: ಮೋಕ್ಷವೂ ಸಿಕ್ಕುವುದಿಲ್ಲ! ಸರ್ವಜ್ಞನ ಸಂವಚನವೊಂದನ್ನು ಕೇಳಿದ್ದೀರಾ? 'ಖಂಡಿಸದೆ ಕರಣವನು, ದಂಡಿಸದೆ ದೇಹವನು, ಉಂಡುಂಡು ಸ್ವರ್ಗಕೈದಲ್ಕೆ ಅದನೇನು ರಂಡೆಯಾಳುವಳೆ?' ಎಂಬುದು ಆ ವೀರಕವಿಯ ಗಟ್ಟಿಮುಟ್ಟಾದ ಪ್ರಶ್ನೆ! ಈ ಪ್ರಶ್ನೆ ಮುಮುಕ್ಷುಗಳಿಗಷ್ಟೇ ಅನ್ವಯಿಸುವುದಿಲ್ಲ; ಸ್ವಾತಂತ್ರ್ಯಾಪೇಕ್ಷಿಗಳಿಗೂ ಖಂಡಿತವಾಗಿ ಅನ್ವಯಿಸುವುದು. ನಿಜವಾದ ದೇಶಸೇವಕರಿಗೆ ಜನತೆಯಿಂದ ಸಿಕ್ಕುವ ಮನ್ನಣೆಯನ್ನು ಕಂಡು, ಅಂತಹ ಮನ್ನಣೆಯ ಲೋಭದ ಒತ್ತಾಯದಿಂದ ಚಳವಳಿಯ ಕಣಕ್ಕೆ ಇಳಿದು ಕೈಕಾಲು ಆಡಿಸುವವರಿಂದ ಯಾವ ಕೆಲಸವಾದೀತು? ಮಹಾತ್ಮಾಜಿಯವರ ಬಂಧನದ ನೆವದಿಂದ ನೀವೀಗ, ಈ ಕಾರ್ಯರಂಗದಿಂದ ಹಿಂಜರಿಯುವ ಹವಣಿಕೆಯಲ್ಲಿ ಇದ್ದಂತೆ ಕಾಣುತ್ತದೆ. ಬೇಟೆಯಾಡಬಲ್ಲ ನಾಯಿಯ ಸ್ವಭಾವವೇ ಬೇರೆ; ಹಿಡಿದು ತಂದ ನಾಯಿ ಎಂದೂ ಮೊಲವನ್ನು ಮುರಿಯಲಾರದು!"

ಗೋಪೀನಾಥ ಒಣಗಿದ ಕಂಠದಿಂದ ಹೇಳಲು ತೊಡಗಿದ:

"ನೂರು ಮಾತುಗಳಿಂದೇನು? ನನಗ ಈ ಬಗೆಯ ರಾಜಕೀಯ ಚಟುವಟಿಕಿಯೊಳಗ ಮನಸ್ಸು ಹೊಂದದಾಗೇದ. ಅಲ್ಲದೆ ಮನಿಯೊಳಗ ತಂದೆ-ತಾಯಿಗಳ ಒತ್ತಾಯವೂ ಬಹಳ ಆಗೇದ!"

ನಡುವೆಯೆ ಬಸವರಾಜ ವ್ಯಂಗ್ಯಧ್ವನಿಯಲ್ಲಿ ಹೇಳಿದ:

"ಅಲ್ರೀ ರಾಯರs, ಹೀಂಗ ಯಾಕ ಹೇಳತೀರಿ? ಮದಿವೀ ಮಾಡಿಕೋಬೇಕಂತ ಮನಸಿನ ಒತ್ತಾಯ ಬಹಳ ಆಗೇದಂತ ಹೇಳಿ ಬಿಡಬಾರದs?"

ರತ್ನಾಕರ ನಗುತ್ತಲೇ ಕೇಳಿದ:

"ಅಹುದೇನು? ಗೋಪೀನಾಥರಾಯರು ಮದುವೆ ಮಾಡಿಕೊಳ್ಳಬೇಕಂತಾರೇನು?"

"ಮಾಡಿಕೊಳ್ಳಬೇಕಂತಾರೇನು ರಾಯರ? ಅದಕ್ಕಾಗೇ ಈಗ ಎಲ್ಲಾ ಬಿಟ್ಟು ಮನಿಗೆ ಹೋಗಬೇಕಂತ ಹಂಬಲಿಸಲಿಕ್ಕೆ ಹತ್ಯಾರs; ಎಲ್ಲಿಲ್ಲೀವೋ

ಹೆಣ್ಣು ಬಂದಾವಂತ! ನೋಡಲಿಕ್ಕೆ ಬೇಗನೆ ಬರಬೇಕು ಅಂತ ಇವರ ಅಪ್ಪ ಪತ್ರಾ ಬರದಾರ! ಆ ಪತ್ರ ಬಂದ ಕ್ಷಣದಿಂದಲೂ ರಾಯರ ಮನಸ್ಸು ಮನೀ ಕಡೇ ಎಳೀಲಿಕ್ಕೆ ಹತ್ತೀದ!" ಬಸವರಾಜ ಹೇಳಿದ.

"ಓಹೋಹೋ! ಹೀಗೋ? ಹಾಗಾದರೆ ಗೋಪೀನಾಥರಾಯರೆ, ನೀವು ಇಲ್ಲಿಂದ ಕೂಡಲೆ ಹೊರಡಿರಿ! ಒಂದನ್ನು ಸಾಧಿಸಲಿಕ್ಕೆ ಹಂಬಲಿಸುವ ಮನಸ್ಸಿನಿಂದ, ಇನ್ನೊಂದು ಗುರಿಯನ್ನು ಸಾಧಿಸಲಿಕ್ಕೆ ಆಗುವುದು ಎಂದೆಂದೂ ಸಾಧ್ಯವಿರುವುದಿಲ್ಲ. ಮೊದಲು ನೀವು ಮನೋರಮಣಿಯನ್ನು ಸಾಧಿಸಿರಿ; ಆ ಮೇಲೆ ಸ್ವಾತಂತ್ರ್ಯ ರಮಣಿಯ ಕಡೆಗೆ—ಬೇಕಾದರೆ—ದೃಷ್ಟಿ ಹೊರಳಿಸಿರಿ!"

ಇದ್ದುದಿದ್ದ ಹಾಗೆಯೇ ಒಬ್ಬ ಸ್ವಯಂಸೇವಕ ಬಂದು ರತ್ನಾಕರನಿಗೆ ಹೇಳಿದ:

"ನಿಮ್ಮನ್ನ ಕೇಳತಸ ಯಾರೋ ಬಂದಾರ! ನಿಮ್ಮನ್ನ ಕಂಡು ಮಾತು-ಗಳನ್ನಾಡಬೇಕಾದ ಅಗತ್ಯದ ಕೆಲಸ ಅದಸ ಅಂತ!"

ಬೆರಗಿನ ಧ್ವನಿಯಲ್ಲಿ ರತ್ನಾಕರ ಕೇಳಿದ:

"ಏನು? ನನ್ನ ಕೇಳತಸ ಬಂದಾರ? ಯಾರಪಾ ಅವರು? ಸಿ. ಐ. ಡಿ. ಗಿ. ಐ. ಡಿ. ಅಲ್ಲ ಹೌದಲ್ಲೋ ಮತ್ತ?"

"ಛೇಛೇ! ಅಂಥಾದೇನೂ ಇರಲಿಕ್ಕಿಲ್ಲ! ತೆಳ್ಳಗಿನ ಬೆಳ್ಳಗಿನ ಮುದು-ಕರು ಇದ್ದಾರ!"

ರತ್ನಾಕರನ ಮನದೆದುರು ಒಮ್ಮೆಲೆ ಗೋಪಾಲರಾಯರ ಆಕೃತಿ ಬಂದು ನಿಂತಿತು. ಬಹುಶಃ ಅವರೇ ಬಂದಿದ್ದಾರೆಂದು ಭಾವಿಸಿದ. ಬಂದಿದ್ದ ಸ್ವಯಂ-ಸೇವಕನಿಗೆ 'ಅವರಿಗೆ ಇಲ್ಲಿಗೇ ಬರುವಂತೆ ಹೇಳು' ಎಂದು ಹೇಳಿದ. ಸ್ವಯಂ-ಸೇವಕನು ಹೊರಟುಹೋದೊಡನೆಯೆ ರತ್ನಾಕರ ಹೇಳಿದ:

"ಗೋಪೀನಾಥರಾಯರೆ, ನೀವು ಅವಶ್ಯ ಹೊರಡಬಹುದು. ಇಂದಿನ ರಾತ್ರಿಯ ಗಾಡಿಯಿಂದಲೆ ಹೊರಡುವಿರಲ್ಲವೆ? ಬಸವರಾಜ, ನೀವೂ ವಿಚಾರ ಮಾಡಿ ಏನು ಮಾಡಬೇಕೆಂಬುದನ್ನು ನಿರ್ಧರಿಸಿರಿ! ಮನಸ್ಸು ಎರಡು ಕಡೆಗೆ ಎಳೆದಾಡಲು ತೊಡಗಿತೆಂದರೆ, ಯಾವ ಕೆಲಸವೂ ಒಳ್ಳೆಯ ರೀತಿಯಿಂದ ನಡೆಯಲಾರದು. ಆದುದರಿಂದ ಒಂದು ಗಟ್ಟಿಯಾದ ನಿರ್ಣಯಕ್ಕೆ ಬಂದು ನಿಂತುಕೊಳ್ಳಿರಿ! ಈಗ ಇಲ್ಲಿ ಬರುವವರಿದ್ದಾರಲ್ಲವೆ—ಅವರೊಡನೆ ಕೆಲವೊಂದು

ಮಾತುಗಳನ್ನ ಆಡಬೇಕಾಗೇದ. ನೀವೀಗ ಹೊರಡಬಹುದು! ನಮಸ್ತೇ!"

ಇಬ್ಬರೂ ಎದ್ದು ಹೋಗಿ ಒಂದೆರಡು ನಿಮಿಷಗಳಾಗಿರಲಿಲ್ಲ; ಗೋಪಾಲ ರಾಯರು ರತ್ನಾಕರನ ಕೋಣೆಗೆ ಬಂದರು. ರತ್ನಾಕರನು ಅವರನ್ನು ಆದರ-ದಿಂದ ಬರಮಾಡಿಕೊಂಡು, ಹಿರಿಯತನದ ಗೌರವಸ್ಥಾನದಲ್ಲಿ ಕುಳ್ಳಿರಿಸಿದ. ಯೋಗಕ್ಷೇಮದ ಮಾತುಗಳಾದ ಮೇಲೆ ಕೇಳಿದ:

"ನನ್ನ ಕಾಗದ ತಲ್ಪಿತೇನು ನಿಮಗ?"

"ಹೌದು, ತಲ್ಪಿತು! ಅದಕಾಗಿಯೆ ನಿಮ್ಮನ್ನ ಕಂಡು ಮಾತನಾಡಿ ಹೋಗಬೇಕಂತ, ನಾನಾಗಿಯೇ ಇಲ್ಲಿಯ ತನಕಾ ಬಂದೆ!"

"ಸಂತೋಷ! ತಮಗೆ ಹಾಂಗ ಪತ್ರಾ ಬರೀಬೇಕೋ ಬರೀಬಾರದೋ ಅಂತ, ಮೊದಮೊದಲ ನನ್ನ ಮನಸೂ ತುಂಬಾ ಹೊಯ್ದಾಡಿತು. ಯಾಕಂದರ, ಮಗಳ ಮದಿವೀಯಂಥಾ ಮಹತ್ತ್ವದ ಸಂಗತಿ ನೋಡ್ರಿ! ನಿಮ್ಮ ಅಪೇಕ್ಷಾ ಏನೋ, ನಿಮ್ಮ ಮಗಳ ಅಪೇಕ್ಷಾ ಏನೋ, ಒಂದೂ ನನಗ ಗೊತ್ತಿಲ್ಲ; ಆದರೂ ನನ್ನ ಕೈಯಿಂದ ಒಳ್ಳೇ ಕೆಲಸ ಆಗೂ ಯೋಗ ಏನಾದರೂ ಇದ್ದರ ಆಗಲೀ— ಅಂತ ವಿಚಾರ ಮಾಡಿ, ಪತ್ರಾ ಬರೆದು ಬಿಟ್ಟೆ. ದಯೆಮಾಡಿ ವಿಪರೀತ ಏನೂ ಭಾವಿಸಬ್ಯಾಡ್ರೀ ಮತ್ತ ನೀವು!"

ದಾಕ್ಷಿಣ್ಯಭಾವದವರಾಗಿ ಗೋಪಾಲರಾಯರು ಹೇಳಿದರು:

"ಇದರೊಳಗ ವಿಪರೀತ ಭಾವಿಸುವಂಥಾ ಮಾತೇನದ ರಾಯರ? ನಮ್ಮ ದೇಶದ ಜನರೆಲ್ಲಾರೂ ನಿಮ್ಹಾಂಗ ವಿಚಾರ ಮಾಡಲಿಕ್ಕೆ ಹತ್ತಿದರ, ಹೆಣ್ಣು ಹೆತ್ತ ತಂದೀ-ತಾಯಿಗಾ ಚಿಂತಿ, ಎಷ್ಟೋ ಪಟ್ಟಿಗೆ ಕಮ್ಮ್ಯಾಯಾದೀತು! ಆದರ ಕಾಲಮಾಹಾತ್ಮ್ಯ; ಎಲ್ಲಾರ ತಲಿಯೊಳಗೂ ಇಂಥಾ ಸದ್ವಿಚಾರ ಬರಬೇಕು ಹ್ಯಾಂಗ?"

'ಹಾಹಾಹಾ!' ಎಂದು ರತ್ನಾಕರ ಮೆಲ್ಲಗೆ ನಕ್ಕು ನುಡಿದ:

"ನೋಡ್ರಿ ರಾಯರ, ನಮ್ಮ ಜನಾ ದೇವರು ಅಂತಾರ; ಧರ್ಮಾ ಅಂತಾರ; ಪಾಪಾ ಅಂತಾರ; ಪುಣ್ಯಾ ಅಂತಾರ! ಆಚಾರಾ ಅಂತಾರ; ಅನಾ-ಚಾರ ಅಂತಾರ! ಆದರ ಇವೆಲ್ಲಾ ಮಾತು ಬಾಯಾಗ ಮಾತ್ರ ಉಳಿದಾವ. ಕೃತಿಯೊಳಗ ಇಳಿದೇ ಇಲ್ಲ. ಸಂಪ್ರದಾಯವಂತರು—ಅಂತ ಅನಿಸಿಕೊಳ್ಳು-ವವರದೂ ಇದೇ ಹಣೆಬರೆಹ; ಸುಧಾರಕರು—ಅಂತ ಅಂದುಕೊಳ್ಳುವವ-

ರದೂ ಇದೇ ಹಣೇಬರಹ! ನಿಜವಾದ ಮಾನವತಾ—ನಿಜವಾದ ಸಂಸ್ಕೃತಿ - ಅಂದರ ಏನಂಬೂದು ಬಹಾಳ ಜನರಿಗೆ ಗೊತ್ತಿಲ್ಲ; ಎಲ್ಲಾ ಕಡೇ ಮೆರಿಯೂದು ಅಂದರ ದುಡ್ಡಿನ ದೊಡ್ಡಸ್ತಿಕಿ! ಆದರೆ ಸೋಗ ತೋರಿಸೂದರೊಳಗ ಮಾತ್ರ ವೈರಾಗ್ಯದ ಮಡಿವಂತಿಕಿ! ಇಂಗ್ಲೀಷರ ಆಳಿಕೀಗಿಂತಾ ಮೊದಲು, ನಮ್ಮ ದೇಶದೊಳಗಿಂದ ಈ ದುಡ್ಡಿನ ದೊಡ್ಡಸ್ತಿಕಿ, ಸುಳ್ಳು ಸನಾತನಕಿ ಇವನ್ನ ಹೊಡೆದು ಹಾಕಬೇಕು ನೋಡ್ರಿ!"

ಗೋಪಾಲರಾಯರು ವಿಷಾದದ ನಗೆ ನಗುತ್ತ ದೊಡ್ಡದೊಂದು ನಿಟ್ಟುಸಿರನ್ನು ಹಾಕಿದರು. ಆ ಮೇಲೆ ಹೇಳಲು ತೊಡಗಿದರು :

"ಸತ್ಯವಾದ ಮಾತು ನಿಮ್ಮದು! ಈ ಲೋಕದ ರೀತೀ ಕಾಲಕೂಟವನ್ನ ಕ್ಷಣಕ್ಷಣಕ್ಕೂ ಕುಡೀಬೇಕಾಗತದ ನಮ್ಮಂಥಾ ಜನರಿಗೆ! ಸತ್ಯ, ಧರ್ಮ, ನ್ಯಾಯ, ದಯಾ ಇವೆಲ್ಲಾ ಸದ್ಗುಣಗಳಂದರನು, ಸಮಾಜದ ಬೆಲೆಯುಳ್ಳ ಸಂಪತ್ತೂ ಅಂಬೂ ಮಾತು ಮರೆತು ಹೋಗೇದ! ಸಂಸಾರಿಗನಾದ ಬಡವ, ಈ ಲೋಕರೀತೀ ಸಲುವಾಗೇ ಶ್ರೀಮಂತಿಕೀ ಸೋಗು ಹಾಕಬೇಕಾಗತದ; ಆದರೆ, ಸೋಗಿನ ಶ್ರೀಮಂತಿಕಿ ಎಷ್ಟು ದಿನಾ ನಡಿದೀತು? ಹಾಕಿದ ಸೋಗಿಗಾಗಿ ಮಾಡಬೇಕಾದ ವೆಚ್ಚದ ಹೊರೀ ಹೆಚ್ಚಾಗಿ, ಬಡಸಂಸಾರಿಗ, ಪಾತಾಳಖಾತಕ್ಕನ ಬೀಳಬೇಕಾಗತದ! ಬಿದ್ದವರನ್ನ ಕೈಹಿಡಿದು ಎಬ್ಬಿಸೂ ದಾತಾ ಅಂದರ ಇಲ್ಲವೇ ಇಲ್ಲ! ಎಲ್ಲಾರೂ ಬಿದ್ದವರ ಹೊಟ್ಟೀ ಮ್ಯಾಲ ಮುಖದ ಮ್ಯಾಲ—ಕಾಲು ಇಟ್ಟುಕೋತನs ಹೋಗುವವರು!"

ರತ್ನಾಕರ ಹೇಳಲಾರಂಭಿಸಿದ :

"ಎಲ್ಲಾ ಮಾತನೂ ಕಂಡುಕೊಂಡ ಹಿರಿಯ ಅನುಭವ ನಿಮ್ಮದು! ನಮ್ಮ ಸಿರಿವಂತರು, ಈ ಬಗೆಯ ಅನುಭವ ತಮಗೆ ಬರಬಾರದೆಂತಲೇ ಅಂತಃಕರಣದ ಸುತ್ತಲೂ ಅಹಂಕಾರದ ದಪ್ಪವಾದ ಪರದೆಯನ್ನ ಕಟ್ಟಿಕೊಂಡಿರತಾರ! ಆ ಪರದೆ ಹರಿಯೂಹಾಂಗಿಲ್ಲ; ಅವರಿಗೆ ಲೋಕದ ಕಷ್ಟನಷ್ಟದ ಅನುಭವ ಬರುವ ಹಾಂಗಿಲ್ಲ! ಇಂಥಾ ಪರಿಸ್ಥಿತಿ ಬದಲಾಗದೆ ಇದ್ದರೆ, ಸ್ವಾತಂತ್ರ್ಯಸಂಪಾದನ ಮಾಡಿದರೂ ನಮಗ ಶಾಂತಿ-ಸಮಾಧಾನಗಳು ಸಿಕ್ಕೂಹಾಂಗಿಲ್ಲ! ಈ ಮಾತು ಹೋಗಲಿ! ತಾವೀಗ ಬಂದ ಉದ್ದೇಶ ನನಗ ಗೊತ್ತಾಗಬಹುದೇನು?"

"ಬೇರೆ ಉದ್ದೇಶ ಏನಿರಬೇಕು ? ಅದೇ, ತಾವು ಆ ಪತ್ರದೊಳಗ ಬರೆದ ವರನ ಬಗ್ಗೆ ಕೇಳಿಕೊಂಡು ಹೋಗಲಿಕ್ಕಂತs ಬಂದದ್ದು ಇಲ್ಲಿಗೆ!"

ರತ್ನಾಕರ ಕುತೂಹಲಧ್ವನಿಯಲ್ಲಿ ಮೆಲ್ಲಗೆ ಕೇಳಿದ:

"ಆತ ಮನಸ್ಸಿಗೆ ಒಪ್ಪಿಗೆಯಾಗತಾನೆಯೇ ನಿಮಗೆ? ಹಳ್ಳಿಯೂರ ವರನಿಗೆ ಮಗಳನ್ನು ಕೊಡುವುದಕ್ಕೆ ನೀವು ಹಿಂಜರಿಯುವುದಿಲ್ಲವಷ್ಟೆ?"

"ಎಲ್ಲಾ ಮಾತುಗಳನ್ನೂ ಪೂರ್ಣವಾಗಿ ವಿಚಾರ ಮಾಡಿದಿವಿ! ನಮಗೂ ಒಪ್ಪಿಗಿ ಆಗೇದ; ಮಗಳೂ ಮನಃಪೂರ್ವಕ ಒಪ್ಪಿಕೊಂಡಾಳ!"

"ಸಂತೋಷ! ಹಾಂಗಾದರ ಈ ವಿಷಯಾ ಎಲ್ಲಾ ಬರೆದು ರಂಗಣ್ಣಗ ತಿಳಿಸಲ್ಯಾ?"

"ಪತ್ರದ ಮ್ಯಾಲಿಂದ ಕಾರ್ಯಕ್ಕ ವಿಲಂಬ ಆದೀತು! ನನ್ನ ಮ್ಯಾಲ ದಯಾ ತೋರಿಸಿ, ನೀವೇ ಅಲ್ಲಿಯ ವರೆಗೆ ಹೋಗಿ, ಎಲ್ಲ ವಿಷಯಗಳನ್ನೂ ಮಾತನಾಡಿ, ಹುಡುಗಿನ್ನ ನೋಡಲಿಕ್ಕೆ ಅವರನ್ನ ಕರಕೊಂಡು ಬಂದರ ಅನುಕೂಲವಾದೀತೂ ಅಂತ ನನಗ ಅನಿಸತ್ತದ!"

ಗೋಪಾಲರಾಯರಾಡಿದ ಈ ಮಾತುಗಳನ್ನು ಕೇಳಿ ರಂಗಣ್ಣ ಸ್ವಲ್ಪ-ಕಾಲ ಸುಮ್ಮಗೆ ಕುಳಿತಿದ್ದ. ಒಳಗೊಳಗೇ ಏನೇನನ್ನೋ ಯೋಚಿಸಿದ. ಆ ಮೇಲೆ ಯಾವುದೋ ಒಂದು ನಿರ್ಧಾರವನ್ನು ಕಂಡುಕೊಂಡವನಾಗಿ ಹೇಳಿದ:

"ಹುಂ, ನಿಮ್ಮ ಮಾತೂ ಅರ್ಥಪೂರ್ಣ ಅದ. ನಾನು ಮುದ್ದಾಪುರದ ತನಕಾ ಹೋಗಿ ಬರೂದೇ ಒಳ್ಳೇದು ಕಾಣಿಸತ್ತದ. ಈಗ ಮಹಾತ್ಮಾಜಿ-ಯವರನ್ನ ಸರಕಾರ ಹಿಡಿದು ಸೆರೆಯೊಳಗ ಹಾಕೇದ ಬ್ಯಾರೇ! ರಂಗಣ್ಣಾ ಗಾಂಧೀಜಿಯವರ ಪರಮಭಕ್ತ!"

"ದುರ್ದೈವ ನನ್ನ ಬೆನ್ನು ಹತ್ತೇದ! ಅದಕ್ಕ ಯಾರು ಏನು ಮಾಡೂ-ಹಾಂಗ ಅದ? ಇಷ್ಟು ದಿನಾ ಬಿಟ್ಟು ಗಾಂಧೀಜಿಯವರು ಇದೇ ವ್ಯಾಳ್ಯಾ-ದೊಳಗs ಈ ಸತ್ಯಾಗ್ರಹ ಸುರುವುಮಾಡಿ ಸೆರೆಮನಿಗೆ ಹೋಗಬೇಕs?"

ವಿಚಾರಮುದ್ರೆಯಿಂದ ರತ್ನಾಕರ ಹೇಳಿದ:

"ರಂಗಣ್ಣನ ಹೃದಯದ ಕಲ್ಪನಾ ನನಗ ಪೂರ್ಣವಾಗಿ ಅದ; ನೀವೇನೂ ಯೋಚಿಸಬೇಕಾದ ಕಾರಣವಿಲ್ಲ. ಆದರ, ನಾನs ಆ ಹಳ್ಳಿಗೆ ಹೋಗಿ ಎಲ್ಲಾ ಮಾತಾಡಿಕೊಂಡು ಬರತೀನಿ. ನಾಳೆಯ ದಿನ ನನಗೆ ಇಲ್ಲೆ

ಅಗತ್ಯದ ಕೆಲಸ ಅದ ಅದಕ್ಕಾಗಿ ನಾಡಿದಿನ ದಿನವೇ ನಾನು ಮುದ್ದಾಪುರಕ್ಕೆ ಹೋಗಿಬರತೀನಿ!"

"ಇದು ಯಾವ ಜನ್ಮದ ಋಣಾನುಬಂಧವೋ ಏನೋ! ರತ್ನಾಕರ! ಎಲ್ಲಾನೂ ನಿಮ್ಮ ತಲೆಯ ಮೇಲಿನ ಹೊರೆ! ಅದನ್ನ ಹ್ಯಾಂಗ ಹ್ಯಾಂಗ ಇಳಿಸಬೇಕನ್ನೂ ವಿಚಾರ ನಿಮಗs ಗೊತ್ತು! ಆಗಲಿ, ನಾನ್ಹೀಗ ಹೋಗಿ ಬರಲೇ?"

ರತ್ನಾಕರನನ್ನು ಬೀಳ್ಕೊಂಡು ಗೋಪಾಲರಾಯರು ಮೇಲಕ್ಕೆದ್ದರು. ರತ್ನಾಕರ ಹೊರಬಾಗಿಲ ವರೆಗೆ ಅವರನ್ನು ಕಳುಹಿ, ಕೊನೆಗೆ ಆದರದ ನಮಸ್ಕಾರವನ್ನು ಸಲ್ಲಿಸಿದ.

## ೮ನೆಯ ಪರಿಚ್ಛೇದ

ಇಂದು ಅನಂತರಾಯರ ಮನೆಯಲ್ಲಿ ವಸಂತಗೌರಿಯ ಹೂವೀಳ್ಯದ ಗಡಿಬಿಡಿ ನಡೆದಿದೆ. ಸಂಪ್ರದಾಯಪ್ರಿಯರಾದ ತುಂಗಮ್ಮ, ಪ್ರತಿವರುಷವೂ ಹೂವೀಳ್ಯದ ಸಮಾರಂಭವನ್ನು ತುಂಬ ವಿಜೃಂಭಣೆಯಿಂದ ನಡೆಯಿಸುವರು. ಬೆಳಗಿನಿಂದಲೂ ತಲೆತುಂಬ ಅದೇ ಯೋಚನೆ ಅವರಿಗೆ. ಅರಿಸಿಣ-ಕುಂಕುಮಕ್ಕೆ ಬರುವ ಮಂಗಲವತಿಯರನ್ನೆಲ್ಲ ಬೆರಗುಗೊಳಿಸುವಂತೆ ತಮ್ಮ ಮನೆಯ ಗೌರಿಯನ್ನು ಸಿಂಗರಿಸಬೇಕೆಂದು ಅವರಿಗೆ ಆಶೆ. ಗೌರಿಯ ನೈವೇದ್ಯಕ್ಕಾಗಿ ಇಡುವ ತಿಂಡಿ-ತಿನಿಸುಗಳಲ್ಲಿಯೂ ತಮ್ಮ ವೈಶಿಷ್ಟ್ಯ ತೋರಿಸಬೇಕೆಂದು ಅವರಿಗೆ ಅಭಿಲಾಷೆ. ಎಂತಲೇ ಗೌರಿಯ ಶೃಂಗಾರದ ಹೊರೆಯನ್ನೆಲ್ಲ ಕಲಾವತಿಯಾದ ಕುಮುದೆಯ ಕಡೆಗೆ ಒಪ್ಪಿಸಿ, ನೈವೇದ್ಯೋಪಕರಣದ ವಿಭಾಗವನ್ನು ತಮ್ಮ ಕಡೆಗೆ ತೆಗೆದುಕೊಂಡಿದ್ದರು.

ಬೆಳಗಿನ ಒಂಬತ್ತುವರೆ ಗಂಟೆಯಾಗಿರಬಹುದು. ಕುಮುದಾ ಗೌರಿಗೆ ಉಡಿಸಬೇಕಾದ ಸೀರೆಗೆ ನಿರುಗೆ ಹಾಕುತ್ತ ನಡುಮನೆಯಲ್ಲಿ ಕುಳಿತಿದ್ದಳು. ಅನಂತರಾಯರು ಏನೋ ವಿಚಾರಭರದಲ್ಲಿರುವಂತೆ ಮುಖದಲ್ಲಿ ಮುದ್ರೆ ಮೂಡಿಸಿಕೊಂಡು, ಅಲ್ಲಿಯೆ ಅಡಿಯಾಡುತ್ತಲಿದ್ದರು. ಇದ್ದುದಿದ್ದ ಹಾಗೆಯೆ ರಾಯರು ಕುಮುದೆಯ ಬಳಿಯಲ್ಲಿ ತಡೆದುನಿಂತು, ಹೇಳಲು ತೊಡಗಿದರು:

" ನಿನಗ ಹೇಳಲಿಕ್ಕೆ ಮರೆತಿದ್ದೆ ಕುಮುದಾ; ನಿನ್ನೆಯ ಮಧ್ಯಾಹ್ನ ರತ್ನಾಕರ ನಮ್ಮ ಬ್ಯಾಂಕಿಗೆ ಬಂದಿದ್ದ. "

" ಆಂ ? ಬ್ಯಾಂಕಿಗೆ ಬಂದಿದ್ದ ? ಯಾತಕ್ಕ ? ಏನಾದರೂ ಕೆಲಸವಿತ್ತೇನು ಆತನದು ? "

" ಕೆಲಸವಿಲ್ಲದೆ ಯಾತಕ್ಕ ಬಂದಾನು ? ಇನ್ನ ಬ್ಯಾಂಕಿಗೆ ಬರುವವರು ಯಾತಕ್ಕ ಬರತಿರತಾರ ? ಹಣ ಇಡಲಿಕ್ಕರೇ ಬರಬೇಕು—ಇಲ್ಲವೇ, ಹಣ ಪಡೀಲಿಕ್ಕಾದರೂ ಬರಬೇಕು ! "

" ಅದು ಸರೀ ಅನ್ನು ! ಆದರ ರತ್ನಾಕರ ಹಣಾ ಇಡಲಿಕ್ಕೆ ಬಂದಿದ್ದನೋ ಪಡೀಲಿಕ್ಕೆ ಬಂದಿದ್ದನೋ ? "

" ಇದು ಚಳವಳೀ ಕಾಲ ! ಈಗಿನ ಕಾಲದಾಗ ಈ ಚಳವಳಿಗಾರರು ಬ್ಯಾಂಕಿನೊಳಗ ಹಣಾ ಇಟ್ಟಾರೇನು ? ಎಲ್ಲೀದೋ ಒಂದು ಎರಡುಸಾವಿರ ರೂಪಾಯಿಯ ಚಕ್ಕು ಬಂದಿತ್ತು.... ಸ್ವರಾಜ್ಯಭವನದ ಕಾರ್ಯದರ್ಶಿಯ ಹೆಸರಿನಿಂದ. ಅದನ್ನ ಮುರಿಸಲಿಕ್ಕಂತ ರತ್ನಾಕರ ತಾನೇ ಬಂದಿದ್ದ ! "

" ಮತ್ತ, ನೀ ಒಳಗ ನಿನ್ನ ಆಫೀಸಿನೊಳಗ ಕೂತಿರತೀ; ನೀ ಹ್ಯಾಂಗ ನೋಡಿದಿ ಅವರನ್ನ ? "

" ಹಹಹ " ಎಂದು ನಕ್ಕು ಅನಂತರಾಯರು ಹೇಳಲು ತೊಡಗಿದರು :

" ಈ ಚಳವಳೀ ಮಂದಿಗೆ ಸರಕಾರೀ ಕಾನೂನು ಮುರೀಲಿಕ್ಕೆ ಬಂದರೂ ಬ್ಯಾಂಕಿನ ಕಾನೂನು ಮುರೀಲಿಕ್ಕೆ ಬರೂದಿಲ್ಲ. ಬ್ಯಾಂಕಿನ ಕಾನೂನು ಮುರಿ-ದರ, ಅವರಿಗೆ ಕೂಡಲೆ ದುಡ್ಡು ಹ್ಯಾಂಗ ಸಿಕ್ಕೀತು ? ಅದಕ್ಕಾಗಿ ಅವರು ಬ್ಯಾಂಕಿನೊಂದಿಗೆ ನಿಯಮಕ್ಕ ಅನುಸಾರವಾಗಿ ನಡೆದುಕೊಳ್ಳಲೇ ಬೇಕಾಗತದ ! "

ಕುಮುದಾ ಆತುರಧ್ವನಿಯಲ್ಲಿ ಕೇಳಿದಳು :

" ಸರಿ ! ನಡೆದದ್ದಾದರೂ ಏನು ಅಲ್ಲೆ ? "

" ನೋಡು, ಹೀಂಗಾತು : ರತ್ನಾಕರ ತಂದಿದ್ದ ಚಕ್ಕಿನ ಮ್ಯಾಲ ತಾರೀಖಿನ ಅಂಕೀ ಸ್ವಲ್ಪ ತಿದ್ದಿದ ಹಾಂಗ ಕಾಣಿಸತಿತ್ತು ! ಬ್ಯಾಂಕಿನ ಕಾರ-ಕೂನರಿಗೇನು ? ಸ್ವಲ್ಪ ಸಂಶಯ ಬಂದರ ಸಾಕು; ಅಂಥಾ ಚಕ್ಕುಗಳನ್ನ ಹಿಡಿಯೂದೇ ಇಲ್ಲ. ರತ್ನಾಕರನ ಚಕ್ಕನ್ನೂ ಕಾರಕೂನರು ನಿರಾಕರಿಸಿದರು.

ಆತನಿಗೇನೋ ದುಡ್ಡಿನ ಆವಶ್ಯಕತಾ ಬಹಾಳ ಇದ್ದಾಂಗ ಕಾಣಿಸಿತು. ಆ ಚಕ್ಕು ತಗೊಂಡು ನನ್ನ ಹತ್ತರ ಬಂದ. ಈ ಚಳವಳೀ ಮುಂದಿನ್ನ ಕಂಡರ ನನಗ ಆಗೂದಿಲ್ಲ ಖರೆ!— ಆದರ ರತ್ನಾಕರನ ಮುಖಾ ನೋಡಿ, ಅದ್ಯಾಕೋ ನಿನ್ನ ನೆನಪಾಯ್ತು! ನನಗ ಮನಸಿನೊಳಗ ಏನೇನೋ ವಿಚಾರ ಬಂದು ಹೋತು. ರತ್ನಾಕರ ಅಲ್ಲದೆ ಇನ್ನ್ಯಾರಾದರೂ ಬಂದಿದ್ದರ, ಆ ಚಕ್ಕು ಕ್ಯಾಶ್ ಆಗತಿತ್ತೋ ಇಲ್ಲೋ ಹೇಳಲಾರೆ; ಆದರ, ಅತನ ಮುಖಾ ನೋಡಿದ ಕೂಡಲೆ ಅವನಿಗೆ ಏನಾದರೂ ಉಪಕಾರ ಮಾಡಬೇಕಂತ ಅನಿಸಿತು. ಕಾರಕೂನನ್ನ ಒಳಗೆ ಕರೆಯಿಸಿ, ಚಕ್ಕು ಕ್ಯಾಶ್ ಮಾಡಿಕೊಡುವಂತೆ ಹೇಳಿದೆ ಆಗ ರತ್ನಾ-ಕರ ಹೇಳಿದ: 'ತಮ್ಮ ಉಪಕಾರ ಬಹಳವಾಯಿತು ರಾಯರೆ, ಈ ಚಕ್ಕು ಇಂದು ಕ್ಯಾಶ್ ಆಗಿದ್ದಿಲ್ಲವಾದರೆ ತುಂಬ ತೊಂದರೆಯಾಗತಿತ್ತು!' ಅಂತ. ಆಗ ನಾನೂ 'ಇದರೊಳಗ ಉಪಕಾರದ ಮಾತೇನು ಬಂತು ಬಿಡ್ರಿ! ಮುಂದಿಗೆ ತೊಂದರೆ ಕೊಡಬೇಕಂದರ, ನಮ್ಮ ಈ ಬ್ಯಾಂಕಿನ ಅಧಿಕಾರಿಗಳಿಗೆ ಬೇಕಾದ ಕಾಯಿದೇಶೀರ್ ತೊಂದರೆ ಕೊಡಲಿಕ್ಕೆ ಬರತ್ಯದ ಮಾತ್ರ ನಿಜ!' ಅಂತ ಹೇಳಿದ್ಕೆ, ಆಗ ರತ್ನಾಕರ ಮತ್ತೊ ಒಮ್ಮೆ ತನ್ನ ಕೃತಜ್ಞತೆಯನ್ನ ವ್ಯಕ್ತ-ಪಡಿಸಿದ ಸರಕಾರದ ಜೋಡೀ ಬೇಕಾದಷ್ಟು ಉದ್ಧಟರೀತಿಯಿಂದ ವರ್ತಿಸಿದರೂ, ಈ ಚಳವಳೀ ಜನಾ, ಮಿಕ್ಕ ಜನರ ಜೋಡೀ ಒಳ್ಳೇ ರೀತಿಂದ ನಡಕೋತಾರ ನೋಡು ಕುಮುದಾ!"

ಕುಮುದಾ ಸಹಾನುಭೂತಿಯ ಸ್ವರದಲ್ಲಿ ಹೇಳಿದಳು:

"ಮಿಕ್ಕ ಜನರಿಗೆ ಒಳ್ಳೆಯದಾಗಬೇಕಂತs ಅವರು ಚಳವಳೀ ಮಾಡ-ತಾರ ಕಾಕಾ! ರಾಜಕೀಯ ಚಳವಳೀ ಮಾಡುವವರು ಅಂದರ, ಅವರೇನು ಪುಂಡರಲ್ಲ, ಪೋಕರಿಗಳಲ್ಲ!"

"ಮಿಕ್ಕ ಚಳವಳಿಗಾರರು ಪುಂಡರು ಪೋಕರಿಗಳು ಅಲ್ಲಾ ಅಂತ ನಾ ಏನೂ ಹೇಳಲಾರೆ! ಆದರ ರತ್ನಾಕರ ಮಾತ್ರ ನಯ-ವಿನಯಶಾಲಿ ಇದ್ದಾ-ನಂಬೂದನ್ನ, ಆತನ ಒಂದೆರಡು ಮಾತುಗಳಿಂದೇನೇ ತಿಳಕೊಂಡೆ. ಅದಕ್ಕs ಆತಗ ಇಂದ ಸಂಜೀಕಡೆ, ಪಾನಕಾ-ಕೋಸಂಬರಿಗೆ ಬರಬೇಕಂತ ಔತಣಾ ಕೊಟ್ಟೇನಿ!"

"ಹೂಂಹೂಂ! ಒಪ್ಪಿಗೀ ಕೊಟ್ಟಾರೇನು ಬರತೀನಂತ?"

" ಕೊಡದ ? ಅವರ ಅಪ್ಪ ಕೊಟ್ಟಾನು ಒಪ್ಪಿಗೀ ! ಅಂವಗ ನಾನು ಮಾಡಿದ ಉಪಕಾರೇನು ಸಣ್ಣದಲ್ಲ ! ಅಲ್ಲದೆ ನೀನು ದಿನದಿನವೂ ಆತನ ಪ್ರಶಂಸಾ ಮಾಡಿ ಮಾತನಾಡುತಿರುವ ಸಂಗತೀನೂ ತಿಳಿಸಿದೆ, ಗೋಪಾಲ ರಾಯರಿಗೆ ಬರೆದ ಪತ್ರದ ಸಂಗತಿ ನನಗ ಗೊತ್ತಾಗೇದಂಬೂದನ್ನ ಹೇಳಿ, ' ಆ ಗೃಹಸ್ಥಗ ಸಹಾಯ ಮಾಡಲಿಕ್ಕೆ ಸಿದ್ಧರಾಗಿರೂದು ಬಹಾಳ ದೊಡ್ಡ ಮಾತು ! ' ಅಂತ ಪ್ರಶಂಸಾನೂ ಮಾಡಿದೆ. ನಾ ಮಾಡಿದ್ದು ಸುಳ್ಳು ಪ್ರಶಂಸಾದ ಮಾತು ಅಲ್ಲ ಕುಮುದಾ ! ಗೋಪಾಲರಾಯರಿಗೆ ನನಗ ಇಷ್ಟು ದಿವಸದ ಪರಿಚಯ - ಸ್ನೇಹಸಂಬಂಧ ಇದ್ದರೂ, ನನ್ನಿಂದ ಅವರಿಗೆ ಪ್ರತ್ಯಕ್ಷ ಸಹಾಯ ಏನು ಆಗೇದ ಹೇಳು ! ಬರೇ ಒಣಮಾತಿನ ಸಹಾನುಭೂತಿ ! ಈ ತರುಣಗ ಗೋಪಾಲರಾಯರ ಹೆಚ್ಚಿನ ಗುರುತು ಇಲ್ಲ,– ಪರಿಚಯ ಇಲ್ಲ; ಆದರ ಅವರಿಗೆ ಬೇಕಾದ ಸಹಾಯ ಮಾಡಲಿಕ್ಕೆ ಸಿದ್ಧಾಗಿ ನಿಂತಾನ ! "

" ಇದಕ್ಕ ಬರೇ ಗುರುತು ಪರಿಚಯ ಇದ್ದರ ಏನೂ ಆಗೂದಿಲ್ಲ ಕಾಕಾ! ಹೃದಯದೊಳಗ ಮನುಷ್ಯತ್ವ ಅರಳಿರಬೇಕಾಗತದ ! ಅದಿರಲಿ ಕಾಕಾ ! ಇಂದ ಅವರು ನಮ್ಮ ಮನಿಗೆ ಬರತೀನಂತ ಒಪ್ಪಿಕೊಂಡಾರ ಹೌದಲ್ಲೋ ? "

" ಒಪ್ಪಿಕೊಂಡಾರ— ಒಪ್ಪಿಕೊಂಡಾರ— ಖಂಡಿತ ಒಪ್ಪಿಕೊಂಡಾರ. ಬಂದೇ ಬರಬೇಕೂ ಅಂತ, ನಾನೂ ತುಂಬಾ ಒತ್ತಾಯ ಮಾಡಿ ಹೇಳಿದೀನಿ!"

" ಚೆಲೋ ಆತು ಬಿಡು ಹಾಂಗಾದರ ! " ಕುಮುದೆಗಾದ ಹಿಗ್ಗು ಆಕೆಯ ಮುಖದ ಮೇಲೆ ಮೆಲುನಗೆಯಾಗಿ ಪ್ರಕಟವಾಯಿತು. ಮೈಯಲ್ಲಿ ಒಂದು ಬಗೆಯ ಉತ್ಸಾಹದ ಸಂಚಾರವಾದಂತಾಯಿತು. ಸಂಭ್ರಮದ ಸ್ವರದಲ್ಲಿಯೆ ಆಕೆ ಕೂಗಿದಳು . " ಅವ್ವಾ, ಏ ಅವ್ವಾ, ಇದು ನೋಡಿಲ್ಲೆ ! ಒಂದು ಸ್ವಲ್ಪ ಹೊರಗ ಬಾ! "

ಮಗಳ ಆತುರದ ಕರೆಯನ್ನು ಕೇಳಿ, ತುಂಗಮ್ಮ ಕೈಯಲ್ಲಿದ್ದ ಕೆಲಸ-ವನ್ನು ಬಿಟ್ಟು ಹೊರಗೆ ಬಂದಳು ಕುಮುದಾ ಹಿಗ್ಗಿನ ಧ್ವನಿಯಲ್ಲಿಯೇ ಹೇಳಿದಳು :

" ಕೇಳಿದಿಯೇನು ನೀನು ? ಕಾಕಾ ರತ್ನಾಕರರಿಗೆ ಮನಿಗೆ ಬರಲಿಕ್ಕೆ ಔತಣಾ ಕೊಟ್ಟಾನಂತ! ಇಂದ ಸಂಜೀಕಡೆ ಅವರು ಬರುವವರು ಇದ್ದಾರಂತ!"

“ಭಾಳ ಚಲೋ ಆತು ಬಿಡು! ಎಂಥಾ ಭಂಗಾರದಂಥಾ ಹುಡಗ ನೋಡು ರತ್ನಾಕರ! ಇವರಿಗೆ ಯಾವ ಕಡಿಂದs ಸದ್ಬುದ್ಧಿ ಹುಟ್ಟಿತೋ ಏನೋ! ರತ್ನಾಕರನಂಥಾ ಖಾದೀಬಾವಾಗ ಮನಿಗೆ ಬರಲಿಕ್ಕೆ ಔತಣಾ ಕೊಡೂದಂದರ, ನೀಲಿಕೆಟ್ಟ ಮಾತೇ ಸರಿ! ನಾಳಿನ ದಿನ ಸೂರ್ಯಾ ಪಶ್ಚಿ-ಮಕ್ಕs ಉದಯ ಆಗತಾನೋ ಏನೋ!”

ಹೆಂಡತಿಯ ಕೊಂಕುನುಡಿಯನ್ನು ಕೇಳಿ, ರಾಯರು ಕೆಣಕಿದ ಮನದವರಾಗಿ ಹೇಳಿದರು :

“ಇದರೊಳಗ ಸೂರ್ಯಾ ಪಶ್ಚಿಮಕ್ಕ ಉದಯ ಆಗುವಂಥಾ ಮಾತೇ-ನದ? ಏನೋ ನಿನ್ನೆ ಅಕಸ್ಮಾತ್ ಪರಿಚಯ ಆಯ್ತು! ಹುಡುಗ ಸ್ವಭಾವದಲೇ ಒಳ್ಳೆಯವ ಕಂಡ. ಹಾಂಗs ಸಹಜ ಮಾತಾಡುತ್ತಿರುವಾಗ ನಿನ್ನ ಹೂವಿಳ್ಯದ ನೆನಪು ಆತು; ಮನಿಗೆ ಬರಲಿಕ್ಕೆ ಹೇಳಿದೆ. ನೂರಾರು ಜನರು ಬಂದು ಗೌರೀಪ್ರಸಾದಾ ತೊಗೊಂಡು ಹೋಗತಾರ; ಆಯ್ತು, ಅವನೂ ಬಂದು ತೊಗೊಂಡು ಹೋಗತಾನ! ಅವನಿಗಾಗೇ ಅಂತ ಪ್ರತ್ಯೇಕವಾಗಿ ನಾವೇನೂ ಮಾಡಬೇಕಾಗಿಲ್ಲ!”

ತುಂಗಮ್ಮ ಕನಿಕರದ ಧ್ವನಿಯಲ್ಲಿ ಹೇಳಿದಳು :

“ಪ್ರತ್ಯೇಕವಾಗಿ ಮಾಡಿದರೂ ಅದರೊಳಗ ತಪ್ಪೇನದ? ಒಂದು ಹಬ್ಬ ಇಲ್ಲ; ಒಂದು ಹುಣ್ಣಿವಿ ಇಲ್ಲ! ದೇಶಕ್ಕಂತ ದುಡೀತ ದುಡೀತ, ಎಲ್ಲಿ ತಿಂತಾವೋ! ಏನ ಉಣತಾವೋ ಎಲ್ಲಿ ಮಲಕೋತಾವೋ! ಪಾಪ! ಮನೀ—ಮಾರು—ತಂದಿ—ತಾಯಿ—ಹೆಂಡರು—ಮಕ್ಕಳು— ಎಲ್ಲಾರನ್ನೂ ಬಿಟ್ಟು ಎಲ್ಲೆಲ್ಲೋ ಅಲೀತಾವ! ನಮ್ಮ ಜನಕ್ಕ ಅವರ ಸುಖ-ದುಃಖದ ಸಲುವಾಗಿ ಎಚ್ಚರನೇ ಇಲ್ಲ! ಮನಿ-ಮನೀ ಒಳಗೂ ಹಬ್ಬಾ-ಹುಣ್ಣಿವೀ ಆಗತಾವ; ಹೋಳಿಗೀ-ಹೂರಿಗೀ ಆಗತಾವ; ಗೌರೀ-ಗಾಂಧಾರೀ ನಡೀತಾವ! ಆದರ ಈ ಚಳವಳೀ ಮಂದೀ ಸುಖ-ದುಃಖದ ಕಡೆ ನೋಡುವವರು ಒಬ್ಬರೂ ಇಲ್ಲ!”

ಕುಮುದಾ ತಾಯಿಯ ಮುಖದ ಕಡೆಗೆ ಒಂದು ಬಗೆಯ ಆದರದ ದೃಷ್ಟಿಯಿಂದ ನೋಡಲು ತೊಡಗಿದಳು. ಆಗ ಅನಂತರಾಯರು ನಗೆಮಾತು-ಗಳನ್ನಾಡಿದರು :

"ಅಬಾಬಾಬಾ! ಈ ಚಳವಳೀ ಜನರ ದೈವ ತೆರಿಯೂ ಹಾಂಗ ಕಾಣಿಸತದ! ನಿನ್ನಂಥಾ ವಿಚಾರದವರು ಊರಿಗೆ ನಾಕುಮಂದಿ ಹೊರಟರ, ಈ ಜನಕ್ಕ ದಿನಾ ಹೋಳಿಗೀ ತುಪ್ಪಾ ಸಿಗತದ ಅನ್ನು! ಹಾಂಗಾದರ ಏನು ಬಿಡು! ನಾನೂ ನನ್ನ ಬ್ಯಾಂಕಿನ ಕೆಲಸಾ ಬಿಟ್ಟು ಚಳವಳಿಗಾರರ ಗುಂಪಿಗೆ ಸೇರಿಕೊಂಡು ಬಿಡತೀನಿ!"

ತುಂಗಮ್ಮ ಹೇಳಿದರು :

"ನಿಮ್ಮಂಥವರು ಆ ಗುಂಪಿಗೆ ಸೇರಿಕೊಳ್ಳೋದೇನೂ ಬೇಕಾಗಿಲ್ಲ! ನಿಮ್ಮ ನಿಮ್ಮ ಕೆಲಸಾ ಮಾಡಿಕೋತ ಇದ್ದು, ಅವರಿಗೆ ಸಹಾಯಾ ಸಹಾನುಭೂತಿ ತೋರಿಸತಿದ್ದರ ಸಾಕು!"

"ಅದಕ್ಕs ನೋಡು! ನಿನ್ನೆ ರತ್ನಾಕರಗ ನಾನು ಸಹಾಯ ಮಾಡಿದೆ; ಸಹಾನುಭೂತಿ ತೋರಿಸಿದೆ; ಮನಿಗೆ ಬರಲಿಕ್ಕೆ ಔತಣಾ ಕೊಟ್ಟೆ! ಆಯಿತಿಲ್ಲೋ? ಇನ್ನೇನು ಮಾಡಂತೀ ಹೇಳು!"

"ಹುಂ! ಮಾಡಂದದ್ದನ್ನೆಲ್ಲಾ ಮಾಡೂ ಮುಂದಿ ನೀವು....ಹೇಳತೀನಿ ನಿಮಗ! ನಿಮ್ಮದು ಯಾವಾಗಲೂ ಲೆಕ್ಕಾಚಾರದ ಬುದ್ಧಿ! ಏನೇನು ಲೆಕ್ಕಾಚಾರಾ ಮನಿಸಿನಾಗ ಇಟ್ಟುಕೊಂಡು ಆತಗ ಔತಣಾ ಕೊಟ್ಟಿದ್ದೀರೋ ಯಾರಿಗೆ ಗೊತ್ತು! ಎರಡೆರಡು ಸಾವಿರದ ಚೆಕ್ಕು ಮುರಿಸಲಿಕ್ಕೆ ಬರತಾನಂದ ಮ್ಯಾಲ, ನಿಮ್ಮ ಕಣ್ಣಿಗೆ ರತ್ನಾಕರ ಒಬ್ಬ ಮನಿಶ್ಯಾ ಅಂತ ಅನಿಸಿರಬಹುದು! ಅಲ್ಲs?"

ಕುಮುದಾ ತನ್ನ ತಾಯಿಯನ್ನು ಇನ್ನಿಷ್ಟು ಆದರಭಾವದಿಂದ ನೋಡಲು ತೊಡಗಿದಳು; ಆಗ ಅನಂತರಾಯರು ಗಟ್ಟಿಯಾಗಿ ನಕ್ಕು ಮಾತನಾಡಿದರು :

"ಹಾಂ! ನಿನ್ನ ಸ್ವಭಾವಕ್ಕ ಸರಿಯಾಗಿ ಮಾತಾಡಿದಿ ನೋಡು! ಹೇಳಿ ಕೇಳಿ ಹಳೆಯ ವಿಚಾರದ ಹೆಂಗಸು ನೀನು! ಹೊಸ ಜಗತ್ತಿನ ಪರಿಚಯಾ ಅಂದರ ನಿನಗ ಬೇಕಾಗೇ ಇಲ್ಲ!"

"ಹಳೆಯ ವಿಚಾರ, ಹೊಸಾ ಜಗತ್ತು! ಏನ ಮಾತಾಡಬೇಕೆಂಬೂದು ಗೊತ್ತಾಗದಾಗುತ್ತಲೇ ಈ ಮಾತು ಮಾತಾಡತಾರ....ಹೊಸಾ ವಿಚಾರದವರೂ ಅಂತ ಅಂದುಕೊಂಬವರು! ಅಲ್ಲಾ, ಹೊಸಾ ಜಗತ್ತೂ ಅಂದರ ಏನದ ಅದು? ಅದೇ ಭೂಮಿ, ಅದೇ ಆಕಾಶ! ಅದೇ ಸೂರ್ಯ, ಅದೇ ಚಂದ್ರ! ಅದೇ ಹುಟ್ಟು, ಅದೇ ಸಾವು! ಅದೇ ಊಟ, ಅದೇ ಉಡುಗಿ!

ಅದೇ ಅಜ್ಞಾನ, ಅದೇ ಜ್ಞಾನ! ಹೊಸಾ ಜಗತ್ತಂದರ ಅದು ಅದs ಅರೇ ಏನದು.... ನನಗ ತಿಳಿಯಂsಒಲ್ಲದು!"

"ಅದ್ಹ್ಯಾಂಗ ತಿಳೀಬೇಕದು? ಹಳ್ಳೀ ಒಳಗ ಹುಟ್ಟೇದಿ; ಹುಟ್ಟಿದ್ಹಾಂಗs ಬೆಳದೀದಿ! ತಿಳಕೊಳ್ಳೋಬೇಕಂಬೂದರ ಕಡೆ ನಿನ್ನ ಮನಸರೇ ಎಲ್ಲ್ಯದ!"

"ಅದೇನೋ ಸರಿ! ನಾನು ಹಳ್ಳಿಯೊಳಗ ಹುಟ್ಟಿದ್ದೂ ನಿಜ; ಹುಟ್ಟಿದ ಹಾಂಗs ಬೆಳದದ್ದೂ ನಿಜ! ನೀವು ಪಟ್ಟಣದೊಳಗ ಹುಟ್ಟಿದವರು ಹೊಸಾ ಜಗತ್ತನ್ನ ಎಲ್ಲಿ ನೋಡತೀರಿ? ಏನು ನಿಮ್ಮ ಬ್ಯಾಂಕಿನೊಳಗ ನೋಡಲಿಕ್ಕೆ ಸಿಗತsದೋ? ನಿಮ್ಮ ಇಸ್ಪೀಟಿನ ಕ್ಲಬ್ಬಿನೊಳಗ ಸಿಗತsದೋ? ಆ ಸುಡು-ಗಾಡು ಏನೇನೋ ಕುಡೀತಿರತೀರಲ್ಲಾ—ಅದರೊಳಗ ಸಿಗತsದೊ?"

ಅನಂತರಾಯರು ಗಟ್ಟಿಯಾಗಿ ನಕ್ಕುಬಿಟ್ಟರು ಕಾವೇರಿದ ತುಂಗಮ್ಮನ ಮುಖದಲ್ಲಿಯೂ ನಗೆ ತಲೆದೋರಿತು; ಮತ್ತೆ ಹೇಳಿದರು:

"ಅದೇನಾದರೂ ಇರಲಿ! ಈಗ ನನಗ ಕೈತುಂಬಾ ಕೆಲಸ! ಸದ್ಯ ನನ್ನ ಹಳೇ ಜಗತ್ತs ನನಗ ಇರಲಿ! ನಾನೂ ನಿಮಗ ಬೇಕಾಗಿದ್ದರ, ನಿಮ್ಮ ಹೊಸಾ ಜಗತ್ತಿಗೆ ನನ್ನೂ ಕರಕೊಂಡು ಹೋಗೇ ಹೋಗತೀರಿ! ಕುಮುದಾ, ಕೈಯಾಗಿನ ಕೆಲಸಾ ಲಗೂನ ಮುಗಿಸ! ಇನ್ನೂ ಮಂಟಪದ ಸಿದ್ಧತೆ ಆಗ-ಬೇಕು. ಮಧ್ಯಾಹ್ನ ಊಟಾ ಮಾಡಿ, ಬ್ಯಾಗನs ಬರ್ರಿಂತ ಕಾವೇರಿಗೆ ವೇಣಕ್ಕಗ ಹೇಳೀನಿ!"

"ಒಳ್ಳೇದಾತು ಬಿಡು! ಇಂದ ರತ್ನಾಕರ ಇಲ್ಲಿಗೆ ಬಂದಾಗ ಅವರೂ ಇಲ್ಲೇ ಇರತಾರ! ಅವರಿಗೂ ಸಂತೋಷ ಆಗಬಹುದಲ್ಲs ರತ್ನಾಕರನನ್ನ ನೋಡಿ!"

"ಅವರಿಗಾಗದs ಇನ್ನ್ಯಾರಿಗಾಗಬೇಕು—ರತ್ನಾಕರನನ್ನ ನೋಡಿ—ಸಂತೋಷ! ದೇವದೂತನ್ಹಾಂಗ ಮುಂದಾಗಿ, ತಾನಾಗೇ ಸಹಾಯ ಮಾಡ-ಲಿಕ್ಕೆ ನಿಂತಾನ! ಪಾಪ! ಯಾರ ಪುಣ್ಯದಿಂದಾದರೂ ಕಾವೇರಿಗೆ ಒಳ್ಳೆಯ ಗಂಡ ಸಿಗಲಿ; ಆಕೀ ತಾಯಿತಾ-ತಂದೀ ಗೋಳಾಟ ತಪ್ಪಲಿ!"

ಮಾತಿನ ಕೊನೆಯೊಡನೆಯೆ ತುಂಗಮ್ಮ ಒಳಗೆ ಹೊರಟುಹೋದಳು. ಕುಮುದಾ ಕೈಯಲ್ಲಿಯ ಕೆಲಸವನ್ನು ಬೇಗನೆ ತೀರಿಸಬೇಕೆಂದು ಹವಣಿಸಲು ತೊಡಗಿದಳು ರಾಯರು ಪಡಸಾಲೆಗೆ ಬಂದು ಟೇಬಲ್ಲಿನ ಮೇಲೆ ಕುಳಿತು,

ಅಂದಿನ ಟಪಾಲಿಗೆ ಬಂದ ಪತ್ರ-ಪತ್ರಿಕೆಗಳನ್ನು ನೋಡಲು ತೊಡಗಿದರು. ಕಟ್ಟೋಲೆಯೊಂದು ಅವರನ್ನು ತುಂಬ ಕುತೂಹಲದಲ್ಲಿ ಕೆಡಹಿತು. ಅತ್ತಿತ್ತ ಹೊರಳಿಸಿ ನೋಡಿದರು. ವಿಳಾಸದ ಅಕ್ಷರಗಳು ಅಪರಿಚಿತವೆನಿಸಿದುವು. ಅಂಚೆಯ ಮುದ್ರೆಯನ್ನು ನೋಡಿದರು; ' ಸಾಧನಕೇರಿ ' ಎಂದಿದ್ದಿತು. ಆತುರ ದಿಂದ ಅದನ್ನು ಒಡೆದು ನೋಡಿದರು; ಮನದಲ್ಲಿಯೆ ಓದಿಕೊಳ್ಳಲು ತೊಡಗಿ-ದರು. ಪತ್ರದಲ್ಲಿದ್ದ ಸಂಗತಿ ಹೀಗಿದ್ದಿತು :

ಸಾಧನಕೇರಿ—ಧಾರವಾಡ
....ಕಂಪಾವುಂಡ್

ಪ್ರಿಯ ಅನಂತರಾಯರೆ,

ನಾನು ತಮಗೆ ತೀರ ಅಪರಿಚಿತ; ಆದರೂ ವಿಶೇಷಕಾರಣಕ್ಕಾಗಿ ಈ ಕಾಗದ ಬರೆಯುತ್ತಲಿದ್ದೇನೆ ಓದಿ ವಿಪರೀತವೇನನ್ನೂ ಭಾವಿಸಲಾರಿರೆಂದು ನನ್ನ ಖಂಡಿತವಾದ ನಂಬುಗೆ.

ಹೊಸ ವಿಚಾರದವರಾದ ತಾವು, ನಾನು ನೇರವಾಗಿ ತಮಗೆ ಪತ್ರ ಬರೆಯುತ್ತಿರುವುದನ್ನು ತಪ್ಪೆಂದು ಭಾವಿಸಲಾರಿರಿ! ಸ್ಪಷ್ಟವಾಗಿ ಮಾತನಾಡದೆ ಕಾಗದ ಬರೆಯದೆ, ಒಬ್ಬರೊಬ್ಬರ ಮನಸ್ಸಿನ ಮಾತುಗಳು ಒಬ್ಬರೊಬ್ಬರಿಗೆ ಹೇಗೆ ಗೊತ್ತಾಗಬೇಕು ? ಈಗ ತಮ್ಮನ್ನು ಕಂಡು ಪ್ರತ್ಯಕ್ಷ ಮಾತನಾಡುವ ಅನುಕೂಲತೆಯಿಲ್ಲ. ಏಕೆಂದರೆ, ನಮ್ಮ ನಿಮ್ಮ ಪರಿಚಯವೇ ಇಲ್ಲದಿರುವಾಗ ಇಬ್ಬರೂ ಒಬ್ಬರನ್ನೊಬ್ಬರು ಕಾಣುವುದು ಹೇಗೆ ? ಮಾತನಾಡುವುದು ಹೇಗೆ? ಆದುದರಿಂದಲೇ ಈ ಪತ್ರ ಬರೆದು ಮಹತ್ತ್ವದ ವಿಷಯವನ್ನು ತಿಳಿಸ-ಬೇಕೆಂದಿರುವೆನು.

ತಮಗೆ ಮದುವೆಗಾದ ಒಬ್ಬ ತರುಣಕನ್ಯೆ ಇರುವಳೆಂದು ನನಗೆ ಗೊತ್ತಿದೆಯಿಷ್ಟೇ ಅಲ್ಲ; ಅವಳನ್ನು ನಾನು ಕಣ್ಣಾರೆ ಕಂಡೂ ಇದ್ದೇನೆ. ತಾವು ಮಗಳಿಗೆ ಆಧುನಿಕ ವಿದ್ಯೆಯನ್ನು ಕಲಿಸಿ ಸುಶಿಕ್ಷಿತಳನ್ನಾಗಿ ಮಾಡಿದುದು ಸಂತೋಷದ ಸಂಗತಿಯಾಗಿದೆ. ನಾನಷ್ಟೇ ಅಲ್ಲ; ಅವಳ ರೂಪ-ಗುಣಗಳನ್ನು ಕಂಡ ನನ್ನ ಗೆಳೆಯರೂ ತುಂಬ ಸಂತೋಷಪಟ್ಟಿದ್ದಾರೆ. ನಮ್ಮ ನಾಡಿನಲ್ಲಿ ಈ ಬಗೆಯ ಕನ್ಯೆಯರು ಹೆಚ್ಚಿದಾಗಲೇ ನಮ್ಮ ಸಮಾಜ ಪ್ರಗತಿಯ ದಾರಿಯನ್ನು ಹಿಡಿದಂತಾದೀತು. ತಾವು ಅಂತಹ ಸಮಾಜಪ್ರಗತಿಯ ದಾರಿಗೆ ಸಹಾಯಕರಾಗಿ, ನಿಂತುದಕ್ಕಾಗಿ, ನಾನೂ ನನ್ನ ಗೆಳೆಯರೂ ನಿಮಗೆ

ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತೇವೆ.

ಈಗ ತಮಗೆ ತಿಳಿಸಲೇಬೇಕಾದ ಒಂದು ಮಾತೆಂದರೆ: ತಾವು ತಮ್ಮ ಬೆಳೆದುನಿಂತ ಮಗಳಿಗಾಗಿ ಯೋಗ್ಯವರನನ್ನು ಹುಡುಕುತ್ತಿರಬಹುದು. ಇಂದಿನ ಕಾಲದಲ್ಲಿ ವರನಿಗೆ ತಕ್ಕ ಕನ್ಯೆಯೂ ಕನ್ಯೆಗೆ ತಕ್ಕ ವರನೂ ದೊರೆತು ಮದುವೆಯಾಗುವುದೆಂದರೆ ಅಸಾಧ್ಯವಿಷಯವೇ ಆಗಿದೆ. ಆದುದರಿಂದ ಯೋಗ್ಯಕನ್ಯೆಗೆ ಯೋಗ್ಯವರನನ್ನು ತೋರಿಸಿಕೊಡುವುದು ನನ್ನಂತಹ ಸಮಾಜ ಹಿತಚಿಂತಕನಿಗೆ ಒಂದು ಕರ್ತವ್ಯವೇ ಆಗಿದೆ.

ನನ್ನ ಗೆಳೆಯನೊಬ್ಬನಿದ್ದಾನೆ. ರೂಪವಂತ; ಗುಣವಂತ. ಇದೇ ನಗರದ ಕೋರ್ಟಿನಲ್ಲಿ ಕೆಲಸ ಮಾಡುತ್ತಿದ್ದು ಕೈತುಂಬ ಸಂಬಳ ಗಳಿಸುತ್ತಾನೆ. ಹೊಲ-ಮನೆಯ ಉತ್ಪನ್ನವೂ ತಕ್ಕಮಟ್ಟಿಗೆ ಇದೆ. ತುಂಬ ರಸಿಕ. ಕಲಿತ ಕನ್ಯೆಯನ್ನು ಲಗ್ನಮಾಡಿಕೊಳ್ಳಬೇಕೆಂದು ಅತನ ಮನಸ್ಸಿನ ಹಂಬಲ. ಅಂದೊಂದು ದಿನ, ಶ್ರೀ. ಗೋಪಾಲರಾಯರ ಮನೆಗೆ ಅವರ ಮಗಳನ್ನು ನೋಡಲಿಕ್ಕೆಂದು ಬಂದಾಗ, ಅಲ್ಲಿಗೆ ಬಂದಿದ್ದ ತಮ್ಮ ಮಗಳ ಗುಣ-ರೂಪ-ಗಳನ್ನು ಕಣ್ಣಾರೆ ಕಂಡು, ನನ್ನ ಗೆಳೆಯ ಅವಳನ್ನು ಮನವಾರೆ ಮೆಚ್ಚಿದ್ದಾನೆ. ಅವಳನ್ನೇ ಮದುವೆಯಾಗುವೆನೆಂದು ಪ್ರಥಮಪ್ರೇಮದ ಮಾತುಗಳನ್ನೂ ಆಡುತ್ತಿರುತ್ತಾನೆ. ತಮ್ಮ ಮಗಳೂ ಅವನನ್ನು ನೋಡಿದ್ದಾಳೆ. ಆದುದರಿಂದ ನಾನೀಗ ಅವನಾರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ತಾವು ಮನಸ್ಸು ಮಾಡಿ, ಮಗಳನ್ನು ಈ ಮದುವೆಗೆ ಒಪ್ಪಿಸಿದರೆ, ಇಬ್ಬರಿಗೂ ಬಹಳ ಅನುಕೂಲವಾದೀತು. ಒಳ್ಳೆಯ ಕನ್ಯೆ ಸಿಕ್ಕರೆ, ನನ್ನ ಗೆಳೆಯ ವರದಕ್ಷಿಣೆಯ ಆಶೆಯನ್ನೂ ಮಾಡುವವನಲ್ಲ. ಇವೆಲ್ಲ ಅನುಕೂಲತೆಗಳ ಕಡೆಗೆ ಲಕ್ಷ್ಯಕೊಟ್ಟು, ತಾವು ನನ್ನ ಗೆಳೆಯನಿಗೆ ತಮ್ಮ ಮಗಳನ್ನು ಮದುವೆ ಮಾಡಿಕೊಡಬೇಕಾಗಿ ಬೇಡುವೆನು.

ಇನ್ನೊಂದು ಮಾತು: ಈ ದಿನಗಳಲ್ಲಿ ವರ್ಷಾನುವರ್ಷ ಹುಡುಕುತ್ತ ಹೋದರೂ ಯೋಗ್ಯವರಗಳು ದುರ್ಮಿಳವಾಗಿರುವಾಗ, ಈ ವರ ತಾನಾಗಿಯೆ ನಿಮ್ಮ ಮನೆಗೆ ನಡೆದು ಬಂದಂತೆ ಆಗಿದೆ. ಈಗಾಗಲೆ ಹತ್ತಾರು ಕನ್ಯೆಯರನ್ನು ನೋಡಿ ನೋಡಿ ಮನಸ್ಸಿಗೊಪ್ಪದೆ ಬಿಟ್ಟವನು, ತಮ್ಮ ಮಗಳನ್ನು ಮಾಡಿ-ಕೊಳ್ಳಲಿಕ್ಕೆ ಒಮ್ಮನದಿಂದ ಸಿದ್ಧನಾಗಿದ್ದಾನೆ.

ತಾವು ತಮ್ಮ ಒಪ್ಪಿಗೆಯ ಉತ್ತರ ಕಳುಹುವುದಾದಲ್ಲಿ ಮೇಲಿನ ವಿಳಾಸಕ್ಕೆ ಕಾಗದ ಬರೆಯಬೇಕು.

ತಮ್ಮ ಆಪ್ತತ್ವವನ್ನು ಬಯಸುವ
**ಬಳವಂತ ಅಪ್ಪಾರಾವ ಆಗಲಾವೇ"**

ಪತ್ರವನ್ನೋದುತ್ತಿರುವಾಗ, ಅನಂತರಾಯರ ಮುಖದಲ್ಲಿ ನೆತ್ತರು ರಭಸದಿಂದ ಹರಿಯುವುದು ಕಂಡಿತು. ಮೂಗಿನಿಂದ ಒತ್ತರದ ಉಸಿರಾಟ ನಡೆದಂತೆ ಕೇಳುತ್ತಿದ್ದಿತು. ಹುಬ್ಬುಗಳು ಸಂಕುಚಿತವಾದಂತೆ ತೋರಿತು. ಪೂರ್ತಿಯಾಗಿ ಪತ್ರವನ್ನು ಓದಿದ ಮೇಲೆ 'ಆಹಹಹ!' ಎಂದು ಗಟ್ಟಿಯಾಗಿ ನಕ್ಕುಬಿಟ್ಟರು. ಆ ನಗೆಯಲ್ಲಿ ರೋಷ-ತಿರಸ್ಕಾರಗಳೆರಡೂ ತುಂಬಿದ್ದುವು. ಒಂದೆರಡು ನಿಮಿಷ ಸುಮ್ಮಗೆ ಕುಳಿತರು; ಏನೇನನ್ನೋ ಯೋಚಿಸಿದರು. ನಿಡಿದಾಗಿ ಉಸಿರೊಂದನ್ನು ಸುಯ್ದು 'ಕುಮುದಾ, ಕುಮುದಾ!' ಎಂದು ಆವೇಶದ ಧ್ವನಿಯಲ್ಲಿಯೆ ಕರೆದರು; ಕರೆಯೊಂದಿಗೆ ಕೆಮ್ಮಲುತೊಡಗಿದರು. ತಂದೆಯ ಕರೆಯನ್ನೂ ಕೆಮ್ಮನ್ನೂ ಕೇಳಿದ ಕುಮುದಾ; ಒಳಗಿನಿಂದ ಬರುವಾಗ ಔಷಧಿಯ ಗುಳಿಗೆಯನ್ನೂ ನೀರಿನ ಪಂಚಪಾತ್ರೆಯನ್ನೂ ಕೈಯಲ್ಲಿ ತೆಗೆದುಕೊಂಡೇ ಬಂದಳು. ಗುಳಿಗೆಯೊಂದನ್ನು ತೆಗೆದು ತಂದೆಯ ಕೈಯಲ್ಲಿಟ್ಟು, ನೀರಿನ ಪಾತ್ರೆಯನ್ನು ಟೇಬಲ್ಲಿನ ಮೇಲೆ ಇಟ್ಟಳು. ಅನಂತರಾಯರು ಗುಳಿಗೆಯನ್ನು ನುಂಗಿ ನೀರು ಕುಡಿದರು. ಒತ್ತರಿಸಿ ಬಂದ ಕೆಮ್ಮು ಪೂರ್ಣವಾಗಿ ನಿಲ್ಲಲು ನಾಲ್ಕೈದು ನಿಮಿಷಗಳು ಬೇಕಾದುವು. ಬಳಿಕ ರಾಯರು ನುಡಿದರು:

"ಕುಮುದಾ, ಇದೊಂದು ಕಾಗದ ಬಂದಿದೆ. ಇದನ್ನು ನೀನು ಅವಶ್ಯವಾಗಿ ಓದಬೇಕು! ನೋಡು, ತೆಗೆದುಕೋ!" ಎಂದು ಅಸಹನೆಯ ನಗೆ ನಗುತ್ತಲೆ ಪತ್ರವನ್ನು ಕುಮುದೆಯ ಕಡೆಗೆ ಕೊಟ್ಟರು. ಅವಳಿಗೆ ಒಳಗೆ ಏನು ಅವಸರದ ಕೆಲಸವಿದ್ದಿತೋ— ಪತ್ರವನ್ನು ತೆಗೆದುಕೊಂಡು ನಡುಮನೆಯೊಳಗೆ ಹೊರಟುಹೋದಳು.

## ೯ನೆಯ ಪರಿಚ್ಛೇದ

ಸಹಜಸುಂದರಿಯಾದ ಕುಮುದಾ, ಎಂದೂ ತನ್ನ ವೇಷ-ಭೂಷಣಗಳ ಕಡೆಗೆ ವಿಶೇಷ ಲಕ್ಷ್ಯಕೊಡುತ್ತಿರಲಿಲ್ಲ. ಲಕ್ಷ್ಯಕೊಡಬೇಕೆಂಬ ಕುತೂಹಲವೂ ತಲೆದೋರುತ್ತಿರಲಿಲ್ಲ. ಶಾಲೆಗೆ ಹೋಗುವಾಗ, ಅಲ್ಲಿಯ ಅಭ್ಯಾಸದ ಕಡೆಗೇ ಹೆಚ್ಚು ಆಸಕ್ತಿ. ಹೊರತು, ಮಿಕ್ಕ ಹುಡುಗಿಯರಂತೆ ದಿನಕ್ಕೊಂದು ಪ್ರಕಾರದ ಬೆಡಗನ್ನು ಕಾಣಿಸುವ ವೇಷ-ಭೂಷಣವೈವಿಧ್ಯದ ಕಡೆಗೆ ಆಸಕ್ತಿ ತೋರಿಸುತ್ತಿರಲಿಲ್ಲ. ಹಾಗೆ ಬೆಡಗು ಮಾಡಬೇಕೆಂದರೆ, ಎಲ್ಲ ಬಗೆಯ ಅನುಕೂಲತೆ ಇದ್ದಿತು; ಬೇಡವೆಂದು ಹೇಳುವವರು ಯಾರೂ ಇರಲಿಲ್ಲ. ಆದರೂ ಕುಮುದಾ, ಅಚ್ಚುಕಟ್ಟಾದ ಸಾಮಾನ್ಯ ಉಡಿಗೆ-ತೊಡಿಗೆಯಲ್ಲಿರುವಳು. ಈ ಪ್ರವೃತ್ತಿ ಅವಳ ತಾಯಿಯಿಂದ ಬಂದುದಾಗಿರಬೇಕು.

ವಸ್ತುಸ್ಥಿತಿ ಹೀಗಿದ್ದರೂ, ಇಂದು ಕುಮುದಾನ ವೇಷ-ಭೂಷಣಗಳಲ್ಲಿ ಒಂದು ಬೆಡಗುಗಾರಿಕೆ ಮೂಡಿ ನಿಂತಿದ್ದಿತು. ನೀಳವಾದ ಕೂದಲನ್ನು ಚಾತುರ್ಯದಿಂದ ಹೆಣೆದು ಬಿಡುಮುಡಿ ಬಿಟ್ಟಿದ್ದಳು. ಬಾಚಿ ಕೂಡಿಸಬೇಕೆಂದರೂ ಕೇಳದೆ ಮೇಲೆ ಸುತ್ತಿಕೊಂಡು ನಿಂತ ಮುಂಗುರುಳು, ಮುಖಕ್ಕೆ ಚೆಲುವಿನ ತೋರಣ ಕಟ್ಟಿದ್ದುವು. ಉಟ್ಟ ತಿಳಿಹಸಿರಿನ ರೇಸಿಮೆಯ ಪತ್ತಲವೂ, ತೊಟ್ಟ ಮುತ್ತಿನ ಬಣ್ಣದ ಕುಪ್ಪಸವೂ ಆಕೆಯ ದುಂಡುಮೈಗೆ ಒಪ್ಪನ್ನು ತಂದಿದ್ದುವು. ಮುಂಗೈಯಲ್ಲಿ ಎರಡೆರಡು ಚಿನ್ನದ ಬಳೆಗಳು. ಕೊರಳಲ್ಲಿ ಮಿರುಗುವ ತಾರಕಾ ಮಾಲೆ. ಕೆಳಗಿವಿಯ ಕೆಂಪಿನ ಬೆಂಡೋಲೆ, ಎಡಮೂಗಿನಲ್ಲಿಯ ಹರಳಿನ ಮೂಗುಬಟ್ಟು—ಅವಳ ಚೆಲುವನ್ನು ಹೆಚ್ಚಿಸಲು ಹೆಣಗಿ ಕೃತಕೃತ್ಯವಾಗಿದ್ದುವು. ಹಣೆಯ ನಡುವೆ ಹಚ್ಚಿದ ಕಂದುಗುಂಕುಮದ ದುಂಡುಬೊಟ್ಟು, ಆಕೆಯ ಕಲಾಪೂರ್ಣತೆಗೆ ಸಾಕ್ಷಿ ನುಡಿಯುತ್ತಿದ್ದಿತು.

ಎಂದೂ ಇಷ್ಟೊಂದು ಶೃಂಗರಿಸಿಕೊಳ್ಳದ ಮಗಳನ್ನು ತುಂಗಮ್ಮ ಆಗಾಗ ನೋಡುವರು; ಆಶ್ಚರ್ಯಪಡುವರು. ಆನಂದದ ಮುಗುಳುನಗೆಯನ್ನು ಪ್ರಕಟಿಸುವರು. ಹೂವಿಳ್ಯದ ನೆಪದಿಂದಲಾದರೂ ಮಗಳ ಸಂಪೂರ್ಣ ಸೌಂದರ್ಯವನ್ನು ನೋಡಲಿಕ್ಕಾಯಿತೆಂದು, ವಸಂತಗೌರಿಗೆ ಮತ್ತೆ ಮತ್ತೆ—ಮನದಲ್ಲಿಯೆ—ಭಕ್ತಿಯ ವಂದನೆಗಳನ್ನು ಸಲ್ಲಿಸಿದರು. ಹೂವೀಳ್ಯಕ್ಕಾಗಿ ಊರಲ್ಲಿಯ ಸುಮಂಗಲೆಯರು ಅರಿಸಿಣ-ಕುಂಕುಮಕ್ಕೆ ಬರುವವರು; ಅದಕ್ಕಾಗಿಯೆ

ಕುಮುದಾ ಇಂದು ಇಷ್ಟೊಂದು ಆಸ್ಥೆಯಿಂದ ಪ್ರಸಾಧನ ಮಾಡಿಕೊಂಡಿದ್ದಾ-ಳೆಂದು ತುಂಗಮ್ಮನ ಭಾವನೆ. ಕುಮುದೆ ಮಾತ್ರ ಆಯ್ದು-ಆಯ್ದು ಕೊಂಡು ವೇಷಭೂಷಣ ಮಾಡಿಕೊಳ್ಳುತ್ತಲಿದ್ದಳು; ಆದರೆ ಏತಕ್ಕಾಗಿ ಇಷ್ಟೆಲ್ಲ ಶೃಂಗಾರ ಮಾಡಿಕೊಳ್ಳುತ್ತಲಿದ್ದೇನೆಂಬುದು ಅವಳದವಳಿಗೇ ಗೊತ್ತಾಗಿರಲಿಲ್ಲ. ಕನ್ನಡಿಯ ಮುಂದೆ ನಿಂತು ತನ್ನನ್ನು ತಾನೇ ನೋಡಿಕೊಂಡಾಗ, ಅವಳಿಗೂ ಆಶ್ಚರ್ಯವೆನಿಸಿತು. ಯಾವುದೋ ಒಂದು ಸುಪ್ತಭಾವನೆ, ಮನಸ್ಸಿಗೆ ಒಂದು ಬಗೆಯ ಸಮಾಧಾನವನ್ನು ಉಂಟುಮಾಡಿತು

ವೇಣಕ್ಕ ತುಂಬುಗಣ್ಣಿಂದ ಕುಮುದೆಯನ್ನು ನೋಡಿದರು ಉತ್ಸಾಹ ಧ್ವನಿಯಲ್ಲಿ ಹೇಳಿದರು : 'ತುಂಗಮ್ಮಾ, ಇಂದು ಗೌರೀ ಮಂಟಪದೊಳಗ, ಆ ನಿರ್ಜೀವ ಗೌರಿಯ ಮೂರ್ತೀ ಯಾಕ ಕೂಡಿಸತೀರಿ ? ಈ ಜೀವಂತ ಗೌರಿ ಇದ್ದಾಳ ನೋಡ್ರಿ, ಈಕಿನ್ನs ಕೂಡಿಸಿಬಿಡ್ರಿ !'

ಕುಮುದೆಗೆ ನಾಚಿಕೆಯೆನಿಸಿತೇನೋ! ಒಮ್ಮೆಲೇ ನುಡಿದಳು :

"ಹೋಗರೀ ಅಬಚೀ! ಇಲ್ಲದ್ದs ಒಂದು ನಿಮ್ಮ ಮಾತು. ನೀವು ಹೀಂಗೆಲ್ಲಾ ಮಾತಾಡಲಿಕ್ಕೆ ಹತ್ತಿದರ, ನಾ ಇವನ್ನೆಲ್ಲಾ ತೆಗೆದು, ದಿನದ ಉಡಿಗಿ–ತೊಡಗಿನs ಹಾಕಿಕೊಳತೀನಿ ನೋಡ್ರಿ !"

ವೇಣಕ್ಕ ನಗು-ನಗುತ್ತಲೇ ಹೇಳಿದರು :

"ಇಲ್ಲ ಬಿಡು ತಾಯಿಾ! ನಿನಗ ಏನೂ ಅನ್ನೂದಿಲ್ಲ, ಆಯ್ತಿಲ್ಲೋ? ಆದರೂ ಇಂದ ನಿನ್ನ ನೋಡಿ ಆಗಾಗ ನನಗ ಅನಿಸತsದ; ಈ ಗೌರೀ ಕೈ ಹಿಡಿಯೋ ಗಂಗಾಧರ ಎಲ್ಲಿ ಅವತಾರ ಮಾಡ್ಯಾನೋ ಅಂತ! ನಿಜವಾಗಿ ನೋಡು ಕುಮುದಾ, ಹೆಣ್ಣುಮಕ್ಕಳಿಗೆ ಈ ವಯಸ್ಸಿಗೆಂದರ ಲಗ್ನ ಆಗಿ ಹೋಗಿರಬೇಕು. ಇಲ್ಲದಿದ್ದರ, ಈ ಅರಳುಮಲ್ಲಿಗೀ ಸುಗಂಧದಂಥಾ ಹೊಸಾ ಹರಯದ ಚೆಲಿವಿಕಿ, ಸುಮ್ಮನs ಗಾಳಿಗೆ ಗಾಳಿ ಆಗಿ ಹೋಗತsದ !"

ವೇಣಕ್ಕನ ಮಾತು ಕುಮುದೆಯ ಗುಂಡಿಗೆಗೆ ಏಟು ಹಾಕಿದಂತೆ ಮಾಡಿತು; ಆಕೆಯ ಮೈಯನ್ನು ಜುಮ್ಮುದಟ್ಟಿಸಿತು. ಮನಸ್ಸನ್ನು ಎಲ್ಲೆ-ಲ್ಲಿಯೋ ಓಡಾಡಲು ಹಚ್ಚಿತು. ನಾಚಿಕೆಯಿಂದಲೋ ಏನೊ!—ಕುಮುದೆಯ ಮುಖಕ್ಕೆ ಚೆಂಬಣ್ಣವೇರಿತು. ಆಗ ಅವಳು ಮೆಲುನಗೆ ನಗುತ್ತ ತಲೆಯನ್ನು ಬಾಗಿಸಿದಳು. ಆಗಲೇ ಕಾವೇರಿ ಕುಮುದೆಯ ಕಿರುಮನೆಗೆ ಬಂದು ಹೇಳಿದಳು:

“ ಐದುಗಂಟೆ ಆಯಿತು ಕುಮುದಾ! ಇನ್ನ ಅರಿಸಿಣ-ಕುಂಕುಮಕ್ಕ ಜನರು ಬರಲಿಕ್ಕೆ ಆರಂಭ ಮಾಡತಾರ! ನಡೀ, ನಿಂದೆಲ್ಲಾ ಶೃಂಗಾರ-ಪ್ರದರ್ಶನ ಮುಗೀತಿಲ್ಲೋ ? ”

“ ಹೋಗs ತಾಯಿ! ಎಲ್ಲಾರೂ ಹೀಂಗs ಮಾತಾಡಲಿಕ್ಕೆ ಹತ್ತಿ-ದೀರಿ! ಇವನೆಲ್ಲಾ ತಗದು ಇಟ್ಟs ಬಿಡತೀನಿ ನಿಂದ್ರು!” ಎಂದು ಹುಸಿ-ಕೋಪದಿಂದ ಹೇಳಿದಳು ಕುಮುದಾ. ಆಗ ತುಂಗಮ್ಮ ಗಂಭೀರಸ್ವರದಲ್ಲಿ ಹೇಳಿದರು :

“ ಇಲ್ಲದ ಹುಚ್ಚುಚಾಷ್ಟರ ಮಾಡಬ್ಯಾಡ ಕುಮುದಾ! ಅವರು ಚಾಷ್ಟೀ ಮಾಡತಾರಂಬೂದು ನಿನಗ ತಿಳಿಯೂದಿಲ್ಲೇನು ? ”

ತಾಯಿಯ ಮಾತಿಗೆ ಮನ್ನಣೆಕೊಡಬೇಕೆಂಬ ಭಾವನೆಯಿಂದಲೋ ಏನೋ, ಕುಮುದಾ ಇದ್ದಹಾಗೆಯೇ ಎದ್ದಳು. ಕಾವೇರಿಯನ್ನೊಡಗೊಂಡು, ಗೌರಿಯ ಮಂಟಪದ ಕಡೆಗೆ ನಡೆದಳು.

ಒಬ್ಬರ ಹಿಂದೊಬ್ಬರಂತೆ ಗುಂಪುಗಟ್ಟಿಕೊಂಡು ಮುತ್ತೈದೆಯರು ಬರಲಾರಂಭಿಸಿದರು. ಕುಮುದಾ ಕಾವೇರಿ—ಇಬ್ಬರೂ ಅವರನ್ನು ಸ್ವಾಗತಿಸಿ, ಅರಿಸಿಣ-ಕುಂಕುಮ, ಪಾನಕ-ಪ್ರಸಾದಗಳನ್ನು ಕೊಡಲು ತೊಡಗಿದರು. ವಯಸ್ಸಾದ ಹೆಂಗುಸರು ಬಂದು ತುಂಗಮ್ಮನನ್ನು ಕಂಡು, ಗೌರಿಯ ಶೃಂಗಾ-ರದ ವಿಜೃಂಭಣೆಯನ್ನು ಬಣ್ಣಿಸಿ ಬಣ್ಣಿಸಿ ಮಾತನಾಡಿ ಹೋಗುತ್ತಿದ್ದರು. ಮತ್ತೆ ಕೆಲವರು ಕುಮುದೆಯ ಸೌಂದರ್ಯವನ್ನೂ ಹೊಗಳಿ ಹಾಡಿ, ಆಕೆಯ ಲಗ್ನದ ಪ್ರಸ್ತಾಪವನ್ನೆತ್ತಿ ಮಾತನಾಡುತ್ತಲಿದ್ದರು. ಎಲ್ಲರಂತೆಯೆ ನಾಡಗೌಡರ ಸರಸ್ವತೀ ಬಾಯಿಯವರೂ ಬಂದರು. ಅವರು ತುಂಗಮ್ಮನ ತವರು-ಮನೆಯ ಬಳಗಕ್ಕೆ ಸೇರಿದವರು. ಲೋಕವನ್ನು ಚೆನ್ನಾಗಿ ಕಂಡ ಮುತ್ತೈದೆ ಅವರು. ಅರಿಸಿಣ-ಕುಂಕುಮ-ಪ್ರಸಾದಗಳನ್ನು ತೆಗೆದುಕೊಂಡು, ಅವರು ತುಂಗಮ್ಮ ಕುಳಿತಲ್ಲಿಗೆ ಬಂದರು. ಬರುವಾಗ ಕುಮುದೆಯ ಕೈಯನ್ನು ಹಿಡಿದು ಎಳೆದುಕೊಂಡು ಜೊತೆಗೆ ಕರೆದುತಂದಿದ್ದರು. ಬರು-ಬರುತ್ತಿರುವಾಗಲೇ ಅವರು ಕೇಳಿದರು :

“ ಏನು ತುಂಗಕ್ಕಾ? ಈ ಮಲ್ಲಿಗೀ ಬಳ್ಳಿಗೆ ಮಾವಿನ ಮರಾ ಎಲ್ಲಿ ಹುಡುಕಿದ್ದೀರಿ ? ”

ತುಂಗಕ್ಕ ಆದರದಿಂದ ಬರಮಾಡಿಕೊಂಡಳು :

"ಅಯ್ಯ, ಬರ್ರೀ ಅತಿಗೀ ? ಅರಿಷಿಣಾ ಕುಂಕುಮಾ ತಗೊಂಡಿರಿಲ್ಲೊ?"

"ಎಲ್ಲಾ ಆಯ್ತು! ನಾ ಕೇಳಿದ ಪ್ರಶ್ನೆಗೆ ಮೊದಲ ಉತ್ತರಾ ಕೊಡ್ರಿ! ಬಂಗಾರದಂಥಾ ಹುಡುಗಿ ಕುಮುದಾ! ಏನು ಸಾಲೀ.... ಸಾಧಾರಣಾ....ಅಂತ ಆಶೇ ಬದುಕಿನ ಬಳ್ಳೀ ಒಣಗಿಸಿಬಿಡಬೇಕಂತ ಮಾಡೀದೀರೋ ? ಏನು ಬ್ಯಾಗನಸ ಮದಿವೀ ಮಾಡಿ, ಅದು ಬೆಳೆದು ಹೂಬಿಡಬೇಕಂತ ಯೋಚಿಸಿ-ದ್ದೀರೋ ? "

ಅತೃಪ್ತಿಯ ಧ್ವನಿಯಲ್ಲಿ ತುಂಗಮ್ಮ ನುಡಿದರು :

"ನನ್ನ ಕೈಯೊಳಗ ಏನದ ಅತಿಗೀ ? ಎಲ್ಲಾ ಮಾತೂ ಮನಸಿನಂತೆ ಆಗಿಬರಬೇಕಾದರ, ಅದಕ್ಕ ಬೇಕು ಪೂರ್ವಜನ್ಮದ ಪುಣ್ಯಾ ! "

"ನಿಮಗೇನ ಕಡಿಮಿ ಆಗೇದ ಬಿಡ್ರಿ; ಪೂರ್ವಜನ್ಮದ ಪುಣ್ಯ, ಈ ಜನ್ಮದ ಪುಣ್ಯ ಎರಡೂ ಬೇಕಾದಷ್ಟು ಅದ!"

"ಅದೆಲ್ಲಾ ಖರೇ ಅತಿಗೀ! ಆದರ, ಗಂಡಸರ ಮನಸಿನ್ಯಾಗ ಒಂದು ಬರಬೇಕಲಾ ಈ ಮಾತು!"

"ಸರಿ! ಗಂಡಸರಿಗೇನು ಗೊತ್ತು, ಹೆಂಗುಸರ ಮನಸಿನ ಒಳಮಾತು! ಅವರು ಏನೇನೋ ಬುದ್ಧಿಯ ಹೊರಮಾತು ಕೇಳತಾರ; ಅಂಥಾವನ್ನ ಏನಾರೇ ಓದತಾರ! ಅದೇ ಸರಿ!—ಅಂತ ಹಟಾ ಹಿಡಿದು, ತಮಗಿರುವ ಅಧಿಕಾರದ ಬಲದಿಂದ ಆ ಹಟಾ ನಡಿಸಲಿಕ್ಕೆ ಹವಣಿಸತಿರತಾರ! ಹೀಂಗಾಗಿ ಎಷ್ಟು ಕುಟುಂಬ ದುಃಖಕ್ಕ ಗುರೀ ಆಗ್ಯಾವಂಬೂದರ ಕಡೆ ಅವರು ಕಣ್ಣು ಬಿಟ್ಟು ನೋಡೂದಿಲ್ಲ ಕೂಡ. ಆ ಸುಡುಗಾಡು ಇಂಗ್ಲಿಷರ ರೀತೀ ನಡತೀ ತಂದು, ನಮ್ಮ ಜೀವನಕ್ಕ ತ್ಯಾಪೀ ಹಚ್ಚಬೇಕಂದರ, ಅದು ಹ್ಯಾಂಗ ಹೊಂದಿಕೆ ಆದೀತು ಹೇಳ್ರಿ! ಅಲ್ಲೀ ಹವಾ ಬ್ಯಾರೇ; ಅಲ್ಲೀ ನೀರು ಬ್ಯಾರೆ! ಅಲ್ಲೀ ಉಣಿಸು ಬ್ಯಾರೆ; ಅಲ್ಲೀ ತಿನಿಸು ಬ್ಯಾರೇ! ಅಲ್ಲೀ ರೀತಿ ಬ್ಯಾರೆ; ಅಲ್ಲೀ ನಡತಿ ಬ್ಯಾರೆ! ನಾವು ಅವರ್ಹಾಂಗ ಆಗೂದು ಹ್ಯಾಂಗ ಸಾಧ್ಯ ಅದ ನೋಡ್ರಿ!"

"ಗಂಡಸರ ಮಾತು ಬಿಟ್ಟು ಬಿಡ್ರಿ ಅತಿಗೀ! ಅವರ ಮಾತು ಕೇಳಿ ಈಕಿನೂ ಅವರ್ಹಾಂಗs ಮಾತಾಡತಾಳಲಾ!"

"ತುಂಗಕ್ಕಾ, ಕುಮುದಾ ಇಷ್ಟು ದಿವಸ ಸಣ್ಣ ಹುಡುಗಿ ಇದ್ದಳು; ನಿಮ್ಮ ಗಂಡಸರು ಮಾತಾಡಿದ್ಹಾಂಗ ಈಕೀನೂ ಮಾತಾಡತಿದ್ದಾಳು. ಅದೇನೂ ಅಸ್ವಾಭಾವಿಕ ಅಲ್ಲ! ಈಗ ಕುಮುದಾ ಬೆಳೆದು ದೊಡ್ಡಾಕಿ ಆಗ್ಯಾಳ, ಇನ್ನ ಮ್ಯಾಲ ಆಕೀ ಭಾವನಾ, ಬುದ್ಧಿ ಇನ್ನೊಬ್ಬರ ಕೈಯಿಂದ ನೀರು ಕುಡಿಯೂದು ಶಕ್ಯ ಇಲ್ಲ. ಅವು ಈಗ ಸ್ವತಂತ್ರ ರೀತಿಂದ ವಿಚಾರ ಮಾಡತಾವ; ತಮ್ಮ ಸುಖ-ದುಃಖದ ದಾರಿಗಳನ್ನ ತಾವs ತಿಳಕೊಂಡು ನಡೀಲಿಕ್ಕೆ ಹತ್ತ್ಯಾವ!"

ಕುಮುದೆಗೆ ಸರಸ್ವತೀಬಾಯಿಯವರ ಅನುಭವದ ಮಾತುಗಳು ಆಶ್ಚರ್ಯವನ್ನುಂಟುಮಾಡಿದುವು ಅವಳ ಅಂತರಂಗಕ್ಕೆ ಎಂತಹದೋ ಒಂದು ಬಲವನ್ನು ಒದವಿಸಿದುವು. ಆಗ ತುಂಗಮ್ಮ ನಿರಾಶೆಯ ಧ್ವನಿಯಲ್ಲಿ ಹೇಳಿದರು:

"ನಾನು ಕುಮುದಾನ್ನ ಹಡೆದ ತಾಯಿ ಮಾತ್ರ ಖರೇ! ಆಕೀ ಜೀವನದ ವಿಚಾರ ಮಾಡೂದು ಯಾವುದೂ ನನ್ನ ಕೈಯೊಳಗ ಇಲ್ಲ ನೋಡ್ರಿ! ತಂದಿಯೇನೋ, ಮಗಳೇನೊ! ಏನೇನು ಸುಧಾರಣೀ ಶಿಖರಾ ಏರತಾರೋ ಏರಿಬಿಡಲಿ!"

"ಹೀಂಗಂದರ ಹ್ಯಾಂಗಾದೀತು ತುಂಗಕ್ಕಾ! ಹೆಣ್ಣುಮಕ್ಕಳ ಹೃದಯ ತಾಯಂದಿರಿಗೆ ತಿಳಿಯುವಷ್ಟು ತಂದೆಯವರಿಗೆ ತಿಳಿಯತಿರೂದಿಲ್ಲ! ನೀವು ನಿರಾಶರಾಗಿ ಕೈಮುಚ್ಚಿ ಕೂತುಕೋಬ್ಯಾಡ್ರಿ! ಉಪಾಯದಿಂದ ಮಗಳ ಹೃದ್ಗತ ತಿಳಿದುಕೊಂಡು, ಆಕಿಗೆ ಹಿತಾ ಆಗೂ ಹಾಂಗ ಮಾಡ್ರಿ! ಬೇಕಾದರ ನನಗ ಹೇಳ್ರಿ! ಆಕಿಗೆ ಎಂಥಾ ವರಾ ಬೇಕು ಅಂಥಾ ಸುಲಕ್ಷಣ ವರಾ ಹುಡುಕಿಸಿ ಕೊಡತೀನಿ!"

ತುಂಗಮ್ಮ ಸುಮ್ಮಗೆ ಕುಳಿತರು. ಆಗ ಸರಸ್ವತೀಬಾಯಿ ಕುಮುದೆಯನ್ನು ಮುಂದಕ್ಕೆಳೆದುಕೊಂಡು ಕೇಳಿದರು:

"ಯಾಕs ಕುಮುದಾ? ನಿನಗೇನು ಹಾಂಗs ಮುಂದ ಕಲೀಬೇಕಂತ ಅನಿಸತsದೋ? ಇನ್ನೇನಾದರೂ ಅನಿಸತsದೋ?"

ಕುಮುದೆಯ ಎದೆ ದಡ-ದಡಿಸಿತು. ನಾಚಿಕೆ-ಸಂಕೋಚಗಳು ಮುಖವನ್ನು ಕೆಳಗೆ ಮಾಡಿಸಿದುವು ಬಾಯಿಂದ ಮಾತುಗಳೇ ಹೊರಡಲಿಲ್ಲ. ಆಗ ಸರಸ್ವತೀಬಾಯಿ ಹೇಳಿದರು:

" ನೋಡು ಕುಮುದಾ, ಈ ನಾಚಿಕಿ ಈ ಸಂಕೋಚ ಹೆಂಗಸರಿಗೆ ಬೇಕು; ಆದರ ಅವುಗಳನ್ನ ಯೋಗ್ಯರೀತಿಯಿಂದ ಉಪಯೋಗ ಮಾಡಿಕೋ ಬೇಕು. ಇಲ್ಲದಿದ್ದರ, ಇವೇ ನಮ್ಮ ಹೆಂಗಸರ ಜೀವನಕ್ಕ ಕೊನೀತನಕಾ ಮುಳ್ಳಾಗಿ ಚುಚ್ಚತಾವ! ನಿನ್ನ ಮನಸಿನೊಳಗಿನ ಮಾತನ್ನ ನಿನ್ನ ತಾಯಿಾ ಮುಂದ ಹೇಳತಿರು; ಯಾವುದನ್ನೂ ಮುಚ್ಚಿ ಇಟ್ಟುಕೊಳ್ಳಬ್ಯಾಡ. ಮನಸಿನೊಳಗಿನ ಮಾತುಗಳನ್ನ ಮುಚ್ಚಿಮುಚ್ಚಿ ಇಟ್ಟುಕೋಳ್ಳೂದರಿಂದ, ಹೆಣ್ಣುಮಕ್ಕಳ ಮನಸಿನ ಮ್ಯಾಲ, ದೇಹದ ಮ್ಯಾಲ, ತುಂಬಾ ವಿಪರೀತ ಪರಿಣಾಮ ಆಗತsದಂತ! ಈಗ ಆ ಹಿಸ್ಟೀರಿಯಾನೋ ಪಿಸ್ಟೀರಿಯಾನೋ ಅಂತ ಏನೇನೋ ಹೆಸರಿಟ್ಟು ಹೇಳತಾರಲಾ—ಆ ರೋಗ ದಿನದಿನಕ್ಕ ಹೆಚ್ಚಾಗಲಿಕ್ಕೆ ಹತ್ತ್ಯೇದ ನೋಡೀದೀ ಇಲ್ಲೋ! ಹೆಣ್ಣುಮಕ್ಕಳನ್ನ ಮದಿವೀ ಮಾಡದೇ ಬಹಾಳ ದಿನಾ ಬಿಡೂದು ಒಳ್ಳೇದಲ್ಲ! ಬ್ಯಾಗನs ಒಳ್ಳೇ ಗಂಡನ ಕೈ ಹಿಡಿದು, ಮುತ್ತಿನಂಥಾ ಮಗುವಿನ ತಾಯಿಯಾಗು ನನ್ನ ಗೌರೀ ! "

ತುಂಗಮ್ಮ ನಿರಾಶೆಯ ಧ್ವನಿಯಲ್ಲಿಯೆ ನಗೆಮಾತನ್ನಾಡಿದಳು :

" ಆಕೀ ಮಗುವಿಗೆ ಹೆಸರಿಡಲಿಕ್ಕೆ ನಿಮ್ಮನ್ನs ಕರಸಿತೀನೇಳ್ರಿ ಅಕ್ಕಾ !

ಸರಸ್ವತೀಬಾಯಿಯೂ ನಗುನಗುತ್ತ ಮಾತಾಡಿದರು :

" ಮೊದಲ ಮದಿವೀ ಹೋಳಿಗೀ ತಿನ್ನೋಣಲ್ಲಾ ! ಅದಕ್ಕ ನನ್ನ ಕರಿಸಬಾರದಂತ ಮಾಡೀದೀರೇನು ? "

ಇವರಿಬ್ಬರೂ ಆಡುವ ಮಾತುಗಳು ಕುಮುದೆಯ ಮನಸ್ಸನ್ನು ಸ್ಪರ್ಶಿಸಿದ್ದುವೋ ಇಲ್ಲವೋ ! ಆಕೆ ಯಾವುದೋ ಯೋಚನೆಯಲ್ಲಿ ಮಗ್ನಳಾಗಿ ಕುಳಿತಿದ್ದಳು. ಹೊರಗಿನಿಂದ ಕಾವೇರಿಯ ಕೂಗು ಕೇಳಿಸಿತು : ' ಕುಮುದಾ, ಕುಮುದಾ ! "

ಕುಮುದಾ ತಟ್ಟನೆ ಎದ್ದು ಹೊರಗೆ ಹೋದಳು. ಸರಸ್ವತೀಬಾಯಿಯವರೂ ತುಂಗಮ್ಮನನ್ನು ಬೀಳ್ಕೊಂಡು ಮನೆಗೆ ಹೊರಟರು.

ಗಡಿಯಾರ ಏಳುವರೆಯ ಗಂಟೆಯನ್ನು ಬಾರಿಸಿತು. ಅರಿಸಿಣ-ಕುಂಕುಮಕ್ಕೆ ಬರುವ ಅಯ್ದೆಯರ ಪ್ರವಾಹವೂ ಹರಿಗಡಿದಿತ್ತು. ಕಾವೇರಿ-ವೇಣಕ್ಕ ಇವರೂ ಮನೆಗೆ ಹೋಗಲು ಸಿದ್ಧರಾದರು. ಆಗಲೆ ಪಡಸಾಲೆಯಲ್ಲಿ ಕುಳಿತ

ಅನಂತರಾಯರ ಸ್ವಾಗತದ ಕರೆ ಕೇಳಿಸಿತು: " ಓಹೋ! ಬನ್ನಿ ರತ್ನಾಕರ-ರಾಯರೇ! "

ಈ ಕೂಗು ವೇಣಕ್ಕ-ಕಾವೇರಿಯರ ಹೃದಯವನ್ನು ಹಿಗ್ಗಿಸಿತು. ಕುಮುದೆಯ ಹೃದಯ-ಮನಗಳನ್ನು ಹಿಗ್ಗಿಸಿತಾದರೂ ಗುಂಡಿಗೆಯನ್ನು ದಡದಡಿಸಲು ಹಚ್ಚಿತು. ಹೊರಗೆ ಹೋಗಿ ನೋಡಬೇಕೆಂದು ಮನಸ್ಸು ಹಾರಯಿಸತೊಡಗಿತು. ಹೀಗಿರುವಾಗಲೇ ಅನಂತರಾಯರ ಕೂಗು ಕೇಳಿಸಿತು: ' ಕುಮುದಾ, ಕುಮುದಾ! '

' ಓ, ಯಾಕ? ' ಎನ್ನುತ್ತ ಕುಮುದಾ ಒಮ್ಮೆಲೆ ಎದ್ದು ಹೊರಗೆ ನಡೆದಳು. ಹೊರಟು ನಿಂತಿದ್ದ ವೇಣಕ್ಕ, ಕಾವೇರಿ ಮತ್ತೆ ಅಲ್ಲಿಯೆ ತಡೆದರು. ಕುಮುದಾ ಹೊರಗೆ ಹೋದಾಗ, ರಾಯರ ಪಕ್ಕದ ಕುರ್ಚಿಯ ಮೇಲೆ ರತ್ನಾಕರ ಕುಳಿತುಕೊಂಡಿದ್ದ. ಸ್ವಾಗತಕ್ಕಾಗಿ ಕುರ್ಚಿಯನ್ನು ಬಿಟ್ಟು ಎದ್ದು ಬಂದ ರಾಯರು, ಇನ್ನೂ ಕುರ್ಚಿಯ ಬಳಿಯಲ್ಲಿ ನಿಂತುಕೊಂಡಿದ್ದರು : ಕುಮುದಾ ಹೊರಗೆ ಬರುತ್ತಲೇ ಅನಂತರಾಯರು, ಸಂಭ್ರಮಸ್ವರದಲ್ಲಿ ಒಮ್ಮೆಲೇ ಹೇಳಿದರು :

" ನೋಡು ನಿನ್ನೆಯ ದಿನ ನಾನು ಹೇಳಿದಂತೆ ರತ್ನಾಕರರಾಯರು ಬಂದುಬಿಟ್ಟಿದ್ದಾರೆ ? "

ರತ್ನಾಕರ ಕುಮುದೆಯನ್ನು ನೋಡಿದ; ಕುಮುದಾ ರತ್ನಾಕರನನ್ನು ನೋಡಿದಳು. ಆ ಮೇಲೆ ಅಪ್ಪಣೆಯನ್ನು ಕೋರುವ ಕುತೂಹಲದ ನೋಟಗಳಿಂದ ತಂದೆಯ ಕಡೆಗೆ ನೋಡಿದಳು. ಮಾತನೇನೂ ಆಡಲಿಲ್ಲ. ಅನಂತ-ರಾಯರು ರತ್ನಾಕರನನ್ನು ಉದ್ದೇಶಿಸಿ ಹೇಳಿದರು :

"ನಮ್ಮ ಕುಮುದಾನ್ನ ನೀವು ಈ ಮೊದಲ ನೋಡಿದ್ದೀರಿ ಕಾಣಿಸತದ! ಈಕಿ ನನ್ನ ಮಗಳು! ಅಂದ ಗೋಪಾಲರಾಯರ ಮನಿಗೆ ಕನ್ಯಾನಿರೀಕ್ಷಣ-ಕ್ಕಂತ ಬಂದ ವರದ ಜೊತೆಗೆ ನೀವೂ ಬಂದಿದ್ದಿರಂತ. ನೀ ಅಂತೂ ಬೇಕಾದಷ್ಟು ಸಾರೇ ಇವರನ್ನ ನೋಡೀದೀ ಕುಮುದಾ! ನೋಡ್ರಿ ರತ್ನಾಕರರಾವ್, ಈಕಿಗೆ ನಿಮ್ಮ ಭಾಷಣಗಳನ್ನ ಕೇಳೂದಂದರ ಬಹಾಳ ಇಷ್ಟ. ನಿಮ್ಮ ಒಂದು ಸಭೆ-ಯನ್ನೂ ಈಕಿ ತಪ್ಪಿಸೂದಿಲ್ಲ. ಈಕೀ ಸಲುವಾಗಿ ನಾವು ಸುದ್ದಾ ನಿಮ್ಮಾಂಗ

ಇನ್ನ ಈ ಒರಟು ಖಾದೀ ಬಟ್ಟೀ ಉಡುವ ತೊಡುವ ಪ್ರಸಂಗ ಎಲ್ಲಿ ಬರ-ತsದೋ ಅಂತ ಅನಿಸಿಬಿಟ್ಟsದ. ನಿಮ್ಮ ಭಾಷಣದ ಮುಂದ ನಮ್ಮ ಮಾತು ಯಾವ್ದೂ ನಡೀದ್ಹಾಂಗ ಆಗೇದ! ಅಂಥಾ ಮೋಡಿ-ಮಾಟ ಏನದನೋ ನಿಮ್ಮ ಭಾಷಣದೊಳಗs ಅಂತೀನಿ ! "

ರತ್ನಾಕರ ಮುಗುಳುನಗೆ ನಗುತ್ತ ಕುಮುದೆಯ ಕಡೆಗೆ ನೋಡಿದ. ನಾಚಿಕೆಯು ಕುಮುದೆಯ ತಲೆಯನ್ನು ತಗ್ಗಿಸಿದ್ದಿತಾದರೂ ಕಣ್ಣುಗಳು ರತ್ನಾಕರನ ಮುಗುಳುನಗೆಯನ್ನು ಸ್ವಾಗತಿಸದೆ ಇರಲಿಲ್ಲ. ರಾಯರು ತಮ್ಮ ಮಾತನ್ನು ಮುಂದುವರಿಸಿದರು :

"ಇಂದ ಸಂಜ್ಯಾಗ ಹೆಂಗುಸರು ಗೌರೀ ಹೂವೀಳ್ಯಾ ಮಾಡ್ಯಾರ! ಅದಕ್ಕs ನಿಮಗ ನಮ್ಮ ಮನಿಗೆ ಬಂದುಹೋಗಲಿಕ್ಕೆ ಹೇಳಿದ್ದೆ. ನೀವು ನಮ್ಮ ಗೋಪಾಲರಾಯರಿಗೆ ಬರೆದ ಪತ್ರಾ ನಾನೂ ನೋಡಿದೆ; ಅದನ್ನ ಓದಿದಾಗಿನಿಂದ, ನಿಮ್ಮ ವಿಷಯಕ್ಕ ನನ್ನ ಮನಸಿನೊಳಗೂ ಏನೋ ಒಂದು ಬಗೀ ಆದರ ಹುಟ್ಟಿಬಿಟ್ಟಿತ್ತು. ಕಾಂಗ್ರೆಸಿನ ಮಂದಿಯೊಳಗೂ ಒಳ್ಳೇ ಜನಾ ಇರೂದಿಲ್ಲೇನು? ಅದಕ್ಕs ನಿಮ್ಮನ್ನ ಎಂದಾದರೂ ಒಮ್ಮೆ ಕಂಡು ನನ್ನ ಅಭಿ-ನಂದನಾ ಸಲ್ಲಿಸಬೇಕಂತ ಮನಸು ತವಕಿಸತಿತ್ತು. ನಿನ್ನೆ ನೀವು ಅನಾಯಾ-ಸೇನ ನನ್ನ ಕೈಗೆ ಸಿಕ್ಕು ಬಿಟ್ಟಿರಿ! ಕುಮುದಾ, ರತ್ನಾಕರರಾಯರಿಗೆ ನಿಮ್ಮ ಗೌರೀ ಪ್ರಸಾದ ಕೊಡೂದಿಲ್ಲೇನು ! "

ಕುಮುದಾ ಮೆಲುದನಿಯಲ್ಲಿ ಕೇಳಿದಳು :

" ಏನು ಇಲ್ಲಿಯೇ—ಹೊರಗೇ—ತಂದುಕೊಡಬೇಕೇನು ? "

"ಹೊರಗೆಂದರೆ ಹೊರಗೆ, ಒಳಗೆಂದರೆ ಒಳಗೆ; ಎಲ್ಲಿ ಬರಲಿಕ್ಕೂ ನಮ್ಮ ಸಿದ್ಧತಾ ಅದ. "

ಕುಮುದಾ ಒಳಗೆ ಹೋದಳು. ಒಂದೆರಡು ನಿಮಿಷಗಳಲ್ಲಿಯೇ ಕಾವೇರಿ, ಒಂದು ಕೈಯಲ್ಲಿ ಕೈಕಾಲು ತೊಳೆದುಕೊಳ್ಳಲಿಕ್ಕೆಂದು ನೀರಿನ ತಂಬಿಗೆಯನ್ನೂ ಇನ್ನೊಂದು ಕೈಯಲ್ಲಿ ಶುಭ್ರವಾದ ಟಾವೆಲನ್ನೂ ತೆಗೆದುಕೊಂಡು ಬಂದು ತುದಿಗಟ್ಟೆಯ ಮೇಲೆ ಇರಿಸಿದಳು. ಅನಂತರಾಯರು ಕಾವೇರಿಯನ್ನು ನೋಡಿ ರತ್ನಾಕರನಿಗೆ ಹೇಳಿದರು :

"ಇವಳು ಗೋಪಾಲರಾಯರ ಮಗಳು, ಕಾವೇರಿ! ಇವಳನ್ನ ನೀವು ನೋಡೇ ಇದ್ದೀರಿ! ಪಾಪ, ಬಹಾಳ ಒಳ್ಳೇ ಹುಡುಗಿ! ಬ್ಯಾಗನss ಈಕೀದಷ್ಟು ಹೋಳಿಗೀ ಹೊಡಿಸಿ ಬಿಡ್ರೆಪಾ....ನೀವss ಪ್ರಯತ್ನ ಮಾಡಿ!"

ರತ್ನಾಕರ ಮೆಲುನಗೆಯ ತೆರೆಯೊಂದನ್ನು ಹರಿಸಿದ. ಕಾವೇರಿ ದೈನ್ಯದೃಷ್ಟಿಯಿಂದ ರತ್ನಾಕರನನ್ನು ಒಂದೆ ಒಂದು ಸಲ ನೋಡಿ, ಬೇಗ ಬೇಗನೆ ಹೆಜ್ಜೆಯಿಟ್ಟು ಒಳಗೆ ನಡೆದಳು. ಅನಂತರಾಯರು ಮತ್ತೆ ಮಾತ-ನಾಡಲು ತೊಡಗಿದರು :

"ನೋಡ್ರಿ ರತ್ನಾಕರರಾಯರ, ನಮ್ಮ ಮಧ್ಯಮತರಗತೀ ಮಂದಿ-ಯೊಳಗ, ಹೆಣ್ಣಿನ ಮದಿವೀ ಅಂದರ, ಒಂದು ಅಶ್ವಮೇಧ ಯಜ್ಞದಂಥಾ ಜಡದ ವಿಷಯ ಆಗಿ ಕೂತsದ! ಅದರೊಳಗೂ ಗೋಪಾಲರಾಯರಂಥಾ ಹಳೇ ಸಂಪ್ರದಾಯದವರಿಗಂತೂ ಹೆಣ್ಮಕ್ಕಳ ಲಗ್ನಾ ಅಂದರ, ನೀಗ-ಲಾರದ ಆಪತ್ತೀನ ಆಗಿ ಕೂತsದ ಅನ್ರಿ!"

ತುಂಗಮ್ಮ ಹೊರಗೆ ಬಂದು, ತಮ್ಮ ಸಹಜ ವಿನಯಭಾವದಲ್ಲಿ ಸೂಚಿಸಿದರು :

"ಕೈಕಾಲು ತೊಳೆದುಕೊಂಡು ಒಳಗೇ ಬಂದುಬಿಡ್ರಿ!"

"ಹುಂ. ಏಳ್ರೆಪಾ ಇನ್ನ!" ಎಂದು ಅನಂತರಾಯರು ಎದ್ದುನಿಂತರು. ರತ್ನಾಕರನೂ ಮೆಲ್ಲಗೆ ಎದ್ದು, ಬಾಗಿಲ ಮುಂಗಟ್ಟೆಯ ಮೇಲೆ ಕೈಕಾಲು ತೊಳೆದುಕೊಂಡು, ಅನಂತರಾಯರನ್ನು ಅನುಸರಿಸಿ ಒಳಗೆ ಹೊರಟನು. ಹಾಕಿದ ಮಣೆಗಳೆದುರು ಉಪಾಹಾರದ ಎಡೆಗಳು ಅಣಿಗೊಂಡು ಕುಳಿತಿದ್ದುವು. ರಾಯರು ಯಾಜಮಾನ್ಯಭಾವದಿಂದ, ಅತಿಥಿಯಾಗಿ ಬಂದ ರತ್ನಾಕರನನ್ನು ಒಂದು ಮಣೆಯ ಮೇಲೆ ಕುಳ್ಳಿರಿಸಿ, ಇನ್ನೊಂದರ ಮೇಲೆ ತಾವು ಕುಳಿತು-ಕೊಂಡರು. ಗೌರಿಯ ನೈವೇದ್ಯಕ್ಕೆ ಪ್ರದರ್ಶನ ಮಾಡಿದ ಎಲ್ಲ ಬಗೆಯ ತಿಂಡಿ-ತಿನಿಸುಗಳೂ ಬೇರೆ ಬೇರೆ ತಟ್ಟೆಗಳಲ್ಲಿ ಕಾಣುತ್ತಿದ್ದುವು. ಇಬ್ಬರ ಉಪಾಹಾರ ಪ್ರಾರಂಭವಾಯಿತು. ರತ್ನಾಕರ ದಾಕ್ಷಿಣ್ಯಭಾವದಿಂದ ಮಾತನಾಡಿದ :

"ಎಷ್ಟು ಬಗೆಯ ತಿಂಡಿಗಳಿವು? ಇವನ್ನೆಲ್ಲ ಹ್ಯಾಗೆ ತಿನ್ನಬೇಕು? ಇತ್ತೀಚೆಗೆ ಇಂಥಾ ತಿಂಡಿಗಳನ್ನ ನಾನು ಕಣ್ಣಿಂದ ನೋಡಿಲ್ಲ ಕೂಡಾ!"

"ಚಳವಳೀ ಮಂದಿ ನೀವು! ಮನ್ಯಾಗ ಮಾಡಿದಂಥಾ ಇವೆಲ್ಲಾ ಪದಾರ್ಥ, ನಿಮ್ಮ ಆಶ್ರಮದೊಳಗ ಎಲ್ಲಿ ಸಿಗಬೇಕು? ಅದರೊಳಗೂ ಗಾಂಧೀ ಆಶ್ರಮದೊಳಗ ಉಪ್ಪು-ಖಾರಾ ಸುದ್ದಾ ತಿನ್ನೂಹಾಂಗಿಲ್ಲಂತ! ಬರೇ ಸಪ್ಪ-ಸಪ್ಪಗಿನದು ತಿಂದು ಹ್ಯಾಂಗ ಬದುಕತಾರೋ ಏನೋ ಅಂತೀನಿ ನಾನು!"

ಈ ಮಾತಿಗೆ ಉತ್ತರವಾಗಿ ರತ್ನಾಕರ ಬೇಕಾದಷ್ಟು ಮಾತನಾಡಬಹುದಾಗಿತ್ತು; ಮಾತನಾಡಬೇಕೆಂದೂ ಅನಿಸಿತು. ಆದರೆ ಅವನು ಮಾತನೇನೂ ಆಡದೆ, ಅನಂತರಾಯರ ಕಡೆಗೆ ನೋಡುತ್ತ ಹಾಗೆಯೆ ನಕ್ಕುಬಿಟ್ಟ. ಅನಂತರಾಯರು ತಮ್ಮ ಮಾತಿನ ದಾರಿಯನ್ನು ಬದಲಿಸಿ ನುಡಿದರು:

"ಗೋಪಾಲರಾಯರು ನಿಮ್ಮ ಕಡೆಗೆ ಬಂದಿದ್ದರಂತಲ್ಲ!"

"ಹೌದು, ಬಂದಿದ್ದರು. ಅವರ ಕೆಲಸಕ್ಕಾಗಿಯೇ ನಾನು ನಾಳೆಯ ದಿನ ಮುದ್ದಾಪುರಕ್ಕೆ ಹೋಗಿ ಬರಬೇಕಂತ ಮಾಡೀನಿ!"

"ಹೋಗಿ ಕೆಲಸಾ ಗಂಡು ಮಾಡಿಕೊಂಡೇ ಬರ್ರಿ ನೀವು! ಪಾಪ ಗೋಪಾಲರಾಯ ಒಮ್ಮೆ ಮಗಳ ಋಣದಿಂದ ಮುಕ್ತರಾಗಲಿ."

ಅಲ್ಲಿಯೆ ದೂರದಲ್ಲಿ ನಿಂತುಕೊಂಡಿದ್ದ ವೇಣಕ್ಕ, ಕಾವೇರಿ ಇಬ್ಬರ ಎದೆಯಿಂದಲೂ ನಿಟ್ಟುಸಿರು ಒಮ್ಮೆಲೆ ಹೊರಬಿದ್ದಿತು.

ಬೇಡ ಬೇಡವೆಂದು ಹೇಳಿದರೂ ಕೇಳದೆ, ತುಂಗಮ್ಮ ರತ್ನಾಕರನ ಎಡೆಯಲ್ಲಿ ಮತ್ತೆ ಎರಡು ಚಿರೋಟಿಗಳನ್ನು ಹಾಕಿದಳು. ರತ್ನಾಕರ ನಗೆ ಮಾತಿನಲ್ಲಿ ಹೇಳಿದ:

"ಸರಿ! ಇಂದ ಇಲ್ಲಿ ತಿಂದದ್ದನ್ನ ಅರಗಿಸಿಕೊಳ್ಳಬೇಕಾದರ, ನಾಳಿನ ದಿನಾ ಮುದ್ದಾಪೂರದ ತನಕಾ, ಕಾಲುನಡಿಗೆಯಿಂದಲೇ ನಡಿದು ಹೋಗಬೇಕಾಗತ್ತದ! ಅಲ್ಲಿ ರಂಗಣ್ಣನ ಚಿಕ್ಕಮ್ಮ ಇದ್ದಾರಲಾ; ಅವರಿಗೂ ಊಟಕ್ಕ ಕುಳಿತವರಿಗೆ ಎಷ್ಟು ಹಾಕಿದರೂ ಸಮಾಧಾನ ಅನಿಸೂದಿಲ್ಲ! ಎಲಿಯೊಳಗ ಚೆಲ್ಲಬಾರದು ಅಂತ ನನ್ನ ಹಟ; 'ಚೆಲ್ಲದಿದ್ದರ ಹೊಟ್ಟೆತುಂಬಿತಂತ ತಿಳಿಯೂ ಬಗೀ ಹ್ಯಾಂಗ?' ಅಂತ ಅವರ ವಾದ; ನಿರ್ವಾಹ ಇಲ್ಲದ, ನನ್ನ ವ್ರತಾ ಮುರಿದು ಎಲಿಯೊಳಗ ಚೆಲ್ಲುವ ಪ್ರಸಂಗ ಬರತದ?"

ಕುಮುದೆಯ ನಾಚಿಕೆಯ ಬಿಗಿತ ಸ್ವಲ್ಪ ಸಡಿಲಾಗಿತ್ತು? ಆಕೆಯೂ ಮೆಲುನಗೆ ನಗುತ್ತ ಮಾತಾಡಿದಳು:

" ಛೇಛೇ ! ಇಲ್ಲಿ ಮಾತ್ರ ನಿಮ್ಮ ವ್ರತಾ ಮುರಿಯೂ ಕಾರಣೆಲ್ಲ ; ಹಾಕಿದ್ದನ್ನ ಎಲಿಯೊಳಗ ಚೆಲ್ಲಿಬಿಡೂದಂದರ ಸ್ವಲ್ಪಾ ಒಳ್ಳೆಯದಲ್ಲ. "

ರತ್ನಾಕರ ಕಣ್ಣೆತ್ತಿ ಕುಮುದೆಯನ್ನು ನೋಡಿ ನಗುತ್ತಲೆ ಹೇಳಿದ :

" ಎಲಿಯೊಳಗ ಚೆಲ್ಲಿಬಿಡೂದೂ ಒಳ್ಳೆಯದಲ್ಲ; ಬ್ಯಾಡಬ್ಯಾಡ ಅಂದರೂ ಜುಲಿಮಿಮಾ ಮಾಡಿ ಮಾಡಿ, ಎಲಿತುಂಬಾ ಬಡಿಸೂದೂ ಒಳ್ಳೆಯದಲ್ಲ. "

ಎಲ್ಲೆಲ್ಲಿಯೂ ನಗೆಯು ಆಟವಾಡಿತು. ನಗೆ ನಿಂತಮೇಲೆ ಅನಂತ-ರಾಯರು ಕೇಳಿದರು :

" ಅಂದ ಗೋಪಾಲರಾಯರ ಮನಿಗೆ ಕಾವೇರಿನ್ನ ನೋಡಲಿಕ್ಕೆ ಬಂದಿ-ದ್ದರಲ್ಲ; ಅವರ ಹೆಸರು ಏನು ಅಂದಿರಿ ? "

" ವೆಂಕಟೇಶ ಎಂದು. ನಾವೆಲ್ಲ ಕರೆಯುವುದು ವೆಂಕಣ್ಣಾ ಅಂತ ! "

" ಹುಂಹುಂ ; ಅಲ್ರೀ, ಆ ನಿಮ್ಮ ವೆಂಕಣ್ಣಾ ಸ್ವಲ್ಪ ಮುಂದುವರಿದ ಮನುಷ್ಯನೇ ಇದ್ದಾನ ಕಾಣಿಸತ್ತದ ! " ರಾಯರು ವ್ಯಂಗ್ಯವಾಗಿ ನುಡಿದರು.

" ಯಾಕ ? ಏನಾಯ್ತು ? "

" ಏನಾಯ್ತs ? ಫರಾಳ ಮುಗೀಲಿ ಮೊದಲ ! ಹೊರಗ ಹೋಗಿ ಕೂತಮ್ಯಾಲ ಹೇಳತೀನಿ. ಯಾಕ ಕುಮುದಾ ? ಇವರ ಮುಂದ ಹೇಳಬಹುದು ಹೌದಲ್ಲೊ ! "

ಕುಮುದಾ ಸಿಡಿನುಡಿಯಲ್ಲಿ ಹೇಳಿದಳು :

" ಹೇಳಬಹುದು....ಅದರೊಳಗ ಏನು ? ಮೂರ್ಖಜನರ ಸಂಗತಿ ! "

ರತ್ನಾಕರನಿಗೆ ಹಿಡಿದುಬಿಟ್ಟಂತೆ ಎನಿಸಲು ತೊಡಗಿತು. ವೆಂಕಣ್ಣನ ಚರಿತ್ರೆಯೇನಿದೆಯೋ ಕೇಳಬೇಕೆಂಬ ಆತುರ ಹೃದಯವನ್ನು ಕುಣಿಸಲು ತೊಡಗಿತು. ಅವಸರವಸರದಿಂದ ಉಪಾಹಾರವನ್ನು ಕೊನೆಗೊಳಿಸಿದ. ಎದ್ದು ಕೈತೊಳೆದುಕೊಂಡು, ಹೊರಗೆ ಬಂದು ತನ್ನ ಕುರ್ಚಿಯ ಮೇಲೆ ಕುಳಿತು-ಕೊಂಡ. ರಾಯರೂ ಎದ್ದು ಕೈತೊಳೆದುಕೊಂಡು, ಚಿಕ್ಕ ಟಾವೇಲಿನಿಂದ ಕೈಯೊರಸಿಕೊಳ್ಳುತ್ತ ಹೊರಗೆ ಬಂದರು. ಬಂದು ಆಸನದಲ್ಲಿ ಕುಳಿತು-ಕೊಳ್ಳುತ್ತಿರುವಾಗಲೇ ಕೂಗಿ ಹೇಳಿದರು :

" ತಾಂಬೂಲದ ತಟ್ಟೆ ತಗೊಂಡು ಬಾ ಕುಮುದಾ ! "

ಕೂಗಿನ ಕೊನೆಯಕ್ಷರದೊಂದಿಗೆ ಕುಮುದೆಯೂ ತಾಂಬೂಲದ ತಟ್ಟೆ ತೆಗೆದುಕೊಂಡು ಅಲ್ಲಿಗೆ ಬಂದಳು. ಟೀಪಾಯ ಮೇಲಿಟ್ಟು ಬಳಿಯಲ್ಲಿಯೆ ನಿಂತಳು ಅನಂತರಾಯರು ಹೇಳಿದರು :

" ನೀನೂ ಕೂತುಗೋ ಕುಮುದಾ ? ಬೇಕಾದರೆ ಕಾವೇರಿಯನ್ನೂ ಇಲ್ಲಿಗೆ ಕರಿ; ಅವಳೂ ಬರಲಿ ! ಆದರ ನೋಡ್ರಿ ರತ್ನಾಕರರಾಯರs ! ಈ ಹಳೇ ಸಂಪ್ರದಾಯದೊಳಗ ಬೆಳೆದ ಹುಡುಗಿಯರೂ ಅಂದರ, ನಾಚಿ ಸಾಯತಾವ ! ಅದರೊಳಗ ನಮ್ಮ ಈ ಕಾವೇರಿ ಇದ್ದಾಳಲ್ಲಾ.... ಈಕೆಗೆ ನನ್ನ ಕೂಡಾ ಮಾತಾಡಲಿಕ್ಕೆ ಸುದ್ಧಾ ಕಳವಳ ನೋಡ್ರಿ ! ಪಾಪ, ಒಳ್ಳೇ ಹುಡುಗಿ ! ಒಳ್ಳೇ ಘನೀಗಷ್ಟು ಬೀಳಬೇಕು ! "

ರತ್ನಾಕರ ತವಕದಿಂದ ಕೇಳಿದ :

" ಅದೇನು ? ವೆಂಕಣ್ಣನ ಸಮಾಚಾರ ಏನು ? ಮೊದಲಿಂದಲೂ ಅಂವ ಸ್ವಲ್ಪ ದುಡುಕಹುಡುಗ ಮಾತ್ರ ಖರೆ ! ಆದರೊಳಗ ಈಗಂತೂ ಗಳಿ-ಸಾಳಿ ಆಗ್ಯಾನ; ಪ್ರಬುದ್ಧ ಆಗ್ಯಾನ ! ಅವನಂಥಾ ದುಡುಕರs ನಾಕಾರು ಮಂದಿ ಗೆಳೆಯರು ಸಿಕ್ಕಾರ !........ "

" ಅದೇ ಅದೇ ! ಅವನ ಗೆಳೆಯರ ಪೈಕೀನs ಒಬ್ಬಂವ ... ಏನs ಕುಮುದಾ ಅವನ ಹೆಸರು ?.... ಹುಂ ! ' ಬಳವಂತ ಆಗಲಾವೇ ' ಅಂತ ! ಆತ ನನಗೊಂದು ಪತ್ರಾ ಬರದಾನೇನ್ರಿ ! "

" ಬಳವಂತ ಬರದಾನ ? ನಿಮಗ ಪತ್ರಾ ಬರದಾನs ಬಳವಂತ ? ಏನಂತ ಬರದಾನ ? "

" ಅದನ್ನೆಲ್ಲಾ ಬಾಯಿಂದರೇ ಯಾಕ ಹೇಳಬೇಕು ? ಆ ಪತ್ರಾನs ನೀವು ಓದಿ ನೋಡಬಹುದು ! ಎಲ್ಲಿ ಅದನ್ಸ ಕುಮುದಾ ಆ ಪತ್ರ ? ತಂದು-ಕೊಡು ನೋಡೋಣು ! "

ಕುಮುದಾ ಸಂದಿಗ್ಧದೃಷ್ಟಿಯಿಂದೊಮ್ಮೆ ರತ್ನಾಕರನ ಕಡೆಗೆ ನೋಡಿ-ದಳು. ಆ ಮೇಲೆ ಏನು ವಿಚಾರ ಹೊಳೆಯಿತೇನೋ ! ಎದ್ದು ಒಳಗೆ ಹೋಗಿ, ಪತ್ರವನ್ನು ತೆಗೆದುಕೊಂಡು ಬಂದು, ತಂದೆಯ ಕೈಯಲ್ಲಿ ಕೊಟ್ಟಳು; ಅವರು ಸಂತಪ್ತಭಾವದಿಂದ ' ಈ ಪತ್ರ ಬರೆದವರಿಗೆ ವಿವೇಕ ಏನಾದರೂ ಇರಬಹು-ದೇನು ನೋಡ್ರಿ ! ' ಎಂದು ರತ್ನಾಕರನ ಕಡೆಗೆ ಅದನ್ನು ಕೊಟ್ಟರು. ರತ್ನಾ-ಕರನು ಕೇಳಿದ :

"ಇದನ್ನ ಓದಬಹುದಲ್ಲವೇ ನಾನು ?"

"ನಿಃಸಂಕೋಚದಿಂದ ಓದಿರಿ! ಓದಲಿಕ್ಕಂತs ನಿಮ್ಮ ಕೈಯೊಳಗ ಅದನ್ನ ಕೊಟ್ಟೇನಿ!"

ರತ್ನಾಕರ ಪತ್ರವನ್ನು ಓದಲು ತೊಡಗಿದ. ತಂದೆ, ಮಗಳು, ಇಬ್ಬರೂ ರತ್ನಾಕರನನ್ನೇ ನಿಟ್ಟಿಸುತ್ತ ಕುಳಿತರು. ಓದುತ್ತಿದ್ದಂತೆಯೆ ರತ್ನಾಕರನ ಮುಖದಲ್ಲಿ ವಿವಿಧ ಭಾವರೇಷೆಗಳು ಮೂಡಿ ಮೂಡಿ ಮರೆಯಾಗುತ್ತಲಿದ್ದುವು. ಪತ್ರವನ್ನು ಪೂರ್ತಿಯಾಗಿ ಓದಿ ಕೆಳಗಿಟ್ಟು, ವಿಚಾರ ಮುದ್ರೆಯವನಾಗಿ ಸುಮ್ಮಗೆ ಕುಳಿತುಬಿಟ್ಟ. ಆಗ ಅನಂತರಾಯರು ಬಿರುದನಿಯಲ್ಲಿ ಕೇಳಿದರು :

"ಈ ರೀತಿಗೆ ಏನಂತೀರಿ ರಾಯರs !"

"ಬೇರೆ ಏನು ಅನ್ನೂದು! ಹೊಸಾಕಾಲದ ರೀತೀ—ಅಂತ ಸುಮ್ಮ-ಗಿರೂದು ಅಷ್ಟ!" ರತ್ನಾಕರ ಸ್ವಾಭಾವಿಕ ಧ್ವನಿಯಲ್ಲಿಯೆ ಹೇಳಿದ. ರಾಯರು ರೊಚ್ಚಿಗೆದ್ದು ಕೇಳಿದರು :

"ಹೀಂಗ ಬರಿಯೂದು ಅಂದರ ಮೂರ್ಖತನ ಅಲ್ಲೇನು? ತಪ್ಪು ಅಲ್ಲೇನು?"

"ಮೂರ್ಖತನಾ, ತಪ್ಪು, ಇವೆಲ್ಲಾ ಅವರವರ ತಿಳಿವಳಿಕೀ ಮ್ಯಾಲ ಅವಲಂಬಿಸ್ಯಾವ! ಈಗ ಇಲ್ಲೇ ನೋಡ್ರಿ! ಕಾವೇರಿಗೆ, ಇಲ್ಲಿ ಹೊರಗ ಬಂದು ನಮ್ಮ ಜತಿಗೆ ಕೂತುಕೊಂಡು ಮಾತನಾಡೂದು ಸರಿಯಲ್ಲಾ—ಅನಿಸತsದ! ಅದೇ ಕುಮುದಾಗ....ಹೀಂಗ ಹೊರಗ ಬಂದು ನಮ್ಮ ಜೊತೆಗೆ ಕೂತು ಮಾತಾಡಿದರ, ಅದರೊಳಗ ಸರಿಯಲ್ಲದ್ದೇನೂ ಇಲ್ಲಾ—ಅಂತ ಅನಿಸತsದ! ಗೋಪಾಲರಾಯರಿಗೆ, ಹೆಣ್ಣುಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸೋದು ತಪ್ಪು—ಅನಿಸತsದ. ಅದೇ ನಿಮಗ? ಹೆಣ್ಣುಮಕ್ಕಳಿಗೆ ಆಧುನಿಕ ವಿದ್ಯಾ ಕಲಿಸದಿರೂದು ಮೂರ್ಖತನಾ ಅಂತ ಅನಿಸತsದ! ಸಮಾಜದ ಜನ-ಸಾಮಾನ್ಯರೊಳಗೆಲ್ಲಾರೂ ತಿಳಕೊಳ್ಳೂದಂದರ, ತಂತಮ್ಮ ಮೂಗೇ ನೇರ-ವಾದದ್ದು—ಅಂತ!"

ಅನಂತರಾಯರ ಹೃದಯದ ಮೇಲೆ ಅದೇಕೋ ಚಾಟಿಯ ಏಟು ಬಿದ್ದಂತಾಯಿತು. ಕುಮುದೆಯೂ ಗಾಬರಿಗಣ್ಣುಗಳಿಂದ ರತ್ನಾಕರನನ್ನೊಮ್ಮೆ ತಂದೆಯನ್ನೊಮ್ಮೆ ನೋಡುತ್ತ ಕುಳಿತಳು. ಅನಂತರಾಯರು ಅಪ್ರತಿಭರಾಗಿ ಕೇಳಿದರು :

" ಹಾಂಗಾದರ? ಈ ರೀತಿಯಾಗಿ ಸಿಕ್ಕವರಿಗೆ ಪತ್ರ ಬರಿಯೂದಂದರ, ಅವಮಾನ ಮಾಡಿದಂತಲ್ಲವೇನು ? "

" ನೋಡ್ರಿ ರಾಯರs! ನನ್ನ ಸ್ಪಷ್ಟಮಾತಿಗಾಗಿ ನೊಂದುಕೊಂಡು ವಿಪರೀತ ಭಾವಿಸಬ್ಯಾಡ್ರಿ! ನಮ್ಮ ಸಮಾಜದೊಳಗ ಈಗ ಇದ್ದ ಆಚಾರ-ವಿಚಾರಗಳು ಅಂದರ—ಹಳಬರೊಳಗ ಹಳೆಯತನ ಉಳಿದಿಲ್ಲ; ಹೊಸಕಾಲ-ದವರು ಅನಿಸಿಕೊಳ್ಳುವವರೊಳಗ ಹೊಸತನಾ ಮೂಡಿಬಂದಿಲ್ಲ. ಎಲ್ಲಾ ಕಲಸು ಮೇಲೋಗರ! ನಾವು ಹಳಬರಂತೇ ಇರಬೇಕಂದರ, ಎಲ್ಲಾ ಮಾತಿ-ನೊಳಗೂ ನಾವು ನಮ್ಮ ಹಳೆಯ ರೀತಿ ನಡೆವಳಿಕೆಗಳನ್ನೇ ಅನುಸರಿಸಬೇಕಾ-ಗತ್ತದ! ಹೊಸಬರಾಗಿ ಮುಂದೆ ಸಾಗಬೇಕಂದರ, ಎಲ್ಲಾ ಮಾತಿನೊಳಗೂ ನಾವು ಹೊಸಾ ರೀತಿ-ನಡೆವಳಿಕೆಗಳನ್ನ ತಂದುಕೊಳ್ಳಬೇಕಾಗತ್ತದ! ನಮಗ ಇಂಗ್ಲಿಷ್ ಶಿಕ್ಷಣ-ಶಿಷ್ಟಾಚಾರ ಬೇಕು; ಅವರ ಬೆಡಗು-ಬಿನ್ನಾಣಬೇಕು! ಆದರ ಅವರ ಸಾಮಾಜಿಕ ನಿಯಮಗಳನ್ನೆಲ್ಲಾ ಮೈಗೂಡಿಸಿಕೊಳ್ಳಲಿಕ್ಕೆ ಈ ಹೊಸಬರನಿಸಿಕೊಳ್ಳುವವರು ಒಲ್ಲರು! ಮದುವೆಗಾಗಿರುವ ಹೆಣ್ಣನ್ನು ಬಯಸಿ ಮದುವೆ ಮಾಡಿಕೊಳ್ಳಲು ಸಿದ್ಧನಾದ ಒಬ್ಬ ತರುಣ ಹೀಗೆ ಪತ್ರ ಬರೆಯು-ವುದೆಂದರೆ, ಪಾಶ್ಚಾತ್ಯ ಸಮಾಜದಲ್ಲಿ ಇದೊಂದು ಅಪರಾಧವೆನಿಸುವುದಿಲ್ಲ; ಅವಮಾನಮಾಡಿದಂತೆಯೂ ಅಲ್ಲ; ಆದರೆ ನಾವು ಈಗ ಮೊದಲು ವಿಚಾರ-ಮಾಡಬೇಕಾದ ಮಾತೆಂದರೆ, ನಾವು ಸಂಪ್ರದಾಯವಂತ ಭಾರತೀಯರಾಗಿ ಉಳಿದು ಬಿಡಬೇಕೋ, ಇಲ್ಲವೆ ಹೊಸ ಸುಧಾರಣೆಯನ್ನು ಮೈಗೂಡಿಸಿ-ಕೊಂಡು ನಾವೂ ಪಶ್ಚಿಮದವರ ಸಾಮಾಜಿಕ ಪದ್ಧತಿಯನ್ನು ಪುರಸ್ಕರಿಸ-ಬೇಕೋ—ಎಂದು! "

ಅನಂತರಾಯರಿಗೆ ತಾವೀಗ ಏನು ಮಾತನಾಡಬೇಕೆಂಬುದು ತಿಳಿಯ-ಲೊಲ್ಲದು. ಕುಮುದೆಗೆ ಮಾತ್ರ ರತ್ನಾಕರನ ಮಾತುಗಳ ಅರ್ಥ ಸ್ವಲ್ಪಸ್ವಲ್ಪ ಆಗಲುತೊಡಗಿತು. ಏನನೋ ಮಾತನಾಡಬೇಕೆಂದರೂ ಅವಳಿಗೆ ತುಟಿ-ಯನ್ನು ಮಿಟುಕಿಸಲಿಕ್ಕೆ ಆಗಲಿಲ್ಲ. ರತ್ನಾಕರನು ತನ್ನ ಮಾತನ್ನು ಮುಂದುವರಿಸಿದ:

" ರಾಯರೇ, ವೆಂಕಣ್ಣಾ ಹೀಗೆ ತಮಗೆ ಪತ್ರ ಬರೆಯಿಸಿದುದು ವಿವೇಕದ ಮಾತೆಂದು ನನ್ನ ಭಾವನೆ ಒಪ್ಪುವುದಿಲ್ಲ; ಆದರೂ ತಾರ್ಕಿಕ ಬುದ್ಧಿ ಹೀಗೆ

ಮಾಡಿದ್ದು ಅಪರಾಧವೇನೂ ಅಲ್ಲವೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಮೊದಲಿನ ನಮ್ಮ ಸಮಾಜದಲ್ಲಿ ಮದುವೆಯೆಂದರೇನೆಂಬುದು ತಿಳಿಯುವು-ದಕ್ಕಿಂತಾ ಮೊದಲೇ ಗಂಡು-ಹೆಣ್ಣುಗಳ ಮದುವೆ ಆಗಿಬಿಡುತ್ತಿತ್ತು, ಗಂಡು-ಹೆಣ್ಣುಗಳ ಜೀವನದ ವಿಕಾಸದೊಂದಿಗೆ ಗಂಡ-ಹೆಂಡತಿಯರೆಂಬ ಸ್ನೇಹ-ಪ್ರೀತಿಗಳ ವಿಕಾಸವೂ ಆಗಿಬಿಡುವಂತೆ ಸಾಮಾಜಿಕ ವಾತಾವರಣವಿರುತ್ತಿತ್ತು. ಆಗ ಯಾವ ಗಂಡೂ ಯಾವ ಹೆಣ್ಣನ್ನೂ ಬಯಸಿ ಹೀಗೆ ಪತ್ರ ಬರೆಯುವ ಬರೆಯಿಸುವ—ಕಾರಣವೇ ಇರಲಿಲ್ಲ. ಈ ಕಾರ್ಯವನ್ನು ಹೆಣ್ಣು-ಗಂಡುಗಳ ಹಿರಿಯರೇ ತಮ್ಮ ಜೀವನಾನುಭವಜನ್ಯ ವಿವೇಕದಿಂದ ಜರುಗಿಸುತ್ತಿದ್ದರು ಇಂದಿನ ಹೊಸಕಾಲದ ಪರಿಸ್ಥಿತಿ ಹಾಗಿಲ್ಲ. ಹೆಣ್ಣೂ ಗಂಡೂ ಸ್ವತಂತ್ರವಾಗಿ ಬೆಳೆಯುತ್ತಲಿವೆ. ವಯೋಧರ್ಮಕ್ಕನುಗುಣವಾಗಿ ಅವರಲ್ಲಿ ಲೈಂಗಿಕ ಆಕರ್ಷಣೆಯ ವಿಕಾಸವೂ ಆಗುವುದು ಸ್ವಾಭಾವಿಕ. ಸ್ವತಂತ್ರವಾಗಿ ಬೆಳೆಯ-ಗೊಟ್ಟ ಗಂಡು-ಹೆಣ್ಣುಗಳು, ತಮಗೆ ಇಷ್ಟವೆನಿಸಿದ ಹೆಣ್ಣು-ಗಂಡುಗಳನ್ನು ಪಡೆಯಲು ಬಯಸುವುವು. ನಿಮಗೆ ಬಂದಿರುವ ಈ ಪತ್ರವು, ಈ ಹೊಸ ವಿಚಾರದ ಪರಿಣಾಮವೆ ಆಗಿದೆ. ಇದಕ್ಕಾಗಿ ನಾವು ಸಿಟ್ಟಿಗೇಳುವ ಕಾರಣವೂ ಇಲ್ಲ; ನೊಂದುಕೊಳ್ಳುವ ಕಾರಣವೂ ಇಲ್ಲ. ಮನಸ್ಸಿಗೆ ಬಂದರೆ ಒಪ್ಪಿಕೊಳ್ಳ-ಬೇಕು; ಇಲ್ಲವಾದರೆ ಇಲ್ಲವೆನ್ನಬೇಕು! ರಾಯರೇ, ಇನ್ನೂ ನಿಮ್ಮ ಕುಮುದಾ ಕಾಲೇಜಿಗೆ ಹೋಗಿಲ್ಲ; ಅಲ್ಲಿಗೆ ಹೋಗಿ ಕಲಿಯಲು ತೊಡಗಿದಳೆಂದರೆ, ಅವ-ಳನ್ನು ಬಯಸಿ ಬರುವ ಪತ್ರಗಳು ನೇರವಾಗಿ ಅವಳಿಗೇ ಬರುವವು; ನಿಮಗದರ ಸುದ್ದಿಕೂಡ ಗೊತ್ತಾಗುವುದಿಲ್ಲ! ಕಾಲೇಜಿಗೆ ಹೋಗುವ ತರುಣಿಯರ ಪರಿಸ್ಥಿತಿಯೇನೆಂಬುದು ನಿಮಗಿನ್ನೂ ಗೊತ್ತಾಗಿಲ್ಲ; ಮ್ಯಾಟ್ರಿಕ್ ಪಾಸಾಗಿ ನಿಮ್ಮ ಮಗಳು ಕಾಲೇಜಿಗೆ ಹೋಗಲಿ; ನಿಮಗೆ ಗೊತ್ತಾಗದಿದ್ದರೂ ಹೊಸ ನಾಗರಿಕತೆಯ ಪರಿಣಾಮ ಆಕೆಗೆ ಚೆನ್ನಾಗಿ ಗೊತ್ತಾಗುತ್ತದೆ!"

ಅನಂತರಾಯರ ಎದೆ ಡಡಡಡಿಸಿತು. ಅವರು ಪೆಚ್ಚುಮೋರೆ ಮಾಡಿ-ಕೊಂಡು, ಮಗಳ ಮುಖದ ಕಡೆಗೆ ಪಿಳಿಪಿಳಿ ನೋಡುತ್ತ ಕುಳಿತುಕೊಂಡರು ಆಗ ತಗ್ಗಿದ ದನಿಯಲ್ಲಿ ಕುಮುದಾ ಕೇಳಿದಳು:

"ಹಾಂಗಾದರ ಹೆಣ್ಣುಮಕ್ಕಳು ಕಾಲೇಜಿಗೆ ಹೋಗಬಾರದಂತ ನಿಮ್ಮ ಅಭಿಪ್ರಾಯ ಏನು?"

" ಛೇಛೆ! ಹಾಂಗೇನೂ ಇಲ್ಲ ನನ್ನ ಅಭಿಪ್ರಾಯ! ಜೀವನದ ಗುರಿಯನ್ನು ನಿರ್ಧರಿಸಿಕೊಂಡು ಯಾವುದಕ್ಕೂ ಮುಂದಡಿಯಿಡಬೇಕು—ಅಂತ ನನ್ನ ಅಭಿಪ್ರಾಯ ! ಒಂದೊಂದು ದಾರಿಯೊಳಗ ಒಂದೊಂದು ಪ್ರಕಾರದ ಅನುಕೂಲತೆಗಳೂ ಇರತಾವ; ಒಂದೊಂದು ಬಗೆಯ ಪ್ರತಿಕೂಲತೆಗಳೂ ಇರತಾವ. ಪ್ರತಿಕೂಲತೆಗಾಗಿ ಹೆದರಬಾರದು; ಕಂಗೆಡಬಾರದು. ಇರುವ ಅನುಕೂಲತೆಗಳ ಸಹಾಯದಿಂದ, ಪ್ರತಿಕೂಲತೆಗಳನ್ನ ಎದುರಿಸತಾ ಸಾಹಸದಿಂದ ಮುಂದುವರಿಯಬೇಕು. ಈ ಮಾತು ಗಂಡಸರಿಗೂ ಅನ್ವಯಿಸತದ; ಹೆಂಗಸರಿಗೂ ಅನ್ವಯಿಸತದ! ಯಾವಾಗಲೂ ಮನುಷ್ಯರಿಗೆ ಸಹನೆ ಬೇಕು; ಸಂಯಮ ಬೇಕು; ಸಾಹಸ ಬೇಕು. ಇವುಗಳ ಸಹಾಯದಿಂದ, ಎಂತಹ ಆಪತ್ತಿಗಳನ್ನೂ ದಾಟಿ, ನಾವು ನಮ್ಮ ಗುರಿಯನ್ನ ಮುಟ್ಟಬಹುದು. ಹಿಡಿಯದ ದಾರಿಯೊಳಗಿನ ಅನುಕೂಲತಾ ಹಿಡಿದ ದಾರಿಯೊಳಗೂ ಬರಬೇಕಂತ, ಅಸಹನೆಯಿಂದ ಅಳತಾ ಕೂತುಕೊಂಡರ, ನಮ್ಮಿಂದ ಯಾವ ಕೆಲಸವನ್ನೂ ಕೊನೆಗಾಣಿಸಲಿಕ್ಕೆ ಆಗೂದಿಲ್ಲ ! "

ಅನಂತರಾಯರ ಮುಖದ ಮೇಲೆ ಮೂಡಿದ ಪೆಚ್ಚುತನವು ಈಗ ಮರೆಯಾಗುತ್ತ ಹೋಗಿ, ಏನೋ ಒಂದುಬಗೆಯ ತೃಪ್ತಿಯ ಭಾವ ಪಸರಿಸುತ್ತ ನಡೆದಿದ್ದಿತು. ರತ್ನಾಕರನನ್ನು ನೋಡುವ ಅವರ ನೋಟದಲ್ಲಿ ಆದರಭಾವ ತುಂಬಿ ಸೂಸುತ್ತಲಿತ್ತು. ಕುಮುದೆಗೆ ಆಶ್ಚರ್ಯ, ಆನಂದ, ಉತ್ಸಾಹ. ರತ್ನಾಕರನನ್ನು ಕೃತಜ್ಞತಾದೃಷ್ಟಿಯಿಂದ ನೋಡುತ್ತ ಹೇಳಿದಳು :

" ಇಲ್ಲಿ ಇಂದು ನಾವು ಉಪಾಹಾರ ಕೊಟ್ಟದ್ದನ್ನು, ನೂರುಮಡಿಯಾಗಿ ನಮಗೆ ತಿರುಗಿಕೊಟ್ಟು ಉಪಕಾರದ ಹೊರಿ ಹೆಚ್ಚಿಸಿದಿರಿ! ಆಗಾಗ ನೀವು ನಮ್ಮ ಮನಿಗೆ ಬರತಿರಬೇಕಂತ ನನ್ನ ಅಪೇಕ್ಷಾ ಅದ! "

ಗಡಿಯಾರ ಒಂಬತ್ತುಗಂಟೆಯನ್ನು ಬಾರಿಸಿತು. ಒಮ್ಮೆಲೆ ರತ್ನಾಕರ ಎದ್ದು ನಿಂತು ನುಡಿದ :

" ಓ ! ಮಾತಿನೊಳಗ ಒಂಬತ್ತುಗಂಟೆ ರಾತ್ರಿ ಆಗಿ ಹೋಯ್ತಲಾ ! ನಾನೀಗ ಹೊರಡಲೇ ಬೇಕು ! ನಾಳೆಯ ದಿನವೇ ಊರಿಗೆ ಹೋಗಬೇಕು. ಅದರ ಸಿದ್ಧತೆಯನ್ನ ಏನೂ ಮಾಡಿಕೊಂಡಿಲ್ಲ ಇನ್ನೂ ! ನಮಸ್ಕಾರ ರಾಯರೇ!

ನಮಸ್ಕಾರ ಕುಮುದಾ! ಇಂದು ಸವಿಸವಿ ಊಣಿಸಿನ ಕೂಡ, ನಿಮ್ಮೆಲ್ಲರ ಸವಿಸವಿ ಪರಿಚಯವೂ ಆಯ್ತು! ನಾನು ಹೋಗಿ ಬರಲೇ?"

ಅನಂತರಾಯರು ನುಡಿದರು:

"ಇನ್ನೇನು, ನಮ್ಮ ನಿಮ್ಮ ಪರಿಚಯ ಸಾಕಷ್ಟು ಆದ್ಹಾಂಗ ಆತು. ದಯಮಾಡಿ ಆಗಾಗ ಬರತಿರಬೇಕು ನೀವು!"

ಒಳಬಾಗಿಲಲ್ಲಿಯೆ ನಿಂತುಕೊಂಡು ವೇಣಕ್ಕ ವಿನಯ-ಕಳವಳಗಳಿಂದ ಕಂಪಿಸುವ ಧ್ವನಿಯಲ್ಲಿ ಹೇಳಿದರು:

"ನಮ್ಮ ಕಾವೇರೀ ಕಲ್ಯಾಣಾ ಕಟ್ಟೋ ಹೊರೀ ಹೊತ್ತುಕೊಂಡು ಹೊರಟೀರಿ; ದೇವರು ನಿಮ್ಮ ಕೈಗೆ ಯಶಸ್ಸು ಕೊಟ್ಟರ, ನಮ್ಮ ಬವಣಿ ಬಿಡತ್ತದ!"

ರತ್ನಾಕರ ನಗುತ್ತ ಮೆಲ್ಲಗೆ ಹೇಳಿದ:

"ದೇವರು ಯಾವಾಗಲೂ ಒಳ್ಳೆಯದನ್ನs ಮಾಡತಾನ; ನೀವು ಚಿಂತೀ ಮಾಡಬ್ಯಾಡ್ರಿ ತಾಯಿಾ!" ಮಾತನಾಡುತ್ತಲೆ ರತ್ನಾಕರ ಹೊರಹೊರಟ. ಅನಂತರಾಯರು, ಕುಮುದಾ ಇಬ್ಬರೂ ರತ್ನಾಕರನನ್ನು ಬೀಳ್ಕೊಡಲು ಅವನೊಂದಿಗೆ ಬಾಗಿಲನ್ನು ದಾಟ ಹೊರಟರು.

## ೧೦ನೆಯ ಪರಿಚ್ಛೇದ

ರತ್ನಾಕರನು ಸ್ವರಾಜ್ಯಭವನಕ್ಕೆ ಮರಳಿಬಂದಾಗ ಒಂಬತ್ತುವರೆಗಂಟೆ ರಾತ್ರಿಯಾಗಿದ್ದಿತು. ಹೊಟ್ಟೆತುಂಬ ತಿಂಡಿ-ತಿನಿಸು ತಿಂದುಬಂದುದರಿಂದ, ಊಟ ಮಾಡುವ ವಿಚಾರವೇನೂ ಇರಲಿಲ್ಲ. ಬಂದವನೇ ಟೇಬಲಿನ ಬಳಿಯ ಕುರ್ಚಿಯ ಮೇಲೆ ಕುಳಿತು, ಅಂದಿನ ಅಂಚೆಗೆ ಬಂದ ಕಾಗದಗಳನ್ನು ನೋಡಲು ತೊಡಗಿದ. ಸ್ವರಾಜ್ಯಭವನಕ್ಕೆ ಸಂಬಂಧಿಸಿದ ಕಾಗದಗಳನ್ನೆಲ್ಲ ಒಂದೊಂದಾಗಿ ನೋಡಿದ. ತರುವಾಯ, ಕೊನೆಗೆ ತನ್ನ ಹೆಸರಿಗೆ ಬಂದ ಸ್ವಂತದ ಕವರೊಂದನ್ನು ಉದಾಸೀನ ಭಾವದಿಂದಲೇ ಒಡೆದ. ಪತ್ರದ ಮಡಿಕೆಯನ್ನು ಬಿಚ್ಚಿ ನೋಡಿದ. ತನ್ನ ಸೋದರಮಾವ ಹುಬ್ಬಳ್ಳಿಯಿಂದ ಬರೆದ ಪತ್ರವದು. ಎಂದೂ ಬರೆಯುದಿದ್ದವನು ಇಂದೇಕೆ ಪತ್ರ ಬರೆದಿರುವನೋ—ಎಂಬ ಬೆರಗಿನ ಭಾವ ಒಮ್ಮೆಲೇ ತಲೆದೋರಿತು. ಕುತೂಹಲದಿಂದ ಪತ್ರವನ್ನು ಓದಲು ತೊಡಗಿದ:

"ಚಿ. ರತ್ನಾಕರನಿಗೆ ಆಶೀರ್ವಾದಗಳು     ಹುಬ್ಬಳ್ಳಿ ತಾ. ೧೬-೪-೧೯೩೦

ತರುವಾಯ ಇತ್ತ್ಕಕಡೆ ಎಲ್ಲಾ ಕ್ಷೇಮ. ನಿನ್ನ ಕುಶಲ ಸಮಾಚಾರ ಆಗಾಗ ತಿಳಿಸು. ಇಕಡಿಕಡೆ ನಿನ್ನಿಂದ ಪತ್ರಾನೇ ಬಂದಿಲ್ಲ. ನನಗೂ ಕೆಲಸದ ಗಡಿಬಿಡೀ ಒಳಗ ಪತ್ರಾ ಬರೀಲಿಕ್ಕಾಗಿಲ್ಲ.

ಈಗ ಪತ್ರಾಬರೀಲಿಕ್ಕೆ ಕಾರಣೇನಂದರ, ಚಿ.ಸುಭದ್ರಾ ಬೆಳೆದು ದೊಡ್ಡಾಕಿ ಆಗ್ಯಾಳ. ಈ ವರ್ಷ ಆಕೀ ಮದಿವೀ ಮಾಡಲಿಕ್ಕೇ ಬೇಕಾಗೇದ. ನೀನು ಇಷ್ಟು ಕಲಿತರೂ ಅದರ ಉಪಯೋಗಾ ಏನೂ ಮಾಡಿಕೊಳ್ಳದೆ, ಚಳವಳೀ ಒಳಗ ಸೇರಿ, ಮನೀ ಮಾರು ಬಿಟ್ಟು ಊರೂರು ತಿರಗಾಡಲಿಕ್ಕೆ ಹತ್ತೀದಿ. ಆದರ ಸುಭದ್ರಾ, 'ಮದಿವೀ ಮಾಡೂದಾದರ ರತ್ನಾಕರನ ಜೋಡಿ ಮಾಡ್ರಿ; ಇಲ್ಲದಿದ್ದರ ನನಗ ಮದಿವೀನss ಬ್ಯಾಡಾ' ಅಂತ ಹಟಾ ಹಿಡದಾಳ. ಎಷ್ಟೋ ವರಗಳನ್ನು ನೋಡಿ ಸುಭದ್ರಾನ್ನ ತೋರಿಸಿ ಆಯಿತು. ಆದರ ಮೂರು ನಾಕು ಕಡೆ ಕನ್ಯಾನ್ನ ವರಾ ಒಪ್ಪಿ, ಮದಿವೀ ಹೊಂದಿಕಿ ಆಗೂ ಸಂದರ್ಭ ಒದಗಿ ಬಂದರೂ, ' ನಾನು ಮದಿವೀನೇ ಮಾಡಿಕೊಳ್ಳೂದಿಲ್ಲ ' ಅಂತ ಹಟಾ ಹಿಡಿದು, ಬಂದಿರುವ ಸುಸಂದರ್ಭ ಎಲ್ಲಾ ತಪ್ಪಿಸಿ ಬಿಟ್ಟಳು. ಈಗ ಮೊನ್ನೆ ಮೊನ್ನೇ ಒಂದುಕಡೆ ನೋಡಿಬಂದೀವಿ. ಮನಿತನಾ ಚೆಲೋ ಅದ. ಹುಡುಗ ಕನ್ಯಾನ್ನ ನೋಡಿರದಿದ್ದರೂ, ಹುಡುಗನ ತಾಯಿ-ತಂದಿ ನೋಡಿ ಕನ್ಯಾ ಪಾಸ್ ಮಾಡ್ಯಾರ. ವರದಕ್ಷಿಣಿ-ವರೋಪಚಾರ, ನಮ್ಮ ಅಳವಿನೊಳಗಿನದು ಅದ. ಈ ಪ್ರಸಂಗನೂ ಕೈಮೀರಿ ಹೋದರ, ಮುಂದ ಹುಡುಗೀ ಮದಿವಿ ಆಗೂದss ಕಠಿಣ ಅದ.

ಈಗ ನಿನ್ನ ಮನಸಿನಾಗ ಏನದss ನೋ ನನಗ ಗೊತ್ತಿಲ್ಲ. ನೀನss ಬಂದು, ಚಿ. ಸುಭದ್ರಾನ್ನ ಮದಿವೀ ಮಾಡಿಕೊಂಡು, ನಾಕು ಮಂದೀಹಾಂಗ ಮನೀಮಾರು ಹಿಡಕೊಂಡು ಇದ್ದರ, ನನಗ ಭಾಳ ಸಂತೋಷ ಆಗತದ. ಈ ಮಾತಿಗೆ ನಿಮ್ಮ ತಾಯಿ— ಚಿ. ಅಂಬಕ್ಕನ ಸಮ್ಮತೀನೂ ಅದ. ಈಗ ನಾ ಬರಿಯೂ ಮುಖ್ಯ ಮಾತಂದರ, ನೀ ಇಲ್ಲಿಗೆ ಬಂದು, ಸ್ವತಃ ನೀನೇ ಚಿ. ಸುಭದ್ರಾನ ಪಾಣಿಗ್ರಹಣ ಮಾಡಬೇಕು; ಇಲ್ಲದಿದ್ದರ ಆಕಿಗೆ ನೀನೇ ತಿಳಿವಳಿಕೀ ಹೇಳಿ, ಬ್ಯಾರೇ ವರನ ಜೋಡೀ ಮದಿವೀ ಮಾಡಿಕೊಳ್ಳಲಿಕ್ಕೆ ಒಪ್ಪಿಸಬೇಕು. ಚಿ. ಸುಭದ್ರಾನ ಮದಿವೀ ಹೊಣಿ ನಿನ್ನ ತಲೀಮ್ಯಾಲ ಅದ. ಆಕೀ ವರ್ತನದ

ಸಲುವಾಗಿ ನಾ ಅಂತೂ ಬ್ಯಾಸತ್ತು ಹೋಗೇನಿ. ಕುಂ. ಸೌ. ವತಿಯಂತೂ ಮಗಳ ಮದಿವೀ ಸಲುವಾಗಿ, ಹಗಲಿರುಳೂ ಚಿಂತೀಮಾಡಿ ಸಣ್ಣಾಗಲಿಕ್ಕೆ ಹತ್ತ್ಯಾಳ. ನನಗ ಏನೂ ತಿಳಿದ್ಹಾಂಗಾಗೇದ. ನೀನು ಹೊರಗಿನವ ಅಲ್ಲ. ನಮ್ಮ ಮನಿತನದ ಮಾನಾಪಮಾನದ ಜವಾಬದಾರೀ ನಿನ್ನ ತಲೀ ಮ್ಯಾಲೆ ಕೂಡ ಅದ.

ನೀನು ಈ ಕಾಗದಾ ಕಂಡಕೂಡಲೆ, ಇದ್ದ ಕೆಲ್ಸಾ ಇದ್ದಲ್ಲೇ ಬಿಟ್ಟು ಹುಬ್ಬಳ್ಳಿಗೆ ಹೊಂಟು ಬರಬೇಕು. ನೀ ಬರೂ ಹಾದೀ ನೋಡತಽನಽ ನಾನು ಕೂತಿರತೀನಿ ನೀ ಬಂದ ಮ್ಯಾಲಽ ಏನಂಬೂದನ್ನ ನಿರ್ಣಯಿಸಿ, ಆ ಹುಡು-ಗನ ತಾಯಿ-ತಂದಿಗೆ ಹೇಳಬೇಕಾದದ್ದನ್ನ ಹೇಳಬೇಕಂತ ಮಾಡೀನಿ. ಕೂಡಲೆ ಬಂದುಬಿಡು ! ಇಂತೀ ಆಶೀರ್ವಾದಗಳು.

ನಿನ್ನ ಸೋದರಮಾವ

ಸಂಜೀವರಾವ ಪದಕೀ, ಹುಬ್ಬಳ್ಳಿ ”

ಪತ್ರವನ್ನು ಓದಿ ಮುಗಿಸಿ, ರತ್ನಾಕರ ಸುಮ್ಮನೆ ಕುಳಿತುಬಿಟ್ಟ. ವಿಚಾರದ ಗೊಂದಲದಲ್ಲಿ ಬಿದ್ದುದು ಆತನ ಮುಖದ ಮೇಲೆ ಮೂಡಿದ ಭಾವ-ರೇಷೆಗಳಿಂದ ವ್ಯಕ್ತವಾಗುತ್ತಿತ್ತು. ಮತ್ತೆ ಕೈಯಲ್ಲಿ ಕಾಗದ ತೆಗೆದುಕೊಂಡ; ಅದರ ಮೇಲೆ ತನ್ನ ಶೂನ್ಯದೃಷ್ಟಿಗಳನ್ನಾಡಿಸಿದ; ಮತ್ತೆ ಟೇಬಲ್ಲಿನ ಮೇಲೆ ಚೆಲ್ಲಿದ. ಕುರ್ಚಿಯ ಹಿಂಬದಿಯ ಮೇಲೆ ತಲೆಯನ್ನು—ಕುಳಿತಹಾಗೆಯೆ— ಕೆಡಹಿದ. ಕಣ್ಣುಗಳೆರಡನ್ನೂ ಮುಚ್ಚಿ ಬಿದ್ದುಕೊಂಡ. ಮತ್ತೆ ಎದ್ದುಕುಳಿತು ಕ್ರಾಪಿನ ಕೂದಲನ್ನು ಕೆದರಿಕೊಂಡ. ಏನು ಮಾಡಬೇಕೆಂಬುದೇ ಆತನಿಗೆ ಹೊಳೆಯಲೊಲ್ಲದು; ಹಾಗೆಯೆ ಯೋಚನೆಯಲ್ಲಿ ಮಗ್ನನಾದ :

“ ಸುಭದ್ರಾ ಈ ರೀತಿಯಿಂದ ತನ್ನ ಭಾವನಾ ಬೆಳಸಿಕೊಂಡಾಳಂಬೂದು ನನ್ನ ಕನಸು-ಮನಸಿನೊಳಗ ಕೂಡಾ ಇರಲಿಲ್ಲ. ಹುಚ್ಚು ಹುಡುಗಿ....! ಆಕಿಗೆ ಹುಚ್ಚಿ ಅಂತ ಅನ್ನೂದರೆ ಹ್ಯಾಂಗ? ಹೆಣ್ಣಿನ ಮನೋಧರ್ಮವೇ ಹೀಂಗ ಇರತಽದ. ಅವರಿಗೆ ತಿಳಿದೋ ತಿಳಿಯದೆಯೋ—ಯಾವಾಗಲೋ - ಒಂದು ಕಡೆ ಮನಸ್ಸು ಅಂಟಿಕೋತದ; ವಯಸ್ಸು ಬೆಳೀತ ಹೋದ್ಹಾಂಗ, ಈ ಮನೋವೃತ್ತಿ ಬೆಳೀತಽ ಹೋಗತಽದ. ತಾನು ಬಯಸುವ ವ್ಯಕ್ತಿ ತನ್ನನ್ನ

ಬಯಸತಕ್ಕದ್ದೋ ಇಲ್ಲೋ ಅಂಬೂದರ ವಿಚಾರ ಕೂತ ಮಾಡೂದಿಲ್ಲ ಅದ-
ರೊಳಗ ಸುಭದ್ರಾನಂಥಾ ಮುಗ್ಧಸ್ವಭಾವದ ಹೆಣ್ಣುಗಳ ಮಾತನ್ನಂತೂ
ಬ್ಯಾರೇ ಹೇಳಲಿಕ್ಕೆ ಬೇಕಾಗಿಲ್ಲ. ಸುಭದ್ರಾನ್ನ ನನ್ನ ಜೊತೆಗಾತಿನ್ನ ಮಾಡಿ-
ಕೋಬೇಕೆನ್ನೂ ವಿಚಾರ ನನ್ನ ಮನಸಿನೊಳಗ ಎಂದೂ ಸುಳಿದಿಲ್ಲ ಕೂಡ.
ಏನೋ, ಸೋದರಮಾವನ ಮಗಳು; ಸಹಜವಾದ ಆತ್ಮೀಯತೆಯ ಸಲುಗೆ-
ಯಿಂದ ಮಾತಾಡತಿದ್ದದ್ದು ಮಾತ್ರ ನಿಜ! ಜನರೇನೋ 'ಹೆಂಡತಿ' 'ಹೆಂಡತಿ'
ಅಂತ ಚೇಷ್ಟೆ ಮಾಡತಿದ್ದರು; ಆದರ ನನ್ನ ಹೃದಯದೊಳಗ ಆ ಭಾವನಾ
ಎಂದೂ ಹುಟ್ಟಿ ಬೆಳೆದಿಲ್ಲ. ಸರಿ, ಈಗ ನಾನು ಮಾಡಬೇಕೇನು ? ಸುಭದ್ರಾನ
ಮದಿವಿ ಆಗಬೇಕಾದದ್ದೇನೋ ಸಾಮಾಜಿಕ ವ್ಯವಹಾರದ ದೃಷ್ಟಿಯಿಂದ
ಅಗತ್ಯದ ಮಾತೇ ಆಗೇದ ? ಆದರೆ ಆಕಿ ಹಿಡಿದಿರುವ ಹಟವನ್ನ ನೋಡಿದರ,
ಆಕಿಯ ಮದಿವಿ ಆಗುವ ಬಗೆ ಹ್ಯಾಂಗ ? ನನ್ನ ತಲೆಯಲ್ಲಿ ಅಂತೂ ಸದ್ಯ
ನನ್ನ ಮದುವೆಯ ವಿಚಾರವೇ ಇಲ್ಲ. ಕೈಕೊಂಡ ಕರ್ತವ್ಯ ಮುಗಿಯಿತೆಂದು
ಮನಸ್ಸಿಗೆನಿಸುವ ತನಕ; ಮನಸ್ಸಿನೆದುರು ಮದುವೆಯ ವಿಚಾರ ಬರುವಂತಿಲ್ಲ.
ಹಾಗಾದರೆ ಸುಭದ್ರೆಯ ಮದುವೆ ಹೇಗಾಗಬೇಕು ? ಪಾಪ, ಮಾಮಾ
ಮಾಮಿ ಎಷ್ಟು ಚಿಂತೆಯಲ್ಲಿ ಇರುವರೋ ಏನೋ! ಅವರ ಸಮಾಧಾನ
ಜೀವನದ ಬಗ್ಗೆ ನಾನು ಏನಾದರೂ ಮಾಡಬೇಕಾದದ್ದು ನನ್ನ ಕರ್ತವ್ಯ
ಅಲ್ಲವೇನು ? ಈಗ ನನಗೆ ಪ್ರತ್ಯಕ್ಷವಾಗಿ ಏನೂ ಸಂಬಂಧಿಕರಲ್ಲದ ಗೋಪಾಲ-
ರಾಯರ ಮಗಳ ಮದುವೆಗಾಗಿ, ನಾನು ನನ್ನ ಕೆಲಸವನ್ನು ಸ್ವಲ್ಪಕಾಲ
ಬದಿಗಿರಿಸಿ, ಮುದ್ದಾಪುರದ ವರೆಗೆ ಹೋಗಿಬರಬೇಕೆಂದು ನಿರ್ಣಯಿಸಿಲ್ಲವೇನು?
ಹೌದು, ನಿರ್ಣಯಿಸಿದ್ದೇನೆ. ಸುಭದ್ರೆಯ ಮದುವೆಯ ವಿಚಾರಕ್ಕಿಂತ
ಕಾವೇರಿಯ ಮದುವೆಯ ವಿಚಾರ ಬೇರೆ ತರದ್ದಾಗೇದ. ಸುಭದ್ರೆಯ ಮದುವೆ-
ಯಾಗುವುದರಲ್ಲಿ ನನ್ನ ಸ್ವಂತದ ಸಂಬಂಧ ಬರತಕ್ಕದ ಕಾವೇರಿಯ ಮದುವೆ-
ಯಲ್ಲಿ ಅಂತಹ ಸ್ವಂತದ ಸಂಬಂಧವೇನೂ ಇಲ್ಲ. ಕೇವಲ ಸಾಮಾಜಿಕ ಹಿತದ
ದೃಷ್ಟಿಯಿಂದ ಇದರಲ್ಲಿ ನನಗೆ ಕೆಲಸ ಮಾಡಬೇಕಾಗೇದ.... ಸರಿ ! ಸಾಮಾಜಿಕ
ಹಿತದ ದೃಷ್ಟಿಯಿಂದ ಕೆಲಸ ಮಾಡುವವರು, ಸ್ವಂತದ ಕೌಟುಂಬಿಕ ಹಿತದ
ದೃಷ್ಟಿ ಇರಿಸಿಕೊಳ್ಳಬಾರದೇನು ? ನನ್ನ ಕುಟುಂಬ ಕೂಡ ನಮ್ಮ ಸಮಾಜದ
ಒಂದು ಘಟಕನೇ ಅದ! ನಮ್ಮ ಕುಟುಂಬದೊಳಗ ಅಸಮಾಧಾನ—ಅಶಾಂತಿ
ತಲೆದೋರಿದರೂ ಅದು ಸಮಾಜದೊಳಗ ಅಶಾಂತಿ-ಅಸಮಾಧಾನ ತಲೆದೋರಿ

ದ್ಹಾಂಗs ಅಲ್ಲೇನು ? ಹೌದು ! ಸುಭದ್ರಾನ ಮದಿವೀ ವಿಚಾರದೊಳಗ ನಾನೂ ಮನಸ್ಸು ಹಾಕಬೇಕಾದದ್ದು ನನ್ನ ಕರ್ತವ್ಯವೇ ಆಗೇದ. ಆದರ, ಈ ಕರ್ತವ್ಯ ನಿರ್ವಹಿಸೂ ಬಗೀ ಹ್ಯಾಂಗ ? ಈಗ ನಾನಂತೂ ಸುಭದ್ರಾನ್ನ ಕೈ ಹಿಡಿಯೂ ಹಾಂಗಿಲ್ಲ....ಆಕೀ ಮದುವಿಯೆನೋ ಆಗಲೇಬೇಕು. ಇಲ್ಲಿ ಎಷ್ಟು ವಿಚಾರ ಮಾಡಿದರೂ ಈ ವಿಷಯ ಬಗೀಹರಿಯುವ ಹಾಂಗ ಕಾಣೂದಿಲ್ಲ. ಹುಬ್ಬ-ಳ್ಳಿಯ ವರೆಗೆ ಹೋಗಿ ಬರಬೇಕು. ಅಲ್ಲಿಯ ಪರಿಸ್ಥಿತಿಯನ್ನೆಲ್ಲಾ ಕಣ್ಣಾರೆ ಕಂಡು, ಏನಾದರೂ ಹಂಚಿಕಿ ಹೊಳೀತsದೇನೋ ನೋಡಬೇಕು. ನಾಳೆ ಮುಂಜಾನೆಯ ಬಸ್ಸಿನಿಂದ ಮುದ್ದಾಪುರಕ್ಕ ಹೋಗಿ, ರಂಗಣ್ಣಾನ ಕೂಡ ಮಾತಾಡಿಯಂತೂ ಬರತೀನಿ. ಬಂದಮ್ಯಾಲ, ಒಂದು ದಿವಸ, ಹುಬ್ಬಳ್ಳಿಗೆ ಹೋಗಿಬಂದರ ಆಯ್ತು. ಈಗ ಮಾಮಾಗ ಒಂದು ಕಾಗದ ಬರೆದು, ಎರಡು ಮೂರುದಿನದೊಳಗ ಅಲ್ಲಿಗೆ ಬರತೀನಿ—ಅಂತ ತಿಳಿಸಬೇಕು ! "

ರತ್ನಾಕರ ಪತ್ರಬರೆಯುಲು ಮನಸ್ಸನ್ನು ಸಿದ್ಧಗೊಳಿಸಿದ; ಬರೆಯುವ ಕಾಗದವನ್ನು ಮುಂದೆ ಸರಿಸಿಕೊಂಡ. ಫೌಂಟನ್‌ಪೆನ್ನನ್ನು ಕೈಗೆ ತೆಗೆದು ಕೊಂಡು, ಅದರ ಟೊಪ್ಪಿಗೆಯನ್ನು ಮೆಲ್ಲಗೆ ತೆಗೆಯುತ್ತಿರುವಾಗಲೇ ಸ್ವಯಂ-ಸೇವಕನೊಬ್ಬನು ಒಳಗೆ ಬಂದು, ಪಿಸುದನಿಯಲ್ಲಿ ಹೇಳಿದ :

" ಹವಾಲದಾರ ಹನುಮಂತಪ್ಪ ಬಂದಾನ; ಏನೋ ಅಗತ್ಯದ ಕೆಲಸ ಅದ ಅಂತ. ನಿಮಗs ಭೇಟಿಯಾಗಿ ಮಾತಾಡಬೇಕಾಗೇದಂತ ! "

ರತ್ನಾಕರ ಫೌಂಟನ್ ಪೆನ್ನನ್ನು ಹಾಗೆಯೆ ಟೇಬಲ್ಲಿನ ಮೇಲಿಟ್ಟು, 'ಅವನನ್ನ ಇಲ್ಲೇ ಕರಕೊಂಡು ಬರ್‍ರಿ !' ಎಂದು ಹೇಳಿ, ಕುತೂಹಲದಿಂದ ಆತನ ದಾರಿಯನ್ನು ನೋಡುತ್ತ ಕುಳಿತುಕೊಂಡ. ಒಂದೆರಡು ನಿಮಿಷಗಳ-ಲ್ಲಿಯೆ ಹನುಮಂತಪ್ಪ ಒಳಗೆ ಬಂದು, 'ನಮಸ್ಕಾರರೀ ರಾಯರs !' ಎಂದು, ರತ್ನಾಕರನನ್ನು ಆದರದಿಂದ ನಮಸ್ಕರಿಸಿದ. ರತ್ನಾಕರ 'ಬರ್‍ರೀ, ಹನು-ಮಂತಪ್ಪಾ !' ಎಂದು ಸಲುಗೆಯಿಂದ ಕರೆದು, ಬದಿಯಲ್ಲಿರುವ ಕುರ್ಚಿಯ ಮೇಲೆ ಕುಳ್ಳಿರಿಸಿಕೊಂಡ.

ಹನುಮಂತಪ್ಪನ ಮುಖದ ಮೇಲೆ ಪೋಲೀಸರಿಗೆ ಸ್ವಾಭಾವಿಕವಾದ ಉಗ್ರಕಳೆ ಇರಲಿಲ್ಲ; ಅಲ್ಲದೆ ಅವನು ಪೋಲೀಸರ ಸಮವಸ್ತ್ರದಲ್ಲಿಯೂ ಇರಲಿಲ್ಲ. ಖಾದಿಯ ಶರ್ಟೊಂದನ್ನು ತೊಟ್ಟಿದ್ದ. ತಲೆಗೆ ಖಾದಿಯ ಟೊಪ್ಪಿಗೆ ಹಾಕಿ-

ಕೊಂಡಿದ್ದ. ಉಟ್ಟ ಧೋತರ ಮಾತ್ರ ಗಿರಣಿಯ ನೇಗೆಯದೆ ಇತ್ತು. ಮುಖ ದಲ್ಲಿ ಗಾಬರಿಯು ಅಸ್ಪಷ್ಟವಾಗಿ ಮೂಡಿಕೊಂಡಿತ್ತು. ರತ್ನಾಕರ ಅವನನ್ನು ಕೇಳಿದ :

" ಮತ್ತೇನು ಹನುಮಂತಪ್ಪಾ, ಎಲ್ಲಾ ಶಾಂತ ಅದs ನೋ ಇಲ್ಲೋ ! "

ತಗ್ಗಿದ ಧ್ವನಿಯಲ್ಲಿ ಹನುಮಂತಪ್ಪ ಹೇಳಲು ತೊಡಗಿದ:

" ಅದನ್ನs ಈಗ ಹೇಳಲಿಕ್ಕೆ ಬಂದೀನಿ ರಾಯರ! ಕಟ್ಟೀ ಫೌಜದಾರ ಸಾಹೇಬರು ನಿಮಗ ತಿಳಿಸಿ ಬಾ ಅಂತ ಮುದ್ದಾಂ ನನ್ನ ಕಳಿಸಿದರು. ಪ್ರಸಂಗ ಸ್ವಲ್ಪ ಬಿಕ್ಕಟ್ಟಿಗೇ ಬಂದsದ! "

ಕೆರಳಿದ ಭಾವದವನಾಗಿ ರತ್ನಾಕರ ಕೇಳಿದ :

" ಏನು ? ಮತ್ತೇನು ಬಿಕ್ಕಟ್ಟಿನ ಪ್ರಸಂಗ ಬಂದsದ ? "

" ನಿಮ್ಮನ್ನ ಹಿಡೀಬೇಕಂತ ಇಂದs ವಾರಂಟು ಹೊರಟsದಂತ! ಇಂದ ಸಂಜೀಕಡೇನs ಸ್ಪೆಶಲ್ ಸಬ್‌ಇನಸ್ಪೆಕ್ಟರ ಕಡೆಗೆ ಅದು ಬಂದsದಂತ. ನಿಮ್ಮನ್ನ ಹಿಡೀಲಿಕ್ಕೆ ಇಂದ ರಾತ್ರೀನs ಬರತsದೋ ಏನೋ ಪೋಲೀಸ ಪಾರ್ಟಿ! ಇಂದ ರಾತ್ರಿ ಇಲ್ಲದಿದ್ದರ, ನಾಳೆ ಮುಂಜಾನೆಯಂತೂ ಬಂದs ಬರತsದ! ನಿಮ್ಮದೇನಾದರೂ ತಯಾರೀ ಮಾಡಿಕೊಳ್ಳೂದಿದ್ದರ ಮಾಡಿಕೊಳ್ರಿ—ಅಂತ ಕಟ್ಟೀ ರಾವ್‌ಸಾಹೇಬರು ಹೇಳಿ ಕಳಿಸ್ಯಾರ! "

ರತ್ನಾಕರ ಮೂಗಿನ ಮೇಲೆ ಬೆರಳಿಟ್ಟುಕೊಂಡು ಸುಮ್ಮಗೆ ಕುಳಿತು-ಕೊಂಡ. ಎರಡು ಮೂರು ನಿಮಿಷ ಹನುಮಂತಪ್ಪ ಸುಮ್ಮಗೆ ಕುಳಿತಿದ್ದು ಆ ಮೇಲೆ ಕೇಳಿದ:

" ಯಾಕ ರಾಯರs, ಸುಮ್ಮಗs ಕೂತುಕೊಂಡ್ರಿ! ವಾರಂಟು—ಅಂದ ಕೂಡಲೆ ಹೆದರಿದಿರೇನು ಮತ್ತ ? "

ರತ್ನಾಕರ ನಗುತ್ತ ಹೇಳಲು ತೊಡಗಿದ :

" ನೋಡ್ರಿ ಹನುಮಂತಪ್ಪಾ, ಇದರೊಳಗ ಹೆದರುವಂಥಾ ಮಾತೇನದ? ಮಳೆಯೊಳಗs ತಿಳಿದೂ ತಿಳಿದೂ ಹೊರಟೇವಿ; ಮೈ ತೊಯ್ಯಬಾರದಂದರ ಕೇಳೀತು ಹ್ಯಾಂಗ? ಪೋಲೀಸರು ನನ್ನ ಹಿಡಿದು ತುರಂಗಕ್ಕ ಹಾಕತಾ-ರಂಬೂ ಚಿಂತಿ ನನಗಿಲ್ಲ. ಬೇಕಾದಾಗ ಹಿಡಕೊಂಡು ಹೋದರೂ ನಾನು ಸಂತೋಷದಿಂದ ಸಿದ್ಧ! ಆದರ ಒಂದು ಅತ್ಯಂತ ಆವಶ್ಯಕ ಕೆಲಸದ ಸಲುವಾಗಿ,

ನಾ ಒಂದು ಊರಿಗೆ ಹೋಗಿ ಬರಬೇಕಾಗೇದ. ಮತ್ತ, ಆ ಕೆಲಸ ಅಂದರೇನು ಚಳವಳೀ ಕೆಲಸ ಅಲ್ಲ, ಏನೂ ಅಲ್ಲ! ಒಂದು ಲಗ್ನ ಘಟನಾದ ಮಾತು ಮಾತಾಡಿಕೊಂಡು ಬರಲಿಕ್ಕೆ, ಮೋಟಾರಿನಿಂದ ಮುದ್ದಾಪುರದ ತನಕಾ ಹೋಗಿ ಬರಬೇಕಾಗೇದ. ಈಗ ನಾ ಹೋಗಿ ಬಂದರ, ಒಂದು ಬಡಹುಡಿಗೀ ಕಲ್ಯಾಣ ಕಟ್ಟಿದ್ಹಾಂಗ ಆಗತದದೇನ್ರಿ! ಆ ಹುಡುಗೀ ತಂದಿ-ತಾಯಿ, ಎಲ್ಲಾ ಭಾರಾ ನನ್ನ ಮ್ಯಾಲ ಹೊರಿಸ್ಯಾರ! ಈಗ ನಾನು ಪೋಲೀಸರ ಕೈಗೆ ಸಿಕ್ಕು ಬಿಟ್ಟರ, ಪಾಪ, ಆ ತಂದಿ, ತಾಯಿ, ಮಗಳು - ಎಲ್ಲರೂ ನಿರಾಶರಾಗತಾರ! ಮುಂದೆ ಆ ಹುಡಿಗಿಗೆ ವರಾ ಹುಡುಕಿ ಮದಿವೀ ಮಾಡಬೇಕಾದರ, ಆ ತಂದಿ-ತಾಯಿಗಳಿಗೆ ಎಷ್ಟು ತೊಂದರಿ ಪಡಬೇಕಾಗತದೋ ಏನೋ! ಅದೆಲ್ಲಾ ಚಿತ್ರ ನನ್ನ ಕಣ್ಣೆದುರು ಕಟ್ಟಿದಂತಾಗಿ, ನಾ ಸುಮ್ಮಗೆ ಕುಳಿತುಕೊಂಡೆ. ಇನ್ನೇನೂ ಇಲ್ಲ!"

"ಹಾಂಗಾದರ ಇಂಥಾ ಕಲ್ಯಾಣ ಕಟ್ಟೊ ಕೆಲಸ ಇದ್ದರ, ಯಾಕ ಹಿಂದ ಮುಂದ ನೋಡತೀರಿ? ನೀವು ಇನ್ನ ತಾಸೆರಡು ತಾಸಿನೊಳಗಽ ಈ ಜಾಗಾ ಬಿಟ್ಟುಬಿಡ್ರಿ! ಬ್ಯಾರೇ ಕಡೆ ಎಲ್ಲಿಯಾದರೂ ಇದ್ದು, ನಾಳೆ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗಿಬಿಡಿರಿ! ನಿಮಗೇನು ನಾನು ಹೇಳಿಕೊಡ-ಬೇಕಾಗೇದೇನು? ನಿಮ್ಮ ಈ ಖಾದೀ ಉಡಿಗಿ ತೊಡಿಗೀ ಬಿಟ್ಟುಬಿಟ್ಟು ಬ್ಯಾರೇ ಏನಾದರೂ ವೇಷಾ ಹಾಕ್ಕೊಳ್ರಿ— ತೀರಿ ಹೋಯ್ತು! ನಾನು ಕಟ್ಟೀ ರಾವ್-ಸಾಹೇಬರ ಮುಂದ ಇದನ್ನೆಲ್ಲಾ ಒಳಗಿಂದೊಳಗ ಹೇಳತೀನಿ. ನೀವೇನೂ ಚಿಂತೀ ಮಾಡಬ್ಯಾಡ್ರಿ!"

ಹನುಮಂತಪ್ಪನ ವಿಷಯದಲ್ಲಿ ರತ್ನಾಕರನ ಮನಸ್ಸಿನಲ್ಲಿ ಕೃತಜ್ಞತೆ-ಆದರಭಾವ ತಟ್ಟನೆ ಬೆಳೆದು ನಿಂತುವು. ಹನುಮಂತಪ್ಪನ ಕೈಯನ್ನು ಹಿಡಿದು ಕುಲುಕಿ ಹೇಳತೊಡಗಿದ:

"ಹನುಮಂತಪ್ಪಾ, ನಿಮ್ಮದು ಮತ್ತ ಕಟ್ಟೀ ರಾವ್‌ಸಾಹೇಬರದು ಸ್ವದೇಶ ಪ್ರೀತಿ, ನಮ್ಮ ಈ ಚಳವಳೀ ಜನರಿಗಿಂತಾ ಯಾವ ರೀತಿಯಿಂದಲೂ ಕಡಿಮೆಯದೇನೂ ಅಲ್ಲ. ನಿಮ್ಮಂತಹ ಸ್ವದೇಶಪ್ರಿಯ ಪೋಲೀಸರ ಸಹಕಾರ, ಸಹಾನುಭೂತಿಗಳು ನಮಗೆ ಸಿಕ್ಕದೆ ಹೋಗಿದ್ದರ ನಮ್ಮ ಅನೇಕ ಕಠಿನ

ಕಾರ್ಯಗಳು ಸಹಜವಾಗಿ ಸಾಧಿಸತಿರಲಿಲ್ಲ. ಈಗ ನಮ್ಮ ಜನರು, ಪೋಲೀ-ಸರು—ಅಂದರ ತಿರಸ್ಕಾರದ ದೃಷ್ಟಿಯಿಂದ ನೋಡತಾರೇನೋ ನಿಜ! ಆದರ ನಿಮ್ಮಂಥಾ ಜನರೂ ಪೋಲೀಸರೊಳಗ ಇದ್ದಾರಂಬೂದು ಬಹಾಳ ಜನರಿಗೆ ಗೊತ್ತಿಲ್ಲ. ನಿಮ್ಮ ಕಟ್ಟೀ ರಾವ್‌ಸಾಹೇಬರಿಗೆ ಹೇಳ್ರಿ ಹನುಮಂತಪ್ಪಾ—ಅವರ ಉಪಕಾರ ನನ್ನ ಮ್ಯಾಲ ಬಹಳ ಆಗೇದ! ಇಂದಿನ ಈ ಅವರ ಉಪ-ಕಾರದಿಂದ ಒಂದು ಬಡ ಕುಟುಂಬದ ಕಲ್ಯಾಣ ಕಟ್ಟಿದರ, ಅವರ ಪುಣ್ಯಾ ಎಲ್ಲಾ ಅವರಿಗೇ ಸಲ್ಲತದ. ನಿಮ್ಮ ಈ ಉಪಕಾರೇನೂ ಕಡಿಮೆಯದಲ್ಲ—ಹನುಮಂತಪ್ಪಾ! ನಿಮ್ಮ ಸ್ವಾರ್ಥತ್ಯಾಗವೂ ದೊಡ್ಡದು!"

"ನಮ್ಮದೆಂಥಾ ತ್ಯಾಗ ಬಿಡ್ರಿ ರಾಯರ, ಹೇಳಿಕೇಳಿ ಪಗಾರಾ ತಿನ್ನೋ ಪೋಲೀಸರು ನಾವು! ಬೇಕಾದ್ದಾಂಗ ಎಂ. ಎ. ಫಸ್ಟ್‌ಕ್ಲಾಸ್ ಪಾಸ್ ಆಗಿ, ಇಂಥಾ ಗಂಡಾಂತರದೊಳಗ ಬಿದ್ದಿರುವ ನಿಮ್ಮ ಮುಂದ, ನಮ್ಮ ತ್ಯಾಗ ಏನು ಬಂತು? ಇರಲಿ ಬಿಡ್ರಿ! ನೀವು ಆದಷ್ಟು ಲಗೂನ ಈ ಜಾಗಾ ಮಾತ್ರ ಬಿಟ್ಟುಬಿಡ್ರಿ! ನಾಳೆ ನೀವು ಎಷ್ಟೊತ್ತಿಗೆ ಹೋಗಬೇಕಂತ ಮಾಡೀರಿ?"

"ಮುಂಜಾನೆ ಮೊದಲನೇ ಬಸ್ಸಿನಿಂದನ ಹೋಗಬೇಕಂತ ಗೊತ್ತು ಮಾಡೀನಿ!"

"ಚೆಲೋ ಆಯ್ತು ಬಿಡ್ರಿ! ಆಗ ಬಸ್‌ಸ್ಟ್ಯಾಂಡ್ ಡ್ಯೂಟೀ ನಂದು ಅದ! ನಾನೂ ಅಲ್ಲೆ ಇದ್ದೇ ಇರತೀನಿ! ಏನೇ ಆಗಲಿ, ನೀವು ಡ್ರೆಸ್ ಮಾತ್ರ ಪೂರಾ ಬದಲಿಸರಿ—ಆತು! ನಮಸ್ಕಾರ" ಎಂದು ನುಡಿದು ಹನುಮಂತಪ್ಪ ಬೀಳ್ಕೊಂಡು ಹೊರಟ. ರತ್ನಾಕರ ಕೈಯಲ್ಲಿ ಪೆನ್ನು ತೆಗೆದುಕೊಂಡು ಪತ್ರ ಬರೆಯಲು ತೊಡಗಿದ:

"ಹಿರಿಯರಾದ ಮಾವಾ ಅವರಿಗೆ ನಮಸ್ಕಾರ.

ತಮ್ಮ ಪತ್ರ ತಲ್ಪಿ ನನ್ನನ್ನು ವಿಚಾರದ ಗೊಂದಲದಲ್ಲಿ ಹಾಕಿದೆ. ಏನು ಮಾಡಬೇಕೆಂಬುದು ನನಗೂ ತಿಳಿಯದಂತಾಗಿದೆ. ಆದರೂ ಮೂರು-ನಾಲ್ಕು ದಿನಗಳಲ್ಲಿಯೇ ನಾನು ಹುಬ್ಬಳ್ಳಿಗೆ ಬಂದುಹೋಗುತ್ತೇನೆ. ಸಮಕ್ಷಮ ಮಾತ ನಾಡಿ ಯಾವುದು ಸಾಧ್ಯವೋ ಅದನ್ನು ನಿರ್ಣಯಿಸೋಣ. ಶ್ರೀ. ಕುಂ. ಸೌ. ಸಾವಿತ್ರಿಯವರಿಗೆ ನನ್ನ ನಮಸ್ಕಾರ ತಿಳಿಸಿರಿ. ನಾನು ಬರುವೆನೆಂಬ ಮಾತನ್ನು

ನನ್ನ ತಾಯಿಗೆ ತಿಳಿಸಬೇಕೆಂದು ಬೇರೆ ಹೇಳುವ ಕಾರಣ ಇಲ್ಲ. ತಮ್ಮೆಲ್ಲ-ರನ್ನೂ ನೋಡಬೇಕೆಂದು ಆಗಾಗ ಮನಸ್ಸು ಹರಿಯುತ್ತದೆ. ಆದರೆ ಕೈಕೊಂಡಿ-ರುವ ಕೆಲಸ ಅದನ್ನು ತಡೆದಿಡುತ್ತದೆ.

ತಮ್ಮ
ರತ್ನಾಕರ ”

ಪತ್ರವನ್ನು ಮುಗಿಸಿ ಕವರಿನಲ್ಲಿ ಹಾಕಿ ಅಂಟಿಸಿದ. ಬೇರೆಯ ಮಹ-ತ್ತ್ವದ ಕಾಗದಗಳನ್ನೂ ಬರೆದು ಮುಗಿಸಿ, ಮರುದಿನದ ಅಂಚೆಗೆ ಹಾಕಲು ಸಿದ್ಧಮಾಡಿ ಇಟ್ಟು ಮೇಲಕ್ಕೆದ್ದ.

## ೧೧ ನೆಯ ಪರಿಚ್ಛೇದ

ಸಮಾಜ ಸಮತಾವಾದದ ಪ್ರಚಾರಸಾಧನದಲ್ಲಿ ಸರ್ವಿಸ್‌ಬಸ್ಸು-ಗಳಲ್ಲಿಯ ಪ್ರವಾಸವೂ ಒಂದು ಮುಖ್ಯವಾದುದು. ನಮ್ಮ ನಾಡಿನಲ್ಲಿ ರೈಲು ಪ್ರವಾಸದ ಅನುಕೂಲತೆಯು ಬಂದು ಸಾಕಷ್ಟು ದಿನಗಳಾಗಿದ್ದರೂ, ಅದು ಏರ್ಪಡಿಸಿದ ಒಂದನೆಯ, ಎರಡನೆಯ, ಮೂರನೆಯ ತರಗತಿಗಳೂ ಮಧ್ಯಮ ತರಗತಿಯೂ ಸಮಾಜದಲ್ಲಿಯ ವೈಷಮ್ಯವನ್ನು ಎತ್ತಿಹಿಡಿದು ಬೆಳೆಯಿಸಿದುವೇ ಹೊರತು, ಸಮತೆಯನ್ನುಂಟುಮಾಡುವ ಕಾರ್ಯವನ್ನು ಮಾಡಲಿಲ್ಲ. ಆದೇ, ಭಾರತದಲ್ಲಿ ಬಸ್ಸಿನ ಪ್ರಯಾಣದ ಅನುಕೂಲತೆ ಪ್ರಾರಂಭವಾಯಿತು; ಅದು ಎಲ್ಲರಿಗೂ ಒಂದೆ ಬಗೆಯ ಕಷ್ಟನಷ್ಟಗಳನ್ನು ಒದಗಿಸಿ, ಅಜ್ಞಾತ ರೀತಿ-ಯಿಂದಲೇ ಸಮಾಜಸಮತೆಯ ಪ್ರಜ್ಞೆಯನ್ನು ಹುಟ್ಟಿಸುವ ಚಳವಳಿಯನ್ನು ಪ್ರಾರಂಭಿಸಿಬಿಟ್ಟಿತು. ಎಲ್ಲರೂ ಒಂದೆ ತರಗತಿಯ ಪ್ರವಾಸಿಕರು. ಎಲ್ಲರೂ ಪಡೆಯಬೇಕಾಗಿದ್ದ ಟಿಕೇಟಿನ ಬೆಲೆಯು ಒಂದೆ. ಟಿಕೇಟು ಪಡೆದುಕೊಂಡು ಬಸ್ಸಿನೊಳಗೆ ಕುಳಿತ ಮೇಲೆ, ಎಲ್ಲರೂ ಪಡಬೇಕಾದ ಕಷ್ಟ-ನಷ್ಟಗಳು ಒಂದೆ ಬಗೆಯವು. ಮಡಿವಂತರು-ಅಸ್ಪೃಶ್ಯರು, ಶ್ರೀಮಂತರು-ಬಡವರು, ಕಲಿತವರು ಕಲಿಯದವರು, ಹೆಂಗುಸರು-ಗಂಡುಸರು, ಹಿರಿಯರು-ಕಿರಿಯರು ಎಲ್ಲರೂ ಕೂಡಿ ಕುಳಿತುಕೊಳ್ಳಬೇಕು—ಇಲ್ಲವೆ ನಿಂತುಕೊಳ್ಳಬೇಕು. ಬಿಸಿಲು ದಿನ-ಗಳಲ್ಲಿ ಎಲ್ಲರೂ ಒಂದೆ ಬಗೆಯಾಗಿ ಬೇಯಬೇಕು; ಮಳೆಗಾಲದಲ್ಲಿ ಎಲ್ಲರೂ ಒಂದೆ ಬಗೆಯಾಗಿ ನನೆಯಬೇಕು. ಬಸ್ಸು ನಿಂತ ಕಡೆಗಳಲ್ಲಿ ಬೇಕಾದವರೆಲ್ಲ

ಒಂದೆ ಬಗೆಯ ಚಹಾ, ಒಂದೆ ಬಗೆಯ ಖಾರ ತಿನ್ನಬೇಕು. ಮುಂದೆಬಂದು ಮೊದಲೇ ಎಡೆಹಿಡಿದು ಕುಳಿತವರಿಗೆ ಹೆಚ್ಚಿನ ಅನುಕೂಲತೆಯಿಲ್ಲ; ದಾರಿ-ದಾರಿಗಳಲ್ಲಿಯೆ ಬಸ್ಸು ನಿಲ್ಲಿಸಿ ಒಳನುಗ್ಗುವ ಆಮೇಲಿನ ಪ್ರಯಾಣಿಕರಿಗೆ ಹೆಚ್ಚಿನ ಪ್ರತಿಕೂಲತೆಯಿಲ್ಲ; ಎಲ್ಲರೂ ಒಂದೆಬಗೆಯ ಒತ್ತಾಟದಲ್ಲಿ ಸಿಕ್ಕಿ-ಕೊಂಡು ಸಮಾನವಾದ ಮೈಮನಗಳ ನೋವನ್ನು ಅನುಭವಿಸಬೇಕಾಗುವುದು. ಯಾರೇ ಸ್ವಲ್ಪ ಕಾಯಿದೆಯ ರೀತಿಯನ್ನೆತ್ತಿ ತಕರಾರು ಮಾಡಿದರೂ, ಡ್ರಾಯ-ವರ್-ಕಂಡಕ್ಟರ್ ಸಾಹೇಬರಿಂದ ಒಂದೆಬಗೆಯ ಬೈಗುಳನ್ನು ತಿನ್ನಬೇಕಾಗು-ವುದು. ಜಗತ್ತಿನಲ್ಲಿ ಯಾವ ನಿಯಮಕ್ಕೂ ಅಪವಾದಗಳು ಇದ್ದೇ ಇರುವು-ವಲ್ಲವೆ? ಈ ಬಸ್ಸಿನಲ್ಲಿ ಹಣವನ್ನೇನೂ ಕೊಡದೆ ಅನುಕೂಲವಾದ ಸ್ಥಳ ಪಡೆದು ದರ್ಪದಿಂದ ಪ್ರವಾಸ ಮಾಡುವ ಕೆಲವೊಂದು ಪೋಲಿಸ್ ಅಧಿಕಾರಿ-ಗಳು ಆಗಾಗ ನೋಡಲು ಸಿಕ್ಕಬಹುದು; ಆದರೆ ಅವರು ಹೇಳಿಕೇಳಿ ಅಪವಾದ ನಿಯಮಕ್ಕೆ ಒಳಗಾದವರು.

ನಗರದ ಬಸ್‌ಸ್ಟ್ಯಾಂಡಿನಲ್ಲಿ ಇದೀಗ ರಾಮದುರ್ಗಕ್ಕೆ ಹೊರಡುವ ಮೊದಲನೆಯ ಬಸ್ಸು ಸಿದ್ಧವಾಗಿ ನಿಂತಿದೆ. ಮೋಟಾರಿನ ಬಳಿ ಡ್ರಾಯ್-ವರನೂ ಇಲ್ಲ; ಕಂಡಕ್ಟರನೂ ಇಲ್ಲ. ಬಸ್ಸಿನಲ್ಲಿ ಜನ ತುಂಬಿಬಿಟ್ಟಿದ್ದಿತು. ಒಳಗೆ ನುಗ್ಗಿ ನಿಂತುಕೊಳ್ಳಲಿಕ್ಕೆ ಸ್ಥಳವು ಇರಲಿಲ್ಲವಾದರೂ, ಏಜಂಟು ಬಂದವ ರಿಗೆಲ್ಲ ಮತ್ತೆ ಮತ್ತೆ ಟಿಕೀಟುಗಳನ್ನು ಕೊಡುತ್ತಲೇ ಇದ್ದ. ಬರುತ್ತಿದ್ದ ಪ್ರವಾಸಿಕರೂ ಸ್ಥಳದ ವಿಚಾರವನ್ನೇನೂ ಮಾಡದೆ ಆತುರದಿಂದ ಹಣಕೊಟ್ಟು ಟಿಕೀಟುಗಳನ್ನು ಪಡೆದೇ ಪಡೆಯುತ್ತಲಿದ್ದರು. ಬಸ್ಸಿಗೆ ಬಾಯಿಯಿದ್ದರೆ ಅದು ತನ್ನಲ್ಲಿ ಎಡೆಯಿಲ್ಲವೆಂದು ಕೂಗಿ ಕೂಗಿ ಹೇಳಬಹುದಾಗಿತ್ತೇನೋ! ಆದರೆ ಹಣದ ಲೋಭದಿಂದ, ಇದ್ದ ಬಾಯನ್ನೂ ಮುಚ್ಚಿಕೊಂಡಿದ್ದ ಬಸ್ಸಿನ ಏಜಂಟು, ಸ್ಥಳವಿಲ್ಲವೆಂದು ಯಾರಿಗೂ ಹೇಳುತ್ತಿರಲಿಲ್ಲ. ಬಸ್ಸಿನ ಮಿಕ್ಕಭಾಗ ವೆಲ್ಲ ಕಿಕ್ಕಿರಿದು ತುಂಬಿದ್ದರೂ 'ಫ್ರಂಟ್‌ಸೀಟು' ತೆರವಾಗಿಯೆ ಇದ್ದಿತು. ಹವಾಲ್‌ದಾರ ಹನುಮಂತಪ್ಪ, ಪೋಲೀಸರ ಸಮವಸ್ತ್ರವಿಲ್ಲದೆ ಸಾದಾ ವೇಷ-ದಲ್ಲಿಯೆ ಬಂದು ಸ್ಟ್ಯಾಂಡಿನಲ್ಲಿ ಅಲ್ಲಲ್ಲಿ ಸುಳಿದಾಡುತ್ತಲಿದ್ದ. ಬಸ್ಸಿಗಾಗಿ ಬಂದಿರುವ ಬರುತ್ತಿರುವ ಪ್ರತಿಯೊಬ್ಬ ಪ್ರವಾಸಿಕನನ್ನೂ ಸೂಕ್ಷ್ಮ ದೃಷ್ಟಿ-ಯಿಂದ ನಿರೀಕ್ಷಿಸುತ್ತಿರುವ; ಪರೀಕ್ಷಿಸುತ್ತಿರುವ. ಕೈಯಲ್ಲಿ ಹಿಡಿದುಕೊಂಡಿದ್ದ

ಒಂದು ಪುಸ್ತಕದಲ್ಲಿ ಆಗಾಗ ಏನೋ ಬರೆದುಕೊಂಡಂತೆ ಮಾಡುವ. ಮತ್ತೆ ಅತ್ತಿತ್ತ ಅಲೆದಾಡುತ್ತ ಯಾರೋ ಬರುವುದನ್ನು ಕಾಯುತ್ತಿರುವಂತೆ ಸುತ್ತಲೂ ದೂರದೃಷ್ಟಿಗಳನ್ನು ಕಳುಹುವ.

ಇದ್ದುದಿದ್ದ ಹಾಗೆಯೆ ಟಾಂಗಾ ಒಂದು ಬಂದು ನಿಂತಿತು. ಕರಿಯ ಸೂಟು-ಬೂಟಿನ ತರುಣನೊಬ್ಬ ಟಾಂಗಾದಿಂದ ಕೆಳಕ್ಕೆ ಇಳಿದ. ಕಣ್ಣಿಗೆ ಬಣ್ಣದ ಕಾಜಿನ ಕನ್ನಡಕವಿದ್ದಿತು ತುಂಬ ಅಚ್ಚುಕಟ್ಟಾಗಿ ತಲೆಯ ಕ್ರಾಪು ಬಾಚಲಾಗಿತ್ತು. ಕೈಯಲ್ಲೊಂದು ಚರ್ಮದ ಸೂಟ್‌ಕೇಸು. ಇನ್ನಾವ ಸಾಮಾನುಗಳೂ ಇರಲಿಲ್ಲ. ಬಂದವನೇ ಮೋಟಾರಿನಲ್ಲಿಯ ಜನರ ಗೊಂದಲವನ್ನು ನೋಡುತ್ತ ಬಳಿಯಲ್ಲಿಯೇ ನಿಂತುಕೊಂಡ. ಏಜಂಟ್ ಬಂದು ಕೇಳಿದ:

" ಯಾವ ಊರಿಗೆ ಹೋಗಬೇಕು ರಾಯರs ? "

" ರಾಮದುರ್ಗಕ್ಕ ಹೋಗಬೇಕಾಗೇದ; ಆದರ, ಮೋಟಾರಿನೊಳಗ ನಿಂತುಕೊಳ್ಳಲಿಕ್ಕೆ ಸಹಿತ ಜಾಗಾ ಕಾಣಿಸೂದಿಲ್ಲ ! "

" ಹೌದರಿ, ಮಂದೀ ಗದ್ದಲ ಬಾಳ ಐತಿ ! ನೀವು ಬೇಕಾದರ, ಮುಂದಿನ ಮೋಟಾರಿಗೆ ಹೋಗರೆಲಾ ! "

" ಇಲ್ಲ; ಅಗತ್ಯದ ಕೆಲಸ ಅದ ! ಇದೇ ಮೋಟಾರಿಗೆ ಹೋಗಲೇಬೇಕಾಗೇದ ನನಗ. ಮುಂದಿನ ಸೀಟು ಖಾಲೀ ಕಾಣಿಸತsದ; ಅದನ್ನ ಕೂಡಿರೆಲಾ ನನಗ ! ಬೇಕಾದರ ಹೆಚ್ಚಿನ ಹಣ ಏನಾದರೂ ಇದ್ದರ ಹೇಳ್ರಿ.... ನಾ ಕೊಡತೀನಿ ! "

" ಇಲ್ರೀ ರಾಯರs ! ಪೋಲೀಸ ಹವಾಲದಾರ್ ಹನುಮಂತಪ್ಪನವರು ಹೇಳ್ಯಾರ. ಯಾರೋ ಪೋಲೀಸ ಅಧಿಕಾರಿಗಳು ರಾಮದುರ್ಗಕ್ಕ ಹೋಗುವವರು ಇದ್ದಾರಂತ ! ಈಗ ಅವರು ಬರೂದರ ಸಲುವಾಗೇ ಮೋಟಾರು ದಾರೀ ಕಾಯತs ನಿಂತsದ! "

ಹವಾಲದಾರ ಹನುಮಂತಪ್ಪ ಹೇಳಿರುವನೆಂಬ ಮಾತನ್ನು ಕೇಳುತ್ತಿರುವಾಗ, ತರುಣ ಪ್ರವಾಸಿಕನ ಮುಖದ ಮೇಲೆ ಹಲವು ಭಾವದ ಬದಲಾವಣೆಗಳು ಕಂಡುವು. ಏಜಂಟನ ಮಾತನ್ನು ಕೇಳಿ, ಮುಂಗಾಣದವನಂತೆ ಮೋಟಾರಿನ ಪಕ್ಕದಲ್ಲಿಯೆ ನಿಂತುಕೊಂಡಿದ್ದ. ಹತ್ತಿರದಲ್ಲಿಯೆ ಹನುಮಂತಪ್ಪ ತನ್ನ ಕಡೆ ಬರುವುದು ಕಾಣಿಸಿತು. ತರುಣ ನುಡಿದ :

" ನಮಸ್ಕಾರರೀ ಹವಾಲ್‌ದಾರ್ ಸಾಹೇಬರ ! "

" ಹನುಮಂತಪ್ಪ ಮೆಲುನಗೆ ನಗುತ್ತ ತರುಣ ಪ್ರವಾಸಿಯು ಹತ್ತಿರ ಬಂದ ಆತನ ಮುಖದ ಕಡೆಗೆ ಕುತೂಹಲದ ಚಂಚಲದೃಷ್ಟಿಗಳಿಂದ ಎಡೆ-ಬಿಡದೆ ನೋಡಲು ತೊಡಗಿದ. ನೋಡುವುದನ್ನು ಮುಗಿಸಿದ ಮೇಲೆ ಒಂದು ಸಮಾಧಾನದ ನಗೆಯನ್ನು ನಕ್ಕ. ಆ ಮೇಲೆ ಕೇಳಿದ :

" ಯಾಕ್ರೀ ರಾಯರ ? ಎಲ್ಲಿಗಾದರೂ ಹೋಗಬೇಕಾಗೇದೇನು ? "

ತರುಣ ಒಂದು ಬಗೆಯ ಮೆಲುನಗೆಯನ್ನು ನಗುತ್ತ ಹೇಳಿದ :

" ಊರಿಗೆ ಹೋಗಬೇಕಾಗೇದ....ರಾಮದುರ್ಗಕ್ಕ ! ಆದರ ಮೋಟಾರಿನೊಳಗ ಜಾಗನss ಇಲ್ಲಂತ ! "

ಕೂಡಲೆ ಹನುಮಂತಪ್ಪ ಡ್ರಾಯವರನನ್ನು ಕರೆದು ಹೇಳಿದ :

" ಇಂದ ನಮ್ಮ ಸಾಹೇಬರು ಊರಿಗೆ ಹೋಗೂದು ಕ್ಯಾನ್ಸಲ್ ಮಾಡ್ಯಾರಂತ ! ಹ್ಯಾಂಗೂ ಫ್ರಂಟ್ ಸೀಟು ಖಾಲೀ ಐತಿ ! ಈ ರಾಯರಿಗೇನೋ ಜರೂರಾಗಿ ರಾಮದುರ್ಗಕ್ಕ ಹೋಗಬೇಕಾಗೆಯ್ತಂತ. ಇವರನss ಕೂಡಿಸಿ-ಕೊಂಡು ಹೋಗು ಅತು ! "

ಏಜಂಟ್ ಕೇಳಿದ :

" ಇವರನ್ನ ಕೂಡಿಸಿಕೊಂಡು ಹೋಗು ?— ಈ ರಾಯರು ಯಾವ ಊರವರು ಸಾಹೇಬರ ? ಇವರದೆಲ್ಲೀ ಗುರುತು ನಿಮಗ ? "

ಗೊಂದಲದಲ್ಲಿ ಬಿದ್ದ ಧ್ವನಿಯಲ್ಲಿ ಹನುಮಂತಪ್ಪ ಹೇಳಲು ತೊಡಗಿದ:

" ಅಂ....ಇವರ ಊರss ? ಇವರ ಊರು ಯಾವದಂಬೂದು ನನಗ ಗೊತ್ತಿಲ್ಲ ! ಆದರ, ಇವರು ಯಾವದೋ ಒಂದು ದೊಡ್ಡ ವಿಮಾಕಂಪನೀ ಆರ್ಗನೈಜರ್ ಇದ್ದಾರಂತ ! ನಾ ರಾಣೇಬೆನ್ನೂರೊಳಗ ಇದ್ದಾಗ, ನಾ ದಿನಾ ಉಣ್ಣಲಾಕ ಹೋಗೂ ಖಾನಾವಳಿಯೊಳಗss ಬಂದು ಇಳಕೊಂಡಿದ್ದರು. ಆಗss ಗುರುತು ಆಗಿತ್ತು. ಬಾಳ ಒಳ್ಳೇ ಜನಾ ! "

ಡ್ರಾಯ್‌ವರ್ ಹೇಳಿದ :

" ಆಯ್ತು, ಹಾಂಗಾದರ ನೀವು ಹತ್ತಿ ಕುಂತುಗೊಳ್ರಿ ರಾಯರ ! ಹೊತ್ತು ಆಗೆಯ್ತಿ; ಮೋಟಾರು ಈಗ ಸದ್ಯ ಬಿಟ್ಟುಬಿಡತೀನಿ ! "

ತರುಣ ಆಶ್ಚರ್ಯ-ಕೃತಜ್ಞತೆಗಳ ನೋಟದಿಂದ ಹನುಮಂತಪ್ಪನ ಕಡೆಗೆ ನೋಡುತ್ತ "ನಿಮ್ಮ ಉಪಕಾರ ಭಾಳ ಆಯ್ತು ಹನುಮಂತಪ್ಪಾ! ಆಗಲಿ, ಹೋಗಿಬರತೀನಿ; ನಮಸ್ಕಾರ!" ಹಿಂದು ಹೇಳಿ, ಬಸ್ಸಿನಲ್ಲಿ ಹತ್ತಿ ಮುಂದಿನ ಸೀಟಿನಲ್ಲಿ ಹಾಯಾಗಿ ಕೂತುಕೊಂಡ. ಹನುಮಂತಪ್ಪ ಬಹಳ ಹೊತ್ತು ಅಲ್ಲಿ ನಿಲ್ಲಲಿಲ್ಲ; ಬೇರೆ ಕಡೆಗೆ ಹೊರಟುಹೋದ.

ಡ್ರಾಯ್ವರ್ ಸಾಹೇಬರು ತಮ್ಮ ಆಸನದ ಮೇಲೆ ಕುಳಿತುಕೊಂಡು, ಎಂಜಿನಿನ ಕೀಲಿಯನ್ನು ತೆಗೆದು, ಚಕ್ರವನ್ನು ಕೈಯಲ್ಲಿ ಹಿಡಿದುಕೊಂಡರು. ಆಗಲೂ 'ಕ್ಲೀನರ್ ಸಾಹೇಬರು' ಮೋಟಾರಿನ ಟಾಯರುಗಳನ್ನು ಸಂದೇಹ ದೃಷ್ಟಿಯಿಂದ ಪರೀಕ್ಷಿಸುತ್ತ, ಮೋಟಾರಿಗೆ ಪ್ರದಕ್ಷಿಣೆ ಹಾಕುತ್ತಲಿದ್ದರು. ಮೋಟಾರು 'ಘೊರ್ರ' ಎಂಬ ಗಮನಾತ್ಮಕ ಸದ್ದನ್ನು ಪ್ರಾರಂಭಿಸಿತು. ಮೆಲ್ಲಗೆ ಮುಂದುವರಿಯಿತು ಕ್ಲೀನರ್ ಸಾಹೇಬರು ಎಂಜಿನಿನ ಮುಂಭಾಗದಲ್ಲಿ ಎಡಗಡೆ ಇರುವ ತಮ್ಮ 'ಸ್ಟ್ಯಾಂಡ್'ನ ಮೇಲೆ ಪ್ರತಿಷ್ಠಿತರಾದರು. ಮೋಟಾರು ತನ್ನ ಸಹಜವೇಗವನ್ನು ಹೊಂದಿ, ದಾರಿಗುಂಟ ಓಡಲು ತೊಡಗಿತು.

ಎರಡು ಮೂರು ಮೈಲು ದಾರಿ ಸಾಗಿರಬಹುದು. ಆಗ ತರುಣ ಪ್ರವಾಸಿ, ಕಣ್ಣಿಗೆ ಹಾಕಿದ್ದ ಬಣ್ಣದ ಕನ್ನಡಕವನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡ. ಹಾಗೆಯೆ ಹಿಂದಿರುಗಿ ನೋಡಿದ. ಐದು ಜನರ ಆಸನದ ಅನುಕೂಲತೆಯಿದ್ದ ಮುಂದಿನ ಕಂಪಾರ್ಟ್‌ಮೆಂಟಿನಲ್ಲ, ಏಳು ಜನರು ಒತ್ತು ಒತ್ತಾಗಿ ಕೂತುಕೊಂಡಿದ್ದರು. ಮೂವರು ನಿಂತುಕೊಂಡಿದ್ದರು. ತರುಣನಿಗೆ ಅವರೆಲ್ಲ ಪಡುತ್ತಿರುವ ಕಸಿವಿಸಿಯನ್ನು ನೋಡಿ ಸಹಿಸುವುದಾಗಲಿಲ್ಲವೇನೋ! ಅಸಹನೆಯ ಭಾವವನ್ನು ವ್ಯಕ್ತಗೊಳಿಸಿ, ಮತ್ತೆ ಮುಖವನ್ನು ಮುಂದೆ ಮಾಡಿ ಕುಳಿತುಕೊಂಡ. ಹಿಂದಿನ ಕಂಪಾರ್ಟ್‌ಮೆಂಟುಗಳಿಂದ ಕೂಸುಗಳು ಅತ್ತು ಕಿರಿಚುವ ಶಬ್ದ, ಮುದುಕರು ಕೆಮ್ಮಿ ಖೇಕರಿಸುವ ಶಬ್ದ, ಬೇನೆಯವರ ನರಳಾಟದ ಕರುಣಾಧ್ವನಿ—ಆಗಾಗ ಕೇಳುತ್ತಲಿದ್ದುವು. 'ಬಸ್ಸಿನಲ್ಲಿ ತಂಬಾಕು ಸೇದುವುದಕ್ಕೆ ಸಕ್ತ್ ಮನಾಯಿ ಅದೆ!' ಎಂಬ ಬರೆಹದ ಹಲಿಗೆ ಬಸ್ಸಿನಲ್ಲಿ ತೂಗಾಡುತ್ತಿದ್ದಿತಾದರೂ, ಬೀಡಿ-ಸಿಗರೇಟುಗಳ ಹೊಗೆಯಿಂದ ಬಸ್ಸು ವ್ಯಾಪಿಸಿಬಿಟ್ಟಿದ್ದಿತು. ಪ್ರಯಾಣಿಕರ ಮಾತು ಒತ್ತಟ್ಟಿಗಿರಲಿ, ಡ್ರಾಯ್ವರ್

ಸಾಹೇಬರ ಬಾಯುಲ್ಲಿರುವ ಸಂತತ ಪ್ರಜ್ವಲಿತ ಸಿಗರೇಟಿನ ಹೊಗೆಯು, ಅಂದಿನ ಕಾಯದೇಭಂಗ ಚಳವಳಿಯ ಕಾಲದ ವಾತಾವರಣಕ್ಕೆ ಪ್ರತೀಕವೆನಿಸಿ, ಅತ್ತಿತ್ತ ಸುಳಿಯುತ್ತಿದ್ದಿತು. ಇದೆಲ್ಲ ಮನಸ್ಸಿಗೆ ತಟ್ಟುತ್ತ ಹೋದಂತೆಲ್ಲ ಫ್ರಂಟ್ ಸೀಟಿನ ತರುಣ, ಒಮ್ಮೊಮ್ಮೆ ವಿಷಾದದ ಕಿರುನಗೆ ನಗುತ್ತಿದ್ದ; ಮತ್ತೆ ಒಮ್ಮೊಮ್ಮೆ ಕನಿಕರ ಭಾವ ತುಂಬಿದ ನಿಟ್ಟುಸಿರುಗಳನ್ನು ಹೊರಗೆ ಹಾಕುತ್ತಲಿದ್ದ.

ನಡೆಯುತ್ತಿರುವ ಬಸ್ಸು ದಾರಿಯ ಬಳಿಯ ಹಳ್ಳಿಯೊಂದರ ಬಳಿ ನಿಂತಿತು. ಪ್ರವಾಸಿಕರು ಇಳಿಯುವ ಹತ್ತುವ ಗಲಾಟೆಯಿಂದ ಬಸ್ಸಿನಲ್ಲಿ ಹೆಚ್ಚಿನ ಉದ್ರೇಕ ತಲೆದೋರಿತು; ಅದು ಸ್ವಲ್ಪ ಕಡಿಮೆಯಾಗುತ್ತಿರುವಾಗಲೆ ಬಸ್ಸು ಭರ್‍ರೆಂದು ಮುಂದುವರೆಯಿತು. ಒಂದೆರಡು ಮೈಲಿ ಮುಂದೆ ಸಾಗುವಷ್ಟರಲ್ಲಿಯೆ ಬಸ್ಸನ್ನು ಕೈಮಾಡಿ ಯಾರೋ ನಿಲ್ಲಿಸಿದರು. ಬಸ್ಸು ನಿಂತಿತು. ಇಬ್ಬರು ಖಾದೀಧಾರಿ ತರುಣರು ಒಳಗೆ ನುಗ್ಗಿ ಮೊದಲನೆಯ ಕಂಪಾರ್ಟ್‌ಮೆಂಟಿನಲ್ಲಿಯೆ ಸೇರಿದರು. ಸ್ಥಳವಿಲ್ಲದುದರಿಂದ ಅವರೂ ನಿಂತುಕೊಳ್ಳಬೇಕಾಯಿತು. ನಿಂತುಕೊಳ್ಳಬೇಕಾದುದರಿಂದ ಆ ಸ್ವಾತಂತ್ರ್ಯಭಕ್ತರ ಸ್ವಾಭಿಮಾನ ಕೆರಳಿದಂತಾಯಿತು. ಅದರಲ್ಲಿಯೂ ಮುಂದಿನ ಸೀಟಿನಲ್ಲಿ ಹಾಯಾಗಿ ಕುಳಿತ ಆ ಸೂಟು-ಬೂಟಿನ ತರುಣಪ್ರವಾಸಿಯನ್ನು ನೋಡಿಯಂತೂ ಆ ದೇಶಸೇವಕರಿಬ್ಬರದೂ ಮಿದುಳು ಕಾಯ್ದುಹೋಯಿತು. ಬ್ರಿಟಿಷ್ ಸರಕಾರದೊಂದಿಗೆ ಸತ್ಯಾಗ್ರಹ ಯುದ್ಧವನ್ನು ಹೂಡಿದ ಈ ತರುಣ ಕನ್ನಡವೀರರು, ಡ್ರಾಯ್ವರನ ಸಂಗಡ ಯುದ್ಧ ಹೂಡಲಿಕ್ಕೆ ಹೆದರುವರೆ? ಒಳಗೆ ನಿಂತುಕೊಂಡು ಡ್ರಾಯ್ವರನೊಂದಿಗೆ, ಬಸ್ಸಿನಲ್ಲಿ ಕೂಡಿಸಬೇಕಾದ ಪ್ರವಾಸಿಕರ ಸಂಖ್ಯೆಯ ನಿಯಮವನ್ನು ಎತ್ತಿಹಿಡಿದು ಕೂಗಾಡಲು ತೊಡಗಿದರು. ಬ್ರಿಟಿಷ್ ಸರಕಾರದ ಪೋಲೀಸರ ಬೆಂಬಲವಿದ್ದ ಆ ಡ್ರಾಯ್ವರು, ಈ ಖಾದೀ ಟೊಪ್ಪಿಗೆಯ ದೇಶಸೇವಕರಿಗೆ ಹೆದರುವನೇ? ಅವನೂ ದರ್ಪದ ಧ್ವನಿಯಲ್ಲಿಯೇ ಹೇಳಿದ :

"ಏನ್ರೀ ಅಣ್ಣಾವರs, ಬಾಳಬಾಳ ಕೂಗ್ಯಾಡಲಾಕ ಹತ್ತೀರಿ? ಕಾಯದೇ ಭಂಗ ಮಾಡೂ ಅಧಿಕಾರ ನಿಮಗಷ್ಟs ಐತೇನು? ನಾವೂ ಕಾಯದೇದ ಭಂಗ ಮಾಡೀದೀವ ಏನ್ರಿ! ಬೇಕಾದರ, ಪೋಲೀಸರಿಗೆ ನಮ್ಮನ್ನ ಒಪ್ಪಿಸಿ ಕೊಡ್ರಿ!

ನಿಮ್ಮ ಜನದ ಹಾಂಗ ನಾವೂ ತುರಂಗಕ್ಕ ಹೋಗಿ, ನಾವೂ ದೇಶಭಕ್ತರಾಗಿ ಮಾಲೀ ಹಾಕಿಸಿಕೊಂಡು ಮೆರೀತೀವಿ ! ”

ಡ್ರಾಯ್ವರನ ಮಾತನ್ನು ಕೇಳಿ, ಬಸ್ಸಿನಲ್ಲಿ ಕುಳಿತವರಲ್ಲಿ ಬಹುಜನರು ನಕ್ಕುಬಿಟ್ಟರು. ಮುಂದಿನ ಸೀಟಿನಲ್ಲಿಯ ತರುಣ ಪ್ರವಾಸಿಗೂ ನಗದೆ ಇರಲಿಕ್ಕೆ ಸಾಧ್ಯವಾಗಲಿಲ್ಲ. ಅವನೂ ನಕ್ಕುಬಿಟ್ಟ. ಜನರ ಈ ಸ್ವಾಭಾವಿಕ ನಗೆ, ಆ ದೇಶಸೇವಕರಿಬ್ಬರಿಗೂ ಉಪಹಾಸವಾಗಿ ಪರಿಣಮಿಸಿತು. ಅವರ ಸಂತಾಪ ಹೊಟ್ಟೆಯಲ್ಲಿ ಹಿಡಿಸದೆ ಹೋಯಿತು. ಅವರೀಗ ಡ್ರಾಯ್ವರನನ್ನು ಬಿಟ್ಟು ಮುಂದೆ ಕುಳಿತ ತರುಣ ಪ್ರವಾಸಿಯನ್ನು ಕುರಿತು ಮಾತನಾಡಲು ತೊಡಗಿದರು :

“ ಎಲ್ಲಾರೂ ನಗತಾರಂತ ನೀವೂ ನಗತೀರಲ್ರಿಸ ? ನಮ್ಮ ದೇಶದ ದುರ್ದೈವ; ಮಾಡೂದೇನದ ? ನೋಡಿದರ ಕಲಿತ ಸುಶಿಕ್ಷಿತರ ಹಾಂಗ ಕಾಣಿಸತೀರಿ; ಇಷ್ಟು ಜನಾ ಎಲ್ಲಾರೂ ಒಳಗ ಸಿಕ್ಕು ಕಸಿವಿಸೀ ಪಡತಿರು-ವಾಗ, ನೀವು ಫ್ರಂಟ್ ಸೀಟಿನ ಮ್ಯಾಲ ಚಕ್ಕಂಗದಿಂದ ಕೂತು ಲಾಲೀ ಹೋಡೀ ತೀರಿ ! ನಿಮಗ ನಮ್ಮ ನಾಡಿನ ಬಡಜನರ ಕಷ್ಟ-ನಷ್ಟದ ಭಾವನಾ ಎಂದಾ-ದರೂ ಕನಸಿನಾಗರೇ ಮೂಡೇದೇನು ? ನಿಮ್ಮಂಥಾ ಸುಶಿಕ್ಷಿತ ಗುಲಾಮರ ಸಂಖ್ಯಾ ಹೆಚ್ಚಾದದ್ದರಿಂದsನs ಮುಷ್ಟಿತುಂಬಾ ಇದ್ದ ಬ್ರಿಟಿಷರು ನಲವತ್ತು ಕೋಟಿ ಜನಾ ಭಾರತೀಯರ ತಲೀಮ್ಯಾಲ ಮೆಣಸು ಅರೀಲಿಕ್ಕೆ ಹತ್ತ್ಯಾರ!” ದೇಶಸೇವಕರಿಂದ ಬೈಸಿಕೊಂಡ ಆ ತರುಣ ಮಾತನೇನೂ ಆಡಲಿಲ್ಲ. ಅವರಿ-ಬ್ಬರನ್ನೂ ಹಿಂದಿರುಗಿ ಒಂದು ಸಲ ನೋಡಿ, ವ್ಯಂಗ್ಯಭಾವ ತುಂಬಿದ ನಗೆ-ಯೊಂದನ್ನು ಹೊರಗೆ ಹಾಕಿದ. ಡ್ರಾಯ್ವರನಿಗೆ ಮಾತ್ರ ಸಿಟ್ಟು ತುಂಬ ಬಂದಿತು. ಅವನು ಮೋಟಾರನ್ನು ನಿಲ್ಲಿಸಿ ಆ ದೇಶಸೇವಕರಿಗೆ ಹೇಳಿದ :

“ ಅಣ್ಣಾವರ, ಈಗ ನೀವಿಬ್ಬರೂ ಇಳಿದು ಬಿಡ್ರಿ ! ಈಗ ನೀವಿಬ್ಬರೂ ಹೆಚ್ಚಾಗಿ ಬಂದು ಸೇರಿಕೊಂಡದ್ದರಿಂದ, ಒಳಗ ಕುಂತ ಮಂದಿಗೆ ಅಡಚಣೀ ಆಗಿ, ಅವರು ಮತ್ತಿಷ್ಟು ಕಸವಿಸಿ ಪಡಲಾಕ ಹತ್ತ್ಯಾರ ! ಬಡಜನರ ಕಷ್ಟ-ನಷ್ಟದ ಕಲ್ಪನಾ ಇದ್ದವರು, ನೀವು ಯಾಕ ಒಳಗ ನುಗ್ಗಿ ಬಂದಿರೆಪಾ ? ”

ಇಬ್ಬರಲ್ಲಿಯ ಒಬ್ಬ ಹೇಳಿದ:

" ಅವಸರದ ಕೆಲಸ ಅದs ಅಂತ ನಿಮ್ಮ ಬಸ್ಸು ನಿಲ್ಲಿಸಿ ಹತ್ತಬೇಕಾತು; ಇಲ್ಲದಿದ್ದರ ನಿಮ್ಮ ಬಸ್ಸಿನೊಳಗ ನಾವೆಲ್ಲೆ ಬರತಿದ್ದಿವಿ ? "

ಡ್ರಾಯ್ವರು ಸಮಾಧಾನಸ್ವರದಲ್ಲಿ ಹೇಳಿದ :

" ಆಹಾ ! ಎಲ್ಲಾರ ಸ್ಥಿತೀನೂ ಹಾಂಗs ಐತಿನೋಡ್ರಿ ! ಈ ಬಸ್ಸಿನೊಳಗ ಕುಂತವರೊಳಗ, ಅವಸರದ ಕೆಲಸ ಇಲ್ಲದವರು ಒಬ್ಬರೂ ಇಲ್ಲ ! ಎಲ್ಲಾರೂ ಅವಸರದ ಕೆಲಸ ಐತೀ ಅಂತಲೇ ದುಡ್ಡು ಕೊಟ್ಟು ಟಿಕೀಟು ತೆಗೆದುಕೊಂಡು ಕೂತಾರ ! ಬ್ಯಾಡಾ ಅಂತ ಯಾರನ್ನ ಹಿಂದ ಕಳಿಸಬೇಕು ನೀವs ಹೇಳ್ರಿ ! ಮತ್ತ ನಾವು ಬ್ಯಾಡ ಅಂತ ಹೇಳಿದರೂ ಜನಾ ಬಿಡತಾರೆಲ್ಲೆ ! "

ಇನ್ನೊಬ್ಬ ಮಾತನಾಡಲು ತೊಡಗಿದ :

" ಅದಾಯ್ತಪಾ ! ಬಂದ ಜನರೊಳಗ ಒಬ್ಬರು ಹೆಚ್ಚು ಒಬ್ಬರು ಕಡಿಮಿ ಹೀಂಗ್ಯಾಕ ಮಾಡತೀರಿ ನೀವು ? "

" ಇದೇನ್ರೀ ನೀವು ಮಾತಾಡೂ ಮಾತು ? ನಾವೇನು ಹೆಚ್ಚು-ಕಡಿಮಿ ಮಾಡತೀವಿ ! ಈ ಬಸ್ಸಿನೊಳಗ ಇರೂದಂದರ ಒಂದs ಒಂದು ಫ್ರಂಟ್ ಸೀಟು! ಬಂದವರನೆಲ್ಲಾರನೂ ಅಲ್ಲೇ ಕುಂಡ್ರಸೂದು ಐತೇ ? ಸಾಧ್ಯ ಇದ್ದರ ನೀವs ಕುಂಡರಿಸರಿ; ನಾ ಏನೂ ಬ್ಯಾಡ ಅನ್ನೂದಿಲ್ಲ ! "

ಮತ್ತೆ, ಬಸ್ಸಿನ ಪ್ರಯಾಣಿಕರಲ್ಲಿ ನಗೆಯ ತರಂಗವೆದ್ದಿತು. ದೇಶ-ಸೇವಕರಿಬ್ಬರೂ ಅಪ್ರತಿಭರಾದರು. ಭಾವಾವೇಶದಲ್ಲಿ ತಾವು ಆಡಿದ ಮಾತು-ಗಳೆಲ್ಲ ತಮ್ಮ ಕೊರಳಿಗೇ ಬೀಳಲು ತೊಡಗಿದುದರಿಂದ, ಅವರು ಕಂಗೆಟ್ಟು ಮುಂಗಾಣದಂತಾದರು. ಮುಂದೆ ಮಾತನ್ನು ಬೆಳಸದೆ, ಸಂತಾಪದಿಂದ ಒಳ-ಗೊಳಗೇ ಕುದಿಯುತ್ತ ನಿಂತುಕೊಂಡರು. ಆಗ ಮುಂದಿನ ಸೀಟಿನ ತರುಣ-ಪ್ರವಾಸಿ ಹೇಳಿದ :

" ಡ್ರಾಯ್ವರ್ ಸಾಹೇಬ್, ಬೇಕಾದರ ಅವರನ್ನ ಇಲ್ಲಿ ಕರೆದು ಕೂಡಿಸಿ ಬಿಡ್ರಿ ! ನಾನು ಅವರು ನಿಂತಲ್ಲಿ ಹೋಗಿ ನಿಂತುಕೋತೀನಿ ! "

ತರುಣ ಪ್ರವಾಸಿಯ ಸೌಜನ್ಯಪೂರ್ಣ ಮಾತುಗಳನ್ನು ಕೇಳಿ, ಆ ದೇಶಸೇವಕರಿಬ್ಬರಿಗೂ ನಾಚಿಕೆಯೆನಿಸಿತು. ಡ್ರಾಯ್ವರು ಅವರನ್ನು ಕೇಳಿದ :

" ಏನ್ರೆಪಾ, ನೋಡ್ರಿ ! ಇವರು ತಮ್ಮ ಸೀಟು ಬಿಟ್ಟು ಇಳದು, ನೀವು ನಿಂತಲ್ಲೆ ನಿಂತುಕೋತಾರಂತ ! ನಿಮ್ಮೊಳಗಿನ ಒಬ್ಬರು ಯಾರು ಬರತೀರಿ— ಬಂದು ಕುಂತಕೊಳ್ಳರಿ. ಸುಮ್ಮನs ತಕರಾರು ಬ್ಯಾಡ ! "

ಅವರ ಹತ್ತಿರವೇ ನಿಂತ ಇನ್ನೊಬ್ಬ ಪ್ರವಾಸಿ ತುಂಟತನದಿಂದ ಮಾತಾಡಿದ :

" ಅದ್ಯಾಕರೀ ಡ್ರ್ಯಾಯ್ವರ ಸಾಬರ! ನಾವು ಮೊದಲಿಂದsನೂ ಬಸ್ಸಿನೊಳಗ ನಿಂತಕೊಂಡs ಬಂದೀವಲಾ! ಇವರು ಇಲ್ಲೇ ಹತ್ತಿದವರು! ನಮಗ ಕೊಡರಿ ಹಾಂಗಾದರ ಆ ಫ್ರಂಟ್ ಸೀಟಿನ ಜಾಗಾನ! "

ದೇಶಸೇವಕರಿಬ್ಬರಿಗೂ ಏನು ಮಾತನಾಡಬೇಕೆಂಬುದೇ ತಿಳಿಯದಂತಾಯಿತು. ಇಬ್ಬರೂ ಒಮ್ಮೆಲೇ ಹೇಳಿದರು :

" ಇರಲಿ ಹೊಡೀರಿ ಮುಂದಕ್ಕ! ಯಾರು ಕೂತ ಸೌಭಾಗ್ಯನೂ ಅಷ್ಟರೊಳಗs ಅದ! "

ಡ್ರ್ಯಾಯ್ವರ್ ಸುಮ್ಮನೇ ಬಿಡಲಿಲ್ಲ. " ಮೊದಲs ಇಷ್ಟು ತಿಳಕೊಂಡು ಸುಮ್ಮನs ಇದ್ದು ಬಿಟ್ಟಿದ್ದರ, ಇಷ್ಟೆಲ್ಲಾ ರಗಳಿ ಯಾತಕ್ಕ ನಡೀತಿತ್ತು? " ಎಂದು ಬಸ್ಸನ್ನು ಮುಂದುವರಿಸಿದ. ಮುಂದೆ ಬಹಳ ದೂರದ ತನಕ ಬಸ್ಸು ಎಲ್ಲಿಯೂ ನಿಲ್ಲಲಿಲ್ಲ. ಸಂಪೂರ್ಣವೇಗದಿಂದ ದಾರಿಯಲ್ಲಿ ಓಡಲು ತೊಡಗಿದ್ದಿತು. ಮುಂದಿನ ಊರು ಒಂದೆ ಒಂದು ಮೈಲು ದೂರವಿದ್ದಿತು. ಆಗಲೇ 'ಢಬ್' ಎಂದು ಪ್ರಚಂಡ ಸಪ್ಪಳವಾಯಿತು. ಕೂಡಲೆ ಬಸ್ಸು ನಿಂತು ಬಿಟ್ಟಿತು. ಕ್ಲೀನರ್ ಕೆಳಗೆ ಇಳಿಯುತ್ತಲೇ ಹೇಳಿದ :

" ನನಗ ಗೊತ್ತs ಇತ್ತೀ ಮೂರಾಯೂ ಈ ಪರಿಸ್ಥಿತಿ! ಬಲಗಡೇ ಮುಂದಿನ ಗಾಲೀ ಟ್ಯೂಬು, ಟಾಯರು ಎರಡೂ ಬಾದ ಆಗಿದ್ದೂ! ನಾ ನಿನ್ನೇ ಮಾಲಕರಿಗೆ ಈ ಮಾತು ಹೇಳಿದ್ದೆ. ಅದರೊಳಗ ಇಂದ ಕಂಡಾಬಟ್ಟಿ ಮಂದಿ.... ಒವರ್‌ಲೋಡ್ ಭಾರೀ ಆಗೆಯ್ತಿ! ತಡದೀತs ಅದು! ಟಬ್ ಅಂದs ಬಿಟ್ಟಿತು! "

ಡ್ರ್ಯಾಯ್ವರು ಬೇಸರದ ಭಾವದಿಂದ ಪ್ರಯಾಣಿಕರೆಲ್ಲರಿಗೂ ಹೇಳಿದ :

" ಎಲ್ಲಾರೂ ಕೆಳಗ ಇಳೀರೆಪಾ! ಗಾಲೀ ಕಡೀಕ ತಗದು ಬ್ಯಾರೇ ಗಾಲೀ ಹಾಕಬೇಕಾತು! "

ಒಂದಿಲ್ಲೊಂದು ಒಗೆಯಾಗಿ ಬಸ್ಸಿನ ಪ್ರಯಾಣವನ್ನು ಬೈಯುತ್ತ ಒಬ್ಬೊಬ್ಬರೇ ಇಳಿಯಲು ತೊಡಗಿದರು. ಬೇಸಗೆಯ ಏರುಬಿಸಿಲು, ವಾತಾವರಣದಲ್ಲಿ ಬೇಗೆಯನ್ನು ಹರಡಿದ್ದಿತು. ಬಸ್ಸಿನಿಂದ ಇಳಿದ ಜನರು ದಾರಿಯ

ಪಕ್ಕದ ಮರಗಳ ನೆಳಲನ್ನು ಆಶ್ರಯಿಸಿ ಕುಳಿತುಕೊಂಡರು. ತರುಣ ಪ್ರವಾಸಿಯೂ ಒಂದು ಗಿಡದ ಬೊಡ್ಡೆಗೆ ಆತುಕೊಂಡು ಕುಳಿತಿದ್ದ. ದೇಶಸೇವಕರಿಬ್ಬರೂ ಆ ಗಿಡದ ಕೆಳಗೆ ಕುಳಿತುಕೊಳ್ಳಲು ಬಂದು, ತರುಣ ಪ್ರವಾಸಿ ಕುಳಿತುದನ್ನು ಕಂಡು, ಅದೇಕೋ ನಾಚಿಕೊಂಡವರಂತಾಗಿ, ಮತ್ತೊಂದು ಗಿಡದ ನೆರಳಿಗೆ ಹೋಗಲು ಮುಂದುವರಿಯುತ್ತಿದ್ದರು; ಆಗ ಆ ತರುಣ ಪ್ರವಾಸಿ ನುಡಿದ :

" ಬರ್‍ರಿ, ಇಲ್ಲೇ ಬರ್‍ರಿಲಾ ಆರಾಮು ನೆರಳದ ! "

ಮುಂದಿಕ್ಕಿದ ಹೆಜ್ಜೆಯನ್ನು ಮತ್ತೆ ತಿರುಗಿಸಿ, ಇಬ್ಬರೂ ಬಂದು ಅಲ್ಲಿಯೆ ಕುಳಿತುಕೊಂಡರು. ಬೇರೆ ನಾಲ್ಕಾರು ಜನ ಪ್ರಯಾಣಿಕರೂ ಅಲ್ಲಿಯೆ ಬಂದು ಆಸನ ಹಾಕಿದರು. ತರುಣ ಪ್ರವಾಸಿ ದೇಶಸೇವಕರನ್ನು ಕೇಳಿದ :

' ನೀವು ಈಗ ಎಲ್ಲಿಂದ ಬಂದಿರಿ ? "

" ಇಲ್ಲೇ ಒಂದು ಹಳ್ಳಿಗೆ ಹೋಗಿದ್ದೆವೇಳ್ರಿ ! ಒಂದಿಷ್ಟು ಕೆಲಸ ಇತ್ತು ! ಆ ಕೆಲಸಾ ಮುಗಿಸಿಕೊಂಡು ಈಗ ನಮ್ಮ ಊರಿಗೆ ಹೊಂಟೇವಿ ! "

" ಯಾವ ಊರು ನಿಮ್ಮದು ? "

" ನಮ್ಮ ಊರs ? ಗೋಕಾಕ ತಾಲೂಕಿನೊಳಗ ಹೊಸಕೋಟಿ— ಅಂತ ಹಳ್ಳಿ ಅದ! ಅಲ್ಲಿಯವರು ನಾವು! ಅಲ್ಲಿಯ ಕಾಂಗ್ರೆಸ್ ಕೆಲಸಗಾರರು!"

" ಓ ! ಹೀಂಗೇನು ? ಹೊಸಕೋಟಿಯೊಳಗ ಒಂದು ಖಾದೀ ಕೇಂದ್ರ ಅದ ಅಲ್ಲ ? ಅದು ಒಳ್ಳೇ ರೀತಿಂದ ನಡದದೇನು ? "

ಉತ್ಸಾಹಧ್ವನಿಯಲ್ಲಿ ಒಬ್ಬ ಹೇಳಿದ :

" ಓಹೋ ! ಒಳ್ಳೇ ರೀತಿಂದ ನಡೀದs ಏನ್ರೀ ! ಮೊದಮೊದಲ ಕೈನೂಲಿನ ಕೊರತಿ ಆಗಿ, ಖಾದೀ ಉತ್ಪತ್ತಿ ಕಡಿಮಿ ಆಗತಿತ್ತು ! ಆದರ ಈಗ ಮುದ್ದಾಪುರದ ರಂಗಣ್ಣವರ ಪ್ರಯತ್ನದಿಂದ, ಕೈನೂಲಿನ ಪೂರಯಿಕಿ ಬೇಕಾ-ದಷ್ಟು ಆಗತ್ತದ ! "

" ಹಂ ಹಂ! ಮುದ್ದಾಪುರದೊಳಗ ಕೈನೂಲಿನ ಹುಟ್ಟುವಳಿ ಇಷ್ಟೊಂದು ಆಗತsದೇನು ? ಮುದ್ದಾಪುರ ಅಂದರ, ಅದೊಂದು ಚಿಕ್ಕ ಹಳ್ಳಿ ಅಲ್ಲೇನು ?"

" ಚಿಕ್ಕ ಹಳ್ಳಿ ಆದರ ಏನ್ರಿ ? ರಂಗಣ್ಣವರ ಪ್ರಯತ್ನ ಎಂಥಾದು ! ಊರೊಳಗಿನ ಗಂಡಸರು, ಹೆಂಗಸರು ಎಲ್ಲಾರೂ ನೂಲುವ ವ್ರತಾ

ಕೈಕೊಂಡಾರ! ರಂಗಣ್ಣವರ ಮ್ಯಾಲ ಜನರ ಶ್ರದ್ಧಾನೂ ಬಹಾಳ ಏನ್ರಿ! ಎಲ್ಲಾ ಜನಾನೂ ಅವರು ಹೇಳಿದ್ಹಾಂಗ ಕೇಳಲಿಕ್ಕೆ ಸಿದ್ಧರಾಗ್ಯಾರ! ಅಂತಽ ಅವರ ಊರೊಳಗ ವಿಧಾಯಕ ಕಾರ್ಯ ಎಷ್ಟು ಒಳ್ಳೇ ರೀತಿಂದ ನಡದಽದ ಅಂದಿರಿ! ರಂಗಣ್ಣವರದು ಹೋರಾಟ ಹೂಡುವ ಹುರುಪಿನ ಸ್ವಭಾವ ಅಲ್ಲ; ಶಾಂತರೀತಿಯಿಂದ ಸಮಾಜಕ್ಕ ಶಿಕ್ಷಣಾ ಕೊಡುವ ಸೌಮ್ಯ ಸ್ವಭಾವ! ಅದ-ಕಾಗೇ ಅವರು ಈ ಉಪ್ಪಿನ ಸತ್ಯಾಗ್ರಹದ ಚಳವಳಿಯೊಳಗ ಪ್ರತ್ಯಕ್ಷ ರೀತಿಂದ ಭಾಗವಹಿಸಲಿಕ್ಕೆ ಸಿದ್ಧರಾಗಲಿಲ್ಲ ಮತ್ತ ಅವರು ಸಿದ್ಧರಾಗಿದ್ದರೂ ನಾವೆಲ್ಲಾ ಅವರಿಗೆ ಬ್ಯಾಡಂತಽ ಹೇಳತಿದ್ವಿ! ಯಾಕಂದರ, ಅವರಂಥಾ ಕೆಲಸಗಾರ್ರು ಸುಮ್ಮನಽ ಸತ್ಯಾಗ್ರಹ ಮಾಡಿ ಸೆರೆಮನೀ ಒಳಗ ಬಿದ್ದುಬಿಟ್ಟರ, ಹೊರಗಿದ್ದು ವಿಧಾಯಕಕಾರ್ಯ ಮಾಡಬೇಕು ಯಾರು ?"

"ಹಾಂಗಾದರ ಮುದ್ದಾಪುರದ ರಂಗಣ್ಣವರದು ನಿಮಗ ಗುರುತು ಅದಽ ಅನ್ರಿ!"

"ಬರೇ ಗುರುತು ಅಷ್ಟಽ ಯಾಕರೀ? ಮೂರು ನೂರು ದಿನಕ್ಕ ಅವರ ಮನೀ ಒಳಗ ಹೋಗಿ ಇಳೀತೀವಿ! ಅವರ ಮನ್ಯಾಗಽ ಊಟ, ಅವರ ಮನ್ಯಾಗಽ ಉಡಿಗಿ; ಭಾಳ ಉದಾರ ಮನಿಶಾರ್ರಿ ಅವರು! ಯಾಕ ? ರಂಗಣ್ಣವರ ಸುದ್ದೀ ಬಹಾಳ ಕೇಳತೀರಿ ? ಅವರ ಗುರುತು ನಿಮಗ ಅದ ಏನು ?"

"ಅವರ ಗುರುತಽ ? ಹುಂ, ಬೇಕಾದಷ್ಟು ಅವರ ಗುರುತು ಅದ; ಅವರು ನಮ್ಮ ಸ್ನೇಹಿತರು!"

"ಅಂದರ ? ನೀವು ಸಿ. ಐ. ಡಿ. ಅಲ್ಲ ಹೌದಲ್ಲೋ ? ರಂಗಣ್ಣವರು ಆಗಾಗ ನಮಗ ಹೇಳತಿರತಾರ : ಅವರಿಗೆ ನಿಜವಾದ ಸ್ನೇಹಿತರಂದರ ಒಬ್ಬರಽ ಇದ್ದಾರಂತ! ಅವರು ಈಗ ಸತ್ಯಾಗ್ರಹ ಯುದ್ಧದೊಳಗ ಧುಮುಕಿ, ಧಾರ-ವಾಡದ ಸ್ವರಾಜ್ಯ ಭುವನದೊಳಗ ಮುಖ್ಯ ಕಾರ್ಯಕರ್ತರಾಗಿ ಇದ್ದಾರಂತ. ಈಗ ನೀವೂ ರಂಗಣ್ಣಗ ಸ್ನೇಹಿತರು ಅಂತ ಹೇಳತೀರಿ! ಇನ್ನ್ಯಾವ ಸ್ನೇಹಿತರ ವಿಷಯಾನೂ ಅವರು ನಮ್ಮ ಮುಂದ ಹೇಳಿಲ್ಲ. ಇನ್ನೊಂದು ಸಂಗತಿಯಂದರ, ಅವರು ನಿಮ್ಮಂಥಾ ಸೂಟು-ಬೂಟಿನವರ ಸ್ನೇಹಾ ಮಾಡುವವರೂ ಅಲ್ಲ. ಅವರ ನಿಜವಾದ ಸ್ನೇಹಿತರಂದರ ಖಾದೀಧಾರಿಗಳಽ ಇರಬೇಕು! ಕ್ಷಮಾ ಮಾಡ್ರಿ! ನಾವು ನಿಮ್ಮ ಮುಂದ, ಹೇಳಬಾರದ್ದನ್ನೆಲ್ಲಾ ಹೇಳಿ ಎಲ್ಲಿ ತಪ್ಪು

ಮಾಡಿದೆವ್ರೋ ಅಂತ ಅನಿಸತsದ! ಯಾಕಂದರ, ಈಗ ಸಿ. ಐ. ಡಿ. ಗಳ ಸುಳಿದಾಟ ಭಾಳ ಆಗೇದ ಎಲ್ಲಾ ಕಡೆಗೂ! ಯಾರು ಯಾವ ವೇಷದಿಂದ ಬಂದು, ಹ್ಯಾಂಗ ಹ್ಯಾಂಗ ಸುದ್ದೀ ತಿಳಕೋತಾರೋ ಹೇಳಲಿಕ್ಕೆ ಬರದಂಥಾ ಮಾತು ಆಗೇದ!"

"ನೋಡ್ರೆಪಾ! ಈ ವಿಷಯ ಎಲ್ಲಾ ಗೊತ್ತಿದ್ದೂ ನಾ ಯಾರು ಅಂಬೂದನ್ನ ಸಂಪೂರ್ಣ ತಿಳಕೊಳ್ಳದs, ರಂಗಣ್ಣಾವರ ವಿಷಯಾ ಎಲ್ಲಾ ಭಡಾಭಡಾ ಹೇಳಿಬಿಟ್ರೆರಿ ನೀವs! ನಾನು ನಿಜವಾಗಿ ಸಿ. ಐ. ಡಿ. ಇದ್ದರ, ಈಗ ಏನು ಮಾಡುವವರು ನೀವು!"

ಮಾತನಾಡಿದವರಿಗೆ, ಉತ್ಸಾಹದ ಭರದಲ್ಲಿ ತಾವು ಹೆಚ್ಚಿನ ಮಾತು-ಗಳನ್ನು ಆಡಿದೆವೆಂಬ ಪಶ್ಚಾತ್ತಾಪ ತಲೆದೋರಿದಂತಾಯಿತು. ಆಗ ಇನ್ನೊಬ್ಬ ಹೇಳಲು ತೊಡಗಿದ:

"ರಂಗಣ್ಣಾವರ ವಿಷಯಕ್ಕ ಯಾರ ಮುಂದ ಏನ ಹೇಳಿದರೂ ತಪ್ಪೇ-ನದ ಬಿಡ್ರಿ! ಯಾಕಂದರ, ಅವರು ಸರಕಾರದೊಂದಿಗೆ ಹೂಡಿರುವ ಪ್ರತ್ಯಕ್ಷ ಹೋರಾಟದೊಳಗ ಭಾಗವಹಿಸಬೇಕನ್ನೂ ಮನಸಿನವರೇ ಅಲ್ಲ! ಇನ್ನೇನು! ಅವರನ್ನ ಇಲ್ಲದ ಸಂಶಯದಿಂದ ಸುಮ್ಮಸುಮ್ಮನ ಹಿಡಿದರ, ಅವರ ಹಳ್ಳಿಯ ಜನರಿಗೆಲ್ಲಾ ತುಂಬಾ ದುಃಖ ಆಗತsದ ಖರೆ! ಯಾಕಂದರ, ಅವರ ಮುಂದಾಳುತನದಿಂದ ಆ ಜನರಿಗೆಲ್ಲಾ ಹಿತಾ ಆಗಲಿಕ್ಕೆ ಹತ್ತೇದ. ಅವರಿಗೆ ಸಮಾಧಾನದ ಜೀವನಾ ಅನುಭವಿಸಲಿಕ್ಕೆ ಆಗತ್ತದ! ನಿಜವಾಗಿ ನೋಡಿದರ ಮುದ್ದಾಪುರದ ಜನರು ಬಹಾಳ ಪುಂಡ ಜನರು! ವರ್ಷದ ಹನ್ನೆರಡು ತಿಂಗಳೂ ತಮ್ಮ-ತಮ್ಮೊಳಗ ಜಗಳಾಡಿ, ಬಡದಾಡಿ, ಸರಕಾರದ ಕಚೇರೀ ಕಟ್ಟೀ ಅಂತ ಓಡಾಡವರು. ಈಗ ಅಂಥವರು ಹ್ಯಾಂಗ ಆಗ್ಯಾರಂತೀರಿ! ಕುಳಿಂದಕನ ರಾಜಧಾನಿಯೊಳಗ ಬ್ಯಾಡರೆಲ್ಲಾ ವಿಷ್ಣು ಭಕ್ತರಾದರಂತಲ್ಲಾ.... ಚಂದ್ರಹಾಸನ ಉಪದೇಶದಿಂದ! ಹಾಂಗ ಮುದ್ದಾಪುರದ ಜನರೆಲ್ಲಾ ಮಹಾತ್ಮರ ವಿಧಾಯಕ ಕಾರ್ಯದ ಭಕ್ತರಾಗ್ಯಾರ—ರಂಗಣ್ಣಾವರ ಉಪದೇಶದಿಂದ. ನೀವು ಸಿ. ಐ. ಡಿ. ಇರ್ರಿ, ಯಾರs ಇರ್ರಿ! ರಂಗಣ್ಣಾವರ ವಿಷಯಾನ ಯಾರ ಮುಂದ ಹೇಳಿದರೂ ಅವರಿಗೆ ಏನೂ ಆಗೂಹಾಂಗಿಲ್ಲ! ಯಾಕಂದರ, ಅವರು ನಮ್ಮಂಥಾ ರಜೋಗುಣದವರು ಅಲ್ಲವೇ ಅಲ್ಲ!"

ತರುಣಪ್ರವಾಸಿ ಗಟ್ಟಿಯಾಗಿ ನಕ್ಕು ಆ ಮೇಲೆ ಹೇಳಿದ :

“ ನಾನು ನಿಜವಾಗಿಯೂ ಸಿ. ಐ. ಡಿ. ಅಲ್ಲ. ನೀವು ಈ ಮಾತನ್ನ ನಂಬಿರಿ ! ಆದರ, ನಿಮ್ಮಂಥಾ ಚಳವಳಿಗಾರರು, ಯಾರ ಮುಂದೇ ಏನೇ ಮಾತನಾಡಬೇಕಾದರೂ ಬಹಾಳ ಎಚ್ಚರಿಕಿಂದs ಇರಬೇಕಂಬೂದನ್ನ ಲಕ್ಷ್ಯ ದೊಳಗ ಇಟ್ಟುಕೊಳ್ಳರಿ ! ಏನೋ ಕೆಲಸ ಮಾಡುತ್ತಿದ್ದೇವೆ ಎಂಬುದನ್ನ ಜನರೆದುರು ಪ್ರದರ್ಶಿಸಿ, ಸ್ವಂತದ ಮಹತ್ತ್ವ ಹೆಚ್ಚಿಸಕೊಳ್ಳಬೇಕಂಬೂದು ಹುಡುಗಾಟದ ಮಾತಾಗತsದ ! ನಾನು ರಂಗಣ್ಣವರ ನಿಜವಾದ ಸ್ನೇಹಿತನೇ ಇದ್ದೀನಿ. ಈಗ ಅವರ ಕಡೇನs ನನಗ ಹೋಗಬೇಕಾಗೇದಂತ ಮುದ್ದಾ-ಪುರಕ್ಕ ಹೊಂಟೇನಿ ! ”

ಇಬ್ಬರೂ ದೇಶಸೇವಕರೂ ಆ ತರುಣಪ್ರವಾಸಿಯನ್ನು ಬೆರಗು-ಗಣ್ಣುಗಳಿಂದ ನೋಡಲು ತೊಡಗಿದರು. ಅವರಲ್ಲಿಯ ಒಬ್ಬನು ಕುತೂಹಲ-ವನ್ನು ತಡೆಮಕೊಳ್ಳಲಾರದೆ ಕೇಳಿದ :

“ ಹಾಂಗಾದರ, ರತ್ನಾಕರರಾಯರು—ಅಂದರ ನೀವೇ ಏನ್ರಿ ? ”

“ ಛೇಛೇ! ನಾನು ರತ್ನಾಕರರಾಯ ಅಲ್ಲ ...” ಎಂದು ತರುಣ ಪ್ರವಾಸಿ ಹೇಳುತ್ತಿರುವಾಗಲೇ, ಮೋಟಾರಿನ ಕೊಂಬು ಕೂಗಿ ಎಲ್ಲರನ್ನೂ ಕರೆಯಿತು. ಎಲ್ಲರೂ ಆತುರದಿಂದ ಎದ್ದು ಬಸ್ಸಿನ ಕಡೆಗೆ ಓಡಿದರು ಆಗ ತರುಣಪ್ರವಾಸಿ ದೇಶಸೇವಕರಿಗೆ ಹೇಳಿದ :

“ ಈಗ ಫ್ರಂಟ್ ಸೀಟಿಗೆ ನಿಮ್ಮಲ್ಲಿಯ ಯಾರಾದರೂ ಒಬ್ಬರು ಕೂತು-ಕೊಳ್ಳಿರಿ ! ನಾನು ಒಳಗಿನ ಸೀಟಿಗೆ ಹೋಗತೇನಿ ! ”

ಇಬ್ಬರೂ ಒಮ್ಮೆಲೇ ಹೇಳಿದರು :

“ ಹೇ ಹೇ ! ನೀವs ಕೂಡ್ರಿ ! ನಾವು ನಮ್ಮ ಜಾಗಾದೊಳಗ ನಿಂತುಕೋತೀವಿ. ”

ಎಲ್ಲರೂ ಬಸ್ಸಿನೊಳಗೆ ಸೇರಿಕೊಂಡರು. ‘ ಭುರ್ ’ ಎಂದು ಶಬ್ದವ-ನ್ನಾರಂಭಿಸಿ, ಬಸ್ಸು ವೇಗದಿಂದ ದಾರಿಯನ್ನು ಕ್ರಮಿಸಲು ತೊಡಗಿತು.

## ೧೨ನೆಯ ಪರಿಚ್ಛೇದ

ಮೋಟಾರು ರಾಮದುರ್ಗವನ್ನು ತಲ್ಪಿದಾಗ, ಹಗಲು ಮೂರುವರೆ ಗಂಟೆಯಾಗಿದ್ದಿತು. ಫ್ರಂಟ್‌ಸೀಟಿನ ತರುಣ ಪ್ರಯಾಣಿಕ, ತನ್ನ ಸೂಟ್‌ಕೇಸಿನೊಂದಿಗೆ ಕೆಳಗಿಳಿದ ಪ್ರವಾಸಶ್ರಮದಿಂದಲೂ ಊಟ-ತಿನಿಸು ಇಲ್ಲದೆ ಇರುವುದರಿಂದಲೂ ಆತನ ಮುಖದ ಕಳೆ ಇಳಿದಂತಾಗಿದ್ದಿತು. ಕೆಳಗಿಳಿದವನೇ ಡ್ರಾಯ್ವರನನ್ನು ಕೇಳಿದ :

"ಇಲ್ಲಿ ಒಳ್ಳೆಯ ತಿಂಡಿ-ತಿನಿಸು ಸಿಗುವ ಹೊಟೆಲುಗಳೇನಾದರೂ ಆಗ್ಯಾವ ಏನು ?"

"ಒಳೇ ಕೇಳತೀರಿ ನೀವು ! ಈ ಊರೊಳಗ ಇರುವವು ಎಲ್ಲಾ ದರಿದ್ರ ಹೋಟೆಲುಗಳs! ಚಹಾ—ಕಾರದ ಚುನಮುರೀ ಹೊರತು ಇನ್ನೇನೂ ಸಿಗೂದಿಲ್ಲ. ಚಹಾ ಅಂದರ ಅದು ಚಹಾನs ? ಕರೇ ನೀರು ಬ್ಯಾರೆ ಅಲ್ಲ; ಆ ಚಹಾ ಬ್ಯಾರೇ ಅಲ್ಲ! ಪಾಪ. ಹಾಪ್ಯಾಗ ನೀವು ಎಲ್ಲಿಯೂ ಏನೂ ತೊಗೋಳಲೇ ಇಲ್ಲ. ಆ ಗಾಂಧೀಟೊಪ್ಪಿಗೆವರು ಸುದ್ಧಾ, ಮೋಟರು ನಿಂತಕಡೆ ಇಳದಿಳದು ಅಂಗಡಿಗೆ ಹೋಗಿ ಚಹಾ ಕಾಫೀ ತೊಗೊಂಡು ಬಂದರು. ಆದರ ನೀವು ಸೂಟು-ಬೂಟಿನ ಸಾಹೇಬರು—ಎಲ್ಲಿಯೂ ಇಳದು ನೀರು ಸಹಿತ ಕೂಡೀಲಿಲ್ಲ !"

"ಅದೇನು ಬಿಡ್ರಿ; ನಾ ಹೊರಡೂ ಮುಂದ ಫಲಾಹಾರ ಮಾಡಿಕೊಂಡೇ ಹೊರಟಿದ್ದೆ. ಬಿಸಲಿಗೆ ನೀರಡಿಕೆ ಆದ್ಹಾಂಗ ಆಗಿತ್ತು. ಸ್ವಚ್ಛ ನೀರು ಎಲ್ಲಿ-ಯಾದರೂ ಸಿಕ್ಕರ, ಕುಡದು ಹೋಗಬೇಕಂತ ಅಂದುಕೊಂಡೆ !"

"ಓ ! ನೀರು ಬೇಕs ನಿಮಗ ? ಹಾಂಗಾದರ, ಅಲ್ಲೆ ಆ ಬಂಡಿ ನಿಂತ ದ ನೋಡ್ರಿ ! ಅಲ್ಲೆ ಖಾದೀ ಮಾರಾಟದ ಕೇಂದ್ರ ಅದ ನನ್ನ ಸಂಗತೀ ನಡೀರಿ! ನಿಮಗ ಒಳ್ಳೇ ನೀರು ಕೊಡಿಸತೀನಿ !"

ಡ್ರೈವರನ ಮನುಷ್ಯತ್ವದ ಜಾಗ್ರತಿ, ಆ ತರುಣ ಪ್ರವಾಸಿಯ ಮನಸ್ಸನ್ನು ಪ್ರಸನ್ನಗೊಳಿಸಿತು ಇದುವರೆಗೆ ಅವನು ಮಿಕ್ಕ ಪ್ರವಾಸಿಕರೊಡನೆ ನಡೆದುಕೊಂಡ ರೀತಿಯೆ ಬೇರೆ; ಈಗ ತನ್ನೊಡನೆ ನಡೆದುಕೊಳ್ಳುತ್ತಿರುವ ರೀತಿಯೇ ಬೇರೆ. ಹುಲಿ-ಹಸುಗಳಲ್ಲಿಯ ಅಂತರ. ಒಂದೇ ಮನುಷ್ಯವ್ಯಕ್ತಿ-ಯಲ್ಲಿ ಒಂದೆ ಕಾಲದಲ್ಲಿ ಹುದುಗಿಕೊಂಡು ಬದುಕಿರುವ ಸೌಜನ್ಯ-ದೌರ್ಜನ್ಯ-ಗಳ ದರ್ಶನವಾದಂತಾಯಿತು.

ಡ್ರೈವರನು ಮುಂದೆ, ತರುಣ ಪ್ರವಾಸಿ ಹಿಂದೆ. ಇಬ್ಬರೂ ಖಾದಿಯ ಕೇಂದ್ರದ ಕಡೆಗೆ ಹೊರಟರು. ಮುಂಗಡೆಯ ಮಳಿಗೆಯಲ್ಲಿಯೇ ಕೇಂದ್ರದ ತರುಣ ಸಂಚಾಲಕ ಕುಳಿತಿದ್ದ. ಡ್ರೈವರು ಆತನನ್ನು ಕುರಿತು ಹೇಳಿದ :

" ಶಂಕರಣ್ಣಾ, ಈ ರಾಯರು ಈಗ ನಮ್ಮ ಬಸ್ಸಿನೊಳಗ ಬಂದರು. ಪಾಪ, ಅಲ್ಲಿಂದ ಇಲ್ಲೀ ತನಕಾ ಬಾಯಾಗ ನೀರು ಸುದ್ಧಾ ಹಾಕಿಲ್ಲ. ಬಿಸಲು ದಿನ; ನೀರಡಿಸಿ ಬಾಯಿ ಒಣಗಿ ಹೋಗಿದ್ದೀತು. ಒಂದಿಷ್ಟು ನೀರು ತರಿಸಿ ಕೊಡಪಾ ! "

ಶಂಕರಣ್ಣ ಈ ಸೂಟು-ಬೂಟಿನ ಪ್ರಯಾಣಿಕನನ್ನು ಹುಳುಹುಳು ನೋಡಿದ. ಎಲ್ಲಿಯೋ ನೋಡಿದ ಪರಿಚಯದ ಮುಖದಂತೆ ಕಂಡಿತು. ಎಲ್ಲಿ ನೋಡಿದ್ದೇನೆಂಬುದು ನೆನಪಿಗೆ ಬರಲೊಲ್ಲದು. ಕೇಳುವುದಕ್ಕೆ ಸಂಕೋಚ-ವೆನಿಸಿತು. ಆ ಸಂಕೋಚವನ್ನು ಹೊರಗೆ ತೋರಗೊಡದೆ ಹೇಳಿದ :

" ಇಲ್ಲ್ಯಾಕ ? ಒಳಗs ನಡೀರೆಲಾ ! ಕೈಕಾಲು-ಮುಖಾ ತೊಳ-ಕೊಂಡು ನೀರು ಕುಡಿದೀರಂತ ! " ಎಂದು ಹೇಳಿ, ತರುಣ ಪ್ರವಾಸಿಯನ್ನು ಒಳಗೆ ಕರೆದುಕೊಂಡು ಹೊರಟ. ' ನೀನೂ ಬಂದುಬಿಡು ದತ್ತೋಬಾ ! ' ಎಂದು ಡ್ರೈವರನ್ನೂ ಕರೆದ. ಅವನೂ ಎದ್ದು ಒಳಗೆ ನಡೆದ.

ನಡುಮನೆಯಲ್ಲಿಟ್ಟಿದ್ದ ಕುರ್ಚಿಗಳ ಮೇಲೆ ಇಬ್ಬರಿಗೂ ಕುಳಿತು-ಕೊಳ್ಳಲು ಹೇಳಿ, ತಾನು ಒಳಗೆ ಹೋಗಿ, ಕೈಕಾಲು ತೊಳೆದುಕೊಳ್ಳಲು ಎರಡು ತಂಬಿಗೆ ನೀರು ತಂದಿಟ್ಟ; ಟಾವೆಲನ್ನು ತನ್ನ ಕೈಯಲ್ಲಿ ಹಿಡಿದು-ಕೊಂಡಿದ್ದ. ತರುಣಪ್ರವಾಸಿ ಎದ್ದು ಕೈಕಾಲು-ಮೋರೆ ತೊಳೆದುಕೊಂಡು ಒಳಗೆ ಬಂದ. ಶಂಕರಣ್ಣ ಒಳಗೆ ಹೋಗಿ, ಒಂದು ತಳಿಗೆಯಲ್ಲಿ ಬಾಳೆಹಣ್ಣು-ಸಕ್ಕರೆ ಇರಿಸಿಕೊಂಡು ತಂದು ಇಟ್ಟ. ' ಛೇ, ಇದನ್ಯಾಕ ತಂದಿರಿ ? ಒಂದಿಷ್ಟು ನೀರು ಕೊಟ್ಟರ ಸಾಕಾಗಿತ್ತು !' ಎಂದು ದಾಕ್ಷಿಣ್ಯಭಾವದಿಂದ ತರುಣ ಹೇಳಿದ. ' ಇರಲಿ ತೊಗೊಳ್ರಿ; ಮುಂಜಾನೆ ಯಾವಾಗ ಆಗೇದೋ ನಿಮ್ಮ ಫಲಾರ ! ' ಎಂದು ಡ್ರೈವರ್ ದತ್ತೋಬಾ ನುಡಿದ. ಶಂಕರಣ್ಣನೂ ತೆಗೆದುಕೊಳ್ಳಲಿಕ್ಕೆ ಆದರಭಾವದಿಂದ ಹೇಳಿ, ಒಳಗೆ ಹೋಗಿ ಎರಡು ಕಪ್ಪು ಕಾಯಿಸಿದ ಹಾಲು ತಂದ. ಕುಡಿಯುವ ನೀರಿನ ತಂಬಿಗೆಯೂ ಬಂದಿತು.

ತರುಣ ಪ್ರವಾಸಿ ದಾಕ್ಷಿಣ್ಯಭಾವದಿಂದ 'ಇದನ್ಯಾಕ ತಂದಿರಿ ?' ಎಂದು ಕೇಳಿದನಾದರೂ, ಆತನ ಹಸಿದ ಕರುಳು ಆಹಾರವನ್ನು ಅಪೇಕ್ಷಿಸುತ್ತಿದ್ದಿತೆಂದು ತೋರುತ್ತದೆ. ಹೆಚ್ಚಿಗೆ ಮಾತನೇನೂ ಆಡದೆ, ಮೊದಲು ನೀರಡಿಕೆಯು ಹಿಂಗುವಂತೆ ನೀರನ್ನು ಕುಡಿದು, ಆ ಮೇಲೆ ಬಾಳೆಹಣ್ಣಿಗೆ ಕೈ ಹಚ್ಚಿದ. ಡ್ರಾಯ್ವರನೂ ಒಂದೆರಡು ಹಣ್ಣು ತೆಗೆದುಕೊಂಡ. ಹಣ್ಣು ಮುಗಿದ ಮೇಲೆ ಹಾಲನ್ನು ಕುಡಿದು, ಬಾಯಿ ತೊಳೆದುಕೊಳ್ಳುತ್ತಲೇ ಶಂಕರಣ್ಣನಿಗೆ ಹೇಳಿದ :

"ನೀವು ನನಗಾಗಿ ತುಂಬ ತೊಂದರೆ ತೆಗೆದುಕೊಂಡಿರಿ ! ನಿಜವಾಗಿಯೂ ನನಗೆ ತುಂಬ ಹಸಿವೆಯಾಗಿತ್ತು. ಆದರೆ ಸಿಕ್ಕಲ್ಲಿ ತಿನ್ನುವ ಅಭ್ಯಾಸ ಇಲ್ಲ ನನಗೆ ! ಡ್ರಾಯ್ವರ್ ಸಾಹೇಬರು ನಿಮ್ಮಲ್ಲಿಗೆ ನನ್ನ ಕರಕೊಂಡು ಬಂದು ಉಪಕಾರ ಮಾಡಿದರು. ಇಬ್ಬರಿಗೂ ಅಭಿನಂದನೆ !"

ಶಂಕರಣ್ಣ ಹೇಳಿದ :

"ಇದರೊಳಗ ಅಭಿನಂದನಾ ಮಾಡುವಂಥಾ ಮಾತೇನದ ಬಿಡ್ರಿ! ಮನೀ ಮಾಡಿಕೊಂಡಿದ್ದ ಮ್ಯಾಲ, ನೀರಡಿಸಿ ಬಂದವರಿಗೆ ನೀರು ಕೊಡೂದು ಗೃಹಸ್ಥನ ಕರ್ತವ್ಯ ಅದ. ತಾವು ಇದೇ ಊರಿಗೇ ಬಂದೀರೇನು ?"

"ಇಲ್ಲ, ನನಗ ಮುದ್ದಾಪುರಕ್ಕ ಹೋಗಬೇಕಾಗೇದ!"

ಶಂಕರಣ್ಣ ಬೆಚ್ಚಿಬಿದ್ದು ಕೇಳಿದ :

"ಮುದ್ದಾಪುರಕ್ಕs....ಅಲ್ಲಿ ಯಾರ ಮನಿಗೆ ಹೋಗತೀರಿ ?"

"ಅಲ್ಲಿ ನನ್ನ ಸ್ನೇಹಿತರಿದ್ದಾರ; ಅವರ ಕಡೆಗೆ ಹೋಗಬೇಕಾಗೇದ !"

"ಮುದ್ದಾಪುರದೊಳಗ ನಿಮ್ಮ ಸ್ನೇಹಿತರ ? ನಿಮ್ಮ ಈ ವೇಷ- ಭೂಷಣದ ಮ್ಯಾಲ ನೋಡಿದರ, ರಂಗಣ್ಣವರ ತಮ್ಮ ವೆಂಕಣ್ಣನ ಕಡೆ ಬಂದ್ಹಾಂಗ ಕಾಣಿಸತsದ. ಆದರ, ವೆಂಕಣ್ಣ ಮುದ್ದಾಪುರದೊಳಗ ಇರೂದಿಲ್ಲ. ಧಾರವಾಡದೊಳಗ ಇರತಾನ !"

"ಅದು ನನಗ ಗೊತ್ತದ ! ಆ ವೆಂಕಣ್ಣನ ವಿಚಾರದಲ್ಲಿಯೆ ಮಾತಾಡಿಕೊಂಡು ಬರಲಿಕ್ಕೆ ಅವರ ಅಣ್ಣದಿರ ಕಡೆ ಹೋಗಬೇಕಾಗೇದ !"

“ಹಂಹಂ ! ತಿಳಿದ್ಹಾಂಗಾತು ಬಿಡ್ರಿ ! ಏನೋ ಹೆಣ್ಣು-ಗಂಡಿನ ಸಂಬಂಧದ ವಿಚಾರಾ ಇಟ್ಕೊಂಡು ಬಂದ್ಹಾಂಗ ಕಾಣಿಸತದ ! ಆಯ್ತು, ಈಗ ಮುದ್ದಾಪುರಕ್ಕ ಹ್ಯಾಂಗ ಹೋಗಬೇಕಂತ ಮಾಡೀರಿ ? ”

“ಹ್ಯಾಂಗೇನು ? ನಡೆದುಕೊಂಡs ಹೋಗತೀನಿ ! ಮುದ್ದಾಪುರ ಈ ಮೊದಲs ಒಂದೆರಡು ಸಾರೇ ನಾನು ನೋಡೀನಿ ! ”

“ಅದಕ್ಕs ಇರಬೇಕರೀ, ನಿಮ್ಮನ್ನ ಈ ಮೊದಲ ಎಂದೋ ನೋಡಿರ ಬೇಕೂ ಅಂತ ಅನಿಸಿತು. ಬಹುಶಃ ವೆಂಕಣ್ಣನ ಜೋಡೀನ ಬಂದು ಹೋಗಿರ-ಬೇಕು. ಯಾಕಂದರ ರಂಗಣ್ಣವಂಗೆ ನಿಮ್ಮಂಥಾ ಸೂಟು-ಬೂಟಿನ ಗೆಳೆಯರು ಇರೂದು ಶಕ್ಯವೇ ಇಲ್ಲ ! ”

ತರುಣ ಪ್ರಯಾಣಿಕ ಗಟ್ಟಿಯಾಗಿ ನಕ್ಕುಬಿಟ್ಟ ಮಾತ್ರ. ಮಾತನೇನೂ ಆಡಲಿಲ್ಲ ಆಗ ಶಂಕರಣ್ಣ ಹೇಳಿದ :

“ಸರಿ, ನೀವು ಮುದ್ದಾಪುರಕ್ಕ ಹೋಗುವವರು ಇದ್ದರ, ಗಾಡಿಯೊ-ಳಗ ಹೋಗರೆಂತ—ತಡೀರಿ ! ನೂಲಿನ ಗಂಟು ತರಲಿಕ್ಕಂತ ನಮ್ಮದs ಗಾಡೀ ಹೋಗೂದದ. ಈಗ ಆಳು ಬಂದ ಕೂಡಲೇ ಗಾಡೀ ಹೂಡತಾನ....ಆರಾಮ ಕೂತುಕೊಂಡು ಹೋಗರಿ ! ”

ಪ್ರವಾಸಿಕ ತರುಣ ವಿನೋದವಾಗಿ ಹೇಳಿದ :

” ಅಂತೂ ಇಂದ ನಾ ಎದ್ದ ವ್ಯಾಳ್ಯೆ ಒಳ್ಳೇ ಸುಮೂಹೂರ್ತ ಕಾಣಿಸ-ತsದ ! ಸರ್ವಿಸ್ ಬಸ್ಸಿನೊಳಗ ಪ್ರಯತ್ನ ಇಲ್ಲದ ಫ್ರಂಟ್‌ಸೀಟು ಸಿಕ್ಕಿತು. ಹಸಿದ ಹೊಟ್ಟೆಗೆ ಒಳ್ಳೇ ರಸಬಾಳೇಹಣ್ಣು, ಬಿಸಿಬಿಸಿ ಹಾಲು ಸಿಕ್ಕಿತು ! ಇನ್ನ ಅರೇಳು ಮೈಲು ನಡಕೊಂಡು ಹೋಗುವ ನಿರ್ಧಾರದಿಂದ ಬಂದವನಿಗೆ ಕೂತು-ಕೊಂಡು ಹೋಗಲಿಕ್ಕೆ ಸ್ವತಂತ್ರ ಗಾಡೀ ಸಿಕ್ಕಿತು ! ಇವೆಲ್ಲಾ ಶುಭಶಕುನ-ಗಳನ್ನ ನೋಡಿದರ, ಹೊರಟಿರುವ ಕೆಲಸ ಹಣ್ಣು ಆಗುವ ಹಾಂಗ ಕಾಣಿಸತsದ ! ”

“ಒಂದೊಂದು ವ್ಯಾಳ್ಯೇ ಏಳ್ರಿ ! ಅನುಕೂಲ ವ್ಯಾಳ್ಯೇ ಇದ್ದರ ಎಲ್ಲಾ ಮಾತೂ ತಾನಾಗೇ ಕೈಗೂಡಿ ಬರತಿರತsದ ! ಇನ್ನ ನಮ್ಮದೇನು ದೊಡ್ಡ ಅನುಕೂಲತಾ ಬಿಡ್ರಿ ! ಹ್ಯಾಂಗೂ ಗಾಡೀ ಹೋಗೂದs ಅದ. ಅದರೊಳಗ ಕೂತುಕೊಂಡು ಹೋಗತೀರಿ ! ” ಎಂದು ಹೇಳಿ ಶಂಕರಣ್ಣ ತರುಣ ಪ್ರಯಾ-

ಣಿಕನನ್ನು ಮುಂದಿನ ಮಳಿಗೆಗೆ ಕರೆತಂದ. ಡ್ರಾಯ್ವರ್ ದತ್ತೋಬನೂ ಜೊತೆಯಲ್ಲಿಯೇ ಇದ್ದ. ಮೂವರೂ ಕೂಡಿ ಹೊರಗೆ ಬರುವಷ್ಟರಲ್ಲಿಯೆ ಆಳು ಗಾಡಿಯನ್ನು ಹೂಡಿ ಸಿದ್ಧ ಮಾಡಿದ್ದ. ಶಂಕರಣ್ಣ ಆಳನ್ನು ಕರೆದು ಹೇಳಿದ :

" ಈ ರಾಯರೂ ಮುದ್ದಾಪುರಕ್ಕ ರಂಗಣ್ಣಾವರ ಕಡೆ ಹೊಂಟಾರ. ಇವರನ್ನೂ ಗಾಡಿಯೊಳಗ ಕರಕೊಂಡು ಹೋಗಪಾ ! "

ಪ್ರವಾಸಿಕ ತರುಣ ಶಂಕರಣ್ಣನಿಗೂ ದತ್ತೋಬನಿಗೂ ಕೃತಜ್ಞತೆಯ ವಂದನೆಯನ್ನು ಮತ್ತೆ ಮತ್ತೆ ಸಲ್ಲಿಸಿ, ಗಾಡಿಯನ್ನು ಹತ್ತಿ ಕುಳಿತುಕೊಂಡ. ಆಳು ಎತ್ತುಗಳ ಹಣೆಹಗ್ಗವನ್ನು ಹಿಡಿದುಕೊಂಡು ಮುಂದೆ ನಡೆದ. ಗಾಡಿಯು ಮುಂದುವರೆಯಿತು. ಆಗ ಶಂಕರಣ್ಣ ಡ್ರಾಯ್ವರ್ ದತ್ತೋಬ-ನನ್ನು ಕುರಿತು ಹೇಳಿದ :

" ಇವರು ಯಾರಿರಬಹುದಂಬೂದನ್ನ ಇಷ್ಟೊತ್ತಿನ ತನಕಾ ಯೋಚನಾ ಮಾಡಿದೆ. ಈಗ ಗೊತ್ತಾತು ಇವರು ಯಾರಂಬೂದು ! "

" ಯಾರಿವರು ಶಂಕರಣ್ಣಾ ! ಧಾರವಾಡದ ಮೋಟರ್ ಸ್ಟ್ಯಾಂಡಿನ ಮ್ಯಾಲೆ, ಪೋಲೀಸ ಹವಾಲದಾರ್ ಹನುಮಂತಪ್ಪ ನನಗ ಹೇಳಿದ: ಇವರು ಯಾವುದೋ ಪ್ರಸಿದ್ಧ ವಿಮಾಕಂಪನೀ ಆರ್ಗನಾಯಿಜರು--ಅಂತ ! "

" ಅದೆಲ್ಲಾ ಸುಳ್ಳು ದತ್ತೋಬಾ ! ಪ್ರಸಿದ್ಧ ಕಾಂಗ್ರೆಸ್ ಕೆಲಸಗಾರ ರತ್ನಾಕರ ರಾಯರಂದರ ಇವರs ! ಯಾಕೋ ವೇಷಾ ಬದಲಿಸಿಕೊಂಡು ಹೊರಟಾರ ! ಪೋಲೀಸರ ಕಣ್ಣು ತಪ್ಪಿಸಬೇಕಾಗೇದೋ ಏನೋ ! "

" ಅಲ್ಲಾ, ಮತ್ತ ಧಾರವಾಡದೊಳಗ, ಪೋಲೀಸ ಹವಾಲದಾರನs ಹೇಳಿ, ಇವರನ್ನ ಫ್ರಂಟ್ ಸೀಟಿನ ಮ್ಯಾಲ ಕೂಡ್ರಿಸಿದನಲಾ ! "

" ಇದಂಗs ಇರೂದು ಮಜಾ! ಚತುರರಾದ ಚಳವಳಿಗಾರರು, ಅನೇಕ ಕಡೆ ಪೋಲೀಸರನ್ನ ಕೂಡಾ ಒಡಕೊಂಡು ಅವರಿಂದ ಸಹಾಯಾ ಪಡೀತಿರತಾರ ! "

" ನನಗೂ ಯಾಕೋ ಅನಿಸಿತ್ತರಿ ! ಇವರ ವರ್ತನಾ ಎಲ್ಲಾ ನೋಡಿ, ಇವರು ಬರೇ ಒಬ್ಬ ವಿಮಾ ಕಂಪನೀ ಆರ್ಗನೈಜರ್ ಏನೂ ಇರಲಾರರು— ಅಂತ ! ಎಂತಾ ಚಿನ್ನದಂತಾ ಗುಣಾರಿ ಅವರದು ! ಅಂತಲೇ ನಾ ನಿಮ್ಮ ಮನಿಗೆ ನೀರು ಕುಡೀಲಿಕ್ಕಂತ ಅವರನ್ನ ಕರಕೊಂಡು ಬಂದೆ. "

“ ಒಳ್ಳೇದು ಮಾಡಿದಿ ಬಿಡು ! ಆಗೆs ನನಗ ನೆನಪಿಗೆ ಬರಲಿಲ್ಲ. ಇಲ್ಲದಿದ್ದರ, ಅವರನ್ನ ಗುರುತು ಹಿಡಿದು, ಏನಾದರೂ ಹೆಚ್ಚಿನ ಮಾತು-ಕತೆ ಆಡಲಿಕ್ಕಾ-ಗತಿತ್ತು.”

ದತ್ತೋಬಾ ತನ್ನ ಕೆಲಸಕ್ಕೆ ಹೊರಟು ಹೋದ. ಶಂಕರಣ್ಣ ತನ್ನ ಕೆಲಸಕ್ಕೆ ತೊಡಗಿದ.

## ೧೩ನೆಯ ಪರಿಚ್ಛೇದ

ವೆಂಕಣ್ಣ ಇಂದು, ಬೆಳಗಿನ ಎಂಟುವರೆ ಗಂಟೆಗೆ ಬರಬೇಕೆಂದು ತನ್ನ ಗೆಳೆಯರೆಲ್ಲರಿಗೆ ಔತಣವಿತ್ತಿದ್ದ. ಆದುದರಿಂದಲೇ ಬಳವಂತ, ಶೀನಪ್ಪ, ರಾಮಭಾವೂ, ದತ್ತೂ ಎಲ್ಲರೂ ವೇಳೆಗೆ ಸರಿಯಾಗಿ ವೆಂಕಣ್ಣನ ರೂಮಿಗೆ ಬಂದರು. ವೆಂಕಣ್ಣ ಆಗತಾನೆ ಎದ್ದು, ಹೊತ್ತ ಹೊದಿಕೆಯನ್ನು ಕೊಡಹಲು ಕೈಯೊಳಗೆ ತೆಗೆದುಕೊಂಡಿದ್ದ. ಅಸ್ತವ್ಯಸ್ತ ಹಾಸಿಗೆಯು ಹಾಗೆಯೆ ಬಿದ್ದು ಕೊಂಡಿದ್ದಿತು. ಹಾಸಿದ್ದ ಹಾಸಿಗೆಯನ್ನು ಎರಡು ಮೂರು ದಿನಗಳಿಂದಲೂ ತೆಗೆಯದೆ ಹಾಗೆಯೆ ಬಿಟ್ಟಿರಬಹುದು.

ಗೆಳೆಯರು ಬಂದೊಡನೆಯೆ ವೆಂಕಣ್ಣ, ಹೊದ್ದಿಕೆಯು ಕೈಯಲ್ಲಿ ಇದ್ದ ಹಾಗೆಯೇ ‘ ಓ ! ಬರ್‍ರಿ ಬರ್‍ರಿ ! ಸುಪ್ರಭಾತ ! ಗುಡ್‌ಮಾರ್ನಿಂಗ್ ! ” ಎಂದು ಸ್ವಾಗತಿಸಿದನು. ಆಗ ರಾಮಭಾವೂ ಉತ್ಸಾಹದಿಂದ ನುಡಿದ :

“ ಶೀನಪ್ಪಾ ! ತಗೀ ಎರಡು ರೂಪಾಯಿ ಪೆಡೇಕ. ವೆಂಕಣ್ಣ ಎದ್ದಿರ-ತಾನ ಅಂತ ನಾ ಹೇಳಿದ್ದೆನೋ ಇಲ್ಲೋ ! ನಮಗೆಲ್ಲಾ ಬರಲಿಕ್ಕೆ ಹೇಳ್ಯಾನಂದ ಮ್ಯಾಲ, ದಿನದ್ಹಾಂಗ ಒಂಬತ್ತು ಗಂಟೇದ ತನಕಾ ಮಲಕೋತಾನ ಹ್ಯಾಂಗ? ಹುಂ, ತಗೀ ಕಿಸೇದೊಳಗಿಂದ ಝಣಾ ಝಣಾ ಎರಡು ರೂಪಾಯಿ ! ”

“ ಹುಂ, ಸುಮ್ಮನೆs ಬರತಾವೇನು ಎರಡು ರೂಪಾಯಿ ! ಈಗ ವೆಂಕಣ್ಣ ಎದ್ದಾನರೇ ಎಲ್ಲೆ ? ” ಶೀನಪ್ಪ ಕೇಳಿದ.

“ ಅಂದರ ಏಳದೆs ಎದ್ದು ನಿಂತುಕೊಂಡಾನೇನು ? ” ದತ್ತೂ ಕೇಳಿದ.

“ ಹಾಂಗಲ್ಲೋ ! ಅಂವ ಎದ್ದೇ ಇಲ್ಲ. ಹಾಸಿಗೀ ಮ್ಯಾಲೆs ಇದ್ದಾನ ಕಾಣಿಸೂದಿಲ್ಲೇನು ? ” ಶೀನಪ್ಪ ಹೇಳಿದ.

“ ಹಾಸಿಗೀ ಮ್ಯಾಲೇ ಇದ್ದರೇನಾತು ? ಎದ್ದದ್ದು ಸುಳ್ಳೇನು ? ಏನು ವೆಂಕಣ್ಣ ಎದ್ದು ನಿಂತುಕೊಂಡೆs ನಿದ್ದೀಮಾಡತಾತಿರತಾನೋ ! ” ದತ್ತೂ ಕೇಳಿದ.

"ಅಂವ ತಾನಾಗೇ ಎದ್ದೇ ಇಲ್ಲ; ಯಾರಾದರೂ ಬಂದು ಎಬ್ಬಿಸಿರ-ಬೇಕು!" ಬಳವಂತ ನುಡಿದ.

ವೆಂಕಣ್ಣ ನಗುತ್ತ ಹೇಳತೊಡಗಿದ :

"ನಿನ್ನ ಮಾತು ನಿಜಾ ಬಳವಂತಾ! ನೀವೆಲ್ಲಾರೂ ಬರುವವರಿದ್ದೀರಂತ, ನಿನ್ನಿನ ದಿನಾನs ಹಾಲಿನಾಕಿಗೆ ಲಗೂನs ಬಂದು ಹಾಲುಕೊಟ್ಟು ಹೋಗು—ಅಂತ ಹೇಳಿದೆ. ಆಕಿ ಬಂದು ಎಬ್ಬಿಸಿದಳಂತ ಎದ್ದೆ. ಇಲ್ಲದಿದ್ದರ ಇಷ್ಟೊತ್ತನಕಾ ಎಚ್ಚರಿಕಿ ಆಗತಿತ್ತೋ ಇಲ್ಲೋ! ಹಾಲಿನಾಕಿ ಎಬ್ಬಿಸಿದ ಕೂಡಲೆ ಎದ್ದು ಹಾಲು ತಗೊಂಡು ಇಟ್ಟು, ಹೊರಗೆ ಹೋಗಿಬಂದೆ. ಇನ್ನ ಹಾಸಿಗೀ ತಗದು ಕೋಣೇ ಸ್ವಚ್ಛಮಾಡಬೇಕಂಬೂದರೊಳಗs ಬಂದು ಬಿಟ್ಟಿರಿ ನೀವು!"

ಶೀನಪ್ಪ ಹಿಗ್ಗಿನಿಂದ ಹೇಳಿದ :

"ನೋಡಿದಿರಿಲ್ಲೋ! ನಾ ಹೇಳಿದ ಮಾತೇನು ಸುಳ್ಳೀ? ವೆಂಕಣ್ಣಾ, ಉಪಕಾರ ಮಾಡಿದಿ ಬಿಡು ಮಹಾರಾಯಾ! ನನ್ನ ಎರಡು ರೂಪಾಯಿ ನನ್ನ ಜೇಬಿನೊಳಗs ಉಳಿದೂ! ಈಗ ರಾಮಭಾವೂ ರೂಪಾಯಿ ಕೊಡಬೇಕಾತು! ಹಂ, ತಗೀ ರಾಮಭಾವು! ಕಿಸೇದಾಗಿಂದs ಹೊರಬೀಳಲಿ ನಾಲ್ಕು ರುಪಾಯಿ ಝಣಾ ಝಣಾ ಅಂತ!"

"ಅದ್ಯಾಕ ಹೊರಬೀಳತಾವ? ವೆಂಕಣ್ಣ ಹಾಸಿಗೀ ಮ್ಯಾಲ ಮಲ-ಕೊಂಡಿದ್ದರ ನಾ ಸೋತ್ಹಾಂಗ ಆಗತಿತ್ತು! ಆಗ ಬೇಕಾದರ, ನಾ ಅಲ್ಲ, ನಮ್ಮ ಅಪ್ಪ ಕೊಡತಿದ್ದ ಜಿದ್ದಿನ ರೂಪಾಯಿ!"

"ಇರಲಿ ಬಿಡ್ರ್ಯೋ; ನೀವು ಇಬ್ಬರೂ ಕೊಡೂ ಮಕ್ಕಳs; ಶೀನಪ್ಪನ ಕಿಸೇದಾಗ ರೂಪಾಯಿ ಎಂದೂ ಇರೂ ಹಾಂಗೇ ಇಲ್ಲ; ಮತ್ತ ನೀ ನಿನ್ನ ಕಿಸೇದೊಳಗ ಎಂದೂ ರೂಪಾಯಿ ಇಡೂಹಾಂಗಿಲ್ಲ;"

"ಛೇ; ವೆಂಕಣ್ಣಾ; ನೀ ಕೆಲಸಾ ತಪ್ಪಿಸಿದಿ. ನೀ ಇನ್ನೊಂದಿಷ್ಟು ಹೊತ್ತು ಮಲಕೋಬೇಕಾಗಿತ್ತು ಒಂದು; ಇಲ್ಲದಿದ್ದರ, ಇಷ್ಟರೊಳಗs ಎದ್ದು ಹಾಸಿಗೀ-ಪಾಸಿಗೀ ತಗದು ಇಡಬೇಕಾಗಿತ್ತು ಒಂದು. ಎರಡೂ ಮಾಡದೇ ನಮಗ ಪೇಡೆ ಸಿಗದ್ಹಾಂಗ ಮಾಡಿದಿ" ದತ್ತೂ ನುಡಿದ.

ವೆಂಕಣ್ಣ ಹಾಸಿಗೆಯನ್ನು ಸುತ್ತುತ್ತಲೇ ಹೇಳಿದ :

"ನಿಮಗ ಪೇಡೇ ಬೇಕು ಹೌದಲ್ಲೋ ? ಅದಕ್ಯಾಕ ಕಾಳಜೀ ಮಾಡ-ತೀರಿ ಬರ್ರಿ ; ಕಸಾಪಸಾ ಆ ಮ್ಯಾಲ ತಗದರಾತು; ಬರ್ರಿಲ್ಲೆ ಕೂತುಕೊಳ್ರಿ ; ಶೀನಪ್ಪಾ, ನೀ ಸ್ಟೋವ್ ಹೊತ್ತಿಸಿ ಚಹಾಕ್ಕ ಎಸರು ಇಡು ; ನಾ ಈಗ, ಸ್ವಲ್ಪ ಹಲ್ಲು ತಿಕ್ಕಿಕೊಂಡು, ಮಾರೀ ತೊಳಕೊಂಡು ಬರತೀನಿ ? "

ವೆಂಕಣ್ಣ ಬ್ರಶ್ಶು, ಟೂಥ್‌ಪೇಸ್ಟು ತೆಗೆದುಕೊಂಡು ಹೊರಗೆ ಹೋದ. ಶೀನಪ್ಪ ಸ್ಟೋವ್ ಮುಂದೆ ಸರಿಸಿಕೊಂಡು ಹೊತ್ತಿಸತೊಡಗಿದ. ಮಿಕ್ಕ ಮೂವರೂ ಮಾತನಾಡುತ್ತ ಹಾಸಿಗೆಯ ಮೇಲೆ ಕುಳಿತುಕೊಂಡರು. ಪತ್ತೂ ಮಾತನ್ನು ಆರಂಭಿಸಿದ :

"ಪೋಲೀಸ್ ಪಾರ್ಟಿ ನಿನ್ನೆ ರಾತ್ರೀ ಎರಡುಗಂಟೇಕ್ಕನs ಸ್ವರಾಜ್ಯ-ಭುವನದ ಮ್ಯಾಲ ಮುತ್ತಿಗೀ ಹಾಕಿತಂತ. ಆದರ, ಆ ಬೆರಕೀ ರತ್ನಾಕರ, ಅಷ್ಟರೊಳಗs ಎಲ್ಲಿ ತಪ್ಪಿಸಿಕೊಂಡು ಪಾರ ಆಗ್ಯಾನೋ ಏನೋ ನೋಡ್ರಿ ! ಇಡೀ ರಾತ್ರಿ, ಪೋಲೀಸರು ಊರಂತೂರೆಲ್ಲಾ ಹುಡಕಿದರು ! "

ಬಳವಂತ ಹೇಳತೊಡಗಿದ :

"ಪೋಲೀಸರ ಮಾತು ಏನ ಹೇಳತೀ ಬಿಡೋ ; ಇದ್ದ ಮನ್ಯಾಗ ಹುಡುಕೂದು ಬಿಡತಾರ ; ಇಲ್ಲದ ಮನಿಯೊಳಗ ತಪಾಸ್ ಮಾಡಿಕೋತs ತಿರಿಗ್ಯಾಡತಾರ. ನಿನ್ನೆ ಸಂಜೀ ಏಳು ಘಂಟೀ ಸುಮಾರಿಗೆ ಅಂವ, ಬ್ಯಾಂಕಿನ ಅನಂತರಾಯರ ಮನಿಯೊಳಗ ಹೋದದ್ದನ್ನ ನಾನs ನನ್ನ ಈ ಎರಡೂ ಕಣ್ಣಿಂದ ನೋಡೇನಿ ! "

"ಏನಂದಿ ? ರತ್ನಾಕರ ಅನಂತರಾಯರ ಮನಿಯೊಳಗ ಹೋದನs ? ನೀಲಿಕೆಟ್ಟ ಮಾತಪಾ ಇದು ! " ರಾಮುಭಾವು ಆಶ್ಚರ್ಯದಿಂದ ನುಡಿದ.

"ಈ ಬುದ್ಧಿವಂತಗ ಒಂದೂ ಊರ ಸುದ್ದಿ ಗೊತ್ತಿರೂದಿಲ್ಲ. ರತ್ನಾಕರ ಅನಂತರಾಯರ ಮನಿಗೆ ಹೋಗೂದಂದರ, ಗಂಡ-ಗಂಡಸರೊಳಗ ಸಂಬಂಧ ಬೆಳದು ಅಲ್ಲ; ಗಂಡಸರು-ಹೆಂಗಸರೊಳಗ ಸಂಬಂಧ ಬೆಳದು ! ತಿಳೀತೇನು ? ಅಲ್ಲೆ ಶೀನಪ್ಪನ್ನ ಕೇಳು ಎಲ್ಲಾ ಹೇಳತಾನ ! "

"ಏನೋ ಶೀನಪ್ಪಾ, ಏನದ ಇದರ ಚಮತ್ಕಾರ ? ಎಲಾ ಬೆರಕೀ ದೇಶ ಭಕ್ತಾ; ಹಾಂಗಾದರ ಒಳ್ಳೇ ಹುಡಿಗಿನ್ನs ನೋಡಿ ಸಂಬಂಧಾ ಬೆಳಿಸ್ಯಾನಲಾ!"

ಶೀನಪ್ಪ ಹೇಳತೊಡಗಿದ :

" ಛೇ ಛೇ ; ಪಾಪ ; ಅಂವೇನ ಸಂಬಂಧ ಬೆಳಸತಾನ ಬಿಡ್ರ್ಯೋ! ಇದs ಹುಡಿಗಿ, ರತ್ನಾಕರಗ ಮರುಳಾಗಿ, ಬಾಯಿತಕ್ಕೊಂಡು ಬೆನ್ನಹತ್ತಿರತsದ. ಮತ್ತ ಇನ್ನೂ ಒಂದು ಮಾತು ರಾಮಭಾವೂ : ಅಂಥಾ ರತಿದೇವಿಯಂಥಾ ಹೆಣ್ಣು ತಾನಾಗೇ ಬಯಸಿದರ, ರತ್ನಾಕರನರೇ ಏನ ಮಾಡಬೇಕು ? ದೇಶ-ಭಕ್ತ ಆದರೇನಾತು ? ಅಂವೇನು ಗಂಡಸು ಅಲ್ಲೇನು ? "

ಬಳವಂತ ವ್ಯಂಗ್ಯಧ್ವನಿಯಲ್ಲಿ ಶೀನಪ್ಪನನ್ನು ಕೇಳಿದ :

" ಅಲ್ಲೋ, ಶೀನೂ ; ಆ ದಿನಾ ಆಕಿ ಚಹಾ ಹಾಕಲಿಕ್ಕೆ ಬಂದಾಗ, ರತ್ನಾಕರನ ಕಾಲಮ್ಯಾಲ ಚಹಾ ಬಿದ್ದದ್ದು ನೆನಪು ಅದs ಏನು ? ಆ ಚಹಾ ಒರಿಸಿಕೊಳ್ಳಲಿಕ್ಕೆ—ಆ ಹುಡುಗಿ ತನ್ನ ಕೈವಸ್ತ್ರ ಕೊಟ್ಟಳು. ರತ್ನಾಕರ ಅದನ್ನ ಆಕಿಗೆ ತಿರಿಗಿ ಕೊಡಲೇ ಇಲ್ಲಲs ? "

ಶೀನಪ್ಪ ಒಂದು ಆಶೆ ಬೆರೆತ ಧ್ವನಿಯಲ್ಲಿ ಹೇಳಿದ :

" ನಾನೂ ಕಡಿತನಕಾ ಅದನ್ನ ಪರೀಕ್ಷಾ ಮಾಡಿ ನೋಡಿದೆ—ಬಳ-ವಂತಾ ; ಆ ವಸ್ತ್ರಾನ ಅಂವ ಕೈಯಾಗ ಹಿಡಕೊಂಡೇ ಇದ್ದ ನೋಡು ; ತಿರಿಗಿ ಕೊಡಲೇ ಇಲ್ಲ ! ನಾ ಅಂತೇನಿ....ಅಂವಗ ಅದನ್ನ ತಿರಿಗಿ ಕೊಡೂ ಮನಸರೇ ಹ್ಯಾಂಗ ಆಗಬೇಕು ? ಅದು ಬಂದಿತ್ತು ಎಂಥಾ ಕೋಮಲ ಹಸ್ತದಿಂದ ? "

' ಹಾಹಾಹಾಹಾ ' ಎಂಬ ಎಲ್ಲರೂ ನಗುತ್ತಿರುವಾಗಲೇ ವೆಂಕಣ್ಣ ಮುಖ ತೊಳೆದುಕೊಂಡು ಮರಳಿ ಬಂದ. ಗೆಳೆಯರೆಲ್ಲರ ನಗೆಯ ತೆರೆಗಳನ್ನು ಕಂಡು ವೆಂಕಣ್ಣ ಆತುರದಿಂದ ಕೇಳಿದ :

" ಇದೇನ್ರ್ಯೋ ; ನಗೀ ಸಮುದ್ರಾನs ಉಕ್ಕೇರಿಸಿ ಬಿಟ್ಟೀರಲಾ ! ' ವಿದ್ಯಾಹರಣ ' ನಾಟಕದೊಳಗ ಶುಕ್ರಾಚಾರ್ಯರ ಸೆರೆಗುಡುಕ ಶಿಷ್ಯನ ಚಾಷ್ಟೀ ನೋಡಿ, ಪ್ರೇಕ್ಷಕರು ನಕ್ಕಹಾಂಗ ನಗಲಿಕ್ಕೆ ಹತ್ತೀರಲಾ ! "

ಬಳವಂತ ಹೇಳಲು ಮೊದಲು ಮಾಡಿದ :

" ಏನೋ ! ಆ ನಿಮ್ಮ ದೇಶಭಕ್ತ ರತ್ನಾಕರನ ಮಾತು ಹೊರಟತ್ತೀಳು! ನಿನ್ನೆ ಪೋಲೀಸ್ ಪಾರ್ಟೀ ಆತನ್ನ ಹಿಡೀಬೇಕಂತ, ಸ್ವರಾಜ್ಯ ಭುವನದ ಮ್ಯಾಲ ಮುತ್ತಿಗೀ ಹಾಕಿತ್ತಂತ;ಆದರ ಆ ಕಳ್ಳ ಹ್ಯಾಂಗ ತಪ್ಪಿಸಿಕೊಂಡು ಹೋಗ್ಯಾನೋ ಹೋಗ್ಯಾನ ಪೋಲೀಸರು ಸುಳ್ಳs ಊರೆಲ್ಲಾ ಹುಡುಕಿ ಹುಡಿಕಿ ನಿದ್ದಿಗೆಟ್ಟರಂತ!"

" ಏನು ? ರತ್ನಾಕರನನ್ನ ಪೋಲೀಸರು ಹುಡುಕಿದರಂತ ? ಆಂ ? ಅಂವ ಏನೂ ನನಗ ಹೇಳಲೇ ಇಲ್ಲಲಾ ! ರಾತ್ರೀ ನಾಲ್ಕು ಹೊಡಿಯೂ ತನಕಾ ಇಲ್ಲೇ ನಮ್ಮ ರೂಮಿನೊಳಗs ಇದ್ದ. ಯಾತಕ್ಕೋ ಬೇಕಾಗ್ಯಾವ, ಒಂದೆರಡು ದಿನದೊಳಗs ತಂದುಕೊಡತೀನ್ರೀ—ಅಂತ ಹೇಳಿ, ನಾ ವೊನ್ನೆ ಹೊಲಿಸಿದ್ದೀನಲಾ; ಆ ಉಲನ್ ಸೂಟು, ಸೂಟ್‌ಕೇಸು ತಗೊಂಡು ಹೋದ. ಅಂವ ಬಂದದ್ದರ ಸಲುವಾಗೇ ನನಗ ಬೆಳತನಕಾ ನಿದ್ದೀನs ಇರಲಿಲ್ಲ. ಆತ ಹೊರಟು ಹೋದ ಮ್ಯಾಲೆ, ಬೆಳಗು ಮುಂಜಾನೆ ಮಲಕೊಂಡೆ. ಅಂತs ನನಗ ಲಗೂ-ಏಳಲಿಕ್ಕೆ ಆಗಿರಲಿಲ್ಲ. ಈಗ ಎದ್ದರೂ ಏನಾತು ! ಕಣ್ಣಾಗಿನ ನಿದ್ದಿಯೇನೂ ಕಡಿಮಿ ಆಗಿಲ್ಲ! "

" ಬೆರಿಕೀ ದೇಶಭಕ್ತಾ ! " ಎಂದು ಬಳವಂತ ಆಶ್ಚರ್ಯದಿಂದ ಉದ್ಗಾರ ತೆಗೆದ. ಮಿಕ್ಕವರೂ ಕುತೂಹಲಭಾವವನ್ನು ಮುಖದ ಮೇಲೆ ಮೂಡಿಸಿಕೊಂಡು ಕುಳಿತಿದ್ದರು. ಆಗ ರಾಮಭಾವು ಗಾಬರಿಯ ಸ್ವರದಲ್ಲಿ ನುಡಿದ :

" ಆದದ್ದು ಆಗಿ ಹೋಗೇದ ! ಈಗ ಏನs ಇರಲಿ; ಅಂವ ಇಲ್ಲಿಗೆ ಬಂದು ಹೋದ ಸುದ್ದೀ ನಾವು ಎತ್ತಬಾರದು ! ಪೋಲೀಸರು ಕಣ್ಣಾಗ ಎಣ್ಣೀ ಹಾಕಿಕೊಂಡು ಎಲ್ಲಾ ಕಡೇ ತಿರಿಗಾಡಲಿಕ್ಕೆ ಹತ್ತ್ಯಾರ ! ಹೇಳಿಕೇಳಿ ನಾವೆಲ್ಲಾ ಸರಕಾರೀ ನೌಕರರು ! ಸೂಳೀಪಾಪ ಸಂನ್ಯಾಸೀ ತಲೀಗೆ ಬ್ಯಾಡ ! ಇನ್ನ ಆ ವಿಷಯಾ ಒಂದಕ್ಷರನೂ ಎತ್ತಬ್ಯಾಡ್ರಿ ! "

" ಇಲ್ಲಾಂವ ಮಗಾ ಪೋಲೀಸ ಬರತಾನ ಬಿಡೋ! ಅಲ್ಲಾ ವೆಂಕಣ್ಣಾ, ರತ್ನಾಕರ ಇಲ್ಲಿಂದ ಹೋಗೂ ಮುಂದ ಎಲ್ಲಿಗೆ ಹೋಗತೀನಂತ ಏನಾರೇ ಹೇಳಿದನೇನು ? "

" ಒಂದು ಜರೂರೀ ಕೆಲಸದ ಸಲುವಾಗಿ, ಯಾವುದೋ ಊರಿಗೆ ಹೋಗಬೇಕಾಗೇದಂತ ಹೇಳಿದ. ನಾನೂ ವಿಶೇಷ ಚಿಕಿತ್ಸಾ ಮಾಡಿ ಕೇಳಲಿಲ್ಲ. ನಮ್ಮ ಅಣ್ಣಾನ ಕಡಿಂದ ಪತ್ರಗಿತ್ರ ಏನಾದರೂ ಬಂದsದ ಏನು ?— ಅಂತ ವಿಚಾರಿಸಿದ. ಅಣ್ಣಾಗ ಏನಾದರೂ ತಿಳಿಸೂದು ಅದ ಏನು ?— ಅಂತ ಕೇಳಿದ. ಬಹುಶಃ ಅಂವ ನಮ್ಮ ಅಣ್ಣಾನ ಕಡೆ—ಮುದ್ದಾಂಪುರಕ್ಕs— ಹೋಗಿರಬಹುದು. ಪೋಲೀಸರು ಹಿಡಿಯುವರು ಇದ್ದಾರಂಬೂ ಸುಳಿವು ಅಂವಗೆಲ್ಲೋ ಹತ್ತಿರಬೇಕು. ರಾತ್ರೀ ಹನ್ನೊಂದೂವರಿಗೆ ಬಂದು ನಮ್ಮ ಕೋಣೀ ಬಾಗಿಲಾ

ಬಡಿದ. ನಾ ಇನ್ನೂ ಎಚ್ಚರಿಕಿಂದನs ಇದ್ದೆ. ಯಾರು ಬಾಗಿಲಾ ಬಡೀತಾರಂತ ಎದ್ದು ಹೋಗಿ ಬಾಗಿಲಾ ತೆಗದು ನೋಡತೀನಿ: ದೇಶಾವರೀ ನಗೀ ನಕ್ಕೋತs ಒಳಗ ಬಂದು ಬಿಟ್ಟತಲ್ಲಾ ಸ್ವಾರಿ! ಬಹಾಳ ಜಿರಕಿ ನೋಡು ಅಂವ! ಸಂವಿ ಸಂವಿ ಮಾತಾಡಿಕೋತs ನನ್ನ ಮರುಳಮಾಡಿ ಬಿಟ್ಟ. ಆ ಮರುಳಿನೊಳಗs ನಾನು ನನ್ನ ಸೂಟು ಬೂಟು ಕೊಡಲಿಕ್ಕೆ ಒಪ್ಪಿದೆ. ಅಂವ ಹೊರಟು ಹೋದಮ್ಯಾಲೆ ಅನಿಸಿತು: ನಾಯಾಕ ಕೊಟ್ಟೆನೋ ಅವನ್ಗs ಅಂತ; ಆದರ ಮಾತು ಮಿಂಚಿ ಹೋಗಿತ್ತು. ಮಾಡೂದೇನು ? "

ರಾಮಭಾವು ಹಿತಚಿಂತನೆಯ ಧ್ವನಿಯಲ್ಲಿ ಹೇಳಿದ :

" ನೀನು ತಪ್ಪು ಮಾಡಿದಿ ವೆಂಕಣ್ಣಾ ! ಆ ದೇಶಭಕ್ತ, ಪ್ರೋಲೀಸರ ಕಣ್ಣು ತಪ್ಪಿಸೂದರ ಸಲುವಾಗಿ, ವೇಷಾ ಬದಲಿಸಲಿಕ್ಕಂತs ನಿನ್ನ ಸೂಟು-ಬೂಟು ಒಯ್ದ್ಯಾನ! ತಿಳಿದ್ಹಾಂಗಾತು ! ಆ ಸೂಟು-ಬೂಟು ಹಾಕಿಕೊಂಡಿರುವಾಗs ಆತ ಪ್ರೋಲೀಸರ ಕೈಯೊಳಗ ಸಿಕ್ಕುಬಿಟ್ಟರ ಎಲ್ಲಾ ಕಠಿಣನs ಅದ! ಇಲ್ಲದ್ದs ವ್ಯಮ್ಯಾಲ ಬರೂ ಕೆಲಸ! ಆ ಸೂಟು-ಬೂಟು ಇಂಥವರವೂ ಅಂತ ಪತ್ತೀ ಹತ್ತಿದರ, ಪ್ರೋಲೀಸರು ನಿನಗೆಷ್ಟು ತ್ರಾಸ ಕೊಡಬಹುದಂಬೂದರ ಕಲ್ಪನಾ ನಿನಗ ಅದs ಏನು ವೆಂಕಣ್ಣಾ ! "

" ಅನಾಯಾಸ ನಾನೂ ದೇಶಭಕ್ತ ಆಗಿಬಿಡತೀನೇಳು ! ಅದರೊಳಗೇನದ ! ಆದರ ರತ್ನಾಕರ ಒಬ್ಬರನ್ನ ತಕ್ಕೊಂಡು ಬೀಳೂ ಮನಿಷಾ ಅಲ್ಲ ! ಮೊದಲಿಂದನೂ ಅವನ ಸ್ವಭಾವ ನನಗ ಗೊತ್ತದ. ಇಲ್ಲದ ಇಲ್ಲದ ನೀತೀ ಉಪದೇಶಾ ಮಾಡೂ ಹುಚ್ಚೊಂದನ್ನ ಬಿಟ್ಟರ, ಮತ್ತಾ ಏನೂ ತಗದು ಹಾಕುವಂಥಾವ ಅಲ್ಲ ! "

ಶೀನಪ್ಪ ಕೂಗಿ ಹೇಳಿದ.

" ನಿಲ್ಲಿಸರೋ ಇನ್ನ ನಿಮ್ಮ ಮಾತು ! ಚಹಾ ತಯಾರಾತು ನೋಡು ! ಎಕ್ಸ್‌ಲಂಟ್ ಚಹಾ! ತಾಜಾ ಹಾಲು, ಕೇಳೂದೇನದ ! ನೋಡು ಬಣ್ಣಾ ಹ್ಯಾಂಗ ಬಂದದ. ಕಾಂಗೋ ಚಹಾದ ವಾಸ್ನಿ, ಹಾಂಗs ಮೂಗಿನೊಳಗ ಏರಲಿಕ್ಕೆ ಹತ್ತೇದ ! "

ವೆಂಕಣ್ಣಾ ಪೇಡೆಯ ಪುಡಿಕೆಯೊಂದನ್ನು ಬಿಚ್ಚಿ ಒಂದು ತಟ್ಟೆಯೊಳಗೆ ಹಾಕಿ ಇಟ್ಟ. ಇನ್ನೊಂದು ತಟ್ಟೆಯಲ್ಲಿ, ಅಂಗಡಿಯಿಂದ ತಂದ ಕರಿದ ಅವಲಕ್ಕಿ-

ಯನ್ನು ಹಾಕಿ ತಂದಿರಿಸಿದ. ಸುತ್ತುವರಿದು ಎಲ್ಲರೂ ಕುಳಿತು ಪೇಡೆ ಅವ-ಲಕ್ಕಿಯ ಸಮಾಚಾರ ತೆಗೆದುಕೊಂಡರು. ಚಹದ ಕಪ್ಪುಗಳನ್ನೂ ಬರಿಯ-ವಾಗಿಸಿದರು. ಎಲ್ಲರೂ ಸಿಗಾರೆಟನ್ನು ಹೊತ್ತಿಸಿ ಹೊಗೆಯ ಹೊಳೆ ಹರಿಸ-ತೊಡಗಿದರು.

ಬಳವಂತ ಮತ್ತೆ ಮಾತನ್ನು ಆರಂಭಿಸಿದ:

"ರತ್ನಾಕರ ತೆಗೆದು ಹಾಕುವಂಥಾ ಮನಿಶಾ ಅಲ್ಲಾ ಅಂತೀ ವೆಂಕಣ್ಣಾ ನೀನು! ಮಳ್ಳ ಇದ್ದೀದಿ! ರತ್ನಾಕರ ಹನ್ನೆರಡು ಊರಿನ ನೀರು ಕುಡಿದ ಮನಿಶಾ! ಅಂವ ಮಾತಿನಿಂದ ಯಾರನ್ನ ಯಾವ ರೀತಿಂದ ಮರಳು ಮಾಡ್ಯಾನೂ ಅಂಬೂದರ ನೇಮಕ ಇಲ್ಲದ್ಹಾಂಗಾಗೇದ! ಇಲ್ಲದಿದ್ದರ, ಆ ಬ್ಯಾಂಕಿನ ಅನಂತ-ರಾಯರ ಮಗಳು-- ಶ್ರೀಮಂತರ ಹುಡುಗಿ--- ಆತನ ಬೆನ್ನು ಹತ್ತುತಿದ್ದಳ? ಈಗ ನಿನ್ನ ಸಲುವಾಗಿ ನಾನು ಅನಂತರಾಯರಿಗೆ ಬರೆದ ಪತ್ರಕ್ಕ, ಅವರಿಂದ ಉತ್ತರ ಕೂಡಾ ಬಂದಿಲ್ಲ. ಬರತ್ತದ ಹ್ಯಾಂಗ? ಉತ್ತರಾ ಬರೀಬೇಕಂತ ಅವರಿಗೆ ಮನಸ್ಸು ಇದ್ದರೂ, ಈ ದೇವಭಕ್ತ ಬರೀಗೊಡತಾನ ಹ್ಯಾಂಗ? ರತ್ನಾಕರ ಈಗ ಅವರ ಮನಿಯೊಳಗ ವ್ಯಾಪಿಸಿಬಿಟ್ಟಾನ. ಅವರ ಮನಿಗೆ ಹೋಗೂದೇನು, ಬರೂದೇನು---ಹಾಂಗs ಸಂಧಾನ ಹಚ್ಚಿಬಿಟ್ಟಾನ! ಇನ್ನ ಅವರಿಂದ ಏನಾದರೂ ಉತ್ತರ ಬಂದೀತು ಅಂತ ನಾವೇನೂ ಆಶಾ ಇಟ್ಟು-ಕೊಳ್ಳುವ ಹಾಂಗ ಇಲ್ಲೇನಪಾ!"

ವೆಂಕಣ್ಣ ಕೇಳಿದ:

"ರತ್ನಾಕರ ಅನಂತರಾಯರ ಮನಿಗೆ ಎಂದು ಹೋಗತಿರತಾನೋ ಬಳವಂತಾ! ನನಗೇನೂ ಗೊತ್ತಿಲ್ಲ ಬಿಡು!"

"ನಿನ್ನಿನ ದಿನಾನs ನಾನs ನನ್ನ ಕಣ್ಣಿಂದ ನೋಡೀನಿ! ಇನ್ನ ನೀ ಕುಮುದಾನ ಆಶಾ ಬಿಡೂದs ಒಳ್ಳೇದು! ಯಾಕೋ ಶೀನಪ್ಪಾ!"

"ನಿನ್ನ ಮಾತಿಗೆ ಹತ್ತುಸಾರೆ ಒಪ್ಪಿಗೀ ಕೊಡತೀನಿ! ನನಗ ಮೊದಲs ಅನಿಸತಿತ್ತು. ಕುಮುದಾಗ ಬೇಡಿಕೀ ಹಾಕೂದು ನಮ್ಮ ಅಳವು ಮೀರಿದ್ದೂ ಅಂತ!"

ಶೀನಪ್ಪ ಮಾತನಾಡಿದ ಕೂಡಲೆ ದತ್ತೂ ಹೇಳಿದ:

"ಹಾಂಗಾದರ ಲಗೂನೇ ಕನ್ಯಾ ಹುಡುಕಿ ವೆಂಕಣ್ಣನ ಲಗ್ನಾ ಮಾಡಿ ಬಿಡ್ರಿಲ್ಲಾ! ಪಾಪ! ಇತ್ತೀಚಿಗೆ ಇಂವಗ ಕನ್ಯಾನೇ ಬರದ್ಹಾಂಗ ಆಗ್ಯಾವ. ಇಂವಗರೆ ಲಗೂನ್ನ ಮದಿವೀ ಮಾಡಿಕೊಂಡು ಸಂಸಾರಾ ಹೂಡಬೇಕಂತ ಚಡಪಡಿಕಿ ಹತ್ತೇದ!"

ಶೀನಪ್ಪ ಹೇಳಿದ:

"ನನ್ನ ಮಾತು ಕೇಳಬೇಕಂದರ, ವೆಂಕಣ್ಣ ಆ ಗೋಪಾಲರಾಯರ ಮಗಳನ್ನ ಒಪ್ಪಿಗೋಬೇಕಾಗಿತ್ತು. ಇಂಗ್ಲಿಷ್ ಕಲೀದಿದ್ದರೂ ಏನಾತು! ಹುಡುಗಿ ಮಹಾಲಕ್ಷ್ಮೀ ಹಾಂಗ ಇದ್ದಾಳ. ಅಂಥಾ ಕನ್ಯಾ ಸಿಗೂದಂದರ ಅಪರೂಪ! ವೆಂಕಣ್ಣ ಹುಚ್ಚ; ಕೈಗೆ ಬಂದ ಕಡಬನ್ನ ಕಸದೊಳಗ ಚೆಲ್ಲಿ-ದ್ಹಾಂಗ ಮಾಡಿದ!"

ರಾಮುಭಾವೂ ಕೇಳಿದ:

"ಈಗಾದರೂ ಏನಾಗೇದ? ಆ ಹುಡುಗೀ ಮದಿವಿ ಆಗಿಬಿಟ್ಟೈತೇನು?"

"ಛೇ ಛೇ! ಇನ್ನೂ ಎಲ್ಲೀ ಮದಿವಿ! ಇನ್ನೂ ಯಾವ ವರನೂ ಕೂಡಿ ಬಂದಿಲ್ಲ. ಹುಡಿಗೀ ತಂದೀ-ತಾಯಿ, ಹಾಂಗೇ ಬಾಯಿಬಾಯಿ ಬಿಡಲಿಕ್ಕೆ ಹತ್ತ್ಯಾರ!" ಶೀನಪ್ಪ ಹೇಳಿದ.

"ಹಾಂಗಾದರ ವೆಂಕಣ್ಣನ ಸಲುವಾಗಿ ಇನ್ನೊಮ್ಮೆ ಹೋಗಿ ಬಿಡಬಾರ-ದ್ಯಾಕ? ಹ್ಯಾಂಗೂ ಅವರ ಒಪ್ಪಿಗಿ ಅದನೇ ಆದ!" ರಾಮುಭಾವು ನುಡಿದ.

"ಈಗ ನಾವೇ ಹೋಗಿ ಕೇಳಿದರ, ಆ ಕನ್ಯಾದ ತಂದಿ-ತಾಯಿ ಹಿರಿಹಿರಿ ಹಿಗ್ಗಬಹುದು. ಆದರ ಆಗ ದೊಡ್ಡಮಾರೀ ಮಾಡಿಕೊಂಡು ಬ್ಯಾಡಾ ಅಂತ ಹೇಳಿದವರು, ಈಗ ನಾವಾಗಿಯೇ ಅವರ ಕಡೆ ಹೋಗಿ ಕೇಳುವ ಬಗೀ ಹ್ಯಾಂಗ?" ಬಳವಂತ ಮಾತನಾಡಿದ.

"ವೆಂಕಣ್ಣ ಒಪ್ಪಿಗೀ ಕೊಡಲಿ! ಬೇಕಾದರ, ನಾನು ದತ್ತೂ ಕೂಡಿ ಗೋಪಾಲರಾಯರ ಹತ್ತರ ಹೋಗಿ, ಮಾತಾಡಿಕೊಂಡು ಬರತೀವಿ. ನಾವು ಕೇಳೂದಷ್ಟೇ ತಡ. ಅವರು ಒಪ್ಪೇ ಒಪ್ಪತಾರ! ಯಾಕೋ ದತ್ತೂ, ಏನಂತೀ ನೀನು?" ಶೀನಪ್ಪನೆಂದ.

"ಬೇಕಾದಾಗ ಕರಿ ಬರತೀನಿ! ಅದಕ್ಕೇನೋ ಕಲ್ಯಾಣ ಕಟ್ಟೋ ಕೆಲಸವಾ! ಒಳೆ ಅಂದಾರೇ ಯಾರರೆ! ಯಾಕೋ ವೆಂಕಣ್ಣಾ! ಏನಂತೀ?

ಹ್ಯಾಂಗೂ ನೀನು ಆ ಕನ್ಯಾನ್ನ ಕಣ್ಣಿಂದ ನೋಡೀದಿ! ಅದನ್ನ ಮಾಡಿಕೊಳ್ಳ-ಲಿಕ್ಕೆ ನಿನ್ನ ಒಪ್ಪಿಗಿ ಅದ ಏನು ?"

ವೆಂಕಣ್ಣಾ ಬಿಚ್ಚುಮನದಿಂದ ಹೇಳಲುತೊಡಗಿದ :

"ನಿಜವಾಗಿ ಹೇಳಲ್ಯಾ ದತ್ತೂ?ಆವೊತ್ತುಏನೋ ಒಂದು ಹುಚ್ಚಿನೊಳಗ ಬ್ಯಾಡ ಅಂತ ಹೇಳಿದೆ ಖರೆ! ಆದರ, ಆ ಹುಡುಗಿ ಅಂದss ನನ್ನ ಹೃದಯ-ದೊಳಗ ಮನೀಮಾಡಿ ಕೂತ್ಹಾಂಗ ಆಗೇದ. ನಿಮ್ಮ ಮುಂದ ಈ ಮಾತು ಹೇಳಲಿಕ್ಕೆ ಯಾಕೋ ನನಗ, ನಾಚಿಕಿ ಸಂಕೋಚ ಅನಿಸತಿತ್ತು. ಬಳವಂತ ಕುಮುದಾನ್ನ ಶಿಫಾರಸು ಮಾಡಿ, ಅವಳಿಗಾಗಿ ಪ್ರಯತ್ನ ಮಾಡೋಣ— ಅಂತ ಅಂದ. ಏನೇನಾಗತsದೋ ನೋಡೋಣಾ ಅಂತ ನಾನು ಸುಮ್ಮನೆ ಇದ್ದುಬಿಟ್ಟಿದ್ದೆ. ಕುಮುದಾ ನನಗ ದಕ್ಕೊ ಹುಡುಗಿ ಅಲ್ಲಾ ಅಂತ ನನಗ ಎಂದೋ ಅನಿಸಿತ್ತು. ಆದರ, ಬಳವಂತಗ ಏನು ವಿಶ್ವಾಸ ಅನಿಸಿತೋ ಏನೋ, ಪ್ರಯತ್ನ ಮಾಡಿದ. ಫಲಾ ಏನೂ ಸಿಗಲಿಲ್ಲ!"

"ನೀ ಹಾಂಗ ಅನಬ್ಯಾಡ ವೆಂಕಣ್ಣಾ! ಈ ಬಳವಂತ ಕೈತೊಳಕೊಂಡು ಬೆನ್ನು ಹತ್ತಿದರ, ಯಾವ ಕೆಲಸ ಹ್ಯಾಂಗ ಸಾಧಿಸದss ಇರತsದಂಬೂದನ್ನ ನೋಡತೀ ಏನು ? ಆದರ ಇದು ಮದಿವೀ ಕೆಲಸ ಏನಪಾ! ನಾಳೆ ನಿನ್ನ ಸಂಸಾರ ಒಳ್ಳೇ ರೀತಿಂದ ನಡದು ನೀ ಸುಖದಿಂದ ಬಾಳಬೇಕು. ನನ್ನ ಹಟಾ ಸಾಧಿಸಬೇಕಂದರ, ನಾ ಬೇಕಾದ್ದು ಮಾಡಿ ಬಿಡುವವ! ಈಗ ಅದನ್ನ ತೊಗೊಂಡು ಏನು ಮಾಡೂದದ ? ನೀನು ಆ ಗೋಪಾಲರಾಯರ ಮಗಳನ್ನ ಮಾಡಿಕೋತೀ ಹೌದಲ್ಲೋ? ಮನಸಿನಿಂದss ಒಪ್ಪತೀಯಾ ಇದನ್ನ ?"

"ಹೂಂ! ಮನಸಾರೆ ಒಪ್ಪತೀನಿ!"

"ಹಾಂಗಾದರ ಶೀನಪ್ಪಾ, ದತ್ತೂ, ಇನ್ನ ತಡಾಮಾಡಬ್ಯಾಡ್ರಿ! ಇಂದss ನೀವು ಗೋಪಾಲರಾಯರ ಮನಿಗೆ ಹೋಗಿ ಮಾತಾಡಿಕೊಂಡು ಬರ್ರಿ! ಶುಭಸ್ಯ ಶೀಘ್ರಂ! ಇಂದ ಮಾತಾಡಿಕೊಂಡು ಬರ್ರಿ! ಒಂದು ಹೆಚ್ಚು, ಒಂದು ಕಡಿಮಿ, ಬ್ಯಾಗನss ನಿಶ್ಚಯ ಮಾಡಿ ಮದಿವೀ ಕೆಲಸಾ ಮುಗಿಸಿ ಬಿಡೂಣಂತ! ವೆಂಕಣ್ಣಾಗ ಒಂದೇ ತಾಯಿಯಾ ಹೊಟ್ಟೆಯಿಂದ ಹುಟ್ಟಿದ ಅಣ್ಣಾ ಇದ್ದರೂ, ಅವನ ಪಾಲಿಗೆ ಇಲ್ಲದ್ಹಾಂಗಾಗೇದ. ನಾವೇ ಅಣ್ಣಾ-ತಮ್ಮರಾಗಿ ನಿಂತು, ಅವನ

ಸಂಸಾರಾ ಹೊಡಿಕೊಡಬೇಕಾಗೇದ ಹೋಗತೀಯಾ ಶೀನಪ್ಪಾ ಇಂದ ಸಂಜೀಕಡೇನs ? "

"ಅಗತ್ಯ ಹೋಗಿ ಬರತೀನಿ! ದತ್ತ್ಯಾ, ನೀ ನಿನ್ನ ಕಚೇರೀ ಕೆಲಸಾ ಮುಗಿಸಿಕೊಂಡು, ನಮ್ಮ ಆಫೀಸಿನ ಕಡೆ ಬಂದು ಬಿಡು! ಇಬ್ಬರೂ ಕೂಡಿ ಪರಭಾರೆ, ಗೋಪಾಲರಾಯರ ಮನಿಗೆ ಹೋಗಿಬರೋಣ! ಇಲ್ಲಿ ನೋಡು! ಗೋಪಾಲರಾಯರ ಮನೆಯೊಳಗೂ ಸೊಗಸಾದ ಚಹಾ ಸಿಗತsದ! ನೀನು ಅದಕ್ಕೇನೂ ಕಾಳಜೀ ಮಾಡಬ್ಯಾಡ! "

ರಾಮಭಾವೂ ಹೇಳಿದ :

"ಶೀನಪ್ಪಾ, ಇಂದ ನಿನಗ ನಿನ್ನ ಎರಡು ರೂಪಾಯಿ ಮಾಫ್ ಮಾಡೀನಿ! ಇಂಥಾ ಜವಾಬ್‌ದಾರೀ ಕೆಲಸಾ ವ್ಯಾಮ್ಯಾಲ ಹೊತ್ತುಕೊಂಡೀದೀ ಅಂದ ಮ್ಯಾಲ, ನನ್ನ ಖುಷಿಂದ ನಾನು ಬಿಟ್ಟುಬಿಡತೀನಿ! ಹೋಗಿ ಬಾ! ದತ್ತ್ಯಾ, ಎಲ್ಲಿ ಹೋದರೂ ಅಗಡದತ್ತ ನೀನು! ವೆಂಕಣ್ಣಾನ ಹೋಳಿಗೀ ಗಟ್ಟಿ ಮಾಡಿಕೊಂಡs ಬರಬೇಕು, ತಿಳೀತೇನು ? "

ವೆಂಕಣ್ಣನಿಗೆ ಏನೋ ಒಂದು ಬಗೆಯ ಉಲ್ಲಾಸ. ಅವನಿಗೆ ಗಂಧರ್ವ-ನಾಟಕದಲ್ಲಿಯ ಹಾಡನ್ನು ಹಾಡಬೇಕೆಂದಿನಿಸಿತು; ಮತ್ತೊಂದು ಸಲ ಚಹ ಮಾಡಲಿಕ್ಕೆಂದು ತಾನೇ ಎದ್ದು ಸ್ಟೋವ್ ಹೊತ್ತಿಸಿದ. ಸ್ಟೋವಿನ ಭರ್ರೆಂಬ ಸಪ್ಪಳದೊಂದಿಗೆ ಹಾಡಲು ತೊಡಗಿದ.

"ಪ್ರೇಮ ನಚ ಜಾಯಿಾ—ಜೇಥೇ
ಜೀವಾಸಿ ಜೀವ ನಜಡೇ—ತೇಥೇ! "

## ೧೪ನೆಯ ಪರಿಚ್ಛೇದ

ಗೋಪಾಲರಾಯರು ಐದುಗಂಟೆಗೆ ಸರಿಯಾಗಿ ಕಚೇರಿಯಿಂದ ಮನೆಗೆ ಬಂದರು. ಪ್ರತಿದಿನಕ್ಕಿಂತ ಅರ್ಧ ತಾಸು ಮೊದಲು. ಅದಾವ ಕಾರಣ-ದಿಂದಲೊ ಮುಖದ ಮೇಲೆ ಸಮಾಧಾನ ಭಾವದ ನಗೆಮುಗುಳು ಅರಳಿದ್ದಿತು. ಬೇಗನೆ ಮನೆಗೆ ಬಂದುದರಿಂದ ಮನೆಯಲ್ಲಿ ಎಲ್ಲರಿಗೂ ಆತುರ, ಆಶ್ಚರ್ಯ. ವಿಶೇಷ ಕಾರಣವಿಲ್ಲದೆ ಗೋಪಾಲರಾಯರು ಬೇಗನೆ ಮನೆಗೆ ಬರುವವರಲ್ಲ. ಪ್ರಕೃತಿಯ ಅಸ್ವಾಸ್ಥ್ಯದ ಮೂಲಕ ಬಂದರೆನ್ನಬೇಕೆ ? ಮುಖದ ಮೇಲೆ ಪ್ರತಿ

ದಿನಕ್ಕಿಂತ ಗೆಲವಿನ ಕಳೆ ಆಟವಾಡುತ್ತಿದ್ದಿತು. ವೇಣಕ್ಕ ಕುತೂಹಲದಿಂದ ಅವರ ಮುಖದ ಕಡೆಗೆ ನೋಡಲು ತೊಡಗಿದರು. ಕಾವೇರಿ ಕೇಳಿಯೆಬಿಟ್ಟಳು:

" ಇದೇನು ಅಣ್ಣಾ ! ಇಂದ ಐದು ಹೊಡಿಯೂದರೊಳಗs ಮನಿಗೆ ಬಂದಿರಿ ? ಕಚೇರಿ ಇಂದ ಲಗೂನs ಬಿಟ್ಟಿತೋ ಏನು ? "

ನಗೆಯಾಟದ ಧ್ವನಿಯಲ್ಲಿ ಗೋಪಾಲರಾಯರು ಹೇಳಿದರು :

" ಕಚೇರಿ ಏನೂ ಲಗೂನs ಬಿಟ್ಟಿಲ್ಲ; ನಾನೇ ಕಚೇರೀ ಲಗೂನs ಬಿಟ್ಟೇನಿ ! ಇಂದ ನಾ ಕಚೇರೀ ಒಳಗ ಕೂತುಕೊಂಡಾಗ, ಒಮ್ಮಿದೊಮ್ಮೆಲೇ ಒಂದು ಚೀಟಿ ಬಂದುಬಿಟ್ಟಿತು. ಅದು ಬಂದಕೂಡಲೇ ಘಾಬರೀನೇ ಆಗಿಬಿಟ್ಟಿ. ಪೋಲೀಸರು ರತ್ನಾಕರನನ್ನ ಎಲ್ಲಾ ಕಡೇನೂ ತಪಾಸ್ ಮಾಡಲಿಕ್ಕೆ ಹತ್ತ್ಯಾರಂತ. ಚೀಟೀ ಬಿಚ್ಚಿ ಓದಿ ನೋಡಿದೆ. ಘಾಬರೆಲ್ಲಾ ಹೋಗಿ ಮನಸಿಗೆ ಸಂತೋಷ ಅನಿಸಿತು. ಏನೋ, ದೈವ ಸ್ವಲ್ಪ ನಮ್ಮ ಕಡೆ ಕಣ್ಣು ತಿರಿಗಿಸಿದ್ಹಾಂಗ ಕಾಣಿಸತsದ ಕಾವೇರಿ ! "

" ಚೀಟಿ ಯಾರ ಕಡಿಂದ ಬಂದಿತ್ತು ? ಅದರೊಳಗ ಯಾರು ಏನು ಬರದಾರ ? "

" ಆ ದಿನಾ ನಿನ್ನ ನೋಡಲಿಕ್ಕೆ ಬಂದಿದ್ದರಲಾ : ರಾಮದುರ್ಗದ ಹತ್ತಿರದ ಹಳ್ಳಿ—ಮುದ್ದಾಪುರದ ವೆಂಕಣ್ಣ ಅಂತ ! ಆತ ನಿನ್ನ ಮಾಡಿಕೊಳಲಿಕ್ಕೆ ಸಂತೋಷದಿಂದ ಒಪ್ಪಿಗೀ ಕೊಟ್ಟಾನಂತ. ಅದಕ್ಕಾಗಿ ಅವರ ಸ್ನೇಹಿತರಿಬ್ಬರು ಮಾತು-ಕಥೀ ಆಡಿಕೊಂಡು ಹೋಗಲಿಕ್ಕಂತ, ಇಂದ ಐದುವರಿ ಗಂಟಗೇ ಮನೀಕಡೆ ಬರತೀವಿ—ಅಂತ ಚೀಟಿಯೊಳಗ ಬರೆದಾರ. ಅದಕ್ಕs ನಾನು ಸಾಹೇಬರಿಗೆ ಹೇಳಿಕೊಂಡು, ಅರ್ಧಾ ತಾಸು ಮೊದಲs ಹೊರಟು ಬಂದುಬಿಟ್ಟಿ. "

ತಂದೆಯ ಮಾತಿನಿಂದ ಕಾವೇರಿಗೆ ಸಮಾಧಾನವಾದಂತೆ ಎನಿಸಲಿಲ್ಲ. ಎದೆಗೆ ಬಲವಾದ ಆಘಾತವಾದಂತಾಗಿ ತಲೆ ತಿರುಗಲು ತೊಡಗಿತು. ಮುಖದ ಕಳೆ ಸಪ್ಪಗಾಯಿತು. ಅಂಟು-ಅಂಟಾದ ನಾಲಗೆಯಿಂದಲೇ ಕಾವೇರಿ ಮೆಲ್ಲಗೆ ಕೂಗಿದಳು : " ಅವ್ವಾ, ಅವ್ವಾ ! "

ಒಳಗೆ ಹೋಗಿದ್ದ ವೇಣಕ್ಕ ಹೊರಗೆ ಮತ್ತೆ ಬಂದು ಕೇಳಿದರು :

" ಯಾಕs ಕಾವೇರೀ ? ಕೂಗಿದಿ ಯಾಕ ? "

ಒಣಗಿದ ಕಂಠದಲ್ಲಿಯೇ ಕಾವೇರಿ ಹೇಳಿದಳು :

"ಅಣ್ಣಾ ಏನೋ ಅಂತಾರ ನೋಡು!"

ವೇಣಕ್ಕ ಗಾಬರಿ-ಬೆರಗುಗಳಿಂದ ಕೇಳಿದರು :

"ಏನದು ? ಕಾವೇರಿ ಕೂಗಿದಳ್ಯಾಕ ನನ್ನ ?"

ಗೋಪಾಲರಾಯರು ಮೆಲುನಗೆ ನಗುತ್ತ ಹೇಳಿದರು :

"ಇನ್ನೇನೂ ಇಲ್ಲ! ನೀ ಇನ್ನ ಅಳಿಯನ ಮಾರೀ ಲಗೂನs ನೋಡತೀ ಅಂತ!"

"ಅಂದರ? ಇಂದ ಬೆಳಗಿನ ಮೋಟಾರಿಗೇ ಹೋದ ರತ್ನಾಕರರಾಯ, ಇಷ್ಟರೊಳಗs ತಿರಿಗಿ ಬಂದು ಬಿಟ್ಟನೇನು ? ಏನೇನಂತ ಸಮಾಚಾರ?"

"ನೀ ಒಬ್ಬಾಕಿ ಹುಚ್ಚಿಯೇ ಇದ್ದೀ ನೋಡು! ರತ್ನಾಕರ ಇಷ್ಟ-ರೊಳಗs ತಿರಿಗಿ ಬರತಾನ ಹ್ಯಾಂಗ? ಏನು ತಿರಿಗಿ ಬರತಾನೋ, ಅಲ್ಲೇ ಎಲ್ಲಿಯಾದರೂ ಪೋಲೀಸರ ಕೈಗೆ ಸಿಕ್ಕುಬಿಡತಾನೋ! ಈಗ ನಾ ಹೇಳುವ ಅಳಿಯ ಬ್ಯಾರೇ! ಆ ದಿನಾ ಕಾವೇರಿನ್ನ ನೋಡಲಿಕ್ಕೆ ಬಂದು, ಅಂದು ಒಪ್ಪಿ-ಕೊಳ್ಳದ ಹೋಗಿದ್ದನಲಾ.... ವೆಂಕಣ್ಣ—ಅಂತ! ಆತ ಈಗ ಕಾವೇರಿನ್ನ ಮಾಡಿಕೊಳ್ಳಲಿಕ್ಕೆ ಒಪ್ಪಿಗೀ ಕೊಟ್ಟಾನಂತ! ಅದರ ಸಲುವಾಗಿ ಮಾತು-ಕಥೀ ಆಡಲಿಕ್ಕಂತ, ಈಗ ಐದುವರೆ ಗಂಟೇಕ್ಕ, ಆತನ ಸ್ನೇಹಿತರಿಬ್ಬರು ಬರುವರು ಇದ್ದಾರಂತ! ನೀ ಸ್ವಲ್ಪ ಚಹಾ-ಕಾಫೀ ಏನಾದರೂ ಸಿದ್ಧತಾ ಮಾಡಿ ಇಡು."

ವೇಣಕ್ಕ ಸಹನೆಯಿಲ್ಲದ ಧ್ವನಿಯಲ್ಲಿಯೆ ಕೇಳಿದರು :

"ಅಲ್ಲಾ! ಇದೇನು ಹುಡುಗಾಟಾ ಅಂತ ಕೇಳತೀನಿ ನಾನು! ನಾವು ಒಂದೇ ಸವನೇ ಗಂಟುಬಿದ್ದಲ್ಲೆ ರತ್ನಾಕರರಾಯ, ತನ್ನೆಲ್ಲಾ ಕೆಲಸಾ ಬಿಟ್ಟು, ಮುಂಬಯಿ ಹೊರಟು ಹೋಗ್ಯಾನ! 'ನಾ ಎಲ್ಲಾ ಒಪ್ಪಿಸಿಗೊಂಡು ಬರತೀನಿ; ನೀವು ಯಾವ ಚಿಂತೀನೂ ಮಾಡಬ್ಯಾಡ್ರೀ' ಅಂತ ಆಶ್ವಾಸನಾ ಕೊಟ್ಟಾಂಗs ಹೇಳಿ ಹೋಗ್ಯಾನ. ಈಗ ಇವರು ಬರತಾರಂತೀರಿ! ಇವರ ಜೋಡೀ ಏನು ಮಾತಾಡುವವರು ನೀವು ?"

ಗೋಪಾಲರಾಯರು ಮೆಲ್ಲಗೆ ಹೇಳಲು ತೊಡಗಿದರು :

"ಏನು ಮಾತಾಡುವವರೂ—ಅಂದರ ? ವರದಕ್ಷಿಣಿ, ವರೋಪಚಾರ, ಮದಿವಿ, ಮುಹೂರ್ತ, ಇವನ್ನs ಮಾತಾಡೂದು! ಇನ್ನೇನು ಮಾತಾಡತಾರ?"

"ಮತ್ತ ಅಲ್ಲಿ ರತ್ನಾಕರರಾಯ ಒಪ್ಪಿಕೊಂಡು ಬಂದರ? ಅವರಿಗೇನು ಹೇಳಬೇಕಂತೀರಿ?"

"ನೋಡು, ಮಳೀ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿರಿ—ಅಂತ ಹೇಳೂ ಮಾತು ನಿಂದು! ರತ್ನಾಕರರಾಯನ ಮಾತಿಗೆ ಅವರು ಒಪ್ಪಿಕೊಳ್ಳಲಿಲ್ಲಾ—ಅನ್ನು; ಆಗ ಏನು ಮಾಡತೀ ನೀನು?"

"ಒಪ್ಪಿಕೊಂಡರು ಅನ್ರಿ: ಆಗ ನೀವು ಏನು ಮಾಡತೀರಿ?"

"ಸುಮ್ಮನsss ಮಾತಿಗೆ ಮಾತು ಎದುರು ಒಡ್ಡಿ ವಾದಾ ಹಾಕಬ್ಯಾಡ! ಅವರು ಬರೂ ಹೊತ್ತು ಆತು! ಲಗೂನsss ಹೋಗಿನ್ನ ಒಳಗ!"

ಕಾವೇರಿಯ ಕಣ್ಣಿಂದ ಕಂಬನಿಯು ಕೋಡಿಯೊಡೆಯಿತು. ಅಳುವೂ ಬಂದುಬಿಟ್ಟಿತು. ಅಳುವಿನೊಂದಿಗೇ ಹೇಳಿದಳು:

"ಅವರು ಬಂದು ಏನಂಬೂದನ್ನ ಹೇಳೂತನಕಾ....ಅಣ್ಣಾ, ನೀವು ಈಗ ಯಾವ ಮಾತೂ ಮಾತಾಡಬ್ಯಾಡ್ರಿ! ರತ್ನಾಕರರಾಯ...." ಎಂದು ಏನೋ ಹೇಳುತ್ತಿರುವಾಗಲೇ, ಮನೆಯ ಮುಂದೆ ಟಾಂಗಾ ಬಂದು ನಿಂತ ಸಪ್ಪಳವಾಯಿತು. ತಾಯಿ-ಮಗಳು ತಟ್ಟನೆ ಒಳಗೆ ಹೊರಟು ಹೋದರು. ಗೋಪಾಲರಾಯರಿಗೆ ದಿಗ್ಭ್ರಮೆಯಾದಂತಾಯಿತು. ಟಾಂಗಾದಿಂದ ಇಳಿದು ಒಳಗೆ ಬರುತ್ತಿರುವ ಅತಿಥಿಗಳನ್ನು ಕರೆದು ಸ್ವಾಗತಿಸಬೇಕೆಂಬುದೂ ಅವರಿಗೆ ಮರೆತು ಹೋಯಿತು ಶೀನಪ್ಪ, ದತ್ತೂ ಇಬ್ಬರೂ ನೇರವಾಗಿ ರಾಯರು ಕುಳಿತಲ್ಲಿಗೆ ಬಂದುಬಿಟ್ಟರು. ಆಗ ಹುಚ್ಚು-ಪೆಚ್ಚಾದ ಮುಖದಿಂದ ರಾಯರು ಎದ್ದು ನಿಂತು ಗಾಬರಿಯ ಧ್ವನಿಯಲ್ಲಿ ಹೇಳಿದರು:

"ಓ! ಬರ್ರಿ ಬರ್ರಿ! ನಾನು....ನಾನು ಇದೇ ಈಗ ಕಚೇರಿಯಿಂದ ಬಂದೆ! ಬರ್ರಿ, ಕೂತುಕೊಳ್ರಿ!"

ಇಬ್ಬರೂ ಕುರ್ಚಿಯ ಮೇಲೆ ಕುಳಿತುಕೊಂಡರು. ತಾವು ಎಲ್ಲಿ ಕುಳಿತುಕೊಳ್ಳಬೇಕೆಂಬ ವಿಚಾರದಲ್ಲಿ ಗೋಪಾಲರಾಯರು ಗೊಂದಲಗೆಟ್ಟಿರುವಾಗಲೆ, ವೇಣಕ್ಕ ಒಳಗಿಂದ ಜಮುಖಾನೆಯೊಂದನ್ನು ತಂದು ಪಡಸಾಲೆಯಲ್ಲಿ ಹಾಸಿದರು. ಗೋಪಾಲರಾಯರು ಅದರ ಮೇಲೆ ಕುಳಿತುಕೊಳ್ಳುತ್ತ ಹೇಳಿದರು:

" ನೀವು ಬರುವ ಸಂಗತಿ ಮನ್ಯಾಗ ಮೊದಲಽ ಗೊತ್ತು ಆಗಿರಲಿಲ್ಲ. ನನಗೂ ಬರಲಿಕ್ಕೆ ಸ್ವಲ್ಪ ತಡಾನಽ ಆಯ್ತು! ಅದಕ್ಕ ಮನ್ಯಾಗ ಯಾವ ಪೂರ್ವಸಿದ್ಧತಾ ಮಾಡಲಿಕ್ಕೂ ಆಗಿಲ್ಲ! ಕ್ಷಮಿಸಬೇಕು!"

ಶೀನಪ್ಪ ಮಾತನಾಡಿದ :

" ಪೂರ್ವಸಿದ್ಧತಾ ಈಗ ಏನು ಬೇಕಾಗೇದ ರಾಯರ? ಆಗಬೇಕಾದ ಕಾರ್ಯದ ಮಾತು ಮುಖ್ಯ! ಈಗ ಆ ಮಾತು-ಕಥೀ ಆಡಿ ಮುಗಿಸಿ ಬಿಟ್ಟರ ಆತು! ಇನ್ನೇನೂ ಬೇಕಾಗಿಲ್ಲ! ಯಾಕೋ ದತ್ತಪ್ಪಾ!"

" ಆಹಾ! ಅದಕ್ಕೂ ಹೆಚ್ಚಿಂದು ಬೇಕಾಗೇದೇನು ನಮಗ!" ದತ್ತು ನುಡಿದ!

ಆಗ ಗೋಪಾಲರಾಯರು ಗಂಟಲನ್ನು ಹಸಿಮಾಡಿಕೊಳ್ಳುತ್ತ ಹೇಳಿದರು:

"ಈಗ ಮಾತು-ಕಥೀನೂ ಮುಂದುವರಿಸಲಿಕ್ಕೆ ಬರದ್ಹಾಂಗ, ಬಿಕ್ಕಟ್ಟು ಬಂದು ಕೂತಽದ! ಅಂದೇ ನಿಮ್ಮ ವೆಂಕಣ್ಣಾ ಒಪ್ಪಿಕೊಂಡು ಬಿಟ್ಟಿದ್ದರ, ನಮಗ ಯಾವ ತೊಂದರಿಯೂ ಇರತಿದ್ದಿಲ್ಲ!"

ಆತುರಧ್ವನಿಯಲ್ಲಿ ದತ್ತೂ ಕೇಳಿದ :

" ಅಂದರ? ಈಗ ಮತ್ತ್ಯಾರಾದರೂ ಬಂದು ಕನ್ಯಾ ನೋಡಿ, ಒಪ್ಪಿ-ಕೊಂಡು ಹೋಗ್ಯಾರ ಏನು?"

" ಹುಂ, ಅಂದರ.... ಹುಂ! ಇನ್ನೂ ಪೂರ್ಣ ಒಪ್ಪಿಕೊಂಡಿಲ್ಲಾ ಅನ್ರಿ! ಆದರ ಒಂದು ರೀತಿಂದಽ ಒಪ್ಪಿಕೊಂಡ್ಹಾಂಗಽ ಆಗೇದ!"

ಶೀನಪ್ಪ ಕೇಳಿದ :

" ವರಾ ಎಲ್ಲೀದು? ಯಾವ ಊರಿನವು? ಈಗ ಮಾತು-ಕಥೀ ನಡದಽದೇನು?"

" ಹುಂ! ಅವನ್ನ ಮಾತು-ಕಥೀ ಆಡೀ ಮುಗಿಸಿಕೊಂಡು ಬರಬೇಕಂತಽ ರತ್ನಾಕರರಾಯರು, ಇಂದ ಬೆಳಗಿನ ಮೋಟಾರಿನಿಂದಽ ಹೊರಟು ಹೋಗ್ಯಾರ! ಇಂದ ಹೋಗೂ ಮುಂದ, ಅವರು ನಮ್ಮ ಮನಿಗೆ ಬಂದು ಭೆಟ್ಟೀ ಆಗೇ ಹೋದರು! ನಿಮ್ಮ ವೆಂಕಣ್ಣಾನ ವಿಷಯ ನನಗ ಸ್ವಲ್ಪ ಮೊದಲಽ ಗೊತ್ತು ಆಗಿದ್ದರ, ರತ್ನಾಕರರಾಯರಿಗೆ ಹೋಗಬ್ಯಾಡ್ರೀ ಅಂತ ಸ್ಪಷ್ಟವಾಗಿ ಹೇಳಿ ಬಿಡತಿದ್ದೆ!"

ಶೀನಪ್ಪ ಕುತೂಹಲಧ್ವನಿಯಲ್ಲಿ ಕೇಳಿದ :

" ಹುಂ ಹುಂ ! ಹಾಂಗಾದರ, ರತ್ನಾಕರ ನಿಮ್ಮ ಕೆಲಸಕ್ಕಂತ ಹೋಗ್ಯಾನೇನು ? ಇಲ್ಲಿ ಅವನ್ನ ಪೋಲೀಸರು ಹಿಡಿದು ಹಾಕಬೇಕಂತ, ಒಂದs ಸವನs ಹುಡುಕಲಿಕ್ಕೆ ಹತ್ತ್ಯಾರಲಾ ! "

ಗೋಪಾಲರಾಯರು ಬೆದರುದನಿಯಲ್ಲಿ ಹೇಳಿದರು :

" ಹೌದು ! ನಾನೂ ಕೇಳೇನಿ ಈ ಮಾತು ! ರತ್ನಾಕರರಾಯರು ಹೊರಟು ಹೋದ ಮ್ಯಾಲ ನನಗ ಈ ಸಂಗತಿ ಗೊತ್ತಾತು ! "

" ಹಾಂ ಹಾಂ ! ಹೀಂಗೇನು ? ರತ್ನಾಕರ ಯಾವ ಊರಿಗೆ ಹೋಗ್ಯಾನ? ವರ ಯಾರು ? "

" ಊರs ? ಮುಪ್ಪಾಪುರಕ್ಕ ಹೋಗ್ಯಾರ ! ಅಲ್ಲೇನೋ ನಿಮ್ಮ ಈ ವೆಂಕಣ್ಣನ ಅಣ್ಣ ಒಬ್ಬರು ಇದ್ದಾರಂತ ! ರತ್ನಾಕರರಾಯರು ಅವರನ್ನ ಭಾಳ ಸಿಫಾರಸು ಮಾಡಿ ಹೇಳ್ಯಾರ ! ಮುನ್ಯಾಗ ಹೆಂಗಸರಿಗೂ ಅವರ ಸಿಫಾರಸು ಒಪ್ಪಿಗಿ ಆದ್ಹಾಂಗs ಕಾಣಿಸತದ ! ನಮ್ಮ ಮುಗಳು ಕಾವೇರಿ ಸುದ್ಧಾ, ಆ ವರನ್ನ—ಹಳ್ಳಿಯೂರವನಾದರೂ— ಮಾಡಿಕೋತೀನಿ ಅಂತ ಒಪ್ಪಿಗೀ ಕೊಟ್ಟ್ಯಾಳ ! ಈಗ ರತ್ನಾಕರರಾಯರು ಹೋಗ್ಯಾರ ! ಆ ವರನ ಒಪ್ಪಿಗೀ ಪಡೆದುಕೊಂಡು ಬಂದು ಬಿಟ್ಟರ, ಮುಂದ ನಾವೂ ನೀವೂ ಮಾತು-ಕಥೀ ನಡಿಸೂ ಕಾರಣs ಇಲ್ಲಾ— ಅನ್ನೂ ಹಾಂಗ ಅದ ಪರಿಸ್ಥಿತಿ ! ಏನs ಅನ್ರಿ ! ವೆಂಕಣ್ಣ ಅದೇ ದಿವಸ ಒಪ್ಪಿಗೀ ಕೊಟ್ಟು ಬಿಟ್ಟಿದ್ದರ ಭಾಳ ಚೆಲೋ ಆಗತಿತ್ತು ! ನಮಗ, ಇಂಥಾ ಬಿಕ್ಕಟ್ಟಿನ ಪ್ರಸಂಗದೊಳಗ ಸಿಗೂ ಕಾರಣವೇ ಬೀಳತಿರಲಿಲ್ಲ ! "

ದತ್ತೂ ಹೇಳಿದ :

" ನಿಮ್ಮ ಮಾತೂ ಸರಿ ಅನ್ರಿ ! ಆದರ ಈಗ ಮತ್ತೇನಾದರೂ ಪುನರ್ವಿಚಾರ ಮಾಡಲಕ್ಕೆ ಸಾಧ್ಯ ಇದ್ದರ ನೋಡ್ರಿ ! "

" ನನ್ನ ಮನಸಂದರ ನೋಡ್ರಿ ರಾಯರ ! ನಮ್ಮಂತವರಿಗೆ ವೆಂಕಣ್ಣನಂಥಾ ಸರಕಾರೀ ನೌಕರೀ ಅಳಿಯ ಸಿಕ್ಕರನs ಎಲ್ಲಾ ಅನುಕೂಲತಾ ಆಗತ್ಯದ ! ಈ ದೇಶಭಕ್ತೀ ಮಾಡಿಕೋತs ತಿರುಗಾಡುವವರದು ಏನು ನೇಮ ? ಅವರದು ಒಂದು ಕಾಲು ಹೊರಗ, ಇನ್ನೊಂದು ಕಾಲು ತುರಂಗ-

ದೊಳಗ! ಇಂಥವರಿಗೆ ಕೊಟ್ಟರ, ನಮ್ಮ ಕಾವೇರೀ ಜನ್ಮ ಹ್ಯಾಂಗ ಸುಖ-ದ್ದಾದೀತು—ಅಂತ ನನಗ ಅನಿಸತ್ಯದ! ಆದರ ನಮ್ಮ ಹೆಂಗಸರೂ ಅಂದರ ತೀರಾ ಭಾವನಾತ್ಮಕ ಜನಾ ಇರತಾರ! ಒಮ್ಮೆ ಯಾವದಾದರೂ ಮಾತನ್ನ ಒಪ್ಪಿಕೊಂಡು ಬಿಟ್ಟರ, ಗಟ್ಟಿಮುಟ್ಟಾಗಿ ಅದಕ್ಕs ತೆಕ್ಕಿಬಿದ್ದು ಬಿಡತಾರ! ಇದರೊಳಗ, ನಮ್ಮಂಥವರಿಗೆ ಏನಾದರೂ ಮಾತಾಡೂದೂ ಅಂದರ, ಕಠಿಣ ಪ್ರಸಂಗs ಬರತ್ಯದ! ಒಂದು ಮಾತು ನಿಮಗ. ಹೇಳೂದಂದರ : ನಿಮ್ಮ ವೆಂಕಣ್ಣನ ಅಣ್ಣ ಕಾವೇರಿನ್ನ ಮಾಡಿಕೊಳಲಿಕ್ಕೆ ಒಪ್ಪಿಗೀ ಕೊಟ್ಟಾ—ನಿರ್ವಾಹವೇ ಇಲ್ಲ; ಇನ್ನ ಒಪ್ಪಿಗೀ ಕೊಡದೇ ಹೋದರ, ನಾ ನಿಮ್ಮನ್ನ ಅವಶ್ಯವಾಗಿ ಕರಿಸಿ ಹೇಳತೀನಿ! ಆಗ ವೆಂಕಣ್ಣಗ ಕಾವೇರಿನ್ನ ಕೊಡುವ ವಿಚಾರದ ಮಾತನ್ನ ಮುಂದುವರಿಸೂಣಂತ! ಗೊತ್ತಾತೇನು ದತ್ತುರಾವ್ ? ತಿಳೀತೇನು ಶೀನಪ್ಪಾ ! ”

ಶೀನಪ್ಪ ನಿರಾಶೆ-ಆಶೆಗಳ ತೂಗಾಟದ ಧ್ವನಿಯಲ್ಲಿ ಹೇಳಿದ :

“ ಎಲ್ಲಾ ತಿಳಿದ್ಹಾಂಗಾತು ! ಈಗೇನು ಮಾಡೂದು ? ಬಂದ ಹಾದಿಗೆ ಸುಂಕ ಏನೂ ಸಿಗಲಿಲ್ಲ. ಆಗಲಿ, ನಾ ಹೋಗಿ ಈ ವಿಷಯ ಎಲ್ಲಾ ವೆಂಕಣ್ಣಗ ತಿಳಿಸತೀನಿ! ಮುಂದಿನ ಮಾತು ಮುಂದ ! ದೇವರು ಇದ್ದಾನ! ವೆಂಕಣ್ಣ-ಕಾವೇರಿ ಇವರದು ಲಗ್ನ ಆಗಲೇಬೇಕಂತ ಈಶ್ವರೀ ಸಂಕೇತ ಇದ್ದುಬಿಟ್ಟ-ದ್ದರ, ನೀವೇನು ಮಾಡತೀರಿ ? ನಾ ಏನು ಮಾಡತೀನಿ ? ರತ್ನಾಕರರಾಯ ಏನು ಮಾಡತಾನ ? ಆಗಲಿ, ನಮಗಿನ್ನ ಅಪ್ಪಣೀ ಕೊಡ್ರಿ ! ನಡೀ ದತ್ತಣ್ಣಾ ಹೋಗೋಣು ! ”

ಎಂದು ಇಬ್ಬರೂ ಏಳಬೇಕೆನ್ನುತ್ತಿರುವಾಗಲೇ ವೇಣಕ್ಕ,. ಕಾಫೀ ತುಂಬಿದ ಮೂರು ಕಪ್ಪುಗಳನ್ನು ತಂದು ಹೊರಗೆ ಇಟ್ಟರು. ಗೋಪಾಲರಾಯರು, ‘ ಓ ! ಮರೆತೇ ಬಿಟ್ಟಿದ್ದೆ ! ಕಾಫೀ ತಗೊಂಡು ಹೋಗರಿ ! ’ ಎಂದು ಹೇಳಿ, ಕಾಫಿಯ ಕಪ್ಪುಗಳನ್ನೆತ್ತಿ ಅವರ ಕೈಯಲ್ಲಿ ಕೊಟ್ಟರು. ಇನ್ನೊಂದನ್ನು ತಾವು ತೆಗೆದುಕೊಂಡರು.

ಶೀನಪ್ಪ ಕಾಫೀ ಕುಡಿಯುತ್ತಿರುವಾಗ, ತಾನು ಹಿಂದೆ ಬಂದಾಗ ನೋಡಿದ ದೃಶ್ಯ ನೆನಪಾಗಲು ತೊಡಗಿತು; ಲಕ್ಷಣವತಿಯಾದ ಅಲಂಕೃತ ಕನ್ಯೆ ಕಾವೇರಿ! ಹೊಸಕಾಲದ ಚೆಲುವೆ ಕುಮುದಾ! ಇಬ್ಬರೂ ಈಗ ಇರಲಿಲ್ಲ.

ಅಂದಿನ ಊದುಬತ್ತಿಯ ನರುಗಂಪು ಇರಲಿಲ್ಲ. ರುಚಿ-ರುಚಿಯಾದ ತಿಂಡಿ-ತಿನಿಸು ಇರಲಿಲ್ಲ. ಅಂದಿನದು ಲೀಲಾವತಿಯಾದ ಕುಮುದೆಯ ಕೈಯಿಂದ ದೊರೆತ ಸುಧಾಸಮಾನವಾದ ಚಹಾ! ಇಂದಿನದು ಹಾಲು ಸಾಲದಿರುವ ಹಳೆಯ ಹುಡಿಯನ್ನು ಹಾಕಿದ—ರಸಹೀನವಾದ ಕಾಫಿ!

ಕಣ್ಣು ಮುಚ್ಚಿ ಕುಡಿದ ಶೀನಪ್ಪ, ದತ್ತೂನನ್ನು ಕರೆದುಕೊಂಡು ಹೊರಟುಬಿಟ್ಟ. ಕೊನೆಯ ನಮಸ್ಕಾರ ಹೇಳುವುದು ಇವರಿಗೂ ಮರೆಯಿತು; ಗೋಪಾಲರಾಯರಿಗೂ ಮರೆಯಿತು.

## ೧೫ನೆಯ ಪರಿಚ್ಛೇದ

ರತ್ನಾಕರ ಬಂಡಿಯಲ್ಲಿ ಕುಳಿತು ಮುದ್ದಾಪುರಕ್ಕೆ ಹೊರಟಿದ್ದ. ಹೆಜ್ಜೆ-ಕೂತ ಎತ್ತುಗಳಾದುದರಿಂದ, ಬಂಡಿ ನಿದಾನವಾಗಿ ಸಾಗಿತ್ತು. ಎರೆಯ ಭೂಮಿಯಲ್ಲಿಯ ದಾರಿಯಾದುದರಿಂದ, ತಗ್ಗು-ಮಿಟ್ಟೆಗಳಿಲ್ಲದೆ ಹೇಳಿ ಮಾಡಿಸಿದ ಸಮನಾದ ' ಲೈನದಾರಿ 'ಯಂತಿದ್ದಿತು. ಬಂಡಿಗೆ ಕೊಲ್ಲಾರಿ ಕಟ್ಟಿ ಬದಿರಿನ ತಡಿಕೆಯನ್ನು ಕಟ್ಟಿದ್ದುದರಿಂದ, ಬಿಸಿಲಿನ ಬಾಧೆ ಹೆಚ್ಚಾಗಿ ಆಗುವಂತಿರಲಿಲ್ಲ. ಊರು ಬಿಟ್ಟು ಎರಡು ಮೂರು ಮೈಲು ಹೋದ ಮೇಲೆ, ರತ್ನಾಕರ ಬಂಡಿಯ ಆಳನ್ನು ಕೇಳಿದ :

" ಈ ಬಂಡಿ ರಂಗಣ್ಣವರದೇ ಏನು ? "

" ಹೌದರಿ ! ನೂಲಿನ ಕೆಲಸಕ್ಕಂತಽ ಈ ಬಂಡಿನೂ ಈ ಎತ್ತುಗೋಳನೂ ಇಟ್ಟಾರರಿ! ಹೊಲ-ಮನೀ ಕೆಲಸಕ್ಕಾಗಿ ಬ್ಯಾರೇ ಬಂಡಿ-ಎತ್ತುಗೊಳು ಅದಾವ್ರಿ ! "

" ಹಂ, ಹಂ! ಅವರ ಕೆಲಸ ಎಲ್ಲಾ ಒಳ್ಳೇ ರೀತಿಂದಽ ನಡದಽದ ಅಲ್ಲ?"

"ಅದನೇನ ಕೇಳತೀರೀ ಯಪ್ಪಾ! ಊರ ಮಂದಿ ಇಷ್ಟಽ ಯಾಕ; ಸುತ್ತುಮುತ್ತಿನ ಹಳ್ಳೀ ಜನಾ ಸುದ್ದಾ ಆವರ ಉಪಕಾರಾ ಕೊಂಡಾಡತಾರ! ಇಷ್ಟ ಹಳ್ಳಿಹಳ್ಳಿಗೆ ಹಾರುವರ ಮನಿಗೋಳ ಅದಾವ್ರಿ! ಅದರೊಳಗ ರಂಗಣ್ಣ-ವರಂತಾ ಮನಿಶಾರು ಒಬ್ಬರಽ ಒಬ್ಬರು ಸಿಗೂದಿಲ್ಲರಿ! ಇಷ್ಟಽ ಅಲ್ಲರಿ ರಾಯರಽ ತಿರಿಗಿ ಆ ಮಂದೆಲ್ಲಾ ರಂಗಣ್ಣವರ ಮ್ಯಾಗ ಹೊಟ್ಟೇಕಿಚ್ಚು ತೋರಿಸತಾರ್ರಿ!"

" ಅದ್ಯಾಕಪಾ, ಹೊಟ್ಟೇಕಿಚ್ಚು ಯಾಕ ತೋರಿಸತಾರ ? "

" ಮತ್ತ....ತೋರಸವರು ಅಲ್ರಿ! ತಿಳಿವಳಿಕಿ ಇಲ್ಲದ ಹಳ್ಳೀ ಮಂದಿ-ಯೊಳಗ, ಏನರೇ ಕಿಳ್ಳೀಕ್ಯಾತತನಾ ಮಾಡಿ ಜಗಳಾ ಹಚ್ಚೂದು; ಅವರನ್ನ ಕೋರ್ಟು ಕಚೇರಿ —ಅಂತ ಮ್ಯಾಲಕ್ಕ ಕರಕೊಂಡು ಹೋಗಿ ದುಡ್ಡು ಹಾಳು ಮಾಡಸೂದು—ತಾವೂ ತಿನ್ನೂದು-ಇದನ್ನೆಲ್ಲಾ ಮಾಡತಿದ್ದರು. ಈಗ ಅದು ನಿಂತು ಹೋಗೆಯ್ತಿ. ಈಗ ನೆರಿಹೊರೀ ಹಳ್ಳ್ಯಾಗಿನ ಒಂದು ಒಂದು ನ್ಯಾಯನೂ ಮ್ಯಾಲಕ್ಕ ಹೋಗೂದಿಲ್ಲರಿ! ಎಲ್ಲಾರೂ ಓಡಿ ಓಡಿ, ರಂಗಣ್ಣವರ ಕಡೇನೂ ಬರತಾರ್ರಿ! ಲಂಚದ ಪ್ಯಾಲು ಲಗಾ ಹೊಡಿಯೂ ಮಂದಿರಿ! ಈಗ ಅದು ಸಿಗವೊಲ್ಲದು; ಅಂತು ರಂಗಣ್ಣವರನ್ನ ಕಂಡರ ಆ ಜನಕ್ಕ ಆಗೂದಿಲ್ಲರಿ!"

" ಕೆಟ್ಟ ಜನ! ದುಡಿದು ಶ್ರಮಾ ಸಹಿಸಿ ಸಂಪಾದಿಸೂ ಚಟಾನು ಉಳಿದಿಲ್ಲ, ಆ ಮಂದಿಯೊಳಗ! "

" ಅವರ್‍ಯಾಕ ದುಡಿದಾರ್ರೀ ರಾಯರ! ಆಯತಾಗೇ ಮಳ್ಳ ಜನಾ ಅವರ ಮನಿತನಕಾ ಹೋಗಿ ಹಿಡಿ ಹಿಡಿ ಹಣಾ ಕೊಡತಿತ್ತು. ಹಬ್ಬಾ-ಹುಣ್ಣಿವೀ ಅಂತ ಹೇಳಿಕೊಂಡು, ಹೋಳಿಗಿ-ತುಪ್ಪಾ ಹೊಡೀತಿದ್ದರು. ಈಗ ಅದು ಬಂದ್ ಆದರೂ ಅವರಿಗೆ ಒಳ್ಳೇ ಬುದ್ಧಿ ಬೆಟ್ಟ ಆಗಿಲ್ಲರಿ! ರಂಗಣ್ಣವರ ವಿರುದ್ಧ ಹಳ್ಳಿ ಮಂದಿಯೊಳಗೆಲ್ಲಾ ಏನೇನಾರೇ ಹೇಳಿ, ಹೆಸರ ಕೆಡಸಬೇಕಂತ ಕಾರ-ಭಾರಾ ನಡಿಸ್ಯಾರ್ರಿ! "

ರತ್ನಾಕರನಿಗೆ ಈ ಮಾತನ್ನು ಕೇಳಿ ತುಂಬ ಅಸಮಾಧಾನವೆನಿಸಿತು. ಸುಮ್ಮಗೆ ಕುಳಿತು ಯೋಚಿಸತೊಡಗಿದ; ' ಏನಿದು ನಮ್ಮ ಸಮಾಜದ ದುಸ್ಥಿತಿ! ನೋಡಿದಲ್ಲೆಲ್ಲ ಸ್ವಾರ್ಥದ ತೊತ್ತಳದುಳಿತ! ಭಾರತೀಯರ ಜೀವನ-ತತ್ತ್ವಜ್ಞಾನ ಸಾರುತಿರುವುದು ತ್ಯಾಗದ ದಾರಿಯನ್ನ! ಆದರೆ ಇಂದಿನ ನಮ್ಮ ಸಮಾಜ ನಿಂತುಕೊಂಡದ್ದು ಸ್ವಾರ್ಥದ ಆಧಾರದ ಮೇಲೆ! ಎಲ್ಲಿ ನೋಡಿ-ದರೂ ಇದೇ ಹಾಡು! ನಮ್ಮ ತ್ಯಾಗಬೋಧಕ ಮಂತ್ರ-ವಚನಗಳೆಲ್ಲ ನುಡಿ-ಯುವುದಕ್ಕಾಗಿ ಉಳಿದಿವೆ ಹೊರತು ನಡೆಯುವುದಕ್ಕಾಗಿ ಅಲ್ಲ! ಬ್ರಾಹ್ಮಣ! ಅಯ್ಯೋ ಭಾರತದ ಚರಿತ್ರೆಯಲ್ಲಿ ಒಂದುಕಾಲದಲ್ಲಿ ಎಂತಹ ಪ್ರಜ್ವಲಿತ ದೀಪ-ವಾಗಿ ನಿಂತಿದ್ದ? ತನ್ನನ್ನು ತಾನು ಸುಟ್ಟುಕೊಂಡು, ಇನ್ನೊಬ್ಬರಿಗೆ ಬೆಳಕನ್ನು ಕೊಡುವುದೆಂದರೆಯೇ ಬ್ರಾಹ್ಮಣ್ಯದ ಬಿರುದು! ಇಂದು ಅಂತಹ ಬ್ರಾಹ್ಮಣ್ಯ ಎಲ್ಲಿ ಕಣ್ಣಿಗಾದರೂ ಬೀಳುವುದೇ? ಸೋಮಾರಿತನ, ಸ್ವಾರ್ಥಸಾಧನ,

ಕಿಡಿಗೇಡಿತನ, ವಾಚಾಳಿತನ—ಇವೇ ಇಂದಿನ ಬ್ರಾಹ್ಮಣ್ಯದ ಲಕ್ಷಣಗಳಾಗಿ ಉಳಿತಿವೆ. ನಿಜವಾದ ಅಜ್ಞಾನಿಗಳು ಒಬ್ಬ ನಾಯಕನನ್ನೊಪ್ಪಿಕೊಂಡು, ಅವನು ಹೇಳಿದಂತೆ ಕೇಳಿಕೊಂಡಿದ್ದು ನಿಶ್ಚಿಂತೆಯಿಂದ ಗುಂಪುಗಟ್ಟಿಕೊಂಡು ಬದುಕ-ಬಹುದು. ಗುಂಪಿನ ಬಲ, ಆ ಗುಂಪಿನ ವ್ಯಕ್ತಿಗಳಿಗೆ ಸುಖಸಾಧಕವೂ ಆಗ-ಬಹುದು! ಆದರೆ ಈ ಜ್ಞಾನಲವ ದುರ್ವಿದಗ್ಧ ಬ್ರಾಹ್ಮಣರ ದುರ್ದಶೆಯನ್ನು ಹೇಳಲಾಸಲ್ಲ! ವ್ಯಕ್ತಿ-ವ್ಯಕ್ತಿಗಳ ಅಹಂಕಾರ-ಸ್ವಾರ್ಥಗಳು, ಇವರಲ್ಲಿಯ ಸಾಮಾಜಿಕ ಸಂಘಟನೆಯನ್ನು ಹುಡಿಗೂಡಿಸಿ ಬಿಟ್ಟವೆ ಸರಕಾರದ ಕಾಯದೆ-ಗಳು ಇವರನ್ನು ಹೆದರಿಸಬಹುದು ಹೊರತು, ಬ್ರಾಹ್ಮಣ್ಯದ ಜೀವಾಳದ ಧರ್ಮ-ನೀತಿಯ ಕಾಯಿದೆಗಳು ಇವರನ್ನು ಏನೂ ಮಾಡಲಾರವು. ತಾವು ಬೇಡಿದಾಗ ಬೇಕಾದುದನ್ನು ಕೊಡಬೇಕೆಂಬ ಅಪೇಕ್ಷೆಯಿಂದ ಇವರು ದೇವ-ದೇವತೆಗಳ ಕಡೆಗೆ ನೋಡುತ್ತಾರೆ; ಕಾಮನಾಭಾವದಿಂದಲೇ ಇವರು ದೇವ-ರಿಗೆ ಪೂಜೆ-ಪುರಸ್ಕಾರಗಳನ್ನು ಸಲ್ಲಿಸುತ್ತಾರೆ. ಇವರ ಕಣ್ಣಲ್ಲಿ ದೇವ-ದೇವತೆ-ಗಳೂ ಲಂಚಗುಳಿ ಅಧಿಕಾರಿಗಳಿದ್ದಂತೆ. ದೇವರನ್ನು ಈ ಬಗೆಯಾಗಿ ನೋಡು-ವವರು ಮನುಷ್ಯರನ್ನು ಯಾವ ಭಾವನೆಯಿಂದ ನೋಡಬಹುದು....ಅಯ್ಯೋ!"

ಬಂಡಿ ಮೆಲ್ಲಗೆ ಮುಂದುವರಿಯುತ್ತಲಿತ್ತು; ರತ್ನಾಕರನ ಯೋಚನಾ ಪ್ರವಾಹ ರಭಸದಿಂದ ಮುಂದುವರಿಯುತ್ತಲಿತ್ತು. ಹೊರಗಿನ ಬಿಸಿಲು ಸಂಜೆ ಸಮೀಪಿಸಿ ತಂಪಾಗುತ್ತ ನಡೆದಿದ್ದಿತು; ಆದರೆ ರತ್ನಾಕರನ ಮನಸ್ಸಿನೊಳಗೆ ಎದ್ದ ಯೋಚನೆಯ ಕಾವು ಹೆಚ್ಚು ಹೆಚ್ಚು ಬಿಸಿಯಾಗುತ್ತ ನಡೆದಿದ್ದಿತು:

'ಮನುಷ್ಯರನ್ನು ಮನುಷ್ಯರೆಂದು ನೋಡುವ ಭಾವನೆ ಇವರಲ್ಲಿ ಉಳಿದೇ ಇಲ್ಲ. ಸ್ವಾರ್ಥಸಾಧನೆಯ ಸುಪ್ರಸಂಗವೇನಾದರೂ ಇದ್ದರೆ, ಆ ಪ್ರಸಂಗ ಸಂಬಂಧಿತ ವ್ಯಕ್ತಿಗಳು ಮಿತ್ರರಾಗುವರು. ಅದಾವುದೂ ಇಲ್ಲದಾಗ, ಆಪ್ತರು-ಇಷ್ಟರು—ಎನಿಸಿಕೊಳ್ಳುವ ವ್ಯಕ್ತಿಗಳನ್ನೂ ಉಪೇಕ್ಷೆ, ಔದಾಸೀನ್ಯ, ಪರಕೀಯ ಭಾವಗಳಿಂದ ನೋಡುವರು. ಎಂತಲೇ ಸಾಮಾಜಿಕ ಸಂಘಟನೆಯ ಬಲವು ಇವರಲ್ಲಿ ಔಷಧಕ್ಕೂ ಸಿಕ್ಕುವುದಿಲ್ಲ. ಆದುದರಿಂದಲೆ ಸುಖ-ಸಮಾಧಾನ-ಗಳೆಂಬುವು ಯಾವ ಮನೆಯಲ್ಲಿಯೂ ಕಾಣುವುದಿಲ್ಲ. ಎಲ್ಲರೂ ಒಂದೊಂದು ಬಗೆಯ ಕೊರತೆಯಿಂದ ಕೊರಗುವರಾದರೂ, ಒಬ್ಬರೊಬ್ಬರ ಕೊರತೆಗಳನ್ನು ಸಹಾನುಭೂತಿ ಸಹಕಾರದ ದೃಷ್ಟಿಗಳಿಂದ ನೋಡಲಾರರು. ಅವರವರ ಕೊರತೆ-

ಗಳು ಅವರಲ್ಲಿ ಅಸಹಿಷ್ಣುತೆ, ಮತ್ಸರ, ಈರ್ಷೆ, ದ್ವೇಷ ಮೊದಲಾದ ವಿಧ್ವಂಸಕ ಭಾವಗಳನ್ನು ಹುಟ್ಟಿಸಿ ಬೆಳೆಯಿಸುತ್ತಿವೆ ಹೊರತು, ಪ್ರೇಮ-ಸ್ನೇಹ-ಸಹಿಷ್ಣುತೆ-ತ್ಯಾಗಬುದ್ಧಿ ಮೊದಲಾದ ವಿಧಾಯಕ ಭಾವಗಳನ್ನು ಬೆಳೆಯಿಸುತ್ತಿಲ್ಲ.... '

'ಇನ್ನ ಒಂದ ಮೈಲು ಉಳೀತು ನೋಡ್ರಿ ಮುದ್ದಾಪುರ!' ಎಂದು ಆಳು ಹೇಳಿದ ಮಾತುಗಳನ್ನು ರತ್ನಾಕರನ ಕಿವಿಗಳು ಕೇಳಿದುವಿಷ್ಟೆ! ಒಳ-ಮನಸ್ಸಿನ ವರೆಗೆ ಕಳುಹಲಿಲ್ಲ! ಬಂಡಿಯಾಳು ಏನೋ ಹೇಳಿದನೆಂಬುದರ ಅರೆಯರಿಕೆಯಾದಾಗ, ರತ್ನಾಕರ 'ಹುಂ ಹುಂ! ಹೀಂಗೇನು?' ಎಂದು ಕೇಳಿದ. ಆಳು ತಿರುಗಿ ನೋಡಿದ; ಎನೋ ವಿಚಾರದಲ್ಲಿರುವರೆಂಬುದನ್ನು ಕಂಡು ಸುಮ್ಮಗಾದ. ಬಂಡಿ ಮುಂದುವರಿಯುತ್ತಿತ್ತು; ರತ್ನಾಕರನ ಯೋಚನಾ-ರಥವೂ ಮುಂದುವರಿಯಿತು :

'ಇಂತಹ ಸಾಮಾಜಿಕ ಶೈಥಿಲ್ಯದ ಮೂಲಕವೇ ನಮ್ಮಲ್ಲಿ ಗೋಪಾಲ-ರಾಯರಂತಹ ದುಃಖ-ದುಗುಡಗಳ ಮೂರ್ತಿಗಳೇ ಎಲ್ಲೆಲ್ಲಿಯೂ ತುಂಬಿ-ದ್ದಾರೆ. ಇಂತಹ ಜನರೇ ಹೆಚ್ಚಾಗಿದ್ದುದರಿಂದ, ದಿನಕ್ಕೊಂದು ರೀತಿಯಲ್ಲಿ ಸಮಾಜದ ಶೈಥಿಲ್ಯ ಬೆಳೆಯುತ್ತಲಿದೆ. ಅವರೊಳಗೇ ನಮ್ಮ ನಾಡಿನಲ್ಲೆಲ್ಲ ಹರಡುತ್ತಲಿರುವ ವೈಜ್ಞಾನಿಕ ಸಂಸ್ಕೃತಿ, ನಮ್ಮ ಸಮಾಜವನ್ನು ಇನ್ನಿಷ್ಟು ಛಿನ್ನ-ವಿಚ್ಛಿನ್ನಗೊಳಿಸುತ್ತಲಿದೆ. ಇದರ ಪ್ರಭಾವವೇ ನಮ್ಮ ಸಮಾಜದ ಪ್ರತಿಯೊಂದು ಗಂಡು-ಹೆಂಣ್ಣುಗಳ ಮನಸ್ಸಿನ ಮೇಲೆ ಆಗಿರುತ್ತದೆ. ಕಾವೇರಿ ಯಂತಹ ಸದ್ಗುಣಿಯಾದ ಸುಂದರಿಯಾದ ಹೆಣ್ಣಿನ ಲಗ್ನವೂ ಸುಲಭ ರೀತಿಯಿಂದ ಆಗದಂತಹದು ನಮ್ಮ ಸಾಮಾಜಿಕ ಅವನತ ಪರಿಸ್ಥಿತಿ....!

ಪಾಪ! ನಾನು ಕಾವೇರಿಯ ತಾಯಿ-ತಂದೆಗಳಿಗೆ ವಿಶ್ವಾಸದ ಮಾತನ್ನು ಕೊಟ್ಟು ಬಂದಿದ್ದೇನೆ. ರಂಗಣ್ಣ ನನ್ನ ಮಾತನ್ನು ಕೇಳಿ, ಕಾವೇರಿಯನ್ನು ಮದುವೆಯಾಗಲು ಒಪ್ಪಿಕೊಳ್ಳಬಹುದಲ್ಲವೆ? ಕಾಲವೊಂದು ವಿಚಿತ್ರ ಬಂದು ಕುಳಿತಿದೆ! ರಂಗಣ್ಣ ಈಗ ಬೇಡವೆಂದು ಹೇಳಿದರೆ ಗತಿಯೇನು? ನಾನು ಹೇಳಿದರೆ, ಸಾಮಾಜಿಕ ಪರಿಸ್ಥಿತಿಯ ಅರಿವು ಸಂಪೂರ್ಣವಾಗಿ ಇದ್ದ ರಂಗಣ್ಣ, ಒಪ್ಪಿಕೊಳ್ಳದೆ ಇರಲಾರ! ಸರಿ, ಅವನು ಒಪ್ಪಿಕೊಂಡು ಬಿಟ್ಟರೆ, ಕಾವೇರಿಯ ಮದುವೆಯ ಮಟ್ಟಿಗೆ ನಾನು ನನ್ನ ಕರ್ತವ್ಯವನ್ನು ನಿರ್ವಹಿಸಿದಂತಾಯಿತು. ಇನ್ನು ಸುಭದ್ರೆಯ ಮದುವೆಯದೊಂದು ವಿಚಾರ! ಅಬ್ಬಾ, ಆ ವಿಚಾರ ನನ್ನ

ಎದೆಯನ್ನೇ ನಡುಗಿಸುವುದು. ಸುಭದ್ರೆ, ಮುಗ್ಧಸ್ವಭಾವದವಳಾದರೂ ಹುಡುಗಿ ದುಷ್ಟೆಯೇನೂ ಅಲ್ಲ. ಕಣ್ಣು-ಮೂಗಿನಿಂದ ಚೆಲುವೆಯಾಗಿಯೂ ಇದ್ದಾಳೆ. ನಾನು ಆತ್ಮೀಯಭಾವದಿಂದ ಅವಳನ್ನು ಪ್ರೀತಿಸಬಹುದಾದರೂ, ಸಹಚಾರಿಣಿಯನ್ನಾಗಿ ವರಿಸಲು ನನ್ನ ಮನಸ್ಸು ಸಿದ್ಧವಾಗಲೊಲ್ಲದಾಗಿದೆ. ನಾನೂ ಒಬ್ಬ ಮನುಷ್ಯ; ನನಗೂ ಬೇಕು-ಬೇಡಗಳಿವೆ. ಒಲ್ಲೆನೆಂದು ಹೇಳು-ವುದನ್ನು ಮನಸ್ಸು ಎಂದೂ ಒಪ್ಪಿ ಸ್ವೀಕರಿಸಲಾರದು. ಒಂದು ವೇಳೆ ಈ ವಿಷಯದಲ್ಲಿಯೂ ನನ್ನ ಮನಸ್ಸನ್ನು ತ್ಯಾಗದ ಕಡೆಗೆ ತಿರುಗಿಸಬಹುದು. ಆದರೆ ಕೈಕೊಂಡಿರುವ ಕಾರ್ಯವು ನನ್ನನ್ನು ಸುಮ್ಮಗೆ ಕೂಡಲು ಕೊಡು-ವುದೆ ? ಈಗ ನನ್ನ ಮೇಲೆ ಹೊರಟಿರುವ ಸರಕಾರದ ವಾರಂಟು, ನನ್ನ ಜೀವನವನ್ನು ಎತ್ತ ಕಡೆಗೆ ನೂಕುವುದೋ ಅದರ ನಿಯಮವಿಲ್ಲ. ಸೆರೆಮನೆಗೆ ಹೋಗುವ ಪ್ರಸಂಗ ಬಂದರೆ ಎಷ್ಟು ದಿನಗಳ ವರಗೆ ಅಲ್ಲಿ ಕೊಳೆಯಬೇಕಾಗು-ವುದೋ ಗೊತ್ತಿಲ್ಲ. ನನ್ನ ಜೀವನದ ಭವಿಷ್ಯ ನನಗೇ ಗೊತ್ತಿಲ್ಲದಿರುವಾಗ ಇನ್ನೊಂದು ಜೀವನದ ಸುಖಭವಿಷ್ಯದ ಹೊಣೆಯನ್ನು ಹೊರುವ ಬಗೆ ಹೇಗೆ ? ಹಾಗಾದರೆ ಸುಭದ್ರೆಯ ಹಟವನ್ನು ಹೇಗೆ ಬಿಡಿಸಬೇಕು ?........

ಕಾವೇರಿಯ ಮದುವೆಗಿಂತ ಸುಭದ್ರೆಯ ಮದುವೆಯ ಹೊಣೆಗಾರಿಕೆ ನನ್ನ ತಲೆಯ ಮೇಲೆ ಹೆಚ್ಚಾಗಿ ಇದೆಯೆಂಬುದರಲ್ಲಿ ಸಂಶಯವಿಲ್ಲ. ಸುಭ-ದ್ರೆಗೂ ಒಳ್ಳೆಯ ವರ ಸಿಕ್ಕು ಆಕೆಯ ಜೀವನ ಸುಖ-ಸಮಾಧಾನಗಳಿಂದ ಸಾಗಬೇಕು. ಹಾಗಾದರೆ ಸುಭದ್ರೆಯನ್ನೇ ಮದುವೆಯಾಗುವಂತೆ ರಂಗಣ್ಣ-ನಿಗೆ ಹೇಳಲೇ ?.... ಛೀ ! ಇದೆಂತಹ ಸ್ವಾರ್ಥದ ವಿಚಾರ ನನ್ನದು ! ಕಾವೇ-ರಿಯ ಸಲುವಾಗಿಯೆಂದು ಹೊರಟು ಬಂದಿದ್ದು, ಈಗ ನನ್ನ ಮೇಲಿನದೊಂದು ಹೊರೆಯಿಳಿಸಿಕೊಳ್ಳುವ ಸ್ವಾರ್ಥಬುದ್ಧಿಯಿಂದ ಸುಭದ್ರೆಯ ಹೆಸರನ್ನು ರಂಗಣ್ಣನಿಗೆ ಸೂಚಿಸಬೇಕೆ ? ಹಾಗಾದರೆ ನನ್ನನ್ನು ಸಂಪೂರ್ಣವಾಗಿ ನಂಬಿ ಕುಳಿತಿದ್ದ ಗೋಪಾಲರಾಯರನ್ನು ವಂಚಿಸಿದಂತಾಗುವುದಿಲ್ಲವೆ ? ಇಂತಹ ಸ್ವಾರ್ಥಪೂರಿತ ವಂಚನೆಯೇ ನಮ್ಮ ಸಮಾಜವನ್ನು ಹಾಳುಮಾಡಿದೆ. ಅಂತಹ ಸ್ವಾರ್ಥಕ್ಕೆ ನಾನೂ ಬಲಿಯಾಗಬೇಕೆ ? ಛೀ ! ಬೇಡ, ಬೇಡ ! ಈ ಸಂದರ್ಭದಲ್ಲಿ ಸುಭದ್ರೆಯ ವಿಚಾರ ನನ್ನ ತಲೆಯಲ್ಲಿ ಬರುವುದೇ ಬೇಕಾಗಿಲ್ಲ.... '

ಮುದ್ದಾಪುರವನ್ನು ಬಂಡಿ ಸಮೀಪಿಸಿತು. ಸಂಜೆಯ ಸುಳಿಗಾಳಿ ವಾತಾವರಣವನ್ನು ತಂಪುಗೊಳಿಸಿತ್ತು. ಮನೆಗೆ ಹೊರಟಿರುವ ಹಕ್ಕಿಗಳು ಮುಗಿಲಲ್ಲಿ ಕಲಕಲಿಸತೊಡಗಿದ್ದುವು. ಹತ್ತಿರ ಬಂದ– ಮುದ್ದಾಪುರದ ಜನರ ಸಂಜೆಯಡಿಗೆಯ ಹೊಗೆ, ಸುಳಿಸುಳಿಯಾಗಿ ಮೇಲಕ್ಕೇರುತ್ತಲಿತ್ತು.

ಬಂಡಿಯಾಳು ಹೇಳಿದ: 'ರಾಯರ! ಊರು ಬಂದುಬಿಟ್ಟಿತರಿ!' ರತ್ನಾಕರನು ವಿಚಾರಲೋಕದಿಂದ ಹೊರಬಿದ್ದು, ಬಟ್ಟೆ-ಬರೆ ಸಾವರಿಸಿಕೊಂಡು ಕುಳಿತ.

## ೧೬ನೆಯ ಪರಿಚ್ಛೇದ

ಬಂಡಿ ಮುದ್ದಾಪುರವನ್ನು ತಲ್ಪಿ ರಂಗಣ್ಣನ ಮನೆಯ ಮುಂದಣ ಹೊರ ಅಂಗಳದಲ್ಲಿಯೆ ನಿಂತಿತು. ಆಗ ದೀಪ ಹತ್ತುವ ವೇಳೆಯಾಗಿದ್ದಿತು. ಬಂಡಿ ಬಂದ ಸಪ್ಪಳನ್ನು ಕೇಳಿ, ರಂಗಣ್ಣ ಮನೆಯೊಳಗಿಂದ ಹೊರಗೆ ಬಂದು ನೋಡುತ್ತಿದ್ದಾಗ, ರತ್ನಾಕರನು ಬಂಡಿಯಿಂದ ಕೆಳಗಿಳಿದು ನಿಂತಿದ್ದ. ಮಬ್ಬು-ಗತ್ತಲೆಯಲ್ಲಿ ರತ್ನಾಕರನ ಮುಖವು ಸರಿಯಾಗಿ ಕಾಣಿಸಲಿಲ್ಲ; ಮೈಯಲ್ಲಿ ಹಾಕಿಕೊಂಡ ವೇಷ-ಭೂಷಣಗಳು ಮಾತ್ರ ಕಂಡುವು. ಈ ವೇಷ-ಭೂಷಣ-ದವರು ಇಲ್ಲಿಗಾರು ಬಂದಿದ್ದಾರೆಂಬುದು ರಂಗಣ್ಣನಿಗೆ ಗೊತ್ತಾಗದೆ, ಬೆರಗಿನ ಧ್ವನಿಯಲ್ಲಿ ಬಂಡಿಯಾಳನ್ನು ಕೇಳಿದ :

" ಮತ್ಯಾರು ಬಂದಾರೋ ಸಿದ್ದಣ್ಣಾ ! "

ಬಂಡಿಯಾಳು ಉತ್ತರಕೊಡುವುದಕ್ಕಿಂತ ಮೊದಲೇ ರತ್ನಾಕರನು ನಗೆ-ಯಾಟದ ಧ್ವನಿಯಲ್ಲಿ ಹೇಳಿದ :

" ಯಾರ ಬಂದಾರಂಬೂದು ಅಂವಗೇನು ಗೊತ್ತು ? ನಿನಗಽರೇ ಗೊತ್ತಾಗತಽದೇನು, ನೋಡು ಹತ್ತರ ಬಂದು !"

ಧ್ವನಿಯು ರತ್ನಾಕರನದಾಗಿ ತೋರಿತು. ಆತುರದಿಂದ ಹಾರಿಬಂದಂತೆ ರಂಗಣ್ಣ ರತ್ನಾಕರನ ಹತ್ತಿರಕ್ಕೆ ಬಂದು ನೋಡಿದ: " ಯಾರು ರತ್ನಾಕರ ? ಇದೇನಿದು ಒಮ್ಮಿಂದೊಮ್ಮೆಲೇ ಅವತಾರ! ಪತ್ರಇಲ್ಲ, ಉತ್ತರ ಇಲ್ಲ! ಒಮ್ಮೆಲೇ ಧೂಮಕೇತುವಿನ ಹಾಂಗ ಇಳಿದು ಬಿಟ್ಟೆಯಲಾ ! ಅಲ್ಲಾ, ಇದೇನು ಸೋಂಗು? ಈ ವೇಷ ಏನೀದು ? "

ರತ್ನಾಕರ ರಂಗಣ್ಣನ ಹೆಗಲ ಮೇಲೆ ಕೈಯಿಟ್ಟ. ಬೆರಗು-ಹಿಗ್ಗುಗಳು ರಂಗಣ್ಣನ ಹೊಟ್ಟೆಯಲ್ಲಿ ಹಿಡಿಸದಂತಾಗಿದ್ದುವು. ನಗುನಗುತ್ತ ರತ್ನಾಕರ ಹೇಳಿದ :

" ಹೇಳಿಕೇಳಿ ಸೋಂಗsa ಇದು ! ಯಾಕ ? ಈ ವೇಷಕ್ಕ ನಿಮ್ಮ ಊರ ಅಗಸೀ ಬಾಗಿಲಿನೊಳಗ ಪ್ರವೇಶ ಇಲ್ಲೇನು ಮತ್ತ ? "

" ಈ ವೇಷಕ್ಕ ಇಲ್ಲದಿದ್ದರೂ, ಈ ವೇಷಾ ಹಾಕಿಕೊಂಡವರಿಗೆ ನಿರ್ವಾಹ ಇಲ್ಲದೆ ಪ್ರವೇಶ ಕೊಡಬೇಕಾಗೇದ. ನಡಿ ನಡಿ ! ಒಳಗ ನಡಿ ! ಈಗ ಯಾವ ಊರಿಂದ ಬಂದಿ ? "

" ಇದ್ದ ಊರಿಂದsaನsa ಹೊರಟು ಬಂದೀನಿ ! ನಾನು ಈ ವೇಷಾ ಹಾಕಿಕೊಳ್ಳದsa ಇದ್ದರ, ಈ ಊರಿಗೆ ಬಂದು ತಲ್ಪ್ಯಾದು ಸಾಧ್ಯನsa ಇರಲಿಲ್ಲ. ಯಾವುದೋ ರೋಗಾ ಕಳಕೊಳ್ಳಲಿಕ್ಕೆಕತ್ತೆಯ ಹಾಲು ಕುಡೀಬೇಕಾಗದಂತಲಾ ಔಷಧಕ್ಕಾಗಿ, ಹಾಂಗsa ನನಗ ಬಂದಿರುವ ಒಂದು ರೋಗಾ ಕಳಕೊಳ್ಳಲಿಕ್ಕಂತ ಈ ಸಾಹೇಬರ ವೇಷಾ ಸ್ವೀಕರಿಸಬೇಕಾಯ್ತು ! "

ಇಬ್ಬರೂ ಒಳಗೆ ಬಂದು, ಪಡಸಾಲೆಯಲ್ಲಿ ಹಾಸಿದ್ದ ಹಾಸಿಗೆಯ ಮೇಲೆ, ತೊಡೆಗೆ ತೊಡೆ, ಮೈಗೆ ಮೈ—ಹೊಂದಿಕೊಂಡೇ ಕುಳಿತರು. ಒಬ್ಬರನ್ನೊಬ್ಬರು ಕಂಡ ಸಂತೋಷ-ಸಂತೃಪ್ತಿಗಳು ಇಬ್ಬರ ಮುಖದ ಮೇಲೆಯೂ ಕುಣಿಯುತ್ತಿದ್ದುವು. ರಂಗಣ್ಣ ಮತ್ತೆ ಕೇಳಿದ :

"ಇದೇನಿದು? ಪತ್ರ ಇಲ್ಲ, ಸುದ್ದಿ ಇಲ್ಲ; ಹೀಂಗ ಹ್ಯಾಂಗ ಬಂದಿ ಒಮ್ಮೆಲೆ?"

" ಒಮ್ಮೆಲೇ ಬರಬೇಕಾಯ್ತು--ಅಂತ, ಬರುವ ಹಾಂಗ ಇಲ್ಲದಿದ್ದರೂ ಬಂದುಬಿಟ್ಟೇನಿ. ಈಗ ಉಳಿದ ಮಾತು ಯಾವುದನ್ನೂ ಹೇಳಲಿಕ್ಕೆ ಸಾಧ್ಯ ಇಲ್ಲ! ಮೊದಲು ನನ್ನ ಸ್ನಾನ ಆಗಬೇಕು ! ಆ ಮ್ಯಾಲ ಕಕ್ಕೀ ಕಡಿಯಿಂದ ಹೊಟ್ಟೆತುಂಬಾ ಊಟ ಆಗಬೇಕು ! "

ರತ್ನಾಕರ ಬೆರಗು-ಮರುಕಗಳಿಂದ ಕೇಳಿದ :

" ಇಂದ ನಿನ್ನ ಊಟವೇ ಆಗಿಲ್ಲ ಕಾಣತsaದ ! ಮುಂಜಾನೆ ಎಂಟಕ್ಕsa ಊರು ಬಿಟ್ಟೇದಿಯೇನೋ ! ಅಂದಮ್ಯಾಲ ಎಲ್ಲಿ ಆಗಬೇಕು ನಿನ್ನ ಊಟ ! "

ಆಳು ರತ್ನಾಕರನ ಸೂಟ್‌ಕೇಸನ್ನು ತಂದು ಒಳಗೆ ಇರಿಸಿದ. ಇಬ್ಬರೂ ಸಲುಗೆಯಿಂದ,ಇಷ್ಟುಹತ್ತಿ ಹೊಂದಿ ಕುಳಿತುದನ್ನು ಕಂಡು ಅವನಿಗೆ ಆಶ್ಚರ್ಯ-

ವಾಯಿತು. ರಂಗಣ್ಣನಿಗೆ ಇಂತಹ ಸಾಹೇಬರ ಸೋಗಿನವರ ಹತ್ತಿರದ ಸಂಬಂಧವೂ ಇದೆಯೇ—ಎಂಬುದು ಅವನ ಆಶ್ಚರ್ಯಕ್ಕೆ ಕಾರಣ. ಬೆರಗು-ನೋಟದಿಂದ ನೋಡುತ್ತ ನಿಂತುಕೊಂಡಿದ್ದ; ಆತನಿಗೆ ರಂಗಣ್ಣ ಹೇಳಿದ :

"ಸಿದ್ದಣ್ಣಾ! ಒಳಗ ಕಕ್ಕಿಗೆ ಹೇಳು: ಧಾರವಾಡದಿಂದ ಒಬ್ಬರು ದೇಶೀ ಸಾಹೇಬರು ಬಂದಾರ—ಅವರಿಗೇನೋ ಸ್ನಾನಾ ಮಾಡಬೇಕಾಗೇದಂತ, ಅದಕ್ಕ ಒಂದು ಹಂಡೆ ಬಿಸಿ ಬಿಸಿ ನೀರು ಕಾಯಿಸಬೇಕು—ಅಂತ ಹೇಳು! ಹೋಗು, ಲಗೂನ ಕಾಯಿಸಬೇಕಂತ ಹೇಳು!"

ಆಳು ಅವಸರದ ನಡಿಗೆಯಿಂದ ಒಳಗೆ ಹೋದ. ಬಳಿಕ ರಂಗಣ್ಣ ನುಡಿದ :

"ಹುಂ, ನೀ ಏಳಿನ್ನ! ಈ ವೇಷಾ ಕಳಚಿಬಿಡು. ಬ್ಯಾರೇ ಬಟ್ಟೀ ತಂದೀಯೋ, ಏನು ಇಲ್ಲೀವು ಕೊಡಲ್ಯೋ?"

"ಎಲ್ಲೀವು ತರತೀಯೋ? ನಿನ್ನೆ ರಾತ್ರೀ ಹನ್ನೊಂದುವರೀ ಗಂಟೆಗೇನ ಬಟ್ಟೆ-ಬರಿ ಎಲ್ಲಾ ಸ್ವರಾಜ್ಯಭುವನದಿಂದ ಒಂದು ಕಡೆಗೆ ಕಳಿಸಿದೆ. ತಿರಿಗಿ ಆ ಕಡೆ ಹೋಗಲಿಕ್ಕೆ ನನಗ ಅವಕಾಶವೇ ಸಿಗಲಿಲ್ಲ. ಇಷ್ಟs ಅಲ್ಲ, ಇಲ್ಲಿಗೆ ಬರಲಿಕ್ಕೆ ಮೋಟಾರಿಗೆ ಕೊಡಲಿಕ್ಕೆ ಹಣ ಸುದ್ದಾ ನನ್ನ ಕಡೆ ಇರಲಿಲ್ಲ. ನಿಮ್ಮ ತಮ್ಮನ ಕಡಿಂದ ಅಷ್ಟರ ಮಟ್ಟಿಗೆ ಕೈಗಡ ಇಸಕೊಂಡು ಬಂದೀನಿ!"

"ಅಂತೂ ಅವನ ಹಣ ಸದುಪಯೋಗ ಆಗಲಿಕ್ಕೆ ನೀ ಸಹಾಯ ಮಾಡಿದ್ಹಾಂಗ ಆಯ್ತನ್ನು. ಹ್ಯಾಂಗ ಹ್ಯಾಂಗ ಇದ್ದಾನಪಾ ಅಂವ? ಅವನ ಸಾಹೇಬಕಿ ಎಲ್ಲಾ ಶಿಸ್ತಾಗಿ ನಡದsದೋ ಇಲ್ಲೋ?"

"ನಡದsದಂತೀಯೋ ಇಲ್ಲಂತೀಯೋ ನೀನs ನೋಡು! ಈ ಕೋಟು, ಈ ಪ್ಯಾಂಟು, ಆ ಬೂಟು ಎಲ್ಲಾ ಅವನ್ನೂವೇ! ನನ್ನ ನಾಟಕಕ್ಕ ಬೇಕಾಗಿ-ದ್ದುವಂತ ನಾನs ಬೇಡಿ ಇಸಕೊಂಡೆ. ಅಂತೂ ದೇವರು ಏನು ಬುದ್ಧೀ ಕೊಟ್ಟನೋ: ಏನೋ!–ಬೇಡಿದ ಕೂಡಲೆ ಒಪ್ಪಿ ಕೊಟ್ಟುಬಿಟ್ಟ!"

"ಹಾಂಗೆಲ್ಲಾ ಕೆಲಕೆಲವು ಗುಣಾ ಅವನಲ್ಲಿ ಒಳ್ಳೇವು ಅವನೋ!.... ಈಗ ನಿನಗ ಬಟ್ಟೆ-ಬರೀ ಏರ್ಪಾಡು ಮಾಡತೀನಿ, ಸ್ವಲ್ಪ ತಡಿ!" ಎಂದು ರಂಗಣ್ಣ ಎದ್ದು ಒಳಗೆ ನಡೆದ. ಪ್ರಯಾಣದ ತೊಂದರೆಯಿಂದ ಬಳಲಿದ ರತ್ನಾಕರ, ಹಾಗೆಯೆ ದಿಂಬಿಗೊರಗಿ ಬಿದ್ದುಕೊಂಡ. ಮೂರು ನಾಲ್ಕು

ನಿಮಿಷದಲ್ಲಿಯೇ ರಂಗಣ್ಣ ಒಂದು ಧೋತರ, ಒಂದು ಪಂಚೆ, ಒಂದು ಟಾವೇಲು, ಒಂದು ಷರ್ಟು— ಎಲ್ಲವನ್ನೂ ಕೂಡಿಸಿ ಹಿಡಿದುಕೊಂಡು ಹೊರಗೆ ಬಂದು, ಒಂದು ಖುರ್ಚಿಯ ಮೇಲೆ ಇಟ್ಟ. ತಂದ ಬಟ್ಟೆಯೆಲ್ಲ ಕೈನೂಲಿನ ಖಾದಿಯವೇ! ರತ್ನಾಕರ ಹೇಳಿದ:

"ಆ! ಸಾಕುಬಿಡು! ಇದರ ಮ್ಯಾಲೇ ಮದಿವೀ ಮಾಡಬಹುದು!"

"ಮದಿವೀ ಯಾರದು ಮಾಡತಿಯ್ಯಪಾ ಮತ್ತ? ಏನು ಮಾಡತೀಯೋ, ಮಾಡಿಕೋತೀಯೋ?"

"ಯೋಗಾಯೋಗ ಕೂಡಿಬಂದರ ಮಾಡಲೂಬಹುದು, ಮಾಡಿ-ಕೊಳ್ಳಲೂ ಬಹುದು!"

"ಅಬ್ಬಾ! ಒಳ್ಳೇದು, ಈಗ ಏಳು! ಆ ಯೋಗಾಯೋಗ ಕೂಡಿ ಬರೂ-ದರೊಳಗ, ಬಟ್ಟೇ ಬದಲಿಸಿ, ಸ್ನಾನಾ ಮಾಡೇಳು! ನೀ ಬಂದ ಸುದ್ದೀ ಕಕ್ಕಿಗೆ ಹೇಳಿದೆ. ಆಕೇನು ಸಂತೋಷದಿಂದ ಕುಣಿದಾಡೂದೊಂದು ಬಾಕೀ ಉಳಿದsದ. ನೀ ಹಸಿದು ಬಂದದ್ದನ್ನ ಹೇಳಿದೆ. ಆಕಿ ಅಡಿಗೀ ಆರಂಭಿಸೇ ಬಿಟ್ಟಳು!"

ರತ್ನಾಕರ ಎದ್ದು ಕೋಟನ್ನು ಮೈಯಿಂದ ಇಳುಹಿದ. ಪಂಚೆಯನ್ನು ಉಟ್ಟುಕೊಂಡು, ಪ್ಯಾಂಟನ್ನೂ ತೆಗೆದು ಮಡಿಸಿ ಇಟ್ಟ. ಬೆವರಿನಿಂದ ತೊಯ್ದು ಒಣಗಿದ ಒಳಅಂಗಿಯನ್ನೂ ತೆಗೆದು ಹಾಕಿ, ಧೋತರ-ಟಾವೇಲುಗಳನ್ನು ತೆಗೆದುಕೊಂಡು ಸ್ನಾನಕ್ಕೆ ಹೊರಟ. ರಂಗಣ್ಣನೂ ಅವನನ್ನು ಹಿಂಬಾಲಿಸಿದ.

* * *

ರಂಗಣ್ಣ ರತ್ನಾಕರ ಇಬ್ಬರೂ ಊಟಕ್ಕೆ ಕುಳಿತರು. ರತ್ನಾಕರ ಬಂದಿದ್ದಾನೆಂದು ಕಕ್ಕಿ ವಿಶೇಷ ಆಸ್ಥೆಯಿಂದ ಅಡಿಗೆ ಮಾಡಿದ್ದರು. ಹಪ್ಪಳ, ಸಂಡಿಗೆ, ಉಪ್ಪಿನಕಾಯಿಗಳನ್ನು ಅಣಿಗೊಳಿಸಿದ್ದರು. ರುಚಿಯಾದ ಬುರುಬುರಿ ಕರಿದಿದ್ದರು. ಗವಲಿಯ ಪಾಯಸ ಸಿದ್ಧವಾಗಿದ್ದಿತು. ಸಮೃದ್ಧವಾದ ಹಾಲು-ಗ್ಯೆನ. ಮೇಲೆ ಕಕ್ಕಿ ತಾಯ ಮಮತೆಯಿಂದ ನೀಡುವವರು; ಗೆಳೆಯ ರಂಗಣ್ಣ ಸಲುಗೆಯಿಂದ ಬಲುಮೆ ಮಾಡಿ ಹಾಕಿಸುವವ. ಹಸಿದ ರತ್ನಾಕರನಿಗೆ ಅಂದಿನ ಆ ಊಟ ಸುಧಾರಸವಾಗಿ ಪರಿಣಮಿಸಿತು. ಹೊಟ್ಟೆತುಂಬ ಊಟ ಮಾಡಿದ. ಕೊನೆಯ ಸಲ ಕಕ್ಕಿ ಪಾಯಸ ಬಡಿಸಲು ಬಂದಾಗ ರತ್ನಾಕರ ನುಡಿದ:

" ಸಾಕು ಸಾಕು ಕಕ್ಕೀ ! ಹೊಟ್ಟೆ ತುಂಬಿ ಹೋಯ್ತು. ಇನ್ನ ಹಾಕ ಬ್ಯಾಡ್ರಿ ! ಇದೇನು, ನನಗ ಒಳ್ಳೇ ಬೀಗತನದ ಊಟವೇ ಸಿಕ್ಕ್ಹಾಂಗ ಆಯ್ತು ! ಸಮೀಪದೊಳಗ ನಾನು ಇಷ್ಟು ಊಟಾ ಮಾಡಿದ್ದಿಲ್ಲ ನೋಡ್ರಿ ಕಕ್ಕಿ ! "

ರಂಗಣ್ಣ ಹೇಳಿದ ;

" ನಾನೂ ಇತ್ತೀಚೆಗೆ ಇಷ್ಟು ಉಂಡದ್ದಂದರ ಇಂದs ನೋಡು ! ಯಾಕs ಕಕ್ಕೀ ! "

ಮತ್ತೆ ಒಂದೊಂದು ಸವುಟು ಪಾಯಸ ಹಾಕುತ್ತಲೇ ಕಕ್ಕಿ ಹೇಳಿದರು:

" ನನ್ನ ಹಣೇಬರಹವಾ ಅದು; ನೀ ಏನು ಮಾಡೀ ! ಒಬ್ಬನs ಒಂಟಿ-ಯಾಗಿ ಊಟಕ್ಕ ಕೂತರ ಊಟ ಹೋಗಬೇಕು ಹ್ಯಾಂಗ ? ನೋಡಪ್ಪಾ ರತ್ನಾಕರಾ ! ಈ ಮನ್ಯಾಗ ಮೂರನೆಯವರು ಯಾರಾದರೂ ಎಂದಾರೇ ಬಂದಾರೋ ಇಲ್ಲೋ ಅಂತ ಅನಿಸಿ ಹೋಗೇದ ! ನಾ ಅಂತೂ ಬ್ಯಾಸತ್ತು ಬಿಟ್ಟೇನಿ. ಇವಂದೇನೋ ಯಾವಾಗಲೂ ಊರ ಕಾರಭಾರದ ಕಡೆ ಲಕ್ಷ. ಪುರುಸತ್ತಾಗಿ ಕೂತು ಎಂದೂ ಊಟಾ ಸುದ್ದಾ ಮಾಡೂಹಾಂಗಿಲ್ಲ. ಊಟಕ್ಕ ಕೂತರೂ ಮಾಡಿದ ಅಡಿಗೀ ರುಚಿ-ಬೇರುಚೀ ಕಡೆ ಸಹಿತ ಲಕ್ಷ್ಯs ಇರೂ ಹಾಂಗಿಲ್ಲ. ಏನು ಮಾಡಿ ಹಾಕಿದ್ದನ್ನ ಮಾತಾಡದs ತಿಂದು ಎದ್ದು ನಡೀ-ತಾನ. ಅದರ ಸಲುವಾಗಿ, ಏನು ಅಡಿಗೀ ಮಾಡಬೇಕಂಬೂದs ನನಗ ತಿಳೀದ್ಹಾಂಗ ಆಗತದ. ಇಂದು ನೀ ಬಂದಿ. ಪ್ರೀತಿಯಿಂದ ಜೋಡಾಗಿ ಕೂತುಕೊಂಡು ಊಟಾ ಮಾಡಿದಿರಿ. ಅಡಿಗೀ ಮಾಡಿ ಹಾಕಿದ್ದಕ್ಕ ನನಗೂ ಸಾರ್ಥಕ ಅನಿಸಿದ್ಹಾಂಗ ಆಯ್ತು ?

ರತ್ನಾಕರ-ರಂಗಣ್ಣ ಇಬ್ಬರೂ ಒಬ್ಬರನ್ನೊಬ್ಬರು ನೋಡಿ ಮೆಲುನಗೆ ನಕ್ಕರು. ಕಕ್ಕಿಯ ಬೇಸರದ ಹಿಂದಿನ ಅಪೇಕ್ಷೆ, ರತ್ನಾಕರನಿಗೆ ಮೊದಲಿ-ನಿಂದಲೂ ಗೊತ್ತು. ಎಂತಲೇ ಅವನು ಕಕ್ಕಿಗೆ ಹೇಳಿದ:

" ಕಕ್ಕೀ, ಈ ಮನಿಯೊಳಗ, ರಂಗಣ್ಣನ್ನ ಹೊರಗಿನ ಕೆಲಸಾ ಬಿಡಿಸಿ ಎಳಕೊಂಡು ಬರುವಂಥಾ ಒಂದು ಶಕ್ತಿಯನ್ನ ನಿರ್ಮಾಣ ಮಾಡಬೇಕಾಗೇದ; ಅದನ್ನೊಂದು ಮಾಡಿಬಿಡ್ರಿ ! ಅಂದರ, ರಂಗಣ್ಣನ ಔದಾಸೀನ್ಯವೂ ಕಡಿಮೆ-ಯಾಗತದ; ನಿಮ್ಮ ಬ್ಯಾಸರನೂ ಹೊರಟು ಹೋಗತದ ! "

ಕಕ್ಕಿ ನಿಟ್ಟುಸಿರು ಬಿಟ್ಟು ಹೇಳಿದರು :

" ನಿನ್ನ ಮಾತಿನ ಅರ್ಥ ನನಗ ಹೊಳೀತು. ಆದರ ನನ್ನ ಕೈಯೊಳಗ ಏನದ ಹೇಳು! ನನ್ನ ಅಪೇಕ್ಷಾ ಪೂರ್ಣ ಆಗಬೇಕಾದರ, ದೇವರೇ ನಮ್ಮ ರಂಗಣ್ಣನ ಬುದ್ಧೀ ತಿದ್ದಬೇಕು. ಎಂದು ಕೇಳತಾನೋ ದೇವರು ನನ್ನ ಮೊರೀ!"

"ನಿಮ್ಮ ದೇವರು ಬರೀ ಮೊರೀ ಇಟ್ಟರ ಕೇಳತಾನೆಲ್ಲೆ! ಹರಿಕೀ ಸಲ್ಲಿಸಬೇಕಾಗತದ! ತಿಳೀತೇನು ? "

ಕಕ್ಕಿ ದೈನ್ಯಧ್ವನಿಯಲ್ಲಿ ಮಾತನಾಡಿದರು :

"ಯಾವ ಹರಿಕೀ ಸಲ್ಲಿಸಬೇಕಂತೀ ಹೇಳು, ಅದನ್ನ ಸಲ್ಲಿಸತೀನಿ! ಹನ್ನೆರಡೂ ತಿಂಗಳು ಜೋಡು ನಂದಾದೀಪಾ ಇಡಿಸತೀನಿ! ನನ್ನ ಕತ್ತಲೀ ಮನಿಗೆ ಬೆಳಕು ಆಗಬೇಕೆಂಬೂ ಆಶೆಯಿಂದs ನಾ ರಂಗಣ್ಣನ್ನ ಮಗನನ್ನಾಗಿ ಮಾಡಿಕೊಂಡೆ. ಆದರ ರಂಗಣ್ಣ, ಆ ಬೆಳಕನ್ನ ಮುಂದುವರಿಸೂ ಭರವಸೆ-ಯೇನೂ ನನಗ ಕೊಡವೊಲ್ಲ! ಇಂವ ಏನು ತಿಳಿಯದ ತಿಳಿಗೇಡಿ ಇದ್ದಾನ ಅನ್ನುವ ಹಾಂಗಿಲ್ಲಾ ಏನಿಲ್ಲಾ! ಎಲ್ಲಾ ಮಾತೂ ಗೊತ್ತಿದ್ದವ ಇದ್ದಾನ. ಇಂವಗ ಹೆಚ್ಚಾಗಿ ನಾ ಹೇಳೂದು ಏನದ? ತನ್ನ ದೇಶಭಕ್ತಿಯ ಕಾರ್ಯ-ದೊಳಗ ಇಂವಗ ಅನಂದ ಅನಿಸತಿದ್ದೀತು. ಆದರ ಮುದ್ದು ಮೊಮ್ಮಗನ ತೊಟ್ಟಿಲ ಮನ್ಯಾಗ ತೂಗಬೇಕಂಬೂ ನನ್ನ ಹಂಬಲ ಹ್ಯಾಂಗ ಶಾಂತ ಆಗ ಬೇಕು ? ಏನು ಮಾಡಬೇಕಂಬೂದು ನನಗೊಂದೂ ತಿಳೀದ್ಹಾಂಗ ಆಗೇದ. ಏನೋ, ಜೀವ ಇರುವ ತನಕಾ ನಾಕು ದಿನಾ ಹ್ಯಾಂಗsರೇ ಕಾಲಾ ನೂಕಿ, ಒಂದು ದಿನಾ 'ರಾಮ–ರಾಮ' ಅನ್ನೂದೂ ಆಯ್ತು!"

ಕಕ್ಕಿಯ ಕಂಠ ಬಿಗಿದು ಬಂದಿತು. ಕಣ್ಣಲ್ಲಿ ಕಂಬನಿಗಳೂ ಮುಖ ತೋರಿಸಿದುವು. ಆಗ ರಂಗಣ್ಣನ ಮುಖದ ಕಡೆಗೆ ರತ್ನಾಕರ ನೋಡಿದ. ಕಂಗೆಟ್ಟ ಭಾವ ಆತನ ಮುಖದ ಮೇಲೆ ಕಂಡಿತು. ಕಕ್ಕಿಯ ವಿಷಯವಾದ ಆದರ–ಕಳವಳದ ಗೆರೆಗಳೂ ಅಲ್ಲಿ ಮೂಡಿ ನಿಂತಿದ್ದುವು. ಆಗ ರತ್ನಾಕರ ಹೇಳಿದ :

"ಕಕ್ಕೀ, ನೀವು ಚಿಂತೀ ಮಾಡಬಾಡ್ರಿ! ನಿಮ್ಮ ಹರಿಕಿ-ಪ್ರಾರ್ಥನಾ ಇವುಗಳಿಂದ ಪ್ರಸನ್ನನಾದ ದೇವರು, ನನ್ನ ತಲೀಮ್ಯಾಲ ನಿಮ್ಮ ಅಪೇಕ್ಷಾ

ಪೂರ್ಣಮಾಡುವ ಕಾರ್ಯದ ಭಾರಾ ವಹಿಸ್ಯಾನ. ಮೊನ್ನೇ ನನಗೊಂದು ಕನಸು ಬಿತ್ತು. ನಿಮ್ಮ ಕುಲದೇವರು—ವೆಂಕಟೇಶ ದೇವರು ಹೌದಲ್ಲೋ ? ಸಾಕ್ಷಾತ್ ವೆಂಕಟೇಶ ದೇವರೇ ಸ್ವತಃ ಬಂದು ಹೇಳಿದ: 'ನೀನು ಎಲ್ಲಾ ಕೆಲಸಾ ಬಿಟ್ಟು ಮುದ್ಯಾಪುರಕ್ಕ ಹೋಗು! ಅಲ್ಲಿ ನನ್ನ ಪರಮಭಕ್ತಳು ಒಬ್ಬಾಕಿ ಇದ್ದಾಳ. ಆಕೀ ಹರಕಿ–ಮುಡಿಪುಗಳ ಋಣ ನನಗ ತುಂಬಾ ಭಾರ ಆಗೇದ. ಅದನ್ನ ಇಳಿಸಿ, ನನ್ನ ತಲೀ ಮ್ಯಾಲಿನ ಭಾರಾ ಕಡಿಮಿ ಮಾಡಿಕೋಬೇಕಾದರ, ಆಕೀ ಅಪೇಕ್ಷಾ ಪೂರ್ಣ ಆಗುವಂತೆ ನೋಡಿಕೋ ಬೇಕಾಗೇದ! ಆ ಕೆಲಸಾ ನಿನ್ನ ಮ್ಯಾಲ ಒಪ್ಪಿಸೀನಿ!' ಅಂತ ನನಗ ಹೇಳಿದ. ನಾ ಈಗ, ಆ ವೆಂಕಟೇಶ ದೇವರು ಒಪ್ಪಿಸಿಕೊಟ್ಟ ಕೆಲಸಕ್ಕಾಗಿಯೇ ಇಲ್ಲಿಗೆ ಬಂದಿರೋದು!"

ರತ್ನಾಕರ ಹೀಗೆ ಹೇಳುವ ಮುಂದೆ, ರಂಗಣ್ಣ ವಿಸ್ಮಯಭಾವದವನಾಗಿ ರತ್ನಾಕರನ ಕಡೆಗೆ ನೆಟ್ಟ ದೃಷ್ಟಿಯಿಂದ ನೋಡುತ್ತಲಿದ್ದ. ರತ್ನಾಕರ ಮಾತ-ನಾಡುತ್ತ, ನಡುನಡುವೆ ರಂಗಣ್ಣನ ಕಡೆಗೆ ನೋಡಿನೋಡಿ ಮೆಲುನಗೆ ನಗುತ್ತ ಲಿದ್ದ. ಮಾತು ಮುಗಿದ ಮೇಲೆ ಕಕ್ಕಿ ಹೇಳಿದರು:

"ಖರೇನs ರತ್ನಾಕರ ನಿನ್ನ ಮಾತು? ನಮ್ಮಪ್ಪಾ, ತಿರುಪತಿ ಶ್ರೀನಿ-ವಾಸಾ! ನನ್ನ ಹೃದಯದ ಪ್ರಾರ್ಥನಾ ಒಮ್ಮೆ ನಿನ್ನ ಕಿವಿಗೆ ಮುಟ್ಟಿತs! ರತ್ನಾಕರಾ, ನೀನು ದೇವರ ದೂತ ಆಗಿ ಬಂದೀದಿ; ಅದಕ್ಕs ನೋಡು, ನೀ.... ಬಂದ ಸುದ್ದಿ ನನಗ ಹತ್ತ್ಯಾದs ತಡಾ! ಹಾಂಗs ಮನಸು ಹಿಗ್ಗಿನಿಂದ ಕುಣೀಲಿಕ್ಕೆ ಹತ್ತಿತು. ದೇವರ ಮಹಿಮಾ ದೊಡ್ಡದಪ್ಪಾ ರತ್ನಾಕರಾ!"

ಊಟದ ಕೊನೆಯ ಕೆನೆಮೊಸರನ್ನವಾಯಿತು. ರತ್ನಾಕರ ನಗೆಯ ಧ್ವನಿಯಲ್ಲಿ ಹೇಳಿದ:

"ಕಕ್ಕೀ, ಇಂದಿನ ಮಟ್ಟಿಗೆ ದೇವರು ಎರಡು ಹೊಟ್ಟೆಗಳನ್ನ ಕೊಟ್ಟಿದ್ದರ ಒಳ್ಳೇದಾಗತಿತ್ತು ನೋಡ್ರಿ! ನಿಮ್ಮ ಅಡಿಗೀ ನೆನಪು ಆಗಿದ್ದರ, ನನ್ನ ಇಲ್ಲಿಗೆ ಕಳಿಸಿದ ವೆಂಕಟೇಶ ದೇವರ ಹತ್ತರ ಅದನ್ನ ಕೇಳಿಕೋತಿದ್ದೆ. ಆದರ ನಿದ್ದೀ ಗುಂಗಿನೊಳಗ ನೆನಪs ಆಗಲಿಲ್ಲ!" ರತ್ನಾಕರನಾಡಿದ ಮಾತನ್ನು ಕೇಳಿ ರಂಗಣ್ಣನೂ ಗಟ್ಟಿಯಾಗಿ ನಕ್ಕುಬಿಟ್ಟ.

## ೧೭ನೆಯ ಪರಿಚ್ಛೇದ

ರತ್ನಾಕರ ರಂಗಣ್ಣ ಇಬ್ಬರೂ ಊಟ ಮುಗಿಸಿಕೊಂಡು ಹೊರಗೆ ಬಂದಾಗ, ಹೊರಗಿನ ಪಡಸಾಲೆಯಲ್ಲಿ ಹಳ್ಳಿಯ ಜನರು ಹಿಂಡು ಹಿಂಡಾಗಿ ಕುಳಿತುದನ್ನು ರತ್ನಾಕರ ನೋಡಿದ. ಈ ಮೊದಲೇ ಮೂರು ನಾಲ್ಕು ಸಲ ಮುದ್ದಾಪುರಕ್ಕೆ ಬಂದು ಹೋಗಿದ್ದ ರತ್ನಾಕರನನ್ನು, ಕುಳಿತಿದ್ದವರಲ್ಲಿಯ ಕೆಲವರು ಗುರುತಿಸಿ ನಮಸ್ಕಾರ ಮಾಡಿದರು. ಹಳ್ಳಿಯ ಹಿರಿಯ ರೈತ ತಿಮ್ಮರಡ್ಡಿ ಕೇಳಿದ :

" ನೀವು ಯಾವಾಗ ಬಂದಿರೀ ರಾಯರ ? "

"ಇಂದs ಬಂದೆ ತಿಮ್ಮಣ್ಣಾ! ಮತ್ತೇನು? ಎಲ್ಲಾ ಕ್ಷೇಮ ಹೌದಲ್ಲೊ?"

" ಯಾತರ ಕ್ಷೇಮ ಬಿಡ್ರಿ ! ಗಾಂಧಿಯವರು ಹೋಗಿ ತುರಂಗದೊಳಗ ಕುಂತರು. ದಿನಕ್ಕ ದಿನಾ ದೇಶದ ಮುಂದಾಳುಗಳೆಲ್ಲಾ ಸರಕಾರದ ಬಲೆಯೊಳಗ ಬೀಳಲಾಕ ಹತ್ತಿದರು. ಈಗ ಯಾವ ಮಾತಿಂದೂ ನೆಲೀನs ಹತ್ತದ್ಹಾಂಗ ಆಗೇತಿ. ಎಲ್ಲಾ ಮಂದೀನೂ ಹೋಗಿ ಸೆರೆಮನೀ ಸೇರಿಬಿಟ್ಟರ, ನಮ್ಮಂಥಾ ಮಂದಿಗೆ ಕಣ್ಣು ಕಟ್ಟಿ ಕಾಡಿನೊಳಗ ಬಿಟ್ಹಾಂಗs ಅಲ್ಲೇನ್ರೀ !"

" ನಿನ್ನ ಮಾತು ನಿಜ ತಿಮ್ಮಣ್ಣಾ ! ನಮ್ಮಲ್ಲಿ ಕಲಿತು ಶಾಣ್ಯಾರಾದ ಮಂದಿ ಭಾಳ ಇಲ್ಲ. ಇನ್ನ ಕಲಿತ ಮಂದಿಯೊಳಗೂ ದೇಶದ ಕಲ್ಪನಾ ಇರೂ ಮಂದಿ ಸಿಗೂದಂದರ ನೂರಕ್ಕ ಒಬ್ಬರೋ, ಸಾವಿರಕ್ಕ ಒಬ್ಬರೋ ! ಕಲ್ಪನಾ ಇದ್ದ ಕೆಲವು ಮಂದಿ, ಈ ರಾಜಕೀಯ ಚಳುವಳಿಯೊಳಗ ಸೇರಿಕೊಂಡಾರ. ನಮ್ಮ ಸರಕಾರ ಅವರನ್ನಷ್ಟು ಒಯ್ದು ಜೇಲಿನೊಳಗ ಹಾಕಿತಂದರ, ಅದರ ದಾರಿ ನಿಶ್ಚಿಂತ ಆಗತದ. ಸ್ವಾರ್ಥದ ಕಡೇನs ಕಣ್ಣಿಟ್ಟು ಹೊರಟಿರುವ ನಮ್ಮ ಬಹುಸಂಖ್ಯಾಕ ಕಲಿತವರು, ಸರಕಾರಕ್ಕ ಸಹಾಯಕರಾಗಿ ನಿಂತುಕೊಂಡಾರs ಹೊರತು, ದೇಶದ ಸ್ವಾತಂತ್ರ್ಯದ ಕಲ್ಪನಾ ಅವರಿಗೆ ಕನಸಿನೊಳಗ ಕೂಡಾ ಬರೂದಿಲ್ಲಾ. ಕಣ್ಣಿದ್ದು ಮುಚ್ಚಿಕೊಂಡಿರುವ ಕುರುಡರು ಅವರು. ಅವರಿಂದ ದೇಶಕ್ಕ ಯಾವ ಪ್ರಯೋಜನವೂ ಇಲ್ಲ. ಈಗ ನಮ್ಮ ಹಳ್ಳಿಯ ಜನಾ ಒಂದಾಗಿ ಮುಂದೆ ಬಂದು ಹೋರಾಡುವ ಕಾಲ ಬಂದsದ. ಹಿಂದುಸ್ತಾನದೊಳಗ ಹಳ್ಳಿಗರ ಸಂಖ್ಯಾನs ನೂರಕ್ಕ ತೊಂಬತ್ತರಷ್ಟು ಅದ.

ಅವರು ಎಚ್ಚತ್ತು ಎದ್ದು ಬಿಟ್ಟರ, ನಮ್ಮ ಸ್ವಾತಂತ್ರ್ಯಯುದ್ಧಕ್ಕ ಗೆಲವು ಕಟ್ಟಿ ಇಟ್ಹಾಂಗ ನೋಡು !"

ತಿಮ್ಮಣ್ಣ ಹೇಳಲು ತೊಡಗಿದ :

" ಹಳ್ಳೀ ಜನಾ ಎಚ್ಚತ್ತು ಏಳಬಹುದನ್ರಿ ! ಆದರ ಎಚ್ಚರಗೊಳಿಸಲಿಕೆ ಮುಂಚೆ ಎದ್ದವರು ಯಾರಾದರೂ ಬೇಕs ಬೇಕಲಾ ! ಎದ್ದವರೆಲ್ಲಾ ಜೇಲಿನೊಳಗ ಬಿದ್ದುಬಿಟ್ಟರ, ಈ ಬಿದ್ದಿರುವ ಹಳ್ಳೀ ಮಂದಿನ್ನ ಎಚ್ಚರಿಸುವವರು ಯಾರರೀ ?"

ರತ್ನಾಕರ ಮೆಚ್ಚಿ ಮಾತಾಡಿದ :

"ಭಲೆ ತಿಮ್ಮಣ್ಣಾ ! ನಿನ್ನ ಮಾತು ಕೇಳಿ ನನಗ ಭಾಳ ಸಂತೋಷ ಆತು. ನಿನ್ನಂಥಾ ತಿಳಿವಳಿಕಿ ಈಗ ನಮ್ಮ ಕಲಿತ ಮಂದಿಯೊಳಗೂ ಇಲ್ಲ. ಈಗ ನಿಮ್ಮಂಥವರೇ ಹಳ್ಳಿಗೆ ಮುಂದಾಳಾಗಿ ನಿಂತು, ಜನರಲ್ಲಿ ದೇಶದ ಕಲ್ಪನಾ ಹುಟ್ಟಿಸಬೇಕು. ಹಿಂದೆ ನಮ್ಮ ಪಂಜಾಬದ ಅರಸು ಅನಂಗಪಾಲನಿಗೂ ಮುಸಲ್ಮಾನ್ ಅರಸನಿಗೂ ನಡೆದ ಸ್ವಾತಂತ್ರ್ಯಸಂರಕ್ಷಕ ಯುದ್ಧದ ಕಾಲಕ್ಕ, ಅಂದಿನ ಹಳ್ಳಿಯ ಜನಾನೇ ಅನಂಗಪಾಲನಿಗೆ ಎಲ್ಲಾ ಬಗೆಯಿಂದಲೂ ಸಹಾಯ ಮಾಡಿ, ಗೆಲವು ಗಳಿಸಿಕೊಟ್ಟರಂತ. ಈಗ ನೀವೆಲ್ಲಾ ಹಾಂಗ ಮಾಡಲಿಕ್ಕೆ ಸಿದ್ಧರಾಗಬೇಕಾಗೇದ. ನಮ್ಮ ಹಳ್ಳಿಗರೆಲ್ಲಾ ಇಂದಿನ ಸತ್ಯಾಗ್ರಹ ಹೋರಾಟದೊಳಗ ನುಗ್ಗಿ ಮುಂದುವರಿದು ನಡೀಬೇಕಾಗೇದ. ನೀವೆಲ್ಲಾ ಸಿದ್ಧರಾಗಿ ನಿಂತರ, ಸರಕಾರದವರು ಎಷ್ಟು ಜನರನ್ನಂತ ಸೆರೆಮನಿಗೆ ಕಳಿಸತಾರೋ ನೋಡೋಣ!"

ಇನ್ನೊಬ್ಬ ಹಳ್ಳಿಯ ರೈತ ನಿಂಗಪ್ಪ ಹೇಳಿದ :

" ನಾವೆಲ್ಲಾರೂ ಸತ್ಯಾಗ್ರಹ ಮಾಡಲಾಕ ತಯಾರ ಇದ್ದೀವಿರಿ! ನಮ್ಮ ರಂಗಣ್ಣಾವರು ಮಾತ್ರ ಸತ್ಯಾಗ್ರಹ ಮಾಡದs ಇಲ್ಲೇ ಇರಬೇಕು ನೋಡ್ರಿ ! ಯಾಕಂದರ, ನಮ್ಮ ಹಳ್ಳೀ ಜನದೊಳಗ ಇನ್ನೂ ತಿಳವಳಿಕಿ ಮೂಡಿಲ್ಲರಿ ! ನಾಯಿ–ನರೀ ಹಾಂಗ, ತಮ್ಮತಮ್ಮೊಳಗs ಕಚ್ಚಾಡೂ ನಡತಿ ಇನ್ನೂ ಹೋಗಿಲ್ಲರಿ ! ರಂಗಣ್ಣಾವರಂತಾ ಹಿರ್ಯಾರು ಒಬ್ಬರು ಊರೊಳಗ ಇದ್ದು ಬಿಟ್ಟರ, ಈ ಊರಿನ ಹುಡುಗೋರೆಲ್ಲಾ ಇಂದಿನ ಚಳವಳಿಯೊಳಗ ನುಗ್ಗಲಾಕ ತಯಾರ ಇದ್ದಾರೇನ್ರಿ ! ರಂಗಣ್ಣಾವರು ಊರೊಳಗs ಇದ್ದುಬಿಟ್ಟರ, ನಮ್ಮ ಜನಕ್ಕ ತಮ್ಮ ಮನೀದು—ಮಾರಿನದು—ಒಂದರದೂ ಚಿಂತಿ ಇಲ್ಲರಿ!"

ರತ್ನಾಕರ ರಂಗಣ್ಣನ ಮುಖದ ಕಡೆಗೆ ನೋಡುತ್ತ ನಗುತ್ತ ಹೇಳಿದ:
"ಅವರು ಇಲ್ಲೇ ಇದ್ದೇ ಇರತಾರಲಾ; ಅವರೆಲ್ಲಿ ಹೋಗಣಾರ?"

ನಿಂಗಪ್ಪ ಹೇಳಲು ತೊಡಗಿದ ;

"ಏನ ಇರತಾರರೀ ರಾಯರ! ಗಾಂಧಿಯವರನ್ನ ಹಿಡಿದ ಸುದ್ದಿ ಬಂದ ಮರುದಿನಾನs ನಮ್ಮನ್ನೆಲ್ಲಾ ಕೂಡಿಸಿ, ತಾವೂ ಉಪ್ಪಿನ ಸತ್ಯಾಗ್ರಹದೊಳಗ ಸೇರಿಕೊಳ್ಳೀವಿ—ಅಂತ ಹೇಳಿದರು. ಆಗ ನಾವೆಲ್ಲಾ ಕೂಡಿ ಹೇಳಿದಿವಿ: 'ನಮಗ ಸ್ವರಾಜ್ಯ, ಸ್ವಾತಂತ್ರ್ಯ ಆದೊಂಬೂ ಬೇಕಾಗಿಲ್ಲ. ರಂಗಣ್ಣವರs, ನೀವು ಮಾತ್ರ ನಮಗ ಬೇಕು. ಈ ಊರು ಬಿಟ್ಟು ನೀವು ಎಲ್ಲ್ಯಾ ಹೋಗೂ ಕಾರಣಿಲ್ಲ. ನೀವೊಬ್ಬರು ಇದ್ದರ, ನಮಗ ಆ ಸ್ವರಾಜ್ಯ, ಸ್ವಾತಂತ್ರ್ಯ, ಸಿಕ್ಕ್ಯಾಂಗs ಐತಿ! ಇಷ್ಟ್ಯಾ ಮೀರಿ ನೀವು ಹೋಗಬೇಕಂತ ಹಟಾನs ಹಿಡಿದರ, ನಾವೆಲ್ಲಾ ಕೂಳೂ-ನೀರೂ ಬಿಟ್ಟು ನಿಮ್ಮ ಅಂಗಳದೊಳಗs ಕೂತು ಪ್ರಾಣಾ ಬಿಡತೀವಿ—' ಅಂತ ಹೇಳಿದೆವು. ಅದಕ್ಕ ನಮ್ಮ ರಾಯರು, ನಿರ್ವಾಹ ಇಲ್ಲದ ಸತ್ಯಾಗ್ರಹಕ್ಕ ಹೋಗೋದನ್ನ ನಿಲ್ಲಿಸಿದರು. ನಮಗೂ ಎಲ್ಲಾರಿಗೂ ಸಮಾಧಾನ ಆತು. ನೋಡ್ರಿ ರಾಯರs, ರಂಗಣ್ಣವರು ನಮ್ಮ ಹಳ್ಳಿಗೆ ಬರೂದಕಿಂತಾ ಮೊದಲ, ನಮ್ಮ ಹಳ್ಳಿ ಒಂದು ರೀತಿಂದs ಹೆಸರಾಗಿತ್ತು; ಇವರು ಬಂದ ಮ್ಯಾಲ ಈಗ ಇನ್ನೊಂದು ರೀತಿಂದ ಹೆಸರಾಗೆಯ್ತ್ರಿ! ಜನಾ ಹೊಟ್ಟಿ ತುಂಬಾ ಉಂಡು, ಈಗ ಚಿಂತೆಯಿಲ್ಲದ ರಾತ್ರೀ ನಿದ್ದೀ ಮಾಡತ್ತೈತಿರಿ! ಇಲ್ಲದಿದ್ದರ ಏನ್ರಿ, ಮುದ್ದಾಪುರ ಅಂದರ ಗುದ್ದಾಪುರ ಅಂತ ಅನಿಸಿಗೋತಿತ್ತರಿ!"

ರತ್ನಾಕರ ಅಭಿಮಾನಪೂರ್ಣ ದೃಷ್ಟಿಗಳಿಂದ ರಂಗಣ್ಣನನ್ನು ನೋಡಿದ. ರಂಗಣ್ಣ ತನ್ನ ಸಹಜವಾದ ಮುಗುಳುನಗೆಯ ಮೊಗದಿಂದ ಮೌನಿಯಾಗಿಯೆ ಕುಳಿತಿದ್ದ. ಪ್ರಾಮಾಣಿಕನಾದ ಒಬ್ಬನೆ ಒಬ್ಬ ಮನುಷ್ಯ ಕೂಡ ಎಷ್ಟೊಂದು ಒಳ್ಳೆಯದನ್ನು ಮಾಡಬಲ್ಲನಲ್ಲ ಲೋಕಕ್ಕೆ— ಎಂದೆನಿಸಿತು ರತ್ನಾಕರನಿಗೆ. ಭಾರತದ ಪ್ರತಿಯೊಂದು ಹಳ್ಳಿಗೂ ರಂಗಣ್ಣನಂತಹನೊಬ್ಬ ನಾಯಕನು ಇದ್ದುಬಿಟ್ಟರೆ, ಸ್ವರಾಜ್ಯ-ಸ್ವಾತಂತ್ರ್ಯಗಳ ಈ ರಾಜಸಯುದ್ಧವನ್ನಾದರೂ ಹೂಡಬೇಕಾಗುವುದೇಕೆ? ಇಂತಹ ಸಾತ್ತ್ವಿಕಶಕ್ತಿಗಳೆದುರು ಬ್ರಿಟಿಷರ ಕುಟಿಲ ರಾಜಕಾರ್ಯದ ಶಕ್ತಿ ನಿಲ್ಲಲು ಸಮರ್ಥವಾಗುವುದೇ?—ಎಂದು ಮನದಲ್ಲಿಯೆ ಭಾವಿಸಿದ ರತ್ನಾಕರ. 'ರಂಗಣ್ಣವರಂತವರೊಬ್ಬರು ಊರೊಳಗ ಇದ್ದುಬಿಟ್ಟರ, ಸ್ವರಾಜ್ಯ, ಸ್ವಾತಂತ್ರ್ಯ ನಮಗ ಸಿಕ್ಕ್ಯಾಂಗs ಐತಿರಿ' ಎಂದು ಹೇಳಿದ ನಿಂಗಪ್ಪನ

ಮಾತಿನಲ್ಲಿ ತುಂಬಿದ ಅರ್ಥವತ್ತಾದ ವಿಚಾರ, ರತ್ನಾಕರನ ಹೃದಯವನ್ನು ಅರಳಿಸಿತು. ಆಗ ರತ್ನಾಕರನು ಹೇಳಿದ:

"ನೀವು ಒಳ್ಳೆಯ ಕೆಲಸಾ ಮಾಡಿದಿರಿ! ರಂಗಣ್ಣವರು ಈಗ ನಿಮ್ಮನ್ನು ಬಿಟ್ಟು ಸೆರೆಮನಿಗೆ ಹೊರಟು ಹೋಗಿದ್ದರ, ಇಷ್ಟು ದಿನಾ ಅವರು ಮಾಡಿದ ಕೆಲಸ ಎಲ್ಲಾ ನೀರೊಳಗ ಹೋಮಾ ಮಾಡಿದ್ಹಾಂಗ ಆಗತಿತ್ತು. ತುಂಟ ಹುಡುಗರಿಗೆ ಕಲಿಸಲಿಕ್ಕೆ ಒಳ್ಳೆಯ ಮಾಸ್ತರು ಗಂಟು ಬಿದ್ದರ, ಆ ತುಂಟ ಹುಡುಗರೇ ಹಾದಿಗೆ ಬಂದು ಭಾಳ ಶ್ಯಾಣ್ಯಾರಾಗತಾರಂತ. ಆದರ, ಇನ್ನೂ ಅವರು ಅರ್ಧಾ–ಮರ್ಧಾ ಕಲಿಯೂದರೊಳಗs ಆ ಮಾಸ್ತರು ಹೋಗಿ-ಬಿಟ್ಟರ, ಆ ಹುಡುಗರ ತುಂಟತನ ಇದ್ಹಾಂಗs ಇದ್ದು ಬಿಡತsದ; ಇಷ್ಟs ಅಲ್ಲ, ವಯಸ್ಸು ಬೆಳೆದ್ಹಾಂಗ ಬೆಳಕೋತs ಹೋಗತsದ. ನಮ್ಮ ಹಳ್ಳಿಯ ಜನರಂದರ, ಇನ್ನೂ ತುಂಟ ಹುಡುಗರ ಹಾಂಗ ಇದ್ದಾರ. ಅವರಿಗೆ ಒಳ್ಳೆಯ ಜ್ಞಾನ ಕೊಟ್ಟು ಹಾದಿಗೆ ಹಚ್ಚಬೇಕಾದರ, ರಂಗಣ್ಣವರಂಥಾ ಒಳ್ಳೆಯ ಮಾಸ್ತರು, ಬಿಟ್ಟೂಬಿಡದ್ಹಾಂಗ, ಅವರ ಹತ್ತರ ಇದ್ದೇ ಇರಬೇಕಾಗತsದ!"

ನಿಂಗಪ್ಪ ಹೇಳಿದ:

"ಹಾಂ ನೋಡ್ರಿ! ಬೀಜದ ಮಾತು ಹೇಳಿದಿರಿ ನೋಡ್ರಿ ರಾಯರs ನೀವು! ಈಗ ನನ್ನ ಮಾತನ್ನs ನಾ ಹೇಳತೀನಿ ನೋಡ್ರಿ! ಮನಿಸ್ಯಾನ ಮನಸು ಹದಿನಾರ ಕಡೆ ಹರದಾಡತಿರತೈತಿರಿ! ರಂಗಣ್ಣವರಂತವರ ಹೆದರಿಕೆ ಇದ್ದರ, ಅದಕ್ಕ ಒಂದು ಲಗಾಮು ಹಾಕಿದ್ಹಾಂಗ ಆಗತೈತಿರಿ! ಇನ್ನ ಆ ಲಗಾಮು ಇಲ್ಲದ್ಹಾಂಗ ಆತ ಅನ್ರಿ; ಈ ಮನಸಿನ ತುಂಟ ಕುದರಿ, ಸಿಕ್ಕವರ ಹೊಲದೊಳಗ ಬಾಯಿ ಹಾಕೂದು ಅಲ್ರಿ! ಮತ್ತ ಆ ಹೊಲದ ಯಜಮಾನ ಸುಮ್ಮಗs ಬಿಡತಾನೇನ್ರಿ! ಹೊಲದ ಫಲಾ ಕಳಕೊಂಡ ಕಿಚ್ಚಿಗೆ ಒಂದೆರಡು ಗುದಿಗೀ ಏಟು ಹಾಕುವವನs! ಆತು, ಜಗಳಕ್ಕ ಮೂಲ ಹೀಂಗs ನೋಡ್ರಿ! ಮತ್ತ ತಿಳಿವಳಿಕಿ ಇಲ್ಲದ ಜನಾ ಮೋಜು ನೋಡಲಾಕಂತ, ಈ ಜಗಳದ ಕಿಚ್ಚಿಗೆ ಎಣ್ಣೀ ಸುರುವವರs! ಇಂತಾದರಿಂದsನ ನಮ್ಮ ಹಳ್ಳಿಗೆ ಹಳ್ಳೀ ಹಾಳಾಗಿ ಹೋಗೂ ಪರಸಂಗ ಬರತಾವ ಏನ್ರಿ! ಇಂಥಾ ಕಿಚ್ಚಿನೊಳಗ ಸುಟ-ಗೊಂಡು ಸಾಕಾಗಿ ಹೋಗಿತ್ತು. ಈಗ ನಮ್ಮಪ್ಪ ರಂಗಣ್ಣವರ ಕಾಲ್ಗುಣ-ದಿಂದ,ನುಣ್ಣಗ ತಣ್ಣಗ ಆಗಿ ಸಮಾದಾನದಿಂದ ಬಾಳೇ ಮಾಡಲಾಕ ಹತ್ತೀವಿ!"

ಕುಳಿತ ಜನರೆಲ್ಲರ ಮುಖದ ಮೇಲೂ ನಿಂಗಪ್ಪನು ಆಡುವ ಮಾತು ಸತ್ಯವಾದುದೆಂದು ಹೇಳುವ ಭಾವ ಮೂಡಿ ನಿಂತಿದ್ದಿತು. ಮಹಾತ್ಮರು ಹೇಳುವ ಅಹಿಂಸೆ–ಸತ್ಯಗಳ ಸಂಪೂರ್ಣಾಚರಣೆಯ ವಿಚಾರದಲ್ಲಿ, ಬುದ್ಧಿವಾದಿಯಾದ ರತ್ನಾಕರನಿಗೆ ಅಷ್ಟೊಂದು ಶ್ರದ್ಧೆಯಿರಲಿಲ್ಲ. ಈಗ ಈ ಹಳ್ಳಿಯ ರೈತ—ನಿಂಗಪ್ಪನ ಮಾತುಗಳು, ಆ ಅಹಿಂಸೆ–ಸತ್ಯಗಳ ಆಚರಣೆಯ ಫಲವನ್ನು ಪ್ರತ್ಯಕ್ಷಮಾಡಿ ತೋರಿಸಿದಂತೆನಿಸಿತು ರತ್ನಾಕರನಿಗೆ. ಆಗ ರಂಗಣ್ಣನನ್ನು ಕುರಿತು ಅವನು ಹೇಳಿದ :

"ರಂಗಣ್ಣಾ ! ನಿಜವಾಗಿಯೂ ನೀನು ಕೈಕೊಂಡಿರುವ ಕಾರ್ಯ ಧನ್ಯವಾದದ್ದು ! ಬ್ರಿಟಿಷರ ವಿಷಯಕವಾದ ನನ್ನ ದ್ವೇಷ, ನನ್ನಲ್ಲಿ—ಬರೀ ಅವರೊಂದಿಗೆ— ಕಾದಾಡಬೇಕೆಂಬ ರಜೋವೃತ್ತಿಯನ್ನು ಹುಟ್ಟಿಸಿತು. ನಮ್ಮ ಜನರಲ್ಲಿ ಮನುಷ್ಯತ್ವವನ್ನು ಜಾಗೃತಿಗೊಳಿಸಿದರೆ, ಎಲ್ಲ ಅಸಾಧ್ಯಗಳೂ ಸಾಧ್ಯವಾಗುವುವೆಂಬ ಹೊಸ ಪಾಠವನ್ನು ನಿನ್ನಿಂದ ನಾನು ಈವೊತ್ತು ಕಲಿತುಕೊಂಡೆ. ಕೇವಲ ಭಾವನಾವಶರಾಗಿ, ರಾಜಕೀಯ ಆಂದೋಲನದಲ್ಲಿ ಧುಮುಕಿ, ಸರಕಾರದ ಸೆರೆಮನೆ ಸೇರುವುದು ನಿಜವಾದ ದೇಶಭಕ್ತಿಯಲ್ಲ; ದೇಶದ ಜನಮನವನ್ನು ತಿದ್ದಿ ಸುಸ್ಕಾರಗೊಳಿಸುವ ವಿಧಾಯಕಕಾರ್ಯವೇ ನಿಜವಾದ ದೇಶಭಕ್ತಿ ! ನಿನ್ನ ಕಾರ್ಯದ ಮುಂದೆ ನನ್ನ ತಲೆಯನ್ನು ಬಾಗಿಸುತ್ತೇನೆ ರಂಗಣ್ಣಾ !"

"ರಂಗಣ್ಣ ನಗುತ್ತ ಹೇಳಿದ :

"ರತ್ನಾಕರ ! ಬುದ್ಧಿವಾದಿಯಾದ ನೀನೂ ಈಗ ಭಾವಾವಿಷ್ಟನಾಗಿ ಮಾತನಾಡಲಿಕ್ಕೆ ಹತ್ತೀದಿ ! ವಸಿಷ್ಠನ ತಪೋಬಲ ನೋಡಿದ ಕ್ಷತ್ರಿಯ ಶಿರೋಮಣಿ ವಿಶ್ವಾಮಿತ್ರ, ತಪಸ್ಸಿನ ಬೆನ್ನುಹತ್ತಿದ ಕಥೆ ಕೇಳಿದ್ದೀಯಲ್ಲವೆ ? ಒಬ್ಬನೆ ವಿಶ್ವಾಮಿತ್ರ ತಪಸ್ಸಿನ ಬೆನ್ನು ಹತ್ತಿದ; ಬ್ರಹ್ಮರ್ಷಿಯಾದ; ಅದೇನೋ ಸರಿಹೋಯಿತು. ಆದರೆ, ಕ್ಷತ್ರಿಯಕುಲವೆಲ್ಲ ತಪಸ್ಸಿನ ಬೆನ್ನು ಹತ್ತಿ ಹೊರಟಿದ್ದರೆ, ಈ ಜಗತ್ತಿನ ಗತಿ ಏನಾಗಬಹುದಾಗಿತ್ತು ? ಆಳುವ ಅರಸಿಲ್ಲದೆ ಕೇಳುವ ಪ್ರಧಾನಿಯಿಲ್ಲದೆ ಅನಾಯಕವಾಗಬಹುದಾಗಿತ್ತು. ಲೋಕವೆಲ್ಲ ಸತ್ತ್ವಗುಣದಿಂದ ತುಂಬಿದ್ದರೆ, ಕ್ಷತ್ರಿಯಶಕ್ತಿಯ ಕಾರಣವೇ ಇರಲಿಲ್ಲ. ಆದರೆ ರಾಜಸ– ತಾಮಸ ಗುಣಗಳೂ ಲೋಕದಲ್ಲಿ ಕೈಚಳಕವನ್ನ

ನಡಿಸಿರತಾವ. ಅವುಗಳ ಕೈಚಳಕಾ ತಡೀಬೇಕಾದರ, ಅವೇ ಗುಣಗಳ ಶಕ್ತಿಯಿಂದಲೇ ಸಾಧ್ಯ ಆಗತದ. ಜಗತ್ತಿನೊಳಗ ಹಸುಗಳೂ ಇರತಾವ; ಹುಲಿಗಳೂ ಇರತಾವ! ಹಸುಗಳನ್ನು ಒಲವಿನಿಂದ ಒಲಿಸಿಕೊಂಡು, ಅದರಿಂದ ಅಮೃತದಂಥಾ ಹಾಲನ್ನೂ ನಾವು ಪಡೀಬಹುದು. ಆದರ, ಹುಲಿಗಳಿಂದ ನಮ್ಮನ್ನ ಸಂರಕ್ಷಣ ಮಾಡಿಕೊಳ್ಳಲಿಕ್ಕೆ ಒಲವಿನ ಬಲ ಪ್ರಯೋಜನಕ್ಕೆ ಬರೂದಿಲ್ಲ. ಅದಕ್ಕ ದೇಹಬಲವೇ ಬೇಕಾಗತದ. ಲೋಕದ ಶಾಂತಿಗೆ ಒಲವಿನ ಬಲವೂ ಬೇಕಾಗತದ; ದೇಹಶಕ್ತಿಯೂ ಬೇಕಾಗತದ. ಹುಲಿಗಳು ಒಲವಿನ ಅರ್ಥವನ್ನು ಮಾಡಿಕೊಳ್ಳಲಾರವು, ಬಲವನ್ನು ಕಂಡು ಮಾತ್ರ ಓಡಿಹೋಗತಾವ. ನಿನ್ನದು ಹುಲಿಗಳನ್ನು ಓಡಿಸುವ ಕೆಲಸ! ನನ್ನದು ಹಸುಗಳನ್ನು ಕರೆಯುವ ಕೆಲಸ. ಲೋಕಶಾಂತಿಗೆ ಎರಡೂ ಬೇಕಲ್ಲವೆ?"

ರಂಗಣ್ಣ ನಗುತ್ತಲೇ ಹೇಳಿದ :

" ನಿನ್ನ ಮಾತಿಗೆ ನನ್ನದು ಸಂಪೂರ್ಣ ಒಪ್ಪಿಗೆ ರಂಗಣ್ಣಾ ! ಹಸುವನ್ನ ಕರೆಯುವ ಕೆಲಸವನ್ನೇ ನೀನು ಮಾಡತಾ ಇರು! ಹುಲಿಯನ್ನು ಓಡಿಸುವ ನನ್ನ ಕೆಲಸಾ ನಾ ಮಾಡತಾ ಇರತೀನಿ ಲೋಕಶಾಂತಿಗೆ ಎರಡೂ ಬೇಕು. ನೀನು ನನ್ನ ಕೆಲಸಾ ಮಾಡಬ್ಯಾಡ; ನಾನು ನಿನ್ನ ಕೆಲಸದೊಳಗ ಸದ್ಯ ಕೈ ಹಾಕೂದಿಲ್ಲ! ಮುಂದೆ, ಕೈಕೊಂಡಿರುವ ಈ ನನ್ನ ಕೆಲಸಾ ಮುಗಿಸಿದ ಮ್ಯಾಲ ಬೇಕಾದರ, ನಾನೂ ವಿಶ್ವಾಮಿತ್ರನ ದಾರೀ ಹಿಡೀತೀನಂತ!"

ಹಳ್ಳಿಯ ಜನರೆಲ್ಲರೂ ಸುಮ್ಮನೆ ಕುಳಿತು ಇವರಿಬ್ಬರ ಮಾತನ್ನು ಕೇಳುತ್ತಿದ್ದರು. ರತ್ನಾಕರ ತನ್ನ ಮಾತನ್ನು ಮುಗಿಸಿದೊಡನೆಯೆ ನಿಂಗಪ್ಪ ಹೇಳಿದ :

"ನೋಡ್ರಿ ರಾಯರ! ಈಗ ನಿಮುಗ ಇಂಥಾ ಮಾತೆಲ್ಲಾ ಹೇಳೂ ರಂಗಣ್ಣ ವರು, ತಮ್ಮ ಕೆಲಸಾ ಬಿಟ್ಟು ಚಳವಳಿ ಮಾಡಿ, ತುರಂಗಕ್ಕ ಹೊರಟುಹೋಗೂ-ದೇನು ಒಳ್ಳೇದರೇ? ಅದಕ್ಕs ನಾವೆಲ್ಲಾ ಹಟಾ ಹಿಡದು, ಇವರನ್ನ ನಿಲ್ಲಿಸಿ-ಕೊಂಡೀವಿರಿ! ಇಲ್ಲದಿದ್ದರ, ಇವರು ತುರಂಗಕ್ಕ ಹೋಗಿ ಇಷ್ಟರೊಳಗs ಹತ್ತು ಹನ್ನೆರಡು ದಿನಾ ಆಗತಿತ್ತು! ನಾವೆಲ್ಲಾ ತಾಯಿನ್ನ ಕಳಕೊಂಡ ಕರುವಿನ್ಹಾಂಗ ಬಾಯಿ ಬಾಯಿ ಬಿಡಬೇಕಾಗತಿತ್ತು! ನಮ್ಮನ್ನ ಹರಕೊಂಡು ತಿನಬೇಕಂತ ಹೊಂಚು ಹಾಕಿಕೊಂಡು ಕೂತ ಹುಲಿಗೋಳು, ಇದs

ಊರೊಳಗs ಅದಾವೇನ್ರಿ! ಆದರ ರಂಗಣ್ಣಾವರ ಮೋಡಿಮಂತ್ರದಿಂದ ಅವುಗಳ ಆಟ ಏನೂ ನಡೀದ್ಹಾಂಗ ಆಗೆಯ್ತಿ. ಇಂಥಾ ಯಾಳೇದೊಳಗ ರಂಗಣ್ಣಾವರು ಈ ಊರು ಬಿಟ್ಟು ಹೋದರ, ಆ ಹುಲಿಗೋಳು ನಮ್ಮನ್ನ ಕೇಳ್ಯಾವರೇ? ಹಾಂಗs ಮುರಕೊಂಡು ತಿಂದುಬಿಟ್ಟ್ಯಾವರಿ!"

ರತ್ನಾಕರ ರಂಗಣ್ಣ ಇಬ್ಬರೂ ಅರ್ಥಪೂರ್ಣ ದೃಷ್ಟಿಯಿಂದ ಒಬ್ಬರನ್ನೊಬ್ಬರು ಕ್ಷಣಕಾಲ ನೋಡಿದರು. ಬಳಿಕ ರಂಗಣ್ಣ ಹೇಳಿದ:

"ನಿಂಗಪ್ಪನ ಮಾತು ಸುಳ್ಳಲ್ಲ ರತ್ನಾಕರ! ಯಾವ ಮಾತನ್ನೂ ಆಡುವ ಹಾಂಗ ಇಲ್ಲ. ಮನುಷ್ಯನ ಸ್ವಾರ್ಥ ಬಹಳ ಕೆಟ್ಟದಲ್ಲವೆ? ಹಳ್ಳಿಗರ ಅಜ್ಞಾನದ ಲಾಭದಿಂದ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದ ಜನರಿಗೆ, ಈಗ ಈ ಊರೊಳಗಂತೂ ಏನು ಮಾಡಲಿಕ್ಕೂ ಅವಕಾಶ ಇಲ್ಲದ್ಹಾಂಗ ಆಗೇದ. ಅಂಥಾ ಜನರು ಒಳಗೊಳಗs ಏನರೇ ಕುತಂತ್ರಾ ನಡಿಸೇ ಇರತಾರ ಇವರೊಳಗ ಪರಸ್ಪರ ಜಗಳಾ ಹುಟ್ಟಿಸಬೇಕಂಬೂ ಪ್ರಯತ್ನ ನಿತ್ಯವೂ ನಡೆದೇ ನಡೆದಿರ. ತಾವ. ಆದರ ನನ್ನ ಮ್ಯಾಲ ಇಟ್ಟಿರುವ ಈ ಜನರ ವಿಶ್ವಾಸ, ಅವರ ಎಲ್ಲಾ ಪ್ರಯತ್ನಾನ ನಿಷ್ಫಲಗೊಳಿಸತಾವ. ಇದೊಂದು ನನ್ನ ಮ್ಯಾಲ ದೇವರು ಮಾಡಿದ ಅನುಗ್ರಹಾನs ಅಂತ ಹೇಳಬಹುದು. ಇವರು ಎಲ್ಲಾರೂ ನನ್ನ ಮಾತನ್ನ ಕೇಳತಾರಂದ ಮ್ಯಾಲ, ಇವರು ಹೇಳಿದ್ದನ್ನ ನಾ ಯಾಕ ನಡಿಸಬಾರದೂ—ಅನ್ನೂ ವಿಚಾರದಲೇನs ನಾನು, ಕಾಯದೆಭಂಗದ ಚಳವಳಿಯೊಳಗ ಸೇರಬೇಕೆನ್ನುವ ನನ್ನ ಅಪೇಕ್ಷೆಯನ್ನ ಹತ್ತಿಕ್ಕಿಕೊಂಡೆ."

ಪಡಸಾಲೆಯ ಗೋಡೆಗಿದ್ದ ಗಡಿಯಾರ 'ಢಣ್ ಢಣ್' ಎಂದು ಹತ್ತು ಗಂಟೆ ಬಾರಿಸಿತು. 'ಓ! ಹತ್ತು ಹೊಡೆಯಿತು. ದಣಿದು ಬಂದಿದ್ದೀ ರತ್ನಾಕರ! ಮಲಗಿಕೊಂಡು ಬಿಡು ನೀನು! ನಾನು ಇವರಿಗೆ ಇಂದಿನ ವರ್ತಮಾನಪತ್ರವನ್ನಷ್ಟು ಓದಿ ಹೇಳತೀನಿ!' ಎಂದು ರಂಗಣ್ಣ, ಅಂದಿನ ದಿನಪತ್ರಿಕೆಯನ್ನು ಕೈಯಲ್ಲಿ ತೆಗೆದುಕೊಂಡ. ಮರಾಠೀ 'ಜ್ಞಾನಪ್ರಕಾಶ' ಪತ್ರಿಕೆಯದು. ರಂಗಣ್ಣ ನಿತ್ಯವೂ ಇದರಲ್ಲಿಯ ಸುದ್ದಿಗಳನ್ನೇ ಭಾಷಾಂತರಿಸಿ ಹೇಳುವನು. ರತ್ನಾಕರನು 'ಜ್ಞಾನಪ್ರಕಾಶ' ಪತ್ರಿಕೆಯನ್ನು ನೋಡಿ, ನಿಟ್ಟುಸಿರಿಟ್ಟು ಹೇಳಿದ:

"ನೋಡು ರಂಗಣ್ಣಾ, ನಮ್ಮ ಕನ್ನಡಿಗರ ಹಣೇಬರಹಾ! ಒಂದುವರೆ

ಕೋಟಿಗಿಂತ ಹೆಚ್ಚಾಗಿ ಜನರಿರುವ ನಮ್ಮ ನಾಡಿನೊಳಗ, ಒಂದೂ ಕನ್ನಡ ದಿನಪತ್ರಿಕೆ ಇರಬಾರದೆಂದರ, ನಾಚಿಕಿ ಬರುವಂಥಾ ಮಾತು. ಈಗ, ಈ ಚಳವಳೀ ಸುದ್ದೀ ತಿಳಕೊಳ್ಳಬೇಕೆಂಬೂ ಅಪೇಕ್ಷೆಯಿಂದ, ನಮ್ಮ ಉತ್ತರ ಕರ್ನಾಟಕದ ಹಳ್ಳಿ-ಹಳ್ಳಿಗೂ 'ಜ್ಞಾನಪ್ರಕಾಶ' ಬಂದು ಬೀಳಲಿಕ್ಕೆ ಹತ್ತೇದ. ದೇಶಸೇವಾದ ಭಾವನಾ ಇಲ್ಲದಿದ್ದರೂ ಹೋಗಲಿ; ವ್ಯವಹಾರದೃಷ್ಟಿಯಿಂ-ದಾದರೂ ನೋಡಿ, ನಮ್ಮಲ್ಲಿರುವ ಬಂಡವಳಗಾರರು ಹಣ ಹಾಕಿ, ಒಂದು ಕನ್ನಡ ದಿನಪತ್ರಿಕೆ ಹೊರಡಿಸಬಾರದೇಕೆ ? ಒಂದು ದಿನಪತ್ರಿಕೀ ಸಲುವಾಗಿ, ಕನ್ನಡಿಗರು ಪ್ರತಿನಿತ್ಯ ಹತ್ತುಸಾವಿರಗಟ್ಲೆ ರೂಪಾಯಿಗಳನ್ನ ಪರಪ್ರಾಂತದ ಬಂಡವಳಗಾರರ ಜೇಬಿನೊಳಗ ಒಯ್ದು ಸುರೀತಾರ !"

ರಂಗಣ್ಣ ಹೇಳಲು ತೊಡಗಿದ :

" ಇದೊಂದsa ವಿಷಯು ಏನು ರತ್ನಾಕರ ? ದೇಶಕ್ಕ ಬೇಕಾಗುವಂಥಾ ಯಾವ ಕೆಲಸ ನಮ್ಮ ನಾಡಿನೊಳಗ ನಡದಾವ ? ಏನೋ, ವೈಯಕ್ತಿಕ ಸ್ಫೂರ್ತಿಯಿಂದ ಕೆಲವು ಜನ ಎದ್ದು ಬಂದಾರಂತ, ಈ ರಾಜಕೀಯ ಚಳವಳೀ ಮಾತ್ರ ನಮ್ಮ ನಾಡಿನೊಳಗ ಸ್ವಲ್ಪ ರಭಸದಿಂದ ನಡದ್ಯದ. ಅದನ್ನ ಮ್ಯಾಲಿನ ಕಾಂಗ್ರೆಸ್ ಸಂಸ್ಥಾ ನಿಯಂತ್ರಿಸತsದಂತ, ಏನೋ ಸುಸಂಘಟಿತವಾಗಿ ಸಾಗೇದ ! ನಮ್ಮ ಜನರೊಳಗ, ಕರ್ನಾಟಕದ ದೃಷ್ಟಿಯನ್ನಿರಿಸಿಕೊಂಡು ಸು-ಸಂಘಟಿತರಾಗಿ, ಸ್ವತಂತ್ರವಾಗಿ ಯಾವ ಕಾರ್ಯವನ್ನಾದರೂ ಮಾಡಬೇಕೆಂಬ ಜಾಗೃತಿಯೇ ಉಂಟಾಗಿಲ್ಲ ! ಯಾವ ಕಾರ್ಯಕ್ಷೇತ್ರದೊಳಗ ನೋಡಿದರೂ, ಎರಕೊಳ್ಳುವವರ ಅಡಿಯಲ್ಲಿ ಬಗ್ಗಿದ ದೃಶ್ಯವೇ ಕಾಣಿಸತsದ !"

ರತ್ನಾಕರನು ನಿಡಿದಾಗಿ ಉಸಿರುಬಿಟ್ಟು ವಿಚಾರಮಗ್ನನಾಗಿ ಕುಳಿತು-ಕೊಂಡ. ರಂಗಣ್ಣ ಒಂದೊಂದಾಗಿ ಸುದ್ದಿಯನ್ನು ಓದಿ, ಅರ್ಥಮಾಡಿ ಕನ್ನಡ-ದಲ್ಲಿ ಹೇಳಲು ತೊಡಗಿದ. ಸತ್ಯಾಗ್ರಹದ ಕಾರಣದಿಂದ ಅಲ್ಲಲ್ಲಿ ಕಾಂಗ್ರೆಸ್ಸಿಗ-ರನ್ನು ಹಿಡಿದ ಸುದ್ದಿಗಳೇ ಎಲ್ಲವೂ. ಇನ್ನೊಂದು ಸುದ್ದಿಯನ್ನು ಓದಿದ :

" ಮುಂಬಯಿ ಕರ್ನಾಟಕದ ಎಲ್ಲ ಜಿಲ್ಲೆಗಳ ಅಧಿಕಾರಿಗಳಿಗೂ ಮೇಲಿ-ನಿಂದ ಗುಟ್ಟಿನ ಕಟ್ಟಪ್ಪಣೆಗಳು ಬಂದಿವೆಯಂತೆ. ಕಾಂಗ್ರೆಸ್ಸಿನ ಎಲ್ಲ ಚಳವಳಿಗಾರರ ಹುಟ್ಟನ್ನೂ ಅಡಗಿಸಲು, ಎಲ್ಲ ಕಡೆಗೂ ಉಗ್ರಉಪಾಯಗಳನ್ನು ಕೈಕೊಳ್ಳಬೇಕೆಂದು ಅದರಲ್ಲಿ ಹುಕುಂ ಮಾಡಲಾಗಿದೆಯಂತೆ !"

ಈ ಸುದ್ದಿಯನ್ನು ರಂಗಣ್ಣ ಓದಿ ಮುಗಿಸುತ್ತಿರುವಾಗಲೇ, ದೂರದಿಂದ ಮೋಟಾರಿನ ಹಾರ್ನ್ ಬಾರಿಸಿದ ಸಪ್ಪಳು ಕೇಳಿಸಿತು ಕೂಡಿದ ಜನರಲ್ಲಿ ಒಬ್ಬನೆಂದ :

" ಇದೇನಪಾ, ಈ ಹೊತ್ತಿನೊಳಗ ನಮ್ಮೂರ ಮುಂದ ಮೋಟಾರು ಎಲ್ಲಿಂದಃ ಬಂತು ? "

ರತ್ನಾಕರ ರಂಗಣ್ಣ ಒಬ್ಬರನ್ನೊಬ್ಬರು ನೋಡಿದರು. ರತ್ನಾಕರ ಕಣ್ಣು-ಸನ್ನೆಯಿಂದ ರಂಗಣ್ಣನಿಗೆ ಏನನ್ನೋ ತಿಳಿಸಿದ. ಆಗ ರಂಗಣ್ಣ ದಡದಡಿಸುವ ಎದೆಯಿಂದ ಕೂಡಿದ ಜನರೆಲ್ಲರಿಗೂ ಹೇಳಿದ :

" ಈಗ ನೀವೆಲ್ಲರೂ ಗಲಾಟೆಯನ್ನೇನೂ ಮಾಡದೆ, ಸುಮ್ಮನೆ ನಿಮ್ಮ ನಿಮ್ಮ ಮನಿಗಳಿಗೆ ಹೋಗಿರಿ. ನಿಂಗಪ್ಪಾ, ನೀನು ಇನ್ನ್ಯಾರನ್ನಾದರೂ ಜೋಡಿಗೆ ಕರಕೊಂಡು ಹೋಗಿ, ಬಂದಿರುವ ಮೋಟಾರು ಯಾರದಂಬೂದನ್ನ ನೋಡಿಕೊಂಡು ಬಂದು ನನಗ ತಿಳಿಸು ! "

ಜನರೆಲ್ಲರೂ ಮೆಲ್ಲ-ಮೆಲ್ಲಗೆ ಎದ್ದು ನಿಂತುಕೊಂಡರು. ಯಾರಿಗೂ ಅಡಿಯನ್ನು ಕಿತ್ತಿ ಮುಂದೆ ಇಡಲಿಕ್ಕೆ ಆಗಲೊಲ್ಲದು. ಆಗ ನಿಂಗಪ್ಪ ಒಬ್ಬ-ನನ್ನು ಕುರಿತು ಹೇಳಿದ :

" ರಾಜಾಸಾಬಾ, ನೀನೂ ಬಾ ನನ್ನ ಜೋಡಿ! ಹೋಗಿ ನೋಡಿಕೊಂಡು ಬರೂಣು ! "

ನಿಂಗಪ್ಪ ಹೀಗೆ ಹೇಳುತ್ತಿರುವಾಗಲೇ ರಂಗಣ್ಣವರ ತೋಟ ಮಾಡಿದ ರೈತ ಗಂಗಣ್ಣ, ಅವಸರದಿಂದ ನಡೆಯುತ್ತ ಅಲ್ಲಿಗೆ ಬಂದ. ಆತ ಓಡುತ್ತ ಓಡುತ್ತಲೆ ಬಂದಿರಬೇಕು. ತುಂಬ ತೇಕು ಹತ್ತಿದ್ದಿತು. ತೇಕುತ್ತಿರುವಂತೆಯೆ ಆತ ರಂಗಣ್ಣನ ಬಳಿ ಬಂದು ಮೆಲ್ಲಗೆ ಹೇಳಿದ :

"ಪೋಲೀಸರು....ಮೋಟಾರು ತೊಗೊಂಡು....ಈ ಊರಿಗೆ ಬಂದರು....! ಡ್ರ್ಯಾಯವರ್ ದತ್ತೋಬಾ ಬಂದು, ನನಗ ಕಿವಿಮಾತಿಲೇ ಹೇಳಿದ....ಈಗಿಂದೀಗ ನೀನು ಓಡಿ ಓಡಿ ಹೋಗಿ....ರಂಗಣ್ಣವರಿಗೆ ಈ ಸುದ್ದೀ ತಿಳಸಲಾಕಃ ಬೇಕು— ಅಂತ! ಅದನ್ನ ಕೇಳಿದವನಃ ನಾನು, ಒಳದಾರೀ ಹಿಡದು ಓಡತೋಡತಃ ಬಂದೆ !"

ರತ್ನಾಕರ ಆಶ್ಚರ್ಯದಿಂದ ಕೇಳಿದ :

" ಡ್ರಾಯವರ್ ದತ್ತ್ಯೋಬಾ ?"

ಗಂಗಣ್ಣ ಸ್ವಲ್ಪ ಸಾವರಿಸಿಕೊಂಡು ಹೇಳಲು ತೊಡಗಿದ :

" ಹೌದರಿ ರಾಯರ ! ಆವನ ಮೋಟಾರನs ಬಿಟ್ಟೇ ಹಿಡಿದು ಪೋಲೀಸರು ತಗೊಂಡು ಬಂದಾರಂತರಿ ! ದತ್ತ್ಯೋಬಾ ಬೆರಿಕಿ, ನಮ್ಮ ತ್ವಾಟದ ಹತ್ತೀಲೇನs ಮೋಟಾರು ನಿಲ್ಲಿಸಿ, ಬಯಲ ಕಡೆ ಹೋಗಿಬರತೀನಂತ ನೆವನಾ ಹೇಳಿ, ನಮ್ಮ ಗುಡಸಲ ಕಡೆ ಬಂದ. ಹಿಂಗೀಂಗ........ನೀ ಹೋಗಿ ರಂಗಣ್ಣ-ವರಿಗೆ ತಿಳಿಸು !—ಗಡಾನs ಓಡು !—ನಾನೂ ಮೋಟಾರಿನ ದುರಸ್ತೀ ನೆವಾ ಮಾಡಿ, ಮೋಟಾರನ್ನ ಗಳಿಗೆರಡು ಗಳಿಗಿ ಇಲ್ಲೇ ನಿಲ್ಲಿಸಿರತೀನಿ— ಅಂತ ಹೇಳಿದ. ನಾನು ಇನ್ನ ಊಟಕ್ಕ ಕುಂಡ್ರಾಂವ; ಅಂವ ಹೀಂಗ ಹೇಳುತಲೇನs ಹಾಂಗs ಸಾರೋಟಿನ ಓಟಾನs ಬಿಟ್ಟೆ. ನಾನೂ ಅಗಸಿಯೊಳಗ ಹೊಕ್ಕೆ; ದೂರದಿಂದ ಮೋಟಾರಿನ ಹಾರ್ನು ಕೇಳಿಸಿತು."

ರತ್ನಾಕರ ವಿಸ್ಮಿತನಾಗಿ ಸುಮ್ಮಗೆ ಕುಳಿತ. ರಂಗಣ್ಣ ಕೇಳಿದ :

" ದತ್ತ್ಯೋಬಾ ಇನ್ನೇನಾದರೂ ಹೇಳಿದನೇನು ? "

" ಹೂಂನ್ರಿ ! ಇಂದ ಸಂಜೀ ಕಡೆ ಧಾರವಾಡದಿಂದ ಬಂದ ರಾಯರನ್ನ ಮನ್ಯಾಗ ಇಟ್ಟುಗೊಳ್ಳದ, ಇನ್ನೆಲ್ಲರೇ ಬ್ಯಾರೇ ಕಡೆ ಮುಚ್ಚಿ ಇಡಲಾಕ ಹೇಳು— ಅಂತ ಹೇಳಿದನ್ರಿ !"

ರಂಗಣ್ಣ ಪ್ರಶ್ನಾರ್ಥಕ ದೃಷ್ಟಿಯಿಂದ ರತ್ನಾಕರನನ್ನು ನೋಡಿದ. ಆಗ ರತ್ನಾಕರ ಹೇಳಿದ :

" ಎಂದಾದರೂ ಪೋಲೀಸರ ಕೈಗೆ ಸಿಗಬೇಕಾದದ್ದೇನೋ ಅದನs ಅದ! ಆದರ ಕೆಲವು ದಿನಾ ನಾನು ಹೊರಗ ಉಳೀಬೇಕಂತ ಮಾಡೀನಿ. ಹುಂ, ಈಗ ಹೇಳು ರಂಗಣ್ಣಾ ! ನಾನು ಎಲ್ಲಿ ಅಡಗಿಕೊಳ್ಳಬೇಕು ?"

ರಂಗಣ್ಣ ನಿಂಗಪ್ಪನನ್ನು ಕರೆದು ಹೇಳಿದ :

" ನಿಂಗಪ್ಪಾ, ಇವರನ್ನ ನಿಮ್ಮ ಮನಿಗೆ ಕರಕೊಂಡು ಹೋಗಿ ಅಡಗಿಸಿ ಇಡುವ ಹೊಣಿ ನಿನ್ನದು. ಹುಂ, ವಿಲಂಬ ಬೇಡ. ಹೊರಟು ಬಿಡಿರಿನ್ನ !"

ಇದ್ದುದಿದ್ದಂತೆಯೆ ನಿಂಗಪ್ಪ ರತ್ನಾಕರ ಎದ್ದು ಹೊರಟು, ತಲೆಬಾಗಿಲನ್ನು ದಾಟಿ ಕತ್ತಲೆಯಲ್ಲಿ ಮರೆಯಾದರು. ಮಿಕ್ಕ ಜನರೂ ಎದ್ದು ಜಡವಾದ ಹೆಜ್ಜೆಗಳಿಂದ ನಡೆಯುತ್ತ ತಮ್ಮ ತಮ್ಮ ಮನೆಗಳತ್ತ ಸಾಗಿದರು. ಎಲ್ಲ

ಜನರು ಹೊರಟು ಹೋದ ಮೇಲೆ, ರಂಗಣ್ಣ ತಲೆಬಾಗಿಲನ್ನು ಇಕ್ಕಿಕೊಳ್ಳಲೆಂದು ಎದ್ದು ಬಾಗಿಲ ಬಳಿ ಬಂದಿದ್ದ. ಆಗಲೇ ರಾಜೇಸಾಹೇಬನ ಹಿರಿಯಮಗ ಖಾದರನು ಓಡುತ್ತ ಬಂದು ರಂಗಣ್ಣನಿಗೆ ಹೇಳಿದ :

"ಪೋಲೀಸರ ಮೋಟಾರು ಚಾವಡೀ ಹತ್ತೀಲೆ ಬಂದು ನಿಂತೈತಿರಿ! ವಾಲೀಕಾರ, ಗೌಡರನ್ನ ಎಬ್ಬಿಸಿಕೊಂಡು ಬರಲಿಕ್ಕೆ ಹೋಗ್ಯಾನ. ಹತ್ತು ಹದಿನೈದು ಜನಾ ಇದ್ದಾರರಿ ಪೋಲೀಸರು!"

"ಹುಂ, ಈಗ ನೀನು ಗದ್ದಲಾ ಮಾಡದ, ಮನಿಗೆ ಹೋಗಿ ಮಲಗಿ-ಕೊಂಡು ಬಿಡು!"

ಎಂದು ಹೇಳಿ, ರಂಗಣ್ಣ ಬಾಗಿಲನ್ನು ಇಕ್ಕಿ, ಅಗಣಿಯನ್ನು ಸರಿಸಿ, ಮರಳಿ ಬಂದು ದೀಪವನ್ನು ಸಣ್ಣಗೆ ಮಾಡಿ, ಹಾಸಿಗೆಯ ಮೇಲೆ ಬಿದ್ದುಕೊಂಡ. ಈಗ ಹತ್ತು ನಿಮಿಷಗಳ ಹಿಂದೆ ನಡೆದ ಗಜಿಬಿಜಿ, ಗದ್ದಲ— ಈಗ ಇದ್ದಿತೋ ಇಲ್ಲವೋ ಎಂಬಂತಾಯಿತು. ಎಲ್ಲೆಲ್ಲಿಯೂ ನಿಃಶಬ್ದ. ಪಡಸಾಲೆಯ ಗಡಿಯಾರದ 'ಟಿಕ್ ಟಿಕ್' ಎಂಬ ಸಪ್ಪಳ ಮಾತ್ರ ಅವಿಚ್ಛಿನ್ನವಾಗಿ ನಡೆ-ದಿದ್ದಿತು. ಅದರೊಂದಿಗೆ—ಹಾಸಿಗೆಯ ಮೇಲೆ ಬಿದ್ದುಕೊಂಡಿದ್ದ—ರಂಗಣ್ಣನ ಹೃದಯವೂ 'ಧಡ್ ಧಡ್' ಎಂದು ಹೊಡೆದುಕೊಳ್ಳುತ್ತಿದ್ದಿತು. ಗಾಬರಿ-ಹೆದರಿಕೆಗಳೇನೂ ಇರಲಿಲ್ಲ ರಂಗಣ್ಣನಿಗೆ. ಹೊಸ ಅನುಭವದ ಆತುರಭಾವ ಅವನ ಹೃದಯದ ಹೊಡೆತಕ್ಕೆ ಕಾರಣವಾಗಿದ್ದಿತಷ್ಟೆ!

## ೧೮ನೆಯ ಪರಿಚ್ಛೇದ

ನಿಂಗಪ್ಪನ ಜೊತೆಗೆ ಹೊರಟ ರತ್ನಾಕರ, ಮಾತನಾಡದೆ ಸುಮ್ಮಗೆ ಅವನ ಬೆನ್ನಗುಂಟ ನಡೆದ. ನಿಂಗಪ್ಪನೂ ಮಾತನೇನೂ ಆಡದೆ ಅವನನ್ನು ಮನೆಗೆ ಕರೆದುಕೊಂಡು ಬಂದ. ನಿಂಗಪ್ಪನ ಮನೆ ಹಳ್ಳಿಯ ದೊಡ್ಡ ಒಕ್ಕಲಿಗನ ಮನೆ ಇರುವ ರೀತಿಯಲ್ಲಿದ್ದಿತು. ಮನೆಯೊಳಗೆ ಹೊಕ್ಕೊಡನೆಯೆ, ಹಾರಿಯ ಅಂಕಣವನ್ನು ಬಿಟ್ಟು ಎರಡು ಪಕ್ಕಗಳಲ್ಲಿಯೂ ಎತ್ತರದ ಕಟ್ಟೆಗಳು. ಆ ಎರಡು ಕಟ್ಟೆಗಳೆಂದರೆ, ಮೂರು ಮೂರು ಅಂಕಣದ ಎರಡು ಪಡಸಾಲೆ ಗಳು. ರತ್ನಾಕರ ಒಳಗೆ ಹೋದಾಗ, ನಿಂಗಪ್ಪನ ಮನೆಯ ಹೆಣ್ಣುಮಕ್ಕಳ-ಲ್ಲಿಯ ಮೂವರು, ಬಲಗಡೆಯ ಕಟ್ಟೆಯ ಮೇಲೆ ಕುಳಿತು ರಾಟಿಗಳಿಂದ

ನೂಲನ್ನು ತೆಗೆಯುತ್ತಲಿದ್ದರು. ಎಡಗಡೆಯ ಕಟ್ಟೆಯ ಮೇಲೆ ಕುಳಿತ ಇಬ್ಬರು ಪ್ರೌಢ ವಯಸ್ಸಿನ ಹೆಂಗುಸರು ಹಾಸುಹೊಯ್ಯುತ್ತಲಿದ್ದರು. ಅಕಸ್ಮಾತ್ತಾಗಿ ಅಪರಿಚಿತ ಮನುಷ್ಯನನ್ನೊಡಗೊಂಡು ನಿಂಗಪ್ಪ ಬಂದುದನ್ನು ಕಂಡು ನೂಲುವ ಹಾಸುಹೊಯ್ಯುವ ಆ ಹೆಂಗುಸರೆಲ್ಲ, ಕೈಯಲ್ಲಿಯ ಕೆಲಸವನ್ನು ನಿಲ್ಲಿಸಿ ಅಚ್ಚರಿಯಿಂದ ನೋಡಲು ತೊಡಗಿದರು. ನಿಂಗಪ್ಪ ಮಾತನೇನೂ ಆಡದೆ, ರತ್ನಾಕರನನ್ನು ಹಿಂಬಾಲಿಸಿಕೊಂಡು ನಡುಬಾಗಿಲೊಳಗೆ ಹೊಕ್ಕ. ಅಲ್ಲಿ ಏಳಂಕಣದ ವಿಶಾಲವಾದ ದನದ ಕೊಟ್ಟಿಗೆ. ನಿಂಗಪ್ಪ ಬಂದುದನ್ನು ಕಂಡೊಡನೆಯೆ ಮಲಗಿದ ಎತ್ತುಗಳು ಎದ್ದು ನಿಂತು ಹೂಂಕರಿಸ ತೊಡಗಿದುವು. ನಿಂತುಕೊಂಡಿದ್ದ ಆಕಳು ಗೋಣನ್ನು ಕೊಡಹುತ್ತ 'ಅಂಬಾ' ಎಂದು ಕೂಗಿತು. ಬಲಗಡೆಗೆ ಕಟ್ಟಿದ್ದ ಮೂಡಲ ಹೋರಿಗಳು ನಿಂತಲ್ಲಿ ನಿಂತುಕೊಳ್ಳದೆ ಅತ್ತಿತ್ತ ಸರಿದಾಡಿ ಉತ್ಸಾಹವನ್ನು ತೋರಿಸಿದುವು. ನಿಂಗಪ್ಪನಿಗೆ ಇದೊಂದರ ಕಡೆಗೂ ಲಕ್ಷ್ಯವಿರಲಿಲ್ಲ. ಇದೆಲ್ಲ ಚಿತ್ರ ರತ್ನಾಕರನಿಗೆ ಹೊಸದೆನಿಸಿದುದರಿಂದ, ಎಡಕ್ಕೆ ಬಲಕ್ಕೆ ಕಟ್ಟಿದ ದನಗಳನ್ನು ಕಣ್ಣು ಹೊರಳಿಸಿ ಹೊರಳಿಸಿ ನೋಡಿದ. ಇಬ್ಬರೂ ಹಾಗೆಯೆ ಮುಂದುವರಿದು ಕೊಟ್ಟಿಗೆಯನ್ನು ದಾಟಿ, ಒಳಪಡಸಾಲೆಯ ಪಾವಟಿಗೆಗಳನ್ನು ಏರಿದರು. ಏಳಂಕಣದ ಪ್ರಶಸ್ತವಾದ ಪಡಸಾಲೆಯಾದರೂ, ಅಲ್ಲಲ್ಲಿ ಮಂಚಿಕೆಗಳ ಮೇಲೆ ಏರಿಸಿ ಏರಿಸಿ ಇರಿಸಿದ ಕಾಳು ತುಂಬಿದ ಚೀಲದ ಅಡಕಿಲುಗಳಿಂದಲೂ, ಗಳಗೆ–ಕಣಜುಗಳಿಂದಲೂ ಅದು ತುಂಬಿ ಹೋಗಿತ್ತು. ಪಡಸಾಲೆಯ ಗೋಡೆಯ ಮೂರನೆಯ ಅಂಕಣದಲ್ಲಿ ಒಂದೂ, ಆರನೆಯ ಅಂಕಣದಲ್ಲಿ ಒಂದೂ ಬಾಗಿಲುಗಳು. ಮೂರನೆಯ ಅಂಕಣದಲ್ಲಿಯ ಬಾಗಿಲು ಅಡಿಗೆಮನೆಯದು. ಆರನೆಯ ಅಂಕಣದಲ್ಲಿಯ ಬಾಗಿಲು ದೇವರ ಕೋಣೆಯದು. ನಿಂಗಪ್ಪ ರತ್ನಾಕರನನ್ನು ದೇವರ ಕೋಣೆಯೊಳಗೆ ಕರೆದುಕೊಂಡು ಹೋದ. ದೇವರ ಜಗುಲಿಯ ಮೇಲೆ, ಒಳ್ಳೆಣ್ಣೆಯ ನಂದಾದೀಪ ಮಿಣಿ ಮಿಣಿ ಉರಿಯುತ್ತ, ತನ್ನ ಮಂದ ಪ್ರಕಾಶವನ್ನು ಕೋಣೆಯ ತುಂಬ ಹರಡಿದ್ದಿತು. ಆ ಪ್ರಕಾಶದಲ್ಲಿ ಎದುರು ಗೋಡೆಗೆ ಸಾಲಾಗಿ ನಿಲ್ಲಿಸಿದ ಅಡಕಿಲು ಗಡಿಗೆಗಳು ಕಂಡುವು. ಅಲ್ಲಿಯೇ ಇದ್ದ ಝೂಡಿಗಂಬಳಿಯೊಂದನ್ನು ಹಾಸಿ, ರತ್ನಾಕರನಿಗೆ ಕುಳಿತುಕೊಳ್ಳಲಿಕ್ಕೆ ನಿಂಗಪ್ಪ ಹೇಳಿದ :

" ರಾಯರ, ಇನ್ನ ಯಾವ ಚಿಂತಿಗೂ ಕಾರಣಿಲ್ಲ. ಅರಾಮಾಗಿ ಇಲ್ಲೆ ನೀವು ಬೆಳತನಕಾ ನಿದ್ದೀ ಮಾಡಬಹುದು. ತಲೆಗಿಂಬಿಗೆ ತಕ್ಕೆ ತಂದು ಕೊಡತ್ತೀನಿ.! ಗಂಜೀ ಹಚ್ಚಡಾ ತಂದು ಮಗ್ಗಲಿಗೆ ಮೆತ್ತಗ ಮಾಡಿ-ಕೊಡತೀನಿ! ನೀವು ಯಾವುದೂ ಕಾಳಜೀ ಇಲ್ಲದ ಮಲಕೊಂಡು ಬಿಡ್ರಿ!"

ರತ್ನಾಕರ ಹೇಳಿದ :

" ತಲೆಗಿಂಬಿಗೆ ಏನಾದರೂ ತಂದುಕೊಟ್ಟು ಬಿಡು—ಸಾಕು. ಗಂಜೀ ಹಚ್ಚಡ ಬೇಕಾಗಿಲ್ಲ, ಪಚ್ಚಡ ಬೇಕಾಗಿಲ್ಲ !"

ರತ್ನಾಕರ ಹಾಗೆ ಹೇಳಿದರೂ ನಿಂಗಪ್ಪ ಕೇಳಲಿಲ್ಲ. ಪಡಸಾಲೆಗೆ ಬಂದು ಒಂದು ತಕ್ಕೆಯನ್ನೂ, ಎರಡು ಬಿಳಿಯ ಹಚ್ಚಡಗಳನ್ನೂ ತೆಗೆದುಕೊಂಡು, ಮತ್ತೆ ಒಳಗೆ ಹೋಗಿ ಅಚ್ಚುಕಟ್ಟಾಗಿ ಹಾಸಿಕೊಟ್ಟ. ಬಳಿಕ ರತ್ನಾಕರನಿಗೆ ಹೇಳಿದ:

" ನೀವಿನ್ನ ಮಲಕೊಳ್ರಿ ! ಪೋಲೀಸರು ಏನೇನು ಕರಾಮತ್ತು ಮಾಡ-ತಾರೋ ನಾನು ನೋಡಿಕೊಂಡು ಬರತೀನಿ !"

ಇಷ್ಟು ಹೇಳಿದವನೇ ನಿಂಗಪ್ಪ, ಅವಸರದಿಂದ ಕೋಣೆಯನ್ನು ಬಿಟ್ಟು ನಡೆದ. ಹೊರಗೆ ಹೋಗಿ ನೂಲುತ್ತಿರುವ ಹೆಂಗುಸರಿಗೆ ಮೆಲುದನಿಯಲ್ಲಿ ಹೇಳಿದ :

" ನೀವೀಗ ನಿಮ್ಮ ಕೆಲಸಾ ಬಿಟ್ಟು, ಬಾಗಲಾ ಇಕ್ಕಿಕೊಂಡು ಮಲಗಿ ಬಿಡ್ರಿ ! ಮನ್ಯಾಗ ಗದ್ದಲಾ ಏನೂ ಮಾಡಬ್ಯಾಡ್ರಿ ! ನಾ ಈಗ ಸ್ವಲ್ಪ ರಂಗಣ್ಣವರ ಮನೀ ಕಡೆ ಹೋಗಿಬರತೀನಿ !"

ನಿಂಗಪ್ಪ ಹೊರಟು ಹೋದ. ಮನೆಯ ಹೆಂಗುಸರೆಲ್ಲರೂ ಕುತೂ-ಹಲ ಕೆರಳಿದ ದೃಷ್ಟಿಗಳಿಂದ ಒಬ್ಬರನ್ನು ಒಬ್ಬರು ನೋಡುತ್ತ ಒಂದೆರಡು ನಿಮಿಷ ಕುಳಿತರು. ಬಳಿಕ ಎಲ್ಲರೂ ಮೌನಿಗಳಾಗಿಯೆ ಮೇಲಕ್ಕೆದ್ದುಬಿಟ್ಟರು. ಮನೆಯ ಮುಂಬಾಗಿಲು ಮುಚ್ಚಿತು. ದೀಪಗಳೆಲ್ಲ ಆರಿದುವು. ಕೊಟ್ಟಿಗೆಯ ದನಗಳ ಉಸಿರಾಟದ ಸಪ್ಪಳದ ಹೊರತು ಇನ್ನೊಂದು ಉಲುಹೂ ಇಲ್ಲ. ಎಲ್ಲರೂ ತಂತಮ್ಮ ಎಡೆಗಳಲ್ಲಿ ಮಲಗಿಕೊಂಡರು :

ರತ್ನಾಕರ ಹಾಸಿಗೆಯ ಮೇಲೆ ಸುಮ್ಮನೆ ಬಿದ್ದುಕೊಂಡಿದ್ದ. ನಂದಾ-ದೀಪ ಹೊನೆ.ಹುಳುವಿನಂತೆ ಮಿನುಗುತ್ತಲಿದೆ. ಬೇಸಗೆಯ ರಾತ್ರಿ ;

ಬೆಳವಲ ನಾಡಿನ ಒಕ್ಕಲಿಗರ ಮನೆಯು ದೇವರ ಕೋಣೆ. ಹೊರಗಿನ ಗಾಳಿ ಒಳಗೆ ನುಗ್ಗಿ ಸುಳಿಯುಲು ಕಿಟಕಿ, ಗವಾಕ್ಷಗಳೊಂದೂ ಇಲ್ಲ. ಒಳಗೆ ಗವ್ವು ಕುಚ್ಚುತ್ತಲಿದೆ. ಮನಸಿನಲ್ಲಿ ಒಂದರ ಹಿಂದೆ ಒಂದರಂತೆ ಹಲವಾರು ಯೋಚನೆಗಳು. ರತ್ನಾಕರನಿಗೆ ನಿದ್ದೆ ಹೇಗೆ ಬರಬೇಕು ? ಹಾಗೆಯೇ ಕಣ್ಣು ತೆರೆದೇ ಅಂಗತ್ತಲಾಗಿ ಬಿದ್ದುಕೊಂಡಿದ್ದ. ಅಡಕಿಲ ಸಂದಿಯಲ್ಲಿ ಓಡಾಡುವ ಇಲಿಗಳು, ' ಚಿಂ ಚಿಯ್' ಎಂದು ನೊರೆದು, ಆಗಾಗ ಕೋಣೆ-ಯಲ್ಲಿಯ ನಿಃಶಬ್ದತೆಗೆ ಭಂಗತರುತ್ತಲಿದ್ದುವು. ಯೋಚನಾಮಗ್ನನಾದ ರತ್ನಾಕರ ಹಾಗೆಯೇ ಮೇಲಕ್ಕೆ ದೃಷ್ಟಿಗಳನ್ನು ಹೊರಳಿಸಿ, ಕೋಣೆಯ ಛಾವಣಿಯನ್ನು ನೋಡಲು ತೊಡಗಿದ. ತನ್ನ ಮುಖದ ಮೇಲೆಯೇ ಮಾಳಿಗೆಗೆ ಒಂದು ಬೆಳಕುಕಂಡಿಯುದ್ದುದು ಕಂಡಿತು. ಬೆಳಕುಕಂಡಿಯಲ್ಲಿ ನೋಟ ವನ್ನು ತೂರಿಸಿದಾಗ, ಮುಗಿಲಲ್ಲಿ ಮಿನುಗುತ್ತಿರುವ ಒಂದು ತೇಜಸ್ವಿಯಾದ ತಾರೆ ಕಣ್ಣಿಗೆ ಬಿದ್ದಿತು. ರತ್ನಾಕರ ಎಡೆಬಿಡದೆ ಆ ತಾರೆಯನ್ನು ನೋಡಲು ತೊಡಗಿದ. ಸ್ವತಂತ್ರವಾಗಿ ಆಕಾಶದಲ್ಲಿ ವಿಹರಿಸುತ್ತ ಮಿರುಗುತ್ತಿರುವ ಆ ತಾರೆಯ ನಗು, ರತ್ನಾಕರನ ಈಗಿನ ಪರಿಸ್ಥಿತಿಯನ್ನು ನೋಡಿ ಅಣಕಿಸಿ ನಗುವ ನಗೆಯಂತೆ ಕಂಡಿತು. ಆದರೂ ಬಿಡದೆ ಆ ತಾರೆಯ ಬೆಳಕನ್ನು ನಿಟ್ಟಿಸಲು ತೊಡಗಿದ. ಹೆಗ್ಗಣದಂತಹ ಇಲಿಯೊಂದು, ರತ್ನಾಕರನ ಹಾಸಿಗೆಯ ಬಳಿ-ಯಲ್ಲಿಯೇ ಹಾಯ್ದು ಓಡಿಹೋದುದರಿಂದ, ಆತನ ದೃಷ್ಟಿಗಳು ತಾರಾಲೋಕ-ದಿಂದ ಮತ್ತೆ ಕೆಳಗಿಳಿದುವು. ಮನಸ್ಸು ಯೋಚನೆಯ ಬೆನ್ನುಹತ್ತಿತು :

" ನಾನು ರಂಗಣ್ಣನಿಗೆ ಒಳ್ಳೆಯದನ್ನು ಮಾಡಲಿಕ್ಕೆಂದು ಬಂದೆ; ಆದರೆ ಒಳ್ಳೆಯದನ್ನೇನೂ ಮಾಡಲಿಕ್ಕಾಗದೆ, ಅವನನ್ನು ತೊಂದರೆಯಲ್ಲಿ ನೂಕಿ-ದಂತೆ ಎಲ್ಲಿ ಆಗುವುದೋ ಎಂದು ಎನಿಸುತ್ತದೆ. ನಾನು ಇಲ್ಲಿಗೆ ಬಂದ ಸಮಾಚಾರ ಪೋಲೀಸರಿಗೆ ಹೇಗೆ ಗೊತ್ತಾಗಿರಬಹುದು ? ರಾಮದುರ್ಗದ ಖಾದಿಯಂಗಡಿಯ ಶಂಕರಣ್ಣನ ಮೇಲಂತೂ ಸಂಶಯ ತೆಗೆದುಕೊಳ್ಳುವ ಹಾಗಿಲ್ಲ. ಏಕೆಂದರೆ ನಾನು ಯಾರೆಂಬುದು ಅವನಿಗೆ ಗೊತ್ತೇ ಇಲ್ಲ. ಇನ್ನು ಡ್ರಾಯ್ವರ್ ದತ್ತೋಬಾ ! ಅವನಿಗಾದರೂ ನಾನು ಯಾರೆಂಬುದು ಎಲ್ಲಿ ಗೊತ್ತಿದೆ ? ಗೊತ್ತಾದ ಮೇಲೆ ಕೂಡ, ಪೋಲೀಸರು ಬರುವ ವರ್ತಮಾನ ನಮಗೆ ಮೊದಲೇ ತಿಳಿಯುವಂತೆ ಮಾಡಿದ ಆತನ ಮೇಲೆ ಸಂಶಯ ತೆಗೆದು-ಕೊಳ್ಳುವುದೆಂದರೆ ಮಹಾಪಾಪ ! ಬಸ್ಸಿನಲ್ಲಿ ಕಂಡ ಆ ಬಾಯ್ಬಡಕ ದೇಶ-

ಭಕ್ತರೇನಾದರೂ ಗದ್ದಲ ಮಾಡಿರಬಹುದೇನು ? ನಾನು ಯಾರೆಂಬುದು ಅವರಿಗೆ ತಿಳಿದಿದ್ದರೆ, ಉತ್ಸಾಹದ ಭರದಲ್ಲಿ ಏನಾದರೂ ಗೊಂದಲ ಹಾಕುವವರೇ ಅವರು! ಆದರೆ, ಅವರಿಗೆ ನಾನು ಯಾರೆಂಬುದರ ಸುಳಿವನ್ನೆ ಕೊಟ್ಟಿಲ್ಲ. ಸರಿ! ನಾನಿಲ್ಲಿ ಬಂದ ವಿಷಯವನ್ನು ಅರಿತವರೆಂದರೆ ಅನಂತರಾಯರ ಮನೆತನದವರು; ಗೋಪಾಲರಾಯರ ಮನೆತನದವರು! ಅವರೇನಾದರೂ ಪೋಲೀಸರಿಗೆ ಹೇಳಿರಬಹುದೇ ? .... ಹುಚ್ಚು ನನ್ನದು! ಅವರೇಕೆ ಹೇಳಬೇಕು ?.... ಏಕೆ ಹೇಳಿರಬಾರದು ? ಪೋಲೀಸರಿಗೇನಾದರೂ ತಿಳಿದು, ಅವರ ಮನೆಗೆ ಬಂದು ಬೆದರಿಸಿ ಕೇಳಿದಾಗ, ಗಾಬರಿಯಿಂದ ಅವರು ಹೇಳಿರಬಾರದೇಕೆ ? ಗೋಪಾಲರಾಯರು ಹೇಳೀಕೇಳಿ ಸರಕಾರೀ ನೌಕರರು. ಅನಂತರಾಯರು ಚಳವಳಿಗಾರರ ವಿಷಯದಲ್ಲಿ ತುಂಬ ಅಶ್ರದ್ಧೆಯುಳ್ಳವರು! ಪೋಲೀಸರಿಗೆ ಇವರಿಬ್ಬರಲ್ಲಿಯ ಯಾರೋ ಒಬ್ಬರಿಂದಲೇ ನನ್ನ ವಿಷಯ ಗೊತ್ತಾಗಿರಬೇಕು. ಇಲ್ಲದಿದ್ದರೆ ಪೋಲೀಸರು ನನ್ನ ಬೆನ್ನು ಹತ್ತುವ ಬಗೆ ಹೇಗೆ ? ಆ ಹವಾಲದಾರ ಹನುಮಂತಪ್ಪ.... ಛೀಛೀ! ಅವನು ನನಗೆ ಆಗಾಗ ಮಾಡಿರುವ ಸಹಾಯಗಳನ್ನು ನೆನೆದುಕೊಂಡರೆ, ಅವನ ಮೇಲೆ ಸಂಶಯ ತೆಗೆದುಕೊಳ್ಳುವುದೆಂದರೆಯೆ ನನ್ನ ಕೃತಘ್ನತನ! ಇನ್ನೊಂದು! ವೆಂಕಣ್ಣ....ಅಹುದು, ವೆಂಕಣ್ಣನಿಂದ ಈ ಕೆಲಸವು ಆಗಿರಬಹುದೆ? ಈ ಊರಿಗೆ ಬರುವ ವಿಷಯವನ್ನು ಅವನಿಗೆ ತಿಳಿಸಿರಲಿಲ್ಲ! ಆದರೂ ಅವನೆದುರು ರಂಗಣ್ಣನ ವಿಚಾರವಾಗಿ ಆಡಿದ ಕೆಲವು ಮಾತುಗಳಿಂದ, ನಾನು ಇಲ್ಲಿಗೆ ಹೋಗುವೆನೆಂಬುದನ್ನು ಆತ ಊಹಿಸಿಕೊಂಡಿರಬಹುದು. ಸರಿ, ಊಹಿಸಿ ಕೊಂಡಿರುವುದು ಸಾಧ್ಯವಿದೆ. ಆದರೆ, ತಾನಾಗಿಯೆ ಹೋಗಿ ಪೋಲಿಸರೆದುರು ನನ್ನ ವಿಷಯವನ್ನು ತಿಳುಹುವಷ್ಟು ದುಷ್ಟಮನೋವೃತ್ತಿಯವನಲ್ಲ ವೆಂಕಣ್ಣ. ನನ್ನ ವಿಷಯದಲ್ಲಿ ಆತನ ಅಂತರ್ಯದಲ್ಲಿ ಒಂದು ಬಗೆಯ ಆದರಭಾವವಿದೆ. ಆದುದರಿಂದಲೇ ನಾನು ಬೇಡಿದೊಡನೆಯೆ, ತನ್ನ ಹೊಸ ಸೂಟು–ಬೂಟು-ಗಳನ್ನು ನನಗೆ ಕೊಟ್ಟುಬಿಟ್ಟ. ಆತ ಪೋಲೀಸರಿಗೆ ಈ ಮಾತನ್ನು ಹೇಳ-ಲಾರ! ಹಾಗಾದರೆ ಹೇಗೆ ಗೊತ್ತಾಗಿರಬಹುದು ? ಯಾವ ಸಿ. ಐ. ಡಿ. ನನ್ನನ್ನು ಗುರುತಿಸಿ ಧಾರವಾಡದ ಪೋಲೀಸರಿಗೆ ಸುದ್ದಿಯನ್ನು ಕೊಟ್ಟಿರ-ಬಹುದು ?........

........ಏನೇ ಇರಲಿ, ನಾನಿನ್ನು ಈ ಪೋಲೀಸರ ಕಣ್ಣುಗಳನ್ನು ತಪ್ಪಿಸಿ, ಮರಳಿ ಊರನ್ನು ತಲ್ಪುವದು ಎಂತಹ ಮಾತೋ! ಹಾಗಾದರೆ ಪಾಪ, ಕಾವೇರಿಯ ಮದುವೆಯ ವಿಚಾರವೇನು ಮುಂದೆ? ಅಲ್ಲಿ ಹುಬ್ಬಳ್ಳಿಯಲ್ಲಿ ಮಾಮಾ, ನಾನು ಬರುವ ದಾರಿಯನ್ನೇ ಕಾಯುತ್ತ ಕುಳಿತಿರಬಹುದು! ಗೋಪಾಲರಾಯರು, ಅವರ ಹೆಂಡತಿ, ಕಾವೇರಿ— ಎಲ್ಲರನ್ನೂ ಆಶೆಯ ಸಾಗರದಲ್ಲಿ ಕೆಡಹಿ ನಾನು ಇಲ್ಲಿಗೆ ಹೊರಟುಬಂದೆ. ಇಲ್ಲಿ ರಂಗಣ್ಣನ ಜೊತೆಗೆ ಈ ವಿಚಾರ ಕುರಿತು ಮಾತನಾಡಲಿಕ್ಕೂ ಆಗಿಲ್ಲ. ಈಗ ಪೋಲಿಸರು, ಇಲ್ಲದ ಆರೋಪಗಳನ್ನು ಹಾಕಿ, ರಂಗಣ್ಣನನ್ನೂ ಹಿಡಿದುಕೊಂಡು ಹೋಗಿ ಸೆರೆಮನೆಗೆ ಸೇರಿಸಿ ಬಿಟ್ಟರೆ, ಕೆಲಸವೇ ಮುಗಿದಂತಾಯಿತು. ಯಾವ ಮಾತನ್ನೂ ಆಡುವಂತಿಲ್ಲ....

....ಅಯ್ಯೊ! ನಾನು ಸಮಾಜಸೇವೆಯ ಭಾವನಾವೇಶದಿಂದ ದುಡುಕಿ ಅಧಿಕಪ್ರಸಂಗತನವನ್ನು ಮಾಡಿದೆನೋ ಏನೋ! ನನ್ನಂತಹ ರಾಜಕೀಯ ಚಳವಳಿಯಲ್ಲಿ ಸೇರಿದ ರಜೋಜೀವಿ, ಸಮಾಜಸೇವೆಯ ಆಶೆಯನ್ನೂ ಇರಿಸಿಕೊಳ್ಳುವುದೆಂದರೆ, ಅಧಿಕಪ್ರಸಂಗವಲ್ಲದೆ ಇನ್ನೇನು? ಹುಲಿಯನ್ನು ಹೊಡೆಯಬೇಕೆಂದು ಆಶೆಯಿಟ್ಟುಕೊಂಡು ಬೇಟೆಗೆ ಹೊರಟವನು, ಹೂಮಾಲೆ ಕಟ್ಟುವುದರಲ್ಲಿ ವೇಳೆ ಕಳೆಯುವೆನೆಂದರೆ ಸಾಧ್ಯವಿದೆಯೆ? ಹುಲಿಯನ್ನೂ ಹೊಡೆಯುವುದಾಗದು; ಹೂಮಾಲೆಯನ್ನೂ ಕಟ್ಟುವುದಾಗದು....

ನಾನು ಈ ಕನ್ಯಾ-ವರಸಂಘಟನೆಗೆ ಬೀಳದೆ, ಧಾರವಾಡದಲ್ಲಿಯೆ ಗುಪ್ತವಾಗಿ ಇದ್ದುಬಿಟ್ಟಿದ್ದರೆ, ಪೋಲೀಸರ ಕೈಗೆ ಸಿಕ್ಕದೆ ಅಲ್ಲಿ ಗುಪ್ತಚಳವಳಿಯನ್ನು ಸಂಘಟಿಸಬಹುದಾಗಿತ್ತು. ಈಗ ಚಳವಳಿಯೂ ಒಂದುಕಡೆಗುಳಿಯಿತು; ಕನ್ಯಾವರ ಸಂಘಟನೆಯೂ ಒಂದುಕಡೆಗುಳಿಯಿತು. ವ್ಯರ್ಥವಾಗಿ ಸೆರೆಮನೆ ಸೇರುವ ಸಂದರ್ಭ ಒದಗಿ ಬಂದಿತು. ಪಾಪ, ಕಾವೇರಿಯ ಗತಿಯಿನ್ನು ಏನಾಗಬಹುದು? ದೇವರ ತಲೆಯ ಮೇಲೆ ಏರಬೇಕಾದ ಆ ಪವಿತ್ರ ಕುಸುಮ, ಯಾವ ಕಗ್ಗಲ್ಲ ಮೇಲೆ ಬಿದ್ದು ಬಾಡಿಹೋಗಬೇಕಾಗುವುದೋ ಏನೋ! ಇನ್ನು ಸುಭದ್ರೆಯ ಕಥೆಯೇನಾಗಬಹುದು? ಅವಳು ಹಿಡಿದ ಹಟ ಅಸಾಧ್ಯವಾದುದು. ಅದಕ್ಕಾಗಿ ಮಾಮಾ ಎಷ್ಟು ಸಂಕಟ ಪಡಬೇಕಾಗುವುದೋ

ಏನೋ ! ಹೋಗಲಿ, ಅವರವರ ಹಣೆಬರೆಹ ! ಅವರ ಅದೃಷ್ಟಕ್ಕೆ ನಾನು ಹೊಣೆಯೇ ?....

....ನಮ್ಮ ತಾಯಿಯ ವಿಚಾರ ನನ್ನನ್ನು ಅಷ್ಟು ಬಾಧಿಸುತ್ತಿಲ್ಲ. ನನ್ನ ಬಗ್ಗೆ ಅವಳಿಗೆ ದುಃಖವೆನಿಸಿದರೂ, ಅದನ್ನು ತಡೆದುಕೊಂಡು ಒಳ್ಳೆಯ ಭವಿಷ್ಯಕ್ಕಾಗಿ ದಾರಿ ಕಾಯುವ ಧೈರ್ಯವಿದೆ ಅವಳಿಗೆ. ನನ್ನ ಸುಖಜೀವನದ ಆಶೆಯಿಟ್ಟುಕೊಂಡೇ ಅವಳು ಬದುಕಿಕೊಂಡಿದ್ದಾಳೆ. ತನ್ನ ಇದೇ ಬದುಕಿನಲ್ಲಿ ನನ್ನ ಸುಖಜೀವನವನ್ನು ಕಾಣುವ ಅವಕಾಶ ದೊರೆತೀತೆ? ಆಕೆಯ ದೃಷ್ಟಿಯಲ್ಲಿ ನನ್ನ ಸುಖಜೀವನವೆಂದರೆ, ಮದುವೆ ಮಾಡಿಕೊಂಡು ಮನೆ ಹಿಡಿದುಕೊಂಡು ನಾನು ಇರುವುದು; ಮಕ್ಕಳನ್ನು ಹಡೆದು ವಂಶವನ್ನು ಮುಂದುವರಿಸುವುದು. ಸರಿ! ನಮ್ಮ ತಂದೆಯ ವಂಶ ಮುಂದುವರಿಯಬೇಕು ! ಅದಕ್ಕಾಗಿ ನಾನು ಮದುವೆ ಮಾಡಿಕೊಳ್ಳಬೇಕು.... ಇದೇನಿದು ! ಮದುವೆಯ ವಿಚಾರ ನನ್ನ ಮನಸ್ಸಿನಲ್ಲಿ ಮಿಂಚಿದೊಡನೆಯೇ ಕುಮುದೆಯ ರೂಪವೇಕೆ ನನ್ನ ಮನದೆದುರು ಮೂಡ-ಬೇಕು ? ಕುಮುದೆಯನ್ನು ನನ್ನ ಮನಸ್ಸು ಬಯಸುತ್ತಿದೆಯೇ ? ಯಾಕೆ ಬಯಸಬಾರದು ? ಕುಮುದೆಯಂತಹ ರೂಪವತಿ— ಕುಲವತಿ— ಗುಣ-ವತಿ— ಕನ್ನೆ ನನ್ನ ಜೊತೆಗಾತಿಯಾದರೆ, ನನ್ನ ಜೀವನವು ಸವಿಯಿಂದ ತುಂಬಬಹುದಲ್ಲವೆ ? ಆದರೆ ಅದು ‘ ರೆ ’ ರಾಜ್ಯದ ಮಾತು ! ತನ್ನ ಮುಂ-ಬಾಳಿನ ಸುಖ-ದುಃಖಗಳ ಸರಿಯಾದ ಕಲ್ಪನೆಯಿದ್ದ ಆ ಕಲಿತ ಹುಡುಗಿ ಕುಮುದಾ, ನನ್ನನ್ನು ಒಪ್ಪಿಕೊಳ್ಳಬೇಕು. ಅವಳ ಒಪ್ಪಿಗೆ ಆಕೆಯ ತಂದೆ--ತಾಯಿಗಳ ಮನಸ್ಸಿಗೆ ಸಮ್ಮತವಾಗಬೇಕು. ಒಂದುವೇಳೆ ಕುಮುದಾ ಒಪ್ಪಿದರೂ, ಆಕೆಯ ತಂದೆ-ತಾಯಿಗಳು ಸಮ್ಮತಿಸಿದರೂ, ನನಗೆ ಮದುವೆ-ಯಾಗಲಿಕ್ಕೆ ಈಗೆಲ್ಲಿ ಸಾಧ್ಯವಿದೆ ? ಮದುವೆಯ ಮಂಟಪದ ಕರೆಗಿಂತ ಸರಕಾರದ ಸೆರೆಮನೆಯ ಕರೆ ನನ್ನನ್ನು ಹೆಚ್ಚಾಗಿ ಆಕರ್ಷಿಸಿಬಿಟ್ಟಿದೆ. ಈಗ ನಾನು ಸೆರೆಮನೆ ಸೇರಿದರೆ, ಬಿಡುಗಡೆ ಎಂದೋ ಏನೋ ! ಕುಮುದಾನ ಲಗ್ನ ನನ್ನ ಬಿಡುಗಡೆಗಾಗಿ ಕಾಯುತ್ತ ಕುಳಿತುಕೊಳ್ಳುವುದೇ ? ಅವಳ ತಾಯಿಗೆ ಮಗಳ ಲಗ್ನವನ್ನು ಬೇಗನೆ ಕಣ್ಣಿಂದ ನೋಡಬೇಕೆಂಬ ಅಪೇಕ್ಷೆ ಬಲವಾಗಿದೆಯಂತೆ. ಅಲ್ಲದೆ ಬೆಳೆದ ಹೆಣ್ಣು ಮದುವೆಯಿಲ್ಲದೆ—ಜೊತೆಗಾರ-ನಿಲ್ಲದೆ—ಎಷ್ಟು ದಿನ ಇರಲಿಕ್ಕೆ ಸಾಧ್ಯವಿದೆ ? ನಾನು ಸೆರೆಮನೆಯಿಂದ

ತಿರುಗಿ ಬರುವ ವರೆಗೆ ಕುಮುದಾ ನನಗಾಗಿ ಕಾಯುತ್ತ ಇರಬಹುದೇ ? ಛೀ! ಎಂದಿಗೂ ಸಾಧ್ಯವಿಲ್ಲ ! ಹಾಗಾದರೆ ನಾನು ಮದುವೆ ಮಾಡಿಕೊಳ್ಳುವ ತಂಹೆ ಸಂದರ್ಭ ಒದಗಿ ಬಂದಾಗ, ಕುಮುದಾನಂತಹ ಕನ್ಯೆ ಸಿಕ್ಕಬಹುದೆ ? ಅದನ್ನಾರು ಹೇಳುವರು ? ಸಿಕ್ಕಲಿಕ್ಕೂ ಇಲ್ಲ; ಎಂದ ಮೇಲೆ ,ಸಿಕ್ಕಿರುವ ಈ ಸಂದರ್ಭವನ್ನು ಏಕೆ ಕಳೆದುಕೊಳ್ಳಬೇಕು ? ನಾನು ಈ ರಾಜಕೀಯ ಚಳವಳಿಯಿಂದ ಮುಕ್ತನಾಗಿ, ಎಲ್ಲಿಯಾದರೂ ನೌಕರಿ ಹಿಡಿದು ಮನೆಮಾಡಿ ಕೊಂಡಿರಲು ಸಿದ್ಧನಾದರೆ, ಕುಮುದೆಯ ತಾಯಿ-ತಂದೆಗಳು ತಮ್ಮ ಮಗಳನ್ನು ನನಗೆ ಕೊಡಲು ಖಂಡಿತವಾಗಿ ಒಪ್ಪಿಕೊಳ್ಳುತ್ತಾರೆ. ಆದರೆ ನನ್ನ –ಈ ಬಗೆಯ ಸ್ವಾರ್ಥಜೀವನವನ್ನು ಕುಮುದಾ ಮೆಚ್ಚಿ ಪ್ರೀತಿಸಬಹುದೇ ? ಎಂದಿಗೂ ಸಾಧ್ಯವಿಲ್ಲ; ಆಗ ನಾನು ಒಬ್ಬ ಸಾಮಾನ್ಯ ಮನುಷ್ಯ. ಕುಮುದೆ-ಯಂತಹ ಅಸಾಮಾನ್ಯಸ್ವಭಾವದ ಹೆಣ್ಣುಗಳು, ಸಾಮಾನ್ಯಮನುಷ್ಯನ ಜೊತೆಯನ್ನು ಎಂದೂ ಬಯಸಲಾರರು....

....ಅಯ್ಯೊ! ಮಾನವನ ಸ್ವಾರ್ಥಲಾಲಸೆಯ ವಿಚಾರ ಎಷ್ಟೊಂದು ಕೀಳು-ಮಟ್ಟದ್ದು !ನಾನು ಮಾಡುತ್ತಿರುವ ವಿಚಾರವಿದು ವ್ಯಭಿಚಾರ! ಆದರ್ಶದಲ್ಲಿ ಅಶ್ರದ್ಧೆಯನ್ನು ತೋರಿಸುವಂತಹ ಅನಾಚಾರ ! ಕೆರಳಿದ ಮನಸ್ಸು ಎಂತೆಂತಹ ಕುವಿಚಾರಗಳಲ್ಲಿ ನನ್ನನ್ನು ಕುಳ್ಳಿರಿಸಿ ಉಯ್ಯಾಲೆಯಾಡಿಸಿ ಬಿಡುತ್ತಿದೆಯಲ್ಲ ! ಮನುಷ್ಯ ನಿಷ್ಕರ್ಮಿಯಾಗಿ ಕುಳಿತರೆ, ಇಂತಹ ಕುವಿಚಾರಗಳ ಜಾಲದಲ್ಲಿಯೇ ಸಿಕ್ಕಬೇಕಾಗುವುದು ! ಶಾಂತಂ ಪಾಪಂ ! ಶಾಂತಂ ಪಾಪಂ !....

....ಮತ್ತೆ ಕುಮುದಾ ಒಳಗಣ್ಣೆದುರು ಬಂದು ಬಂದು ನಿಲ್ಲಲು ತೊಡ-ಗಿದ್ದಾಳೆ. ನಾನಿನ್ನು ಆಕೆಯನ್ನು ಕಂಡು ಮಾತನಾಡುವೆನೋ ಇಲ್ಲವೋ.... ”

ಒಮ್ಮೆಲೆ ತಲೆಬಾಗಿಲನ್ನು ಬಡಿದ ಸಪ್ಪಳಾಯಿತು. ಮನೆಯೊಳಗಿ-ನವರು ಯಾರೋ ಬಾಗಿಲನ್ನು ತೆರೆದಿರಬಹುದು. ನಿಂಗಪ್ಪ ಮನೆಯೊಳಗೆ ಬಂದು, ನೇರವಾಗಿ ದೇವರ ಕೋಣೆಯನ್ನು ಹೊಕ್ಕ. ಕೂಡಲೆ ರತ್ನಾಕರನು ಹಾಸಿಗೆಯ ಮೇಲೆ ಎದ್ದುಕುಳಿತು ಮಾತನಾಡಿದ :

“ಯಾರು? ನಿಂಗಪ್ಪಾ, ಬಾ ಬಾ! ಆಗ ಹೋದಂವ ಈಗ ಬಂದಿಯೇನು?”

“ಹೌಂನ್ರಿ, ಇದೇ ಈಗ ಬಂದೆ. ನೀವು ನಿದ್ದೀ ಮಾಡಿದ್ಹಾಂಗಿತ್ತ ಕಾಣೂದಿಲ್ಲ ! ”

" ನಿದ್ದೆ ?.... ಯಾಕೋ ನಿದ್ದೀ ಬರಲಿಲ್ಲ ನೋಡು! ನಾ ಏನೋ ಬಿದ್ಕೊಂಡೇ ಇದ್ದೆ ! "

" ಆತು, ನಿದ್ದಿ ನಿಮಗ ಬರಬೇಕರೇ ಹ್ಯಾಂಗ ಬಿಡ್ರಿ ! ಪೋಲೀಸರು ತಿರಿಗಿ ರಾಮದುರ್ಗಕ್ಕ ಹೊಂಟುಹೋದರ್ರಿ ! "

ರತ್ನಾಕರ ಆಶ್ಚರ್ಯದಿಂದ ಕೇಳಿದ :

" ಆಂ ? ಹೊಂಟು ಹೋದರ ? ರಂಗಣ್ಣವರಿಗೆ ಏನೂ ತೊಂದರೀ ಮಾಡಲಿಲ್ಲ ಹಾದಲ್ಲೋ ? "

" ತೊಂದರೀ ಮಾಡಲಾಕ ಅವರೇನು ಬ್ರಿಟಿಶ್ ಸರಕಾರದ ಪೋಲೀಸ. ರೇನ್ರೀ ! ಇಲ್ಲೇ ರಾಮದುರ್ಗ ಸಂಸ್ಥಾನ ಸರಕಾರದ ಪೋಲೀಸರು ! "

" ಅಂದರ ಬಂದ ಪೋಲೀಸರು ಧಾರವಾಡದವರಲ್ಲೇನು ? "

" ಛೇಛೇ! ಎಲ್ಲೀದರ, ಇಲ್ಲೇ ರಾಮದುರ್ಗದವರು! ಹೊತ್ತು ಮುಣುಗಿ ಎರಡು ತಾಸು ರಾತ್ರಿ ಆದ ಮ್ಯಾಲ, ರಾಮದುರ್ಗದ ಪೋಲೀಸ ಕಚೇರಿಗೆ ಧಾರವಾಡದ ಪೋಲೀಸ್ ಕಚೇರಿಂದ ತಾರು ಬಂತಂತ. ಹೀಂಗಿನ ಮಾತು ಹೀಂಗ.... ಇಂಥಾ ಮನಿಸ್ಯಾರು ಮುದ್ದಾಪುರದ ರಂಗಣ್ಣವರ ಮನಿಗೆ ಬಂದಾರು; ಅವರನ್ನ ಹಿಡಿದು ತಂದು ನಮ್ಮ ಕಡೆ ಒಪ್ಪಿಸಿಕೊಟ್ಟು ಹೋಗ-ಬೇಕು — ಅಂತ ಆ ತಾರಿನೊಳಗ ಇತ್ತಂತರಿ ! ಆ ಮ್ಯಾಲ, ಫೌಜದಾರ್ರು ಪೋಲೀಸ್ ಪಾರ್ಟೀ ಕೂಡಿಸಿಕೊಂಡು, ಮೋಟಾರು ಬಿಟ್ಟೀ ಹಿಡಿದು ಹೊಂಡ-ಬೇಕಾದರ, ಮೂರು ತಾಸು ರಾತ್ರೀ ಮ್ಯಾಗs ರಾಮದುರ್ಗಾ ಬಿಟ್ಟರಂತ. ಬಾದ್ದೂರ ಹುಡುಗ—ಡ್ರಾಯ್ವರ್ ದತ್ತೋಬಾ ಮಾತ್ರ. ಪಸಂದ ಕರಾಮತೀ ಮಾಡ್ಯಾನ ಏನ್ರಿ ಈ ಪರಕರಣದೊಳಗ ! "

ಬೆರಗಿನ ಧ್ವನಿಯಲ್ಲಿ ರತ್ನಾಕರ ಕೇಳಿದ :

" ಏನು ಮಾಡಿದನಂತ ದತ್ತೋಬಾ ? "

" ಅಂವಗ ಹ್ಯಾಂಗ ಗೊತ್ತಾತೋ ಏನೋ—ಮುದ್ದಾಪುರಕ್ಕ ಒಬ್ಬ ದೇಶಭಕ್ತರನ್ನ ಹಿಡೀಲಿಕ್ಕಂತ ಪೋಲೀಸ ಪಾರ್ಟೀ ಹೊರಟದ್ದು ಗೊತ್ತಾ-ತಂತರಿ ! ಪೋಲೀಸರು ಸರ್ವಿಸ್ ಬಸ್ಸು ಬಿಟ್ಟೀ ಹಿಡೀಲಾಕ ಬಂದರಂತರಿ ! ಆಗ ತನ್ನ ಪಾಳೀ ಇಲ್ಲದಿದ್ದರೂನೂ, ದತ್ತೋಬಾ ತಾನs ಬಸ್ಸು ತೊಗೊಂಡು ಹೋಗತೀನಂತ ಹೇಳಿದನಂತ. ಆತರಿ ! ಪೋಲೀಸರನ್ನ ಬಸ್ಸಿನೊಳಗ

ಕುಂದ್ರಿಸಿಕೊಂಡು ಬಂದಾನ ಏನ್ರಿ! ರಂಗಣ್ಣಾವರ ತ್ವಾಟದ ಹತ್ತೀಲಿ ಬಸ್ಸು ನಿಲ್ಲಿಸಿ, ಮೊದಲೇ ಅವರ ರೈತನ್ನ ಸೂಚು ಕೊಟ್ಟು, ಕಳಿಸ್ಯಾನರಿ! ಅಂವ ಇಲ್ಲ-ದಿದ್ದರ ಮಾತ್ರ, ನೀವು ಪಾರಾಗೂದು ಕಠಿಣ ಇತ್ತು, ನೋಡ್ರಿ!"

"ಕೊಲ್ಲೂ ದೇವರಿಗಿಂತಾ ಕಾಯೂ ದೇವರು ದೊಡ್ಡಾಂವ ನಿಂಗಪ್ಪಾ! ಅಂವ ದತ್ತೋಬಾನ ಮನಸಿನೊಳಗ ಹೊಕ್ಕು ಎಲ್ಲಾ ಒಳ್ಳೇದು ಮಾಡಿಸಿದ. ದತ್ತೋಬನಂಥಾ ಪ್ರಾಮಾಣಿಕ ಮನಿಶಾರು ಸಿಗೂದಂದರ ಅಪೂರ್ವ ನೋಡು ನಿಂಗಪ್ಪಾ!"

"ದತ್ತೋಬಾ ಭಾಳ ಒಳ್ಳೇ ಹುಡುಗ ಏನ್ರಿ! ರಂಗಣ್ಣಾವರ ಮ್ಯಾಲ ಅವನ ಭಕ್ತಿ ಭಾಳರಿ!"

"ಅದಾತು. ನಿಂಗಪ್ಪಾ! ಪೋಲೀಸರು ರಂಗಣ್ಣಾನ ಮನ್ಯಾಗ ಹುಡಿ-ಕಾಡಿದರೇನು ನನ್ನ?"

"ಸುಮ್ಮನೇ ಹುಡಿಕ್ಯಾಡಿದ ನೆವಾ ಮಾಡಿದರ್ರಿ! ಹೇಳಿಕೇಳಿ ಸಂಸ್ಥಾ-ನದ ಪೋಲೀಸರ್ರಿ! ತಿಂಗಳಿಗೆ ಒಂಬತ್ತು ರೂಪಾಯಿ ಪಗಾರದವರ್ರಿ! ಊರ ಜನರೆಲ್ಲಾ ಸೇರಿ 'ನಾವೆಲ್ಲಾ ಇಲ್ಲೇ ಇದ್ದೀವರಿ; ರಂಗಣ್ಣಾವರ ಮನಿಗೆ ಹೊರಗಿನವರು ಯಾರೂ ಬಂದಿಲ್ಲಾ' ಅಂತ ಫೌಜದಾರರ ಮುಂದ ಹೇಳಿದಿವರಿ! ಫೌಜದಾರರು, ರಂಗಣ್ಣಾವರದು ನಾಕುಮಂದಿ ಊರಾಗಿನ ಹಿರಿಯರದು ಜವಾಬು ಬರಕೊಂಡು, ಹಾಂಗೇ ತಿರಿಗಿ ಹೊಂಟುಹೋದರೇನ್ರಿ! ರಂಗಣ್ಣಾವ-ರಿಗೆ ಸುಳ್ಳು ಜವಾಬು ಕೊಡಬೇಕಾದರ, ಮನಸಿಗೆ ಸ್ವಲ್ಪ ನೋವಾಗಿದ್ದೀತರಿ! ಎಂದೂ ಸುಳ್ಳು ಹೇಳಿದವರಲ್ಲ ಆವರು!"

"ಅವರು ಗಾಂಧೀ ಮನಿಶಾರಪಾ! ನಮ್ಮಂತಾ ಚಳವಳಿಯೊಳಗಿನ ಗೆಳೆಯರನ್ನ ಉಳಿಸಿಕೊಳ್ಳಬೇಕಾದರ, ಸುಳ್ಳು ಮಾತನ್ನ ಬಳಸೇಬೇಕಾಗತದ! ರಾಜಕಾರಣಂದರ ಕೇವಲ ಸತ್ಯದ ಮ್ಯಾಲ ಅವಲಂಬಿಸಿ ನಡಿಯೂದಿಲ್ಲಾ ಅಂಬೂ ಅನುಭವ, ಇಂದ ರಂಗಣ್ಣಾವರಿಗೆ ಬಾಢ್ಯಾಂಗ ಆತು!"

ರಾತ್ರಿಯ ಕೊನೆಯ ಯಾಮದ ಮೊದಲನೆಯ ಕೋಳಿ ಕೂಗಿತು. ಆಗ ನಿಂಗಪ್ಪ ಹೇಳಿದ:

"ಇನ್ನ ಒಂದೀಟು ಮಗ್ಗಲಾ ಹಚ್ಚರಿ ರಾಯರ! ರಂಗಣ್ಣಾವರ ಮನಿಗೆ ಈಗೇ ಹೋಗೂದೇನೂ ಬ್ಯಾಡ. ಮುಂಜಾನೆ ಎದ್ದು ಕರಕೊಂಡು ಹೊಗ-

ತೀನಿ! ಒಂದೀಟು ಬೆಳಗಿನ ಸಕ್ಕರಿಜಂಪು ತೊಗೊಳ್ಳರಿ! ಅಂದರ ಮೈ ಹಗರ ಆದೀತು!”

ಮಾತಿನ ಕೊನೆಯೊಡನೆಯೇ ನಿಂಗಪ್ಪ ಹೊರಗೆ ಬಂದು, ದೇವರ ಕೋಣೆಯ ಬಾಗಿಲ ಬಳಿಯಲ್ಲಿಯೇ ಹೊರಗೆ, ಒಂದು ಕಂಬಳಿ ಚೆಲ್ಲಿಕೊಂಡು ಬಿದ್ದುಕೊಂಡ. ರತ್ನಾಕರನೂ ತನ್ನ ಹಾಸಿಗೆಯ ಮೇಲೆ ಮೈ ಚೆಲ್ಲಿದ. ಕೋಣೆಯಲ್ಲಿಯ ಗಮ್ಮದ ವಾತಾವರಣ ತಂಪಾಗತೊಡಗಿದ್ದಿತು. ಬೆಳತನಕ ದುಡಿದು ತಿಂದು ಹೊಟ್ಟೆತುಂಬಿಕೊಂಡ ಇಲಿಗಳೂ ತಮ್ಮ ಹೋರುಗಳನ್ನು ಸೇರಿ ಮಲಗಿಕೊಂಡಿರಬಹುದು. ಇರುಳ ಕೊನೆಯ ಮಾದಕ ಶಾಂತಿಯ ಪ್ರಭಾವದಿಂದಲೇನೋ, ರತ್ನಾಕರನ ಕಣ್ಣುಗಳು ಮುಗಿದುಕೊಂಡುವು. ನಿದ್ರೆಯ ತೆರೆ ಮನವನ್ನು ಮುಸುಕಿಕೊಂಡಿತು.

## ೧೯ನೆಯ ಪ್ರಕರಣ

ಬೆಳಗಿನ ಸವಿನಿದ್ರೆಯಲ್ಲಿ ರತ್ನಾಕರನು ಏನೇನೋ ಕನಸು ಕಾಣುತ್ತಿರು. ವಾಗ, ಕೂಸು ಅಳುವ ಸಪ್ಪಳ ಕೇಳಿ ಎಚ್ಚರಾಯಿತು. ಎಚ್ಚತ್ತ ಒಂದೆರಡು ನಿಮಿಷದ ಮಬ್ಬಿನಲ್ಲಿ, ತಾನು ಎಲ್ಲಿ ಇದ್ದೇನೆಂಬುದು ಹೊಳೆಯಲಿಲ್ಲ. ಮುಂದೆ ಎದುರಿನ ಅಡಕಿಲುಗಡಿಗೆಯ ಸಾಲುಗಳು ಕಣ್ಣಿಗೆ ಕಂಡಾಗ, ತಾನು ನಿಂಗಪ್ಪನ ದೇವರ ಕೋಣೆಯಲ್ಲಿ ಇರುವುದರ ಅರಿಕೆಯಾಯಿತು. ತಲೆಯನ್ನು ಮೇಲೆ ಎತ್ತಿ ನೋಡಿದ. ಬೆಳಕಂಡಿಯಿಂದ ಬೆಳಗಿನ ಬೆಳಕು ಒಳನುಗ್ಗುತ್ತಲಿದ್ದು-ದನ್ನು ಕಂಡ. ಹೊರಗೆ ಬೆಳಗಾಗಿದೆಯೆಂಬುದು ತಿಳಿದೊಡನೆಯೆ, ಕುಳಿತಲ್ಲಿಯೆ ಕೈಮುಗಿದು ಮೆಲುದನಿಯಲ್ಲಿ ಹೇಳಲು ತೊಡಗಿದ:

“ ವಸುದೇವ ಸುತಂ ದೇವಂ ಕಂಸ-ಚಾಣೂರ ಮರ್ದನಂ।
ದೇವಕೀಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ ॥ ”

ರತ್ನಾಕರನು ಎಚ್ಚತ್ತುದನ್ನು ತಿಳಿದು ನಿಂಗಪ್ಪ ಒಳಗೆ ಬಂದು ಮಾತನಾಡಿದ:

“ ಎದ್ದು ಬಿಟ್ಟರೇನ್ರಿ ರಾಯರ? ರಾತ್ರೀ ಮಾಡಿ ಮಲಕೊಂಡಿದ್ದಿರಿ; ಇನ್ನಷ್ಟು ಮಲಗಿ ನಿದ್ದೀ ಮಾಡಬೇಕಿಲ್ಲೋ!”

"ಎರಡು ಮೂರು ತಾಸು ನಿದ್ದಿ ಆಯ್ತುಲಾ; ಇನ್ನೇನು ಮಲಕೊಳ್ಳೋನು? ನೀ ಎದ್ದು ಬಹಳೊತ್ತಾನೇನು ನಿಂಗಪ್ಪಾ?"

"ನಾ ಏನು ಬಾಳೊತ್ತು ಮಲಕೊಂಡಿಲ್ಲರಿ! ದಿನದ್ಹಾಂಗs ಬೀಸೂಯಾಳೇಕಂದರ ಎದ್ದುಬಿಟ್ಟೆ."

"ನೀನೂ ನಿದ್ದೀ ಕಟ್ಟಿದ್ದಿ; ಇನ್ನೊಂದಿಷ್ಟು ಹೊತ್ತು ಮಲಕೋಬೇಕಾಗಿತ್ತು!"

"ನಾನು ಒಕ್ಕಲಿಗ್ಯಾ ರಾಯರ! ನಾನು ಮಲಗಿಬಿಟ್ಟರ ನಡದೀತು ಹ್ಯಾಂಗ? ನಸಕು ಹರಿಯೂದರೊಳಗ ಅಂದರ, ಬಸವಣ್ಣನ ಕಾಲಾಗಿನ ಕಸಾ ತಿಪ್ಪೀ ಕಾಣಲಾಕs ಬೇಕರಿ! ಥೊಡೇ ತುಸೂನರೇ? ಎಂಟು ಎತ್ತು, ನಾಕಾರು ಕಾಗರಗಳ ಕೊಟ್ಟಿಗಿರಿ! ಆಳುಮನಿಶಾರು ನಾನು ಕೂಡಿ ಮಾಡಿದರೂ ಒಂದು ತಾಸಿನ ಕೆಲಸರಿ!"

ಕೊಟ್ಟಿಗೆಯಲ್ಲಿ ಹಾಲು ಕರೆಯುವ ಸಪ್ಪಳ ಕೇಳುತ್ತಿತ್ತು. ಅಡಿಗೆಯ ಮನೆಯಲ್ಲಿ ರೊಟ್ಟಿಯನ್ನು ಮಾಡುವ ಶಬ್ದ ಕೇಳುತ್ತಿತ್ತು. ಹೊರಪಡಸಾಲೆಯಿಂದ ಬೀಸುವ ಕಲ್ಲಿನ ಸಪ್ಪಳು ದೂರದ ಧ್ವನಿಯಾಗಿ ಕೇಳುತ್ತಿತ್ತು. ಆಗ ರತ್ನಾಕರ ಕೇಳಿದ :

"ಓ! ನಿಮ್ಮ ಮನಿಯ ಜನಾ ಎಲ್ಲಾರೂ ಎದ್ದು ಬಿಟ್ಟಾರ ಕಾಣಿಸತ್ತದಲಾ!"

"ಏಳಲಾಕs ಬೇಕಲ್ರಿ! ಎಲ್ಲಾರಿಗೂ ಅವರವರ ಕೆಲಸ ಇದ್ದs ಇರತಾವು. ಅದೆಲ್ಲಾ ಯಂತರದ್ಹಾಂಗ ನಡೀದಿದ್ದರ, ರೈತನ ಬಾಳೇ ಆದೀತು ಹ್ಯಾಂಗರಿ!"

ಹಳ್ಳಿಯನ್ನು ಬಿಟ್ಟು ಬಹಳ ದಿನಗಳಾದ ರತ್ನಾಕರನಿಗೆ, ನಿಂಗಪ್ಪನ ಮನೆಯ ಜೀವನವೆಲ್ಲವೂ ಹೊಸದೆನಿಸಿತು. ಜೀವಪೂರ್ಣವಾದುದೆನಿಸಿತು. ಎದ್ದು ಹೊರಗೆ ಬಂದು ನೋಡಿದಾಗ, ಮನೆಯಲ್ಲಿಯ ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು. ಉದ್ಯೋಗವಿಲ್ಲದೆ ಕೈಮುಚ್ಚಿ ಕುಳಿತವರು ಒಬ್ಬರೂ ಇಲ್ಲ. ಕೊಟ್ಟಿಗೆಯಲ್ಲಿಯ ಎತ್ತುಗಳೂ ಬೇಸಗೆಯ ಕೆಲಸಕ್ಕಾಗಿ ಬೇಗನೆ ಹೊಲಗಳಿಗೆ ಹೋಗಿಬಿಟ್ಟಿದ್ದುವು. ಕೊಟ್ಟಿಗೆಯೆಲ್ಲ ನಿರ್ಮಲವಾಗಿ ಪ್ರಶಸ್ತವಾಗಿ ಕಾಣುತ್ತಿದ್ದಿತು. ರತ್ನಾಕರ ಮನದಲ್ಲಿಯೆ ಎಂದುಕೊಂಡ:

"ಹಳ್ಳಿಯ ಒಕ್ಕಲಿಗನ ಬಾಳು ನಿಜವಾಗಿಯೂ ಕರ್ಮಯೋಗಿಯ ಬಾಳು! ಇವನ ಕರ್ಮದ ಫಲದಿಂದಲೇ ಲೋಕದ ಬಾಳು! ಆದರೂ ನಾಗರಿಕ ಸಮಾಜದಲ್ಲಿ ಒಕ್ಕಲಿಗನ ವೃತ್ತಿ ಉಪೇಕ್ಷೆಗೆ ಗುರಿಯಾಗುತ್ತಿರುವುದು ಆಶ್ಚರ್ಯದ ಸಂಗತಿ!"

ನಿಂಗಪ್ಪ ಕೂಗಿ ಹೇಳಿದ :

"ಕಾಶವ್ವಾ, ಒಂದು ತಂಬಿಗಿ ನೀರು ತೊಗೊಂಡು ಬಾರವ್ವಾ! ರಾಯರು ಮಾರೀ ತೊಳಕೊಳ್ಳಲಿ!"

ಒಂದೆರಡು ನಿಮಿಷಗಳಲ್ಲಿಯೆ ಕಾಶವ್ವ, ಹಸನಾಗಿ ಬೆಳಗಿದ ಹಿತ್ತಾಳೆಯ ತಂಬಿಗೆಯಲ್ಲಿ ಬಿಸಿನೀರನ್ನು ತಂದಿಟ್ಟಳು. ಬಾಗಿಲ ಹೊರಗೆ ಹೋಗಿ ರತ್ನಾಕರ ಮುಖತೊಳೆದುಕೊಳ್ಳುತ್ತಲಿದ್ದ. ಆಗಲೇ ರಂಗಣ್ಣ ಮೆಲುನಗೆ ನಗುತ್ತ ಅಲ್ಲಿಗೆ ಬಂದು ವಿನೋದಧ್ವನಿಯಲ್ಲಿ ಕೇಳಿದ :

"ಏನು ಎದ್ದಿರಾ ದೇಶಭಕ್ತರ! ನಿದ್ದೆಯೇನಾದರೂ ಆಯ್ತೋ ಇಲ್ಲೋ!"

"ಬಾಬಾ ರಂಗಣ್ಣಾ, ಇದೇ ಈಗ ಎದ್ದೆ ನೋಡು!"

ನಿಂಗಪ್ಪ ನಗುನಗುತ್ತ ಹೇಳಿದ :

"ಪೋಲೀಸರ ಸೆರಿಮನೀ ತಪ್ಪಿದರೂ, ನಮ್ಮ ಸೆರಿಮನಿಯೊಳಗ ರಾಯರು ರಾತ್ರೀ ಕಳೀಬೇಕಾತರಿ! ನಾ ತಿರಿಗಿ ಬರೂತನಕಾ ಏನೂ ಇವರಿಗೆ ನಿದ್ದಿ ಹತ್ತಿದ್ದಿಲ್ಲರಿ!"

ರಂಗಣ್ಣ ಹೇಳಿದ :

"ಅದ್ಹ್ಯಾಂಗ ಹತ್ತಬೇಕದು! ಆಯ್ತು, ಇನ್ನ ಮ್ಯಾಲ ಸ್ನಾನಾಗೀನಾ ತೀರಿಸಿ ಆರಾಮಾಗಿ ನಿದ್ದೀ ಮಾಡಲೇಳು! ಇನ್ನೇನೂ ಹೆದರಿಕೆ ಇಲ್ಲ! ಚಿಕ್ಕಮ್ಮ ನಿನ್ನ ದಾರೀ ಕಾಯತನs ಕೂತಾಳ ರತ್ನಾಕರಾ! ಅದಕ್ಕs ನೀ ಎದ್ದಿದ್ದಿಯೋ ಇಲ್ಲೋ ನೋಡಿಯಾದರೂ ನೋಡೂಣಂತ ನಾನೇ ಬಂದುಬಿಟ್ಟೆ! ನಡಿ, ಮನಿಗೇ ಹೋಗೋಣಿನ್ನ!"

ನಿಂಗಪ್ಪ ಮಾತನಾಡಿದ :

"ನೀವೂ ಬಂದಿರಿ, ಪಾಡ ಆತು! ಒಳಗ ಆಕಳಾ ಹಿಂಡ್ಯಾರ. ಇಬ್ಬರೂ ಜೋಡಾಗಿ ಕೂತು, ಈ ಬಡವನ ಮನ್ಯಾಗ ನೊರಿಹಾಲು ಕುಡಿದು ಹೋಗರಿ!"

ರಂಗಣ್ಣ—ರಂತ್ನಾಕರ— ಇಬ್ಬರೂ ಬೇಡಬೇಡವೆಂದರೂ ನಿಂಗಪ್ಪ ಕೇಳಲೇ ಇಲ್ಲ. ಹೊರಬಂಕದಲ್ಲಿ ಕಂಬಳಿಯನ್ನು ಹಾಸಿದ; ಇಬ್ಬರನ್ನೂ ಆದರದಿಂದ ಸ್ವಾಗತಿಸಿ ಕುಳ್ಳಿರಿಸಿದ. ನಿಂಗಪ್ಪನ ಪ್ರೀತಿಯ ಒತ್ತಾಯವನ್ನು ರಂಗಣ್ಣ ರತ್ನಾಕರ ಇಬ್ಬರೂ ಒಪ್ಪಿಕೊಳ್ಳಲೇ ಬೇಕಾಯಿತು. ನಿಂಗಪ್ಪ ಕೂಗಿ ಹೇಳಿದ :

" ಕಾಶವ್ವಾ, ಹಾಲು ಇಲ್ಲೇ ಹೊರಗ ತೊಗೊಂಡು ಬಂದುಬಿಡವ್ವಾ !"

ಕಾಶವ್ವ ಎರಡು ಬಟ್ಟಲುಗಳನ್ನೂ, ನೊರೆಹಾಲಿನಿಂದ ತುಂಬಿದ ತಂಬಿಗೆ-ಯನ್ನೂ ತೆಗೆದುಕೊಂಡು ಹೊರಗೆ ಬಂದಳು. ನಿಂಗಪ್ಪ ರತ್ನಾಕರನಿಗೆ ಕಾಶವ್ವನ ಪರಿಚಯಮಾಡಿಕೊಡಲು ತೊಡಗಿದ :

" ಈಕಿ ನನ್ನ ಹಿರಿಯ ಮಗಳ್ರಿ ಯಪ್ಪಾ ! ಇಲ್ಲೇ ನೆರೆಹಳ್ಳೀ ಗೌಡರ ಮನೀಗೆ ಕೊಟ್ಟೇದಿವಿ. ಈಗ ನಾಕು ದಿನಾ ಆತು - ತೌರಮನಿಗಂತ ಬಂದಾಳರಿ !"

ರತ್ನಾಕರ ಕಾಶವ್ವನ ಕಡೆಗೆ ನೋಡಿದ. ಒಳ್ಳೆಯ ಗೌರವರ್ಣದ ತರುಣಿ. ನಿಡಿದಾದ ಮೂಗು; ಕಳೆಯಿಂದ ತುಂಬಿದ ಹೊಳಪಿನ ಕಣ್ಣು-ಗಳು. ಹಳ್ಳಿಯ ಪದ್ಧತಿಯಿಂದಲೇ ಉಟ್ಟುಕೊಂಡ ಅಚ್ಚುಕಟ್ಟಾದ ಸೀರೆ. ದುಂಡುದೋಳಿನ ಸೌಂದರ್ಯವನ್ನು ಸ್ಫುಟಗೊಳಿಸುವಂತಹ ರೇಶಿಮೆಯಂಚಿನ ಕುಪ್ಪಸ. ಕೊರಳಲ್ಲಿ ಚಿಂತಾಕು—ಅಡ್ಡಿಗೆಯ ಸರ. ತಲೆಯ ಮೇಲೆ ಹೊದ್ದುಕೊಂಡಿದ್ದ ಸೆರಗನ್ನು ಮೀರಿ, ಹಣೆಯ ಸುತ್ತಲೂ ಸುರುಳಿಗಟ್ಟಿನಿಂತ ಮುಂಗುರುಳು. ಸ್ವಾಭಾವಿಕ ಸೌಂದರ್ಯದಲ್ಲಿ, ಯಾವ ಪಟ್ಟಣದ ಹೆಣ್ಣಿಗೂ ಹಿಂಜರಿಯದ ಸೌಂದರ್ಯವು ಕಾಶವ್ವನದು. ರತ್ನಾಕರ ಅರೆನಿಮಿಷ ನಿಟ್ಟಿಸಿ ನೋಡಿದ. ಆಗ ಒಮ್ಮೆಲೆ ಅವನ ಮನದೆದುರು ಕುಮುದಾ ಸುಳಿದು ಹೋದಳು. ಗೊಂದಲಗೆಟ್ಟ ಮನವನ್ನು ಸಂಯಮದಿಂದ ಸಾವರಿಸಿಕೊಂಡು ರತ್ನಾಕರ ರಂಗಣ್ಣನಿಗೆ ಹೇಳಿದ :

" ನಿಂಗಪ್ಪನ ಮನೆಯೊಳಗ ಕಳೆದ ಈ ಒಂದು ದಿನದ ಅನುಭವ, ನನಗ ಎಷ್ಟೊಂದು ಹೊಸಮಾತನ್ನ ಕಲಿಸಿತಂತೀ ರಂಗಣ್ಣಾ ! ಜಗತ್ತಿನೊಳಗ ನಿಜವಾದ ಆನಂದ ಎಲ್ಲಿ ಅದ ಅಂದರ, ಪ್ರಾಮಾಣಿಕತನದಿಂದ ದುಡಿಯುವ ಹಳ್ಳಿಯ ಒಕ್ಕಲಿಗನ ಮನಿಯೊಳಗ ಅದs—ಅಂತ ಹೇಳಬಹುದು. ನಮಸ್ಕಾರ

ಕಾಶವ್ವತಾಯಿಯಾ ! ನಿಮ್ಮಪ್ಪ ನಮಗ ಹಾಲು ಕುಡಿಸೇ ಕಳಿಸಬೇಕಂತ ಪ್ರೀತಿಯ ಹಟಾ ಹಿಡಿದಾನ. ಆಯ್ತು, ಕೊಟ್ಟುಬಿಡು, ಕುಡೀತೀವಿ !"

ಕಾಶವ್ವ ನಾಚಿಕೆಗೂಡಿದ ಮೆಲುನಗೆಮೊಗದಿಂದ ಎರಡೂ ಬಟ್ಟಲಲ್ಲಿ ಹಾಲನ್ನು ತುಂಬಿ ಮುಂದಿಟ್ಟಳು. ಇಬ್ಬರೂ ಸುಧಾಸಾರದಂತಹ ನೊರೆ ಹಾಲನ್ನು ಕುಡಿದು ಬಟ್ಟಲುಗಳನ್ನು ಕೆಳಗಿಟ್ಟರು. ಕಾಶವ್ವ ಮತ್ತೆ ಬಟ್ಟಲುಗಳೆರಡನ್ನೂ ತುಂಬಿದಳು.

ಕಾಶವ್ವನಲ್ಲಿ ರಂಗಣ್ಣನದು ಮಗಳ ಸಲುಗೆ. ನಗುನಗುತ್ತ ಮಾತನಾಡಿದ :

" ಈ ಮೋಹಿನಿ, ಮತ್ತೆ ಮತ್ತೆ ಈ ಅಮೃತಾ ಕುಡಿಸಿ, ನಮ್ಮನ್ನ ಅಸುರರನ್ನಾಗಿ ಮಾಡೇ ಕಳಸೂಹಾಂಗ ಕಾಣಿಸತದ !"

ಕಾಶವ್ವನಿಗೆ ರಂಗಣ್ಣನ ಮಾತಿನ ವಿಶೇಷಾರ್ಥವೇನೂ ತಿಳಿಯಲಿಲ್ಲ. ಸುಮ್ಮನೆ ತುಟಿಯನ್ನರಳಿಸಿ ನಕ್ಕುಬಿಟ್ಟಳು. ನಿಂಗಪ್ಪ ಮಾತ್ರ ಅದರ ಅರ್ಥವನ್ನು ತಿಳಿದುಕೊಂಡು ಹೇಳಿದ :

" ಹೌದರಿ ಮತ್ತ ! ನೀವು ಸಾವಿಲ್ಲದ ದೇವತೆಗಳಾದಾಗs ಆ ದೈತ್ಯರೆಲ್ಲಾ ಸೋತು ಹೋಗಬೇಕು ! ಇಲ್ಲದಿದ್ದರ, ನೀವs ಸೋತು ದೇವರ ಕೋಣ್ಯಾಗ ಅಡಗಿಕೊಂಡು ಕೂತಗೋಬೇಕಾಗತೈತಿ ! ಯಾಕs ತಂಗೀ ! ಹೌದಲ್ಲೋ ನನ್ನ ಮಾತು ?"

ಕಾಶವ್ವನೂ ನಕ್ಕಳು. ರಂಗಣ್ಣ ರತ್ನಾಕರರೂ ನಕ್ಕರು. ನಿಂಗಪ್ಪನ ಬುದ್ಧಿಯ ಸಂಸ್ಕಾರವನ್ನು ಕಂಡು ರತ್ನಾಕರನಿಗೆ ಆಶ್ಚರ್ಯವಾಯಿತು. ' ಚದುರರ್, ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ' ಎಂದು ಕನ್ನಡ ರಾಜ ನೃಪತುಂಗ, ತನ್ನ ನಾಡವರನ್ನು ಕುರಿತು ಹೇಳಿದ ಮಾತಿನ ನೆನಪಾಗಿ, ಹೃದಯ ಹೆಮ್ಮೆಯಿಂದ ಹಿಗ್ಗಿತು.

ಇಬ್ಬರೂ ಇನ್ನೊಂದೊಂದು ಬಟ್ಟಲು ಹಾಲನ್ನು ಕುಡಿದು, ನಿಂಗಪ್ಪನನ್ನು ಬೀಳ್ಕೊಂಡು ಮನೆಯ ಕಡೆಗೆ ಹೊರಟರು. ಕೆಲವೊಂದು ದೂರ ಅಂತರದ ವರೆಗೆ ಕಳಿಸಲು ಬಂದ ನಿಂಗಪ್ಪ : ' ಸಂಜೀಕಡೇ ಬಂದು ಮತ್ತ ಬೆಟ್ಟಿ ಆಗತೀನರಿ ' ಎಂದು ಹೇಳಿ, ನಮಸ್ಕರಿಸಿ ಹಿಂದಿರುಗಿದ.

* * * *

ಮನೆಗೆ ಬಂದೊಡನೆಯೆ ರತ್ನಾಕರ, ಮೊದಲು ತನ್ನ ಪ್ರಾತರ್ವಿಧಿಯನ್ನು ಮುಗಿಸಿದ. ಇಬ್ಬರೂ ಸ್ನಾನವನ್ನು ತೀರಿಸಿದರು. ಹಾಲುಕುಡಿದು ಹೊಟ್ಟೆ ತುಂಬಿದಂತಾಗಿದ್ದರೂ, ಚಿಕ್ಕಮ್ಮನ ಒತ್ತಾಯಕ್ಕಾಗಿ ಬೆಳಗಿನ ಉಪಾಹಾರ-ವನ್ನೂ ತೆಗೆದುಕೊಂಡಾಯಿತು. ಇಬ್ಬರೂ ಬಂದು ಪಡಸಾಲೆಯಲ್ಲಿ ಕುರ್ಚಿ-ಗಳ ಮೇಲೆ ಕುಳಿತುಕೊಂಡರು. ಆಗ ರತ್ನಾಕರ ಹೇಳಿದ:

"ನಮ್ಮ ಮುಂದಾಳುಗಳೆಲ್ಲಾ ಹಳ್ಳಿಗರನ್ನ ಸುಧಾರಿಸಬೇಕು—ಸುಧಾರಿಸಬೇಕು—ಅಂತ ಮತ್ತೆ ಮತ್ತೆ ಹೇಳತಿರತಾರ. ಆದರ ಇಲ್ಲಿಗೆ ಬಂದ ಮ್ಯಾಲ ನನಗ ಅನಿಸತಿರೂದಂದರ, ಯಾರನ್ನ ಯಾರು ಸುಧಾರಿಸ-ಬೇಕಾಗೇದ?.... ಅಂತ!"

ರಂಗಣ್ಣ ಬರೀ ಮೆಲುನಗೆ ನಕ್ಕುಬಿಟ್ಟ. ರತ್ನಾಕರ ಮತ್ತೆ ಮಾತನ್ನು ಮುಂದುವರಿಸಿದ:

"ನಿಂಗಪ್ಪನಂಥಾ ಹಳ್ಳಿಗರಿಂದ, ನಾಗರಿಕರೆನಿಸಿಕೊಳ್ಳುವ ಜನರೆಲ್ಲಾ ಸುಧಾರಣೆಯ ಪಾಠಾ ಕಲೀಬೇಕು ನೋಡು! ಇಂಥಾ ಹೃದಯದ ವಿಕಾಸ, ನಮ್ಮ ನಗರದ ಜನರೊಳಗ ಎಲ್ಲಿಯಾದರೂ ಕಂಡುಬಂದೀತೇನು? ಎಲ್ಲಿ ನೋಡಿದರೂ ಸ್ವಾರ್ಥ; ಎಲ್ಲಿ ನೋಡಿದರೂ ಮೋಸ; ಎಲ್ಲಿ ನೋಡಿದರೂ ಲೋಭ! ಪ್ರೀತಿ-ಔದಾರ್ಯ-ಸಹಕಾರಗಳಿಗೆ ನೆಲೀನ ಇಲ್ಲದ್ಹಾಂಗ ಆಗೇದ! ಎಲ್ಲಾ ಕಡೆಗೂ ಕುಟಿಲ ರಾಜಕಾರಣ!"

"ನಿನಗೆ ಗೊತ್ತಿಲ್ಲ; 'ಹಳ್ಳಿಗರನ್ನ ಸುಧಾರಿಸಬೇಕು!' ಅಂತ ಕೂಗುತಿ-ರುವ ನಮ್ಮ ಮುಂದಾಳುಗಳ ಕೂಗು ಸುದ್ಧಾ ಕುಟಿಲ ರಾಜಕಾರಣನ ಅದ! ಈಗ ಯಾವ ಮುಂದಾಳು ಬಂದು ಹಳ್ಳಿಯೊಳಗ ನಿಂತು, ಹಳ್ಳಿಯ ಜನರನ್ನ ತಿದ್ದಲಿಕ್ಕೆ ಸಿದ್ಧನಾಗತಾನ ಹೇಳು! ಎಲ್ಲಾ ಡಂಭಾಚಾರದ ಹೊರಮಾತು! ತಮ್ಮ ಚಟುವಟಿಕೆಗಳಿಗೆ ಹಳ್ಳಿಗರ ಕಡಿಂದ ಹಣಾ ಬೇಕಾಗತದ; ಅದಕ್ಕಾಗಿ 'ಹಳ್ಳಿಗರ ಹಿತ! ಹಳ್ಳಿಗರ ಸುಧಾರಣೆ!' ಅಂತ ಕೂಗು ಎಬ್ಬಿಸತಾರ! ಬ್ರಿಟಿಷ್ ಸರಕಾರ ಸಹಿತ ಇಂದ ಹಳ್ಳಿಗರ ಹಿತದ ಸಲುವಾಗಿ ಬೇಕಾದಷ್ಟು ಬಾಯಿಮಾತು ಆಡತದ; ಆದರ ಹಳ್ಳಿಗರು ಕೊಟ್ಟ ಹಣಾ ಎಲ್ಲಾ ತಮ್ಮ ಸಾಮ್ರಾಜ್ಯದ ಸಂರಕ್ಷಣೆಗೆ ಖರ್ಚು ಮಾಡಿ, ಹಳ್ಳಿಗರಿಗೆಲ್ಲಾ ಹಳ್ಳದ ದಾರೀನ ತೋರಿಸತಾರ! ನಮ್ಮ ಮುಂದಾಳುಗಳಿಗೆ ರಾಜಕಾರ್ಯದ ಪಾಠ ಕಲಿಸಿದ

ಗುರುಗಳಂದರ ಬ್ರಿಟಿಷರs ಅಲ್ಲ ? ಅವರು ಹಾಕಿಕೊಟ್ಟಿ ಕಿತ್ತೀನs ಇವರು ತೀಡತಾರ ಅಯ್ತು ! ಇರಲಿ, ನಿನಗ ರಾತ್ರಿ ಬೆಳತನಕಾ ನಿದ್ದಿಯಿಲ್ಲ ಕಾಣಿಸ-ತsದ; ಒಂದೆರಡು ತಾಸು ಮಲಕೊಂಡು ಏಳತೀಯೇನು ? ''

" ಛೇಛೇಛೇ ! ಬಂದಿರುವ ಕೆಲಸಾ ಮುಗಿಸುವ ತನಕಾ ನನಗೇನೂ ನಿದ್ದಿ ಬರುವ ಹಾಂಗಿಲ್ಲ ! ''

ರಂಗಣ್ಣಾ ನಸು ಜೆರಗಿನ ಧ್ವನಿಯಲ್ಲಿ ಕೇಳಿದ :

" ಅಂದರ ? ಈಗ ನೀನು ಯಾವುದಾದರೂ ಕೆಲಸಾ ಇಟುಗೊಂಡು ಬಂದೀಯೇನು ? "

" ಕೆಲಸ ಇಲ್ಲದಿದ್ದರ ಬರತಿದ್ದೆ ಯಾಕಿಲ್ಲೆ ? ಬರಲಿಕ್ಕೆ ನನಗ ಬಿಡುವರೇ ಎಲ್ಲಿತ್ತು ? "

" ಯಾಕ ? ಈಗ ಬಿಡುವು ಇಲ್ಲದs ಬಂದೀಯೇನು ? "

" ಕೆಲಸಕ್ಕಂತs ಬಂದೀನಂದ ಮ್ಯಾಲ ಬಿಡುವು ಎಲ್ಲೆ ಇದ್ವಾಂಗಾತು? "

ರಂಗಣ್ಣಾ ಕುತೂಹಲದಿಂದ ಕೇಳಿದ :

" ಅದೇನಪಾ ? ಇಲ್ಲಿ ಮಾಡಬೇಕಾದ ಕೆಲಸ ಎಂಥಾದು ? ಸತ್ಯಾ-ಗ್ರಹಕ್ಕ ಜನಾ ಏನಾದರೂ ಬೇಕಾಗ್ಯಾರ ಏನು ? ಮತ್ತೇನು ವಿಶೇಷ-ರಾಜಕಾರಣ ? "

" ನಾನು ಈಗ ಬಂದದ್ದು ರಾಜಕಾರಣಕ್ಕಾಗಿ ಅಲ್ಲ; ಸಮಾಜ-ಕಾರಣಕ್ಕಾಗಿ ! "

" ಅಂದರ ಏನು ? ಸಮಾಜಕಾರಣ ಅಂದರ ಏನು ? "

" ಅಂದರ ಒಂದು ಯೋಗ್ಯ ಕನ್ಯೆಯನ್ನ ಒಬ್ಬ ಯೋಗ್ಯ ವರನಿಗೆ ಗಂಟುಹಾಕಬೇಕಾಗೇದ ! "

" ಹಾಂಗಾದರ ನೀ ಇಲ್ಲಿಗೆ ಬಂದದ್ದು ಕನ್ಯಾ ನೋಡಲಿಕ್ಕೋ, ಏನು ವರಾ ನೋಡಲಿಕ್ಕೋ ? "

" ನಾನು ಎರಡನ್ನೂ ನೋಡೀನಿ ! ಈಗ ಕನ್ಯೆಯನ್ನ ನೋಡಲಿಕ್ಕೆ ವರನನ್ನು ಕರಕೊಂಡು ಹೋಗಬೇಕಂತ ಬಂದೀನಿ ! "

ರಂಗಣ್ಣಾ ಅನುಮಾನಿಸುತ್ತ ಕೇಳಿದ :

" ಅಂದರ ಏನು ? ಈ ಊರೊಳಗ ಎಲ್ಲಿ ಅದ ಅಂಥಾ ಯೋಗ್ಯವರ ? "

"ಅದಕ .ಅನ್ನೂ ವಿಶ್ವಾಸದಿಂದನಃ ಬಂದೀನಿ!" ಎಂದು ನುಡಿದು ರತ್ನಾಕರ ರಂಗಣ್ಣನ ಮುಖದ ಕಡೆಗೆ ನೋಡುತ್ತ ಅರ್ಥಪೂರ್ಣವಾದ ನಗೆಯೊಂದನ್ನು ನಕ್ಕ. ಆಗ ರಂಗಣ್ಣ ಚೇಷ್ಟೆಯ ಧ್ವನಿಯಲ್ಲಿ ಕೇಳಿದ :

"ಹಂ ಹಂ! ತಿಳಿದ್ಹಾಂಗ ಆಯ್ತು ಬಿಡು! ನೀ ನನ್ನ ಮದಿವೀ ಪುರೋಹಿತ ಆಗಬೇಕಂತ ಯೋಚಿಸಿ ಬಂದಿಯೇನು?"

"ಹಾಂ! ಹೌದು! ಆ ಕನ್ಯೆ ನಿನಗೇ ತಕ್ಕವಳಂತ ಸಂಪೂರ್ಣ ಅನಿಸಿದ್ದರಿಂದ, ಕೈಯೊಳಗಿನ ಕೆಲಸಾ ಎಲ್ಲಾ ಬಿಟ್ಟು ಇಲ್ಲಿಗೆ ಹೊರಟು ಬಂದೀನಿ!"

ರಂಗಣ್ಣ ಮತ್ತೆ ಉಪಹಾಸದ ಧ್ವನಿಯಲ್ಲಿಯೇ ಕೇಳಿದ:

"ನೀನು ನಿನ್ನ ರಾಜಕಾರಣಾ ಬಿಟ್ಟು, ಈ ಪೌರೋಹಿತ್ಯಕ್ಕ ಯಾಕ ಗಂಟು ಬಿದ್ದೀದಿ? ಈ ಹುಚ್ಚು ಯಾಕ ಹೊಕ್ಕಿತು ತಲಿಯೊಳಗ?"

"! ರಂಗಣ್ಣಾ! ಬ್ರಿಟಿಷರ ರಾಜಕಾರಣದೊಳಗಿನ ಅನಾಚಾರ, ನನಗ ರಾಜಕಾರಣದ ಹುಚ್ಚು ಹಿಡಿಸಿತು; ಅದರಂತೇ ನಮ್ಮ ಸಮಾಜದಲ್ಲಿಯ ಹುಚ್ಚು ಆಚಾರ, ನನಗ ಸಮಾಜಕಾರಣದ ಹುಚ್ಚು ಹಿಡಿಸೇದ. ಎರಡನ್ನೂ ಕೂಡಿಯೇ ಮಾಡಬೇಕಾಗೇದ ನಾವೆಲ್ಲಾ!"

ಈ ಮಾತನಾಡುವಾಗ ರತ್ನಾಕರ ಭಾವಾವಿಷ್ಟನಾಗಿದ್ದ. ಅವನ ಆವೇಶವನ್ನು ಕಂಡು ರಂಗಣ್ಣ ಸ್ವಲ್ಪವೇಳೆ ಸುಮ್ಮನೆ ಕುಳಿತ. ಆ ಮೇಲೆ ಮೆಲ್ಲಗೆ ಕೇಳಿದ :

"ಸಮಾಜದಲ್ಲಿಯ ಹುಚ್ಚು ಆಚಾರ—ಅಂತ ಯಾವುದಕ್ಕ ಹೇಳತೀ ನೀನು ರತ್ನಾಕರಾ?"

"ಯಾವುದಕ್ಕಂತ ಏನು ಕೇಳತೀ ರಂಗಣ್ಣಾ? ಹೆಣ್ಣು-ಗಂಡಿನ ಮದುವಿಯಂಥಾ ಮಹತ್ತ್ವದ ವಿಷಯವೇ ಹುಚ್ಚು ಆಚಾರ ಆಗಿ ನಿಂತಽದ. ಬಡವರ ಮನಿಯೊಳಗ ಎಂಥಾ ಯೋಗ್ಯ ಕನ್ಯಾ ಇದ್ದರೂ, ಅವರ ಬಡತನದ ಕಾರಣದ ಮೂಲಕ ಯೋಗ್ಯವರಗಳು ಸಿಗದ್ಹಾಂಗ ಆಗ್ಯಾವ. ಹೊರರೂಪ, ಸಿರಿವಂತಿಕೀ ಮ್ಯಾಲ ಎಂಥೆಂಥಾ ಅಸಂಸ್ಕೃತ ಹೆಣ್ಣುಗಳ ಮದಿವಿಯೂ ಸುಲಭವಾಗಿ ಆಗಿಬಿಡತಽದ; ಆದರ ಬಡತನದ ಮೂಲಕ ಎಂಥೆಂಥಾ ಗುಣಸುಂದರ ಕನ್ಯೆಯರೂ ಮದಿವೀ ಕಾಣದೆ, ಅವರ ತಾಯಿ-ತಂದಿಗಳನ್ನ ಬಾಯಿ-ಬಾಯಿ ಬಿಡಲಿಕ್ಕೆ ಹಚ್ಚತಾರ; ತಾವೂ ಒಳಗೊಳಗಽ ಕೊರಗಿ ಮರಗತಾರ. ಎಲ್ಲಿ

ಬೇಕಾದಲ್ಲಿ ನೋಡು; ಸಂಸ್ಕೃತಿಯ ದೃಷ್ಟಿಯಿಂದ ಕನ್ಯಾ-ವರಗಳ ಸಂಘಟನೆ-ಯಾದದ್ದು ಕಂಡುಬರುವುದೇ ಇಲ್ಲ. ಮದುವೆಯ ಮೂರುದಿನ ಮಾತ್ರ ಹುಚ್ಚುಹಿಗ್ಗು; ಸವಿಯೂಟ! ಪ್ರತ್ಯಕ್ಷ ಸಂಸಾರ ಸಾಗಿಸುವ ಸಂದರ್ಭ ಬಂದಾಗ, ಎಲ್ಲೆಲ್ಲಿಯೂ ಅತೃಪ್ತಿ-ಅಸಂತುಷ್ಟಿ; ಕಂಬನಿಯ ಕಹಿಬಾಳು! ಎಲ್ಲಾ ಸಂಸಾರಗಳೂ ಇಂಥಾ ವಿಷಮತೆಯಿಂದ ತುಂಬಿದ್ದನ್ನ ನಾವು ನೋಡ-ತೀವಿ! ಇಷ್ಟಾದರೂ, ನಮ್ಮ ಸಮಾಜದೊಳಗ, ಈ ಕನ್ಯಾ-ವರಗಳ ಸಂಬಂಧ-ವಾಗಿ ಯಾರೂ ವಿಚಾರವನ್ನೇ ಮಾಡೂದಿಲ್ಲ! ಅಸಂತುಷ್ಟಿ-ಅತೃಪ್ತಿಯಿಂದ ಕೂಡಿದ ವ್ಯಕ್ತಿಗಳಿರುವ ಸಮಾಜದಲ್ಲಿ ಯಾವ ಸುಧಾರಣೆಯ ಕಾರ್ಯ ಮಾಡಲಿಕ್ಕಾದೀತು? ಯಾವ ರಾಜಕೀಯ ಚಟುವಟಿಕೆ ಅಲ್ಲಿ ಯಶಸ್ಸನ್ನ ಪಡೆದೀತು ರಂಗಣ್ಣಾ!"

ರಂಗಣ್ಣ ಶಾಂತಭಾವದಲ್ಲಿಯೇ ನುಡಿದ:

"ನಿನ್ನ ಮಾತು ನಿಜ ರತ್ನಾಕರಾ! ನಮ್ಮ ಸಮಾಜದ ಜನತೆಯಲ್ಲಿ ಸುಧಾರಣೆ ಆಗದಿದ್ದರ, ನಮಗ ಸ್ವಾತಂತ್ರ್ಯ-ಸ್ವರಾಜ್ಯ ಬಂದರೂ, ಅದರಿಂದ ಯಾವ ಪ್ರಯೋಜನವೂ ಆಗಲಾರದು—ಅಂತ ಅನಿಸತದ. ಮೊದಲು ನಮ್ಮ ಜನರೊಳಗ ಸಾಮಾಜಿಕ ಸಂಘಟನೆಯ ದೃಷ್ಟಿ ಉದಯ ಆಗುವ ಹಾಂಗ, ನಮ್ಮಲ್ಲಿ ತಿಳಿದವರು ಅನಿಸಿಕೊಳ್ಳುವವರಾದರೂ ತಮ್ಮ ವಿಚಾರ-ಆಚಾರ-ಗಳೊಳಗ ಮಾರ್ಪಾಡು ಮಾಡಿಕೊಳ್ಳಬೇಕಾದ ಅಗತ್ಯ ಬಹಳ ಅದ ಈಗ!"

"ಹೀಂಗ ನಿನಗ ಅನಿಸತಿದ್ದರ ಬಹಳ ಸಂತೋಷದ ಮಾತು. ಈ ಸಾಮಾಜಿಕ ಸಂಘಟನಾ ದೃಷ್ಟಿಯಿಂದಲೇ ನೀನು ಮದಿವೀ ಮಾಡಿಕೊಳ್ಳಲಿಕ್ಕೆ ಸಿದ್ಧನಾಗಬೇಕು. ನೀನು ಆ ಕನ್ಯೆಯ ಕೈ ಹಿಡಿದರ, ನಿನಗೂ ಸೌಖ್ಯ ಆದೀತು, ಆಕೆಗೂ ಸೌಖ್ಯ ಆದೀತು! ನಮ್ಮ ಜನಕ್ಕ ಒಂದು ಮಾದರಿಯ ದಾಂಪತ್ಯ ನೋಡಲಿಕ್ಕೆ ಸಿಕ್ಕೀತು—ಅಂತ ನನಗ ಅನಿಸತದ! ಕಲಿಯದವರು ಒಂದು ಬಗೆಯ ಮೂಢರಾಗಿದ್ದರ, ಕಲಿತವರನಿಸಿಕೊಳ್ಳುವವರು ಇನ್ನೊಂದು ಬಗೆಯಿಂದ ಮೂರ್ಖರಾಗಿ ಬಿಟ್ಟಾರ ರಂಗಣ್ಣಾ!"

ರಂಗಣ್ಣ ಸಹಜ ಶಾಂತಭಾವದಿಂದಲೇ ಕೇಳಿದ:

"ಯಾವ ಕನ್ಯೆಯ ವಿಚಾರ ಮಾತನಾಡ್ತೀ ರತ್ನಾಕರಾ? ಎಲ್ಲಿಯ ಕನ್ಯಾ? ಏನು ಸುದ್ದೀ?"

“ನನ್ನ ಜೊತೆಗೆ ನಡಿ; ಕನ್ಯೆಯನ್ನ ಪ್ರತ್ಯಕ್ಷವಾಗಿ ಕಣ್ಣಿಂದ ನೋಡು! ಕನ್ಯೆಯ ಮನೆಯ ಪರಿಸ್ಥಿತಿಯನ್ನೆಲ್ಲ ತಿಳಿದುಕೊ! ನಿನಗೆ ಒಪ್ಪಿಗೆಯಾಗದೆ ಇರಲಾರದು ಅಂತ ನನ್ನ ವಿಶ್ವಾಸ! ಈ ವಿಶ್ವಾಸದಿಂದಲೇ ಪಾಪ, ಆ ಕನ್ಯೆಯ ತಾಯಿ-ತಂದೆಗಳಿಗೆ ನಂಬುಗೆ ಕೊಟ್ಟು ಧೈರ್ಯ ಹೇಳಿ ಹೊರಟು ಬಂದೀನಿ!”

“ಅದಾಯ್ತು ರತ್ನಾಕರಾ! ಈಗ ನಾನು ಮದುವೆ ಮಾಡಿಕೊಳ್ಳಲೇ? ಮಹಾತ್ಮರು ಹೋಗಿ ಸೆರೆಮನೆಯಲ್ಲಿ ಕುಳಿತಿರುವಾಗ, ನಾನು ನನ್ನ ಮದುವೆಯ ಸಮಾರಂಭದಲ್ಲಿ ಭಾಗಿಯಾಗಬೇಕೆ?”

“ಸಮಾರಂಭದಲ್ಲಿ ಭಾಗಿಯಾಗುವ ಕಾರಣವಿಲ್ಲ; ಮದುವೆಯ ಸಂಸ್ಕಾರದಲ್ಲಿ ಭಾಗಿಯಾದರೆ ಸಾಕು. ವಿಧಿಪೂರ್ವಕವಾಗಿ ಹೆಣ್ಣಿನ ಕೈ ಹಿಡಿದರೆ ಸಾಕು!”

“ಇಂತಹ ಕಾಲದಲ್ಲಿ ಮದುವೆ ಮಾಡಿಕೊಳ್ಳಲೇ ನಾನು?”

“ಒಂದು ಮಾತು ಹೇಳು! ನೀನು ಮದುವೆ ಮಾಡಿಕೊಳ್ಳಬೇಕೆಂದಿದ್ದಿಯೋ? ಕೊನೆಯವರೆಗೂ ಬಿಟ್ಟುಬಿಡಬೇಕಂತ ಮಾಡಿದ್ದೀಯೋ?”

“ಬಿಟ್ಟು ಬಿಡಬೇಕಂತೇನೂ ಇಲ್ಲ; ನನ್ನ ಚಿಕ್ಕಮ್ಮನ ಅಪೇಕ್ಷೆಯ ಸಲುವಾಗಿ ಆದರೂ, ಇಂದಿಲ್ಲ ನಾಳೆ ಮದುವೆಯನ್ನ ಮಾಡಿಕೊಳ್ಳಲೇ ಬೇಕಾಗತೈದ!”

“ಅಹುದಲ್ಲೋ? ಹಾಂಗಾದರ, ಇಂದsa ಮಾಡಿಕೊಳ್ಳಲಿಕ್ಕೆ ಯಾಕ ಸಿದ್ಧನಾಗಬಾರದು ನೀನು? ನಿನ್ನ ಚಿಕ್ಕಮ್ಮ ಅಂತೂ ನಿನ್ನ ಮದಿವೀ ಸಲುವಾಗಿ ಹಗಲಿರುಳೂ ಹಂಬಲಿಸತಾಳ!”

“ನಾನೂ ಇದೇ ಪ್ರಶ್ನ ನಿನಗ ಮರಳಿ ಕೇಳತೀನಿ: ನೀ ಯಾಕ ಈಗ ಮದಿವೀ ಮಾಡಿಕೊಳ್ಳಬಾರದು? ನಿನ್ನ ತಾಯಿಯೂ ನಿನ್ನ ಮದಿವೀ ಸಲುವಾಗಿ ಹಂಬಲಿಸತಾಳ!”

“ಹೌದು ರಂಗಣ್ಣ, ಈಗ ನಾನು ಮದಿವೀ ಮಾಡಿಕೊಳತೀನಂದರೂ ಸಾಧ್ಯ ಇಲ್ಲದ್ಹಾಂಗ ಆಗೇದ. ನನ್ನ ಮ್ಯಾಲ ಪೋಲೀಸ್‌ವಾರಂಟು ಹೊರಟೈದ. ನಾ ಈಗ ಸರಕಾರದ ತುರಂಗದ ಅತಿಥಿಯಾಗಿ ನಿಂತೀನಿ! ಇಂಥಾ ವ್ಯಾಳ್ಯದೊಳಗ ನನಗ ಕನ್ಯಾಕೊಡಲಿಕ್ಕೆ ಸಿದ್ಧರಾದರೂ ಯಾರು ಆಗತಾರ ಹೇಳು! ಏನು ಮದಿವೀ ಮಾಡಿಕೊಳ್ಳೂದರ ಸಲುವಾಗಿ, ಸರಕಾರದ ಕ್ಷಮಾಬೇಡಿ ಪಾರಾಗಿ ಬಂದು ಬಿಡಲ್ಯಾ?”

ರಂಗಣ್ಣ ಒಂದು ನಿಮಿಷ ಸುಮ್ಮನೆ ಕುಳಿತ. ಒಳಗೊಳಗೆ ಏನೇ-ನನೋ ಯೋಚಿಸಿದ. ಆ ಮೇಲೆ ಹೇಳಲು ತೊಡಗಿದ :

"ನಿನ್ನ ಮಾತಿನ ಅರ್ಥ ಮಾಡಿಕೊಂಡೆ ರತ್ನಾಕರಾ ! ನಾನೇನೂ ತುರಂಗಕ್ಕ ನಾನಾಗೇ ಹೋಗಲಿಕ್ಕೆ ಅಪೇಕ್ಷಿಸೂದಿಲ್ಲ. ಮಹಾತ್ಮರನ್ನ ಹಿಡಿದ ಸುದ್ದಿ ಬಂದ ದಿನ, ಭಾವನಾದ ಆವೇಶದೊಳಗ ಹೋಗಬೇಕಂತ ಹೊರಟು ನಿಂತಿದ್ದೆ, ಆದರ, ನಮ್ಮ ಹಳ್ಳಿಯು ಜನರು ನನ್ನನ್ನ ಹೋಗಗೊಡಲಿಲ್ಲ. ನನ್ನ ಈ ವಿಧಾಯಕ ಕಾರ್ಯ ಅಂದರ, ಮಹಾತ್ಮರ ಒಂದು ಆಜ್ಞಾಪಾಲ-ನಾನೇ ಅಂತ ತಿಳಕೊಂಡೀನಿ. "

"ಹಾಂಗಾದರ ನನ್ನ ವಿನಂತೀ ಕೇಳಿ ಮದಿವೀ ಮಾಡಿಕೊಳ್ಳಲಿಕ್ಕೂ ಸಿದ್ಧನಾಗಿ ಬಿಡು ! ವಿಧಾಯಕ ಕಾರ್ಯಕರ್ತರು ಈಗ ಮದಿವೀ ಮಾಡಿ ಕೊಳ್ಳಬಾರದಂತ ಮಹಾತ್ಮರು ಹೇಳಿಲ್ಲ. ಇಷ್ಟೇ ಅಲ್ಲ; ಮದಿವಿಯಾಗಿ ನಿನಗ ಒಳ್ಳೆಯ ಹೆಂಡತಿ ದೊರೆತರ, ನಿನ್ನ ಈ ವಿಧಾಯಕ ಕಾರ್ಯಕ್ಕ ಇನ್ನೆರಡು ಕೈಯ ಸಹಕಾರ ಸಿಕ್ಹಾಂಗ ಆಗತೈತದ!"

"ಸರಿ ! ಆ ಮಾತು ಒಳ್ಳೆಯ ಹೆಂಡತಿ ಸಿಕ್ಕಾಗ !"

"ನಿನ್ನ ಅಪೇಕ್ಷೆಗಿಂತ ಹೆಚ್ಚಿನ ಒಳ್ಳೆಯ ಹೆಂಡತಿ ಸಿಕ್ಕರ !"

"ಬಹಳ ಸಂತೋಷದ ಮಾತು ! ನನ್ನ ಚಿಕ್ಕಮ್ಮನ ಅಪೇಕ್ಷೆಯಂತೂ ಸರಿಯೇ ರತ್ನಾಕರಾ ! ಇನ್ನೊಂದು ಕಾರಣದ ಸಲುವಾಗಿಯೂ ನಾನು ಮದುವೀಮಾಡಿಕೊಂಡು ಬಿಡುವುದು ಒಳ್ಳೆಯದಂತ ನನಗ ಆಗಾಗ ಅನಿಸ-ತಿರತೈತದ. ನಾ ಇಲ್ಲೆ ಹಳ್ಳಿಯೊಳಗ ಇದ್ದುಕೊಂಡು ಕೆಲಸಮಾಡಬೇಕಾಗೇ-ದಲಾ ! ಕೆಲಸದ ಮೂಲಕ ಹೆಂಗಸರು–ಗಂಡಸರು–ಎಲ್ಲರ ಜೊತೆಗೂ ನನ್ನ ಸಂಬಂಧ ಬರತೈತದ. ಎಲ್ಲರೂ ಪ್ರೀತಿ-ಆದರಗಳಿಂದ ನನ್ನ ನೋಡತಾರ. ಆದರ, ಹೆಂಗಸರು ನನ್ನ ವಿಷಯವಾಗಿ ತೋರಿಸುವ ಪ್ರೀತಿ-ಆದರದ ಸಂದರ್ಭ ಗಳನ್ನ, ಜನರು ಅಪಾರ್ಥಮಾಡುವ ಸಂಭವವೂ ಹೆಚ್ಚು. ಅದರೊಳಗ ನಾನು ಮದುವೆಯಾಗದೆ ಇರುವುದಂದರ, ಆ ಅಪಾರ್ಥಕ್ಕೊಂದು ದೊಡ್ಡ ಪ್ರಮಾಣ ಅನಿಸಬಹುದು. ಇಷ್ಟೇ ಅಲ್ಲದೆ, ನನ್ನ ವಿಷಯಕವಾದ ಜನರ ಆದರ-ವಿಶ್ವಾಸಗಳನ್ನ ಕಂಡು ಕರುಬುವ ದಾಯಾದಿಗಳೂ ಈ ಊರೊಳಗ ಇದ್ದಾರ. ಅವರ ಸ್ವಾರ್ಥಸಾಧನೆಯ ಹೊಂಚುಗಳಿಗೆ ನಾನೊಂದು ಕೊಡಲಿ

ಇದ್ದಾಂಗ-ಅಂತ ತಿಳಕೊಂಡಾರ. ನನ್ನ ಹೆಸರಿಗೆ ಹೊಲಸು ಹಚ್ಚಬೇಕಂಬೂ ಹಂಚಿಕೀ ಒಳಗಿಂದೊಳಗs ಹಾಕೇಹಾಕತಿರತಾರ; ಆದರ ಅವರ ಹಂಚಿಕಿ ಸಾಧಿಸದ್ದಾಂಗ ಆಗೇದ. ನೀ ಇಂದ ನೋಡಿದೆಲಾ: ನಿಂಗಪ್ಪನ ಮಗಳು ಕಾಶವ್ವನ ಮ್ಯಾಲ, ನಮ್ಮ ಚಿಕ್ಕಮ್ಮನ ಮಮತಿ ಮೊದಲಿಂದನೂ ಬಹಳ. ಆಗಾಗ ನಮ್ಮ ಮನಿಗೆ ಬಂದು ಚಿಕ್ಕಮ್ಮನ ಬಳಿ ಕೂತು ಮಾತು-ಕಥೆಯಾಡಿ ಹೋಗುವ ರೂಢಿ. ನಾನು ಕೂಡ ನನ್ನ ನಿಜವಾದ ತಂಗಿಯಂತೆ ಪ್ರೀತಿಯಿಂದ ಆಕಿನ್ನ ಕಾಣತಿದ್ದೆ; ಆ ಹುಡುಗಿಯೂ ಅಣ್ಣನ ವಿಶ್ವಾಸದಿಂದಲೇ ನನ ಜೊತೆಗೆ ವರ್ತಿಸತಿದ್ದಳು. ನಮ್ಮ ದಾಯಾದಿಗಳ ಮನಿಯೊಳಗ, ಇದರ ಬಗ್ಗೆ ಪಿಸುಮಾತು, ಅಣಕದ ಮಾತು ನಡೆದಿವೆಯೆಂಬುವ ವರ್ತಮಾನ ನನಗ ಗೊತ್ತಾಯಿತು. ಆಗ ನಾನು ನಿಂಗಪ್ಪನ ಮುಖಾಂತರ ಹೇಳಿ ಕಳಿಸಿದೆ. ನಿಂಗಪ್ಪನೂ ನನ್ನ ಮಾತಿನ ಅರ್ಥವನ್ನ ಸರಿಯಾಗಿ ಮಾಡಿಕೊಂಡ. ಅಂದಿನಿಂದ ಕಾಶವ್ವ ನಮ್ಮ ಮನಿಗೆ ಬರೂದನ್ನ ಬಿಟ್ಟುಬಿಟ್ಟಾಳ. ಅವಳನ್ನ ಕಾಣ-ಬೇಕಂಬೂ ಅಪೇಕ್ಷಾ ಆಯಿತಂದರ, ನಮ್ಮ ಚಿಕ್ಕಮ್ಮ ತಾನಾಗಿಯೆ ನಿಂಗಪ್ಪನ ಮನಿಗೆ ಹೋಗತಾಳ!"

"ಲೋಕದ ಕ್ಷುದ್ರದೃಷ್ಟಿ ರಂಗಣ್ಣಾ! ಸರಿ! ಕ್ಷುದ್ರದೃಷ್ಟಿ ಅಂತ ಅನ್ನೂದೂ ಕಷ್ಟs ಅದ ಅನ್ನು! ಯಾಕಂದರ, ಸದ್ಯದ ಸಮಾಜದೊಳಗ ನಿನ್ನಂಥವರು ಅಪವಾದದ ಹಾಂಗ ಇರುತ್ತಿರುವಾಗ, ಲೋಕ ಎಲ್ಲರನ್ನೂ ಸಂದೇಹದ ದೃಷ್ಟಿಯಿಂದ ನೋಡುವುದು ಸಹಜವೇ ಅದ. ಅಂತೂ ನನ್ನ ಮಾತಿಗೆ ನಿನ್ನ ಒಪ್ಪಿಗಿ ಸಿಕ್ಹಾಂಗ ಆಯ್ತು! ಇನ್ನ ಕನ್ಯಾದ ವಿಷಯಾ ಹೇಳತೀನಿ ಕೇಳು! ಧಾರವಾಡದೊಳಗ ಗೋಪಾಲರಾಯರು-ಅಂತ, ಸಬ್‌ರಜಿಸ್ಟ್ರಾರ್ ಆಫೀಸಿನ ಕಾರಕೂನರು ಒಬ್ಬರು ಇದ್ದಾರ. ಅವರ ಹಿರಿಯ ಮಗಳೇ ನಿನಗಾಗಿ ನಾನು ಆರಿಸಿದ ಕನ್ಯಾ! ಹುಡುಗಿ ಇಂಗ್ಲಿಷ್ ಕಲಿತವಳಲ್ಲ-ಅನ್ನೂ ಕಾರಣದಿಂದ, ಮಿಕ್ಕ ವರಗಳು ಯಾರೂ ಮಾಡಿಕೊಳ್ಳಲಿಕ್ಕೆ ಸಿದ್ಧರಾಗದದ್ದು, ಆ ಹುಡುಗಿಯ ಸುದೈವವೂ ಅಹುದು; ನಿನ್ನ ಸುದೈವವೂ ಅಹುದು. ಯಾಕಂದರ, ಹುಡುಗಿ ಚೆಲುವಿಯೂ ಇದ್ದಾಳ; ಸಂಪ್ರದಾಯವಂತರ ಮನಿ-ಯೊಳಗ-ಅದೂ ಶೀಲಸಂಪನ್ನವಾದ ಸಾಮಾನ್ಯ ಕುಟುಂಬದೊಳಗ-ಬೆಳೆದದ್ದ ರಿಂದ ಗುಣಶಾಲಿನಿಯೂ ಇದ್ದಾಳ. ಈ ಕಾರಣಕ್ಕಾಗಿ ನಿನ್ನದು ಸುದೈವ

ಅಂತ ಹೇಳಬೇಕಾಗತ್ತದ. ಇನ್ನ ನಿನ್ನಂಥಾ ಗಂಡ ಸಿಗೂದಂದರ ಆಕೀ ಸುದೈವಾ–ಅಂತ ಹೇಳಬೇಕಾಗತ್ತದ !"

" ಆದೆಲ್ಲಾ ಸರಿ ರತ್ನಾಕರಾ ! ಮಹಾತ್ಮರ ಬಿಡುಗಡೆ ಆಗುವ ವರೆಗೂ ಈ ವಿಚಾರ ತಡೆದು ಹಿಡಿಯೋಣ—ಅಂತ ಅನಿಸತ್ತದ !"

" ನೀನು ತಡೆದು ಹಿಡಿಯಬಹುದು; ಆದರ ಆ ಕನ್ಯೆಯ ತಾಯಿ-ತಂದೆಗಳು ಮಾತ್ರ ತಡೆದು ಹಿಡಿಯಲಿಕ್ಕೆ ಸಾಧ್ಯವೇ ಇಲ್ಲ. ಸಂಪ್ರದಾಯದ ಅಭಿಮಾನಿಗಳು. ಸಿರಿವಂತರೂ ಅಲ್ಲ. ಬೆಳೆದ ಹೆಣ್ಣುಮಗಳನ್ನ ಮನೆಯಲ್ಲಿ ಇಟ್ಟುಕೊಂಡರ, ಜನರು ಯಾವಾಗ ಎಂಥಾ ಅಪವಾದ—ನಿಂದಾ—ಹೊರಿಸ್ಯಾರೂ ಅಂಬುವ ನೇಮ ಇಲ್ಲ. ಅದಕ್ಕಾಗಿ ಆ ತಂದಿ–ತಾಯಿ, ಮಗಳ ಮದಿವಿಗಾಗಿ ಹಾತೊರಿಯಲಿಕ್ಕೆ ಹತ್ತ್ಯಾರ. ಈಗ ನೀನು ತಡೆದುಹಿಡಿಯುವ ವಿಚಾರಾ ಮಾಡಿದರ, ಅವರೇನೂ ಸುಮ್ಮಗೆ ಬಿಡುವವರಲ್ಲ. ಬೇರೆ ವರನನ್ನ ನೋಡಿ ಮದಿವೀ ಮಾಡಿ ಕೊಡುವವರೇ ! ಈಗ ನೀನು ಒಪ್ಪದೆ ಹೋದರೆ, ಆ ಹುಡಿಗಿಗೆ ನಿನ್ನಂತಹ ಅನುಕೂಲ ಸಂಬಂಧ ಕೂಡಿ ಬರಲಿಕ್ಕಿಲ್ಲ; ಮುಂದೆ ನೀನು ಮದುವೆ ಮಾಡಿಕೊಳ್ಳಲು ಸಿದ್ಧನಾದಾಗ, ಆ ಕನ್ಯೆ–ಕಾವೇರಿಯಂತಹ ಹೆಂಡತಿ ನಿನಗೆ ಸಿಗಲಿಕ್ಕಿಲ್ಲ ! ಆಯ್ತು, ಸಮಾಜದಲ್ಲಿ ಇನ್ನೆರಡು ವಿಷಮ-ದಾಂಪತ್ಯಗಳು ಹೆಚ್ಚಾಗಬಹುದು–ಇಷ್ಟೇ ! "

ರಂಗಣ್ಣ ಮೆಲುದನಿಯಲ್ಲಿ ಹೇಳಿದ :

" ಆಗಲಿ ರತ್ನಾಕರ ! ನೀನು ಆ ಹುಡುಗಿಯ ವಿಚಾರ ಬಹಳ ಮನಸ್ಸಿಗೆ ಹಚ್ಚಿಕೊಂಡ ಹಾಂಗ ಕಾಣತ್ತದ ! ಆಯ್ತು, ಏನು ಮಾಡತೀಯೋ ಮಾಡು; ನಿನಗಾಗಿ ನಾನು ನನ್ನ ಒಪ್ಪಿಗೀ ಕೊಟ್ಟುಬಿಡತೀನಿ ! "

ರತ್ನಾಕರನ ಹಿಗ್ಗು ಹೃದಯದಲ್ಲಿ ಹಿಡಿಸದೆ ಹೋಯಿತು. ಆತ ದಿಗ್ಗನೆ ಎದ್ದು ರಂಗಣ್ಣನನ್ನು ಅಪ್ಪಿಕೊಂಡು ಬಿಟ್ಟ. ಅರೆನಿಮಿಷ ತಡೆದು ಹೇಳಿದ :

" ರಂಗಣ್ಣಾ, ನಿನ್ನ ಒಪ್ಪಿಗಿ ನನ್ನನ್ನ ಆನಂದದ ಶಿಖರದ ಮ್ಯಾಲ ಕೂಡಿಸಿತು. ನನ್ನ ಸ್ವಂತ ತಂಗಿಗೆ ವರನು ಗೊತ್ತಾಗಿದ್ದರೂ ಇಷ್ಟು ಆನಂದ ನನಗ ಆಗತಿತ್ತೋ ಇಲ್ಲವೋ ! ಆಯ್ತು, ಚಿಕ್ಕಮ್ಮನಿಗೆ ಇಂದ ಹೇಳಿಬಿಡ್ತೀನಿ; ಅವರು ನಾಳೆಯ ದಿನಾನss ಸತ್ಯನಾರಾಯಣನ ಪೂಜೀ ಮಾಡಿಸತಾರ ! "

"ಆಕಿಗೆ ಈಗs ಯಾವ ಮಾತೂ ಹೇಳಬ್ಯಾಡ. ಆ ಹುಡುಗಿಯು ತಾಯಿ-ತಂದಿ ನನ್ನ ನೋಡಲಿ; ಹುಡುಗಿಯೂ ನೋಡಲಿ! ನಾನು ಅವರ ಮನಸ್ಸಿಗೆ ಒಪ್ಪಿದೆನೆಂದರೆ, ಆ ಮ್ಯಾಲ ಮುಂದಿನ ಮಾತು. ನೀನು ಸಮ್ಮತಿ-ಸಿದ್ದೀಯೆಂದ ಮ್ಯಾಲ, ನಾನು ಸ್ವತಃ ಕನ್ಯಾದ ವಿಚಾರ ಮಾಡುವ ಕಾರಣ ಇಲ್ಲವೇ ಇಲ್ಲ !"

"ಹಾಂಗಾದರ ಹೀಂಗ ಮಾಡು : ನಾಳೆಯ ದಿನಾ ಬೆಳಗಿನ ಬಸ್ಸು ಹಿಡಿದು, ನನಗ ಹುಬ್ಬಳ್ಳಿಗೆ ಹೋಗಬೇಕಾಗೇದ. ಅಲ್ಲಿ ನಾಡಿದ್ದು ಒಂದು ದಿವಸ ಇದ್ದು ಮರುದಿನವೇ ಮರಳಿ ಧಾರವಾಡಕ್ಕ ಬಂದುಬಿಡತೀನಿ. ನೀನು ಈ ಮೂರು ದಿನಗಳನ್ನು ಬಿಟ್ಟು ನಾಲ್ಕನೆಯ ದಿವಸ ಅಲ್ಲಿಗೆ ಬಂದುಬಿಡು. ನಾನು ಮೊದಲೇ ತಿಳಿಸಿ ಇಟ್ಟಿರತೀನಿ : ನೀನು ನೇರವಾಗಿ ಭುವನೇಶ್ವರೀ ಬ್ಯಾಂಕಿನ ಅಸಿಸ್ಟಂಟ್ ಮ್ಯಾನೇಜರ್ ಅನಂತರಾಯರ ಮನೆಗೆ ಟಾಂಗಾ ಹೊಡೆಯಿಸಿಬಿಡು. ನಾನು ನಿನ್ನನ್ನ ಅಲ್ಲೇ ಕಾಣತೀನಿ !"

ಒಂದು ಬಗೆಯ ಉಯ್ಯಾಲೆಯಾಡುವ ಮನದಿಂದ ರಂಗಣ್ಣ ನುಡಿದ :

"ಸರಿ ! ದೈವದ ಮನಸ್ಸಿಗೇ ಬಂದಿದ್ದರೆ ತಡೆಯುವ ಶಕ್ತಿ ನಮಗೆಲ್ಲಿ ?"

ಚಿಕ್ಕಮ್ಮ ನಡುಮನೆಯಲ್ಲಿಯೆ ನಿಂತು ಕೂಗಿ ಹೇಳಿದರು :

"ರಂಗಣ್ಣಾ, ರತ್ನಾಕರಾ, ನಿಮ್ಮ ಮಾತು ಮುಗಿದುವೋ ಇಲ್ಲೋ ! ನನ್ನ ಅಡಿಗಿ ಆಗೇದ; ಊಟಕ್ಕ ಏಳ್ರಿಪಾ ಇನ್ನ !"

"ಬಂದಿವಿ-ಬಂದಿವಿ !" ಎನ್ನುತ್ತ ಇಬ್ಬರೂ ಒಳಗೆ ಹೋದರು. ಮುದುಕಿಗೆ ಇದೆಲ್ಲ ವರ್ತಮಾನವನ್ನು ತಿಳಿಸಿ, ಅವಳಿಗಾದ ಆನಂದವನ್ನು ನೋಡಬೇಕೆಂದು ರತ್ನಾಕರನಿಗೆ ಆತುರ; ಆದರೆ ರಂಗಣ್ಣನ ಆಜ್ಞೆ ಅವನ ಆತುರಕ್ಕೆ ಒಡ್ಡನ್ನು ಹಾಕಿದ್ದಿತು.

## ೨೦ನೆಯ ಪರಿಚ್ಛೇದ

ಮುದ್ದಾಪುರದಲ್ಲಿ ರತ್ನಾಕರನು ರಂಗಣ್ಣನನ್ನು ಮದುವೆಗೆ ಒಪ್ಪಿಸುವ ಮಾತನಾಡುತ್ತಿರುವಾಗಲೆ, ಧಾರವಾಡದ ಸಾಧನಕೇರಿಯ ವೆಂಕಣ್ಣನ ಕಿರು-ಮನೆಯಲ್ಲಿ, ಆತನ ಗೆಳೆಯರ ಬಳಗವೆಲ್ಲ ಸೇರಿದ್ದಿತು. ಬೆಳಗಿನ ಎಂಟುವರೆ ಗಂಟೆಯ ಸಮಯ. ಶೀನಪ್ಪ ದತ್ತೂ ಕೂಡಿ ಗೋಪಾಲರಾಯರಲ್ಲಿಗೆ ಹೋದ

ಸಮಾಚಾರವೇನಾಯಿತೆಂಬುದನ್ನು ತಿಳಿದುಕೊಳ್ಳುವುದಕ್ಕೆಂದೇ-ಮೊದಲೇ ಗೊತ್ತುಮಾಡಿಕೊಂಡಂತೆ-ಎಲ್ಲರೂ ಬಂದಿದ್ದರು. ಈ ಮೊದಲೇ ಶೀನಪ್ಪ ತಾವು ಹೋಗಿಬಂದುದರ ವರದಿಯನ್ನೆಲ್ಲ ಒಪ್ಪಿಸಿರಬಹುದು. ವೆಂಕಣ್ಣನ ಮುಖವು ನಿರಾಶಾಭಾವದಿಂದ ಬಾಡಿಹೋಗಿದ್ದಿತು. ಮಿಕ್ಕವರ ಮುಖದ ಮೇಲೂ ಯೋಚನೆಯ ಮುದ್ರೆ ಕಾಣುತ್ತಿದ್ದಿತು. ಬಳವಂತ ಒಮ್ಮೆಲೆ ಸಿಡುಕಿನ ಧ್ವನಿಯಲ್ಲಿ ನುಡಿದ :

" ಹಾಂಗಾದರ, ಈ ದೇಶಭಕ್ತ ತನ್ನ ಚಳವಳೀ ಕೆಲಸಾ. ಬಿಟ್ಟು, ಲಗ್ನಘಟಕ-ಪುರೋಹಿತ ಆಗಿ ಮುದ್ದಾಪುರಕ್ಕ ಹೋಗ್ಯಾನ ಅಂದ್ಹಾಂಗ ಆತು !"

" ಹೋಗ್ಯಾನ ಅಂದ್ಹಾಂಗ ಆತು—ಅಂತ ಅನುಮಾನದಿಂದ ಹೇಳೂ-ದೇನದ ಇದರೊಳಗ! ಪ್ರತ್ಯಕ್ಷ ಗೋಪಾಲರಾಯರು ತಮ್ಮ ಬಾಯಿಂದನ ಹೇಳಿದರಲಾ ! ರಂಗಣ್ಣನ್ನ ಒಪ್ಪಿಸಿಕೊಂಡೇ ಬರತೀನಂತ ಸಂಪೂರ್ಣ ನಂಬಿಗೀ ಕೊಟ್ಟೇ ಹೋಗ್ಯಾನಂತ ! " ಶೀನಪ್ಪ ಆವೇಶದಿಂದಲೇ ಹೇಳಿದ.

ರಾಮಭಾವು ಕುತೂಹಲ ಧ್ವನಿಯಲ್ಲಿ ಕೇಳಿದ :

" ಏನಪಾ ವೆಂಕಣ್ಣಾ ! ನಿಮ್ಮ ಅಣ್ಣಾ ಒಪ್ಪಿಗೊಳ್ಳಬಹುದೇನು ಮದಿವೀ ಮಾಡಿಕೊಳ್ಳಲಿಕ್ಕೆ ? "

ತಗ್ಗಿದ ಧ್ವನಿಯಲ್ಲಿ ವೆಂಕಣ್ಣಾ ಹೇಳಿದ :

" ಅದನ್ನ ನಾ ಹ್ಯಾಂಗ ಹೇಳಲಿ ರಾಮಭಾವೂ ? ನಮ್ಮ ಚಿಕ್ಕಮ್ಮ ಮಾತ್ರ ಬೇಗನೆ ನೀನು ಮದಿವೀ ಮಾಡಿಕೊಂಡು ಬಿಡು—ಅಂತ ಒಂದೇ ಸವನೆ ಗಂಟೀ ಬಿದ್ದಾಳಂಬೂದು ನನಗ ಗೊತ್ತದ. ಈಗ ರತ್ನಾಕರ ಹೋಗಿ ಹೇಳಿದರ, ಒಪ್ಪಿಕೊಂಡು ಬಿಡುವ ಸಂಭವವೂ ಅದ ! "

" ಒಪ್ಪಿಕೊಳ್ಳದಽ ಏನ ಮಾಡತಾನೋ ! ಅಂವೇನು ಗಂಡಸು ಅಲ್ಲೇನು? ಎಷ್ಟು ದಿವಸ ಬಿಡತಾನ ಮದಿವಿ ? ಮತ್ತ ಈ ಕಾವೇರಿನ್ನ ಬಂದು ಕಣ್ಣಿಂದ ನೋಡಿದರಂತೂ ತೀರೇ ಹೋಯ್ತು; ಮದಿವೀ ಮಾಡಿಕೊಳ್ಳೂದಷ್ಟಽ ಯಾಕ — ತನ್ನ ವಿಧಾಯಕ ಕಾರ್ಯ ಸುದ್ಧಾ ಬಿಟ್ಟು, ಈಕೀ ಬೆನ್ನು ಹತ್ತಿ-ಕುಣದಾಡತಾನ ! ಹುಡುಗಿ ಎಂಥಾ ಹುಡುಗಿ ಏನಪಾ ! ರೋಹಿಣೀ ನಕ್ಷತ್ರ ಆಗ್ಯಾಳ ! ನೀ ಕೆಲಸಾ ತಪ್ಪಿಸಿದಿ ವೆಂಕಣ್ಣಾ ! ಆವೊತ್ತೇ ನೀನು ಒಪ್ಪಿಕೊಂಡು

ಬಿಡಬೇಕಾಗಿತ್ತು.!" ಶೀನಪ್ಪ ಹೇಳಿದ ಈ ಮಾತನ್ನು ಕೇಳಿದೊಡನೆಯೆ ಸಿಡಿಸುಡಿಯಲ್ಲಿ ಬಳವಂತ ಮಾತನಾಡಿದ :

"ಈಗ ಆದರೂ ಏನು ಆಗೇದೇಳೋ ಶೀನೂ! ಸುಮ್ಮನs ಹೇಡಿತನದ ಮಾತು ಆಡಿಕೋತs ಕೂಡಬ್ಯಾಡ. ಈ ಬಳವಂತ ಕೈತೊಳಕೊಂಡು ಬೆನ್ನು ಹತ್ತಿದರ, ಆ ಕಾವೇರೀ ಮದಿವಿ ರಂಗಣ್ಣನ ಕೂಡ ಹ್ಯಾಂಗ ಆಗತsದ ನೋಡತಿರು! ನಮ್ಮದು 'ಆಗಲಾವೇ' ಮನೆತನ ಅದ; ಗೊತ್ತದ ಇಲ್ಲೋ? "

ರಾಮಭಾವು ನಗುತ್ತ ನುಡಿದ :

"ಎಂದು ಪೇಶವಾಯಿಯಾ ಕಾಲಕ್ಕ ಬಂದಿದ್ದೀತು ನಿಮ್ಮ ಮನಿತನಕ್ಕ ಈ ಹೆಸರು! ಈ ಬ್ರಿಟಿಶ್ ಆಡಳಿತದೊಳಗ ಇವೆಲ್ಲಾ ಬರೇ ಅಡ್ಡ ಹೆಸರು ಆಗಿ ಉಳಿದಾವ ಏನಪಾ! ಹಿಂದಿನ ಕಾಲದೊಳಗೂ ರಜಪೂತರು ಶೀಖರು ಹೆಸರಿನ ಮುಂದೆ 'ಸಿಂಹ' ಅಂತ ಸೇರಿಸಿ ಹೇಳಿಕೋತಿದ್ದರು; ಇಂದೂ ಅವರು ಆ ಪದ ಸೇರಿಸಿಕೊಂಡೇ ತಮ್ಮ ಹೆಸರು ಹೇಳಿಕೋತಾರ! ಆದರ ಹಿಂದಿನ ಕಾಲದೊಳಗ ಅವರು ನಿಜವಾಗಿ ಸಿಂಹಗಳ ಹಾಂಗs ಇದ್ದರು; ಇಂದ ಅವರ ವಂಶದವರನ್ನs ಬ್ರಿಟಿಶರು ಗ್ರಾಮಸಿಂಹಗಳನ್ನ ಮಾಡಿಬಿಟ್ಟಾರ! "

ಬಳವಂತ ಕೋಪದಿಂದ ಕುದಿಯುತ್ತ ಹೇಳಿದ:

"ಈಗ ಬರೇ ಬಾಯಿಮಾತಾಡಿ ಏನು ಫಲ! ಕೈಯಿಂದ ಮಾಡಿದ ಮ್ಯಾಲ ತಿಳಿದೀತು ಬಳವಂತನ ಕೈಗುಣ! "

ದತ್ತೂ ಕೇಳಿದ :

"ಒಳ್ಳೇದು ಬಳವಂತಾ! ಈಗ ನೀನು ಏನು ಮಾಡಬೇಕಂತ ಮಾಡೀದಿ?"

"ಮೊದಲ ಪೋಲೀಸರಿಗೆ ಒಳಗಿಂದೊಳಗ ವರದೀ ಕೊಟ್ಟು, ರತ್ನಾಕರ ನನ್ನ ಮುದ್ದಾಪುರದೊಳಗs ಹಿಡಿದು, ಸೆರಿಮನಿಗೆ ಹಾಕಿಸುವ ವ್ಯವಸ್ಥಾ ಮಾಡಬೇಕು. ಹ್ಯಾಂಗೂ ನಿನ್ನೆಯ ದಿನಾನs ಹೋಗ್ಯಾನಂದ ಮ್ಯಾಲ, ಇನ್ನೂ ಒಂದೆರಡು ದಿನ ಅಲ್ಲಿಯೇ ಇರಬಹುದು ಆತ! "

ವೆಂಕಣ್ಣ ಗಾಬರಿಯಿಂದ ಹೇಳಿದ :

"ಛೇಛೇ! ಈ ಕೆಲಸಾ ಮಾತ್ರ ಮಾಡಬ್ಯಾಡ್ರಿ ನೀವು! ನಾವು ದೇಶದ್ರೋಹಿಗಳನಿಸಿಕೊಳ್ಳೂದು ಬ್ಯಾಡ! "

ದತ್ತೂ ಮಾತನಾಡಿದ ;

" ನೀ ಎಲ್ಲಾ ಬ್ಯಾಡ ಅಂತೀ ವೆಂಕಣ್ಣಾ ! ಈಗ ನಾವು ಮಾಡಬೇಕಾದ ಕೆಲಸ ಏನೂ ಉಳಿದಿಲ್ಲ. ರತ್ನಾಕರ ಮುಧ್ಯಾಪುರಕ್ಕ ಹೋದ ಸುದ್ದಿ ಪೋಲೀಸರಿಗೆ ಗೊತ್ತು ಆಗಿ ಬಿಟ್ಟsದ ! "

ಬಳವಂತ ಕುತೂಹಲದಿಂದ ಕೇಳಿದ :

" ಅದ್ಹ್ಯಾಂಗ ಗೊತ್ತಾಗೇದ ? ಮತ್ತ ಪೋಲೀಸರಿಗೆ ಗೊತ್ತು ಆಗೇ-ದಂಬೂದು ನಿನಗ ಹ್ಯಾಂಗ ಗೊತ್ತಾಯ್ತು ದತ್ತೂ ? "

ದತ್ತೂ ಹೇಳಲು ತೊಡಗಿದ :

" ಅದು ಹಿಂಗಾಯ್ತು ನೋಡು ಬಳವಂತಾ : ನಾನು ಶೀನಪ್ಪ ಕೂಡಿ ಗೋಪಾಲರಾಯರ ಮನಿಗೆ ಹೋಗಿ ಬಂದೆವಲ್ಲಾ ! ಆಗ ನಾನು ಹಾಂಗs ಮನೀ ಕಡೆಗೇ ಹೋಗಿಬಿಟ್ಟೆ. ನಮ್ಮ ಮನಿಯ ಎದುರು ಮನಿಯೊಳಗs ಪೋಲೀಸ್-ಭೀಮರಾವ್ ಪಾಟೀಲ ಅಂತಿದ್ದಾನ ಗೊತ್ತದ ಇಲ್ಲೋ ? ಅಂವ ಡ್ರೆಸ್ಸು ಹಾಕಿಕೊಂಡು ನಮ್ಮ ಮನೀ ಕಡೇನs ಬಂದ. ಎಂದಾದರೂ ಅವಕಾಶ ಸಿಕ್ಕಾಗ ಹರಟಿಗಂತ ಬಂದು ನಮ್ಮ ಮನಿಯೊಳಗ ಕೂಡತಿರತಾನ ! ಡ್ರೆಸ್ ಸಹಿತs ಬಂದದ್ದರಿಂದ ನಾ ಕೇಳಿದೆ : ' ಯಾಕರೀ ಡ್ರೆಸ್ಸು ಇಳಿಸೇ ಇಲ್ಲ ? ' ಅಂತ. ಆಗ ಭೀಮರಾವ್ ಹೇಳಿದ : ' ಇದೇ ಈಗ ಏರಸೀನಿ ರಾಯರ ! ಈ ದೇಶಭಕ್ತರು ಪೋಲೀಸರಿಗೆ ಹೆಚ್ಚಿನ ಕೆಲಸಾನs ಹಚ್ಚಲಾಕ ಹತ್ತ್ಯಾರ ! ಎಂದ ಇವರ ಹಾವಳಿ ತಗ್ಗತಯ್ತೋ ತಿಳೀದ್ಹಾಂಗ ಆಗೆಯ್ತಿ ! ಆ ದೇಶಭಕ್ತ ರತ್ನಾಕರರಾಯ, ನಿನ್ನೆ ರಾತ್ರೀನs ಎಲ್ಲಿ ಕಣ್ಣ ಮರಿ ಆಗ್ಯಾನೋ ಆಗಿಬಿಟ್ಟಾನ ! ಎಲ್ಲಿ ಅಡಗಿಕೊಂಡು ಕುಂತಾನೋ ಏನೋ ! ಇನ್ನೂ ತನಕಾ ಅವನ ಸುಳವು ಹತ್ತವೊಲ್ಲದು. ಈಗ ಮತ್ತ ಅವನ ಪತ್ತೇ ಹಚ್ಚೂ ಕೆಲಸದ ಮ್ಯಾಲ ಹೋಗಬೇಕಾಗೆಯ್ತಿ ! ' ನನಗ ಒಮ್ಮೆಲೇ ನಗೀ ಬಂತು; ನಕ್ಕು ಬಿಟ್ಟು ಕೇಳಿದೆ : ' ಅಲ್ರೀ ಇದ್ದಲ್ಲಿ ಬಿಟ್ಟು ಇಲ್ಲದಲ್ಲಿ ಹುಡುಕಾಡತs ಕೂತರ ನಿಮಗ ಸಿಗಬೇಕು ಹ್ಯಾಂಗ ರತ್ನಾಕರರಾಯ ? ಅಂವ ಈ ಊರೊಳಗರೇ ಇದ್ದಾನೇನು ? ' ನನ್ನ ಮಾತು ಕೇಳಿದ ಕೂಡಲೆ ಭೀಮರಾವ್ ಗಾಬರಿಯ ಧ್ವನಿಯೊಳಗ ಕೇಳಿದ : ' ಈ ಊರೊಳಗ ಇಲ್ಲ ಅಂತೀರಿ ರಾಯರs ರತ್ನಾಕರ ರಾಯ ? ಎಲ್ಲಿಗೆ ಹೋಗ್ಯಾನಂಬೂ ಸುದ್ದಿ ನಿಮಗೇನರೆ ತಿಳದದೇನು ? ' ದಿನದ ಹರಟಿಯೊಳಗ ಹೇಳುವ ಹಾಂಗ ನಾನು ' ಅಂವ ರಾಮದುರ್ಗ

ಸಂಸ್ಥಾನದಲ್ಲಿಯ ಹಳ್ಳಿ ಮುದ್ದಾಪುರಕ್ಕ ಇಂದ ಬೆಳಗಿನ ಮೋಟಾರಿಗೇ ಹೋಗ್ಯಾನಂತ. ಅಗದೀ ಖಾತ್ರೀ ಸುದ್ದಿ ಇದು!' ಅಂತ ಸಹಜವಾಗಿ ಹೇಳಿದೆ ಆಗ ಭೀಮರಾವ್ 'ಹೀಂಗೇನ್ರಿ? ಹಾಂಗಾದರ ಅವನ್ನ ಈ ಊರೊಳಗ ಹುಡುಕೂದಂದರ ವ್ಯರ್ಥ ಅನ್ರಿ!' ಅಂತ ಹೇಳಿದವನೇ, ಕೂಡಲೆ ನಮ್ಮ ಮನೆಯೊಳಗಿಂದ ಹೊರಟೇ ಬಿಟ್ಟ. ತಿರುಗಿ ಒಂಬತ್ತು ಗಂಟೆ ರಾತ್ರಿಯಾದಾಗ, ಸಾದಾವೇಷದೊಳಗs ನಮ್ಮ ಮನಿಗೆ ಮತ್ತೊಮ್ಮೆ ಬಂದ ಭೀಮರಾವ್. ಆಗ ಆತ 'ರಾಯರ! ನಿಮ್ಮ ಉಪಕಾರ ಬಹಳ ಆಯ್ತು! ಇಂದ ನನಗ ಮನಿಯೊಳಗs ಮಲಗಿಕೊಳ್ಳುವ ಸುಯೋಗಾ ಒದಗಿಸಿಕೊಟ್ಟಿರಿ! ಇಲ್ಲದಿದ್ದರ ಬೆಳತನಕಾ ನಿದ್ದಿ ಇಲ್ಲದ ತಿರುಗಾಡಬೇಕಾಗತಿತ್ತು!' ಅಂತ ತುಂಬಾ ಸಮಾಧಾನದ ಧ್ವನಿಯೊಳಗ ಹೇಳಿದ. ಆಗ ನಾನು 'ಅದೇನ್ರೀ ನಾ ಏನು ಉಪಕಾರ ಮಾಡೀನಿ?' ಅಂತ ಕೇಳಿದೆ. ಆಗ ಭೀಮರಾವ್ 'ಉಪಕಾರ ಅಲ್ಲದೆ ಏನು ರಾಯರ! ರತ್ನಾಕರರಾಯ ಮುದ್ದಾಪುರಕ್ಕ ಹೋಗ್ಯಾನಂಬೂ ಸುದ್ದೀ ತಿಳಿಸಿದಿರಿ. ನಾನು ನಮ್ಮ ಸಾಹೇಬರಿಗೆ ಈ ವಿಷಯಾನ ಹೇಳಿದೆ. ನಿಮ್ಮ ಹೆಸರೇನೂ ಹೇಳಿಲ್ಲ, ನೀವೇನೂ ಕಾಳಜೀ ಮಾಡಬ್ಯಾಡ್ರಿ! ಮುದ್ದಾಪುರಕ್ಕ ಹೋಗ್ಯಾನಂಬೂ ಸುದ್ದಿ ಐತೀ ಅಂತ ನಾನು ಹಾಂಗs ಹೇಳಿದೆ. ಕೂಡಲೇ ಸಾಹೇಬರು ಫೋನಿನಿಂದ ರಾಮದುರ್ಗ ಪೋಲೀಸ ಕಚೇರಿಗೆ, ಮುದ್ದಾಪುರಕ್ಕ ಬಂದಿದ್ದರ ರತ್ನಾಕರರಾಯನ್ನ ಒಮ್ಮೆಲೆ ಅರೆಸ್ಟ ಮಾಡಿ, ಧಾರವಾಡಕ್ಕ ಕಳಿಸರಿ—ಅಂತ ತಿಳಿಸೇ ಬಿಟ್ಟರು. ಅವರಿಂದ ಸುದ್ದಿ ಏನಂಬೂದು ತಿಳಿಯುವ ವರೆಗೂ ಇಂದಿನ ನಮ್ಮ ಡ್ಯೂಟಿ ತಪ್ಪಿ, ಮನಿಗೆ ಹೊಗಲಾಕ ಪರವಾನಿಗೀ ಸಿಕ್ಕಿತು!' ಅಂತ ಹೇಳಿದ."

ವೆಂಕಣ್ಣಾ ನೊಂದಮನದವನಾಗಿ ಒಮ್ಮೆಲೆ ಮಾತನಾಡಿದ:

"ನೀನು ತಪ್ಪು ಮಾಡಿದಿ ದತ್ತೂ! ಪೋಲೀಸರ ಮುಂದ ಇಂಥಾ ಸುದ್ದಿಗಳನ್ನ ಗುಟ್ಟುಕೊಟ್ಟು ಮಾತಾಡಬಾರದಾಗಿತ್ತು!"

ಬಳವಂತ ಹೇಳತೊಡಗಿದ:

"ಸುಮ್ಮನಿರು ವೆಂಕಣ್ಣಾ ನೀನು! ಆದ ಕೆಲಸೇನೋ ಅನುಕೂಲನs ಆಗೇದ. ಇಷ್ಟರೊಳಗs ರಾಮದುರ್ಗದ ಪೋಲೀಸರು, ರತ್ನಾಕರನನ್ನ ಅರೆಸ್ಟ ಮಾಡಿ ಬಿಟ್ಟಿರಬಹುದು. ಇನ್ನ ಏನ ಮಾಡತಾನೋ ಮಾಡಲಿ ಆ ಮುಗಾ!

ದತ್ತೊ, ನೀ ಸಹಜ ಮಾತು ಮಾತಾಡಿದ್ದರೂ ಭಂಗಾರದಂಥಾ ಕೆಲಸಾ ಮಾಡಿದ್ಹಾಂಗ ಆತು ! ”

ರಾಮಭಾವು ಕೇಳಿದ :

“ ಅದೆಲ್ಲಾ ಆಯ್ತುಪಾ ಬಳವಂತಾ ! ಈ ಪೋಲೀಸರು ಹೋಗಿ ರತ್ನಾಕರನನ್ನ ಅರೆಸ್ಟ್ ಮಾಡುವುದರೊಳಗ, ಅಲ್ಲಿ ರಂಗಣ್ಣಾಗ ಹೇಳುವ ಮಾತು ಎಲ್ಲಾ ಹೇಳಿ ಅಂವನ್ನ ಮದಿವಿಗೆ ಒಪ್ಪಿಸಿ ಬಿಟ್ಟಿದ್ದರ ನೀ ಏನು ಮಾಡುವವ ಇದ್ದೀಯಪಾ ! ”

ಶೀನಪ್ಪ ಹೇಳಿದ :

“ ಅಲ್ಲಿ ಪೋಲೀಸರ ಕೈಗೆ ಸಿಗದ್ಹಾಂಗ ರತ್ನಾಕರನನ್ನ ಅಡಗಿಸಿ ಇಟ್ಟರೂ ಇಡಬಹುದು. ಹೇಳಿಕೇಳಿ ಸಂಸ್ಥಾನದ ಪೋಲೀಸರು ! ಹೊಟ್ಟೆತುಂಬ ಉಣಲಿಕ್ಕೆ ಹಾಕಿದರ ಹೇಳಿದ್ಹಾಂಗ ಕೇಳುವ ಜನಾ ಅದು ! ”

ಬಳವಂತ ನಿಶ್ಚಯಸ್ವರದಲ್ಲಿ ನುಡಿದ :

“ ಪೋಲೀಸರ ಕಣ್ಣುತಪ್ಪಿಸಿ ಎಷ್ಟುದಿನ ಅಡಗಿಕೊಂಡು ಇರಲಿಕ್ಕೆ ಸಾಧ್ಯ ಅದ ರತ್ನಾಕರಗ ? ಆ ಭೀಮರಾವ್ ಹಾಂಗs ಸುಮ್ಮನೇ ಹಾರಿಕೀ ಸಂಶಯದ ಮಾತು ಹೇಳಿದ್ದರಿಂದ, ಇಲ್ಲೀ ಪೋಲೀಸರು ರಾಮದುರ್ಗದ ಪೋಲೀಸರಿಗೆ ಸಂದೇಶ ಕೊಟ್ಟು ಸುಮ್ಮನೆ ಕುಳಿತಿರಬಹುದು. ಆವರಿಗೆ ರತ್ನಾಕರ ಮುದ್ದಾಪುರದೊಳಗs ಇದ್ದಾನಂಬೂ ಖಂಡಿತದ ಸುದ್ದಿ ಗೊತ್ತಾದರ, ಇಲ್ಲಿಂದನs ಪೋಲೀಸ್ ಪಾರ್ಟಿ ಹಿಂಡುಗಟ್ಟಿ ಹೋಗಿ, ಮುದ್ದಾಪುರಕ್ಕ ಮುತ್ತಿಗೀ ಹಾಕತಾರ ! ಆಗ ರತ್ನಾಕರರಾಯ ಎಲ್ಲಿ ಇದ್ದರೂ ಪೋಲೀಸರಿಗೆ ಸಿಗಲಿಕ್ಕೇ ಬೇಕು ! ಇಷ್ಟs ಅಲ್ಲ, ರಾಜದ್ರೋಹಿ ರತ್ನಾಕರನನ್ನ ಅಡಗಿಸಿ ಇಟ್ಟ ಆರೋಪದಿಂದ, ಆ ರಂಗಣ್ಣನ್ನ ಸಹಿತ ಅರೆಸ್ಟ್ ಮಾಡಿಬಿಡಬಹುದು ಪೋಲೀಸರು ! ”

ವೆಂಕಣ್ಣ ಗಾಬರಿಯ ಧ್ವನಿಯಲ್ಲಿ ನುಡಿದ :

“ ಇರಲಿ ಬಿಡು ಇನ್ನ ! ಆದದ್ದು ಆಗಿಹೋಗೇದ ! ಇನ್ನ ಇದಕ್ಕಿಂತಾ ಹೆಚ್ಚಿಂದು ಮಾಡಿ, ದೇಶದ್ರೋಹಿಗಳ ಮಾಲಿಕಿಯೊಳಗ ನಾವು ಸೇರೂದು ಬ್ಯಾಡ ! ಬಳವಂತಾ, ಈ ಪೋಲೀಸರು ಗೀಲೀಸರು ಇವರ ಗೊಂದಲ ಇಲ್ಲದ ಹಾಂಗ, ಇನ್ನೇನಾದರೂ ಉಪಾಯ ಮಾಡಬೇಕು ನಾವು ! ”

ಬಳವಂತ ಆವೇಶದಿಂದ ನುಡಿದ :

" ನೀ ಸುಮ್ಮನೆ ಕೂತುಗೋ ವೆಂಕಣ್ಣಾ ! ಕಾವೇರಿ ನಿನಗ ಬೇಕೋ ಬ್ಯಾಡೋ ? ಬೇಕಾಗಿದ್ದರ ಬಾಯಿ ಮುಚ್ಚಿಕೊಂಡು ಸುಮ್ಮಗಿರು ! ನಾ ಮಾಡಬೇಕಾದ ಉಪಾಯಗಳನೆಲ್ಲಾ ಮಾಡತೀನಿ ! "

ವೆಂಕಣ್ಣಾ ಸುಮ್ಮಗೆ ಕುಳಿತುಕೊಂಡ. ಆಗ ದತ್ತ್ಯಾ ಕೇಳಿದ :

" ರಂಗಣ್ಣಾ ಕಾವೇರಿನ್ನ ಮಾಡಕೊಳ್ಳಲಿಕ್ಕೆ ಒಪ್ಪಿಕೊಂಡು ಬಿಟ್ಟರ, ಮುಂದ ಹ್ಯಾಂಗ ಬಳವಂತಾ ?"

" ಮುಂದ ಹ್ಯಾಂಗ ? ಹೀಂಗ ಕೇಳೂದಂದರ ತಲಿಯೊಳಗ ಮಿದುಳು ಇಲ್ಲದವರ ಕೆಲಸ ! ಹೇಳಿಕೇಳಿ ಅಗಡದತ್ತ ನೀನು ! ವರ್ಷಕ್ಕೊಂದು ಕೂಸಿನ್ನ ಭೂಮಿಗೆ ತಂದು ಇಳಸೂದಷ್ಟು ನಿನಗ ಗೊತ್ತು !"

ಬಳವಂತನ ಈ ಮಾತಿಗೆ ಕುಳಿತವರೆಲ್ಲ ನಕ್ಕುಬಿಟ್ಟರು. ವೆಂಕಣ್ಣನಿಗೂ ನಗೆಯನ್ನು ತಡೆದುಕೊಳ್ಳಲಿಕ್ಕೆ ಆಗಲಿಲ್ಲ. ಆಗ ಬಳವಂತ ಸಮಾಧಾನ. ಸ್ವರದಲ್ಲಿ ಹೇಳಲು ತೊಡಗಿದ :

" ನೋಡು ದತ್ತ್ಯಾ, ನಾ ಹೇಳುವುದಂದರ ಹೀಂಗ : ಬೆಳೆದು ನಿಂತಿರುವ ಮದುವಿಯ ಹೆಣ್ಣುಗಳಿಗೆ ಜನರು ಏನಾದರೂಆರೋಪ-ಅಪವಾದ-ಹೊಂದಿಸೇ ಇರತಾರ ! ಈ ಆರೋಪ ಅಪವಾದ, ನೂರಕ್ಕ ನೂರು ಸುಳ್ಳs ಇರತಾವs ಅಂತ ತಿಳೀ ಬ್ಯಾಡ ಮತ್ತ. ನೂರಕ್ಕ ತೊಂಬತ್ತರೊಂಬತ್ತರಷ್ಟು ನಿಜಾನೇ ಇರತಾವ! ಯಾಕೋ ಶೀನಪ್ಪಾ, ಏನಂತೀ ನೀನು ?"

" ಅನ್ನೂದೇನು ? ನೀ ಆಡುವ ಮಾತೇನೂ ಸುಳ್ಳಲ್ಲ. ವಯಸ್ಸಾದ ಹುಡಿಗಿಯರು ! ಎಷ್ಟು ದಿನಾ ಅಂತ ಮನಸ್ಸು ತಡೆದುಹಿಡಕೊಂಡು ಇದ್ದಾರು ! ಅದರೊಳಗ ಹೈಸ್ಕೂಲಿಗೆ ಕಾಲೇಜಿಗೆ ಹೋಗುವ ಹುಡುಗಿಯರದಂತೂ ಹೇಳುವ ಹಾಂಗೇ ಇಲ್ಲ. ಸಾಲೀ ಅಭ್ಯಾಸದ ಜೋಡೀನs ಅವರ ಸಂಸಾರದ ಅಭ್ಯಾಸನೂ ನಡಿದಿರತsದ ! ಎಷ್ಟು ಡೌಲಪಾ ಅವರದು ! ದಿನಕ್ಕೊಂದು ಬಣ್ಣದ ಪತ್ತಲೇನು, ತೋಳಿಲ್ಲದ ಝುಂಪsರ್ ಏನು, ಎದೀ ತಗದs ಹೊತ್ತು ಕೊಂಡಿರುವ ಸೆರಗೇನು, ಪಾತರದವರನ್ನೂ ಮೀರಿಸುವಂಥಾ ಹೆರಳಿನ ಒಯ್ಯಾರೇನು ? ಅಲ್ಲಪಾ, ಮದಿವಿಯಾಗದ ಈ ಮಿಂಡೆಯರು, ಯಾರಿಗೆ

ತೋರಿಸಬೇಕಂತ ಇಂಥಾದೆಲ್ಲಾ ಬೆಡಗು ಸುರಿಸಬೇಕು ? ಗಂಡಸರದೇನು ಬಿಡು, ಹೆಣ್ಣಿನ ಬೆಡಗಿಗೆ ಬಾಯಿಬಿಡೂದಂದರ ಅವರ ಹುಟ್ಟುಗುಣ !"

ದತ್ತೂ ನಗುತ್ತ ಹೇಳಿದ :

" ಎಲ್ಲಾ ಗಂಡಸರ ಹುಟ್ಟುಗುಣಾ ಅಲ್ಲ; ಶೀನಪ್ಪನಂಥಾ ಗಂಡಸರ ಹುಟ್ಟುಗುಣ !"

ರಾಮುಭಾವು ಹೇಳಿದ :

" ಶೀನಪ್ಪನ ಹೆಂಡತಿಯಂತಾ ಹೆಣ್ಣುs ನಿನಗೂ ಗಂಟು ಬಿದಿದ್ದರ, ನಿನ್ನದೂ ಇದೇ ಹುಟ್ಟುಗುಣಾ ಆಗುತ್ತಿತ್ತು ದತ್ತೂ ! ಅಲ್ಲದೇ ಅವತಾರದ ಅಂಕೀ ಮೀರಿಸಿದ ನಿನ್ನ ಮಕ್ಕಳ ಸಂಖ್ಯಾ, ಹೆಂಗಸರನ್ನ ಕಂಡರ ನಿನಗ ಕಣ್ಣುಮುಚ್ಚಲಿಕ್ಕೇ ಹಚ್ಚತಿದ್ದೀತು !"

ಮತ್ತೆ ಎಲ್ಲಗೂ ನಕ್ಕರು. ವೆಂಕಣ್ಣನೂ ತನ್ನ ನಿರಾಶೆಯ ಹೊರೆಯನ್ನು ಮರೆತು ನಗತೊಡಗಿದ. ಆಗ ಬಳವಂತ ಹೇಳಲು ಪ್ರಾರಂಭಿಸಿದ :

ನನ್ನ ಮಾತಿನ ಅಭಿಪ್ರಾಯ ಅಂದರ ಹೀಂಗದ ನೋಡು ರಾಮುಭಾವೂ : ಕಾವೇರಿಯೂ ಬೆಳೆದ ಹುಡುಗಿ; ಕಾರಣ ಯಾವುದೇ ಇರಲಿ, ಅವಳಿಗೆ ವರಾ ಇನ್ನೂ ಸಿಕ್ಕಿಲ್ಲ. ಇಲ್ಲದ ಅಧಿಕಪ್ರಸಂಗತನ ಮಾಡಿಕೊಂಡು ರತ್ನಾಕರ, ಕಾವೇರಿನ್ನ ರಂಗಣ್ಣಾಗ ಕೊಡಿಸಬೇಕಂತ ಲುಡುಬುಡು ನಡಿಸ್ಯಾನೆ. ಇದರ ಉಪಯೋಗವನ್ನ ನಮಗ ಪಥ್ಯಕ್ಕ ಬೀಳುವ ಹಾಂಗ ಮಾಡಿಕೊಂಡು ಬಿಟ್ಟರ ಆಯ್ತು ! ರಂಗಣ್ಣಾ ಕಾವೇರಿನ್ನ ಕಣ್ಣಿನಿಂದ ನೋಡಲಿಕ್ಕೆ ಸಹಿತ ಸಿದ್ಧನಾಗದ ಹಾಂಗ ಮಾಡಲಿಕ್ಕೆ ನಮಗ ಬರತsದೇನಪಾ! ಇಷ್ಟು ಮಾಡಿದರ ತೀರಿಹೋಯ್ತು, ರಂಗಣ್ಣನ ಕೊರಳಿಗೆ ಕಾವೇರಿಯ ಮಾಲಿ ಬಿದ್ದೇ ಬೀಳತsದ !"

ಶೀನಪ್ಪ ಹೇಳಿದ :

" ಬೀಳೂದು ಬಿಟ್ಟು ಮ್ಯಾಲ ಪದಾ ಹೇಳತsದ ! ಗೋಪಾಲರಾಯ ರಂತೂ ವೆಂಕಣ್ಣಾಗ ಕೊಡಲಿಕ್ಕೆ ಸಂಪೂರ್ಣ ಸಿದ್ಧರಿದ್ದಾರ !"

ರಾಮುಭಾವು ನಗುತ್ತ ಹೇಳಿದ :

" ಅವರು ಕೊಡಲಿಕ್ಕೆ ಸಿದ್ಧರಿದ್ದಾರ; ವೆಂಕಣ್ಣಾ ಸ್ವೀಕರಿಸಲಿಕ್ಕೆ ಸಿದ್ಧ ನಿದ್ದಾನ; ನಾವೆಲ್ಲಾ ಹೋಳಿಗೀ ಹೊಡೀಲಿಕ್ಕೆ ಸಿದ್ಧರಿದ್ದೀವಿ ! ಯಾಕೋ ವೆಂಕಣ್ಣಾ !" ವೆಂಕಣ್ಣ ಮೆಲುನಗೆ ನಕ್ಕು ಬಿಟ್ಟ. ಮಾತನೇನೂ ಆಡಲಿಲ್ಲ.

## ೨೧ನೆಯ ಪರಿಚ್ಛೇದ

ರಂಗಣ್ಣ ಮದುವೆಗೊಪ್ಪಿದ ಮಾತನ್ನು ಚಿಕ್ಕಮ್ಮನಿಗೆ ಹೇಳದಿರಲು ರತ್ನಾಕರನಿಗೆ ಸಾಧ್ಯವಾಗಲಿಲ್ಲ. ಮಧ್ಯಾಹ್ನ ಊಟಕ್ಕೆ ಕುಳಿತಾಗ, ಹೇಳಿಯೆ ಬಿಟ್ಟ. ಹೆಚ್ಚಿನ ವಿಷಯವನ್ನೇನೂ ಹೇಳದೆ ಹೋದರೂ, ರಂಗಣ್ಣ ಕೂಡಲೆ ಮದುವೆ ಮಾಡಿಕೊಳ್ಳಲು ಒಪ್ಪಿರುವನೆಂದೂ ತಾನವನಿಗೆ ಯೋಗ್ಯ ಕನ್ಯೆ-ಯನ್ನು ಹುಡುಕುವೆನೆಂದೂ ಉತ್ಸಾಹದಿಂದ ತಿಳುಹಿದ. ರಂಗಣ್ಣ ಮಾತ-ನೇನೂ ಆಡದೆ, ಮೆಲುನಗೆ ನಗುತ್ತ ಊಟ ನಡೆಯಿಸಿದ್ದ. ಚಿಕ್ಕಮ್ಮನ ಸಂತೋಷ ಹೊಟ್ಟೆಯಲ್ಲಿ ಹಿಡಿಸದೆ ಹೋಯಿತು. ಕೂಡಲೆ ಕೈ ತೊಳೆದು ಕೊಂಡು, ದೇವರ ಮುಂದೆ ಎರಡು ತುಪ್ಪದ ದೀವಿಗೆಗಳನ್ನು ಬೆಳಗಿಸಿದರು. ಇಬ್ಬರನ್ನೂ ಸ್ವಲ್ಪ ಕುಳಿತಿರಲು ಹೇಳಿ, ಅವಸರವಸರವಾಗಿ ಸೇವಿಗೆಯ ಪಾಯಸಮಾಡಿ ತೆಗೆದುಕೊಂಡು ಬಂದರು. ಬೆಣ್ಣೆಕಾಯಿಸಿದ ತಿಳಿದುಪ್ಪ ವನ್ನು ಸುರಿದದ್ದೇ ಸುರಿದದ್ದು. ಎಳ್ಳು ಹಚ್ಚಿ ಮಾಡಿದ ಸಜ್ಜೆಯ ರೊಟ್ಟಿಗೆ ಅಂದೆಯೆ ಕಡೆದ ಬೆಣ್ಣೆಯನ್ನು ಒತ್ತಾಯದಿಂದ ಬಡಿಸಿದ್ದೇ ಬಡಿಸಿದ್ದು ಕಡೆಯ ಅನ್ನಕ್ಕೆ ಬಡಿಸಿದ ಕೆನೆಮೊಸರಂತೂ ರಾಜಭೋಗ್ಯವಾದುದು. ರತ್ನಾಕರ ಇಷ್ಟೊಂದು ಊಟವನ್ನು ಎಂದೂ ಮಾಡಿರಲಿಲ್ಲ ಸಮೀಪದಲ್ಲಿ. ಊಟದೊಂದಿಗೆ ದೊರೆಯುವ ತಾಯಿ ಪ್ರೀತಿಯನ್ನೂ ಅನುಭವಿಸಿರಲಿಲ್ಲ ಇತ್ತೀಚೆಗೆ.

ಮೊದಲಿನೆರಡು ರಾತ್ರಿ ನಿದ್ದೆಯಿಲ್ಲದುದರಿಂದ, ಹಗಲೆಲ್ಲವನ್ನೂ ರತ್ನಾಕರ ನಿದ್ದೆಯಲ್ಲಿಯೆ ಕಳೆದ. ಸಂಜೆಯ ಕಡೆಗೆ ಎದ್ದು ಮುಖ ತೊಳೆದು ಕೊಂಡು, ಅಂದು ಬಂದಿದ್ದ 'ಜ್ಞಾನಪ್ರಕಾಶ ದೈನಿಕ'ವನ್ನು ಕೈಯಲ್ಲಿ ತೆಗೆದು ಕೊಂಡು ನೋಡಿದ. ಮೊದಲನೆಯ ಪುಟದಲ್ಲಿಯ ದಪ್ಪಗಿನ ಅಕ್ಷರದ ತಲೆ-ಬರೆಹ ಅವನಿಗೆ ಹೇಳಿತು :

**"ಧಾರವಾಡದ ಸ್ವರಾಜ್ಯ ಭವನಕ್ಕೆ ಪೋಲೀಸರ ಕೀಲಿ ಬಿತ್ತು!"**

"ಭವನದಲ್ಲಿದ್ದವರನ್ನೆಲ್ಲ ಪೋಲೀಸರು ಸೆರೆಹಿಡಿದರು!"

ರತ್ನಾಕರ ದಡದಡಿಸುವ ಎದೆಯಿಂದ, ಕೆಳಗೆ ಸಣ್ಣ ಅಕ್ಷರದಲ್ಲಿ ಬರೆದ ವಿಶೇಷ ಸುದ್ದಿಗಾರನ ಸುದ್ದಿಯನ್ನು ಓದಲು ತೊಡಗಿದ :

" ಧಾರವಾಡದಲ್ಲಿಯೂ ಪೋಲೀಸರ ದಬ್ಬಾಳಿಕೆ ಪ್ರಾರಂಭವಾಗಿದೆ. ಕರ್ನಾಟಕ ಕಾಂಗ್ರೆಸ್ ಕಾರ್ಯಾಲಯದ ಎಲ್ಲ ಅಧಿಕಾರಿವರ್ಗವನ್ನೂ ಬಂಧಿಸಿರುವರಲ್ಲದೆ, ಇಲ್ಲಿಯ 'ಸ್ವರಾಜ್ಯ ಭವನ' ಎಂಬ ಸ್ವಯಂ ಸೇವಕರ ಸಂಸ್ಥೆಯ ಮೇಲೆ ಮುತ್ತಿಗೆ ಹಾಕಿ, ಅಲ್ಲಿಯ ಎಲ್ಲ ಕಾರ್ಯಕರ್ತರನ್ನೂ ಸೆರೆಹಿಡಿದಿದ್ದಾರೆ. ಆದರೆ ಮುಖ್ಯಕಾರ್ಯಕರ್ತರಾದ ಶ್ರೀ. ರತ್ನಾಕರ ನಾಯಕ ಅವರು, ಪೋಲೀಸರ ಕಣ್ಣಿಗೆ ಮಂಕುಬೂದಿ ಹಚ್ಚಿ ಎಲ್ಲಿಯೋ ಕಣ್ಮರೆಯಾಗಿದ್ದಾರೆ. ಅವರನ್ನು ಹುಡುಕಿ ಹಿಡಿಯುವ ಪ್ರಯತ್ನ ರಭಸದಿಂದ ನಡೆದಿದೆ. ಎಲ್ಲ ಕಡೆಯ ಪೋಲೀಸರಿಗೂ ಇವರ ವಿಷಯದಲ್ಲಿ ಎಚ್ಚರಿಕೆ ಕೊಡಲಾಗಿದೆ. ಇದರಿಂದ ಧಾರವಾಡದ ವಾತಾವರಣವೆಲ್ಲ ಪ್ರಕ್ಷುಬ್ಧ-ಗೊಂಡಿದೆ. ರೇಗಿದ ಜನರು ಯಾವಾಗ ಏನು ಮಾಡಬಹುದೆಂಬುದರ ನಿಯಮವೇ ಇಲ್ಲದಂತಾಗಿದೆ. ಕಲೆಕ್ಟರರು ಗಾಬರಿಗೊಂಡು, ನಗರದ ಸಂರ-ಕ್ಷಣೆಗಾಗಿ ಹೆಚ್ಚಿನ ಪೋಲೀಸ್ ಪಡೆಯನ್ನು ಬೇರೆ ಕಡೆಯಿಂದ ಕರೆಯಿಸಿ ಕೊಳ್ಳಲಿದ್ದಾರೆ !"

ರತ್ನಾಕರ ತಾನು ಓದಿ, ರಂಗಣ್ಣನ ಕೈಯಲ್ಲಿ ಪತ್ರಿಕೆಯನ್ನು ಕೊಟ್ಟು ಹೇಳಿದನು :

" ನೋಡು ರಂಗಣ್ಣಾ, ಧಾರವಾಡದ ವೀರವರ್ತಮಾನ ! ಓದಿದವರೆಲ್ಲ ಧಾರವಾಡದ ನಾಳೆಯ ಸುದ್ದಿಯೇನೆಂದು ತಿಳಿದುಕೊಳ್ಳಲು ಆತುರರಾಗಿಯೆ ಕುಳಿತುಕೊಂಡಿರಬೇಕು ! ವರ್ತಮಾನಪತ್ರದ ಮಾರಾಟಗಾರರೆಲ್ಲ, ನಿತ್ಯ-ಕ್ಕಿಂತ ಇಮ್ಮಡಿ ಸಂಖ್ಯೆಯ ಪ್ರತಿಗಳನ್ನು ಕಳುಹಲು, ಈಗಾಗಲೆ ತಂತಿಯಿಂದ ಬೇಡಿಕೆ ಕಳುಹಿರಬಹುದು. "

ರಂಗಣ್ಣ ಅದನ್ನೆಲ್ಲ ಓದಿನೋಡಿದ. ಕುತೂಹಲಧ್ವನಿಯಲ್ಲಿಯೆ ಕೇಳಿದ :

" ಸ್ವರಾಜ್ಯಭವನಕ್ಕ ಕೀಲಿಬಿದ್ದ ಮ್ಯಾಲ, ನೀನು ಇನ್ನ ಧಾರವಾಡ ದೊಳಗ ಇರುವವ ಎಲ್ಲಿ ? ಪೋಲೀಸರು ಎಲ್ಲಾ ಕಡೆಗೂ ನಿನಗಾಗಿ ತಿರುಗ-ತಿರಬಹುದು. ಅದಕ್ಕಿನ್ನ ಉಪಾಯ ಏನು ? ಧಾರವಾಡದ ಜನರೆಲ್ಲಾ ಪ್ರಕ್ಷುಬ್ಧರಾಗಿದ್ದು ಯಾವಾಗ ಏನು ಮಾಡಬಹುದಂಬೂ ನಿಯಮ ಇಲ್ಲ-ಅಂತ ಬರದಾರ; ಇಂಥಾ ಪ್ರಕ್ಷುಬ್ಧ ಪರಿಸ್ಥಿತಿಯೊಳಗ, ನೀನು ಹೋಗಿಯಾದರೂ

ಏನು ಮಾಡುವವ ಇದ್ದೀ ? ಅಂತೂ ನೀನು ಪೋಲೀಸರ ಕೈಗೆ ಸಿಗುವುದು ಖಂಡಿತ !"

ರತ್ನಾಕರ ಮೆಲುನಗೆ ನಗುತ್ತ ಹೇಳಿದ :

"ಈ ಸುದ್ದಿಯೊಳಗ ಅನಿರೀಕ್ಷಿತ ಸುದ್ದಿ ಯಾವುದೂ ಇಲ್ಲ ರಂಗಣ್ಣಾ! ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳನ್ನ, ಸ್ವರಾಜ್ಯಭವನದ ಎಲ್ಲಾ ಕೆಲಸಗಾರರನ್ನ ಪೋಲೀಸರು ಸೆರೆಹಿಡಿಯುವವರು ಇದ್ದಾರಂಬೂದು ಮೊದಲsಗೊತ್ತಿತ್ತು. ಅದರಂತೆ ಆಗಿರಬಹುದು. ಆದರ 'ಧಾರವಾಡದ ಜನತಾ ಎಲ್ಲಾ ಪ್ರಕ್ಷುಬ್ಧ ಆಗೇದ' ಅಂತಿರುವ ಮಾತು ಮಾತ್ರ ಸುದ್ದಿಗಾರನ ಕೈಚಳಕ. ಧಾರವಾಡದ ಜನರು ಭಾರತದ ಮಿಕ್ಕ ಜನಸಾಮಾನ್ಯರಿಗಿಂತ ಬೇರೆಯೇನೂ ಇಲ್ಲ. ಭಾರತದ ತಾರಕಪುರುಷ ಮಹಾತ್ಮರನ್ನ ಸೆರೆಹಿಡಿದ ಸುದ್ದಿ ತಿಳಿದರೂ ಹಿಮಾಲಯದಷ್ಟು ತಣ್ಣಗಾಗಿ ಇದ್ದ ಧಾರವಾಡದ ಜನತೆ, ಕರ್ನಾಟಕ ಕಾಂಗ್ರೆಸ್ ಕಾರ್ಯಾಲಯದ ನಾಲ್ಕು ಜನ ಸೆರೆಮನೆಗೆ ಹೋದ ಮಾತ್ರಕ್ಕೆ ಬಿಸಿಯಾಗುವುದೇನೂ ಸಾಧ್ಯ ಇಲ್ಲ. ನಮ್ಮ ಜನರ ಮನಃಸ್ಥಿತಿಯನ್ನ ನಾನು ಚೆನ್ನಾಗಿ ಅಭ್ಯಾಸ ಮಾಡೀನಿ! ನಾಲ್ಕು ಜನ ಬಿಸಿರಕ್ತದ ವಿದ್ಯಾರ್ಥಿಗಳು ಬಾಯಿಗೆ ಬಂದಂತೆ ಒದರಾಡುತ್ತಿರಬಹುದು—ಇಷ್ಟೆ! ಮಿಕ್ಕವರ ದೈನಂದಿನ ಕಾರ್ಯಕ್ರಮದಲ್ಲಿ ಯಾವ ಬದಲಾವಣೆಯೂ ಆಗಲಾರದು. ಇಟಲಿಯ ಇತಿಹಾಸದಲ್ಲಿ ನೀರೋ ಒಬ್ಬನ ನಿಶ್ಚಿಂತ ಸ್ವಭಾವವನ್ನ, ಅತ್ಯಾಶ್ಚರ್ಯಕರ ಎಂಬ ಹಾಗೆ ಬಣ್ಣಿಸಿ ಬರದಾರ; ಆದರ ನಮ್ಮ ಭಾರತದ ತುಂಬ ನೋಡಿದಲ್ಲೆಲ್ಲಾ ನೀರೋನ ಅವತಾರವೇ ಆದ್ಹಾಂಗ ಕಂಡುಬರತsದ! ಈ ಎಲ್ಲಾ ವಿಷಯದ ವಿಚಾರ ಮಾಡಿಯೇ ನಾನು ಇಲ್ಲಿಗೆ ಹೊರಟು ಬಂದೀನಿ; ರಾಜಕೀಯ ಕಾರ್ಯ ನಡೆಯುವಂತೆ ನಡೆದೇ ನಡೀತsದ; ನಾನು ಪೋಲೀಸರ ವಶ ಆಗುವುದರೊಳಗಾಗಿ, ಇದೊಂದು ಸಮಾಜಿಕ ಕಾರ್ಯ ಮಾಡಿಬಿಡಬೇಕಂತ ನನ್ನ ಮನದ ಬಯಕಿ! ಈಗ ಇದೊಂದು ಕೆಲಸ ನನ್ನಿಂದ ಆಗಿಬಿಟ್ಟರ, ಆ ಹೆಣ್ಣಿನ ತಂದೆ-ತಾಯಿಗಳ ಗೋಳು ತಪ್ಪತsದ; ಇಲ್ಲಿ ನಿಮ್ಮ ಚಿಕ್ಕಮ್ಮನ ಹೃದಯದ ಕಳವಳ ಕಡಿಮಿ ಆಗತದ; ನಿನಗ ಯೋಗ್ಯ ಜೊತೆಗಾರ್ತಿ ಸಿಕ್ಹಾಂಗ ಆಗತsದ!"

ರಂಗಣ್ಣ ಮಾತನಾಡಿದ :

" ಇದೆಲ್ಲಾ ಸರಿಯಪಾ ! ಈಗ ನೀನು ತಿರುಗಿ ಧಾರವಾಡಕ್ಕ ತಲ್ಪೂದು ಸಾಧ್ಯ ಆದ ಏನು ? ನಿನ್ನ ಹುಡುಕತಾನೇ ಇರುವ ಪೋಲೀಸರ ಕಣ್ಣು ತಪ್ಪಿಸಿ ಪಾರಾಗತೀ ಹ್ಯಾಂಗ ? "

" ಅದನ್ನ ವಿಚಾರ ಮಾಡೂಣಂತ–ದೇವರಿದ್ದಾನ ! ಪೋಲೀಸರ ಕಣ್ಣು ತಪ್ಪಿಸಿಯೆ ಇಲ್ಲಿಯ ವರಗೆ ಬಂದೆನೋ ಇಲ್ಲವೋ ? ಇಲ್ಲಿಗೆ ಬರಬೇಕಾದರ, ಸೂಟು-ಬೂಟಿನ ಸಾಹೇಬ್ ಆಗಿಬಂದೆ. ತಿರುಗಿ ಹೋಗಬೇಕಾದರ ಇನ್ನೇ-ನರೇ ನಾಟಕಾ ಮಾಡೂಣಂತ. ಆದರ, ಬೆಳಗು ಹರಿಯುವುದರೊಳಗ ನಾನು ರಾಮದುರ್ಗಕ್ಕ ತಲ್ಪಬೇಕು—ಹೀಂಗ ವ್ಯವಸ್ಥಾ ಮಾಡು· ನಾನು ನಾಳೆಯ ಸಂಜೆಗೆ ಹುಬ್ಬಳ್ಳಿಗೆ ಹೋಗಲೇ ಬೇಕಾಗೇದ. ಅಲ್ಲಿ ಏನು ಮಾಡ-ಬೇಕಾಗೇದಂಬೂದನ್ನ ನಿನಗ ಮೊದಲೇ ತಿಳಿಸೀನಿ ! ಇನ್ನ ನನ್ನ ಪ್ರಯತ್ನ ಮೀರಿ, ಪೋಲೀಸರ ಕೈಗೆ ನಾನು ಸಿಕ್ಕಿಬಿದ್ದರೂ, ನೀನು ಮಾತ್ರ ಮದಿವೀ ಮಾಡಿಕೊಳ್ಳಲಿಕ್ಕೇ ಬೇಕು. ರಾಮದುರ್ಗಕ್ಕ ಹೋದಮ್ಯಾಲ, ಅದರ ವ್ಯವಸ್ಥೆ ಯನ್ನೂ ನಾನು ಮೊದಲೇ ಮಾಡಿಬಿಡಬೇಕಂತ ಮಾಡೀನಿ. ದತ್ತೋಬಾ ಡ್ರಾಯ್ವರನ ಮ್ಯಾಲ ನಿನ್ನ ವಿಶ್ವಾಸ ಸಂಪೂರ್ಣ ಅದ ಹೌದಲ್ಲೋ ? "

ನಸುವೇಳೆ ಸುಮ್ಮಗೆ ಕುಳಿತು, ಯೋಚನೆಯ ಧ್ವನಿಯಲ್ಲಿಯೆ ರಂಗಣ್ಣ ಹೇಳಿದ :

" ಅಂವ ಅವಿಶ್ವಾಸದ ಮನುಷ್ಯ ಅಂತ ನನಗ ಎಂದೂ ಕಂಡುಬಂದಿಲ್ಲ, ರತ್ನಾಕರ ! ನಿನ್ನೆಯ ದಿನವೇ ಆತ ನಮ್ಮ ವಿಷಯದಲ್ಲಿ ನಡೆದುಕೊಂಡ ರೀತಿಯನ್ನು ನೋಡಿದೆಯೋ ಇಲ್ಲವೋ ? ಪೋಲೀಸರೆಲ್ಲಾ ಊಟಕ್ಕ ಕುಳಿತುಕೊಂಡಾಗ, ಆತ ಒಬ್ಬನೇ ನನಗ ಭೆಟ್ಟಿಯಾಗಿ ಹೇಳಿದ : ' ರಾಯರ ! ಇವರನ್ನ ಧಾರವಾಡದಿಂದ ನನ್ನ ಮೋಟಾರಿನೊಳಗಿಂದನ ಕರಕೊಂಡು ಬಂದಿದ್ದೆ. ಶಂಕರಣ್ಣ ನನಗ, ಇವರು ಹೊರಟುಹೋದ ಮ್ಯಾಲ ಹೇಳಿದ: ರತ್ನಾಕರರಾಯರು ಇವರ–ಅಂತ! ಇಲ್ಲದಿದ್ದರ ಏನ್ರಿ, ಮೋಟರು ಇಲ್ಲಿಗೇ ಹೊಡೆದು ರಾಯರನ್ನ ಮುಟ್ಟಿಸಿ ಹೋಗತಿದ್ದೆ ! ' ಅಂತ. ಬಹಳ ಒಳ್ಳೆಯ ಮನುಷ್ಯ ಅಂವ. ಅತ್ತ ಪೋಲೀಸರ ವಿಶ್ವಾಸನೂ ಕಾಯ್ದು-ಕೊಂಡಾನ. ಅದರ ಲಾಭ ನಮಗ ಸಿಗೂಹಾಂಗ, ಗುಟ್ಟಿನ ಸಂಗತಿಗಳನ್ನೆಲ್ಲಾ ತಿಳಿಸತಿರತಾನ ! "

ರತ್ನಾಕರ ಸಮಾಧಾನದ ಸ್ವರದಲ್ಲಿ ಹೇಳಿದ:

"ಸರಿ ಬಿಡು, ಒಳ್ಳೇದಾಯ್ತು. ನೀನು ಅವನಿಗೆ ಸ್ವಲ್ಪ ಹೇಳಿಬಿಡು. ನನಗೆ ಅವನಿಂದ ನನ್ನ ಕೆಲಸದೊಳಗ ಸಹಾಯ ಸಿಕ್ಕೀತು!"

"ಆಯ್ತು. ನಾನೂ ನಿನ್ನ ಜೊತೆಗೆ ರಾಮದುರ್ಗದ ವರೆಗೂ ಬರತೀನಿ! ಈಗ ಹಾಗೆಯೇ ಸ್ವಲ್ಪ ಸುತ್ತಾಡಿಕೊಂಡು ಬರೋಣವೆ?"

"ಅಹುದಪ್ಪಾ, ಸುತ್ತಾಡಿಕೊಂಡು ಬರಲೇ ಬೇಕು! ಹೊಟ್ಟೆಯನ್ನ ಹಗುರು ಮಾಡಿಕೊಳ್ಳದೆ ಹೋದರೆ, ಸಂಜೆಯೂಟದ ಕಾಲದಲ್ಲಿ ಚಿಕ್ಕಮ್ಮನ ಕೋಪಕ್ಕೆ ಗುರಿಯಾಗಬೇಕಾದೀತು!"

ಇಬ್ಬರೂ ಬಟ್ಟೆ-ಬರೆ ಸರಿಪಡಿಸಿಕೊಂಡು ಮನೆಯಿಂದ ಹೊರಬಿದ್ದರು. ಅಗಸೆಯ ಹತ್ತಿರದ ಬೀದಿಯ ಮನೆಯೊಂದರ ಮುಂದೆ, ಗಂಟೆಯ ಕಾಯ-ಕದ ಅಯ್ಯನವರೊಬ್ಬರು ನಿಂತುಕೊಂಡು, ಎರಡೂ ಕೈಗಳಿಂದ ಗಂಟೆಗಳನ್ನು ಬಾರಿಸುತ್ತ 'ಶ್ರೀಶಿವಾ, ಶಂಭುಲಿಂಗಾ! ಕೂಡಲಸಂಗಮನಾಥಾ!' ಎಂದು ಗಂಟೆಯ ನಾದದಲ್ಲಿ ದನಿಯನ್ನು ಬೆರಸಿ ಕೂಗುತ್ತ, ಭಿಕ್ಷೆಬೇಡುತ್ತಿದ್ದರು. ದೂರದಿಂದಲೇ ರತ್ನಾಕರನು ಅವರನ್ನು ಕುತೂಹಲದಿಂದ ನೋಡಲು ತೊಡ-ಗಿದ. ಅಯ್ಯನವರ ಕಾವಿಯ ಉದ್ದಂಗಿ, ನಡುವಿಗೆ ಕಟ್ಟಿದ ಪಟ್ಟೆಯ ನಡುವೆ ಇದ್ದ ನಂದಿಯ ಮುಖ, ತಲೆಗೆ ಸುತ್ತಿದ ಕಾವಿಯ ಮುಂಡಾಸ, ಮುಖದ ತುಂಬ ಹಚ್ಚಿದ ವಿಭೂತಿ, ಕೊರಳಲ್ಲಿಯ ರುದ್ರಾಕ್ಷ ಸರಗಳು, ಕಿವಿಯಲ್ಲಿಯ ನಾಗಮುರುವು–ಇವೆಲ್ಲವುಗಳನ್ನೂ ರತ್ನಾಕರ ಕುತೂಹಲದೃಷ್ಟಿಯಿಂದ ನೋಡಲು ತೊಡಗಿದ ರಂಗಣ್ಣನಾಡಿದ ಮಾತುಗಳ ಕಡೆಗೆ ಆತನ ಲಕ್ಷ್ಯಕೂಡ ಇರಲಿಲ್ಲ. ಆಗ ರಂಗಣ್ಣ: "ಏನು ನೋಡುತ್ತಿದ್ದೀ ರತ್ನಾಕರ? ಗಂಟೆಯ ಅಯ್ಯನವರನ್ನ ನೀನು ಎಂದೂ ನೋಡಿಲ್ಲೇನು?" ಎಂದು ಕೇಳಿದ. ಆಗ ರತ್ನಾಕರನಿಗೆ ಅರಿವು ಉಂಟಾದಂತಾಗಿ ತಟ್ಟನೆ ಹೇಳಿದ:

"ಗಂಟೆಯ ಅಯ್ಯನವರನ್ನ ಬೇಕಾದಷ್ಟು ಜನರನ್ನ ನೋಡಿದ್ದೇನೆ. ಆದರೆ ಇದಕ್ಕಿಂತಾ ಮೊದಲು, ಎಂದೂ ಅವರು ನನ್ನ ಮನಸ್ಸು ಹಿಡಿದು ನಿಲ್ಲಿಸಿರಲಿಲ್ಲ. ಅದಕ್ಕೇ ಅವರನ್ನ ನಾನು ಎಂದೂ ನೋಡಿರಲಿಲ್ಲ. ಇವರು ಮುಖಕ್ಕ ಹಚ್ಚಿಕೊಂಡಿರುವ ದಟ್ಟವಾದ ವಿಭೂತೀ ನೋಡಿದಿ ಏನು? ಆ

ವಿಭೂತೀ ಲೇಪನದೊಳಗ, ಈ ಅಯ್ಯನವರ ಮುಖದ ಗುರುತೇ ಸಿಗೂದಿಲ್ಲ ನೋಡು ! ”

ರಂಗಣ್ಣ ವಿಷಯ ತಿಳಿದ ಮೆಲುನಗೆಯೊಂದಿಗೆ ಹೇಳಿದ :

“ ಸರಿಸರಿ ! ನೀ ಇವರನ್ನ ಇಷ್ಟು ಲಕ್ಷ್ಯಕೊಟ್ಟು ಯಾಕ ನೋಡತಾ ಇದ್ದೀಯೆಂಬೂದು ಈಗ ತಿಳಿದ್ಹಾಂಗ ಆತು! ನಾಳೆ ಆಡಬೇಕಾಗಿರುವ ನಾಟಕಕ್ಕ ತಕ್ಕ ವೇಷ ಸಿಕ್ಕಿತಂತ ನಿನಗ ಸಮಾಧಾನ ಆಗಿರಬಹುದು ಅಲ್ಲವೆ? ಈ ವಿಭೂತಿಯ ಲೇಪನ, ಪೋಲೀಸರ ಕಣ್ಣಿಗೆ ಮಂಕುಬೂದೀ ಚೆಲ್ಲಲಿಕ್ಕೆ ಅಡ್ಡಿಯೇನೂ ಇಲ್ಲ ! ”

ರತ್ನಾಕರ ಗಟ್ಟಿಯಾಗಿ ನಕ್ಕು, ರಂಗಣ್ಣನ ಬೆನ್ನನ್ನು ತಟ್ಟಿದ. ದಾಟಿ ಮುಂದೆ ಹೋದರೂ, ರತ್ನಾಕರ ಹೊರಳಿ ಹೊರಳಿ ಅಯ್ಯನವರನ್ನು ನೋಡು-ತ್ತಲೇ ಇದ್ದ. ಅವರು ಬಾರಿಸುತ್ತಲಿದ್ದ ಜೋಡುಗಂಟೆಗಳ ಸಮ್ಮಿಶ್ರ ನಿನಾದವು, ಆ ಸಂಜೆಯ ತಂಪುಹೊತ್ತಿನಲ್ಲಿ ಸವಿಯಾಗಿ ಕೇಳುತ್ತಲಿದ್ದಿತು.

## ೨೨ನೆಯ ಪರಿಚ್ಛೇದ

ಬೆಳಗಿನ ಏಳುವರೆ ಗಂಟೆಯಾಗಿದೆ. ರಾಮದುರ್ಗದಲ್ಲಿ, ಧಾರವಾಡದ ಕಡೆಗೆ ಎಂಟುಗಂಟೆಗೆ ಹೊರಡಲಿರುವ ಸರ್ವಿಸ್ ಬಸ್ಸು, ತನ್ನ ನಿತ್ಯದಸ್ಥಾನದಲ್ಲಿ ನಿಲ್ಲುವುದೇ ತಡ; ಬಸ್ಸಿನಲ್ಲಿ ಜನಸಂದಣಿ ನುಗ್ಗಲು ತೊಡಗಿತು. ಮುಂದಿನ ಕಂಪಾರ್ಟ್‌ಮೆಂಟಿನಲ್ಲಿ ನುಗ್ಗಲು ಸಿದ್ಧರಾದವರನ್ನು ಕ್ಲೀನರನು ಬೆದರಿಸುತ್ತಿದ್ದ :

“ ಮುಂದಿನ ಕಂಪಾರ್ಟ್‌ಮೆಂಟಿನೊಳಗ ಯಾರೂ ಸೇರಿಕೋಬ್ಯಾಡ್ರಿ ! ಅದನ್ನ ಪೋಲೀಸರಿಗಾಗಿ ಕಾಯ್ದು ಇಟ್ಟೈತಿ !”

ಪೋಲೀಸರೆಂದು ಕೇಳಿದೊಡನೆಯೆ ಜನರು ಹಿಂಜರಿದು, ಬಸ್ಸಿನ ಹಿಂಗಡೆಯ ಭಾಗದಲ್ಲಿಯೆ ಸೇರಿಕೊಳ್ಳುತ್ತಿದ್ದರು. ಡ್ರೈವರು ಬಸ್ಸಿನ ಬಳಿ-ಯಲ್ಲಿ ಇರಲಿಲ್ಲ. ಕ್ಲೀನರು ಏಜಂಟನಿಗೆ ಎಚ್ಚರಿಕೆ ಕೊಟ್ಟ :

“ ಈವತ್ತ ಹೆಚ್ಚಿಗೆ ತಿಕೀಟು ಕೊಡಬ್ಯಾಡೋ ಮಾರಾಯಾ ! ನಿನ್ನೆ ಧಾರವಾಡದಿಂದ ಬಂದ ಪೋಲೀಸ ಜಮಾದಾರ್ರು, ಪೋಲೀಸರು—ತಿರುಗಿ ಧಾರವಾಡಕ್ಕ ಹೋಗವರದ್ದಾರೆ ! ”

ಏಜಂಟು ಬೇಸರದ ಧ್ವನಿಯಲ್ಲಿ ಮಾತನಾಡಿದ :

" ಈ ಪೋಲೀಸರೊಂದು ಯಾವಾಗಲೂ ನಮ್ಮ ಜೀವಕ್ಕ ಮೂಲ ಆಗಿ ಇರತಾರ ! ತಮ್ಮ ಸೀಟಿನ ರೊಕ್ಕಂತೂ ಇಲ್ಲೇ ಇಲ್ಲ; ಮೇಲಾಗಿ ನಾಕು ಜನರನ್ನ ಹೆಚ್ಚಿಗೆ ಹಾಕಿ, ನಾಕು ದುಡ್ಡು ಹೆಚ್ಚು ದೊರಕೀಸೀವಂದರ ಆಗೂ ಹಾಂಗಿಲ್ಲ....! ಪೀಡಾಗೋಳನ್ನ ತಂದು ! "

ಕ್ಲೀನರ್ ನಗುತ್ತ ಹೇಳಿದ :

" ಏ ! ಪೋಲೀಸರನ್ನ ಬೈಯಬ್ಯಾಡ ಬಿಡೋ ಮಾರಾಯಾ ! ನೀನೂ ಗಾಂಧೀ ಟೊಪ್ಪಿಗೀ ಹಾಕಿಕೊಂಡೀದಿ; ನಿನ್ನೂ ಹಿಡಕೊಂಡು ಧಾರವಾಡಕ್ಕ ತೊಗೊಂಡು ಹೋದಾರು ನೋಡು ! "

" ತೊಗೊಂಡು ಹೋದರ ಹೋಗಲೇಳೋ ! ಅವರದೇನು ಬಿಸಾತು ಹಚ್ಚೇದಿ ! ಗಾಂದೀಟೊಪ್ಪಿಗೀ ಹಾಕಿಕೊಂಡರ ಏನು ಕಳ್ಳತನಾ ಮಾಡಿದ್ಹಾಂಗ ಆಗಲಿಲ್ಲ; ಕೊಲಿ–ಸುಲಿಗೀ ಮಾಡಿದ್ಹಾಂಗ ಆಗಲಿಲ್ಲ. ಇಷ್ಟಕ್ಕೆಲ್ಲಾ ಪೋಲೀಸರಿಗೆ ಹೆದರಿದರ ತೀರಿ ಹೋತು ! ಇಷ್ಟೂ ಮೀರಿ ಹಿಡಕೊಂಡು ಹೋಗಿ ಇವರು ಮಾಡುವವರೇನು? ಜೇಲಿನೊಳಗ ಒಯ್ದು ಇಟ್ಟಾರು ! ಆ ಪುಣ್ಯಾತ್ಮ ಗಾಂಧೀಮಾರಾಜನೇ ಜೇಲಿನೊಳಗ ಕುಂತಾನಂತ; ನಾವರೇ ಹೊರಗ ಯಾಕಿರಬೇಕು ? "

ದೂರದಿಂದ, ಸಂಪೂರ್ಣ ಸಮವಸ್ತ್ರದಲ್ಲಿರುವ ನಾಲ್ಕು ಜನ ಪೋಲೀಸರು ಬರುತ್ತಿರುವುದು ಕಂಡುಬಂದಿತು. ಏಜಂಟನ ಮಾತೂ ನಿಂತಿತು; ಕ್ಲೀನರನ ಮಾತೂ ನಿಂತಿತು. ಪೋಲೀಸರು ಬಸ್ಸಿನ ಬಳಿಗೆ ಬಂದರು. ಅವರಲ್ಲಿಯುವನೊಬ್ಬ ಆಢ್ಯತೆಯಿಂದ ಫ್ರಂಟ್‌ಸೀಟಿನಲ್ಲಿ ಕುಳಿತ. ಮಿಕ್ಕ ಮೂವರು ಕಂಪಾರ್ಟ್‌ಮೆಂಟಿನಲ್ಲಿ ಕುಳಿತರು. ಇವರಲ್ಲಿಯುವನೊಬ್ಬ ಫ್ರಂಟ್ ಸೀಟಿನ ಮೇಲೆ ಕುಳಿತವನನ್ನು ಕೇಳಿದ :

" ಮುದ್ದಾಪುರಕ್ಕ ಹೋಗತೀನಂತ ಸುಳ್ಳೇ ಸುದ್ದೀ ಹುಟ್ಟಿಸಿ, ಅಂವ ಇನ್ನೆಲ್ಲೋ ಜಿಗಿದಿರಬೇಕು ಜಮಾದಾರ್‌ಸಾಹೇಬ್ ! "

ಜಮಾದಾರ್ ಸಾಹೇಬರು ಹೇಳಿದರು :

" ಹಾಂಗಽ ಇರಬಹುದು. ಇಲ್ಲಿಯ ಸಬ್ ಇನ್‌ಸ್ಪೆಕ್ಟರು ಪಾರ್ಟೀ ತೊಗೊಂಡು ಹೋಗಿ ಪ್ರತ್ಯಕ್ಷ ತಪಾಸ್ ಮಾಡಿ ಬಂದಾರಂತ. ಅಲ್ಲಿ ಯಾರೂ ಬಂದಿಲ್ಲಾ ಅಂಬೂದನ್ನ ಅವರು ಖಾತ್ರೀ ಮಾಡಿಕೊಂಡಽ ಬಂದಾರ ! "

"ಆಯ್ತು ಬಿಡ್ರಿ, ನಮ್ಮ ಡ್ಯೂಟೀ ಅಂತೂ ನಾವು ಮಾಡಿದ್ಹಾಂಗ ಆತು!"

ಖಾದಿಯಂಗಡಿಯ ಶಂಕರಣ್ಣಾ, ಮುದ್ಹಾಪುರದ ರಂಗಣ್ಣಾ ಸೇರಿ ಬಸ್ಸಿನ ಬಳಿಗೆ ಬಂದರು. ಕ್ಲೀನರು ಅವರನ್ನು ನೋಡಿ ವಿನಯದಿಂದ ನಮಸ್ಕರಿಸಿ ಕೇಳಿದ :

"ಯಾಕ್ರೀ ರಾಯರ, ಎಲ್ಲಿಗಾದರೂ ಊರಿಗೆ ಹೋಗಬೇಕಾಗಿತ್ತೇನು?"

ಶಂಕರಣ್ಣಾ ತಟ್ಟನೆ ಹೇಳಿದ :

"ಹೌದ್ರೋ ಮಾರುತಿ! ಸವದತ್ತಿಗೆ ಹೋಗಿಬರಬೇಕಾಗಿತ್ತು ನಾವಿಬ್ಬರೂ!"

ಕ್ಲೀನರು ಪೋಲೀಸರನ್ನು ಕಣ್ಣಿಂದ ತೋರಿಸಿ, "ಸೀಟೆಲ್ಲಾ ತುಂಬಿ ಹೋಗ್ಯಾವಲ್ರೀ ರಾಯರ! ಮಧ್ಯಾನ್ಹದ ಬಸ್ಸಿಗೆ ಹೋದರ ನಡೀಲಿಕ್ಕಿಲ್ಲೇನ್ರಿ?" ಎಂದು ಕೇಳಿದ.

ಶಂಕರಣ್ಣಾ ಬೇಸರದ ಧ್ವನಿಯಲ್ಲಿ ಹೇಳಿದ :

"ದತ್ತೋಬಾಗ ಮೊದಲ ಎರಡು ಸೀಟು ಹೇಳಿ ಇಟ್ಟಿದ್ದೀವಪಾ! ಎಂಥಾ ಮನಿಸ್ಯಾ ಇದ್ದಾನ ಅಂವ! ಇಲ್ಲಿ ನಿಮಗ ತಿಳಸೂದನ್ನ ಮರೆತೇ ಬಿಟ್ಟಾನೋ ಏನೋ!"

"ಎಲ್ಲಾ! ಹೇಳಿದ್ದಿರೇನ್ರಿ! ಅಂವ ನಮಗ ತಿಳಿಸೇ ಇಲ್ಲ ನೋಡ್ರಿ! ತಿಳಿಸಿದ್ದರ ನಿಮಗಾಗಿ ಎರಡು ಸೀಟು ಕಾಯ್ದು ಇಡತಿದ್ದಿವಿ!"

ಮೋಟಾರಿನಲ್ಲಿಯೇ ಇದ್ದ ಪೋಲೀಸರನ್ನು ನೋಡಿ, ಶಂಕರಣ್ಣಾ ರಂಗಣ್ಣನ ಎದೆ ದಡದಡಿಸಿತು. ಮುಂದೆ ಏನು ಮಾಡಬೇಕೆಂಬುದೂ ತಿಳಿಯದಂತಾಯಿತು. ರಂಗಣ್ಣನ ಮುಖವಂತೂ ಕಳೆಗೆಟ್ಟು ಹೋಯಿತು. ಇಬ್ಬರೂ ಮಾತನೇನೂ ಆಡದೆ, ದೂರ ನಡೆದು ಹೋಗಿ, ಆತುರದೃಷ್ಟಿಗಳಿಂದ ನೋಡುತ್ತ ನಿಂತುಕೊಂಡು ಬಿಟ್ಟರು. ಒಂದೆರಡು ನಿಮಿಷದಲ್ಲಿಯೆ ಡ್ರಾಯ್ವರ್ ದತ್ತೋಬಾ, ಗಂಟೆಯ ಕಾಯಕದ ಅಯ್ಯನವರೊಬ್ಬರನ್ನು ಬೆನ್ನುಹಚ್ಚಿಕೊಂಡು ಬಸ್ಸಿನ ಬಳಿಗೆ ಬಂದ. ರಂಗಣ್ಣಾ, ಶಂಕರಣ್ಣಾ ಮತ್ತೆ ಮುಂದಡಿಯಿಟ್ಟು ಬಸ್ಸಿನ ಬಳಿಗೆ ಬಂದರು. ಆಗ ದತ್ತೋಬಾ ಅವರನ್ನು ನೋಡಿ, ಪಶ್ಚಾತ್ತಾಪದ ಧ್ವನಿಯಲ್ಲಿ ಹೇಳಿದ :

"ಎಲಾ! ನೀವು ಹೇಳಿದ್ದನ್ನ ನಾನು ಮರತss ಬಿಟ್ಟೆನಲ್ಲಾ ಶಂಕರಣ್ಣಾ! ನಿಮಗ ಜರೂರೀ ಕೆಲಸ ಇತ್ತೇನೋ! ಸೀಟು ಉಳಿದಾವೇನು ಕೇಳತೀನಿ ತಡೀರೇ!"

ಶಂಕರಣ್ಣ ನಿರಾಶೆಯ ನಗೆ ನಗುತ್ತ ಹೇಳಿದ:

"ನಾವೆಲ್ಲಾ ಕೇಳಿದಿವೇಳು; ಸೀಟs ಇಲ್ಲಂತ! ಅಂತೂ ನಮ್ಮ ಕೆಲಸಾ ತಪ್ಪಿಸಿ ಬಿಟ್ಟ ನೀನು ದತ್ತೋಬಾ!"

"ತಪ್ಪಾದದ್ದೇನೋ ಖರೇರಿ! ಇದೊಂದು ಸಾರೆ ಮಾಫ್ ಮಾಡಿ-ಬಿಡ್ರಿ! ಅದು ಹಿಂಗಾಯ್ತೇನ್ರಿ: ಪ್ಯಾಟೀ ಸೆಟ್ಟರು ನಿನ್ನೆ ರಾತ್ರಿ ಮುದ್ದಾಂ ಮನಿತನಕಾ ಬಂದು ಹೇಳಿ ಹೋಗಿದ್ದರು: ಈ ಅಯ್ಯನವರೇನೋ ಪರ್ವತದ ಯಾತ್ರಿಗೆ ಹೊಂಟಾರಂತ; ಸಂಚಾರ ಮಾಡಿಕೋತss ಇಲ್ಲಿಗೆ ಬಂದು, ಅವರ ಮನ್ಯಾಗ ಇಳಕೊಂಡಿದ್ದರಂತ. ಇವರನ್ನ ಮೋಟಾರಿಗೆ ಕುಂಡ್ರಿಸಿ ಕಳಿಸೂ ಹೊಣಿ ನನ್ನ ಮ್ಯಾಲ ಹಾಕಿದ್ದರು. ಅದಕ್ಕಾಗಿ ಮುಂಜಾನೇ ಎದ್ದವನs ಪ್ಯಾಟೀ ಸೆಟ್ಟರ ಮನಿಗೆ ಹೋಗಿ ಇವರನ್ನ ಕರಕೊಂಡು ಬರೂ ಗಡಬಿಡಿ-ಯೊಳಗ, ನಿಮ್ಮ ಸೀಟು ಹೇಳೂದನ್ನ ಪೂರಾ ಮರೆತೇ ಬಿಟ್ಟೆನೇನ್ರಿ!"

ರಂಗಣ್ಣ ಮೆಲುನಗೆ ನಗುತ್ತ ನುಡಿದ:

"ಯಾವಾಗ ನೋಡಿದರೂ ನೀನು ಗಡಿಬಿಡಿ ಮನುಷ್ಯನೇ ಇದ್ದೀ ನೋಡು ದತ್ತೋಬಾ!"

ದತ್ತೋಬಾ ಹೇಳಿದ:

"ಮತ್ತೇನು ಮಾಡೂದರಿ! ನಿಮ್ಮಂತಾ ದೊಡ್ಡ ಮನಿಶಾರು ಏನಾ-ದರೂ ಕೆಲಸಾ ಒಪ್ಪಿಸಿದರ, ಮಾರಲಾಕ ಬರತೈತೇನ್ರಿ! ಏನೋ, ಅಯ್ಯ-ನವರು ದೊಡ್ಡ ಯಾತ್ರಿಗೆ ಹೊಂಟಾರ; ನನ್ನಿಂದ ಏನಾದರೂ ಸೇವಾ ಮುಟ್ಟ-ದರ ಮುಟ್ಟಲಿ—ಅಂತ, ಎದ್ದವನs ಮೊದಲ ಹೋಗಿ ಈ ಸ್ವಾಮಿಗಳನ್ನ ಕರಕೊಂಡು ಬಂದಿನೇನ್ರಿ!"

ಬಸ್ಸಿನಲ್ಲಿ ಕುಳಿತ ಪೋಲೀಸರು ಅಯ್ಯನವರನ್ನು ನೋಡಿಯೆ ನೋಡು-ತ್ತಿದ್ದರು. ಅಯ್ಯನವರು ಅರೆಗಣ್ಣು ಮುಚ್ಚಿದವರಾಗಿ 'ಶಿವಓಂ ಶಿವಓಂ' ಎಂದು ಮೆಲ್ಲಗೆ ಬಾಯಿ ಅಲ್ಲಾಡಿಸುತ್ತಿದ್ದರು.

ದತ್ತೋಬಾ ಮತ್ತೆ ಹೇಳಿದ:

" ನಾ ಇವರನ್ನ ಕರಕೊಂಡು ಲಗೂನಽ ಬರುವವನ್ರಿ! ಆದರ, ಅಯ್ಯ-ನವರು ಜಳಕಾ ಮಾಡಿ ಶಿವಪೂಜೀ ತೀರಿಸಿಕೊಂಡು ಬರಬೇಕಾದರ ಒಂದೀಟು ಹೊತ್ತಾತರಿ! ಆದ್ದದ್ದಾತು, ಮಧ್ಯಾನ್ನದ ಬಸ್ಸಿಗೆ ನಾನೇ ಇರತೀನಲ್ರಿ! ನಿಮುಗಾಗಿ ಸೀಟು ಇಟ್ಟಿರತೀನಿ; ನೀವು ಚಿಂತೀ ಬಿಟ್ಟು ಹೋಗರಿ ರಾಯರ! "

ಶಂಕರಣ್ಣಾ ಕೇಳಿದ :

" ಈ ಅಯ್ಯನವರು ಯಾವ ಊರವರು ದತ್ತೋಬಾ ? "

" ಎಲಾ ಇವನ! ನಾ ಅದನ್ನೇನೂ ಕೇಳಿಲ್ಲ ಬಿಡ್ರಿ! ತಮ್ಮ ಊರು ಯಾವುದು ಸ್ವಾಮಿಗಳಽ ? "

" ನಮ್ಮದು ರಾಯಬಾಗಿ ಭಕ್ತಾ! ಕೊಲ್ಹಾಪುರ ಸಂಸ್ಥಾನ! "

ರಂಗಣ್ಣಾ ಕೇಳಿದ :

" ರಾಯಬಾಗ ಅಂತ ರೇಲ್ವೆ ಸ್ಟೇಶನ್ ಅದ ಅಲ್ಲಾ ಶಂಕರಣ್ಣಾ! "

ಅಯ್ಯನವರು ಹೇಳಿದರು :

" ಹೌದು ಭಕ್ತಾ, ಅದೇ ಊರು ನಮ್ಮದು! ಶಿವಓಂ, ಶಿವಓಂ, ಶಿವಹರ-ಶಿವಹರಓಂ! "

ಇಬ್ಬರೂ ಸ್ವಾಮಿಗಳಿಗೆ ನಮಸ್ಕಾರ ಸಲ್ಲಿಸಿದರು. ಸ್ವಾಮಿಗಳು ಆಶೀರ್ವದಿಸಿದರು :

" ಕಲ್ಯಾಣವಾಗಲಿ, ಕಲ್ಯಾಣವಾಗಲಿ! ಶಂಕರ ಶಿವಓಂ! "

ಬಸ್ಸಿನ ಡ್ರೈವರು ಅವಸರದ ನಡಿಗೆಯಿಂದ ಬಂದ. ದತ್ತೋಬಾ ಅವನನ್ನು ಕರೆದು ಹೇಳಿದ :

" ಜಮಾಲ್‌ಸಾಬ್! ಈ ಸ್ವಾಮಿಗಳು ಪರ್ವತದ ಯಾತ್ರಿಗೆ ಹೊಂಟಾ-ರಂತ; ಇವರನ್ನಽಟು ಒಯ್ದು, ಧಾರವಾಡದ ತನಕಾ ಮುಟ್ಟಿಸಿಬಿಡಪಾ! "

ದತ್ತೋಬಾನ ಮಾತನ್ನು ಮೀರಲಿಕ್ಕಾಗುವುದೇ? ಡ್ರಾಯ್ವರು-ಡ್ರಾಯ್ವರುಗಳು ಒಬ್ಬರೊಬ್ಬರ ಮಾತನ್ನು ನಡಿಸಿಕೊಡಲೇ ಬೇಕಾಗುತ್ತದೆ. ಜಮಾಲ್‌ಸಾಬ, ಬಸ್ಸಿನಲ್ಲಿ ತಲೆಯಿಕ್ಕಿ ನೋಡಲು ತೊಡಗಿದ ಹಿಂಬದಿಯಲ್ಲಿ ಎಲ್ಲಿಯೂ ಸ್ಥಳವೇ ಇರಲಿಲ್ಲ. ಮುಂಗಡೆಯ ಕಂಪಾರ್ಟ್‌ಮೆಂಟಿನಲ್ಲಿ ಮೂವರೇ ಪೋಲೀಸರು ಕುಳಿತುದನ್ನು ನೋಡಿ ಹೇಳಿದ :

"ಈ ಸ್ವಾಮಿಗಳೊಬ್ಬರನ್ನ ನಿಮ್ಮ ಜಾಗದೊಳಗ ಕುಂದ್ರಿಸಿಗೋ-ತೀರೇನ್ರಿ–ಸಿಪಾಯಿಸಾಹೇಬರ ?"

ಪೋಲೀಸರು ಒಬ್ಬರ ಮುಖವನ್ನೊಬ್ಬರು ನೋಡಲು ತೊಡಗಿದರು; ಆಗ ಜಮಾದಾರರು ಹೇಳಿದರು : "ಒಂದುಕಡೆ ಜಾಗಾಮಾಡಿ ಕೊಡ್ರೆಪಾ ! ಅಯ್ಯನವರು ದೇವರ ದರ್ಶನಕ್ಕ ಹೊಂಟಾರಂತ ! "

ಪೋಲೀಸರು ಸರಿದು ಕುಳಿತುಕೊಂಡು, ಒಂದು ಪಕ್ಕದಲ್ಲಿ ಸ್ಥಳಮಾಡಿ-ಕೊಟ್ಟರು. ಅಯ್ಯನವರು 'ಶಿವಓಂ ಶಿವಓಂ' ಎಂದು ಬಾಯನ್ನು ಅಲುಗಿ-ಸುತ್ತ ಬಸ್ಸಿನಲ್ಲಿ ಹತ್ತಿ ಸ್ಥಳಹಿಡಿದು ಕುಳಿತರು. ದತ್ತೋಬಾ ಸ್ವಾಮಿಗಳ ಪಾದವನ್ನು ಮುಟ್ಟಿ ನಮಸ್ಕಾರ ಮಾಡಿದ. ಆಗ ರಂಗಣ್ಣ ಶಂಕರಣ್ಣ ಒಬ್ಬ-ರನ್ನೊಬ್ಬರು, ಬೆರಗುಗಣ್ಣುಗಳಿಂದ ನೋಡುತ್ತಲಿದ್ದರು ಬಸ್ಸು ಘೋರ್ರೆಂದು ಸಪ್ಪಳ ಮಾಡುತ್ತ ಪ್ರಯಾಣದ ಸೂಚನೆ ಕೊಟ್ಟಿತು. ನಿಂತ ಸ್ಥಳ ಬಿಟ್ಟು ಮುಂದುವರಿದು ಹೊರಟಿತು. ಬಸ್ಸು ಕಣ್ಮರೆಯಾಗುವ ವರೆಗೂ ದತ್ತೋಬಾ ಶಂಕರಣ್ಣ, ರಂಗಣ್ಣ ಮೂವರೂ, ಅದರ ಕಡೆಗೆ ಕುತೂಹಲದ ಕಣ್ಣುಗಳಿಂದ ನೋಡುತ್ತ ನಿಂತುಕೊಂಡಿದ್ದರು.

ಬಸ್ಸಿನಲ್ಲಿ ದೂರದ ಪ್ರವಾಸಿಕರೇ ತುಂಬಿಬಿಟ್ಟುದರಿಂದ, ಸಮೀಪದ ಹಳ್ಳಿಗಳ ಬಳಿಯಲ್ಲಿ, ದಿನದ ಪದ್ಧತಿಯಂತೆ ಬಸ್ಸು ನಿಲ್ಲುತ್ತಿರಲೇ ಇಲ್ಲ. ದಾರಿಕಾಯುತ್ತ ನಿಂತ ಪ್ರಯಾಣಿಕರಿಗೆಲ್ಲ ಸ್ಥಳವಿಲ್ಲವೆಂದು ಕೈಮಾಡಿ ತೋರಿಸುತ್ತ ಡ್ರೈವರು ಬಸ್ಸನ್ನು ರಭಸದಿಂದಲೇ ಓಡಿಸುತ್ತಲಿದ್ದ. ಅಯ್ಯ-ನವರು ಕಣ್ಣು ಮುಚ್ಚಿ ಕುಳಿತು, ಶಿವಧ್ಯಾನದಲ್ಲಿ ಮಗ್ನರಾಗಿದ್ದರು. ಮುಂದೆ ಕುಳಿತ ಜಮಾದಾರ್ ಸಾಹೇಬರು ಒಂದರ ಹಿಂದೊಂದರಂತೆ ಸಿಗರೇಟು-ಗಳನ್ನು ಹೊತ್ತಿಸುತ್ತ, ಬಸ್ಸಿನಲ್ಲೆಲ್ಲ ಅದರ ವಾಸನೆಯನ್ನು ಇಡುಗಿಸಿದ್ದರು. ರಾತ್ರಿಯಲ್ಲಿ ನಿದ್ದೆಗೆಟ್ಟಿದ್ದರೇನೋ, ಕಂಪಾರ್ಟ್‌ಮೆಂಟಿನಲ್ಲಿ ಕುಳಿತ ಪೋಲೀ-ಸರು, ಕುಳಿತಲ್ಲಿಯೆ ತೂಕಡಿಸುತ್ತಲಿದ್ದರು.

ಬಸ್ಸು ಬಂದು ಮುನವಳ್ಳಿಯ ಸ್ಟ್ಯಾಂಡಿನ ಮೇಲೆ ನಿಂತುಕೊಂಡಿತು. ಡ್ರೈವರನು ಇಳಿದು, ಚಹದ ಅಂಗಡಿಯನ್ನು ಹೊಕ್ಕ. ಜಮಾದಾರ್ ಸಾಹೇಬರು ಕೆಳಗೆ ಇಳಿದು ಪೋಲೀಸರಿಗೆ ಹೇಳಿದರು :

" ನಾನು ಮಧ್ಯಾಹ್ನದ ಬಸ್ಸಿನಿಂದ ಬರತೀನಿ; ಇಲ್ಲಿಯ ಸಬ್ ಇನ್‌ಸ್ಪೆ-ಕ್ಟರರಿಗೆ ಕೆಲವು ಗುಟ್ಟಿನ ವಿಷಯ ಹೇಳಿ ಬರಬೇಕಾಗೇದ. ನೀವು ಮುಂದೆ ಹೋಗಿಬಿಡ್ರಿ ! ಈ ಲಖೋಟೀ ಒಯ್ದು ಸಾಹೇಬರಿಗೆ ಮುಟ್ಟಿಸಿರಿ. ನಾನು ಸಂಜಿಗೆ ಬಂದು ಅವರಿಗೆ ಭೆಟ್ಟಿ ಆಗೇ ಆಗತೀನಿ !"

ಹೀಗೆ ಹೇಳಿದವರೇ ಅವರು, ಪಕ್ಕದಲ್ಲಿಯೇ ಇದ್ದ ಪೋಲೀಸ್ ಕಚೇರಿಯ ದಾರಿಯನ್ನು ಹಿಡಿದರು. ಜಮಾದಾರರು ಹೊರಟು ಹೋದೊಡನೆಯೆ ಪೋಲೀಸ್ ಸಿಪಾಯರು ಸ್ವತಂತ್ರರಾದರು. ಮೂವರೂ ಕೆಳಗಿಳಿದು ಹೋಗಿ, ಅಂಗಡಿಯಲ್ಲಿ ಚಹಕುಡಿದು, ಬೀಡಿಯನ್ನು ಹೊತ್ತಿಸಿ ಸೇದುತ್ತ, ಉತ್ಸಾಹ ಭಾವದವರಾಗಿಯೇ ಬಂದು, ತಮ್ಮ ಸ್ಥಳಗಳಲ್ಲಿ ಕುಳಿತುಕೊಂಡರು. ಡ್ರೈವರನು ಮರಳಿ ಬರುವಾಗ, ಜರಿಯ ರುಮಾಲದ ಹಳ್ಳಿಯ ಸಾವುಕಾರ ನೊಬ್ಬನನ್ನು ಜೊತೆಗೊಂಡು ಬಂದಿದ್ದನು. ಫ್ರಂಟ್ ಸೀಟು ತೆರವಾದುದು ಗೊತ್ತಾದೊಡನೆಯೇ ಅವನು, ತೃಪ್ತಿಯ ಭಾವದಿಂದ ಆ ಸಾವುಕಾರರನ್ನು ಆ ಸೀಟಿನಲ್ಲಿ ಕುಳ್ಳಿರಿಸಿಕೊಂಡು ಬಸ್ಸನ್ನು ಮುಂದೆ ಸಾಗಿಸಿದನು. ಎಡಬಲದ ಬಾಳೆಯ ತೋಟಗಳನ್ನು ನೋಡಿ ಒಬ್ಬ ಪೋಲೀಸ, ಜೊತೆಯವರಿಗೆ ಹೇಳಿದ:

" ಏನು ಬಾಳೀ ತ್ವಾಟಗಳಪಾ ಇಲ್ಲೆ ! ಎಲ್ಲೆ ನೋಡಿದಲ್ಲೆಲ್ಲಾ ಅವs ಕಾಣತಾವ. ಈಗ ಜಮಾದಾರ ಇಳದಾನಲಾ! ಇನ್ನ ಬರೋಮುಂದ ನೋಡು, ಒಂದು ದೊಡ್ಡ ಪೆಂಡಿ ಬಾಳೀಯೆಲಿ ಜೋಡಿಗೆ ತಂದs ತರತಾನ !"

ಇನ್ನೊಬ್ಬ ಹೇಳಿದ :

" ಈ ಹಾರುವರ ಮಂದಿ ಪೋಲೀಸ್ ಖಾತೇಕ್ಕ ಬಂದು ಸೇರಿದರೂ ತಮ್ಮ ಬಾಳೀಯೆಲೀ ಊಟದ ಮೋಹಾ ಏನೂ ಬಿಡೂದಿಲ್ಲ ನೋಡು ; ಹಳ್ಳಿಗೆ ಹೋದಲ್ಲೆಲ್ಲಾ ಗೌಡರ ಸುತ್ತ ಬೆನ್ನs ಹತ್ತಿರತಾರ : ಬಾಳೀಯೆಲಿ ತರಿಸಿಕೊಡು, ಬೆಣ್ಣೀ ತರಿಸಿಕೊಡು !"

ಮೂರನೆಯವ ಹೇಳಿದ :

" ಹಾರುವರು ಬಾಳೀಯೆಲಿ-ಬೆಣ್ಣಿಗೆ ಗಂಟುಬೀಳತಾರ; ಮತ್ತ ನೀವು ಕುರಿ-ಕೋಳಿ-ಸೆರೆ-ಸಿಂದಿಗೆ ಗಂಟುಬೀಳತೀರಿ ! ಅಂತೂ ಹಳ್ಳೀಗೌಡರಿಗೆ ಯಾರಿಂದಲೂ ಗೋಳುತಪ್ಪಿದ್ದಲ್ಲ !"

ಕೂಡಲೆ ಮೊದಲನೆಯ ಪೋಲೀಸ ಹೇಳಿದ :

“ ನಿಮ್ಮಂತವರು ಈ ಖಾತೇಕ್ಕ ನಾಲಾಯಖ್ಖ ನೋಡು ದಾದಾ ! ಸುಮ್ಮಗs ಈ ಪೋಲೀಸ ಕೆಲಸಾ ಬಿಟ್ಟು, ಇಂಥಾ ಸ್ವಾಮಿಗಳ ಬೆನ್ನು ಹತ್ತಿ ಶಿವಧ್ಯಾನಾ ಮಾಡಿಕೋತs ಇರಬಾರದs? ಯಾವಾಗ ನೋಡಿದರೂ ನಮಗ ಬುದ್ಧೀಮಾತು ಹೇಳಲಿಕ್ಕೇ ತಯಾರಾಗಿ ಬರತೀ ನೀನು !”

“ ಅಲ್ಲೋ ! ಪೋಲೀಸಖಾತೇ ಅಂದರ, ಮಂದಿನ್ನ ಸುಲಕೊಂಡು ತಿನ್ನಲಾಕ ಮಾಡಿ ಇಟ್ಟೈತೇನು ಸರಕಾರ ? ಮಂದೀ ಸಂರಕ್ಷಣಕ್ಕಂತ ಇರೂವಪಾ ಪೋಲೀಸ ಖಾತೆ ! ಅದನ್ನ ಮಾಡೂದು ಬಿಡತೀರಿ; ಬರೇ ಮಂದೀ ಮ್ಯಾಗ ಅಮಲುತೋರಿಸಿ, ನಿಮ್ಮ ಕಿಸೇ ತುಂಬಿಕೋಬೇಕಂತೀರಿ !”

ಎರಡನೆಯ ಪೋಲೀಸ ಹೇಳಿದ :

“ ಏ ದಾದಾ ! ಸುಮ್ಮಗs ನೀನೂ ಆ ರತ್ನಾಕರರಾಯನ್ಹಾಂಗ ಲಕ್ಷರು ಕೊಟುಗೋತs ಕಾಂಗ್ರೆಸ್ಸಿಗೆ ಸೇರಿಬಿಡಬಾರದ ? ಪೋಲೀಸ್ ಸಿಪಾಯಿ ಆಗಿ ನೀನು ಬಳಕೊಳ್ಳೊ ಸುಖಾ ಅಷ್ಟರೊಳಗs ಐತಿ ! ಪೋಲೀಸ್ ಖಾತೇ ಸೇರಿದ ಮ್ಯಾಗ, ಖಾತೇಕ್ಕ ತಕ್ಕಹಾಂಗ ಇರಬೇಕಪಾ !”

ಮೂರನೆಯವ ಹೇಳಿದ :

“ ನೀವೆಲ್ಲಾರೂ ಹೀಂಗ ಇದ್ದೀರಂತs ನಮ್ಮ ದೇಶದ ಜನರೆಲ್ಲಾ! ಪೋಲೀಸರಂದರ ಸೈತಾನರನ್ನ ಕಂಡ ಹಾಂಗ ಹೆದರಿ ಹಿಂದ ಸರೀತಾರು ಮುಂದ ಬೆದರಿ ಬಾಗಿ ನಿಂತರೂ, ನಿಮ್ಮ ಹಿಂದ, ಸಾವಿರ ಸಾವಿರ ಶಾಪಾ ಕೊಡತಾರ....ಗೊತ್ತೈತೇನು ಈ ಮಾತು ?”

“ ಗೊತ್ತೈತಿ ಬಿಡೋ ನಿನ್ನ ಗುರುಭೋಧ ! ಅವರ ಶಾಪ ನಮಗೇನು ಮಾಡತೈತಿ ? ಶಾಪಕ್ಕ ಹೆದರಿ ನಮ್ಮ ಕಾಯಕಾ ನಾವು ನಿಲ್ಲಿಸಿದರ, ನಮ್ಮ ಹೆಂಡರು-ಮಕ್ಕಳು ಹೊಟ್ಟೆತುಂಬ ಊಟ, ಮೈತುಂಬ ಬಟ್ಟೆ ಕಾಣದೇ ಹೋದಾರು ? ನಿನ್ನ ಹಣೇಬರಾನs ನೋಡಿಕೊಂಡಿದಿಯೋ ಇಲ್ಲೋ ? ಬರೇ ಪಗಾರದ ಹಣದ ಮ್ಯಾಗ ಬದಿಕೇನಂದರ ಸಾಧ್ಯ ಐತೆ ? ಸಾಧ್ಯ ಇಲ್ಲಂತಲೇ ನೀವು ಮನ್ಯಾಗ, ಒಪ್ಪತ್ತು ಉಂಡರ, ಇನ್ನ ಒಪ್ಪತ್ತು ಉಪಾಸ ಬೀಳತೀರಿ !”

“ ಉಪಾಸದ ಸುಖಾ ನಿನಗೇನು ಗೊತ್ತೈತೇಳೋ ಮಳ್ಳs! ಆ ಗಾಂಧೀ ಮಾರಾಜರ ಕತೀ ಕೇಳೀದಿಯೋ ಇಲ್ಲೊ ? ದಿನಾ ಉಪಾಸ ಮಾಡತಾರಂತ ಅವರು !”

ಮೊದಲನೆಯ ಪೋಲೀಸ ಹೇಳಿದ :

“ ಸುಮ್ಮಗs ನೀನೂ ಬಿಳೀ ಟೊಪ್ಪಿಗೀ ಹಾಕಿಕೊಂಡು ಗಾಂದೀ ಮಂದಿಯೊಳಗ ಸೇರಿಕೊಂಡು ಬಿಡು ! ಈ ಪೋಲೀಸರ ಮುಂಡಾಸ ಬಿಟ್ಟು ಬಿಡಿನ್ನ !”

ಅಯ್ಯನವರು ಮೆಲ್ಲಗೆ ಶಿವಭಜನೆ ಮಾಡುತ್ತಿದ್ದರು :

“ ಶಿವ ಶಿವ ಶಿವ ಓಂ, ಹರಹರ ಶಿವ ಓಂ, ಕೂಡಲಸಂಗಮಸಾಕ್ಷಾ !”

ಮೂರನೆಯ ಪೋಲೀಸ ಕೇಳಿದ :

“ ಸ್ವಾಮಿಗಳ ಊರು ಯಾವುದು ಸ್ವಾಮಿ ?”

ಮುಚ್ಚಿದ ಕಣ್ಣು ಬಿಚ್ಚಿ ಅಯ್ಯನವರು ಹೇಳಿದರು :

“ ನಮ್ಮ ಊರು ರಾಯಬಾಗಿ ಶಿವಭಕ್ತಾ !”

“ ಇತ್ತ ಯಾವ ಊರಿಗೆ ಹೊರಟೀರಿ ?”

“ ಒಂದs ಊರೇನು ಭಕ್ತಾ ! ಹೀಂಗs ಸಂಚಾರ ಮಾಡಿ ಭಿಕ್ಷಾ ಬೇಡಿಕೊಳ್ಳತs, ಶ್ರೀಶೈಲದ ಕ್ಷೇತ್ರಕ್ಕ ಹೋಗತೀನಿ ಶರಣಾ ! ಶಿವಓಂ ಶಿವಓಂ ಶಿವಓಂ, ಹರ, ಹರ, ಹರ !”

“ ಹಾಂಗಾದರ ಇಂದ ಯಾವೂರ ಮುಕ್ಕಾಮು ?”

“ ಯಾವ ಊರಂದರ ಏನು ಭಕ್ತಾ ! ಧಾರವಾಡಂದರ ಧಾರವಾಡ.... ಹುಬ್ಬಳ್ಳಿ ಅಂದರ ಹುಬ್ಬಳ್ಳಿ !”

“ ಧಾರವಾಡ ಹುಬ್ಬಳ್ಳಿಯೊಳಗ ಯಾರಾದರೂ ಗುರುತಿನವರು ಇದ್ದಾರೇನು ನಿಮುಗ ಸ್ವಾಮಿ !”

“ ತಿರುಕೊಳ್ಳುವವರಿಗೆ ಎಲ್ಲಾ ಜನರೂ ಗುರುತಿನವರs ಭಕ್ತಾ ! ನಮಗೇನು, ಶಿವಭಕ್ತರು ಎಲ್ಲಾ ಊರೊಳಗೂ ಇರತಾರ ! ಶಿವಭಕ್ತರೆಲ್ಲಾ ನಮ್ಮ ಬಂಧು-ಬಳಗ ಇದ್ದಾಂಗ ಭಕ್ತಾ !”

ಬಸ್ಸು ರಭಸದಿಂದ ಮುಂದುವರಿಯುತ್ತಲಿತ್ತು. ಧಾರವಾಡ ಸಮೀಪಿಸಿತೆಂಬ ಕುತೂಹಲದ ಮಾತು ಪ್ರಯಾಣಿಕರ ಬಾಯಲ್ಲೆಲ್ಲ ಸುಳಿದಾಡಿತು. ಪೋಲೀಸರು ತಮ್ಮ ತಮ್ಮ ಸಾಮಾನುಗಳನ್ನು ಸಾವರಿಸಿಕೊಳ್ಳಲು ತೊಡಗಿದರು. ಗಂಟೆಯ ಅಯ್ಯನವರೂ ತಮ್ಮ ಗಂಟು-ಗಂಟೆಗಳನ್ನು ಸರಿಪಡಿಸಿಕೊಂಡು ಕುಳಿತರು.

ಬಸ್ಸು ವೇಗವನ್ನು ತಗ್ಗಿಸುತ್ತ ತಗ್ಗಿಸುತ್ತ ಮುಂದುವರಿದು; ತಾನು ನಿಲ್ಲುವ ಸ್ಥಳವನ್ನು ಬಂದು ತಲ್ಪಿತು. ಜನರು ಇಳಿಯಲು ತೊಡಗಿದರು. ಬಸ್ಸಿನ ಸುತ್ತಲೂ ನಿಂತಿದ್ದ ಪೋಲೀಸರು ಒಬ್ಬೊಬ್ಬರನ್ನೇ ನೋಡಿನೋಡಿ, ಪರೀಕ್ಷಿಸಿ ಹೊರಗೆ ಬಿಡುತ್ತಲಿದ್ದರು. ಕಂಪಾರ್ಟ್‌ಮೆಂಟಿನಲ್ಲಿ ಕುಳಿತ ಪೋಲೀಸರೂ ಕೆಳಗಿಳಿದರು. ಸ್ಟ್ಯಾಂಡಿನ ಮೇಲಿದ್ದ ಪೋಲೀಸರಿಗೂ ಅವರಿಗೂ 'ಸಲಾಮ್' 'ರಾಮ್‌ರಾಮ್' ಆಯಿತು ಗಂಟೆ-ಗಂಟು-ಜೋಳಿಗೆಗಳೊಂದಿಗೆ ಅಯ್ಯನವರು ಕೆಳಗಿಳಿದರು. ಆಗ ಪೋಲೀಸರು ಅವರನ್ನು ತಡೆದು ನಿಲ್ಲಿಸಿದರು. ಆಗ ದಾದಾ ಪೋಲೀಸ್ ಹೇಳಿದ :

"ಆ ಸ್ವಾಮಿಗಳನ್ನ ಯಾಕ ತಡದು ನಿಲ್ಲಿಸತೀರಿ; ಹೋಗಲಿ ಬಿಡ್ರಿ! ನಾವೂ ಅವರೂ ಕೂಡಿಯೆ ರಾಮದುರ್ಗದಿಂದ ಇಲ್ಲಿಯ ತನಕಾ ಬಂದೀವಿ. ಅವರು ಶಿವಭಕ್ತರು. ಶ್ರೀಶೈಲಗಿರಿಯ ಯಾತ್ರಿಗೆ ಹೊಂಟಾರಂತ" ಎಂದು ಹೇಳಿದ :

ದಾದಾನ ಮಾತನ್ನು ಕೇಳಿದೊಡನೆಯೆ ಪೋಲೀಸರು ಹೋಗಬಹುದೆಂದು ಅಯ್ಯನವರಿಗೆ ಅಪ್ಪಣೆಕೊಟ್ಟರು. ಆಗ ಅಯ್ಯನವರು ದಾದಾನ ಕಡೆಗೆ ತಿರುಗಿ ಹೇಳಿದರು :

"ಶ್ರೀಶೈಲ ಮಲ್ಲಿಕಾರ್ಜುನ ನಿನಗ ಸಂತಾನ ಸಂಪತ್ತು ಕೊಡಲಿ ಭಕ್ತಾ! ನಾವು ಬರತೇವಿ" ಎಂದು ಹೊರಡಲು ಸಿದ್ಧರಾದರು ಅಯ್ಯನವರು. ಆಗ ದಾದಾ ಅವರ ಪಾದ ಮುಟ್ಟಿ ನಮಸ್ಕಾರ ಮಾಡಿ, ಪಾದಧೂಳಿಯನ್ನು ಆದರದಿಂದ ಹಣೆಗೆ ಹಚ್ಚಿಕೊಂಡ. ಅಯ್ಯನವರ ಹೃದಯ ಉಕ್ಕಿ ಬಂದಂತಾಯಿತು. ಕಣ್ಣಲ್ಲಿ ತೇವ ಕಂಡಿತು. ಕಂಪಿಸುವ ಕಂಠದಿಂದ ಆಶೀರ್ವದಿಸಿದರು :

"ಕಲ್ಯಾಣಮಸ್ತು ಭಕ್ತಾ! ಕಲ್ಯಾಣಂ ಕಲ್ಯಾಣಂ! ಶಿವ ಶಿವ ಶಿವ ಓಂ!"

ಅಯ್ಯನವರು ಮುಂದುವರೆದು ನಡೆದರು. ಅವರ ಹೆಜ್ಜೆಗಳೊಂದಿಗೆ, ಎಡಬಲ ಪಕ್ಕಗಳಲ್ಲಿ ಇದ್ದ ಗಂಟೆಗಳು 'ಗಣಗಣ' ನಾದ ಮಾಡುತ್ತಲಿದ್ದುವು. ಸಮವಸ್ತ್ರವಿಲ್ಲದೆ ತಿರುಗುತ್ತಲಿದ್ದ ಹವಾಲ್‌ದಾರ್ ಹನುಮಂತಪ್ಪ, ಬೆದರಿಕೆ–ಕುತೂಹಲದ ಕಣ್ಣುಗಳಿಂದ, ಪ್ರಯಾಣಿಕರೆಲ್ಲರೂ ಹೊರಟು ಹೋಗುತ್ತಿರುವುದನ್ನು ನೋಡಿಯೆ ನೋಡುತ್ತಲಿದ್ದ; ಬಸ್ಸಿನ ಸುತ್ತಲೂ ತಿರುಗಾಡುತ್ತಲಿದ್ದ.

## ೨೫ನೆಯ ಪರಿಚ್ಛೇದ

ಅಂದೆಯೆ ರಾತ್ರಿಯ ಒಂಬತ್ತು ಗಂಟೆ. ಹುಬ್ಬಳ್ಳಿಯ ಒಂದು ಬೀದಿಯ ಗುಂಟ ಗಂಟೆಯ ಅಯ್ಯನವರು, ಎರಡು ಕೈಗಳಿಂದಲೂ ಗಂಟೆಯನ್ನು ಬಾರಿಸುತ್ತ 'ಶ್ರೀಶಿವಾ, ಶಂಭುಲಿಂಗಾ, ಕೂಡಲಸಂಗಮನಾಥಾ !' ಎಂದು ಸುಸ್ವರವಾಗಿ ಕೂಗಿಕೊಳ್ಳುತ್ತ ನಡೆದಿದ್ದಾರೆ. ನಡು-ನಡುವೆ ಒಂದೊಂದು ಮನೆಯೆದುರು ನಿಂತು : 'ಭಿಕ್ಷಾ ಕೊಡ್ರಿ ಶಿವಾ !' ಎಂದುಕೂಗುವರು; ನೀಡುವವರ ದಾರಿಯನ್ನು ಹೆಚ್ಚು ಹೊತ್ತು ಕಾಯದೆ, ಮುಂದುಸರಿಯುವರು. ಹುಬ್ಬಳ್ಳಿ-ಯಂತಹ ನಗರದಲ್ಲಿ ಭಿಕ್ಷುಕರ ಸಂಖ್ಯೆಗೇನು ಕಡಿಮೆ ? ನಿತ್ಯವೂ ನೂರಾರು ಜನ ಭಿಕ್ಷುಕರನ್ನು ಕಂಡು, ಅವರಿಂದ ಕಾಡಿಸಿಕೊಂಡು 'ಮುಂದಕ್ಕೆ ಸಾಗಿರಿ' ಎಂದು ಹೇಳಿ ಹೇಳಿ ಬೇಸರುಗೊಂಡಿರುವ ಅಲ್ಲಿಯ ಜನರು, ಈ ಅಯ್ಯನವರನ್ನು ನೋಡುತ್ತ ನಿಂತುಕೊಳ್ಳುವರಾದರೂ ಏತಕ್ಕೆ ? ಇಷ್ಟೇಅಲ್ಲ, ಹುಬ್ಬಳ್ಳಿಯ ಬೀದಿಬೀದಿಗಳಲ್ಲಿಯೂ ಭಿಕ್ಷೆಗೆ ತಿರು-ಗಾಡುವ ಗಂಟೆಯ ಅಯ್ಯನವರೇನೂ ಅಪೂರ್ವದವರಲ್ಲ. ಹತ್ತರ ಕೂಡ ಹನ್ನೊಂದನೆಯವರೆನ್ನುವಂತೆ, ಈಗ ಈ ಗಂಟೆಯ ಅಯ್ಯ-ನವರೂ ತುಂಬಿದ ನಗರದಲ್ಲಿ ದಾನದ ಹಸ್ತವನ್ನು ಕಾಣದೆ ಮುಂದುವರೆ-ದಿದ್ದರು. ಹಾಗೆಯೆ ಮುಂದುವರೆದು ಪದಕೀ ಸಂಜೀವರಾಯರ ಮನೆಯೆ-ದುರು ನಿಂತು ಗಟ್ಟಿಯಾಗಿ ಗಂಟೆಗಳನ್ನು ಬಾರಿಸಲು ತೊಡಗಿದರು; ಗಂಟೆಯ ಧ್ವನಿಯೊಂದಿಗೆ ಮಧುರಸ್ವರವನ್ನು ಬೆರಸಿ 'ಶ್ರೀಶೈಲ ಮಲ್ಲಿಕಾರ್ಜುನಾ, ಕಾಶೀ ವಿಶ್ವನಾಥಾ, ಕೂಡಲಸಂಗಮೇಶ್ವರಾ, ಹರಓಂ ಹರ, ಹರಹರ ! ' ಎಂದು ರಾಗದೊದಿಗೆ ಹೇಳಿದರು. 'ಭಿಕ್ಷಾ ನೀಡ್ರಿ ಶಿವಾ !' ಎಂದು ಕೂಗಿಕೊಂಡರು. ಒಳಗಿನಿಂದ ಯಜಮಾನನ ಧ್ವನಿ ಸ್ವಲ್ಪ ರೊಚ್ಚಿನೊಂದಿಗೇ ಕೇಳಿಸಿತು :

"ಇದು ಬ್ರಾಹ್ಮಣರ ಮನೀನ್ರೀ; ಮುಂದಕ್ಕ ಹೋಗರಿ ! "

ಅಯ್ಯನವರು ಗಟ್ಟಿಯಾಗಿ ನಿಂತು ಹೇಳಿದರು :

"ಬ್ರಾಹ್ಮಣರಾದರ ಭಿಕ್ಷಕ್ಕೇನು ಬಂದಽದ ಶಿವಾ ! ರಾತ್ರಿ ಬಂದ ಜಂಗಮರನ್ನ ಬರಿಗೈಯಿಂದ ಕಳಿಸಬಾರದು ಶಿವಾ ! " ಗಂಟೆಯ ಸಪ್ಪಳು ನಡೆದೇ ಇದ್ದಿತು.

ಮನೆಯ ಯಜಮಾನ ಸಂಜೀವರಾಯರು ಸ್ವಲ್ಪ ಮುಂದೆ ಬಂದು ಹೇಳಿದರು :

" ಎಲ್ಲಾ ಗೊತ್ತದ ಹೋಗರೀ ! ಮುಂದ ಹೋಗರಿ ! ನಿಮ್ಮ ಜಾತಿಯವರ ಮನಿಗೆ ನಮ್ಮ ಆಚಾರ್ರು ಭಟ್ಟರು ಬಂದರ ನೀಡತಾರೇನು ? ಬಾಗಿಲಿಗೆ ಬಂದರ, ಬಾಯ ಮ್ಯಾಲ ಹೊಡದು ಕಳಿಸತಾರ ! ನಾ ಒಳ್ಳೇ ಮಾತಿನಿಂದ ಹೇಳತೀನಿ, ಸುಮ್ಮನ ಸಾಗರಿ ಮುಂದ ! "

ಅಯ್ಯನವರು ಗಂಟೆ ಬಾರಿಸುವುದನ್ನು ನಿಲ್ಲಿಸಿ ಮೆಲ್ಲಗೆ ಹೇಳಿದರು :

" ನಿಮ್ಮ ಭಿಕ್ಷ ಇಲ್ಲದಿದ್ದರೂ ಇಲ್ಲ ಶಿವಾ ! ಈಗ ನಾ ಒಂದು ಮಾತು ನಿಮ್ಮನ್ನ ಕೇಳತೀನಿ : ಈ ಊರೊಳಗ ನಮ್ಮ ಸತ್ತಿಗೆರೆಯ ಅಂಬಕ್ಕಾ ಅಂತ, ಬ್ರಾಹ್ಮಣರ ಹೆಣ್ಣುಮಗಳು ಇದ್ದಾರಂತ ಶಿವಾ ! ಅವರು ಎಲ್ಲಿ ಇರತಾರಂಬೂದು ನಿಮಗೇನಾದರೂ ಗೊತ್ತೈತೇನು ಶಿವಾ ? "

ಕುತೂಹಲದಿಂದ ಸಂಜೀವರಾಯರು ಕೇಳಿದರು :

" ಸತ್ತಿಗೆರೆಯ ಅಂಬಕ್ಕನ ? ನೀವು ಸತ್ತಿಗೆರೆಯವರೇನು ? "

" ಹೌದು, ಶಿವಾ ! ನಾವೂ ಸತ್ತಿಗೆರೆಯವರು ! ನಾವು ಹುಬ್ಬಳ್ಳಿಗೆ ಹೋಗತೀನಿ–ಅಂಬೂದನ್ನ ಕೇಳಿ, ಅವರ ರೈತ ಬಂದು 'ಅಂಬಕ್ಕನವರಿಗೊಂದು ಮಾತು ಹೇಳಬೇಕು ನೀವು ! ಅವರು ಎಲ್ಲಿ ಇದ್ದರೂ ತಪಾಸ್ ಮಾಡಿ, ನೀವು ಹೇಳಲಾಕನ ಬೇಕು !' ಅಂತ ಹೇಳಿದ. ತಾವು ಬ್ರಾಹ್ಮಣರಂತ ಹೇಳಿದಿರಿ ಶಿವಾ ! ಅದಕ್ಕನ ತಮಗೇನಾದರೂ ಗೊತ್ತಿದ್ದೀತಂತ ತಮ್ಮನ್ನ ಕೇಳಿದೆ ಶಿವಾ ! "

ಸಂಜೀವರಾಯರು ಸಮಾಧಾನದ ಸ್ವರದಲ್ಲಿ ಕೇಳಿದರು :

" ಅಂದರ, ನಿಮಗ ಬೇಕಾದವರು ನಾಯಕರ ಅಂಬಕ್ಕ ಹೌದಲ್ಲೋ? "

" ಹಾಂ ಹಾಂ ! ಹೌದು, ಅವರನ ಶಿವಾ ! ರತ್ನಾಕರಪ್ಪನವರ ತಾಯಿ! " ಅಯ್ಯನವರು ಹೇಳಿದರು.

" ಅವರು ಇಲ್ಲೇ ಇದ್ದಾರ ! ಅವರು ನಮ್ಮ ತಂಗಿ ! "

" ಶಿವಾ ಶಿವಾ ! ಭಾಳ ಸಂತೋಷ ಆಯ್ತು ಶಿವಾ ! ಊರ ತುಂಬಾ ಕೇಳಿದರೂ ನಮಗ ಅವರ ಪತ್ತೆ ಸಿಕ್ಕಿದ್ದಿಲ್ಲ ಶಿವಾ ! "

ಸಂಜೀವರಾಯರ ಧ್ವನಿಯಲ್ಲಿ ಮೆಲುತನ ತುಂಬಿತು. ಕೇಳಿದರು :

“ಅವರಿಗೆ ಈಗಲೇ ಭೆಟ್ಟಿಯಾಗಬೇಕಂತೀರೇನು ಅಯ್ಯನವರ? ”

“ಭೆಟ್ಟೀ ಮಾಡಿಸಿದರ ಅನುಕೂಲ ಆಗತ್ತದ! ನಾವು ನಾಳಿನ ದಿನಾನs ಮುಂದಿನ ಊರಿಗೆ ಹೋಗತೀವಿ ಶಿವಾ! ”

“ಹಾಂಗಾದರ ಸ್ವಲ್ಪ ಒಳಗ ಬರ್ರಿ! ” ಎಂದು ಸಂಜೀವರಾಯರು, ಅಯ್ಯನವರನ್ನು ಪಡಸಾಲೆಯೊಳಗೆ ಕರೆದುಕೊಂಡು ಹೋಗಿ, ಸ್ನೇಹದಿಂದ— ಒಂದು ಹಳೆಯ ಕುರ್ಚಿಯ ಮೇಲೆ ಕೂಡಿಸಿದರು. ಬಳಿಕ ಹೇಳಿದರು:

“ನೀವು ಇಲ್ಲಿ ಸ್ವಲ್ಪ ಕೂತುಕೊಂಡಿರ್ರಿ! ಅಂಬಕ್ಕ ಒಳಗ ಏನು ಮಾಡ-ತಾಳೋ ನೋಡಿಕೊಂಡು ಕರಕೊಂಡು ಬರತೀನಿ! ”

ಅಯ್ಯನವರು ಮೆಲುನಗೆ ನಗುತ್ತ, ತಲೆಯ ಮೇಲಿನ ಮುಂಡಾಸ ತೆಗೆಯುತ್ತ ಮೆಲ್ಲಗೆ ಹೇಳಿದರು:

“ಯಾಕ ಮಾಮಾ! ನನ್ನ ಗುರುತು ಹತ್ತಲಿಲ್ಲಲs ನಿಮಗ ? ”

ಸಂಜೀವರಾಯರು ಬೆಚ್ಚಿನಿಂತು ಕೇಳಿದರು :

“ ಯಾರು ? ರತ್ನಾ........”

“ ಶ್ಯ್ ಶ್ಯ್ ! ಕೂಗಿ ಮಾತನಾಡಬೇಡಿರಿ ! ಮೊದಲ ಆ ಬಾಗಿಲಾ ಗಟ್ಟಿ-ಮುಟ್ಟಾಗಿ ಇಕ್ಕಿಕೊಂಡು ಬರ್ರಿ ! ”

ಆಶ್ಚರ್ಯದ ಭರದಲ್ಲಿಯೇ, ಅವಸರದಿಂದ ಅಡಿಯಿಡುತ್ತ ಹೋಗಿ ರಾಯರು ಬಾಗಿಲನ್ನು ಇಕ್ಕಿ, ಅಗಣಿ ಹಾಕಿ ಭದ್ರಪಡಿಸಿದರು. ಮರಳಿ ಬರು-ವುದರಲ್ಲಿಯೆ ರತ್ನಾಕರ, ಕೊರಳ ರುದ್ರಾಕ್ಷ ಮಾಲೆಗಳನ್ನು ತೆಗೆದು ಕೆಳಗಿರಿ-ಸಿದ್ದ. ಕರವಸ್ತ್ರವೊಂದರಿಂದ ಮೋರೆಯ ವಿಭೂತಿಯನ್ನು ಒರಸಿಕೊಳ್ಳುತ್ತ-ಲಿದ್ದ. ರಾಯರು ಕುತೂಹಲದ ಧ್ವನಿಯಲ್ಲಿ ಕೇಳಿದರು :

“ ಇದೇನಪಾ ! ಇದೆಲ್ಲಾ ವೇಷದ ಬದಲಾವಣಿಯಾಕ ? ”

ರತ್ನಾಕರ ನಗುತ್ತ ಹೇಳಿದ :

“ ಈ ವೇಷ ಇಲ್ಲದಿದ್ದರ, ಇಂದು ನಾ ಇಲ್ಲಿಗೆ ಬರಲಿಕ್ಕೆ ಸಾಧ್ಯವೇ ಇದ್ದಿಲ್ಲ. ನನ್ನ ಮ್ಯಾಲ ಪೋಲೀಸರ ವಾರಂಟ್ ಅದ. ಅವರ ಕಣ್ಣು ತಪ್ಪಿಸಿ ತಿರುಗಾಡಬೇಕಾದರ, ವೇಷಾ ಬದಲಿಸಲಿಕ್ಕೇ ಬೇಕಲ್ಲಾ ಮಾಮಾ ! ”

ಸಂಜೀವರಾಯರು ಮೂಗಾಣದವರಾಗಿ ಮಾತನಾಡದೆ ನಿಂತರು. ಆಗ ರತ್ನಾಕರನೇ ಕೇಳಿದ :

" ಅವ್ವ ಇಲ್ಲಿಗೇ ಬಂದಾಳಲ್ಲಾ-ಮಾಮಾ ? "

" ಹೂಂ, ಬಂದಾಳ ! ನೀ ಪತ್ರದೊಳಗ ಬರೆದಿದ್ದಿ; ಅದರಂತೆ ಇಂದು ಮುಂಜಾನೆ ನಾನೇ ಹೋಗಿ ಇಲ್ಲಿಗೆ ಆಕಿನ್ನ ಕರಕೊಂಡು ಬಂದೀನಿ ! ಇಲ್ಲೇ ಬಂದು ಇರವ್ವಾ—ಅಂತ ನಾ ಎಷ್ಟು ಹೇಳಿದರೂ ಕೇಳೂದಿಲ್ಲ ಆಕಿ ! "

ರತ್ನಾಕರ ಮಾತನೇನೂ ಆಡಲಿಲ್ಲ. ಗಂಟನ್ನು ಬಿಚ್ಚಿ ಖಾದಿಯ ಶರ್ಟೊಂದನ್ನು ಹೊರಕ್ಕೆ ತೆಗೆದ. ತನ್ನ ಮೈಮೇಲಿನ ಕಾವಿಯ ಉದ್ದಂಗಿ-ಯನ್ನು ಕಳಚಿ ಇಟ್ಟು, ಖಾದಿಯಂಗಿಯನ್ನು ತೊಟ್ಟುಕೊಳ್ಳುತ್ತಲೇ ಕೇಳಿದ :

" ನಿಮ್ಮೆಲ್ಲಾರದೂ ಊಟಗೀಟ ಆಗೇದ ಹೌದಲ್ಲೊ ? "

" ಇದೇ ಈಗ ಮುಗಿಸಿಕೊಂಡು ಹೊರಗ ಬಂದು ಕೂತಿದ್ವೆ. ನೀನು ಈವೊತ್ತು ಬರತೀನಂತ ಮಾತ್ರ ಪತ್ರದೊಳಗ ತಿಳಿಸಿದ್ದಿ. ಇಂಥಾ ವ್ಯಾಳ್ಯೇಕ್ಕ ಬರತೀನಂತೇನೂ ಬರೆದಿರಲಿಲ್ಲ. ಅಲ್ಲದೆ ನಿನ್ನೆ ವರ್ತಮಾನ ಪತ್ರ ದೊಳಗ, ನೀನು ಕಣ್ಮರೆಯಾಗಿ ಹೋಗಿರುತ್ತೀ—ಅಂತ ಸುದ್ದಿ ಬಂದsದಂತ; ಊರೊಳಗ ಜನಾ ಮಾತಾಡತಿದ್ದರು. ಅದಕ್ಕ, ನೀ ಇಂದು ಬರತೀಯೋ ಇಲ್ಲೋ ಅಂತ ಸಂಶಯನs ಇತ್ತು ನನಗ ! ಇರಲಿ, ಈಗ ನೀನು ಯಾವ ಊರಿಂದ ಬಂದಿ ? "

" ನಾನs ? ಇಂದ ಮುದ್ದಾಪುರದಿಂದ ಬಂದೆ !-ಅಂದರ ರಾಮದುರ್ಗ-ದಿಂದ ಬಂದೆ ! "

" ಹಾಂಗಾದರ, ನಡುವೆ ಊಟಾ ಎಲ್ಲಿ ಮಾಡಿದಿ ? "

" ಊಟಿಲ್ಲಾ ಉಡಿಗಿಲ್ಲಾ ! ಮುಂಜಾನೆ ರಾಮದುರ್ಗದೊಳಗ, ಒಬ್ಬ ಗೆಳೆಯರ ಮನಿಯೊಳಗ ಮಾಡಿದ ಫರಾಳ ಎಷ್ಟೋ ಅಷ್ಟೆ ! ಹಾದಿಯೊಳಗ ತಿನ್ನಲಿಕ್ಕಂತ ಏನೋ ಸ್ವಲ್ಪ ಆತ ಕಟ್ಟಿಸಿಕೊಟ್ಟಾನ ಖರೆ; ಆದರ ಅದನ್ನ ಬಿಚ್ಚಿ ತಿನ್ನಲಿಕ್ಕೆ, ನಾನು ಹಾಕಿದ ವೇಷ ಅವಕಾಶವನ್ನೇ ಒದಗಿಸಿಕೊಡಲಿಲ್ಲ. ಧಾರವಾಡದೊಳಗ ಬಸ್ಸು ಇಳಿದ ಕೂಡಲೇನs ಪೋಲೀಸರ ಕೈಯೊಳಗಿಂದ ದಾಟಿಕೊಂಡು, ಹುಬ್ಬಳ್ಳಿಯ ಬಸ್‌ಸ್ಟ್ಯಾಂಡಿಗೆ ಬಂದೆ. ಅಲ್ಲಿ ಬಸ್ಸು ಹಿಡಿದು, ಎದೆಗುದಿಯಿಂದಲೇ ಇಲ್ಲಿಗೆ ಹೊರಟುಬಂದೆ. ನಾನು ಹಾಕಿಕೊಂಡ ವೇಷ ಇಲ್ಲಿಯವರೆಗಂತೂ ಸುಸೂತ್ರವಾಗಿ ನನ್ನ ತಂದು ಮುಟ್ಟಿಸಿತು........"

ಎಂದು ಹೇಳುತ್ತಿರುವಾಗಲೇ ಸುಭದ್ರೆ ಒಳಬಾಗಿಲಲ್ಲಿಯೇ ನಿಂತು ಕೇಳಿದಳು :

" ಯಾರು ಬಂದಾರೋ ಅಣ್ಣಾ ? ಯಾರ ಕೂಡಾ ಮಾತಾಡಲಿಕ್ಕೆ ಹತ್ತೀದಿ ?"

ಸಂಜೀವರಾಯರು ಸಂಭ್ರಮದ ಸ್ವರದಲ್ಲಿ ಹೇಳಿದರು :

" ಯಾರು ಬಂದಾರ ನೋಡು ಬಾ ಇಲ್ಲೆ ! "

ಸುಭದ್ರೆ ಆತುರದಿಂದ ಹೊರಗೆ ಬಂದು ನೋಡಿದಳು. ರತ್ನಾಕರ ಮೆಲುನಗೆ ನಗುತ್ತ ಅವಳ ಕಡೆಗೆ ನೋಡಿ ಹೇಳಿದ :

" ಯಾರು ಬಂದಾರಂಬೂದು ಗೊತ್ತು ಆದ್ಹಾಂಗ ಆಯ್ತೇನು ಸುಭದ್ರಾ ?"

ಸುಭದ್ರೆಯು ಮನಸ್ಸನ್ನು ನಾಚಿಕೆ ಆವರಿಸಿತ್ತಾದರೂ, ರತ್ನಾಕರನನ್ನು ನೆಟ್ಟದಿಟ್ಟಿಯಿಂದ ನೋಡುತ್ತ, ಮುಖದಲ್ಲಿ ಮೆಲುನಗೆಯನ್ನು ಹರಿಸುತ್ತಿದ್ದಳು.

ಸುಭದ್ರೆಯೀಗ ಬೆಳೆದ ಹೆಣ್ಣು. ಇಷ್ಟರಲ್ಲಿಯೆ ಮದುವೆಯಾಗಿ ಎರಡು-ಮೂರು ವರ್ಷಗಳಾಗಬೇಕಾಗಿದ್ದಿತು — ಎನಿಸುವಂತಹ ಬೆಳೆವಣಿಗೆ ಅವಳದು. ಸಾಮಾನ್ಯ ವರಗಳು ಸುಭದ್ರೆಯನ್ನು ನೋಡಿದರೆ, ಮುಖವನ್ನು ಮುದುರಿಸುವಂತಹ ರೂಪವೇನೂ ಅಲ್ಲ. ನಿಲುವಿಕೆ–ಮೈ ಮಾಟಗಳೂ, ಹೆಣ್ಣು ಹುಚ್ಚಿನ ಗಂಡುಗಳನ್ನು ನಿಂತುನೋಡಲು ಹಚ್ಚುವಂತಹವೆ! ಸುಭದ್ರೆಯ ಮೌನವನ್ನು ಕಂಡು ರತ್ನಾಕರ ಮತ್ತೆ ಕೇಳಿದ :

" ಯಾಕ ? ನನ್ನ ಗುರುತು ನಿನಗ ಹತ್ತಲೇ ಇಲ್ಲೇನು ? ಹೀಂಗ್ಯಾಕ ಹುಳು ಹುಳು ನೋಡತಽ ನಿಂತೀದಿ ?"

ಆತುರ-ಸಂಭ್ರಮಭಾವಗಳು ಮುಖದಲ್ಲಿ ಮೂಡುತ್ತಿರುವಾಗಲೇ ಸುಭದ್ರಾ ದ್ರುತಗತಿಯಿಂದ ಒಳಗೆ ನಡೆದಳು. ನಡುಮನೆಯನ್ನು ಸೇರಿದೊಡನೆಯೇ " ಅತ್ಯಾ ! ಅತ್ಯಾ ! ಹೊರಗ ಯಾರು ಬಂದಾರ ನೋಡಬಾ !" ಎಂದು ಸುಭದ್ರೆ ಕರೆದ ಕೂಗು ಕೇಳಿಸಿತು.

ಸಂಜೀವರಾಯರು ಹೇಳಲು ತೊಡಗಿದರು :

"ನೋಡಿದಿಯಾ ರತ್ನಾಕರ, ಸುಭದ್ರಾನ ಸಂಭ್ರಮ! ನೀ ಅಂದರ ಆಕಿಗೆ ಬಹಳ ಸಂತೋಷ ! ಮೊದಮೊದಲ ಅತ್ಯಾನ ಮನಿಗೆ ಹೋಗು—ಅಂತ

ಎಷ್ಟು ಬೈದರೂ ಹೋಗತಿದ್ದಿಲ್ಲ ಈಗ ಅತ್ತ್ಯಾನ ಮನೀ ಅಂದರೆ ತೀರಿ ಹೋಯ್ತು; ಹಗಲು ಹನ್ನೆರಡು ತಾಸೂ ಅಲ್ಲೇ ಇರತಾಳ! ಮತ್ತ ಅಂಬಕ್ಕನೂ ಸುಭದ್ರಾನ್ನ ಬಹಾಳ ಹಚ್ಚಿಕೊಂಡಾಳ. ಈ ಅತ್ತೀ ಸೊಸೀ ಪ್ರೀತಿ ಎಲ್ಲಿಗೆ ಒಯ್ದು ಮುಟ್ಟಿಸತದೋ ನೋಡಬೇಕು!"

ಎಂದು ರಾಯರು ಆಶೆಯ ಧ್ವನಿಯಲ್ಲಿ ಹೇಳುತ್ತಿರುವಾಗಲೇ, ಅಂಬಕ್ಕ ಅರಿವು ಇಲ್ಲದವರಂತೆ ಅವಸರದ ಹೆಜ್ಜೆ ಹಾಕುತ್ತ ಪಡಸಾಲೆಗೆ ಬಂದರು. ಎದೆಯ ದುಃಖ ಗಂಟಲಕ್ಕೆ ಏರಿಬಂದಿದ್ದಿತು. ಕಣ್ಣಲ್ಲಿ ನೀರು ಮುಖವಿಕ್ಕು-ವುದರಲ್ಲಿತ್ತು. ಬಂದವರೇ ಆತುರದೃಷ್ಟಿಗಳಿಂದ ರತ್ನಾಕರನನ್ನು ನೋಡಲು ತೊಡಗಿದರು. ಬಾಯಿಂದ ಮಾತುಗಳೇ ಹೊರಡಲೊಲ್ಲವು.

ರತ್ನಾಕರ ತಟ್ಟನೆ ಎದ್ದು ತಾಯಿಯ ಪಾದಗಳಿಗೆ ನಮಸ್ಕಾರ ಮಾಡಿದ. ಅಂಬಕ್ಕ ಅವನನ್ನು ಪ್ರೀತಿಯಿಂದ ಹಿಡಿದೆತ್ತಿ, ವಾತ್ಸಲ್ಯದಿಂದ ಮೈಮೇಲೆ ಕೈಯಾಡಿಸುತ್ತ, ಕಂಪಿಸುವ ಕಂಠದಿಂದ ಕೇಳಿದರು :

" ಯಾವಾಗ ಬಂದೆ ರತ್ನಾ? ಯಾವ ಊರಿಂದ ಬಂದೆ?"

ರತ್ನಾಕರ ಮಾತನಾಡಬೇಕೆನ್ನುವುದರಲ್ಲಿಯೆ ಸಂಜೀವರಾಯರು ಹೇಳಿದರು :

" ಆತ ದೂರದ ಪ್ರವಾಸ ಮಾಡಿ ಬಂದಾನ ಅಂಬಕ್ಕಾ! ಬೆಳಗಿನಿಂದ ಅವನ ಊಟಽ ಆಗಿಲ್ಲ; ಮೊದಲ ಅವನ ಊಟ ಆಗಲಿ! ಆ ಮ್ಯಾಲ ಎಲ್ಲಾ ಸುಖ-ದುಃಖದ ಮಾತುಗಳನ್ನ ಆಡೂಣಂತ!"

ಅಂಬಕ್ಕನ ಕುದಿದ ಕರುಳು ನಿಟ್ಟುಸಿರಿನೊಂದಿಗೆ ನೋವನ್ನು ಹೊರಗೆ ಹಾಕಿತು :

" ಅಯ್ಯೋ, ದೇವರಽ! ಊಟ ಆಗೇ ಇಲ್ಲಽ? ಇಡೀ ದಿನಾ ನಿರಾಹಾಗ ಏನು ಹಾಂಗಾದರ!"

ರತ್ನಾಕರ ಸಮಾಧಾನಗೊಳಿಸುವ ಸ್ವರದಲ್ಲಿ ಹೇಳಿದ :

"ಹಾಂಗೇನು ಆಗಿಲ್ಲೇಳ್ಽ ಅವ್ವಾ! ಎರಡು ಮೂರು ದಿನಾ ರಂಗಣ್ಣನ ಮನಿಯೊಳಗ ಹೊಟ್ಟಿ ಬಿರಿಯುವ ತನಕ ತಿಂದು ತಿಂದು ಅಜೀರ್ಣ ಆದ ಪ್ರಕೃತಿ ಸರಿಪಡಿಸಿಕೊಳ್ಳಲಿಕ್ಕೆ, ಒಂದು ದಿನದ ಉಪವಾಸವೇ ನನಗ ಬೇಕಾಗಿತ್ತು! ಆದರೂ ನಾ ಒಲ್ಲೆನಂದರೂ ಕೇಳಲಿಲ್ಲ: ರಾಮದುರ್ಗದೊಳಗ ನನ್ನ ಪರಿಚಿತ-

ರೊಬ್ಬರು, ಹೊಟ್ಟೆತುಂಬಾ ಉಪಾಹಾರ ತಿನಿಸೇ ಕಳಿಸ್ಯಾರ!"

ತಾಯಿ ದೈನ್ಯಧ್ವನಿಯಲ್ಲಿ ಕೇಳಿದರು :

"ಹಾಂಗಾದರ ನೀನು ಮುಪ್ಪಾಪುರಕ್ಕ ಹೋಗಿದ್ದಿಯೇನು ? ವರ್ತಮಾನ ಪತ್ರದೊಳಗ ನೀನು ಎಲ್ಲಿಯೋ ಓಡಿ ಹೋಗೀದೀ-ಅಂಬೂ ವರ್ತಮಾನ ಛಾಪಿಸಿಬಂದ್ದದಂತ! ಅದನ್ನ ಕೇಳಿದಾಗಿನಿಂದ ನೋಡು ರತ್ನಾಕರಾ...." ಒಮ್ಮೆಲೆ ಅಂಬಕ್ಕನ ದುಃಖ ಉಕ್ಕೇರಿ ಬಂದಿತು. ಕಂಬನಿಗಳು ಹರಿಯ ತೊಡಗಿದುವು. ತಾಯಿಯ ಈ ಕರುಣಾಪರಿಸ್ಥಿತಿಯನ್ನು ಕಂಡು, ರತ್ನಾಕರನ ಹೃದಯವೂ ಕರಗಿಹೋಯಿತು. ಭಾವನೆಯ ಆವೇಶದಲ್ಲಿ ಮಾತುಗಳೇ ಹೊರಡಲೊಲ್ಲುವು.

ಸಂಜೀವರಾಯರು ಹೇಳಿದರು :

"ನಾ ಹೇಳುವ ಮಾತು ಕೇಳು ಅಂಬಕ್ಕಾ! ರತ್ನಾಕರ ಹಸಿದು ಬಂದಾನ. ಮೊದಲು ಅವನ ಹೊಟ್ಟೆಯೊಳಗ ತುತ್ತು ಅನ್ನ ಬೀಳುವಂತೆ ವ್ಯವಸ್ಥಾ ಮಾಡ್ರಿ !"

ಅಂಬಕ್ಕ ಜಡವಾದ ಅಡಿಗಳನ್ನು ಎತ್ತಿ ಎತ್ತಿ ಇಡುತ್ತ, ಮತ್ತೆ ಮತ್ತೆ ರತ್ನಾಕರನನ್ನು ನೋಡುತ್ತ ಒಳಗೆ ನಡೆದು ಬಿಟ್ಟರು. ರತ್ನಾಕರ ಕೆಲವು ಕಾಲ ಮೌನಿಯಾಗಿ ಸುಮ್ಮನೆ ಕುಳಿತುಕೊಂಡಿದ್ದ.

## ೨೪ನೆಯ ಪರಿಚ್ಛೇದ

ರತ್ನಾಕರನು ನಮಸ್ಕಾರ ಮಾಡಿದಾಗ, ಸಂಜೀವರಾಯರ ಹೆಂಡತಿ—ರಮಾಬಾಯಿಯವರು, ಸಾಂಪ್ರದಾಯಿಕ ಆಶೀರ್ವಾದದ ಮಾತುಗಳನ್ನು ಬಾಯಿಂದ ಗುಣ-ಗುಣಿಸಿದುದೆಷ್ಟೋ ಅಷ್ಟೇ; ಹೆಚ್ಚಿಗೆ ಮಾತುಗಳನ್ನೇನೂ ಆಡಲಿಲ್ಲ. ಆದರೂ ರತ್ನಾಕರನಿಗಾಗಿ ಅವಸರದಿಂದ ಅಡಿಗೆ ಮಾಡಬೇಕೆನ್ನುವುದರಲ್ಲಿ ಅವರು ಕಡಿಮೆ ಆಸಕ್ತಿಯನ್ನೇನೂ ತೋರಿಸಲಿಲ್ಲ. ಇದ್ದುದರಲ್ಲಿಯೆ ಅಚ್ಚುಕಟ್ಟಾಗಿ ಅಡಿಗೆ ಮಾಡಿದರು. ಪ್ರಯಾಣದಿಂದ ದಣಿದು ಬಂದ ರತ್ನಾಕರ, ಬಿಸನೀರಿನಿಂದ ಸ್ನಾನಮಾಡಿ ಊಟಕ್ಕೆ ಕುಳಿತ. ಸಂಜೀವರಾಯರು ಹೊರಪಡಸಾಲೆಯಲ್ಲಿ ಕುಳಿತು, ಮನೆಗೆ ತಂದಿದ್ದ ಆಫೀಸಿನ ಲೆಕ್ಕಾಚಾರದ

ಪುಸ್ತಕ-ಕಾಗದಗಳನ್ನು ನೋಡುತ್ತಲಿದ್ದರು  ತಾಯಿ ರತ್ನಾಕರನ ಎದುರು ಗೋಡೆಗೆ—ವಿಷಾದಾಸನದಲ್ಲಿ-ಕುಳಿತುಕೊಂಡಿದ್ದರು. ರಮಾಬಾಯಿ ಊಟಕ್ಕೆ ಬಡಿಸುತ್ತಿದ್ದರು. ಸುಭದ್ರೆ ಅಲ್ಲಿಯೆ ಒಂದು ಗೋಡೆಗೆ ಹೊಂದಿ, ನಾಚಿಕೆಯ ನಿಲುವಿನಲ್ಲಿ ನಿಂತುಕೊಂಡು, ರತ್ನಾಕರನಲ್ಲಿಯೇ ತನ್ನ ನೋಟಗಳನ್ನು ನೆಲೆಗೊಳಿಸಿದ್ದಳು. ಮಾತುಗಳನ್ನು ಹೆಚ್ಚಾಗಿ ಆಡದಿದ್ದರೂ, ರಮಾಬಾಯಿ ರತ್ನಾಕರನಿಗೆ ಊಟಕ್ಕೆ ಬಡಿಸುವ ರೀತಿಯಲ್ಲಿ ಪ್ರೀತಿ-ಆದರಗಳು ತುಂಬಿ-ಕೊಂಡುದು, ಯಾರಿಗೂ ಸ್ಪಷ್ಟವಾಗಿ ಕಾಣುವಂತಿದ್ದಿತು.

ತಾನು ಮುದ್ದಾಪುರದಲ್ಲಿ ಉಂಡಿದ್ದ ನಿನ್ನೆ-ಮೊನ್ನೆಯ ಹಳ್ಳಿಯ ಊಟಕ್ಕೂ, ಇಂದು ಇಲ್ಲಿ ಉಣ್ಣುತ್ತಿರುವ ಪಟ್ಟಣದ ಊಟಕ್ಕೂ ತುಂಬ ವ್ಯತ್ಯಾಸವಿದ್ದುದು ಎದ್ದುಕಂಡಿತು ಮುದ್ದಾಪುರದಲ್ಲಿಯಂತಹ ಬೆಣ್ಣೆ ತುಪ್ಪ ಕೆನೆಮೊಸರುಗಳು ಹುಬ್ಬಳ್ಳಿಯಲ್ಲಿ ಹೇಗೆ ಸಿಕ್ಕಬೇಕು? ಹಳ್ಳಿಯ ಎಮ್ಮೆ-ಆಕಳುಗಳು ಹಿಂಡುವುದು ಹಾಲನ್ನು; ಪಟ್ಟಣದ ಗೌಳಿಗರು ಕೊಡು-ತ್ತಿರುವುದು ಹಾಲೆಂಬ ಹೆಸರಿನ ನೀರನ್ನು. ಊಟದಲ್ಲಿ ಹೈನದ ಬೆಲೆ ಎಂತಹ-ದೆಂಬುದರ ಹೊಸ ಅನುಭವ ಇಂದು ರತ್ನಾಕರನಿಗಾಯಿತು. ಇಂತಹ ಊಟ-ವನ್ನುಂಡು ಬದುಕುವ ಪಟ್ಟಣಿಗರಲ್ಲಿ ಪ್ರಾಕೃತಿಕ ಶಕ್ತಿಯಾದರೂ ಹೇಗೆ ಉಳಿದೀತು ?— ಎಂಬ ಯೋಚನೆಯೂ ಅವನ ತಲೆಯಲ್ಲಿ ಸುಳಿದಾಡಿತು. ಯೋಚಿಸುತ್ತಲೇ ಅವನು ಊಟಮಾಡುತ್ತಲಿದ್ದ. ಆಗ ರಮಾಬಾಯಿ ನುಡಿದರು :

"ಇನ್ನೊಂದು ಚಪಾತೀ ಹಾಕತೀನಿ ನಿನಗ!"

ಯೋಚನೆಯಿಂದ ಹೊರಬಿದ್ದವನಾಗಿ ರತ್ನಾಕರ ಕೇಳಿದ :

"ಏನಂದಿರೀ ಮಾಮಿ ?"

"ಇನ್ನೊಂದು ಚಪಾತೀ ಹಾಕತೀನಿ—ಅಂದೆ!"

"ಬೇಬೇ! ಹೊಟ್ಟೆತುಂಬಿತು. ಇನ್ನೇನೂ ಬೇಕಾಗಿಲ್ಲ. ಇಲ್ಲಿಯ ತುಪ್ಪಾ ತಿನ್ನುವಾಗ, ನಿನ್ನೆ ನಾನು ಮುದ್ದಾಪುರದೊಳಗ ತಿಂದ ತುಪ್ಪ ನೆನಪಿಗೆ ಬಂತು. ಎಂಥಾ ತಾಜಾ ತುಪ್ಪ ಅಂತೀರಿ ಮಾಮಿ! ನಾಕುದಿನಾ ಅಂಥಾ ತುಪ್ಪಾ ತಿನ್ನುವವರು, ಈ ಹುಬ್ಬಳ್ಳಿಯ ಕೊಳಕು ಬೆಣ್ಣೆಯ ತುಪ್ಪಾ ಮುಂದ ತಂದರ ವಾಕರಿಸಿಕೋ ಬಹುದು ನೋಡ್ರಿ!"

“ ಅಂಥಾ ತುಪ್ಪ ನಮಗಿಲ್ಲಿ ಎಲ್ಲಿ ಸಿಗಬೇಕಪ್ಪಾ ! ಸುಡುಗಾಡು ಬಡತನದ ಸಂಸಾರ ಬ್ಯಾರೆ ! ಮನಿತುಂಬ ಮಕ್ಕಳು ! ಒಂದು ದುಡ್ಡು ಅಗ್ಗ ಅಂತ ತಂದರ, ನಮಗ ಸಿಗೂದು ಕೊಳಕು ಬೆಣ್ಣೀನs ಸರಿ ! ನಮ್ಮ ಹುಡು-ಗರಿಗೆಲ್ಲಾ ಇದೇ ವಾಸನೀನs ಒಗ್ಗಿ ಹೋಗೇದ ನೋಡು ! ನೀನು ಇಂದ ಮುದ್ದಾಪುರದಿಂದ ಬಂದಿಯೇನು ? ”

“ ಹೌದು ! ” ರತ್ನಾಕರ ಒಂದೇ ಶಬ್ದದ ಉತ್ತರ ಕೊಟ್ಟ.

“ ಅದೇನು ? ಮುದ್ದಾಪುರಕ್ಕ ಈಗ ಹೋದದ್ದು ? ಅಲ್ಲೇನಾದರೂ ನಿಮ್ಮ ಕಾಂಗ್ರೆಸಿನ ಕೆಲಸ ಇತ್ತೇನು ? ”

“ಕಾಂಗ್ರೆಸಿನ ಕೆಲಸೇನೂ ಇರಲಿಲ್ಲ. ಬ್ಯಾರೇ ಕೆಲಸಿತ್ತಂತ ಹೋಗಿದ್ದೆ.”

ತಗ್ಗಿದ ಧ್ವನಿಯಲ್ಲಿಯೆ ತಾಯಿ ಕೇಳಿದರು :

“ ರಂಗಣ್ಣ ಆರಾಮಾಗಿ ಇದ್ದಾನs ? ”

“ ಓಹೋ, ಆರಾಮಾಗಿ ಇದ್ದಾನ ! ”

ತಾಯಿ ನಿಟ್ಟುಸಿರು ಬಿಟ್ಟು ನುಡಿದರು :

“ ನೀವೇನಪಾ ಗಂಡಸು ಮಕ್ಕಳು ! ಎಲ್ಲಿ ಇದ್ದರೂ ಹ್ಯಾಂಗ ಇದ್ದರೂ ಆರಾಮು ಅಂತ ತಿಳಕೊಂಡು ಇದ್ದುಬಿಡತೀರಿ ! ಇರುವ ಅಸಮಾಧಾನ—ಚಿಂತಿ—ದುಃಖ ಇವೆಲ್ಲಾ ನಮ್ಮಂಥಾ ಹೆಂಗಸರ ಪಾಲಿಗೇ ಇರತಾವ”

ರತ್ನಾಕರ ನಗುತ್ತ ನಗುತ್ತಲೆ ಹೇಳಿದ :

“ ನಮ್ಮ ಪಾಲಿಗೂ ಅಷ್ಟು ಕೊಡ್ರೆಲಾ, ನಾವೆಲ್ಲೆ ಬ್ಯಾಡಂತೀವಿ ? ”

ತಾಯಿ ನುಡಿದರು :

“ಉಹುಂ, ಅವನ್ನ ಕೊಡಲಿಕ್ಕೆ ಬರೂದಿಲ್ಲ; ನೀವs ತಿಳಕೊಂಡು ಅವನ್ನ ತೊಗೋಬೇಕಾಗತsದ ! ”

ತಾಯಿಯ ಅಭಿಪ್ರಾಯವನ್ನು ಗ್ರಹಿಸಿದ ರತ್ನಾಕರ ಮಾತನಾಡಿದ :

“ ಪ್ರಸಂಗ ಬಂದಾಗ ತೊಗೊಂಡs ತೊಗೊಳ್ಳತಾರ ! ಆದರ ಹೆಂಗ-ಸರು ಇದನ್ನೂ ತಿಳಕೊಂಡಿರಬೇಕು ಅವ್ವಾ ! ಗಂಡಸರನ್ನ ಕಾಡುವ ಅಸಮಾ-ಧಾನ, ದುಃಖ, ಚಿಂತಿಗಳೂ ಅನೇಕ ಇರತಾವ. ಅವನ್ನ ಕಡಿಮಿ ಮಾಡಿ-ಕೊಂಡು ತಲಿ ಹಗುರು ಮಾಡಿಕೊಂಡ ಮ್ಯಾಲ, ಇನ್ನೊಬ್ಬರ ಭಾರ ಇಳಿಸ-ಲಿಕ್ಕೆ ಸಾಧ್ಯ ಆಗತsದ ! ”

ತಾಯಿ ಕಳೆಗುಂದಿದ ಮೊಗವನ್ನು ಅಂಗೈಯ ಮೇಲೆ ಚೆಲ್ಲಿ ಸುಮ್ಮಗೆ ಕುಳಿತುಕೊಂಡರು. ಆಗ ರಮಾಬಾಯಿ ಕೇಳಿದರು :

" ರಂಗಣ್ಣ ಅಂದರ...ಅವರ ಮದಿವಿ ಆಗೇದೇನು ರತ್ನಾಕರ ? "

"ಇನ್ನೂ ಆಗಿಲ್ಲ; ಬೇಗನೆ ಆದೀತು. ಅದಕ್ಕಾಗಿ ಮಾತುಕಥಿ ನಡೆದsದ!"

ತಾಯಿ ಕುತೂಹಲ ಸ್ವರದಲ್ಲಿ ಕೇಳಿದರು :

" ಮಾತು-ಕಥೀ ನಡಿದsದ ? ರಂಗಣ್ಣ ಮದಿವೀ ಮಾಡಿಕೊಳ್ಳಲಿಕ್ಕೆ ಒಪ್ಪಿದನ ? ಹುಡುಗಿ ಎಲ್ಲಿಯವಳು? ವರದಕ್ಷಿಣಿ—ವರೋಪಚಾರ ಎಷ್ಟು ?"

ತಾಯಿಯ ಆತುರವನ್ನು ಕಂಡು ರತ್ನಾಕರನಿಗೆ ನಗೆ ಬಾರದಿರಲಿಲ್ಲ. ಮೆಲುನಗೆ ನಗುತ್ತ ಹೇಳಲು ತೊಡಗಿದ ;

" ರಂಗಣ್ಣಾನ್ನ ಮದಿವಿಗೆ ಒಪ್ಪಿಸ ಬೇಕಾದರ ನನಗ ಸಾಕುಬೇಕಾಗಿ ಹೋಯ್ತು. ಏನೋ, ಒಪ್ಪಿಗೀ ಕೊಟ್ಟಾನ. ಹುಡುಗಿ ಧಾರವಾಡದ್ದೇ. ಸಿರಿವಂತರ ಹುಡುಗಿಯೇನೂ ಅಲ್ಲ ! "

ರಮಾಬಾಯಿ ಕಡೆಯ ಅನ್ನ ಹಾಕುತ್ತ ಆಶೆಯ ಧ್ವನಿಯಲ್ಲಿ ಕೇಳಿದರು:

" ಮಂದಿನ್ನೆಲ್ಲಾ ಮದಿವಿಗೆ ಒಪ್ಪಿಸುವ ಜಾಣತನ ನಿನ್ನೊಳಗ ಅದ ರತ್ನಾಕರ ! ನಮ್ಮ ಸುಭದ್ರಾನ್ನ ಅಷ್ಟು ಒಪ್ಪಿಸಿ ಬಿಡಪ್ಪಾ, ನಿನಗ ಪುಣ್ಯ ಬರತsದ ! "

ಅಲ್ಲಿಯೇ ನಿಂತಿದ್ದ ಸುಭದ್ರೆಯ ತಲೆ ನಾಚಿಕೆಯಿಂದ ಕೆಳಗೆ ಬಾಗಿತು. ರತ್ನಾಕರನ ತಾಯಿ ತಮ್ಮ ಸ್ನೇಹದೃಷ್ಟಿಗಳನ್ನು ಸುಭದ್ರೆಯ ಕಡೆಗೆ ತಿರುಗಿಸಿ-ದರು. ಅವಳನ್ನೊಮ್ಮೆ ಕಣ್ತುಂಬ ನೋಡಿ ಆ ಮೇಲೆ ರತ್ನಾಕರನತ್ತ ತಮ್ಮ ನೋಟಗಳನ್ನು ಹೊರಳಿಸಿದರು. ರತ್ನಾಕರ ರಮಾಬಾಯಿಯವರನ್ನು ಕುರಿತು ಹೇಳಿದ :

" ನೀವೇನೂ ಕಾಳಜೀ ಮಾಡಬ್ಯಾಡ್ರಿ ಮಾಮಿ ! ಸುಭದ್ರಾನ ಮದಿವೀ ಹೋಳಿಗೀ ಈ ಸಲ ಹೊಡೆದೇ ಬಿಡ್ರಿ ! ಅದಕ್ಕs ನಾನು ಇಲ್ಲಿಗೆ ಹೊರಟು ಬಂದದ್ದು ! "

ಅಡಿಗೆ ಮನೆಯಲ್ಲಿ ಒಮ್ಮೆಲೆ ಸಂಭ್ರಮದ ಸುಗ್ಗಿ ಆಟವಾಡಿತು. ತಾಯಿ ತಮ್ಮ ವಿಷಾದಾಸನವನ್ನು ಬಿಟ್ಟು, ಉತ್ಸಾಹಗೊಂಡು ಸೆಡೆದು ಕುಳಿತರು. ಸುಭದ್ರೆಯ ಹೃದಯದ ಹಿಗ್ಗು ನಗೆಮುಗಳಾಗಿ ನಾಚಿಕೆಯೊಂದಿಗೆ ಮುಖ-

ದಲ್ಲಿ ನಾಟ್ಯವಾಡಿತು. ಕೃತಜ್ಞತೆ ತುಂಬಿದ ಅವಳ ಕಣ್ಣನೋಟ, ಎರಡು ಮೂರು ಸಲ ರತ್ನಾಕರನ ಮುಖವನ್ನು ನೋಡಿದುವು. ರಮಾಬಾಯಿಗೆ ತಾವೆಲ್ಲಿ ಇದ್ದೇವೆ—ಏನು ಮಾಡುತ್ತಲಿದ್ದೇವೆ—ಎಂಬುದು ಮರೆತೇ ಹೋದಂತಾಯಿತು. ರತ್ನಾಕರ ತನ್ನ ಸಹಜ ಧ್ವನಿಯಲ್ಲಿ ಹೇಳಿದ :

"ಮೊಸರೂ ಹಾಲೂ ಹಾಕರಿ ಮಾಮಿಾ ಇನ್ನ ! ಅನ್ನದ ಬಿಸಿ ಆರೇದ !"

ತಟ್ಟನೆ ಎಚ್ಚರು ಬಂದಂತಾಗಿ ರಮಾಬಾಯಿ ಹೇಳಿದರು ;

"ಸುಭದ್ರಾ, ಮೊಸರು ಹಾಲು ಹಾಕಬೇಕಿಲ್ಲೊ ! ಸುಮ್ಮನ್ಯಾಕ ನಿಂತು-ಕೊಂಡಿದಿಯಾಕ ?"

ಸುಭದ್ರಾ ಮದುವಣಿಗಿತ್ತಿಯ ಲಜ್ಜಾಭಾವದಿಂದಲೆ ಮೆಲ್ಲಗೆ ನಡೆದು-ಬಂದು, ಹುಳಿಹುಳಿ ನಾರುವ ಮಜ್ಜಿಗೆಯನ್ನೂ ಹಾಲೆಂಬ ಬಿಳಿಯ ನೀರನ್ನೂ ಬಡಿಸಿದಳು. ರತ್ನಾಕರ ಕಲಸಿ ಉಣ್ಣಲು ತೊಡಗಿದ. ಉಣ್ಣುತ್ತಿರುವಾಗಲೇ ರಮಾಬಾಯಿಯನ್ನು ಕೇಳಿದ :

"ಈಗ ಸುಭದ್ರೆಯನ್ನ ನೋಡಿ ಒಪ್ಪಿಕೊಂಡವರು ಯಾವ ಊರವರು ?" ತಗ್ಗಿದ ಧ್ವನಿಯಲ್ಲಿಯೆ ರಮಾಬಾಯಿ ಹೇಳಿದರು;

" ಮುಂಡರಗಿಯವರು. ಒಳ್ಳೇ ಮನಿತನ; ಹೊಲ-ಮನಿ, ದುಡ್ಡು-ದುಗ್ಗಾಣಿ ಇದ್ದವರು. ಸುಭದ್ರಿ ಆ ಮನಿಗೆ ಬಿದ್ದರ ಒಳ್ಳೆದಾಗತ್ತದ ಖರೆ ! ಆದರ ಆಕೀ ದೈವದೊಳಗ ಏನದನೋ ಯಾರು ಬಲ್ಲರು !"

ರತ್ನಾಕರ ಆತುರಧ್ವನಿಯಲ್ಲಿ ಕೇಳಿದ :

" ಮುಂಡರಗಿಯವರಂದಿರೀ ಮಾಮಿಾ? ಅಲ್ಲಿ ಯಾರ ಮನಿತನ? ವರನ ಹೆಸರೇನು ?"

" ಕೊರ್ಲಹಳ್ಳಿಯವರ ಮನಿತನ ಅಂತ ! ವರನ ತಂದಿಯ ಹೆಸರು ಸುಬ್ಬರಾಯರು ! ವರನ ಹೆಸರು ಏನ್ರೇ ಅತಿಗೀ! ಹುಂ, ಗೋಪೀನಾಥ ರಾಯರು !"

" ಓ ! ಗೋಪೀನಾಥರಾಯರು ! ಹುಂ, ಹುಂ, ನಮ್ಮ ಗೋಪೀನಾಥ ! ಆತ ಬಂದು ಸುಭದ್ರಾನ್ನ ನೋಡಿ ಹೋಗ್ಯಾನೇನು ?"

" ಊಹುಂ ! ಇನ್ನೂ ನೋಡಿಲ್ಲ ! ಇಷ್ಟರೊಳಗs ಬಂದು ನೋಡಿ ಹೋಗಬಹುದಾಗಿತ್ತು ! ಆದರ ಸುಭದ್ರಾನ ಹಟದ ಸಲುವಾಗಿ, ಏನೇನೋ

ನೆವಾ ಹೇಳಿ ಇವರಽ ಅವರನ್ನ ತಡೆದು ನಿಲ್ಲಿಸ್ಯಾರ! ತಾಯಿಗಾ-ತಂದಿ-ಯಂತೂ ನೋಡಿ, ಹುಡುಗಿನ್ನ ಪಾಸ್ ಮಾಡ್ಯಾರ! ನೀನು ಆ ವರನ್ನ ನೋಡೀದಿಯೇನು ?"

"ಒಹೋ! ನೋಡೂದಷ್ಟಽ ಯಾಕ! ಒಂದೇ ಕಡೆ ಕೂಡಿ ಇದ್ದೀವಿ. ಹುಡುಗ ಚೆಲೋ ಇದ್ದಾನ. ಮ್ಯಾಟ್ರಿಕ್ ಪಾಸಾಗಿ ಒಂದು ವರ್ಷ ಕಾಲೇಜಿ-ನೊಳಗೂ ಇದ್ದುಬಂದಾನ. ನೋಡಲಿಕ್ಕೂ ಸುಂದರ ಇದ್ದಾನ. ಸರಳ ಸ್ವಭಾವದ ಮನುಷ್ಯ! ಉಂಡುಕೊಂಡು ಸುಖದಿಂದ ಇರಲಿಕ್ಕೆ ಬರುವಷ್ಟು ಆಸ್ತಿ ಅದ. ಆತ ನೋಡಿ ಮಾಡಿಕೊಳ್ಳಲಿಕ್ಕೆ ಒಪ್ಪಿದರ, ಸುಭದ್ರಾನ ಹೋಳಿಗಿ ತುಪ್ಪದೊಳಗ ಬಿದ್ಹಾಂಗಽ ಸರಿ!"

ರಮಾಬಾಯಿಯ ಮುಖ ಸಂತೋಷದಿಂದ ಅರಳಿತು. ಸುಭದ್ರೆಯ ಮುಖ ದುಗುಡದಿಂದ ಕಳೆಗುಂದಿತು. ಉದಾಸೀನಭಾವದ ಅಂಬಕ, ಅತ್ತೊಮ್ಮೆ ಇತ್ತೊಮ್ಮೆ ನೋಡುತ್ತ ಸುಮ್ಮಗೆ ಕುಳಿತುಬಿಟ್ಟರು. ರತ್ನಾಕರ ಊಟವನ್ನು ಮುಗಿಸಿ ಎದ್ದು ಕೈ ತೊಳೆದುಕೊಳ್ಳಲು ಹೋದ. ತಿರುಗಿ ಬರುವಷ್ಟರಲ್ಲಿ ಅಡಿಗೆ ಮನೆಯಲ್ಲಿ ಸುಭದ್ರೆಯೂ ಇರಲಿಲ್ಲ; ತಾಯಿಯೂ ಇರಲಿಲ್ಲ. ಕೈಯಲ್ಲಿಯ ತಂಬಿಗೆಯನ್ನಿಟ್ಟು ಹೊರಗೆ ಹೋಗುವಾಗ, ಕೋಣೆ-ಯಲ್ಲಿಂದ ಸುಭದ್ರೆಯ ಅಳುವಿನ ಮೆಲುದನಿಯೂ, ತನ್ನ ತಾಯಿಯ ಸಾಂತ್ವನದ ಪಿಸುಮಾತುಗಳೂ ರತ್ನಾಕರನ ಕಿವಿಗೆ ಕೇಳಿಸಿದುವು.

ರತ್ನಾಕರ ಪಡಸಾಲೆಗೆ ಬಂದು ಮಾವನ ಬಳಿಯಲ್ಲಿ ಕುಳಿತುಕೊಂಡ. ಆಗ ಸಂಜೀವರಾಯರು ಕೇಳಿದರು :

"ಊಟ ಆಯ್ತಽ ರತ್ನಾಕರ! ಹಸಿದು ಬಂದಿದ್ದಿಯಪ್ಪಾ! ಇದಷ್ಟು ಕೆಲಸಾ ಮುಗಿಸಿ ನಾಳೆಗೆ ಕೊಟ್ಟೇ ತೀರಬೇಕಾಗೇದ. ಅಂತ್ಲೇ ನಾನು ಊಟಾ ಮಾಡುವಾಗ ಒಳಗ ಬಂದು ಕೂಡಲಿಕ್ಕೇ ಆಗಲಿಲ್ಲ. ಈ ಗಿರಣಿಯೊಳಗಿನ ಕಾರಕೂನಿಕೀ ಕೆಲಸಂದರ ಬಹಾಳ ಕೆಟ್ಟ ನೋಡು ರತ್ನಾಕರಾ! ಕತ್ತೀ ಭಾರದಷ್ಟು ಕೆಲಸಾ ಮಾತ್ರ ಮಾಡಬೇಕು. ರವಿವಾರ ಬಿಟ್ಟರ ಇನ್ನೊಂದು ಬಿಡುವಿನ ದಿನ ಇಲ್ಲ. ಆದರ ಕೊಡುವ ಸಂಬಳ ಅಂದರ ಒಬ್ಬರ ಹೊಟ್ಟಿಗೆ ಸಹಿತ ಸಾಲದಷ್ಟು!"

ಎಂದು ಹೇಳುತ್ತಲೆ ಚಂಚಿಯನ್ನು ಬಿಚ್ಚಿ, ಅಡಿಕೆಯ ಚೂರನ್ನು ರತ್ನಾಕರನ ಕಡೆಗೆ ನೀಡಿ ಹೇಳಿದರು :

"ಇದು ತೊಗೋ ಅಡಿಕೀ ಹೋಳು! ತಂಬಾಕಿನ ಚಂಚಿಯೊಳಗ ಇದ್ದದ್ದು. ಸ್ವಲ್ಪ ಊದಿ ಬಾಯೊಳಗ ಹಾಕ್ಕೋ!"

"ಬೇಡ, ನನಗ ಅಡಿಕೀ ತಿನ್ನುವ ಅಭ್ಯಾಸವೇನೂ ಇಲ್ಲ. ಈಗ ಊಟಕ್ಕ ಕೂತಾಗ ಮಾವಿನಾ ಜೊತೆಗೆ ಮಾತಾಡತಾ ಇದ್ದೆ. ಸುಭದ್ರಾನ್ನ ನೋಡಿ ಹೋದವರು ಮುಂಡರಿಗಿಯವರಂತ! ಆ ವರನ್ನ ನಾನು ನೋಡಿನಿ. ಸಾಕಷ್ಟು ಪರಿಚಯನೂ ಆತನದು ಅದ. ಒಳ್ಳೆಯ ವರ! ಕೊಟ್ಟು ಬಿಡಬಹುದು ನೀವು!"

ನಿರಾಶೆಯ ಸ್ವರದಲ್ಲಿ ರಾಯರು ಹೇಳಿದರು :

"ನಾವು ಕೊಡಲಿಕ್ಕೆ ಸಂತೋಷದಿಂದ ಸಿದ್ಧರಿದ್ದೀವಿ; ಅವರು ತೊಗೊಳ್ಳಲಿಕ್ಕೆ ಖುಷಿಯಿಂದ ಸಿದ್ಧರಿದ್ದಾರ! ಆದರ ಸುಭದ್ರಾನ್ನ ಮನಸ್ಸು ತಿದ್ದೂದು ನಮಗ ಅಸಾಧ್ಯದ ಕೆಲಸ ಆಗಿ ಕೂತಽದ. ಬೇಕಾದಷ್ಟು ನಾನು ತಿಳಿಸಿ ಹೇಳಿದೆ; ಅಂಬಕ್ಕ ಮನವೊಲಿಸಿ ಹೇಳಿದಳು; ಆಕಿ ಅತ್ತು ಕರೆದು ಅಂಜಿಕಿ ಹಾಕಿ ಪ್ರಯತ್ನ ಮಾಡಿದಳು. ಆದರ ಸುಭದ್ರಿ ತನ್ನ ಹಟಾ ಏನೂ ಬಿಡವೊಲ್ಲಳು!"

ರತ್ನಾಕರ ಸುಮ್ಮನೆ ಕುಳಿತುಕೊಂಡ. ವಿಚಾರದೃಷ್ಟಿಗಳನ್ನು ಕಿಟಕಿಯಲ್ಲಿ ಕಾಣುವ ಬೀದಿಯ ದೀಪಗಳತ್ತ ತಿರುಗಿಸಿದ. ಆ ಮೇಲೆ ಮೆಲ್ಲಗೆ ಮಾತನಾಡಿದ :

"ಸುಭದ್ರಾ ದೊಡ್ಡಾಕಿ ಆಗ್ಯಾಳ; ಆಕೆಯ ಮದಿವೀ ಮುಂದಕ್ಕ ಹಾಕಲಿಕ್ಕೆ ಸಾಧ್ಯವೇನೂ ಇಲ್ಲ!"

"ಮುಂದಕ್ಕ ಹಾಕೂದಂತ! ವೈಶಾಖದೊಳಗ ಮದಿವೀ ಕೆಲಸಾ ಮುಗಿಸಲಿಕ್ಕೇ ಬೇಕು. ಮುಂದ ಗುರೂನೋ ಶುಕ್ರನೋ ಅಸ್ತ ಆಗತಾನಂತ. ಆ ಮ್ಯಾಲ ಮದಿವೀ ಮುಹೂರ್ತನೇ ಇಲ್ಲ. ಹುಡುಗಿ ಬೆಳದು ನಿಂತಽದ! ಮಂದೀ ಬಾಯಿಗೆ ತಡಿ ಹಾಕುವವರು ಯಾರು? ತಿಳಿಯಲಾರದ ಹೆಂಗಸರು ಅಲ್ಲದ ಸಲ್ಲದ ಮಾತು ಹುಟ್ಟಿಸಿ ಹುಟ್ಟಿಸಿ ಹಬ್ಬಿಸತಾರ! ನಾವು ಬಡವರು! ಲಗೂನಽ ಈ ತಲೀಮ್ಯಾಲಿನ ಭಾರಾ ಇಳಿಸಿಕೊಂಡು ಬಿಟ್ಟರ, ನಾನು ನಿಶ್ಚಿಂತ ಆಗತೀನಿ!"

" ನಿಮ್ಮ ಮಾತು ಖರೇ ಅದ ಮಾಮಾ ! ಮಗಳ ಮದಿವಿಯ ದುಃಖ-ವನ್ನ, ಮಗಳನ್ನ ಹೆತ್ತ ತಂದಿ-ತಾಯಿಗಳೇ ಬಲ್ಲರು ! " ರತ್ನಾಕರ ಸಹಾನು-ಭೂತಿಯಿಂದ ನುಡಿದ. ಆಗ ರಾಯರು ಹೇಳಿದರು :

"ಈಗ ನೀನs ಒಪ್ಪಿಕೊಂಡು ಬಿಟ್ಟರ, ನಮ್ಮ ದುಃಖ-ದುಮ್ಮಾನಗಳೂ ತಪ್ಪತಾವ; ಸುಭದ್ರಾನ ಅಪೇಕ್ಷಾನೂ ಪೂರ್ಣ ಆದ್ಹಾಂಗ ಆಗತsದ ! "

ರತ್ನಾಕರ ಅಸಮಾಧಾನದ ಭಾವದಲ್ಲಿಯೇ ಹೇಳಿದ :

" ಅದು ಹ್ಯಾಂಗ ಸಾಧ್ಯ ಆಡೀತು ಮಾಮಾ ! ಈಗ ನನ್ನ ಮ್ಯಾಲ ಸರಕಾರದ ವಾರಂಟು ಅದ. ಈಗ ನಾನು ಪೋಲೀಸರ ಕೈಗೆ ಸಿಕ್ಕು ಬಿಟ್ಟರ, ನಾನು ಜೇಲಿನೊಳಗ ಕೂಡಬೇಕಾಗತsದ ! ಈ ಜೇಲು ಬ್ಯಾಡ ಅಂದರೂ ಅದು ನನ್ನ ಬೆನ್ನು ಬಿಡುವ ಹಾಂಗಿಲ್ಲ. ಬ್ಯಾರೇ ಕಡೆ ನಿಶ್ಚಯ ಆಗಿ, ನೀವು ಸುಭದ್ರಾನ ಮದಿವೀ ಈಗ ಹೂಡಿದರೂ, ನನಗ ಬರಲಿಕ್ಕೆ ಸಾಧ್ಯ ಆದೀತೋ ಇಲ್ಲವೋ ಹೇಳಲಾರೆ ! "

ಸಂಜೀವರಾಯರು ಸುಮ್ಮಗೆ ಕುಳಿತರು. ಏನು ಮಾತನಾಡಬೇ-ಕೆಂಬುದೇ ಅವರಿಗೆ ತಿಳಿಯಲೊಲ್ಲದು. ಮುಂದೆ ಇರುವ ಕಾಗದಗಳನ್ನು ಹಾಗೆಯೆ ಎತ್ತಿ ಎತ್ತಿ ಅತ್ತಿತ್ತ ಇಡಲು ತೊಡಗಿದರು. ಆಗ ರತ್ನಾಕರ ಮತ್ತೆ ತನ್ನ ಮಾತನ್ನು ಪ್ರಾರಂಭಿಸಿದ :

" ಇನ್ನೊಂದು ಮಾತು ಮಾಮಾ ! ಸುಭದ್ರಾ ನನ್ನನ್ನು ಅಪೇಕ್ಷಿಸತಾ ಇರಬಹುದು ಸರಿ ! ಆದರ ಆಕಿ, ಭಾವನಾತ್ಮಕವಾದ ಯಾವುದೋ ಒಂದೇ ಒಂದು ವಿಚಾರದಿಂದ ನನ್ನ ನೋಡತಾಳ ಕಾಣಿಸತದ ! ಅವಳಂಥಾ ಸಂಸ್ಕಾರದವರು ಬಯಸುವುದಂದರ, ' ಒಳ್ಳೇಗಂಡ ಇರಬೇಕು—ಬಹಳ ದುಡ್ಡು ಗಳಿಸಿ ತರಬೇಕು – ಠಾಕುಠೀಕಿನಿಂದ ಸಂಸಾರ ಮಾಡಿ, ಸರಿಜೋಡಿ-ಯವರೊಳಗ ತಮ್ಮ ಶ್ರೇಷ್ಠತಾ ಮೆರೆಯಿಸಬೇಕು – ' ಇಷ್ಟs ಇರತsದ. ಹೀಂಗ ಇರೂದು ತಪ್ಪು - ಅಂತ ನಾ ಏನೂ ಅನ್ನೂದಿಲ್ಲ. ಆದರ ಇಂಥಾ ಹೆಂಡತಿಯ ಗಂಡ ಆಗಲಿಕ್ಕೆ ಬೇಕಾಗುವ ಎಲ್ಲಾ ಗುಣ ನನ್ನಲ್ಲಿ ಇಲ್ಲಾ - ಅಂಬೂದು ನನಗ ಚೆನ್ನಾಗಿ ಗೊತ್ತದ. ದುಡ್ಡು ಗಳಿಸುವ ಯೋಗ್ಯತಾ ನನಗ ಅದs ಅಂತ ಹೇಳಬಹುದಾದರೂ, ಗಳಿಸಬೇಕೆನ್ನುವ ಅಭಿರುಚಿ ನನಗ ಇಲ್ಲ. ಯಾವ ಚಿಂತಿಯೂ ಇಲ್ಲದೆ ನನ್ನ ಮಟ್ಟಿಗೆ ನಾನು ಸುಖದಿಂದ ಇರಲಿಕ್ಕೆ

ಬರುವ ಹಾಂಗಿದ್ದರೂ, ಅದನ್ನ ನನ್ನ ಮನಸ್ಸು ಒಪ್ಪುವುದಿಲ್ಲ. ಎಲ್ಲೆಲ್ಲಿಯುವೋ ಹೊರಗಿನ ಚಿಂತೆಯು ತೊಡಕು ತಂದು, ಅದನ್ನ ಬಿಡಿಸಬೇಕೆನ್ನುವ ಆತುರದೊಳಗ ಇರತsದ! ಅದರಿಂದ ನನ್ನಿಂದ ಸಾಮಾನ್ಯ ಹೆಣ್ಣುಗಳಿಗೆ ಯಾರಿಗೂ ಸಮಾಧಾನ ಸಿಗಲಾರದು. ನನ್ನ ಕೈ ಹಿಡಿಯಬೇಕಾದರ, ನನ್ನಂಥಾ ಅಭಿರುಚಿಯಿದ್ದ ಅ–ಸಾಮಾನ್ಯ ಅವ್ಯವಹಾರ್ಯ ಹೆಣ್ಣೇ ಬೇಕಾಗತsದ! ನಮ್ಮ ಹಳ್ಳಿಯೊಳಗ ಒಂದು ಹಾಡು ಹಾಡತಿರತಾರ. ಅದನ್ನ ನೀವೂ ಕೇಳಿರಬಹುದು :

" ಗಂಡ-ಹೆಂಡರs ಮನವೊಂದಾದರ ನಂದಾದೀಪ್ಪೋ ಮಲ್ಲಯ್ಯಾ !
ಗಂಡ-ಹೆಂಡರs ಮನವೆರಡಾದರ ದಂಡ ತಪ್ಪದೋ ಮಲ್ಲಯ್ಯಾ ! "

ನಮ್ಮ ಮದಿವಿಯ ಹೆಣ್ಣು-ಗಂಡುಗಳ ಮನಃಶಾಸ್ತ್ರದ ಬೀಜದ ಮಾತನ್ನ ಈ ಹಾಡು ಬೋಧಿಸತsದ! ಇಂಥಾ ಸತ್ಯವಾಣಿಯು ಕಡೆಗೆ ಅಲಕ್ಷ್ಯ ಮಾಡತೀವಂತಲೇ ನಮ್ಮ ಸಮಾಜದೊಳಗ, ಸಮರಸದ ಸಂಸಾರ ಕಣ್ಣಿಗೆ ಕಾಣಿಸದ್ಹಾಂಗ ಆಗ್ಯಾವ ಮಾಮಾ ! "

ಸಂಜೀವರಾಯರು ರತ್ನಾಕರನ ಮಾತುಗಳನ್ನು ಕೇಳುತ್ತ, ಆದರ ತುಂಬಿದ ನೋಟಗಳಿಂದ ಅವನನ್ನೇ ಹುಳುಹುಳು ನಿಟ್ಟಿಸುತ್ತ ಕುಳಿತಿದ್ದರು. ರತ್ನಾಕರ ಮಾತು ಮುಗಿಸಿದೊಡನೆಯೆ ರಾಯರು ನಿದಾನವಾಗಿ ಹೇಳಿದರು :

" ನಿನ್ನ ಮಾತು ಸಂಪೂರ್ಣ ಸತ್ಯ ಅದ ರತ್ನಾಕರ ! ಈಗ ನಮ್ಮ ಸಂಸಾರದ ಸಡಗರ ನಮಗ ಗೊತ್ತಿಲ್ಲೇನು ? ಏನೋ, ಬಿಡಲಾರದ ಸಂಬಂಧಾ ಅಂತ ನಮ್ಮ ಹಿರಿಯರು ನಿಯಮಾ ಮಾಡಿ ಇಟ್ಟಾರಂತ, ಹಾಂಗs ಬಡದಾಡಿಕೋತs ಏನೋ ಸಂಸಾರ ಮುಂದುವರಿದಿರತsದ ಆಯ್ತು. ಹೆಂಗಸರ ಅಪೇಕ್ಷೆ ಪೂರಯಿಸಲಿಕ್ಕೆ ಗಂಡಸರಿಗೆ ಆಗುವ ಹಾಂಗಿಲ್ಲ; ಗಂಡಸರ ಆಶಾ-ಅಭಿರುಚಿಗಳನ್ನ ತಿಳಕೊಂಡು ನಡಿಯಲಿಕ್ಕೆ ಹೆಂಗಸರಿಗೆ ಆಗುವ ಹಾಂಗಿಲ್ಲ. ಅದು ಸಾಧ್ಯ ಆಗಿತ್ತಂದರ, ನೀನು ಅಂಬಕ್ಕ ಬ್ಯಾರೇ ಯಾಕ ಇರಬೇಕಾಗಿತ್ತು ? ಗಂಡ-ಹೆಂಡಿರ ಅಭಿರುಚಿಯ ವ್ಯತ್ಯಾಸದ ಮೂಲಕವಾಗೇ ನಮ್ಮ ನಮ್ಮ ಬಳಗದ ಜನರನ್ನ ಸುದ್ಧಾ ದೂರದವರನ್ನಾಗಿ ಮಾಡಿಕೊಳ್ಳುವ ಪ್ರಸಂಗ ಬರತsದ ! "

ರತ್ನಾಕರ ಮರುಕದ ಧ್ವನಿಯಲ್ಲಿ ಹೇಳಿದ :

" ಇರಲಿ ಬಿಡ್ರಿ ಮಾಮಾ! ಈಗ ಹಿಂದಿನ ಕಥೀ ತಗದು ಯಾಕ ವ್ಯಥಾ ಪಡಬೇಕು? ಎರಡು ಜೀವ ಹೊಂದಿಕೊಂಡು ಇರಬೇಕಂತ ಹೊರ-ಟರ, ಹಾಂಗ ಹೊಂದಿಕೊಂಡು ಇರಲಿಕ್ಕೆ ಎರಡೂ ಜೀವಗಳೂ ಒಂದು ವಿಶಿಷ್ಟ ಸಂಸ್ಕಾರ ಪಡದಿರಬೇಕಾಗತ್ತದ. ಆ ಸಂಸ್ಕಾರ ದೊರೆಯುವಂಥಾ ವಾತಾ-ವರಣದೊಳಗ ಅವು ಹುಟ್ಟಿ ಬೆಳದಿರಬೇಕಾಗತ್ತದ! ಇಂಥಾ ಹೆಣ್ಣು-ಗಂಡು-ಗಳ ಜೊತೆಯು ಜೀವನ ಅಂದರ, ಅದು 'ಸಂಸಾರ' ಅನಿಸಿಗೊತ್ತದ! ಇಲ್ಲ-ದಿದ್ದರ ಅದು ಚಿಂತಾಸಾಗರವೇ ಸರಿ! "

ಸಂಜೀವರಾಯರಿಗೆ ತಾವೇನು ಮಾತನಾಡಬೇಕೆಂಬುದು ತಿಳಿಯದೆ ಚಂಚಿಯನ್ನು ಕೈಯೊಳಗೆ ತೆಗೆದುಕೊಂಡು, ಅಡಿಕೆಯ ಚೂರೊಂದನ್ನು ಬಾಯಲ್ಲಿ ಚೆಲ್ಲಿಕೊಂಡರು. ಆ ಮೇಲೆ ಎಲೆಯನ್ನು ಎಡದ ಕೈಯಲ್ಲಿ ಹಿಡಿದು, ಬಲದ ಕೈಯಿಂದ ಸುಣ್ಣದ ಡಬ್ಬಿಯ ಮುಚ್ಚಳವನ್ನು ತೆಗೆಯಲು ತೊಡಗಿದರು. ಆಗ ರತ್ನಾಕರ ಮತ್ತೆ ಮಾತನ್ನು ಆರಂಭಿಸಿದ:

" ನನ್ನ ಸ್ವಭಾವ-ಸಂಸ್ಕಾರಗಳನ್ನ ನಮ್ಮ ಅವ್ವ ಸಹಿತ ಸಂಪೂರ್ಣ ಅರ್ಥ ಮಾಡಿಕೊಂಡಿಲ್ಲ ಮಾಮಾ! ಆಕಿಗೆ ಸರಿಯಾಗಿ ಅರ್ಥವಾಗಿದ್ದರ, ಸುಭದ್ರಾನ ಮನಸ್ಸನ್ನ ಅವಳೇ ಚೆನ್ನಾಗಿ ತಿದ್ದಬಹುದಾಗಿತ್ತು. ಆದರ, ಆಕೆಗೂ ಒಂದು ಅಭಿಲಾಷಾ ಅದ: ಅದು ಏನಂಬೂದನ್ನ ನಿಮಗೇನೂ ಹೇಳ ಬೇಕಾಗಿಲ್ಲ. ನನಗ ಅನಿಸುವ ಮಾತಂದರ, ಸುಭದ್ರಾನ ಈಗಿನ ಹಟಕ್ಕ ನಮ್ಮ ಅವ್ವನ ಕಡೆಯಿಂದ ಸ್ವಲ್ಪಿಲ್ಲ ಸ್ವಲ್ಪ ಪೋಷಣೆ ಸಿಕ್ಕಿರಲಿಕ್ಕೆ ಬೇಕು!"

ಎಲೆಗೆ ಸುಣ್ಣ ಹಚ್ಚುತ್ತಲೇ ರಾಯರು ಮಾತನಾಡಿದರು:

" ಛೇ! ಹಾಂಗೇನೂ ಇರಲಿಕ್ಕಿಲ್ಲೋ ರತ್ನಾಕರಾ! ಆದರ, ಇತ್ತೀಚೆಗೆ ಸುಭದ್ರಿ ಹೆಚ್ಚಾಗಿ ಅಂಬಕ್ಕನ ಹತ್ತಿರನs ಇರತಾಳ. ಮತ್ತ ಅಂಬಕ್ಕನೂ ಆಕಿನ್ನ ಬಹಳ ಪ್ರೀತಿಯಿಂದ ನೋಡತಾಳ!"

" ಅದನ್ನs ಹೇಳಿದೆ ನಾನೂ! ಹೆಂಗಸರ ಸಂಕುಚಿತ ದೃಷ್ಟಿಯ ದೂರದ ವಿಚಾರದ ಪರಿಣಾಮ ಇದು! ಅವ್ವ ನನ್ನ ಮ್ಯಾಲಿನ ಪ್ರೀತಿಯಿಂದೇ ಇದನ್ನೆಲ್ಲಾ ಮಾಡಿರಬಹುದೂ ಅಂತ ನಾ ಒಪ್ಪಿಕೋತೀನಿ! ಆದರ ತಾಯಂದಿರು ತಮ್ಮ ಸದ್ಯದ ಅಭಿಲಾಷೆಯನ್ನ ಪೂರಯಿಸಿಕೊಳ್ಳುವ ಆತುರ ದೊಳಗ, ಮಕ್ಕಳ ಭವಿಷ್ಯದ ವಿಚಾರವನ್ನ ಮರೆತುಬಿಡತಿರತಾರ ಮಾಮಾ!

ನಾನು ಅವ್ವನಿಗೂ ನನ್ನ ಅಭಿಪ್ರಾಯವನ್ನ ಸ್ಪಷ್ಟವಾತಿನಿಂದ ತಿಳಿಸತೀನಿ ! ಸುಭದ್ರಾಗೂ ಎಲ್ಲಾ ಸಂಗತಿಯನ್ನ ಹೇಳಿ, ಆಕಿಯ ಮನೋಭಿಪ್ರಾಯ ತಿಳಕೊಳ್ಳತೀನಿ ! ನಮ್ಮ ಅವ್ವ ಸುಮ್ಮಗಿದ್ದುಬಿಟ್ಟರ, ಎಲ್ಲಾ ಸರಿಹೋಗತ್ತ ದಂತ ನನಗ ಅನಿಸಲಿಕ್ಕೆ ಹತ್ತೇದ !''

ಸಂಜೀವರಾಯರು ಕೂಡಲೆ ಹೇಳಲು ತೊಡಗಿದರು :

" ನಿನ್ನ ಈ ಮಾತು ಮಾತ್ರ ನನಗ ಒಪ್ಪಿಗಿ ಆಗವೊಲ್ಲದು ನೋಡು ರತ್ನಾಕರ ! ಅಂಬಕ್ಕ ಸುಭದ್ರಿಗೆ ಎರಡು ಮೂರು ಸಾರೆ ಸಿಟ್ಟುಮಾಡಿ ಹೇಳಿದ್ದನ್ನ ನಾನೇ ಸ್ವತಃ ಕೇಳೀನಿ : ಮದಿವೀ ವಿಷಯದೊಳಗ, ಮಕ್ಕಳು ತಂದಿ-ತಾಯಿಯಾ ಮಾತಿನಂತೆ ನಡಕೋಬೇಕು—ಅಂತ್ತ ಹೇಳತಿರತಾಳ !"

" ಹೌದು ಹೌದು, ಹೀಂಗ ಆಕೆ ಹೇಳತಿರಬಹುದು ಸರಿ ! ಆಕಿ ತನ್ನ ಹೃದಯದ ಮಾತನ್ನ ಹೊರಗ ಹಾಕ್ಯಾಳ ! ಆಕೀ ಮಾತಿನ ಅರ್ಥ ನನಗೆ ಚೆನ್ನಾಗಿ ಆಗತದ !" ರತ್ನಾಕರ ನಗುತ್ತಲೆ ಹೇಳಿದ. ಆಗ ಸಂಜೀವ-ರಾಯರು ಹೇಳಿದರು :

ರಾತ್ರಿ ಬಹಳ ಆಯ್ತು; ದೂರದಿಂದ ದಣಿದು ಬಂದಿದ್ದೀ ನಿದ್ದಿ ಬಂದಿದ್ದೀತು. ಏಳು, ಈಗ ಮಲಕೊಂಡು ನಿದ್ದೀಮಾಡು ! ನಾಳೆ ಮಾತಾಡೂಣಂತ !''

## ೨೫ನೆಯ ಪರಿಚ್ಛೇದ

ರತ್ನಾಕರನು ಬೆಳಗಿನ ಐದುಗಂಟೆಗೇ ಹಾಸಿಗೆಯನ್ನು ಬಿಟ್ಟು ಎದ್ದ. ಮಾವನನ್ನೂ ಎಚ್ಚರಿಸಿ ಹೇಳಿದ :

" ನಾನು ಈ ಮನೆಯಲ್ಲಿ ಈವೊತ್ತೂ ಇದ್ದು ಬಿಡೂದಂದರ ಅಷ್ಟೊಂದು ಒಳ್ಳೆಯದಲ್ಲ. ನನ್ನಿಂದ ನಿಮಗೂ ತೊಂದರೆಯಾದೀತು. ಮುಖ್ಯಬೀದಿಗೆ ಹೊಂದಿದ ಮನೆಯಿದು. ನಿಮ್ಮ ಈ ಮನೆಗೆ ಹೊರಗಿನ ಜನರೂ ಬಂದುಹೋಗಿ ಮಾಡಬಹುದು. ಅದಕ್ಕಾಗಿ ನಾನು ನಮ್ಮ ಮನೆಗೇ ಹೋಗಿಬಿಡತೀನಿ. ಬೆಳಿಗ್ಗೆ ಅವ್ವ ಎದ್ದಕೂಡಲೆ, ಅವಳನ್ನೂ ಅಲ್ಲಿಗೆ ಕಳಿಸಿಕೊಡಿರಿ. ಸುಭದ್ರೆಯನ್ನೂ ಅವ್ವನ ಕೂಡ ಬೇಕಾದರೆ ಕಳುಹಬಹುದು. ನೀವು ಯಾವ ಚಿಂತೆಯನ್ನೂ ಮಾಡಬೇಡಿರಿ."

"ಇಲ್ಲೇ ಇದ್ದರೂ ಆಗತಿತ್ತು !" ಎಂದು ಸಾಂಪ್ರದಾಯಿಕವಾಗಿ ಸಂಜೀವರಾಯರು ಹೇಳಿದರಾದರೂ, ಅವರ ಮಾತಿನ ರೀತಿ ಹೋಗಬಹುದೆಂಬ ಒಪ್ಪಿಗೆಯನ್ನೇ ಒಳಗೊಂಡಿತ್ತು. ಪಾಪ, ಮಕ್ಕಳೊಂದಿಗರಾದ ಗೃಹಸ್ಥ ರವರು. ದೇಶಭಕ್ತರ ಸೋಂಕು ತಮ್ಮ ಹೊಟ್ಟೆಯ ಮೇಲೆ ಕಾಲುತಂದೀ ತೆಂದು ಭೀತಿಯವರಿಗೆ. ರತ್ನಾಕರನ ಮೇಲೆ ಹೀಗೆ ಸರಕಾರದ ವಾರಂಟು ಇದೆಯೆಂಬ ಮಾತು ಮೊದಲೇ ಗೊತ್ತಾಗಿದ್ದರೆ, ರತ್ನಾಕರನಿಗೆ ಅವರು ಹಾಗೆ ಪತ್ರವನ್ನಾದರೂ ಬರೆಯುತ್ತಿದ್ದರೋ ಇಲ್ಲವೋ !

ಮುಖ ತೊಳೆದುಕೊಂಡ ಶಾಸ್ತ್ರಮಾಡಿ, ರತ್ನಾಕರ ತನ್ನ ಗಂಟುಗದಡಿ-ಗಳೊಂದಿಗೆ ಮನೆಬಿಟ್ಟು ಹೊರಬಿದ್ದ. ಕೃಷ್ಣಪಕ್ಷದಸಪ್ತಮಿಯ ಚಂದ್ರನ ಮಂದವಾದ ಬೆಳುದಿಂಗಳು ದಾರಿಯನ್ನು ಸ್ಪಷ್ಟವಾಗಿ ತೋರಿಸುತ್ತಲಿದ್ದಿತು. ಬೆಳಗು-ಮುಂಜಾವಿನ ರೈಲಿಗೆ ಹೊರಡಲಿದ್ದ ಪ್ರಯಾಣಿಕರನ್ನು ಕರೆದುಕೊಂಡು ಟಾಂಗಾಗಳು ಒಂದೊಂದಾಗಿ ದಾರಿಯಲ್ಲಿ ಓಡಿ ಓಡಿ ಹೋಗುತ್ತಲಿದ್ದುವು. ರಾತ್ರಿಯ ಪಹರೆ ಮಾಡಿದ ಪೋಲೀಸರು, ಕಳ್ಳರ ಭೀತಿ ಇನ್ನೇನೂ ಇಲ್ಲವೆಂಬ ವಿಶ್ವಾಸದಿಂದ, ತಮ್ಮ ತಮ್ಮ ಚಾಕಿಗಳಿಗೆ ಹೊರಟುಹೋಗಿದ್ದರೇನೊ ! ಗಿರಣಿಗಳ ಕೂಲಿಕಾರರು ರಾತ್ರಿಪಾಳಿಯ ಕೆಲಸವನ್ನು ಮುಗಿಸಿಕೊಂಡು, ಗುಂಪುಗುಂಪಾಗಿ ತಮ್ಮ ಮನೆಗಳ ಕಡೆಗೆ ಮರಳುತ್ತಲಿದ್ದರು. ಇಷ್ಟಾದರೂ ಕೊನೆಯ ಜಾವದ ಸಹಜ ಶಾಂತತೆ ನಗರದಲ್ಲೆಲ್ಲ ತುಂಬಿನಿಂತಿದ್ದಿತು. ಚಂದ್ರನ ಮಂದಪ್ರಕಾಶವು ಈ ಶಾಂತತೆಗೆ ಇನ್ನಿಷ್ಟು ಪುಷ್ಟಿಯನ್ನು ಕೊಡುತ್ತಿದ್ದಿತು. ಬೇಸಗೆಯ ಬೆಳಗಿನ ಸುಳಿಗಾಳಿ ರತ್ನಾಕರನಿಗೆ ತುಂಬ ಹಿತವೆನಿಸಿತು. ಸಿದಾನವಾಗಿಯೆ ಹೆಜ್ಜೆಹಾಕುತ್ತ ಮನೆಯನ್ನು ತಲ್ಪಿದ. ತನ್ನ ಕಡೆಗಿದ್ದ ಬೀಗದ ಕೈಯಿಂದ ಬಾಗಿಲ ಬೀಗವನ್ನು ತೆಗೆದು ಮನೆಯೊಳಗೆ ಪ್ರವೇಶಿಸಿ, ಮತ್ತೆ ಬಾಗಿಲನ್ನು ಇಕ್ಕಿ ಒಳಚಿಲಕ ಹಾಕಿಕೊಂಡ.

ತಾಯಿಯ ಓರಣದ ಕೆಲಸಗಳ ಅನುಭವ ರತ್ನಾಕರನಿಗೆ ಸಾಕಷ್ಟು ಇದ್ದಿತು. ನಿಯಮಿತ ಸ್ಥಳದಲ್ಲಿ ಕೈಯಾಡಿಸಿ ನೋಡಿದಾಗ, ಕಡ್ಡಿಯ ಪೆಟ್ಟಿಗೆ ಕೈಗೆ ತಗಲಿತು. ಕಡ್ಡಿಯನ್ನು ಕೆರೆದು ನೋಡುವಾಗ, ಚಿಕ್ಕ ಕಂದಿಲೂ ಅಲ್ಲಿಯೆ ಇದ್ದುದು ಕಂಡಿತು. ರತ್ನಾಕರ ದೀಪವನ್ನು ಅಂಟಿಸಿದ. ಕಂಬಳಿಯೊಂದನು ಹಾಸಿ, ಅದರ ಮೇಲೆ ಕುಳಿತುಕೊಂಡ. ಮನೆಯಸೆಲ್ಲ ಸುತ್ತು-ಮುತ್ತಲ್ಲೂ

ನಿಟ್ಟಿಸಿದ. ಎಲ್ಲಿ ನೋಡಿದರೂ ಅಚ್ಚುಕಟ್ಟು, ಸ್ವಚ್ಛತೆ. ಪಾತ್ರೆಪಡಗಗಳು ಇದ್ದಸ್ಥಳದಲ್ಲಿಯೆ ಥಳಥಳ ಹೊಳೆಯುತ್ತಲಿದ್ದವು. ಎಲ್ಲವನ್ನೂ ನೋಡುತ್ತಿದ್ದ ರತ್ನಾಕರನ ಮನಸ್ಸಿನಲ್ಲಿ ಒಂದರಹಿಂದೆ ಒಂದರಂತೆ ಯೋಚನೆಗಳು ನುಗ್ಗಲು ತೊಡಗಿದುವು.

"ನನ್ನಂತಹ ಮಗನು ಇದ್ದರೂ ತಾಯಿ ಇಲ್ಲಿ ಏಕಾಕಿನಿಯಾಗಿ ಕಾಲ-ಕಳೆಯಬೇಕು. ಎಷ್ಟು ಮನಸ್ತಾಪವನ್ನು ಅನುಭವಿಸುತ್ತಿರಬಹುದು ಅವಳು? ಯಾವ ಯಾವ ದೂರದ ವಿಚಾರಗಳನ್ನು ಮನದ ಮುಂದೆ ಇರಿಸಿಕೊಂಡು, ನನ್ನನ್ನು ಕಷ್ಟನಷ್ಟ ಅನುಭವಿಸಿ ಸಾಕಿ ಸಲಹಿದಳೊ! ಎಂತೆಂತಹ ಸುಖದ ಕನಸುಗಳನ್ನು ಕಾಣುತ್ತ ನನಗೆ ಕಲಿಸಿ ದೊಡ್ಡವನನ್ನಾಗಿ ಮಾಡಿದಳೋ! ಈಗಲೂ ಯಾವ ದೂರದ ಸುಖಭವಿಷ್ಯದ ಆಶೆಯಿಂದ ಏಕಾಕಿನಿಯಾಗಿ ಕಾಲ ಕಳೆಯುತ್ತಿರುವಳೋ! ಮಗನಾದ ನಾನು ಆಕೆಯ ಯಾವ ಆಶೆಯು ಪೂರಯಿಸುವಂತೆ ನಡೆದುಕೊಂಡ್ದೇನೆ? ಆಕೆಗೆ ಸಂತೋಷವನ್ನುಂಟುಮಾಡು-ವಂತಹ ಯಾವ ಕಾರ್ಯವನ್ನು ನಾನು ಮಾಡಿದ್ದೇನೆ? ಒಂದೂ ಮಾಡಿಲ್ಲ ನಿಜ! ಇಷ್ಟೇ ಅಲ್ಲ. ಇನ್ನಿಷ್ಟು ಆಕೆಗೆ ಕಷ್ಟವಾಗುವಂತೆ ನಾನು ನಡೆದುಕೊಳ್ಳುತ್ತಲಿದ್ದೇನೆ!....

....ಹಾಗಾದರೆ ನಾನು ತಾಯಿಯ ವಿಷಯದಲ್ಲಿ ತಪ್ಪುಗಾರನೇ?.... ಅಹುದು ಆಕೆಯ ದೃಷ್ಟಿಯಿಂದ ನಾನು ತಪ್ಪುಗಾರ ನಿಜವೇ ನಿಜ! ಆದರೂ ನನ್ನನ್ನು ಅವಳು ಎಷ್ಟೊಂದು ಪ್ರೀತಿಯಿಂದ ಕಾಣುತ್ತಾಳಲ್ಲ! ತಾಯಿ-ಯೆಂದರೆ ಪ್ರೀತಿಯ ಪ್ರತಿಮೆಯೆ ಅಲ್ಲವೆ? ಮಕ್ಕಳಿಂದ ಎಷ್ಟೊಂದು ನಿರಾ-ಶೆಯ ಏಟುಗಳನ್ನು ತಿಂದರೂ ತಾಯಿಯ ಪ್ರೀತಿಗೆ ಚ್ಯುತಿಯಿಲ್ಲ! ಇಂತಹ ತಾಯಿಯನ್ನು ಆನಂದದಲ್ಲಿ ಇರಿಸಬೇಕಾದುದು ಆಕೆಯ ಸುಶಿಕ್ಷಿತ ಮಗ-ನಾದ ನನ್ನ ಕರ್ತವ್ಯವಾಗಿದೆಯಲ್ಲವೆ?....

....ಕರ್ತವ್ಯ! ಕರ್ತವ್ಯ!! ಹಾಗಾದರೆ ನಾನೀಗ ಮಾಡುತ್ತಲಿದ್ದುದು ನನ್ನ ಕರ್ತವ್ಯವಲ್ಲವೆ? ಭಾರತದಲ್ಲಿ ಹುಟ್ಟಿದ ತರುಣರೆಲ್ಲರಿಗೂ ತಾಯಿ ಇರಬಹುದು, ತಂದೆಯಿರಬಹುದು; ಅಣ್ಣ-ಅಕ್ಕದಿರು ಇರಬಹುದು, ತಂಗಿ-ತಮ್ಮದಿರು ಇರಬಹುದು. ಅವರೆಲ್ಲರ ಸಂಕುಚಿತ ದೃಷ್ಟಿಯ ಆಶೆಗಳನ್ನೇ ಪೂರಯಿಸಿ ತೃಪ್ತಿಗೊಳಿಸುವುದು ಕರ್ತವ್ಯವೆಂದು ಎಲ್ಲ ಭಾರತೀಯ ತರುಣರು

ತಿಳಿಯಲು ತೊಡಗಿದರೆ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವವರು ಯಾರು ? ಪರಾಧೀನ ಭಾರತವನ್ನು ಸ್ವತಂತ್ರಗೊಳಿಸಬೇಕಾದುದು ನಮ್ಮೆಲ್ಲರ ಮುಖ್ಯ ಕರ್ತವ್ಯವಲ್ಲವೆ ? ಈ ಕರ್ತವ್ಯಕ್ಕಾಗಿ ತಾಯಿ-ತಂದೆ-ಬಾಂಧವರನ್ನು ನಿರಾಶೆಗೊಳಿಸುವ ಸಂದರ್ಭ ಬಂದರೆ ಅದು ಅಧರ್ಮ-ಅಕರ್ತವ್ಯವೆನಿಸೀತೆ ?

.... ಅಲ್ಲ, ಅಧರ್ಮವೂ ಅಲ್ಲ; ಅಕರ್ತವ್ಯವೂ ಅಲ್ಲ; ಆದರೆ ಈ ಕರ್ತವ್ಯಾ ಕರ್ತವ್ಯದ ವಿವೇಕ ಸಾಮಾನ್ಯ ಸ್ವಾರ್ಥಕಾಮಿ ಜೀವಿಗಳಿಗೆ ಎಲ್ಲಿ ಇರುತ್ತದೆ ? ಬರಿ ಸಾಮಾನ್ಯ ಜೀವಿಗಳಿಗಷ್ಟೆ ಈ ವಿವೇಕ ಇರುವುದಿಲ್ಲವೆಂದಲ್ಲ; ಎಷ್ಟೋ ಜನ ಸುಶಿಕ್ಷಿತಬ್ರುವರೂ ಸ್ವಾರ್ಥಕಾಮಿಗಳಾಗಿ ಕರ್ತವ್ಯಹೀನರಾಗಿ ಬದುಕಿ-ರುವುದನ್ನು ನಾವು ಎಲ್ಲೆಲ್ಲಿಯೂ ನೋಡುತ್ತಿದ್ದೇವೆ. ತಾಯಿಯ ಸಂತೋಷ-ಕ್ಕಾಗಿ ನಾನೂ ಒಬ್ಬ ಅಂತಹ ಕರ್ತವ್ಯಹೀನನಾಗಿ ಬಿಡಲೆ ? ಆದೆನೆನ್ನಿ ! ನಡೆದಿರುವ ಸ್ವಾತಂತ್ರ್ಯ ಯುದ್ಧ ನನ್ನೊಬ್ಬನ ಅಭಾವದಿಂದ ತಡೆದೇನೂ ನಿಲ್ಲಲಾರದು ! ಜನರು ನಾಲ್ಕು ದಿನ ಅಣಕದ ಮಾತುಗಳನ್ನಾಡಬಹುದು; ಆ ಮೇಲೆ ತಮ್ಮಂತೆಯೆ ನನ್ನನ್ನೂ ತಿಳಿದು ಸುಮ್ಮನಿದ್ದು ಬಿಡಬಹುದು. ತಾಯಿಯ ಸಂತುಷ್ಟ ಜೀವನದಿಂದ ನನಗೂ ಸಂತೋಷವೆನಿಸೀತು ....

.... ತಾಯಿಗೆ ಸಂತೋಷವಾಗಬೇಕಾಗಿದ್ದರೆ ನಾನು ಮದುವೆ ಮಾಡಿ-ಕೊಳ್ಳಬೇಕು ! ಮದುವೆ ಮಾಡಿಕೊಳ್ಳಬೇಕಾದರೆ ನನ್ನ ಈ ಪರಾಕ್ರಮ-ವೃತ್ತಿಯಿಂದ ನಿವೃತ್ತನಾಗಬೇಕು ! ಓ, ಈ ವೃತ್ತಿಯಿಂದ ನಿವೃತ್ತನಾದರೆ, ನನಗೆ ಒಂದು ವ್ಯಕ್ತಿತ್ವ ಉಳಿದೀತೆ ? ವ್ಯಕ್ತಿತ್ವವಿಲ್ಲದ ತರುಣನನ್ನು ಅಸಾ-ಮಾನ್ಯವಾದ ಹೆಣ್ಣು ಕೈಹಿಡಿಯಲು ಒಪ್ಪೀತೆ ? ಛೇ ! ಎಂದಿಗೂ ಶಕ್ಯವಿಲ್ಲ. ಸುಸಂಸ್ಕೃತ ಹೃದಯದ ಹೆಣ್ಣಿನ ಆಶೆಯೆಂದರೆ ವಿಶಿಷ್ಟ ವ್ಯಕ್ತಿತ್ವವುಳ್ಳ ಸಾಹಸ ಜೀವಿಯ ಜೊತೆಗಾತಿಯಾಗಬೇಕೆಂದು ! ನಾನೀಗ ತಾಯಿಯ ಅಪೇಕ್ಷೆ ಪೂರಯಿಸಲು ಮದುವೆಗೆ ಸಿದ್ಧನಾಗಿನಿಂತರೆ, ಸುಭದ್ರೆಯಂತಹ ಸಾಮಾನ್ಯ ಹೆಣ್ಣೇ ನನಗೆ ಸಿಕ್ಕಬೇಕು ! ಇದರಿಂದ ನನಗೆ ಸಮಾಧಾನವೆನಿಸೀತೇ ? ಜೀವನದ ಅಂತ್ಯದ ವರೆಗೂ ನಿರಾಶೆಯ ನಿಟ್ಟುಸಿರುಕ್ಕುತ್ತಲೇ ಕಾಲವನ್ನು ನೂಕಬೇಕಾದೀತು !........"

ದೂರದಲ್ಲೆಲ್ಲೋ ಬೆಳಗಿನ ಆರುಗಂಟೆಗಳನ್ನು ಬಾರಿಸಿದ ಸಪ್ಪಳು ಕೇಳಿಸಿತು. ಒಂದೆರಡು ನಿಮಿಷಗಳಲ್ಲಿಯೆ ಪತ್ರಿಕೆ ಮಾರಾಟಮಾಡುವ ಹುಡುಗನೊಬ್ಬನ ಕೂಗು ಕೇಳಿಸಿತು :

" ಡೆ(ಲೀ ಧಾರವಾಡ ಸಮಾಚಾರ! ಎರಡೇ ಬಿಲ್ಲಿ! ಕರ್ನಾಟಕದ ಕಾಂಗ್ರೆಸ್ ಕಾರ್ಯಕರ್ತರ ಕ್ಷಮಾಯಾಚನೆ!! ಮಾಳಾಪುರದಲ್ಲಿ ಒಬ್ಬ ತರುಣಿಯ ಆತ್ಮಹತ್ಯೆ! "

ಈ ಕೂಗು ರತ್ನಾಕರನಲ್ಲಿ ಆತುರವನ್ನು ಕೆರಳಿಸಿತು. ಬಾಗಿಲನ್ನು ತೆರೆದು ಹೊರಗೆ ಹೋಗಬೇಕೋ ಹೋಗಬಾರದೋ—ಎಂದು ಕ್ಷಣಹೊತ್ತು ಮನಸ್ಸು ಉಯ್ಯಾಲೆಯನ್ನಾಡಿತು. ಆ ಮೇಲೆ ಆದದ್ದಾಗಲೆಂದು ದಿಗ್ಗನೆ ಎದ್ದ. ಬಾಗಿಲನ್ನು ತೆರೆದು ಪತ್ರಿಕೆಯ ಮಾರಾಟಗಾರನನ್ನು ಕರೆದ; ಎರಡು ಬಿಲ್ಲಿಗಳನ್ನು ಕೊಟ್ಟು 'ಧಾರವಾಡ ಸಮಾಚಾರ' ದೈನಿಕವನ್ನು ತೆಗೆದುಕೊಂಡು, ಅವಸರದ ನಡಿಗೆಯಲ್ಲಿಯೆ ಒಳಗೆ ಬಂದು, ಮತ್ತೆ ಬಾಗಿಲನ್ನು ಇಕ್ಕಿಕೊಂಡು ಕುಳಿತ. ಆತುರದಿಂದ ಪತ್ರಿಕೆಯನ್ನು ನೋಡಲು ತೊಡಗಿದ:

ಫೂಲ್ಸ್‌ಕ್ಯಾಪ್ ಅರ್ಧಹಾಳೆಯಳತೆಯ ಕನ್ನಡ ದಿನಪತ್ರಿಕೆಯದು. ಮೊದಲನೆಯ ಪುಟದಲ್ಲಿ ಒಂದೆರಡು ನಾಟಕ-ಸರ್ಕಸ್ಸಿನ ಜಾಹೀರಾತುಗಳು; ಗಂಡ-ಹೆಂಡಿರು ಒಬ್ಬರೊಬ್ಬರಿಗೆ ಕೊಟ್ಟ ಒಂದೆರಡು ನೋಟಿಸುಗಳು. ಕೊನೆಯ ಕಾಲಮಿನಲ್ಲಿ ಸ್ಥಳವು ಉಳಿದುದರಿಂದಲೋ ಏನೋ 'ಕೇನಿಯಾ ದೇಶದಲ್ಲಿ ಒಬ್ಬ ಹೆಂಗುಸು ನಾಲ್ಕು ಮಕ್ಕಳನ್ನು ಹೆತ್ತಿದ್ದಾಳಂತೆ; ನಾಲ್ಕು ಮಕ್ಕಳಿಗೂ ಸೇರಿ ಎರಡೇ ಕಾಲುಗಳಿವೆಯಂತೆ! ದೇವರ ಸೃಷ್ಟಿ ಅಗಾಧ-ವಾದದ್ದು!' ಎಂಬ ವರ್ತಮಾನ ಅಚ್ಚಾಗಿದ್ದಿತು. ರತ್ನಾಕರ ಮುಖವನ್ನು ಮುದುರಿಸಿ, ಪತ್ರಿಕೆಯನ್ನು ಮಗುಚಿ ಹಿಂಬದಿಗೆ ನೋಡಿದ. ಮೇಲ್ಬದಿ-ಯಲ್ಲಿಯೇ ದಪ್ಪ ಅಕ್ಷರಗಳ ಸಾಲು ಕಾಣಿಸಿತು :

**"ಕರ್ನಾಟಕದ ಕಾಂಗ್ರೆಸ್ ಕಾರ್ಯಕರ್ತರೊಬ್ಬರ ಕ್ಷಮಾ-ಯಾಚನೆ!"**

ಕೆರಳಿದ ಮನದವನಾಗಿ ರತ್ನಾಕರ ಕೆಳಗೆ ಬರೆದುದನ್ನು ಓದಲು-ತೊಡಗಿದ :

" ಇಲ್ಲಿಯ ಸ್ವರಾಜ್ಯಭುವನದಲ್ಲಿದ್ದು ಕಾಂಗ್ರೆಸ್ ಕಾರ್ಯವನ್ನು ಮಾಡುತ್ತಲಿದ್ದ ಕೆಲಸಗಾರರನ್ನೆಲ್ಲ ಪೋಲೀಸರು ಹಿಡಿದು ಸೆರೆಮನೆಗೆ ಸೇರಿಸಿದ್ದಾರೆ. ಈ ಕೆಲಸಗಾರರಲ್ಲಿಯ ಶ್ರೀ. ಬಸವರಾಜ ಎಂಬ ತರುಣ ಕಾರ್ಯಕರ್ತರೊಬ್ಬರು, ಸರಕಾರಕ್ಕೆ ಕ್ಷಮೆಯನ್ನು ಬೇಡಿದರಲ್ಲದೆ, ಇನ್ನು

ಮೇಲೆ ತಾವೆಂದೂ ಸರಕಾರವನ್ನು ವಿರೋಧಿಸುವ ಚಟುವಟಿಕೆಯಲ್ಲಿ ಭಾಗವಹಿಸುವುದಿಲ್ಲವೆಂದು ಬರೆದುಕೊಟ್ಟು, ಸೆರೆಮನೆಯಿಂದ ಬಿಡುಗಡೆ ಹೊಂದಿದರು. ಸರಕಾರದವರು ಅವರಿಗೆ ಪೋಲೀಸರನ್ನು ಸಂರಕ್ಷಣೆಗೆ ಕೊಟ್ಟು ಅವರನ್ನು ಸ್ವಗ್ರಾಮಕ್ಕೆ ತಲ್ಪಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ..........."

ರತ್ನಾಕರನಿಗೆ ಮುಂದೆ ಓದುವುದಕ್ಕಾಗಲಿಲ್ಲ. ಪತ್ರಿಕೆಯನ್ನು ಕೆಳಗೆ ಚೆಲ್ಲಿ ಮಂಕುವಡೆದವರಂತೆ ಸುಮ್ಮಗೆ ಕುಳಿತು ಬಿಟ್ಟ. ಹೊಟ್ಟೆಯಲ್ಲಿ ಕಳವಳ ತುಂಬಿಬಿಟ್ಟಿತು. ಉಸಿರಾಟ ತೀವ್ರವಾಯಿತು ಅವನಿಗೆ ತಿಳಿಯದಂತೆಯೆ ಕೆನ್ನೆಗೆ ಕಂಬನಿಗಳು ಇಳಿದುಬಂದುವು. ತನ್ನೊಳಗೆ ತಾನೇ ಆವೇಶದ ಗಡುಸುಧ್ವನಿಯಲ್ಲಿ ಎಂದುಕೊಂಡ :

" ನಾನೂ ಒಬ್ಬ ಬಸವರಾಜನಾಗಬೇಕೆ ?"

ಮತ್ತೆ ಒಂದರ ಹಿಂದೊಂದು ಯೋಚನೆಗಳು ಬರಲುತೊಡಗಿದುವು:

" ತಾಯಿಯನ್ನು ಸಂತೋಷ ಪಡಿಸಬೇಕೆಂದರೆ, ನಾನೂ ಈಗ ಬಸವರಾಜನಂತೆ ಸರಕಾರದ ಕ್ಷಮೆ ಕೇಳಬೇಕಾಗುವುದು; ಇನ್ನೊಮ್ಮೆ ಇಂತಹ ಚಳುವಳಿಯಲ್ಲಿ ಬೀಳುವದಿಲ್ಲವೆಂದು ಬರೆದುಕೊಡಬೇಕಾಗುವುದು. ಇದನ್ನು ಮಾಡಲೇ ನಾನು ? ಹೀಗಿದನ್ನು ಮಾಡಿ ಜೀವಿಸಿರುವುದರಲ್ಲಿ ನನ್ನಿಂದ ಯಾವ ಪುರುಷಾರ್ಥದ ಸಾಧನೆಯಾದೀತು ? ನನ್ನ ಮನುಷ್ಯತ್ವ ಯಾವ ಸಫಲತೆಯನ್ನು ಪಡೆದೀತು ? ಆ ಮೇಲೆ ಕುಮುದಾನಂತಹ ಹೆಣ್ಣು ನನ್ನ ಕಡೆಗೆ ಕಡೆಗಣ್ಣ ನೋಟವನ್ನಾದರೂ ಹರಿಸೀತೇ ? ಹೇಡಿತನದ ಜೀವಿತಕ್ಕಿಂತ ಮರಣವೇ ಶರಣೆನ್ನುವುದು ಸಾವಿರಪಾಲು ಯೋಗ್ಯವೆನಿಸೀತು........"

ಬಾಗಿಲನ್ನು ಬಡಿದ ಶಬ್ದವಾಯಿತು. ರತ್ನಾಕರ ಬೆಚ್ಚಿಬಿದ್ದ. ಆ ಮೇಲೆ ತಾಯಿ ಬರಲಿರುವ ಮಾತಿನ ನೆನಪಾಗಿ ಮೆಲ್ಲಗೆ ಎದ್ದ. ಬಾಗಿಲನ್ನು ತೆರೆಯದೆ ಒಳಗೇ ನಿಂತುಕೊಂಡು ಒಳದನಿಯಲ್ಲಿ ' ಯಾರು ' ಎಂದು ಕೇಳಿದ. ' ನಾನೇ ಬಂದೀನಿ; ಬಾಗಿಲಾ ತಗಿ ' ಎಂಬ ತಾಯಿಯ ಧ್ವನಿ ಕೇಳಿಸಿತು. ಬಾಗಿಲನ್ನು ತೆರೆದ ರತ್ನಾಕರ. ತಾಯಿ ಒಳಗೆ ಬಂದರು; ಅವರ ಜೊತೆಯಲ್ಲಿಯೆ ಭಾಗೀರಥಿಯೂ ಲಜ್ಜಾಭಾವದ ಹೆಜ್ಜೆಗಳನ್ನು ಇರಿಸುತ್ತ ಒಳಗೆ ಬಂದಳು. ಕೂಡಲೆ ರತ್ನಾಕರನು ಕಿರುಮನೆಯಲ್ಲಿ ಸೇರಿದ. ಅತ್ತೆ–ಸೊಸೆಯರು ಹೆಚ್ಚಿನ ಮಾತುಗಳನ್ನೇನೂ ಆಡದೆ ಮನೆಗೆಲಸಕ್ಕೆ ತೊಡಗಿದರು.

## ೨೬ನೆಯ ಪರಿಚ್ಛೇದ

ಇಂದು ಚೈತ್ರಕೃಷ್ಣಪಕ್ಷದ ಅಷ್ಟಮಿ. ಕಾವೇರಿಯ ಹುಟ್ಟಿದ ದಿನವಿದು. ಇಂದಿನ ಬೆಳಗು ಕಾವೇರಿಗೆ ಹದಿನೆಂಟನೆಯ ವರ್ಷವನ್ನು ಪ್ರಾರಂಭಿಸಿಬಿಟ್ಟಿತು. ಒಮ್ಮೆಲೆ ಆದ ಈ ವಯಸ್ಸಿನ ಅಂಕಿಯ ಬದಲಾವಣೆ ಗೋಪಾಲರಾಯರನ್ನೂ ವೇಣಕ್ಕನನ್ನೂ ಭಯಭೀತರನ್ನಾಗಿಸಿತು. ಹೃದಯ-ವನ್ನು ದಡದಡಿಸಲು ಹಚ್ಚಿತು.

ಬೆಳಗಿನ ಎಂಟುಗಂಟೆಯಾಗಿದೆ. ಗೋವಿಂದರಾಯರು ಪಡಸಾಲೆಯಲ್ಲಿ ಒಬ್ಬರೇ ಕುಳಿತು 'ನೀನೇ ಅನಾಥಬಂಧು, ನೀನೇ ಕರುಣಾ ಸಿಂಧು!' ಎಂಬ ದಾಸರ ಕೀರ್ತನೆಯನ್ನು, ತಗ್ಗಿದ ಧ್ವನಿಯಲ್ಲಿ ಗುಣಗುಣಿಸುತ್ತ ಕುಳಿತು-ಕೊಂಡಿದ್ದಾರೆ. ಬಾಯಿ ಮಾತ್ರ ಹಾಡುತ್ತಲಿದ್ದಿತಾದರೂ ಮನಸ್ಸು ವಿಚಾರಾಕಾಶದಲ್ಲಿಯ ಯಾವುದೋ ತಾರೆಗೆ ತಕ್ಕೆಬಿದ್ದಿತ್ತು. ವೇಣಕ್ಕ ಹೊರಗೆ ಬಂದು ನಿಂತು ನೆಲುದನಿಯಲ್ಲಿ ಕೇಳಿದರು :

"ಇಂದು ಕಾವೇರಿಯ ಹುಟ್ಟಿದ ದಿವಸ; ಅಡಗೀ ಏನು ಮಾಡಬೇಕು?"

ಜಡವಾದ ಧ್ವನಿಯಲ್ಲಿ ಗೋಪಾಲರಾಯರು ನುಡಿದರು :

"ಕಾವೇರಿಯ ಹುಟ್ಟಿದ ದಿವಸ....! ಹೌದು ಕಾವೇರಿಗೇನೊ ಹುಟ್ಟಿದ ದಿವಸ ನಿಜ! ಆದರ ಈವೊತ್ತು ಏಪ್ರಿಲ್ ಇಪ್ಪತ್ತೆಂಡನೆಯ ತಾರೀಖು ಅಂಬೂದು ನೆನಪಿನೊಳಗ ಅದನೋ ಇಲ್ಲೋ!"

ವೇಣಕ್ಕ ಮರುಕದ ಭಾವದಲ್ಲಿ ಹೇಳಿದರು :

"ಏನೋ! ಇದೊಂದು ವರ್ಷ ಮನ್ಯಾಗ ಇರತಕ್ಕದ ಹುಡುಗಿ! ಮದಿವಿ ಆಗಿ ಅತ್ತೆಯ ಮನಿಗೆ ಹೋದಳಂದರ, ಆಕೀ ಹುಟ್ಟಿದ ದಿನಾ ಯಾರು ಮಾಡತಾರ.... ಯಾರು ನೋಡತಾರ ?"

ಗೊಪಾಲರಾಯರು ಯೋಚನೆಯಲ್ಲಿ ಕುಳಿತರು. ವೇಣಕ್ಕ ಅವರ ಮುಖವನ್ನು ನಿಟ್ಟಿಸುತ್ತ ಸುಮ್ಮನೆ ನಿಂತುಕೊಂಡರು. ಆಗಲೇ ಅಂಚೆಯಾಳು ಒಂದು ಕಾಗದವನ್ನು— ಹೊರಗೆಯೇ ನಿಂತು— ಪಡಸಾಲೆಯೊಳಗೆ ಚೆಲ್ಲಿ ಮುಂದುವರಿದ. ಕಾಗದ ಬಿದ್ದ ಸಪ್ಪಳಕ್ಕೆ ಗೋಪಾಲರಾಯರು ಮುಖ ಹೊರಳಿಸಿ ನೋಡಿದರು. ಕಟ್ಟೋಲೆಯೊಂದು ಬಾಗಿಲಲ್ಲಿ ಬಿದ್ದಿತ್ತು.

ಆತುರಧ್ವನಿಯಲ್ಲಿ ವೇಣಕ್ಕ ನುಡಿದರು :

" ಯಾರ ಪತ್ರವೊ ! ರತ್ನಾಕರ ಬರೆದಿಹುದೋ ಏನೋ !"

ರಾಯರು ಗಡಬಡಿಯಿಂದ ಎದ್ದು ಹೋಗಿ ಕಟ್ರೋಲಿಯನ್ನು ತೆಗೆದು-ಕೊಂಡು, ಹಿಂದೆ ಮುಂದೆ ಹೊರಳಿಸಿ ನೋಡುತ್ತ ಮೊದಲು ಕುಳಿತಲ್ಲಿಯೆ ಬಂದು ಕುಳಿತರು. ಕಾತರಭಾವದಿಂದ ವೇಣಕ್ಕ ಕೇಳಿದರು :

" ಎಲ್ಲಿಂದ ಬಂದsದ ? ಯಾರು ಬರದಾರ ?"

ಉತ್ತರವನ್ನು ಕೊಡದೆ ಗೋಪಾಲರಾಯರು ಕಟ್ರೋಲೆಯನ್ನು ಹರಿದು, ಒಳಗಿನ ಪತ್ರದ ಮಡಿಕಿ ಬಿಚ್ಚಿ ನೋಡಲು ತೊಡಗಿದರು. ನೋಡು ನೋಡುತ್ತಿರುವಾಗಲೇ ಅವರ ಕೈಗಳು ಕಂಪಿಸಲು ತೊಡಗಿದುವು. ಮುಖವು ವಿವರ್ಣವಾಯಿತು. ಮೈಯಲ್ಲಿ ಶಕ್ತಿ ಉಡುಗುತ್ತಿರುವಂತೆ ಕಂಡಿತು. ಗಾಬರಿಗೊಂಡವರಾಗಿ ವೇಣಕ್ಕ ಕೇಳಿದರು :

" ಯಾರ ಪತ್ರ ? ಏನು ಬರದsದ ಅದರೊಳಗ ? ರತ್ನಾಕರ ಬರದದ್ದೇ ಹೌದೇನು ?"

ಬಲಹೀನವಾದ ಕೈಯಿಂದ ಪತ್ರ ಕೆಳಗೆ ಬಿದ್ದಿತು. ರಾಯರು ಹೌಹಾರಿದಂತವರಾಗಿ ಸುಮ್ಮನೆ ಕುಳಿತುಕೊಂಡರು. ವೇಣಕ್ಕನ ಗಾಬರಿ ಇಮ್ಮಡಿಗೊಂಡಿತು. ಅಳುದನಿಯಲ್ಲಿ ಅವರು ಕೇಳಿದರು :

" ಯಾಕ ? ಹೀಂಗ್ಯಾಕ ದಿಂಗುಬಡಿದವರ್ಹಾಂಗ ಕೂತುಕೊಂಡಿರಿ ? ರತ್ನಾಕರನ ಕಡೆಯಿಂದ ನಿರಾಶಾ ಆಗುವಂಥಾ ಮಾತು ಬರೆದುಬಂದsದೇನು?"

ಗೋಪಾಲರಾಯರು ನಿಟ್ಟುಸಿರು ಬಿಟ್ಟು ಹೇಳಿದರು :

" ಇದು ರತ್ನಾಕರನ ಪತ್ರ ಅಲ್ಲ !"

" ಹಾಂಗಾದರ ಯಾರದು ? ಏನದ ಅದರೊಳಗ ?"

ರಾಯರು ರೇಗಿದ ಧ್ವನಿಯಲ್ಲಿ ಹೇಳಲು ತೊಡಗಿದರು :

" ನಿಮಗ ಹೆಂಗಸುರಿಗೆ ಮುಂದಿನ ಯೋಚನಾ ಏನೂ ಇರೂದಿಲ್ಲ. ನಿಮ್ಮ ಹಟಾ ನಮ್ಮ ಜೀವಕ್ಕ ಮೂಲ ಆಗತಾವ. ಈಗ ನೋಡು, ಎಂಥಾ ಸಂಕಟದ ಪ್ರಸಂಗಾ ನಾವೇ ನಮ್ಮ ಮೈಮ್ಯಾಲ ತಂದುಕೊಂಡ್ಹಾಂಗ ಆತು! ಶ್ರೀನಿವಾಸಾ, ಕರುಣಾನಿಧಿ ! ನೀನೇ ಪಾರುಮಾಡಬೇಕಪ್ಪಾ ನನ್ನ !"

ವೇಣಕ್ಕನಿಗೆ ಅಳುವು ತುಂಬಿ ಬಂದಿತು. ಅಳುವಿನೊಂದಿಗೇ ಅವರು ಕೇಳಿದರು ;

" ಯಾರ ಕಡಿಂದ ಬಂದsದ ಆ ಪತ್ರ ! ಅಂಥಾ ಸಂಕಟದ ಪ್ರಸಂಗದ ಸುದ್ದೀ ಏನು ಬರದಾರ ?''

ಆವೇಶಗೊಂಡವರಾಗಿ ಗೋಪಾಲರಾಯರು ಹೇಳಿದರು :

" ಇದನ್ನ ಆ ವೆಂಕಣ್ಣಾನ ಗೆಳೆಯ ಬರದಾನ. ಏನು ಬರದಾನಂಬೂದನ್ನ ಓದತೀನಿ; ಚೆನ್ನಾಗಿ ಕಿವಿ ತೆಗೆದು ಕೇಳು :

ಶ್ರಿ. ಗೋಪಾಲರಾಯರೆ,

ನಿಮ್ಮ ಹಿತದ ದೃಷ್ಟಿಯಿಂದಲೇ ನಾವೆಲ್ಲ ಸೇರಿ, ನಿಮ್ಮ ಮಗಳನ್ನು ಮಾಡಿಕೊಳ್ಳುವುದಕ್ಕೆ ವೆಂಕಣ್ಣನ್ನ ಒಪ್ಪಿಸಿದಿವಿ. ಅದರಂತೆಯೇ ನಮ್ಮ ಗೆಳೆಯರು ಬಂದು ನಿಮ್ಮನ್ನು ಕೇಳಿದರೆ, ನೀವು ಮಗಳನ್ನು ಕೊಡಲಿಕ್ಕೆ ನಿರಾಕರಿಸಿದಿರಂತೆ. ಇದರ ಪರಿಣಾಮ ಏನು ಆಗಬಹುದೆಂಬುದರ ಕಡೆಗೆ ಲಕ್ಷ್ಯ ಕೊಟ್ಟಂತೆ ಕಾಣಲಿಲ್ಲ.

ನೀವು ಆ ದೇಶಭಕ್ತ ರತ್ನಾಕರನ ಮೇಲೆ ವಿಶ್ವಾಸ ಇಟ್ಟು ಹೀಂಗ ಮಾಡಿರಬಹುದು. ಆದರ ರತ್ನಾಕರನನ್ನು ಪೋಲೀಸರು ಹಿಡಿದು, ಇಷ್ಟರೊಳಗs ಜೇಲಿಗೆ ಕಳಿಸಿಕೊಟ್ಟಾರಂಬೂದನ್ನ ನೀವು ನೆನಪಿನೊಳಗ ಇಟ್ಟುಕೊಳ್ಳಿರಿ ! ರತ್ನಾಕರ ಇನ್ನು ನಿಮ್ಮ ಕಣ್ಣಿಗೆ ಬೀಳೂದು ಸಾಧ್ಯವೇ ಇಲ್ಲ.

ನೀವು ನಿಮ್ಮ ಮಗಳನ್ನು ವೆಂಕಣ್ಣಾಗ ಕೊಟ್ಟು ಮದುವೆ ಮಾಡಿದರೆ, ನಿಮಗೆ ಎಲ್ಲ ರೀತಿಯಿಂದಲೂ ಕಲ್ಯಾಣ ಆದೀತು. ಮುದ್ದಾಪುರದ ರಂಗಣ್ಣಾ ಅವರಿಗೆ ನೀವು ಮಗಳನ್ನ ಕೊಡುವವರಿದ್ದೀರಂತ ನಾವು ಕೇಳಿದ್ದೇವೆ. ಆದರೆ, ರಂಗಣ್ಣಾವರು ನಿಮ್ಮ ಮಗಳನ್ನ ಮಾಡಿಕೊಳ್ಳಲಿಕ್ಕೆ ಎಂದೂ ಸಿದ್ಧರಾಗದ ಹಾಗೆ ನಾವು ವ್ಯವಸ್ಥಾ ಮಾಡಿದ್ದೇವೆ. ಈಗ ನೀವು ಒಳ್ಳೆಯ ಮಾತಿನಿಂದ, ನಿಮ್ಮ ಮಗಳನ್ನು ವೆಂಕಣ್ಣಾಗ ಮದಿವೀ ಮಾಡಿಕೊಟ್ಟರೆ ಸರಿ. ಇಲ್ಲವಾದರೆ ನೋಡಿರಿ, ನಿಮ್ಮ ಮಗಳ ದುಶ್ಚಾರಿತ್ರ್ಯದ ಸುದ್ದಿ ಊರೂರಿಗೂ ಹಬ್ಬುವಂತೆ ಮಾಡುತ್ತೇವೆ. ಯಾರೂ ನಿಮ್ಮ ಮಗಳ ಕಡೆ ತಿರುಗಿ ನೋಡದ ಹಾಂಗ ಮಾಡುತ್ತೇವೆ. ನೀವೂ ತಿಳಿದವರಿದ್ದೀರಿ. ಏನು ಮಾಡಬೇಕೆಂಬುದನ್ನ

ವಿಚಾರಮಾಡಿ ನಿರ್ಣಯಿಸಿರಿ ! ವೆಂಕಣ್ಣನ್ನ ಅಳಿಯನ್ನ ಮಾಡಿಕೊಂಡರ, ನಿಮಗ ಯಾವ ಸಂಕಟದ ಪ್ರಸಂಗವೂ ಬರಲಾರದು — ಅಂಬೂದನ್ನ ಲಕ್ಷ್ಯದೊಳಗ ಇಟ್ಟುಕೊಳ್ಳಿರಿ !!

ಸಮ

ಬಳವಂತರಾವ್ ಆಗಲಾವೇ.

ಒಂದು ಬಗೆಯ ಹುಚ್ಚುಆವೇಶದಲ್ಲಿಯೇ ಗೋಪಾಲರಾಯರು ಇಡಿಯ ಪತ್ರವನ್ನು ಓದಿದರು; ರೊಚ್ಚಿನಿಂದ ಅದನ್ನು ಕೆಳಗೆ ಚೆಲ್ಲಿ, ಮಂಕು-ಕವಿದವರಂತೆ ಸುಮ್ಮಗೆ ಕುಳಿತುಬಿಟ್ಟರು.

ವೇಣಕ್ಕ ಬಿಕ್ಕಿ ಬಿಕ್ಕಿ ಅಳಲು ತೊಡಗಿದರು. ಅಡಿಗೆಯ ಮನೆಯಲ್ಲಿ ಇದ್ದ ಕಾವೇರಿಗೆ ತಾಯಿಯ ಅಳುವಿನ ಸಪ್ಪಳು ಕೇಳಿಸಿತೇನೋ ! ಗಾಬರಿಯಾಗಿ ಹೊರಗೆ ಬಂದಳು. ಬೆದರುನುಡಿಯಲ್ಲಿಯೆ ಕೇಳಿದಳು :

" ಯಾಕs ಅವ್ವಾ ? ಹೀಂಗ್ಯಾಕ ? ಅಳತೀ ಯಾಕ ? "

ವೇಣಕ್ಕನಿಗೆ ದುಃಖ ತುಂಬಿ ಬಂದಿತು. ಗಟ್ಟಿಯಾಗಿ ಅಳುತ್ತ ಮನದ ಉರಿಯನ್ನು ಹೊರಗೆ ಹಾಕಿದರು :

" ಈವೊತ್ತು.... ನಿನ್ನ ಹುಟ್ಟಿದ ದಿವಸ ಕಾವೇರೀ ! .... ಮಂದಿಯೆಲ್ಲಾ ಮಕ್ಕಳ ಹುಟ್ಟಿದ ದಿವಸಾ, ಸುಖದಿಂದ ನಕ್ಷೋತ್ಸ ಮಾಡತಾರ !....ದುರ್ದೈವ ನಮ್ಮದು........ನಾವು ನಿನ್ನ ಹುಟ್ಟಿದ ದಿವಸಾ ದುಃಖದಿಂದ ಅತುಗೋತ್ಸ ಮಾಡಲಿಕ್ಕೆ ಹತ್ತೀವಿ ! "

ಕಾವೇರಿಗೆ ಏನೂ ತಿಳಿಯದಂತಾಯಿತು. ತಂದೆಯ ಕಡೆಗೆ ನೋಡಿ-ದಳು. ಅವರೂ ಕಂಬನಿಯ ಕಣ್ಣುಗಳಿಂದ ಸುಮ್ಮನೆ ಕುಳಿತಿದ್ದರು. ಪತ್ರ ಅಲ್ಲಿಯೇ ಬಿದ್ದಿದ್ದಿತು. ಕಾವೇರಿಗೆ ಏನು ಹೊಳೆಯಿತೋ ಏನೋ; ಮುಂದೆ ನಡೆದುಬಂದು, ಪತ್ರವನ್ನು ಕೈಯಲ್ಲಿ ತೆಗೆದುಕೊಂಡು ಓದಲು ತೊಡಗಿದಳು. ಗೋಪಾಲರಾಯರೂ ತಡೆಯಲಿಲ್ಲ; ವೇಣಕ್ಕನೂ ಬೇಡವೆನ್ನಲಿಲ್ಲ. ಕಾವೇರಿ ನಿದಾನವಾಗಿ ಪತ್ರವನ್ನು ಓದಿ ಮುಗಿಸಿದಳು. ಅವಳ ಕಾಲಲ್ಲಿಯ ಬಲವೇ ಉಡುಗಿದಂತಾಯಿತು. ನಿಂತಲ್ಲಿಯೇ ಕುಳಿತುಬಿಟ್ಟಳು. ತಂದೆ-ತಾಯಿಗಳ ಕರುಣಾಮೂರ್ತಿಗಳನ್ನು ನಿಟ್ಟಿಸಿ ನಿಟ್ಟಿಸಿ ನೋಡಿದಳು. ಅವಳಿಗೆ ಅಳುವು ಬರಲಿಲ್ಲ ತಲೆಯಲ್ಲಿ ಒಂದರ ಹಿಂದೆ ಒಂದರಂತೆ ವಿಚಾರಗಳು ಬರಲುತೊಡಗಿದುವು. ಮನಸ್ಸು ಹೊಯ್ದಾಡಿ ಉಯ್ಯಾಲೆಯಾಡಲು ತೊಡಗಿತು. ಸ್ವಲ್ಪ ವೇಳೆಯಲ್ಲಿಯೆ ಕಾವೇರಿ ಮನಸ್ಸನ್ನು ಒಂದು ನೆಲೆಗೆ ನಿಲ್ಲಿಸಿ ಹೇಳಿದಳು :

"ಅಣ್ಣಾ, ನೀವು ಚಿಂತೆ ಮಾಡುವ ಕಾರಣವೇನೂ ಇಲ್ಲ. ಅವರಿಗೆ ಉತ್ತರಾ ಬರೆದು ಕಳಿಸಿಬಿಡಿರಿ!"

ಗೋಪಾಲರಾಯರು ಸುಮ್ಮನೆ ಕುಳಿತಿದ್ದರು. ವೇಣಕ್ಕ ಅಳುವನ್ನು ಒತ್ತಿಹಿಡಿದು, ಮಗಳನ್ನು ಕುತೂಹಲ ತುಂಬಿದ ದೈನ್ಯದೃಷ್ಟಿಗಳಿಂದ ನೋಡಲು ತೊಡಗಿದರು. ಆಗ ಕಾವೇರಿ ಮತ್ತೆ ಹೇಳತೊಡಗಿದಳು:

"ಅಣ್ಣಾ, ನಾನು ತಿಳಕೊಂಡೀನಿ: ನಮ್ಮ ಜನದೊಳಗ ಹೆಣ್ಣಿಗೆ ಮದಿವಿ ಆಗೂದು ಒಂದು ಮುಖ್ಯ ವಿಷಯ. ಹೆಣ್ಣಿನ ಆಶೆ-ಅಭಿಲಾಷೆಗಳನ್ನ ನೋಡುವವರು ಯಾರೂ ಇಲ್ಲ. ನಿಮಗ ನನ್ನ ಸಲುವಾಗಿ ತುಂಬ ಕಷ್ಟ ಆಯ್ತು. ನಿಮಗ ಸುಖಾ ಆಗುವ ಹಾಂಗಿದ್ದರ, ನಾನು ಏನು ಮಾಡಲಿಕ್ಕೂ ಸಿದ್ಧಳಿದ್ದೀನಿ! ಯಾವ ವರನಿಗೆ ಕೊಟ್ಟರೂ ಒಪ್ಪಿಕೊಂಡು ಮದಿವೀಮಾಡಿಕೋತೀನಿ! ನೀವು ಅವರಿಗೆ ಬರೆದು ತಿಳಿಸಿರಿ! ನಾನು ರೋಸಿಕೊಂಡು ಹೀಂಗ ಹೇಳತೀನಂತ ತಿಳಕೋಬ್ಯಾಡ್ರಿ; ಮನಃಪೂರ್ವಕ ಹೇಳತೀನಿ! ಇದ್ದದ್ದರೊಳಗ ನೀವು ನಿಶ್ಚಿಂತೆಯಿಂದ ಇದ್ದದ್ದನ್ನ ನಾನು ನೋಡಿದರ ಸಾಕು! ಒಂದಾದರೂ ನನಗ ಸಮಾಧಾನ!"

ಗೋಪಾಲರಾಯರ ಅಂತಃಕರಣ ಉಕ್ಕೇರಿ ಬಂತು. 'ಕಾವೇರೀ' ಎಂದು ಕೂಗಿ ಅವಳನ್ನು ತಬ್ಬಿಕೊಂಡರು. ಬಾಯಿಂದ ಮಾತು ಹೊರಡಲೊಲ್ಲದು. ಕಣ್ಣಿಂದ ಕಂಬನಿಯು ಕೋಡಿ ಹರಿಯುತ್ತಲಿದೆ. ವೇಣಕ್ಕ ಕರುಣಾಪ್ರತಿಮೆಯಾಗಿ ಈ ದೃಶ್ಯವನ್ನು ನೋಡುತ್ತ ನಿಂತಿದ್ದರು.

ಒಮ್ಮೆಲೆ ಕುಮುದಾ ಉತ್ಸಾಹದ ನಗೆಮೊಗವನ್ನು ಹೊತ್ತುಕೊಂಡು ಅಲ್ಲಿಗೆ ಬಂದಳು. ಇಲ್ಲಿಯ ಯಾವ ಪರಿಸ್ಥಿತಿಯ ಕಲ್ಪನೆಯೂ ಇಲ್ಲದೆ, ಬಾಗಿಲಿಗೆದುರಾಗಿಯೆ ನಿಂತುಕೊಂಡಿದ್ದ ವೇಣಕ್ಕನನ್ನು ನೋಡಿದೊಡನೆಯೆ ಉಲ್ಲಾಸಧ್ವನಿಯಲ್ಲಿ ಕೂಗಿ ನುಡಿದಳು:

"ಹುಂ, ಅಬಚೀ! ಪೇಡೇ ತರಿಸಿರಿ! ಹೊಟ್ಟೆತುಂಬಾ ಪೇಡೇ, ತಿಂದು ಹೋಗಲಿಕ್ಕಂತ ಬಂದೀನಿ!" ಎಂದು ನುಡಿಯುತ್ತಲೆ ಪಡಸಾಲೆಯೊಳಗೆ ಕಾಲಿರಿಸಿದಳು. ಕುಮುದೆಯ ಧ್ವನಿ ಕಿವಿಗೆ ಬಿದ್ದಾಗಲೇ, ಗೋಪಾಲರಾಯರು ಕಾವೇರಿಯನ್ನು ಬಿಟ್ಟು ದೂರ ಸರಿದು ಕುಳಿತಿದ್ದರು. ಕುಮುದಾ ಒಳಗೆಬಂದವಳೇ ಚಕಿತಳಾಗಿ, ಕ್ರಮವಾಗಿ ಒಬ್ಬೊಬ್ಬರ ಮುಖದ ಕಡೆಗೂ ನೋಡಿದಳು.

ಎಲ್ಲರ ಮುಖದಲ್ಲಿಯೂ ಕರುಣಾಭಾವ ಹರಿದಾಡುತ್ತಲಿದ್ದಿತು ವೇಣಕ್ಕ-ಗೋಪಾಲರಾಯರ ಕಣ್ಣುಗಳಂತೂ, ಅವರ ಮನದ ಅಳಲನ್ನು ಹೊರಗೆ ತೂರುತ್ತಲಿದ್ದುವು. ಕುಮುದಾ ಒಂದು ಕ್ಷಣ ಕಕ್ಕುಬಿಕ್ಕಾಗಿ ನಿಂತುಕೊಂಡು, ಆ ಮೇಲೆ ಕೇಳಿದಳು :

" ಇದೇನು ಅಬಚೀ, ಎಲ್ಲರೂ ಹಿಂಗ್ಯಾಕ ಇದ್ದೀರಿ ? "

ಮರುಕದ ಧ್ವನಿಯಲ್ಲಿ ವೇಣಕ್ಕ ಹೇಳಿದರು :

" ನಮ್ಮ ದುರ್ದೈವ ಕುಮುದಾ ! "

" ನನ್ನದೂ ದುರ್ದೈವನss ಕಾಣಿಸತsದ ! ನಿಮಗೊಂದು ಆನಂದದ ವರ್ತಮಾನಾ ಹೇಳಿ, ನಕ್ಕು ಕೆಲಿದು ಹೋಗಬೇಕಂತ ಬಂದರ, ಇಲ್ಲಿಯ ಪರಿಸ್ಥಿತಿ ಅದಕ್ಕ ಅವಕಾಶ ಇಲ್ಲದ್ಹಾಂಗss ಮಾಡೇದ ! "

ಎಲ್ಲರ ಮುಖದ ಮೇಲೂ ಕುತೂಹಲವು ಕುಣಿದಾಡಿತು. ಗೋಪಾಲ ರಾಯರು ಮುಖವೆತ್ತಿ ಮೆಲ್ಲಗೆ ಕೇಳಿದರು:

" ಆನಂದದ ವರ್ತಮಾನ ಏನದ ಕುಮುದಾ ? "

ಕುಮುದಾ ಮೂವರ ಮುಖನನ್ನೂ ಒಂದೊಂದು ಸಲ ನೋಡಿ, ಸಹಜ ಮಂದಹಾಸದೊಂದಿಗೆ ಹೇಳಿದಳು :

"ನಿನ್ನೆಯ ರಾತ್ರಿ ಪತ್ರ ಬಂದsದ; ರತ್ನಾಕರರಾಯರು ಬರೆದು ಕಳಿಸ್ಯಾರ!"

ಕಾವೇರಿ ತಟ್ಟನೆ ಎದ್ದು ಕುಮುದೆಯ ಹತ್ತಿರ ಬಂದು ನಿಂತಳು. ವೇಣಕ್ಕ ಆತುರಭಾವದವರಾಗಿ ಕೇಳಿದರು :

" ಏನಂದಿ ಕುಮುದಾ ? ರತ್ನಾಕರರಾಯರ ಪತ್ರ ? ಏನಂತ ಬಂದsದ ? ಅವರು ಸುರಕ್ಷಿತ ಇದ್ದಾರ ಹೌದಲ್ಲೋ ? "

ಕುಮುದಾ ಗಾಬರಿಯ ಧ್ವನಿಯಲ್ಲಿ ನುಡಿದಳು :

" ಯಾಕss ? ಸುರಕ್ಷಿತರಾಗೇ ಇದ್ದಾರಲಾ ! ಅವರೇ ತಮ್ಮ ಕೈಯಿಂದ ಬರೆದು ಕಳಿಸ್ಯಾರ ಪತ್ರಾ ! ಯಾಕ ? ನಿಮಗೇನಾರೇ ಪತ್ರ ಬಂದsದೇನು ? ' ಸುರಕ್ಷಿತ ಇದ್ದಾರ ಹೌದಲ್ಲೋ ' ಅಂತ ಯಾಕ ಕೇಳಿದಿರಿ ? "

" ಯಾಕೂ ಇಲ್ಲ, ಸುಮ್ಮನೆ ಕೇಳಿದೆ !" ಎಂದರು ವೇಣಕ್ಕ. ಕಾವೇರಿ ಗಡಿಬಿಡಿಯಿಂದ ಮುಂದುವರಿದು ಹೋಗಿ, ಅಲ್ಲಿಯೆ ಬಿದ್ದಿದ್ದ ಪತ್ರವನ್ನು ತಂದು ಕುಮುದೆಯ ಕೈಯಲ್ಲಿ ಕೊಟ್ಟು ಹೇಳಿದಳು :

" ಇದನ್ನ ಓದಿಕೊಂಡು ನೋಡು ! ಅವ್ವ ಹಾಂಗ ಯಾಕ ಕೇಳಿದ ಳಂಬೂದು ನಿನಗss ಗೊತ್ತಾಗತ್ತsದ ಕುಮುದಾ ! "

ಹೆದರಿಕೆ-ಆತುರಗಳಿಂದಲೆ ಕುಮುದಾ ಪತ್ರವನ್ನು ಓದಲು ತೊಡಗಿ-ದಳು. ಓದುತ್ತಿರುವಂತೆಯೆ ಆಕೆಯ ಮುಖವು ಚೆಂಬಣ್ಣಕ್ಕೇರುತ್ತ ನಡೆಯಿತು. ಕಣ್ಣುಗಳು ಅರಳಿ ಕೆಂಪಗಾದುವು. ಚೆಂದುಟಿ ಕಂಪಿಸಲು ತೊಡ-ಗಿತು. ಪತ್ರವನ್ನು ಓದಿ ಮುಗಿಸಿ ಫೂತ್ಕರಿಸಿದಳು :

" ದುಷ್ಟಜನರು ! ನೀಚ ಜನರು ! ಚಾಂಡಾಲರು ! ಯಾವುದನ್ನೂ ಮಾಡಲಿಕ್ಕೆ ಹೇಸದ ಹೊಲೆಯರು ! ಅಬಚೀ, ಗೋಪಾಲ ಕಾಕಾ ! ಈಗ ನನಗೆಲ್ಲಾ ತಿಳಿದ್ಹಾಂಗ ಆಯ್ತು.... ನೀವೆಲ್ಲಾ ಹೀಂಗ್ಯಾಕ ಇದ್ದೀರಿ ಅಂಬೂದು! ನಾನು ಒಳ್ಳೇ ಸಂದರ್ಭದೊಳಗss ಬಂದ್ಹಾಂಗ ಆಯ್ತು ! "

ವೇಣಕ್ಕ ಕೆರಳಿದ ಭಾವದವರಾಗಿ ಕೇಳಿದರು :

" ರತ್ನಾಕರನ ಪತ್ರ ಏನಂತ ಬಂದsದ ಕುಮುದಾ ? "

ಲೀಲಾವತಿಯಾದ ಕುಮುದಾ, ಎಲ್ಲವನ್ನೂ ಮರೆತು, ಮತ್ತೆ ತನ್ನ ಉತ್ಸಾಹದ ಮೂಲಸ್ಥಿತಿಗೆ ಬಂದು ಹೇಳಿದಳು :

" ಹಾಂಗss ಹೇಳತೀನೇನು ನಾನು ! ಅಬಚೀ, ಪೇಡೇದ ಪುಡಿಕೀ ತರಿಸಿರಿ ಮೊದಲು !"

ಕಾವೇರಿ ಕಣ್ಣುಗಳನ್ನರಳಿಸಿ ಆಶೆಯಿಂದ ಕುಮುದೆಯ ಕಡೆಗೆ ನೋಡಿ-ದಳು; ಆಗ ಕುಮುದಾ ನಗೆಯಾಟದ ನುಡಿಯಲ್ಲಿ ಹೇಳಿದಳು :

" ಚಿಂತೆಗೆ ಕಾರಣವೇನೂ ಇಲ್ಲ ಕಾವೇರೀ ? ಇಂದು ಸಂಜೀ ಕಡೇನss ನಿನ್ನ ಮನೋರಥಾ ಕೈಕೂಡಿಸುವವರ ಮುಖಾ ನೋಡಲಿಕ್ಕೆ ಸಿಗತsದ ! "

ವಾತಾವರಣ ಒಮ್ಮೆಲೆ ಬದಲಾಯಿತು. ಒಂದೆರಡೇ ನಿಮಿಷಗಳ ಹಿಂದೆ ನಾಟಕವನ್ನು ನಡೆಯಿಸಿದ್ದ ನಿರಾಶೆ-ದುಃಖಗಳು ಒಮ್ಮೆಲೆ ತೆರೆಯ ಮರೆ-ಯಲ್ಲಿ ಮಾಯವಾಗಿ, ಎಲ್ಲೆಲ್ಲಿಯೂ ಆಶೆ-ಉತ್ಸಾಹಗಳು ಕುಣಿಯಲು ತೊಡ-ಗಿದುವು ಗೋಪಾಲರಾಯರು ಕೇಳಿದರು :

" ಎಲ್ಲಿ ಅದ ಆ ಪತ್ರ ಕುಮುದಾ ? ಏನು ಬರೆದಾರ ಅದರೊಳಗ ? "

ಸೆರಗಿನಲ್ಲಿ ಮರೆಮಾಡಿಕೊಂಡು ಬಂದಿದ್ದ ಪತ್ರವನ್ನು ತೆಗೆದು ಗೋಪಾಲ ರಾಯರ ಕಡೆಗೆ ಕೊಡುತ್ತ ಕುಮುದಾ ಹೇಳಿದಳು :

" ಇದನ್ನ ರಾಮದುರ್ಗದ ಒಬ್ಬ ಡ್ರಾಯ್ವರು ತಂದುಕೊಟ್ಟ. ಅವ ತಂದುಕೊಟ್ಟಾಗ, ಹತ್ತುಗಂಟೆ ರಾತ್ರಿಯಾಗಿತ್ತು ! ಆಗs ಬಂದು ಕೊಡಬೇ. ಕಂತ ಮನಸ್ಸು ಹರಿದಾಡಿತು ಖರೆ; ಆದರ ಅಪ್ಪ 'ಈಗೆಲ್ಲಿ ರಾತ್ರಿ ಹೋಗತೀ? ಎಲ್ಲಾರೂ ಮಲಗಿರಬಹುದು, ನಾಳೆ ಮುಂಜಾನೆ ಹೋಗಿ ನೀನೇ ಕೊಟ್ಟುಬಾ!' ಅಂತ ಅಂದರಂತ, ಈಗ ಬಂದೆ ನಾನು. ನಿನ್ನೆಯ ರಾತ್ರಿ ನಾನು ಬಂದಿದ್ದರೇನೇ ಒಳ್ಳೇದಾಗತಿತ್ತೋ ಏನೋ ! "

ಗೋಪಾಲರಾಯರು ಮಾತನೇನೂ ಆಡದೆ, ಪತ್ರವನ್ನ ಕೈಯಲ್ಲಿ ತೆಗೆದುಕೊಂಡು ಗಟ್ಟಿಯಾಗಿ ಓದಲು ತೊಡಗಿದರು :

" ಸವಿನಯ ನಮಸ್ಕಾರಗಳು.

ಹಿರಿಯರಾದ ಗೋಪಾಲರಾಯರೆ,

ನನ್ನ ಗೆಳೆಯ ರಂಗಣ್ಣ, ತಮ್ಮ ಮಗಳನ್ನು ಮದುವೆಮಾಡಿಕೊಳ್ಳಲಿಕ್ಕೆ ಸಮ್ಮತಿಸಿದ್ದಾನೆಂದು ತಿಳಿಸಲು ತುಂಬ ಸಂತೋಷವೆನಿಸುತ್ತದೆ. ನನ್ನ ಮಾತಿನ ಮೇಲೆ ರಂಗಣ್ಣನ ನಂಬುಗೆ ಸಂಪೂರ್ಣವಾಗಿ ಇದೆ. ಆದರೆ ಅಳಿಯನಾಗುವವನನ್ನು ತಾವೂ, ಪತಿಯಾಗುವವನನ್ನು ತಮ್ಮ ಮಗಳೂ ಕಣ್ಣಾರೆ ನೋಡುವುದು ಒಳ್ಳೆಯದೆಂದು, ನಾನು ಅವನಿಗೆ ತಾ. ೨೨–೪–೩೦ ರಂದು ಧಾರವಾಡಕ್ಕೆ ಬರಲು ಹೇಳಿದ್ದೇನೆ. ನಾನೀಗ ಎಂತಹ ತೊಡಕಿನಲ್ಲಿ ಇದ್ದೇನೆಂಬುದರ ಕಲ್ಪನೆ ತಮಗೂ ಇರಬಹುದು. ಆದರೂ ಆದಷ್ಟು ಪ್ರಯತ್ನ ಮಾಡಿ, ಆ ದಿನ ನಾನೂ ಧಾರವಾಡಕ್ಕೆ ಬರಬೇಕೆಂದಿದ್ದೇನೆ. ಎಲ್ಲ ವಿಷಯ-ವನ್ನೂ ನಾನು ರಂಗಣ್ಣನಿಗೆ ತಿಳಿಸಿದ್ದೇನೆ. ತಾವು ಯಾವ ವಿಷಯಕ್ಕೂ ತೊಂದರೆಪಟ್ಟುಕೊಳ್ಳುವ ಕಾರಣವಿಲ್ಲ.

ಈ ಪತ್ರವನ್ನು ಓದಿಯಾದ ಮೇಲೆ, ಇದು ನಿಮ್ಮಲ್ಲಿ ಉಳಿಯದಂತೆ ಜಾಗ್ರತೆ ವಹಿಸಬೇಕು.

ತಮ್ಮವನೇ

ರ.........ರ "

ಪತ್ರವನ್ನು ಓದಿ ಮುಗಿಸಿದವರೇ ಗೋಪಾಲರಾಯರು ದೀರ್ಘವಾಗಿ ಉಸಿ-ರೊಂದನ್ನು ಬಿಟ್ಟರು. ತಮ್ಮ ಮೇಲಿನ ಬೆಟ್ಟದ ಭಾರವೊಂದು, ಒಮ್ಮಿದೊಮ್ಮೆ

ಸರಿದುಬಿದ್ದಂತೆ ಅವರಿಗೆನಿಸಿತು. ಆನಂದದ ಭರದಲ್ಲಿ ಒಮ್ಮೆಲೇ ಅವರು ಮಾತನಾಡಿದರು :

" ಎರಡೂ ನಿರ್ಜೀವ ಕಾಗದಗಳೇ ! ಒಂದು ದುಃಖದ ಕಡಲಲ್ಲಿ ನೂಕಿ ಮುಳುಗಿಸಿತು; ಇನ್ನೊಂದು ಆನಂದದ ಕಡಲೊಳಗ ಈಜಾಡಲಿಕ್ಕೆ ಹಚ್ಚಿತು! ಒಂದು ಮಾನವನ ಪಶುತನದ ಮಾದರಿ; ಇನ್ನೊಂದು ಮಾನವನಲ್ಲಿರುವ ದೇವತನದ ಮಾದರಿ ! ಕುಮುದಾ, ನಿನಗ ಪೇಡೇ ಕೊಡಲಿಕ್ಕೇ ಬೇಕಾಯ್ತು!"

ವೇಣಕ್ಕ ಹಿಗ್ಗಿದ ಹೃದಯದವರಾಗಿ ಹೇಳಿದರು :

" ಬರೇ ಪೇಡೇದ ಮ್ಯಾಲಃ ಯಾಕ ಕಳಿಸೂದು ? ಹ್ಯಾಂಗೂ ಇಂದ ಕಾವೇರಿಯ ಹುಟ್ಟಿದ ದಿನಾ ಅದ; ಈವೊತ್ತು ಇಲ್ಲೇ ಊಟಕ್ಕ ಬರಬೇಕು ಕುಮುದಾ ನೀನು ! "

ಕಾವೇರಿ, ಸಂತೋಷ ತುಂಬಿದ ಮುಖದಲ್ಲಿ ಕೃತಜ್ಞತೆಯ ಪ್ರತಿನಿಧಿ-ಗಳಾಗಿ ಅರಳಿನಿಂತಿದ್ದ ಕಣ್ಣುಗಳಿಂದ ಕುಮುದೆಯನ್ನು ನೋಡಿಯೇ ನೋಡುತ್ತಿದ್ದಳು; ಆಗ ಕುಮುದಾ ಹೇಳಿದಳು :

" ಇನ್ನೊಂದು ಪತ್ರ ಬಂದsದ ಅಬಚೀ ! ಅದರೊಳಗ ಬರೆದು ತಿಳಿ-ಸ್ಯಾರ : ಈಗಣ್ಣ—ಅಂದರ ನಿಮ್ಮ ಅಳಿಯದೇವರು–ಬಂದು ನಮ್ಮ ಮನಿ-ಯೊಳಗs ಇಳಕೊಳ್ಳುವವರು ಇದ್ದಾರಂತ. ಅವರು ಅಪರಿಚಿತರು; ಅವರ ವ್ಯವಸ್ಥಾ ಎಲ್ಲಾ ನೋಡಿಕೋಬೇಕು—ಅಂತ ಬೇಡಿಕೊಂಡಾರ ! "

ವೇಣಕ್ಕ ನಗೆಯಾಟದ ಧ್ವನಿಯಲ್ಲಿ ಕೇಳಿದರು :

" ಆ ಪತ್ರ ನಿನ್ನ ಹೆಸರಿಗೆ ಬಂದsದೋ, ಏನು ನಿಮ್ಮ ತಂದಿಯವರ ಹೆಸರಿಗೆ ಬಂದsದೋ ? "

ಕುಮುದಾ ನಾಚಿಕೆಯ ನಗೆ ನಗುತ್ತ " ಹೋಗರೀ ಅಬಚೀ ! ಇಲ್ಲ-ದ್ದೊಂದು ನಿಮ್ಮ ನಗೆಚಾಟಗಿ ! " ಎಂದು ನುಡಿದು, ಕಾವೇರಿಯ ಕೈಯನ್ನು ಹಿಡಿದು ಎಳೆದುಕೊಂಡು ಅಡಿಗೆಯ ಮನೆಗೆ ಹೋಗಿಬಿಟ್ಟಳು.

ವೇಣಕ್ಕ ಗೋಪಾಲರಾಯರನ್ನು ಮತ್ತೆ ಕೇಳಿದರು :

" ಇಂದು ಅಡಿಗೀ ಏನು ಮಾಡಬೇಕು ? "

ಗೋಪಾಲರಾಯರು ಸಡಿಲುಮನದಿಂದ ಹೇಳಿದರು :

"ನಾ ಏನು ಹೇಳಲಿ ಅಗನ್ನ? ಕುಮುದಾನ್ನ ಕಾವೇರಿನ್ನ ಕೇಳು! ಅವರೇನು ಮಾಡಂತ ಹೇಳತಾರ ಅದನ್ನ ಮಾಡಿಬಿಡು! ಏನಾದರೂ ಸಾಮಾನು ಬೇಕಾದರ ನನಗ ತಿಳಿಸು. ಪ್ಯಾಟಿಗೆ ಹೋಗಿ ತಂದು ಹಾಕತೀನಿ!"

ವೇಣಕ್ಕ ಉತ್ಸಾಹದ ನಡಿಗೆಯಲ್ಲಿ ಒಳಗೆ ನಡೆದರು. ಗೋಪಾಲ-ರಾಯರು ಎದ್ದು ಪೇಟೆಗೆ ಹೊರಡುವ ಸಿದ್ಧತೆ ಮಾಡಿಕೊಳ್ಳುತ್ತ ಗುಣು-ಗುಣಿಸುತ್ತಿದ್ದರು:

'ನೀನೇ ಅನಾಥಬಂಧು—ಕೃಷ್ಣಾ—ನೀನೇ ಕರುಣಾಸಿಂಧು!'

## ೨೭ನೆಯ ಪರಿಚ್ಛೇದ

ಬಹಳ ದಿನಗಳಿಗೆ ರತ್ನಾಕರ ಮನೆಗೆ ಬಂದುದನ್ನು ಕಂಡು, ತಾಯಿಗೆ ಹೃದಯ ಹಿಡಿಸಲಾರದಷ್ಟು ಆನಂದವಾಗಿದ್ದಿತು. ಆದರೊಂದಿಗೆ ಆತನ ಮೇಲಿರುವ ಸರಕಾರದ ವಾರಂಟಿನ ವರ್ತಮಾನ ತಿಳಿದುದರಿಂದ, ಆಗಾಗ ಅದು ನೆನಪಿಗೆ ಬಂದು,ಅಸಮಾಧಾನದ ತೆರೆಯೆದ್ದು ಮನವನ್ನುಮುಸುಕುತ್ತಲಿದ್ದಿತು. ಅಂತಹದರಲ್ಲಿಯೆ ಮಗನಿಗಾಗಿ ಬೆಳಗಿನ ಉಪಾಹಾರಕ್ಕೆಂದು ರುಚಿರುಚಿಯಾದ ತಿಂಡಿ-ತಿನಿಸುಗಳನ್ನು ಮಾಡಿ ಒದವಿಸಿದರು. ಸುಭದ್ರೆಯನ್ನು ಪೇಟೆಗೆ ಕಳುಹಿ ಏನೇನನೋ ಪದಾರ್ಥಗಳನ್ನು ತರಿಸಿ, ಮಧ್ಯಾಹ್ನದ ಅಡಿಗೆಗೆ ಅಣಿಮಾಡಿ-ಕೊಂಡರು. ಉಪಾಹಾರವನ್ನು ತೀರಿಸಿಕೊಂಡು ರತ್ನಾಕರ, ಕಿರುಮನೆಯಲ್ಲಿ ಹಾಸಿದ್ದ ಹಾಸಿಗೆಯ ಮೇಲೆ ಬಿದ್ದುಕೊಂಡು, ಏನೇನೋ ಯೋಚನೆಗಳ ಬೆನ್ನನ್ನು ಹತ್ತಿದ್ದ. ಯೋಚನೆಯಲ್ಲಿ ಇರುವಾಗಲೇ ಕಣ್ಣುಗಳು ಮುಚ್ಚಿ-ಕೊಂಡುವು. ದಣಿದಿದ್ದ ಮೈ-ಮನಗಳಿಗೆ ವಿಶ್ರಾಂತಿ ಬೇಕಾಗಿದ್ದಿತೇನೋ! ಗೊತ್ತಾಗದಂತೆಯೆ ನಿದ್ರೆ ಅವನನ್ನು ಆವರಿಸಿತು. ಎಚ್ಚರಿದ್ದಾಗ ಯೋಚಿಸು-ತ್ತಿದ್ದ ವಿಷಯಗಳು, ನಿದ್ದೆಹತ್ತಿದಾಗ ಯಾವ ವಿವಿಧ-ವಿಕೃತ ರೂಪಗಳನ್ನು ಪಡೆದು ಕನಸುಗಳಾಗಿ ಮನದೆದುರು ಬರುತ್ತಿದ್ದುವೋ!

ಮನೆಗೆಲಸ ಮಾಡುತ್ತಿರುವಾಗ ತಾಯಿಗೆ ಮಗನ ನೆನಪಾಗಲು, ಕೈಯಲ್ಲಿದ್ದುದನ್ನೆಲ್ಲ ಬಿಟ್ಟು ಕೋಣೆಯೊಳಗೆ ಹೋಗುವಳು- ಮಲಗಿದ್ದ

ಮಗನ ಮುಖವನ್ನು ಸ್ನೇಹಪೂರ್ಣ ದೃಷ್ಟಿಯಿಂದ ನಿಟ್ಟಿಸುತ್ತ ನಿಲ್ಲುವಳು. ಆಗ ತಾಯಿಯ ಹೃದಯ, ವಿವಿಧ ಭಾವನೆಗಳ ರಂಗಭೂಮಿಯಾಗುವುದು. ಅವುಗಳ ಅನುಭಾವ ಮುಖದಲ್ಲಿ ಮೂಡಿಕೊಳ್ಳುವುದು. ನಾಲ್ಕಾರು ಸಲ ಬಂದು ಬಂದು ನಿಂತು ನಿಟ್ಟಿಸುತ್ತಲಿದ್ದರೂ, ರತ್ನಾಕರನಿಗೆ ಅದರ ಅರಿವು ಇರಲಿಲ್ಲ ತಾಯಿ ಮೈತೊಳೆದುಕೊಂಡು ಮಡಿಯುಟ್ಟು ಅಡಿಗೆಗೆ ಕುಳಿತರು.

ರತ್ನಾಕರನಿಗೆ ಎಚ್ಚರಿಕೆಯಾದಾಗ ಸಮಯ ಮಧ್ಯಾಹ್ನವಾಗಿತ್ತು. ತಾಯಿಯ ಅಡಿಗೆ ಮುಗಿದಿತ್ತು. ಸುಭದ್ರೆ ಮಣೆ-ತಟ್ಟೆಗಳ ಸಿದ್ಧತೆಯನ್ನೂ ಮಾಡಿದ್ದಳು. ಮುಖವನ್ನು ತೊಳೆದುಕೊಂಡು ಬಂದು ರತ್ನಾಕರ ಊಟಕ್ಕೆ ಕುಳಿತ. ಊಟಕ್ಕೆ ಬಡಿಸುತ್ತಲಿದ್ದ ತಾಯಿಗೆ, ರತ್ನಾಕರನೊಡನೆ ಏನೋ ಮಾತನಾಡಬೇಕೆಂದು ಒಳಬಯಕೆ; ಆದರೆ ಈಗಲೇ ಬೇಡವೆಂಬ ವಿಚಾರ ಆ ಬಯಕೆಯನ್ನು ಹತ್ತಿಕ್ಕುವುದು. ರತ್ನಾಕರನ ಮನವನ್ನು ಆತನ ಮುಂದಿನ ಕಾರ್ಯಕ್ರಮದ ಯೋಚನೆ ತುಂಬಿದ್ದಿತು. ತಾಯಿಯೊಂದಿಗೆ ಏನಾದರೂ ಮಾತನಾಡಬೇಕೆಂದರೆ, ಯಾವ ವಿಷಯವನ್ನು ಕುರಿತು ಮಾತನಾಡ ಬೇಕೆಂಬುದೇ ಅವನಿಗೆ ಹೊಳೆಯದಾಯಿತು. ಏನೋ ಒಂದು ಬಗೆಯ ಸಂಕೋಚ ಭಾವ, ತಾಯಿ ಮಗ ಇಬ್ಬರನ್ನೂ ಆವರಿಸಿಬಿಟ್ಟಿದ್ದಿತು. ಊಟಕ್ಕೆ ಸಂಬಂಧಿಸಿದ ಬೇಕು-ಬೇಡಗಳ ಮಾತು ಮಾತ್ರ ಆಗಾಗ ನಡೆಯುತ್ತಿದ್ದಿತಷ್ಟೆ! ರತ್ನಾಕರನಿಗೆ ತಾನೇನೋ ತಪ್ಪು ಮಾಡುತ್ತಿರುವಂತೆ ಕಂಡಿತು. ತಾಯಿಯ ಪ್ರೀತಿಗೆ ಪ್ರತಿಯಾಗಿ ತಾನೇನೂ ಸಲ್ಲಿಸುತ್ತಿಲ್ಲವೆನಿಸಿತು. ಆದುದರಿಂದಲೆ ಬಿಗಿದ ಮನವನ್ನು ಸಡಲಿಸಿಕೊಂಡು ಮಾತನಾಡಲು ತೊಡಗಿದ :

" ಇದೇನು ! ಬಟಾಟೀ ಪಲ್ಯ ನಿಮಗ ಬೇಕಾಗೂದಿಲ್ಲೇನು ? ತೀರಿಸಿ-ತೀರಿಸಿದ್ಹಾಂಗ ನನಗs ಹಾಕಲಿಕ್ಕೆ ಹತ್ತೀದಿಯಲಾ ಅವ್ವಾ ನೀನು ! ನಿಮಗೂ ಇಟ್ಟುಕೊಂಡು ಹಾಕು ! "

ತಾಯಿ ತುಂಬುನೇಹದಿಂದ ನುಡಿದಳು :

" ಇರಲಿ ತಿನ್ನೋ ! ನಿನಗ ಬಟಾಟೀ ಪಲ್ಲ್ಯ ಪ್ರೀತಿ ಬಹಳ ! ನಮಗೇನು ಇದ್ದರೂ ಅಷ್ಟs, ಇಲ್ಲದಿದ್ದರೂ ಅಷ್ಟ ! ನಿನಗ ನನ್ನ ಕೈಮುಟ್ಟಿ ಎಂದು ಊಟಕ್ಕ ಹಾಕೇನೋ ಅಂತ ಅನಿಸಿತ್ತು, ನೋಡು ! "

ರತ್ನಾಕರನು ಅರೆನಿಮಿಷ ಸುಮ್ಮಗಿದ್ದು ಆ ಮೇಲೆ ಹೇಳಿದ:

" ಮುದ್ದಾಪುರಕ್ಕ ಹೋಗಿದ್ದೆ ನೋಡು ಅವ್ವಾ ! ಅಲ್ಲಿ ಆ ರಂಗಣ್ಣನ ಚಿಕ್ಕಮ್ಮ ಇದ್ದಾರಲಾ; ಅವರ ಸ್ವಭಾವನೂ ನಿನ್ನ ಹಾಂಗs ! ಊಟಕ್ಕ ಕೂತವರಿಗೆ ಎಷ್ಟು ಬಡಿಸಿದರೂ ಅವರಿಗೆ ತೃಪ್ತಿಯಿಲ್ಲ ! "

" ಅದಾಯ್ತು ! ರಂಗಣ್ಣಗ ಕನ್ಯಾ ಯಾವ ಊರಿಂದು ಬಂದsದ ? ಹುಡುಗಿನ್ನ ನೀನೂ ನೋಡಿದ್ದೀಯೇನು ?"

" ಧಾರವಾಡದ್ದೇ ಕನ್ಯಾ ! ನಾನು ನೋಡೀನಿ ! ಹುಡುಗಿ ಚೆಲೋ ಇದ್ದಾಳ. ಆಕಿ ಯೋಗ್ಯ ಹುಡುಗಿ ಇದ್ದಾಳಂತ ತಿಳಿದೇ, ಒಳ್ಳೇ ವರನ್ನ ಗಂಟುಹಾಕಿಕೊಡಬೇಕಂತ ನಾನು ಹವಣಿಸಿದೆ. ರಂಗಣ್ಣನೂ ಒಪ್ಪಿಗೀ ಕೊಟ್ಟ. ಇನ್ನೇನು ನನ್ನ ಕೆಲಸ ಮುಗಿದ್ಹಾಂಗ ಆಯ್ತು. ಆದರೂ ಅವರಿಗೆ ಇವರಿಗೆ ಪ್ರತ್ಯಕ್ಷ ಬೆಟ್ಟಿ ಮಾಡಿಸಿ ಮಾತು-ಕಥಿ ಮುಗಿಸಿ ಬಿಡೂದಷ್ಟು ಉಳಿದsದ ! ಇಂದು ಸಂಜಿಗೇ ರಂಗಣ್ಣ ಧಾರವಾಡಕ್ಕ ಬರತಾನ !"

" ಹಾಂಗಾದರ....ಇಂದ ನೀನು ಧಾರವಾಡಕ್ಕ ತಿರಿಗಿ ಹೋಗುವವ ಏನು ? "

" ಹೋಗಲೇ ಬೇಕು ! ನಿರ್ವಾಹವೇ ಇಲ್ಲ. ತನ್ನ ಮದಿವೀ ಕಾರ್ಯ ಮುಗಿಯುವ ತನಕಾ ನಾನು ಪೋಲೀಸರ ಕೈಗೆ ಸಿಕ್ಕದೆ ಹೊರಗs ಇರಬೇಕಂತ ರಂಗಣ್ಣನ ಅಪೇಕ್ಷಾ ಅದ. ಆದರ ಪೋಲೀಸರು ನನ್ನ ಹಿಡಿಯಬೇಕಂತ ಕಣ್ಣುಬಿಟ್ಟುಗೊಂಡs ತಿರಗಲಿಕ್ಕೆ ಹತ್ತ್ಯಾರ. ಏನಾಗತsದೋ ಏನೋ ! ಹೋಗುವುದಂತೂ ಹೋಗಲಿಕ್ಕೇಬೇಕು ! "

ತಾಯಿಯ ಮುಖ ಸಣ್ಣದಾಯಿತು. ಸುಮ್ಮಗೆ ಕುಳಿತು ನಿಟ್ಟುಸಿರೊಂದನ್ನು ಹೊರಗೆ ಹಾಕಿದಳು. ರತ್ನಾಕರ ಮತ್ತೆ ಮಾತನ್ನಾರಂಭಿಸಿದ :

" ಇದೊಂದು ಮದಿವಿಯ ಗೊಂದಲದೊಳಗ ಬೀಳದಿದ್ದರ, ಇಷ್ಟರೊಳಗs ನಾನು ಜೇಲಿನೊಳಗ ಇರತಿದ್ದೆ – ಜೇಲಿನ ರೊಟ್ಟಿ ಬ್ಯಾಳಿ ತಿಂದುಕೋತ ! ನಿನ್ನ ಈ ಶ್ರೀಖಂಡ, ಪುರಿ, ಬಟಾಟೀ ಪಲ್ಲ್ಯಾ, ಸಣ್ಣಕ್ಕಿ ಅನ್ನ ತಿನ್ನೂದು ನನ್ನ ದೈವದೊಳಗೆ ಅದ ಅಂದ ಮ್ಯಾಲ, ಅದು ಬಿಡತsದ ಹ್ಯಾಂಗ ಅವ್ವಾ ! "

ತಗ್ಗಿದ ಧ್ವನಿಯಲ್ಲಿ ತಾಯಿ ನುಡಿದಳು :

" ನಿನ್ನ ದೈವದೊಳಗ ಏನೇನು ಅದನೋ ಏನೋ ಅಪ್ಪಾ ! ನನಗೊಂದೂ ತಿಳಿಯದ್ಹಾಂಗ ಆಗೇಧ ! ನಿನ್ನ ವಾರಿಗಿಯವರೆಲ್ಲಾ ಮದಿವಿ ಆಗಿ ಸಂಸಾರ ಮಾಡಲಿಕ್ಕೆ ಹತ್ತ್ಯಾರ ! "

" ನಾನು ಮಾಡತಿರೂದೂ ಸಂಸಾರನss ಅವ್ವಾ ! ದೊಡ್ಡ ಸಂಸಾರ! ಇದು ನಿಮಗ ತಿಳಿಯಬೇಕು ! ಬರೇ ಹೆಂಡರ ಮಕ್ಕಳ ಲಂಪಟದೊಳಗ ಹನ್ನೆರಡು ತಾಸೂ ತೊಳಲತಿದ್ದರನss ಅದಕ್ಕ ಸಂಸಾರ ಅನಬೇಕೇನು ?"

~~ಭಾಗೀರಥಿ~~ ಅಲ್ಲಿಯೆ ನಿಂತುಕೊಂಡು ಕಿವಿಗೊಟ್ಟು ಕೇಳುತ್ತಲಿದ್ದಳು. ರತ್ನಾಕರ ತನ್ನ ಮಾತನ್ನು ಮುಂದುವರಿಸಿದ್ದ :

" ಅವ್ವಾ, ನೀನು ಪುರಾಣ-ಪುಣ್ಯಕಥಿಗಳನ್ನ ಇಷ್ಟು ಕೇಳತಿರತಿ! ಅದರೊಳಗ ಬರುವ ದೊಡ್ಡ ದೊಡ್ಡ ವ್ಯಕ್ತಿಗಳು ಪ್ರಸಿದ್ಧರಾಗಿ ತಮ್ಮ ಕಥೀ ಬರಿಸಿಕೊಂಡದ್ದು, ಸಾಮಾನ್ಯರೀತಿಯಿಂದ ಅವರು ಸಂಸಾರ ಮಾಡಿದರೂ ಅಂತೇನು ? ಜನರ ಕಲ್ಯಾಣಕ್ಕಾಗಿ ಅವರು ತಮ್ಮ ಸ್ವಂತದ ಸುಖ ತ್ಯಾಗ ಮಾಡಿದರೂ—ಅಂತss ಅಲ್ಲೇನು, ಅವರ ಮಹಿಮಾ ಕೇಳೂದು ? ಅವರು ಹಾಂಗ ಮಾಡಿದ್ದನ್ನ ಮೆಚ್ಚಿ ತಲೆದೂಗಿ ಸಂತೋಷಪಡತೀರಿ! ಅವರ್ಹಾಂಗss ನಿಮ್ಮ ಮಕ್ಕಳು ಮಾಡಲಿಕ್ಕೆ ಹತ್ತಿದರ, ಅಸಮಾಧಾನ ಪಡತೀರಿ! ಹರಿಶ್ಚಂದ್ರ ರಾಜ ಸತ್ಯಕ್ಕಾಗಿ ಸುಡುಗಾಡ ಕಾಯೂ ಕೆಲಸಾ ಮಾಡಿದಾ ಅಂತ ಅವನ್ನ ಎಷ್ಟೊಂದು ಭಕ್ತಿಯಿಂದ ನೋಡತೀರಿ ! ಹಾಂಗss ದೇಶದ ಸ್ವಾತಂತ್ರ್ಯಕ್ಕಾಗಿ ನಾವು ಜೇಲಿಗೆ ಹೋದರ, ದುಃಖದಿಂದ ಕರುಳು ಯಾಕ ಸುಟ್ಟುಕೊಳ್ಳಬೇಕು ನೀವು ! "

ತಾಯಿ ಮಾತನೇನೂ ಆಡಲಿಲ್ಲ. ರತ್ನಾಕರನ ಎಡೆಯಲ್ಲಿ ಕಡೆಯನ್ನ ಬಡಿಸಿ, ಮೊಸರು-ಹಾಲು ಹಾಕಿದರು : ರತ್ನಾಕರ ಮತ್ತೆ ಹೇಳಲು ತೊಡಗಿದ:

"ಅವ್ವಾ, ಕುಂತೀದೇವಿಯು ವೀರಹೃದಯದ ಕಥೆ ನಿನಗ ಗೊತ್ತದss ನೋ ಇಲ್ಲೋ ! ನಾ ಸಣ್ಣ ಹುಡುಗ ಇದ್ದಾಗ ವಿದುಲಾನ ಕಥೀ ನೀನss ಎಷ್ಟು ಆದರದಿಂದ ಹೇಳತಿದ್ದಿ ನೆನಪು ಅದss ನ ? ಸುನೀತಿ ಧ್ರುವನ್ನ ಮುದ್ದಿನಿಂದ ಮನಿಯೊಳಗss ಇರಿಸಿಕೊಂಡು ಬಿಟ್ಟಿದ್ದರ, ಆತನಿಗೆ ಇಂಥಾ ಉಚ್ಚಪದ ದೊರೀತಿತ್ತೇನು ? "

ತಾಯಿಯು ಮುಖದಿಂದ ಯಾವ ಉತ್ತರವೂ ದೊರೆಯಲಿಲ್ಲ. ರತ್ನಾಕರನು ಊಟವನ್ನು ಮುಗಿಸಿಕೊಂಡು ಎದ್ದ. ಕೈತೊಳೆದುಕೊಂಡು ಮರಳಿ ಬಂದು ನೋಡಿದಾಗ, ತಾಯಿ ತನ್ನ ಎಲೆಯನ್ನೂ ಬಡಿಸಿಕೊಂಡಿದ್ದಳು; ~~ಭಾಗೀರಥಿಯು~~ ಎಲೆಯನ್ನೂ ಬಡಿಸಿದ್ದಳು. ತಾಯಿ ಊಟಕ್ಕೆ ಕುಳಿತು-

ಕೊಳ್ಳುವಳೆಂಬುದು ತಿಳಿದ ಮೇಲೆ, ರತ್ನಾಕರ ಮತ್ತೆ ಕೋಣೆಯೊಳಗೆ ಹೋಗಿ ಅತ್ತಿತ್ತ ತಿರುಗಾಡಲು ತೊಡಗಿದ.

* * *

ಊಟ ಮಾಡುತ್ತಿರುವಾಗಲೇ ತಾಯಿ, ತಗ್ಗಿದ ಧ್ವನಿಯಲ್ಲಿ ಸುಭದ್ರೆಗೆ ಹೇಳಿದರು :

" ಕೇಳಿದೆಯೇನು ಸುಭದ್ರಾ, ರತ್ನಾಕರನ ಮಾತೆಲ್ಲಾ!"

ಸುಭದ್ರಾ ತಲೆಯನ್ನು ತಗ್ಗಿಸಿದಳು. ಮಾತನೇನೂ ಆಡಲಿಲ್ಲ: ಆಗ ತಾಯಿ - ಅಂಬಕ್ಕ, ಹೇಳಲು ತೊಡಗಿದರು.

" ರತ್ನಾಕರ ಹೇಳುವ ಮಾತು ಖರೇ ಅದ. ಮನುಷ್ಯರಿಗೆ ಸ್ವಾರ್ಥ ಅಂದರ, ಇಲ್ಲದ ಮೋಹಕ್ಕ ಹಾಕತsದ ! "

ಸುಭದ್ರಾ ಅಕ್ಕರದ ಧ್ವನಿಯಿಂದ ಕೇಳಿದಳು :

" ಪುರಾಣದೊಳಗ ಬರದದ್ದೆಲ್ಲಾ ಖರೇ ಇರತsದೇನು? ಒಂದು ವ್ಯಾಳ್ಯಾ ಖರೇ ಇದ್ದರೂ, ಈ ಕಾಲದೊಳಗ ಯಾರು ಅದರಂತೆ ನಡಕೋತಾರ?"

" ಯಾರೂ ನಡಕೊಳ್ಳೂದಿಲ್ಲಾ ಅಂತ ಚೆಲೋ ವಿಷಯ ಕೆಟ್ಟ ಆಗತs-ದೇನು ಸುಭದ್ರಾ? ಹಾಂಗ ನಡಕೊಂಡರ, ಜನಕ್ಕೆಲ್ಲಾ ಕಲ್ಯಾಣ ಆಗತsದಂತs ಪುರಾಣದೊಳಗ ದೊಡ್ಡದೊಡ್ಡವರ ಕಥೀ ಬರದಿಟ್ಟಾರ! "

" ಅದೆಲ್ಲಾ ಹಿಂದಿನ ಕಾಲದವರ ಕಥಿ! ಇಂದಿನ ಕಾಲದಾಗ, ಸುಖ-ದಿಂದ ಜೀವನಾ ಸಾಗಿಸುವ ಜನರು ಹ್ಯಾಂಗ ಇರತಾರ—ಹಾಂಗ ಇರಲಿಕ್ಕೆ ನಾವೂ ಪ್ರಯತ್ನ ಪಡಬೇಕು. ಅದನ್ನ ಬಿಟ್ಟು ಕಾಂಗ್ರೆಸ್ಸಿನ ಚಳವಳಿ ಮಾಡಿದೆ—ಜೇಲಿನೊಳಗ ಬಿದ್ದೆ—ಅಂದರ, ಅದರೊಳಗ ಸುಖಾ ಏನದ? ನೋಡಿದ್ದೀರಿಲ್ಲೋ ಅತ್ತ್ಯಾ, ನಮ್ಮ ಗಿರಣಿಯ ಸಾವುಕಾರರ ಮಗಳನ್ನ? ಆಕಿಯ ಗಂಡನೂ ಎಂ. ಎ. ಪರೀಕ್ಷಾ ಪಾಸ್‌ಮಾಡಿ, ಕಾಲೇಜಿನೊಳಗ ಪ್ರೊಫೇಸರ್ ಇದ್ದಾನಂತ! ಯಾವಾಗ ನೋಡಿದರೂ ಗಂಡಾ ಹೇಣತಿ ಮೋಟಾರಿನೊಳಗs ತಿರಿಗ್ಯಾಡತಿರತಾರ!"

" ಹೌದು ಸುಬ್ಬಾ, ನಿನ್ನ ಮಾತೂ ಖರೇ ಅದ! ಆದರ, ಒಬ್ಬೊಬ್ಬರ ಮನಸ್ಸು ಒಂದೊಂದು ರೀತಿ ಇರತsದ ನೋಡು! ಗಾಂಧಿಯವರು, ಇದ್ದ ಬ್ಯಾರಿಸ್ಟರಿಕೀ ಬಿಟ್ಟು ಸಂನ್ಯಾಸಿ ಆಗಿ, ದೇಶೀ ಚಳವಳಿಗೆ ನಿಂತರಂತವ್ವಾ!

ಅವರ ಹೆಂಡತಿ ಮಕ್ಕಳು ಎಲ್ಲಾರೂ ಅವರ ಜೋಡೀ ವನವಾಸಾ ಅನುಭವಿಸ-ಲಿಕ್ಕೆ ಸಿದ್ಧರಾಗಿ ನಿಂತಾರಂತ. ಇಷ್ಟೇ ಅಲ್ಲ, ಗಾಂಧಿಯವರ ಹೆಂಡತಿ ಕಸ್ತೂರಿ-ಬಾಯಿ, ಅಲ್ಲೆಲ್ಲೋ ದಕ್ಷಿಣ ಆಫ್ರಿಕಾ ಅಂತ ಇದ ಅಂತಲ್ಲಾ! ಅಲ್ಲಿ ಜೇಲಿ-ನೊಳಗ ಹೋಗಿ ಭಂಗೀ ಕೆಲಸಾ ಸುದ್ಧಾ ಮಾಡಿದರಂತ. ಈಗ ಸಹಿತ ಸತ್ಯಾಗ್ರಹ ಮಾಡಿ ತುರಂಗಕ್ಕ ಹೋಗಲಿಕ್ಕೆ ಸಿದ್ಧರಾಗ್ಯಾರಂತ!"

ಅಸಹ್ಯಭಾವವನ್ನು ತೋರಿಸುತ್ತ ಸುಭದ್ರಾ ನುಡಿದಳು :

"ಒಲ್ಲೆ ನನ್ನತಾಯಿ! ನನ್ನ ಕಡಿಂದಂತೂ ಇಂಥಾದೆಲ್ಲಾ ಸತ್ತರೂ ಆಗಲಿಕ್ಕಿಲ್ಲ. ಇಲ್ಲದ್ದೊಂದು ಹುಚ್ಚುಚ್ಚಾರ! ಹೆಂಗಸರಿಗೆ ಯಾಕ ಬೇಕು ಇದೆಲ್ಲಾ? ಸುಮ್ಮನ ಥಣ್ಣಗ ಮನ್ಯಾಗ ಇದ್ದುಬಿಡಬಾರದ? ಮುದಿಕಿ ಆಗ್ಯಾಳ ನಂತಾಯಿ!"

ಅಂಬಕ್ಕ ಮಾತನೇನೂ ಆಡದೆ, ಯಾವುದೋ ವಿಚಾರದ ತೂಗಾಟದಲ್ಲಿ, ಕೇವಲ ಯಂತ್ರದಂತೆ ತುತ್ತನ್ನು ಬಾಯಲ್ಲಿ ಹಾಕಿಕೊಳ್ಳುತ್ತಿದ್ದರು. ಆಗ ಸುಭದ್ರಾ ಮತ್ತೆ ಹೇಳಿದಳು :

"ಅತ್ತ್ಯಾ! ನೀವು ಒತ್ತಾಯ ಮಾಡಿ ಯಾಕ ಹೇಳಬಾರದು? ಹ್ಯಾಂಗೂ ಎಂ. ಎ. ಪರೀಕ್ಷಾ ಫಸ್ಟ್‌ಕ್ಲಾಸ್ ಪಾಸ್ ಆಗ್ಯಾರ! ಪ್ರಯತ್ನ ಮಾಡಿದರ ಎಲ್ಲಿಯಾದರೂ ದೊಡ್ಡ ನೌಕರಿ ಸಿಗತದ. ಈ ಚಳವಳಿ—ಜೇಲು—ಬಿಟ್ಟುಬಿಡಂತ ಯಾಕ ಹೇಳಬಾರದು ನೀವು?"

"ನೋಡು. ಸುಬ್ಬಾ! ರತ್ನಾಕರ ಕಣ್ಣೆದುರಿಗೆ ಇಲ್ಲದಾಗ, ಹೀಂಗೆಲ್ಲಾ ಒತ್ತಾಯ ಮಾಡಬೇಕಂತ ಬಹಳ ಅನಿಸತಿರತದ; ಆದರ ಎದುರಿಗೆ ಇದ್ದು ಅವನ ಮಾತು ಕೇಳಲಿಕ್ಕೆ ಹತ್ತಿದೆನೆಂದರ, ಅವನ ಅಪೇಕ್ಷಾದ ವಿರುದ್ಧ ನಾನು ಏನೂ ಮಾತಾಡಬಾರದೂ - ಅಂತ ಅನಿಸಿಬಿಡತದ! ಅಂವಗ ತಿಳಿದಷ್ಟು ನಮಗ ಏನು ತಿಳೀತದ ಹೇಳು ಸುಬ್ಬಾ?"

ಆಕ್ರೋಶಸ್ವರದಲ್ಲಿಯೇ ಸುಭದ್ರಾ ಹೇಳಿದಳು :

"ನೌಕರೀ ಮಾಡಿ ದುಡ್ಡುಗಳಿಸಿ ಸುಖಾ ಅನುಭವಿಸುವದನ್ನು ಬಿಟ್ಟು, ಹೀಂಗ ವನವಾಸಾ ಅನುಭವಿಸಲಿಕ್ಕೆ ಸಿದ್ಧರಾಗೂದಂದರ, ಇದು ತಿಳಿವಳಿಕೀ ಲಕ್ಷಣೇನು?"

ಅಂಬಕ್ಕನ ಊಟ ಮುಗಿಯಿತೋ ಇಲ್ಲವೋ, ಎದ್ದು ಬಿಟ್ಟರು. ಸುಭದ್ರಾ ಉಣ್ಣುತ್ತಲಿದ್ದ ಮೊಸರನ್ನವನ್ನು ಮುಗಿಸಿ ಎದ್ದಳು. ಆಕೆಯ ಮುಖದ ಮೇಲೆ ಸಂತಾಪದ ಭಾವರೇಷೆಗಳು ಕಾಣುತ್ತಲಿದ್ದುವು. ನಿರ್ವಾಹವಿಲ್ಲದೆ ಮಾಡುವವರಂತೆ ಮನೆಗೆಲಸವನ್ನು ಮಾಡುತ್ತಲಿದ್ದಳು. ಮನೆಗೆಲಸ ಮುಗಿದ ಮೇಲೆ, ಹೆಚ್ಚು ಕಾಲ ಅಲ್ಲಿ ಉಳಿಯಲಿಲ್ಲ. ಮನೆಗೆ ಹೋಗುತ್ತೇನೆಂದು ಹೊರಟು ಬಿಟ್ಟಳು.

* * * * *

ಸಂಜೆಯು ಐದು ಗಂಟೆಯಾದಾಗ, ಅಂಬಕ್ಕ ರತ್ನಾಕರನ ಬಳಿ ಬಂದು ಕುಳಿತುಕೊಂಡರು. ರತ್ನಾಕರನು ಬೆಳಗಿನ 'ಧಾರವಾಡ ಸಮಾಚಾರ' ಪತ್ರಿಕೆಯನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತಿದ್ದ. ತಾಯಿ ಬಂದೊಡನೆಯೇ ರತ್ನಾಕರ ವಾತ್ಸಲ್ಯದ ನಗೆಯೊಂದಿಗೆ ಹೇಳಿದ :

"ಇದರೊಳಗೊಂದು ವಿಚಿತ್ರ ಸುದ್ದಿ ಬಂದsದ ನೋಡು ಅವ್ವಾ! ನಿನ್ನೆಯ ದಿನ, ಧಾರವಾಡದ ಮಾಳಾಪುರ ಭಾಗದೊಳಗ, ಒಬ್ಬ ಹೆಣ್ಣು ಮಗಳು ಬಾವಿಯೊಳಗ ಬಿದ್ದು ಆತ್ಮಹತ್ಯ ಮಾಡಿಕೊಂಡಾಳಂತ!"

ತಾಯಿ ಆಶ್ಚರ್ಯದಿಂದ ಕೇಳಿದಳು :

"ಅದ್ಯಾಕ? ಆಕಿಗೇನು ಪ್ರಸಂಗ ಬಂದಿತ್ತಂತ ಅಂಥಾದು? ಗಂಡ ಇದ್ದಾಕಿಯೋ ಏನು ಇಲ್ಲದಾಕಿಯೋ!"

"ಯಥೇಷ್ಟ ಗಂಡ ಇದ್ದ ತರುಣ ಹೆಣ್ಣುಮಗಳs ಅಂತ! ಗಂಡ ಒಬ್ಬ ಹೈಸ್ಕೂಲ್ ಮಾಸ್ತರಂತ. ಗಾಂಧಿಯವರ ಭಕ್ತನಂತ. ಕೆಲಸಾ ಬಿಟ್ಟು ತಾನೂ ಸತ್ಯಾಗ್ರಹಕ್ಕ ಹೋಗತೀನಂತ ಹೆಂಡತಿಗೆ ಹೇಳಿದನಂತ. ಆಕಿ ಬ್ಯಾಡಂತ ಹಟಾ ಹಿಡಿದು ಜಗಳಾಡಿದಳಂತ. 'ನಾಳೆಯ ದಿವಸ ನಾನು ಹೋಗುವವನೇ!' ಎಂದು ಆತನೂ ಹಟದಿಂದ ಹೇಳಿ, ಹೊರಗ ತಿರುಗಾಡಲಿಕ್ಕೆ ಹೊರಟು ಹೋದನಂತ. ದಿನದಂತೆ ರಾತ್ರಿ ಎಂಟು ಗಂಟೆಗೆ ಮನಿಗೆ ಬಂದು ನೋಡತಾನ; ಮನಿಯೊಳಗ ಯಾರೂ ಇರಲಿಲ್ಲ. ಬಾಗಿಲು ಹಾಂಗs ತಗದಿತ್ತಂತ. ಮನ್ಯಾಗ ದೀಪಾ ಸಹಿತ ಹಚ್ಚಿರಲಿಲ್ಲ. ತಾನೇ ದೀಪಾ ಹಚ್ಚಿ, ಮನಿತುಂಬಾ ಹುಡುಕಾಡಿದನಂತ; ನೆರೆಹೊರೆಯವರನ್ನ ಕೇಳಿದನಂತ. ಯಾರಿಗೂ ಏನೂ ಗೊತ್ತಾs ಇರಲಿಲ್ಲ.

ಕೊನೆಗೆ ಸಂಶಯ ಬಂದು, ಹಿತ್ತಲ ಬಾವಿಯೊಳಗ ದಿಪಾಬಿಟ್ಟು ನೋಡಿದ ನಂತ; ಹೆಣಾ ತೇಲಾಡತಿತ್ತಂತ !”

ತಾಯಿ ಗದಗದನೆ ನಡುಗಿದಳು. ಕಂಪಿಸುವ ಧ್ವನಿಯಲ್ಲಿ ಹೇಳಿದಳು :

“ ಎಂಥೆಂಥಾ ವಿಚಿತ್ರ ಸ್ವಭಾವದ ಹೆಂಗಸರಪ್ಪಾ ರತ್ನಾ !”

“ ನೋಡು ಅವ್ವಾ ! ನಮ್ಮ ಸಮಾಜದೊಳಗ ‘ ವಿಷಮ ವಿವಾಹ ’ ಅಂತ ಕೇವಲ ಗಂಡು-ಹೆಣ್ಣಿನ ವಯಸ್ಸಿನ ಅಳತೀಮ್ಯಾಲಿಂದ ನೋಡಿ ಅಂತಿರತಾರ ! ಸ್ವಭಾವದ ವಿಷಮತಾದ ಕಡೆಗೆ ಯಾರೂ ಲಕ್ಷ್ಯವನ್ನೇ ಕೊಡತಿರೂದಿಲ್ಲ. ಅದರಿಂದಽನಽ ಎಲ್ಲಿ ನೋಡಿದರೂ ಸಾಮರಸ್ಯದ ಸಂಸಾರ ಅಂದರ ಕಣ್ಣಿಗೆ ಸುದ್ಧಾ ಬೀಳದ್ಹಾಂಗ ಆಗೇದ ! ಏನೋ ಕನ್ಯಾ ವರಾ ಕೂಡಸತಾರ, ಮದಿವಿ ಆಗತಽದ, ಮಕ್ಕಳು ಹುಟ್ಟತಿರತಾವ; ಆದರ ದಾಂಪತ್ಯದ ಸುಖಾ ಅಂಬೂದು ಕನಸಿನ ಮಾತಽ ಆಗಿರತಽದ ಎಲ್ಲಾರಿಗೂ !”

ಒಂದೆ ಒಂದು ನಿಮಿಷ ಸುಮ್ಮನೆ ಕೂತಿದ್ದು, ಬಳಿಕ ತಾಯಿ ಹೇಳಿದಳು :

“ ಹೌದು ರತ್ನಾಕರಾ ! ಇಂಥಾ ಪರಿಸ್ಥಿತಿ ಇದ್ದದ್ದೇನೂ ಸುಳ್ಳಲ್ಲ. ಈಗ ನಿನ್ನ ಮುಂದ ನನ್ನ ಹೃದಯ ಬಿಚ್ಚಿ ಹೇಳತೀನಿ ನೋಡು ! ನಾನು ಸುದ್ಧಾ ಇಂಥಾದಽ ತಪ್ಪು ಮಾಡಲಿಕ್ಕೆ ಸಿದ್ಧಳಾಗೀನಿ. ಏನಾದರೂ ಆಗಲಿ, ನೀ ಮದಿವೀ ಮಾಡಿಕೊಂಡು ಮನೀ ಹಿಡಿದು ಇರಬೇಕೆಂಬುವ ನನ್ನ ಆಶಕ್ತ ಮನಸ್ಸು, ಇದರ ಯಾವ ವಿಚಾರವನ್ನೂ ಮಾಡದೆ, ಸುಭದ್ರೆಗೆ ಏನೇನೋ ಆಶಾಹಚ್ಚಿತು; ತನ್ನ ತಂದಿಯ ಮಾತು ಕೇಳದೆ, ‘ರತ್ನಾಕರನೊಂದಿಗೇ ಮದಿವೀ ಮಾಡಿಕೋತೀನಿ !’ ಅಂತ ಹಟಾ ಹಿಡಯಲಿಕ್ಕೆ ಬೋಧಿಸಿತು. ಇದು ನನ್ನ ತಪ್ಪು ರತ್ನಾಕರ ! ನಿನ್ನ ಆಶಾ ಅಭಿಲಾಷೆಗಳೇ ಬ್ಯಾರೆ; ಆಕಿಯ ಆಶಾ.ಅಭಿಲಾಷೆಗಳೇ ಬ್ಯಾರೆ ! ಇಬ್ಬರಲ್ಲಿಯೂ ಹೃದಯದ ಹೊಂದಿಕಿ ಆಗೂದು ಸಾಧ್ಯ ಇಲ್ಲಽ ಇಲ್ಲಾ ಅಂತ, ಈಗ ನನಗ ಅನಿಸಲಿಕ್ಕೆ ಹತ್ತೇದ !”

ರತ್ನಾಕರ ಸಮಾಧಾನದ ನಗೆ ನಗುತ್ತ ಮಾತಾಡಿದ :

“ ನೀವಿಬ್ಬರೂ ಮಾತಾಡತಿರೂದನ್ನ ನಾನು ಮರೆಗೆ ನಿಂತು ಕೇಳಿದೆ ಅವ್ವಾ ! ಒಂದು ರೀತಿಯಿಂದ ನಾನು ಇಲ್ಲಿಗೆ ಬಂದದ್ದು ಒಳ್ಳೆಯದೇ ಆಯಿತು. ಈ ವಿಷಯವನ್ನ ನಿನ್ನ ಮುಂದ ಹ್ಯಾಂಗ ಹೇಳಿ, ನಿನ್ನ ಮನಸ್ಸನ್ನ ಒಪ್ಪಿಸ

ಬೇಕಂಬೂದು, ನನಗೂ ತಿಳಿಯುದ್ಹಾಂಗ ಆಗಿತ್ತು. ಈಗ ನೀನಾಗಿಯೇ ಈ ವಿಚಾರಕ್ಕೆ ಬಂದಿದ್ದೀಯೆಂದ ಮ್ಯಾಲ, ನನಗ ಅನುಕೂಲವೇ ಆಯ್ತು ! ನೀನು ಪ್ರಯತ್ನ ಮಾಡಿ, ಸುಭದ್ರಾನ ಮನಸ್ಸು ತಿದ್ದಿ, ಬ್ಯಾರೇ ಮದುವಿಗೆ ಒಪ್ಪುವ ಹಾಂಗ ಮಾಡು! ಪಾಪ, ಮಾಮಾ ಬಹಳ ಚಿಂತೆಯೊಳಗ ಬಿದ್ಹಾಂಗ ಕಾಣಿಸತದ !"

ತಾಯಿ ನಿಟ್ಟುಸಿರಿಕ್ಕಿ ಸುಮ್ಮನೆ ಕುಳಿತಳು. ಆಗ ರತ್ನಾಕರನೇ ನುಡಿದ :

" ಅವ್ವಾ, ನೀನು ಮನಸಿಗೆ ಹಚ್ಚಿಕೊಂಡು ಕೊರಗಬೇಡ. ನಾನೇನೂ ಸಂನ್ಯಾಸಿ ಆಗಲಿಕ್ಕೆ ಹೊರಟಿಲ್ಲ. ಇಂದಿಲ್ಲ ನಾಳೆ ನಾನು ಮದುವೆ ಮಾಡಿಕೊಂಡು ಗೃಹಸ್ಥನಾಗಿ ಜೀವಿಸಬೇಕೆಂತಲೇ ನನ್ನ ಸಂಕಲ್ಪ ಅದ. ನಿನ್ನ ಮನಸಿಗೆ ಒಪ್ಪುವಂಥಾ ಸೊಸೆಯ ಮುಖವೇ ನಿನಗೆ ನೋಡಲಿಕ್ಕೆ ಸಿಗತದ !"

ಸಂಭ್ರಮ-ಆತುರಗಳಲ್ಲಿ ತಾಯಿ ಕೇಳಿದಳು :

" ಅಂದರೇನು ? ಎಲ್ಲಿಯಾದರೂ ನೋಡಿ ಇಟ್ಟಿದ್ದೀಯೇನು ?"

ರತ್ನಾಕರನ ಕಣ್ಣೆದುರು ಒಮ್ಮೆಲೆ ಕುಮುದೆಯ ನಗೆಮೊಗ ಸುಳಿದು ಹೋಯಿತು. ಎದೆಯು ಅದುರಿದಂತಾಯಿತು. ಸಾವರಿಸಿಕೊಂಡು ಮಾತನಾಡಿದ :

" ಮದುವೆ ಮಾಡಿಕೊಳ್ಳಲಿಕ್ಕೆ ಸಿದ್ಧನಾದಾಗ ಒಳ್ಳೆಯ ಹೆಣ್ಣುಗಳಿಗೇನು ಕಡಿಮಿ ಅವ್ವಾ ! ಸದ್ಯ ಈ ನನ್ನ ತಪಸ್ಸನ್ನ ಮುಗಿಸತೀನಿ. ತಪಸ್ಸಿಗೆ ತಕ್ಕ ಫಲ ಸಿಕ್ಕೇ ಸಿಗತದಂತ ನಿನಗ ವಿಶ್ವಾಸ ಇರಲಿ-ಆಯ್ತು !"

ದೂರದ ಸುಖದಾಶೆಯಿಂದ ತಾಯಿಯ ಹೃದಯಕ್ಕೆ ಒಂದು ಬಗೆಯ ಸಮಾಧಾನದ ಸೋಂಕು ತಗುಲಿದಂತಾಯಿತು. ಮೌನವನ್ನು ವಹಿಸಿ ಸುಮ್ಮಗೆ ಕುಳಿತಳು :

ಏಳುವರೆ ಗಂಟೆಯಾಗಿ ಮುಂಗತ್ತಲು ಬೀಳಲು ತೊಡಗಲು, ರತ್ನಾಕರ ಬಟ್ಟೆಗಳನ್ನು ಬದಲಿಸಲು ತೊಡಗಿದ. ಕಾವಿಯ ಬಣ್ಣದ ಪಂಚೆಯನ್ನುಟ್ಟುಕೊಂಡ. ಕಾವಿಯ ಉದ್ದಂಗಿಯನ್ನು ತೊಟ್ಟುಕೊಂಡು ಮುಖಕ್ಕೆಲ್ಲ ವಿಭೂತಿಯನ್ನು ಲೇಪಿಸಿಕೊಂಡ; ತಲೆಗೆ ಕಾವಿಯ ಮುಂಡಾಸ ಸುತ್ತಿಕೊಂಡ. ಗಂಟೆಗಳೆರಡೂ ಎರಡೂ ಪಕ್ಕಗಳಲ್ಲಿ ನೇತಾಡುವಂತೆ, ಅವುಗಳಿಗೆ

ಕಟ್ಟಿದ ಹೆಗ್ಗವನ್ನು ಕುತ್ತಿಗೆಯ ಮೇಲೆ ಹಾಕಿಕೊಂಡ ತಾಯಿ, ಮಗನ ಈ ಪಾತ್ರಪ್ರಸಾಧನವನ್ನು ವಿಸ್ಮಯದಿಂದ ಎವೆಯಿಕ್ಕದೆ ನೋಡುತ್ತಲಿದ್ದರು. ರತ್ನಾಕರ ನಗೆಮೊಗದಿಂದ ತಾಯಿಗೆ ನಮಸ್ಕರಿಸಿ, ಮನೆಯಿಂದ ಹೊರಬಿದ್ದ. ಬಾಗಿಲಲ್ಲಿ ನಿಂತುಕೊಂಡು ತಾಯಿ ಒಂದೆಸವನೆ ನಿಟ್ಟುಸುತ್ತಲಿದ್ದರು. ಒಂದೆರಡು ನಿಮಿಷಗಳಲ್ಲಿಯೆ ಗುಟಿಗಳ ನಿನಾದ ಕೇಳಿಸತೊಡಗಿತು.

## ೨೮ನೆಯ ಪರಿಚ್ಛೇದ

ರಂಗಣ್ಣ ದತ್ತೋಬಾನ ಬಸ್ಸಿನಲ್ಲಿಯೆ ಧಾರವಾಡಕ್ಕೆ ಬಂದುದರಿಂದ, ಖಾದಿಯ ಉಡಿಗೆ–ತೊಡಿಗೆಯಲ್ಲಿದ್ದರೂ ಆತನಿಗೆ ಪೋಲೀಸರಿಂದ ವಿಶೇಷ ತೊಂದರೆಯೇನೂ ಉಂಟಾಗಲಿಲ್ಲ. ಡ್ರೆಸ್ಸು ಇಲ್ಲದ ಒಬ್ಬಿಬ್ಬರು ಪೋಲೀಸರು ಬಂದು ಜಿಜ್ಞಾಸೆ ನಡೆಯಿಸಿದರಾದರೂ, ದತ್ತೋಬಾ ಮಧ್ಯಸ್ಥಿ ವಹಿಸಿ, ಅವರು ಕೇಳಿದುದಕ್ಕೆಲ್ಲ ಸಮಾಧಾನಕರವಾದ ಮಾತುಗಳನ್ನು ಹೇಳಿ ಕಳುಹಿದ. ಮೋಟಾರ್ ಡ್ರ್ಯಾಯ್ವರ್ ಮತ್ತು ಪೋಲೀಸರಲ್ಲಿ ತುಂಬ ಪ್ರೀತಿ-ವಿಶ್ವಾಸ-ಗಳಲ್ಲವೆ ?

ದತ್ತೋಬಾ ಈ ಮೊದಲೇ ಅನಂತರಾಯರ ಮನೆಯನ್ನು ನೋಡಿದವ-ನಾದುದರಿಂದ, ರಂಗಣ್ಣನೊಂದಿಗೆ ತಾನೂ ಟಾಂಗಾದಲ್ಲಿ ಕುಳಿತುಕೊಂಡು, ಅನಂತರಾಯರ ಮನೆಗೆ ಕರೆದುಕೊಂಡು ಹೋದ. ಆಗ ಅನಂತರಾಯರು ಮನೆಯೊಳಗಿರಲಿಲ್ಲ. ಟಾಂಗಾ ಬಾಗಿಲಲ್ಲಿ ಬಂದು ನಿಂತೊಡನೆಯೆ, ಕುಮುದಾ ಅವಸರದ ನಡಿಗೆಯಿಂದ ತಲೆಬಾಗಿಲಿಗೆ ಬಂದಳು. ದತ್ತೋಬಾ ಕೆಳಗಿಳಿದು, 'ಮುದ್ದಾಪುರದಿಂದ ರಂಗಣ್ಣವರು ಬಂದಾರ ನೋಡ್ರಿ!' ಎಂದು ಹೇಳಿದ. ಆಗ ಕುಮುದಾ ಹೇಳಿದಳು:

"ತಂದೆಯವರು ಮನಿಯೊಳಗ ಇಲ್ಲ. ನಮಗ ಹೇಳಿ ಹೋಗ್ಯಾರ. ಒಳಗ ಬರಲಿಕ್ಕೆ ಹೇಳ್ರಿ!"

ರಂಗಣ್ಣ ಕೆಳಗಿಳಿದು ಮನೆಯೊಳಗೆ ನಡೆದ. ಮುಂದೆ ಕುಮುದಾ, ಹಿಂದೆ ರಂಗಣ್ಣ. ಹೋಗುಹೋಗುತ್ತಿರುವಾಗಲೇ ಕುಮುದಾ ಹೇಳಿದಳು:

"ಇಂದು ರಜೆ ತೆಗೆದುಕೊಂಡು ನಮ್ಮ ತಂದೆ ಮನೆಯೊಳಗೇ ಇದ್ದು-ಬಿಟ್ಟಿದ್ದರು. ಆದರೆ, ಮೂರು ಗಂಟೆಯ ಸುಮಾರಿಗೆ ಒಮ್ಮೆಲೇ ಪೋಲೀಸ್

ಆಫೀಸಿನಿಂದ ಕರೆ ಬಂದದ್ದರಿಂದ, ನಿರ್ವಾಹ ಇಲ್ಲದೆ ಹೊರಟು ಹೋಗ-ಬೇಕಾಯ್ತು. ತಾವು ಬರುವ ವಿಷಯ, ಮೊನ್ನೆ ತಮ್ಮ ಡ್ರಾಯ್ವರ್ ದತ್ತೋಬಾ ತಂದುಕೊಟ್ಟ ಪತ್ರದಿಂದ ತಿಳಿದಿತ್ತು ! ”

ರಂಗಣ್ಣನಿಗೆ ಹೆಣ್ಣುಮಕ್ಕಳೊಂದಿಗೆ ಮಾತನಾಡಿ ರೂಢಿಯೆ ಇರಲಿಲ್ಲ. ಕುಮುದೆಯ ಮಾತುಗಳನ್ನು ಕೇಳಿ, ಸಂಕೋಚಭಾವದ ನಗೆ ನಗುತ್ತ ಮಾತನಾಡಿದ :

“ ಆಯ್ತು, ನೀವು ಇದ್ದೀರಲ್ಲ! ನನಗ ತಮ್ಮ ತಂದೆಯವರ ಪರಿಚಯವೂ ಹೊಸತಾಗಿ ಆಗಬೇಕು. ಇದುವರೆಗೂ ಅವರು ನನ್ನ ನೋಡಿಲ್ಲ; ನಾನು ಅವರನ್ನ ನೋಡಿಲ್ಲ ! ”

ಕುಮುದಾ ಒಂದು ಸಲ ತಿರುಗಿ ನೋಡಿ ಹೇಳಿದಳು :

“ ಆಯ್ತು, ಅವರೂ ಬೇಗನೆ ಬಂದುಬಿಡಬಹುದು. ನೀವು ಮನಸಿ-ನೊಳಗ ಯಾವ ದಾಕ್ಷಿಣ್ಯಭಾವವನ್ನೂ ತಂದುಕೊಳ್ಳಬಾರದು. ನೀವು ಬಂದದ್ದು ನಮ್ಮ ಕೆಲಸದ ಸಲುವಾಗಿ; ನಮ್ಮವರಾಗಲಿಕ್ಕೇ ಬಂದಿದ್ದೀರಿ ! ”

ಕುಮುದಾ ರಂಗಣ್ಣನನ್ನು ಅಟ್ಟದ ಮೇಲೆ ಕರೆದುಕೊಂಡು ಹೋದಳು. ಅಲ್ಲಿ ಕಿರುಮನೆಯೊಂದು ಅತಿಥಿಗಳ ಸ್ವಾಗತಕ್ಕಾಗಿ ಸಜ್ಜುಗೊಂಡಿತ್ತು. ‘ ಇಲ್ಲಿ ತಮ್ಮ ಬಿಡಾರ ! ’ ಎಂದು ಕುಮುದಾ ರಂಗಣ್ಣನಿಗೆ ಕೋಣೆಯನ್ನು ತೋರಿಸಿ, ತಾನು ಮತ್ತೆ ಕೆಳಗಿಳಿದು, ರಂಗಣ್ಣನ ಸಾಮಾನುಗಳನ್ನೆಲ್ಲ ಅಟ್ಟದ ಮೇಲೆ ಒಯ್ಯಬೇಕೆಂದು ದತ್ತೋಬನಿಗೆ ಹೇಳಿದಳು. ಬಳಿಕ ತಾಯಿ ಮಲಗಿಕೊಂಡಿ-ದ್ದಲ್ಲಿ ಹೋಗಿ ಹೇಳಿದಳು :

“ ಅವ್ವಾ, ಕಾವೇರಿಯನ್ನ ನೋಡಲಿಕ್ಕೆ ಬರುವವರು ಊರಿಂದ ಬಂದು ಬಿಟ್ಟರು ! ”

ತಾಯಿ ಒಮ್ಮೆಲೆ ಅವಸರದಿಂದ ಎದ್ದು ನಿಂತು ಕೇಳಿದರು :

“ ಬಂದುಬಿಟ್ಟರೇನ ? ಎಲ್ಲಿ ಇದ್ದಾರವರು ? ”

“ ನಾನು ಬರಮಾಡಿಕೊಂಡು, ಅವರನ್ನ ಅಟ್ಟದ ಕೋಣೆಗೆ ಕಳಿಸಿ ಬಂದೀನಿ ! ನೀನು ಸುಮ್ಮನೇ ಮನಸಿಗೆ ಹಚ್ಚಿಕೊಂಡೀದಿ ನೋಡು ತಾಯಿಾ ! ಪೋಲೀಸರೇನು ಅಪ್ಪನ್ನ ಒಮ್ಮೆಗಿಲೇ ನುಂಗತಾರೇನು ? ಏನಾದರೂ ಕೆಲಸ ಇದ್ದಿದ್ದೀತು; ಕರಿಸಿದ್ದಾರು ! ನೀನು ಇಷ್ಟ್ಯಾಕ ಅಂಜಬೇಕು ಅದಕ್ಕ ? ”

ಕಳವಳ ಕೂಡಿದ ಧ್ವನಿಯಲ್ಲಿ ತುಂಗಮ್ಮ ಹೇಳಿದರು :

“ ಹಾಂಗಲ್ಲs ಕುಮುದಾ ! ಒಮ್ಮಿಗಿಲೇ ಪೋಲೀಸರು ಇವರನ್ನ ಯಾಕ ಕರಿಸಬೇಕು ? ಕೆಟ್ಟ ದಿವಸವ್ವಾ ಇವು ! ಹೆದರಿ ಎದಿ ನಡಗಲಿಕ್ಕೆ ಹತ್ತೇದ. ಒಂದು ಕೆಲಸ ಸುದ್ಧಾ ಸೂಚಿಸದ್ಹಾಂಗ ಆಗಿಬಿಟ್ಟsದ ! ”

“ ಹೋಗs ನಿಂದೊಂದು ಮಾತs ! ಕಾಕಾಗ ಪೋಲೀಸರ ಹೆದರಿಕಿ ಯಾಕ ಇರಬೇಕು ? ಅವರೇನು ಎಂದು ಚಳವಳಿ ಮಾಡಿದವರs.... ಖಾದೀ ಹಾಕಿಕೊಳ್ಳುವವರs ! ಒಂದೇ ಒಂದು ದಿನ ಸಭಾಕ್ಕ ಸುದ್ಧಾ ಹೋಗುವದಿಲ್ಲ ಅವರು! ಈಗ ಕಾಫೀ-ಫಲಾರಾ ನೀನs ಮಾಡತೀಯೋ, ನಾನು ಮಾಡಲ್ಯೊ?”

“ ನೀ ಯಾಕ ತಾಯಿ ! ನಾ ಏಳತೀನಲಾ ! ಅಂತೂ ಬಂದರು; ಕಾವೇರಿಯ ದೈವಕ್ಕ ಕರುಣಾ ಬಂದ್ಹಾಂಗ ಕಾಣತsದ ! ಒಮ್ಮೆ ಆಕೀ ಧರ್ಮಸೆರೀ ಬಿಡಲೇ ಪಾಪ ! ”

ಎನ್ನುತ್ತ ತುಂಗಮ್ಮ ಎದ್ದು ಅಡಿಗೆಯ ಮನೆಯ ಕಡೆಗೆ ಹೊರಟರು. ಕಾವೇರಿ ಮತ್ತೆ ಅಟ್ಟದ ಮೇಲೆ ಏರಿಹೋಗಿ ನೋಡಿದಾಗ, ರಂಗಣ್ಣ ಕೋಣೆ-ಯಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡಿದ್ದ. ದತ್ತೋಬಾ ಸಾಮಾನುಗಳ-ನ್ನೆಲ್ಲ ಓರಣವಾಗಿ ಇರಿಸಿ, ಹೊರಡುವ ಸಿದ್ಧತೆಯಿಂದಲೇ ನಿಂತುಕೊಂಡು, ರಂಗಣ್ಣನೊಂದಿಗೆ ಏನನ್ನೋ ಮಾತನಾಡುತ್ತಲಿದ್ದ. ಕುಮುದಾ ಬರುವ ವೇಳೆಗೆ ಮಾತು ಮುಗಿದಿದ್ದಿತು. ಕೊನೆಯ ಮಾತಾಗಿ ದತ್ತೋಬಾ ಹೇಳಿದ :

“ಆಗಲಿರಿ ! ಹಾಂಗಾದರ ನಾ ಈಗ ಹೋಗಿ ಬರತೀನರಿ ! ನಮಸ್ಕಾರರೀ ಬಾಯವರs, ನಾ ಹೋಗತೀನರಿ ! ”

ಕುಮುದಾ ಇಬ್ಬರ ಮುಖವನ್ನೂ ಒಂದೊಂದು ಸಲ ನೋಡಿ ಹೇಳಿದಳು:

“ ಈಗ ಕಾಫೀ ಆಗತsದ, ತೊಗೊಂಡs ಹೋಗರೆಲಾ ನೀವೂ ! ”

ದತ್ತೋಬಾ ವಿನಯದ ನಗೆಮೊಗದಿಂದ ಹೇಳಿದ :

“ ಇಲ್ರಿ ಬಾಯವರ ! ಈಗ ನಾನು ತಿರಿಗಿ ಮೋಟಾರ್ ಸ್ಟ್ಯಾಂಡಿಗೆ ಹೋಗಲಿಕ್ಕೇ ಬೇಕ್ರಿ ! ಅದಕ್ಕs ಟಾಂಗಾ ಇನ್ನೂ ನಿಲ್ಲಿಸಿಕೊಂಡೀನಿ ನೋಡ್ರಿ!”

ಎಂದು ಹೇಳಿದವನೇ ದತ್ತೋಬಾ ಮತ್ತೊಮ್ಮೆ ಇಬ್ಬರಿಗೂ ನಮಸ್ಕರಿಸಿ ಹೊರಟುಬಿಟ್ಟ. ಒಂದೆರಡು ನಿಮಿಷ ತಡೆದು ಕುಮುದಾ ಕೇಳಿದಳು :

" ನೀವು ಕೈಕಾಲು ಮುಖ ತೊಳಕೋಬೇಕಲ್ಲs ! ಕೆಳಗ ನಡೀರಿ; ತೊಳಕೊಂಡು ಬಂದೇ ವಿಶ್ರಾಂತಿ ತೊಗೊಳ್ಳಬಹುದು ! ಅಪ್ಪ ಮನ್ಯಾಗs ಇದ್ದರ ಎಷ್ಟು ಚೆಲೋ ಆಗತಿತ್ತು ! "

ರಂಗಣ್ಣ ಹೆಚ್ಚಿಗೆ ಮಾತುಗಳನ್ನೇನೂ ಆಡದೆ, ಟಾವೆಲೊಂದನ್ನು ತೆಗೆದುಕೊಂಡು ಸಿದ್ಧನಾಗಿ, ಕುಮುದೆಯನ್ನು ಹಿಂಬಾಲಿಸಿದ. ಸಂಕೋಚಭಾವ ಆತನ ಮನಸ್ಸನ್ನು ಮುಚ್ಚಿಬಿಟ್ಟಿತ್ತು.

* * *

ಸುಮಾರು ಐದುವರೆ ಗಂಟೆಯಾಗಿರಬಹುದು. ರಂಗಣ್ಣ ಕೋಣೆಯಲ್ಲಿ ಆರಾಮ ಕುರ್ಚಿಯೊಂದರ ಮೇಲೆ ಬಿದ್ದುಕೊಂಡು ವಿಶ್ರಾಂತಿ ಪಡೆಯುತ್ತಲಿದ್ದ. ಅಟ್ಟವನ್ನೇರಿ ಬರುವವರ ಹೆಜ್ಜೆಗಳ ಸದ್ದು ಕೇಳಿದುದರಿಂದ, ಕುತೂಹಲ-ಗೊಂಡು ಎದ್ದುಕುಳಿತ. ಆಗ ಕುಮುದಾ ಅನಂತರಾಯರನ್ನು ಹಿಂದಿಕ್ಕಿ-ಕೊಂಡು ಕೋಣೆಯೊಳಗೆ ಬಂದಳು. ರಂಗಣ್ಣ ತಟ್ಟನೆ ಕುರ್ಚಿಯಿಂದ ಎದ್ದು-ನಿಂತ ಆಗ ಕುಮುದಾ ಹೇಳಿದಳು :

" ಇವರು ನಮ್ಮ ತಂದೆಯವರು. ಪೋಲೀಸ್ ಕಚೇರಿಯಿಂದ ಈಗ ತಾನೇ ಬಂದರು. ನೀವು ಬಂದ ಸಂಗತಿ ಕೇಳಿದವರೇ, ಹಾಂಗs ಇಲ್ಲಿಗೇ ಬಂದುಬಿಟ್ಟರು ! "

ರಂಗಣ್ಣ ವಿನಯದಿಂದ ನಮಸ್ಕರಿಸಿದ. ಅನಂತರಾಯರೂ ಮರಳಿ ನಮಸ್ಕರಿಸಿ, ತಾವೊಂದು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ ರಂಗಣ್ಣ-ನಿಗೂ ಕುಳಿತುಕೊಳ್ಳಲು ಹೇಳಿದರು. ರಂಗಣ್ಣ ಕುಳಿತುಕೊಳ್ಳುತ್ತಲೆ ದಾಕ್ಷಿಣ್ಯಧ್ವನಿಯಲ್ಲಿ ಕೇಳಿದ :

" ತಮ್ಮನ್ನ ಪೋಲೀಸ ಕಚೇರಿಗೆ ಕರಿಸಿದ್ದರಂತ ! "

ಆವೇಶದಿಂದ ಅನಂತರಾಯರು ಹೇಳಲು ತೊಡಗಿದರು :

" ಹೌದರೀ ! ರತ್ನಾಕರರಾಯ ನಮ್ಮ ಮನಿಗೆ ಒಂದು ದಿನಾ ಬಂದು ಹೋದದ್ದನ್ನ ಅವರು ಹ್ಯಾಂಗ ತಿಳಕೊಂಡಾರೋ ಏನೋ; ಅವನ ಸುದ್ದೀ ನನ್ನಿಂದ ತಿಳಕೋಬೇಕಂತ, ನನ್ನ ಕರಿಸಿದ್ದರು ಪೋಲೀಸ ಸಾಹೇಬರು ! "

ಆತುರ-ಕಾತರಗಳು ಬೆರೆತ ಧ್ವನಿಯಲ್ಲಿ ರಂಗಣ್ಣ ಕೇಳಿದ :

" ಹೀಂಗೇನು ? ನೀವು.... ನೀವು ಏನು ಹೇಳಿದಿರಿ ಅವರಿಗೆ ! "

“ ಹೇಳೂದೇನು ! ನನಗೇನೂ ಈ ಕಾಂಗ್ರೆಸ್ ಚಳವಳೀ ಬಗ್ಗೆ ಶ್ರದ್ಧಾ ವಿಶ್ವಾಸ ಇಲ್ಲ ಏನಂ! ಆದರ ಮಾಡಬೇಕೇನು? ಈಗ ನನಗಟ ಒಬ್ಬ ಮಗನೇ ಇದ್ದಾನಂತ ತಿಳೀರಿ ! ನಾವು ಬ್ಯಾಡ ಅಂತ ಎಷ್ಟು ಹೇಳಿದರೂ ಕಾಂಗ್ರೆಸ್ ಚಳವಳಿಯೊಳಗ ಸೇರತಾನ! ಕಾಲವೇಽ ಹಾಂಗ ಬಂದಽದ, ಅದಕ್ಕ ನೀವೇನು ಮಾಡತೀರಿ ! ನಮಗ ಕಾಂಗ್ರೆಸ್ ಚಳವಳಿ ಎಷ್ಟೇ ಬ್ಯಾಡಾ ದರೂನೂ, ಚಳವಳಿಯೊಳಗ ಸೇರಿಕೊಂಡಿರುವ ಮಗಾ ಏನರೇ ಬ್ಯಾಡಆಗತಾನೇನು ? ನೀವಽ ಹೇಳ್ರಿ ! ನಮ್ಮ ಮಗನ್ನ ನಾವಾಗೇ ಪೋಲೀಸರ ಕೈಗೆ ಒಪ್ಪಿಸೂದು ನಮ್ಮ ಕಡಿಂದ ಆದೀತಽ ! ”

ರಂಗಣ್ಣನಿಗೆ ತಾನೇನು ಮಾತನಾಡಬೇಕೆಂಬುದು ತಿಳಿಯದಾಯಿತು. ಸುಮ್ಮನೆ ಕುಳಿತುಕೊಂಡು,ಅನಂತರಾಯರ ಮುಖದ ಕಡೆಗೆ ನೋಡುತ್ತಲಿದ್ದ. ಕುಮುದೆಯೂ ಬೆದರಿದ ಮುಖಭಾವದಿಂದ ನಿಂತುಕೊಂಡಿದ್ದಳು.

“ ಮತ್ತೂ ಒಂದು ಮಾತದ ನೋಡ್ರಿ ! ರತ್ನಾಕರರಾಯ ಭಲೇ ಹುಡುಗ ಇದ್ದಾನ. ಅವನ ಒಂದೊಂದು ಗುಣಾ ಅಂದರ, ಬಂಗಾರದ ಬೆಲೀವು ಅವ. ಎಂ. ಎ. ಫಸ್ಟ್‌ಕ್ಲಾಸ್ ಪಾಸ್ ಆದ ಮನುಷ್ಯ ! ಮನಸ್ಸು ಮಾಡಿದ್ದರ ಬೇಕಾದಂಥಾ ದೊಡ್ಡ ನೌಕರೀ ಮಾಡಿ ಕೈತುಂಬಾ ಸಂಬಳಾ ಗಳಿಸಬಹುದಾಗಿತ್ತು. ಆದರ, ನಮ್ಮ ಜನರ ಸಲುವಾಗಿ ಅವನ ಕಳಕಳಿ ಬಹಳ ! ಎಲ್ಲಾ ಜನರೂ ಸುಖದಿಂದ ಇರಬೇಕಂತ ಅವನ ಹಂಬಲೇನ್ರಿ ! ಈಗ ನೋಡ್ರಿ, ಗುರುತು ಪರಿಚಯ ಏನೂ ಇದ್ದಿದ್ದಿಲ್ಲ ಗೋಪಾಲರಾಯರದು; ಅವರು ಮಗಳ ಮದಿವೀ ಸಲುವಾಗಿ ಕಷ್ಟದೊಳಗಿದ್ದಾರಂಬೂದು ತಿಳೀತು; ಸ್ವಯಂಸ್ಫೂರ್ತಿಯಿಂದ—ತಾನಾಗೇ—ಅವರ ಕಷ್ಟ ಬಿಡಿಸಬೇಕೆನ್ನೂ ಜವಾಬ್ದಾರೀ ಹೊತ್ತು ಹೊರಟನಽ ! ಗೋಪಾಲರಾಯರ ಮಗಳು ಇಂಗ್ಲಿಷ್ ಕಲಿತಿರದಿದ್ದರೂ—ಹುಡುಗಿ ನೋಡ್ರಿ, ಬಹಾಳ ಗುಣವಂತಿ ಇದ್ದಾಳ. ಗೋಪಾಲರಾಯರು ಮಗಳಿಗೆ ಇಂಗ್ಲಿಷ್ ಕಲಿಸೂದನ್ನ ಬಿಟ್ಟು ತಪ್ಪು ಮಾಡಿದರು. ಇಲ್ಲದಿದ್ದರ ಏನ್ ಕೇಳತೀರೀ....ಒಳ್ಳೊಳ್ಳೇ ಜಜ್ಜರು, ಕಲೆಕ್ಟರು—ಇಂಥವರ ಮನಿಗೆ ಬೀಳುವ ಹುಡುಗಿ ಕಾವೇರಿ ! ”

ಅನಂತರಾಯರ ಇವೆಲ್ಲ ಮಾತುಗಳು ರಂಗಣ್ಣನಲ್ಲಿ ಕುತೂಹಲವನ್ನು ಕೆರಳಿಸಲು ತೊಡಗಿದ್ದುವು. ತಂದೆಯ ಸ್ವಭಾವವನ್ನರಿತಿದ್ದ ಕುಮುದೆಗೆ ಮಾತ್ರ,

ಈ ಮಾತುಗಳಿಂದ ಸ್ವಲ್ಪ ಸ್ವಲ್ಪ ಧೈರ್ಯಬರಲು ತೊಡಗಿದ್ದಿತು. ಆದರೂ ತಂದೆ ಪೋಲೀಸರಿಗೆ ಏನು ಹೇಳಿದ್ದಾರೋ ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ಅವಳಿಗೆ. ಅನಂತರಾಯರು ಪುನಃ ಮಾತನ್ನು ಮುಂದುವರಿಸಿದರು:

"ನಮ್ಮ ಮಗಳು ಈ ಕುಮುದಾಗ ಕಾವೇರಿಗೆ ಜೀವದ ಗೆಳೆತನಾ ಏನ್ರಿ! ಆದರ ಇಂಗ್ಲಿಷ್ ಕಲಿಯದ ಹುಡಿಗಿಗೆ ಒಳ್ಳೆಯ ವರಾ ಸಿಗಬೇಕು ಹ್ಯಾಂಗ? ಕಾಲಧರ್ಮ ನೋಡ್ರಿ ರಂಗರಾವ್! ಗೋಪಾಲರಾಯರು ಆದಷ್ಟು ಬ್ಯಾಗನೇ ಮಗಳ ಮದಿವೀ ಮಾಡಬೇಕೆನ್ನುವ ಆತುರದೊಳಗ, ಎಂಥಾ ವರಾನs ಸಿಕ್ಕರೂ ತಮ್ಮ ಆ ಚಿನ್ನದ ಗೊಂಬಿಯಂಥಾ ಮಗಳನ್ನ ಕೊಡಲಿಕ್ಕೆ ಸಿದ್ಧರಾಗಿ ನಿಂತಾರ! ಇಂಥಾ ವ್ಯಾಳ್ಯಾದೊಳಗ, ಕಾವೇರಿಯ ಗುಣಾ—ಸ್ವಭಾವಾ ತಿಳಕೊಂಡ ರತ್ನಾಕರ, ಆ ಹುಡುಗಿನ್ನ ಒಳ್ಳೇ ಮನಿತನಕ್ಕ ಕೊಡಿಸೇ ತೀರತೀನಂತ ಪ್ರತಿಜ್ಞಾ ಮಾಡಿ ಹೊರಟ್ಹಾಂಗ ಹೊರಟಾನ! ಅದಕ್ಕs ನಾ ಅನ್ನೂದು: ಕಾಂಗ್ರೆಸ್ ಚಳವಳಿಯೊಳಗ ಬಿದ್ದಿರುವ ತಪ್ಪು ಮಾಡಿದರೂ, ರತ್ನಾಕರ ಭಲೇ ಹುಡುಗ ಇದ್ದಾನ! ಇಂಥವನ್ನ, ಈಗ ನಾ ಇದ್ದ ಮಾತು ಇದ್ಹಾಂಗ ಹೇಳಿ, ಪೋಲೀಸರ ಕೈಗೆ ಒಪ್ಪಿಸಬೇಕs....ನೀವs ಹೇಳ್ರಿ ರಂಗರಾವ್?"

ರಂಗಣ್ಣ ಬಾಯಿಬಿಟ್ಟು ಒಂದೆ ಒಂದು ಮಾತು ಕೇಳಿದ:

"ಪೋಲೀಸರೇನು ಕೇಳಿದರು? ಆದಕ್ಕ ನೀವೇನು ಹೇಳಿದಿರಿ?"

ಅನಂತರಾಯರು ಹೇಳಲು ತೊಡಗಿದರು:

"ಪೋಲೀಸರು ನನ್ನ ಕೇಳಿದರು: 'ರತ್ನಾಕರ ನಿಮ್ಮ ಮನಿಗೆ ಬರತಿರತಾನಂತ. ಹೌದೇನು?' ಅಂತ. ಒಳ್ಳೇ ಬೆದರಿಕೀ ಧನಿಂದನs ಕೇಳಿದರನ್ರಿ! ಆಗ ನಾನು ವಿಚಾರ ಮಾಡಿನೋಡಿದೆ....ಈಗ ಇವರ ಬೆದರಿಕಿಗೆ ಬೆದರಬಾರದು ಅಂತ ಮನಸ್ಸು ಗಟ್ಟಿಮಾಡಿಕೊಂಡು ಹೇಳಿದೆ: 'ನೋಡ್ರಿ, ರತ್ನಾಕರ ಒಂದೇ ಒಂದು ಸಲ ನಮ್ಮ ಮನಿಗೆ ಬಂದದ್ದು ನಿಜ. ನಮ್ಮ ಬ್ಯಾಂಕಿನೊಳಗ ಒಂದು ಚಕ್ಕು ಕ್ಯಾಶ್ ಮಾಡಿಸಬೇಕಾಗಿತ್ತಂತ; ನಮ್ಮ ಬ್ಯಾಂಕಿನ ಕಾರಕೂನರು ಏನೋ ತಕರಾರು ಮಾಡಿ, ಅದನ್ನ ಕ್ಯಾಶ್ ಮಾಡಲಿಲ್ಲಂತ; ಅದಕ್ಕ, ಅದರ ಸಲುವಾಗಿ ಹೇಳಿಕೊಳ್ಳಲಿಕ್ಕೆ ನಮ್ಮ ಮನಿಗೆ ಬಂದಿದ್ದ. ನಿಜವಾಗಿ ನೋಡಿದರ, ಅಂಥಾ ತಕರಾರುಮಾಡುವಂಥಾ ದೋಷ ಏನೂ ಇರಲಿಲ್ಲ ಆ ಚೆಕ್ಕಿನೊಳಗ. ಅದಕ್ಕ, ನಾನು ಕಾರಕೂನರಿಗೆ ಹೇಳಿ, ಆ ಚೆಕ್ಕನ್ನ ಕ್ಯಾಶ್ ಮಾಡಿಸಿಕೊಟ್ಟೆ.

ಬೇಕಾದರ ನಿಮ್ಮ ಬ್ಯಾಂಕಿನ ಅಕಾವುಂಟಿನೊಳಗ, ಆ ಚೆಕ್ಕು ಕ್ಯಾಶ್ ಆದ ಲೆಕ್ಕಾಚಾರ ಅದ ಇಲ್ಲೋ ನೋಡ್ರಿ! ನನಗs ಅವಗs ಎಂದೂ ಗುರುತು ಇರಲಿಲ್ಲ, ಪರಿಚಯು ಇರಲಿಲ್ಲ. ಯಾವಾಗಲೂ ನಾನು ಕಾಂಗ್ರೆಸ್ ಚಳವಳಿಯುವರನ್ನ ಕಂಡರ ತಿರಸ್ಕರಿಸುವ ಮನುಷ್ಯ. ಅದೊಂದು ಸಾರೆ ರತ್ನಾಕರ ನಮ್ಮ ಮನಿಗೆ ಬಂದದ್ದು ಖರೆ!' ಅಂತ ಗಟ್ಟಿಮುಟ್ಟಾಗಿ ಹೇಳಿಬಿಟ್ಟೆ. ಪೋಲೀಸ ಸಾಹೇಬರಿಗೆ ನನ್ನ ಮಾತು ಖರೇ ಅಂತ ಅನಿಸ್ಕಿ, ನನಗ ಹೋಗಲಿಕ್ಕೆ ಪರವಾನಿಗೀ ಕೊಟ್ಟರು. ನೋಡ್ರಿ, ವ್ಯಾಳ್ಯಾ ಪ್ರಸಂಗಾ ನೋಡಿ, ಒಂದಿಷ್ಟು ಸುಳ್ಳು ಬೆರಸ್ಕಿ, ಎಲ್ಲಾ ಖರೇ ಕಾಣುವ ಹಾಂಗ ಹೇಳಲೇ ಬೇಕಾಗತದ; ನಿರ್ವಾಹನೇ ಇಲ್ಲ. ಅದರೊಳಗ ರತ್ನಾಕರರಾಯು, ಕಲ್ಯಾಣಕಟ್ಟುವ ಕೆಲಸಾ ಮೈಮ್ಯಾಲ ಹೊತ್ತು ಹೊರಟಾನ! ಸಾವಿರ ಸುಳ್ಳುಹೇಳಿ ಒಂದು ಕಲ್ಯಾಣ ಕಟ್ಟಬೇಕು—ಅಂತ ಹೇಳತಾರ; ಅಂದಮ್ಯಾಲ ಇಂಥಾ ಕೆಲಸದೊಳಗ ನಾನೂ ಒಂದು ಮಾತು ಸುಳ್ಳು ಹೇಳಿದರ, ಅದರೊಳಗ ತಪ್ಪೇನದ ಹೇಳ್ರಿ!"

ರಂಗಣ್ಣ ಸುಮ್ಮನೆ ನಕ್ಕು ಬಿಟ್ಟ. ಕುಮುದಾ ಹೃದಯುವನ್ನು ಹಿಗ್ಗಿನಿಂದ ತುಂಬಿಕೊಂಡು, ಕೋಣೆಯಿಂದ ಹೊರಬಿದ್ದು ಕೆಳಗಿಳಿದಳು. ಅನಂತ ರಾಯರು ಏನೋ ನೆನಪಾದವರಂತೆ ಕುತೂಹಲದಿಂದ ಕೇಳಿದರು :

"ಅಲ್ಲಾ, ನನ್ನ ಮಾತಿನೊಳಗ ನಿಮ್ಮ ಯೋಗಕ್ಷೇಮದ ವಿಚಾರ ಕೇಳೂದನ್ನ ಮರೆತೇ ಬಿಟ್ಟೆ. ನಿಮ್ಮ ಕಾಫೀ ಉಪಾಹಾರಾ ಎಲ್ಲಾ ಆಯಿತs!"

"ಎಲ್ಲಾ ಆಯಿತು! ತಾವು ಮನೆಯೊಳಗ ಇಲ್ಲದೆ ಇದ್ದದ್ದು ತಿಳಿದಾಗ, ನನಗ ಬಹಳ ಸಂಕೋಚ ಅನಿಸಿತ್ತು. ಆದರ ಬಂದ ಸ್ವಲ್ಪ ಹೊತ್ತಿನೊಳಗs, ನಾ ಹಾಂಗ ಸಂಕೋಚ ಪಟ್ಟುಕೊಂಡದ್ದು ತೀರಾ ತಪ್ಪು—ಅಂತ ತಿಳಿದು ಬಂತು. ನೀವು ಇಲ್ಲದೇ ಇರೂದೊಂದನ್ನ ಬಿಟ್ಟರ, ಬೇರೆ ಯಾವ ಕೊರತೆಯುನ್ನೂ ನಾನು ಅನುಭವಿಸಬೇಕಾಗಲಿಲ್ಲ!"

'ಹಹಹಹ' ಎಂದು ಗಟ್ಟಿಯಾಗಿ ನಕ್ಕು ಅನಂತರಾಯರು ಹೇಳಿದರು :

"ಹಾಂಗ ನಮ್ಮ ಕುಮುದಾ ಬಹಳ ಹುಷಾರ್ ಹುಡುಗಿ! ಮನಿಗೆ ಬಂದವರನ್ನ—ಯಾರನ್ನ ಹ್ಯಾಂಗ ಆದರಿಸಿ ಉಪಚರಿಸಬೇಕೆಂಬೂದನ್ನ ಯಾರೂ ಆಕಿಗೆ ಹೇಳಿಕೊಡಬೇಕಾಗಿಲ್ಲ ನೋಡ್ರಿ! ಈ ಸಲ ಮ್ಯಾಟ್ರಿಕ್ ಪರೀಕ್ಷಾಕ್ಕ ಕೂತಾಳ! ಪಾಸ್ ಆಗೇ ಆಗತಾಳ; ಇದರೊಳಗ ಸಂಶಯು ಏನೂ ಇಲ್ಲ!

ಆದರ ಆಕಿಗೆ ಈ ಕಾಂಗ್ರೆಸ್ ಚಳವಳೀ–ಅಂದರ ಶ್ರದ್ಧಾ ಬಹಳ ! ರತ್ನಾಕರನ ವಿಷಯಕ್ಕಂತೂ ಆಕೀ ಭಕ್ತಿ-ಆದರ, ಇಷ್ಟು ಅಷ್ಟು ಅಂತ ಅಳತೀ ಮಾಡಿ ಹೇಳಲಿಕ್ಕೆ ಬರುವ ಹಾಂಗಿಲ್ಲ ಒಂದು ರೀತಿಂದ ನೋಡಿದರ, ಆಕೀ ಮುಖಾಂತ ರನs ನನಗ ರತ್ನಾಕರರಾಯನ ಪರಿಚಯ ಆದದ್ವೇನ್ರಿ ! ಪರಿಚಯ ಆದ-ದ್ವೇನೂ ತಪ್ಪಾಗಲಿಲ್ಲ. ಯಾಕಂದರ, ರತ್ನಾಕರರಾಯ ಹುಡುಗನs ಅಂಥಾಂವ ಇದ್ದಾನ–ಯಾರನ್ನೂ ತನ್ನ ಕಡೆ ಎಳಕೊಳ್ಳುವಂಥಾ ಗುಣಾ ಅವನಲ್ಲಿ ಅವ ! ಇರಲಿ, ಇನ್ನೊಮ್ಮೆ ಕಾಫೀ ತೊಗೊಳ್ಳತೀರೇನು ?"

" ಬೇಡ ಬೇಡ ! ನನಗ ಹೆಚ್ಚು ಸಲ ತೊಗೊಂಡು ಅಭ್ಯಾಸ ಇಲ್ಲ !"

" ಸರಿ! ಹಾಗಾದರ ನಾ ಸ್ವಲ್ಪ ಕೆಳಗ ಹೋಗಿ ಬರತೀನಿ. ಪೋಲೀಸರ ಕರೆ ಬಂದ ಕೂಡಲೆ, ಗಡಬಿಡಿಯಿಂದ ನಾ ಹಾಂಗs ಹೊರಟು ಹೋಗಿಬಿಟ್ಟೆ!" ಎಂದು ಹೇಳಿ ಅನಂತರಾಯರು ರಂಗಣ್ಣನನ್ನು ಬೀಳ್ಕೊಂಡು. ಕೋಣೆಯಿಂದ ಹೊರಟರು.

## ೨೯ನೆಯ ಪರಿಚ್ಛೇದ

ಅನಂತರಾಯರು ಕೆಳಗಿಳಿದು ಹೋಗಿ ಎಂಟು ಹತ್ತು ನಿಮಿಷಗಳಾಗಿರ-ಬಹುದು. ಕುಮುದಾ ಅಟ್ಟದ ಮೆಟ್ಟಲನ್ನೇರಿಬಂದಳು. ಕೈಯಲ್ಲಿ ' ಟೈಮ್ಸ್ ಆಫ್ ಇಂಡಿಯಾ ' ' ಬಾಂಬೇ ಕ್ರಾನಿಕಲ್ ' ದೈನಿಕ ಪತ್ರಿಕೆಗಳಿದ್ದುವು. ಅವುಗಳೊಂದಿಗೆ ರಂಗಣ್ಣನ ಕೋಣೆಯೊಳಗೆ ಬಂದು ಹೇಳಿದಳು :

" ಇವು ಇಂದಿನ ಪತ್ರಿಕೆಗಳು. ತಂದೆಯವರು ತಮಗ ಕೊಟ್ಟು ಬಾ–ಅಂತ ಹೇಳಿದ್ದರಿಂದ, ತೊಗೊಂಡು ಬಂದೆ. ತಮಗ ಇನ್ನೇನಾದರೂ ಬೇಕೇನು?"

ಸಂಕೋಚಭಾವದಲ್ಲಿಯೆ ರಂಗಣ್ಣ ನುಡಿದ :

" ಛೇ ಛೇ, ಏನೇನೂ ಬೇಕಾಗಿಲ್ಲ. ಎಲ್ಲಾ ಆರಾಮು ಅದ. ಅಂತೂ ನಾನು ನಿಮಗ ತೊಂದರೆ ಕೊಟ್ಟ ಹಾಂಗ ಆಯ್ತು ಈವೊತ್ತು !"

ಸ್ವಾಭಾವಿಕವಾಗಿ ಕುಮುದಾ ಹೇಳಿದಳು :

" ನಿಮ್ಮಿಂದ ನಮಗ ತೊಂದರೆ ? ಏನೇನೂ ಇಲ್ಲ. ಇಷ್ಟೇ ಅಲ್ಲ; ನಿಮ್ಮಿಂದ ನಮ್ಮ ತೊಂದರೆ ಕಡಿಮಿ ಆಗೂದದ ! ಅದಕ್ಕಾಗಿ ನಾವು ನಿಮಗ ನಮ್ಮ ಕೃತಜ್ಞತಾ ಹ್ಯಾಂಗ ತೋರಿಸಬೇಕೆಂಬೂದು ತಿಳಿಯದ್ಹಾಂಗ ಆಗೇದ.

ನೀವು ಈ ಮನಿಗೆ ತೀರ ಹೊಸಬರು ! ಅವ್ವ ಹೀರೇ ಮನುಷ್ಯಳಿದ್ದಾಳ ಖರೇ; ಆದರ ಆಕಿ ಹಳೆಯ ಸಂಪ್ರದಾಯದಾಕಿ. ನನಗ ನಿಮ್ಮಂಥವರ ಹತ್ತರ ಹ್ಯಾಂಗ ನಡಕೋಬೇಕಂಬೂದರ ಅನುಭವ ಏನೂ ಇಲ್ಲ. ನೀವು ಯಾವ ಮಾತಿಗೂ ಸಂಕೋಚ ಹಚ್ಚಿಕೊಳ್ಳದೆ, ನಿಮಗೇನು ಬೇಕೆಂಬೂದನ್ನ ತಿಳಿಸಬೇಕು !”

ಕುಮುದಾ ಮಾತನಾಡುವಾಗ, ರಂಗಣ್ಣ ಆಕೆಯ ಮುಖದ ಕಡೆಗೆ ಸಹಜವಾಗಿಯೆ ನೋಡಿದ. ಹೆಚ್ಚು ಕಾಲ ಅವಳ ಕಡೆಗೆ ನೋಟವನ್ನು ಹರಿಸುವುದಕ್ಕೆ ನಾಚಿಕೆಯೆನಿಸಿ, ಕೂಡಲೆ ಕಣ್ಣುಗಳನ್ನು ಬೇರೆ ಕಡೆಗೆ ಹೊರಳಿಸಿದ. ಕುಮುದೆಯದು ನಿರ್ದುಷ್ಟವಾದ ಸೌಂದರ್ಯ; ಸ್ಥಿರವಾದ ದೃಷ್ಟಿಯ ಹೊಳಪಿನ ಕಣ್ಣುಗಳು. ಇದುವರೆಗೂ ಹಳ್ಳಿಯಲ್ಲಿದ್ದು, ಹಳ್ಳಿಯ ಹೆಣ್ಣುಮಕ್ಕಳ ವೇಷ-ಭೂಷಣಗಳನ್ನೇ ಹೆಚ್ಚಾಗಿ ನೋಡಿದ್ದ ರಂಗಣ್ಣನಿಗೆ, ಕುಮುದೆಯ ಅಚ್ಚುಕಟ್ಟಾದ ನಾಗರಿಕ ಉಡಿಗೆ-ತೊಡಿಗೆಗಳು ಮನಸ್ಸನ್ನು ಆಕರ್ಷಿಸಿದುವು. ಅವಳನ್ನು ಮತ್ತೆ ಮತ್ತೆ ನೋಡಬೇಕೆಂದು ಮನಸ್ಸು ತವಕಿಸಿತಾದರೂ, ಸಂಯಮಿಯಾದ ರಂಗಣ್ಣ ಅದನ್ನು ತಡೆಹಿಡಿದ. ದಾಕ್ಷಿಣ್ಯದ ಮುಗುಳುನಗೆ ನಗುತ್ತ ತಗ್ಗಿದ ನೋಟದವನಾಗಿಯೇ ಹೇಳಿದ :

“ ನಿಮಗ ಅನುಭವ ಏನೂ ಇಲ್ಲ ಅಂತ ಹೇಳೂದು ವಿನಯದ ಮಾತು ! ನಾನು ಬಂದಾಗಿನಿಂದ ನೋಡತೀನಿ; ನಿಮ್ಮ ಉಪಚಾರದೊಳಗ ಏನು ಕೊರತೆ ಅದs ಅಂಬೂದು ನನಗೇನೂ ಗೊತ್ತಾಗಿಲ್ಲ ಆದರೆ ನಾನs ಹಳ್ಳಿಯೂರೊಳಗ ಇರುವ ಮನುಷ್ಯ ! ನಾಗರಿಕ ರೀತಿ-ನಡತಿಗಳಿಗೆ ಅಪರಿಚಿತ. ಆದಾಯ್ತು, ರತ್ನಾಕರ ಇಲ್ಲಿಗೆ ಯಾವಾಗ ಬರಬಹುದು ?”

ವಿಷಾದದ ಮುಗುಳುನಗೆ ನಗುತ್ತ ಕುಮುದಾ ನುಡಿದಳು :

“ ಅದನ್ನ ಹೇಳೂದು ಕಠಿಣನs ಅದ ! ಪೋಲೀಸರ ಕಣ್ಣುತಪ್ಪಿಸಿ ಬರಬೇಕು ! ಇದೊಂದು ಭಾರವನ್ನ ಅವರು ತಲೀ ಮ್ಯಾಲ ಹೊತ್ತುಕೊಂಡಿರ-ದಿದ್ದರ, ಇಷ್ಟರೊಳಗs ಅವರು ಸರಕಾರದ ಸೆರೆಮನೀ ಅತಿಥಿಗಳೇ ಆಗತಿದ್ದರು! ಪಾಪ, ಆ ಕಾವೇರಿಯ ಯಾವ ಜನ್ಮದ ಋಣ ತಿಂದಾರೋ ಏನೋ ! ಎಲ್ಲಾ ಕೆಲಸಾ ಬಿಟ್ಟು ಅದನ್ನ ತೀರಿಸಲಿಕ್ಕೆ ನಿಂತಾರ !”

ರಂಗಣ್ಣನ ಎದೆಯಲ್ಲಿ ಒಮ್ಮೆಲೆ ಮಿಂಚುಹೊಡೆದಂತಾಯಿತು. ಮೈ ಜುಮ್ಮೆಂದಿತು. ಮುಖವು ವಿವರ್ಣವಾಯಿತು. ಕೆಳಗಿನಿಂದ ತಂದೆಯ ಕೂಗು

ಕೇಳಿಸಲು, ಕುಮುದಾ ಇದಾವುದನ್ನೂ ನೋಡದೆ ‘ಓ, ಬಂದೆ!’ ಎಂದು ಕೂಗುತ್ತ ಗಡಿಬಿಡಿಯಿಂದ ಹೊರಟುಬಿಟ್ಟಳು. ರಂಗಣ್ಣ ಒಂಟಿಗನಾದ. ಆತನ ಮನಸ್ಸು ಏನೇನನೋ ವಿಚಾರಿಸಲು ತೊಡಗಿತು :

“ ಪಾಪ, ಕಾವೇರಿಯು ಯಾವ ಜನ್ಮದ ಋಣ ತಿಂದಾರೋ ಏನೋ–ಅಂತ ! ಈ ಹುಡುಗಿ ಹೀಂಗ ಅನ್ನೂದಕ್ಕ ಕಾರಣೇನು ?....ನನಗ ಬಂದಿರುವ ಆ ಮೂಕಪತ್ರದೊಳಗಿನ ಸಂಗತಿ ಸತ್ಯ ಇರಬಹುದೇನು ?........ಆ ಸಂಗತಿ ಈ ಹುಡುಗಿಗೂ ಗೊತ್ತಾಗಿರಬಹುದೇನು ?.... ರತ್ನಾಕರನದು ಇದೇನು ಹೊಸರೀತಿ ?....ಹೆಣ್ಣುಹುಡುಗಿಯರ ನಿಕಟ ಪರಿಚಯು ಇಷ್ಟ್ಯಾಕ ಇರಬೇಕು ಇಂವಗ ?.... ಇವರ ಸಂಬಂಧ ಯಾಕ ಇಟ್ಟುಕೊಳ್ಳಬೇಕು ಆತ ? ಈ ಕಾವೇರಿ—ಕುಮುದಾ—ಇವರಂತೆಯೆ ಇನ್ನೂ ಎಷ್ಟು ಜನರ ಪರಿಚಯ ಮಾಡಿಕೊಂಡಾನೋ ಏನೋ ! ಈ ಹುಡುಗಿಯನ್ನಂತೂ ರತ್ನಾಕರ ಮದಿವೀ ಮಾಡಿಕೊಳ್ಳುವವನೇ ಇದ್ದಾನ—ಅಂತ ಆ ಪತ್ರದೊಳಗ ಅದ. ಆಯ್ತು, ಮಾಡಿಕೊಂಡರೂ ಮಾಡಿಕೊಳ್ಳವೊಲ್ಲನ್ಯಾಕ !.... ಹುಡುಗಿ ನೋಡಲಿಕ್ಕಂತೂ ಚೆಲುವಿ ಇದ್ದಾಳ !.... ಕಲಿತ ಹೆಣ್ಣಿನ ದಿಟ್ಟತನಾನೂ ಅದ !.... ಆದರ ಕಾವೇರಿನ್ನ ನನಗ ಗಂಟುಹಾಕಬೇಕೆನ್ನೂದರೊಳಗ, ಅವನದೇನರೇ ದುರುದ್ದೇಶ ಇರಬಹುದೇನು ?.... ಏನದsನೋ ಯಾರು ಬಲ್ಲರು !.... ಹೆಣ್ಣಿನ ವಿಷಯದೊಳಗ ಯಾವ ಗಂಡಸನ್ನೂ ನಂಬೂದು ಕಠಿಣನs ಅದ !.... ಈಗ ನನ್ನ ಮನಸ್ಸನ್ನs ನಾನು ಬಿಗಿದು ಹಿಡಿದೆ.... ಎಲ್ಲಾ ಒಳ್ಳೇದಾಯಿತು !.... ಸಡಿಲು ಬಿಟ್ಟಿದ್ದರ, ಕಾಶವ್ವನ ವಿಷಯದೊಳಗ....ನನ್ನಿಂದ ಎಂಥೆಂಥಾ ಅಪರಾಧ ಘಟಿಸಬಹುದಾಗಿತ್ತು !.... ದೇವರು ನನ್ನ ಸಂರಕ್ಷಿಸಿದ !.... ಕಾಶವ್ವ ಹಳ್ಳಿಯ ಹುಡುಗಿ....ಚಿಕ್ಕತನದೊಳಗ ನಾವು ಅಣ್ಣ-ತಂಗಿಯರಂತೆ ನಡಕೊಳ್ಳತಿದ್ದೆವು, ಅದೇನೋ ಸರಿ ! ಆದರ, ಹೆಣ್ಣೇ ಆಗಲಿ, ಗಂಡೇ ಆಗಲಿ, ತಾರುಣ್ಯದ ವಿಕಾರದ ಕೈಯೊಳಗ ಸಿಕ್ಕುಬಿಟ್ಟರಂದರ, ಮನುಷ್ಯ ಎಲ್ಲಿಗೆ ಹೋಗಿ ಮುಟ್ಟಬಹುದಂಬೂದರ ನಿಯಮ ಇಲ್ಲ. ಅದಕ್ಕs ನಮ್ಮ ಹಳೆಯ ಜನರು, ಚಿಕ್ಕತನದೊಳಗs ಹೆಣ್ಣಿಗೆ ಗಂಡನ್ನ, ಗಂಡಿಗೆ ಹೆಣ್ಣನ್ನ–ಗಂಟುಹಾಕಿ, ತಾರುಣ್ಯದ ವಿಕಾರದ ದುಷ್ಪರಿಣಾಮ ಕಡಿಮಿ ಆಗುವ ಹಾಂಗ ಏರ್ಪಾಡು ಮಾಡತಿದ್ದರು !.... ಈಗ ? ತಾರುಣ್ಯದ ವಿಕಾರಗಳಿಗೆ ಹೆಚ್ಚು ಪೋಷಣೆ

ಸಿಗುವ ಹಾಂಗು ನಮ್ಮ ಸಮಾಜದೊಳಗ ಪರಿಸ್ಥಿತಿ ನಿರ್ಮಾಣ ಆಗಿ-ಬಿಟ್ಟೈತಿ! ರತ್ನಾಕರನೂ ಮನುಷ್ಯ.... ಗಂಡಸು!.... ತಾರುಣ್ಯ.... ಸುಶಿಕ್ಷಣ.... ಆಕರ್ಷಕರೂಪ.... ಮನಸ್ಸು ಎಳೆಯುವಂಥ ಮಾತುಗಾರಿಕೆ! ಪಟ್ಟಣ-ದೊಳಗೇ ಹನ್ನೆರಡು ತಿಂಗಳ ವಾಸ! ಹೀಂಗಿರುವಾಗ, ಆತನಿಗೆ ಹೆಣ್ಣುಮಕ್ಕಳ ಸಲಿಗೆ ಹೆಚ್ಚು ಆಗುವುದರೊಳಗ ಆಶ್ಚರ್ಯ ಏನೂ ಇಲ್ಲ! ಇನ್ನ ಹೆಣ್ಣು ಮಕ್ಕಳ ಕೂಡ ಪ್ರಾರಂಭದೊಳಗ ಇಟ್ಟ ನಿರ್ವಿಕಾರದ ಸಲಿಗೆ, ಯಾವಾಗ ಹ್ಯಾಂಗ ಸ-ವಿಕಾರ ಆದೀತು—ಅಂಬೂದರ ನೇಮ ಇಲ್ಲ.... ಮಹಾತ್ಮರ ಆಶ್ರಮದೊಳಗ ಕೂಡ ಈ ವಿಕಾರದ ದುಷ್ಪರಿಣಾಮ ಆದದ್ದರ ಉದಾಹರಣೆ ಅವ! ಅಂದ ಮ್ಯಾಲ, ಸ್ವತಂತ್ರನಾಗಿ ಇರುವ ಈ ರತ್ನಾಕರ, ಹತ್ತಿರದ ಸಂಬಂಧ ಬಂದ ಹೆಣ್ಣುಗಳ ಕೂಡ ಹ್ಯಾಂಗ ನಡಕೊಂಡಿರಬಹುದಂಬೂದನ್ನ ಹೇಳುವವರು ಯಾರು?"

ರಂಗಣ್ಣನ ಮುಖದಿಂದ ಬಿಸಿಯಾದ ನಿಟ್ಟುಸಿರೊಂದು ಹೊರಬಿದ್ದಿತು. ಮತ್ತೆ ಯೋಚಿಸಲು ತೊಡಗಿದ:

"ಪತ್ರವನ್ನು ಓದಿನೋಡಿದಾಗ, ಇಲ್ಲಿಗೆ ಬರಬಾರದಂತ ತುಂಬಾ ಅನಿಸಿತು!.... ಆದರ ರತ್ನಾಕರನ ಸ್ನೇಹ-ಸಜ್ಜನಿಕೆಗಳ ಮೇಲಿರುವ ನನ್ನ ವಿಶ್ವಾಸ, ಹೊರಡಲಿಕ್ಕೆ ಹಚ್ಚಿತು!.... ನಾನು ರತ್ನಾಕರನ ಮ್ಯಾಲ ಇಟ್ಟಿರುವ ವಿಶ್ವಾಸ, ನನ್ನ ಹುಚ್ಚುತನದ್ದಾದೀತೇನು?.... ತನ್ನದೇನಾದರೂ ಸ್ವಾರ್ಥ ಸಾಧಿಸಿಕೊಳ್ಳುವುದರ ಸಲುವಾಗಿಯೇ ರತ್ನಾಕರ, ಈ ಹೆಣ್ಣನ್ನ ನನ್ನ ಕೊರಳಿಗೆ ಕಟ್ಟಬೇಕಂತ ಹವಣಿಸತಿರಬಹುದೇನು?.... ಏನೇ ಆಗಲಿ, ನಾನು ಇಲ್ಲಿಗೆ ಬಾರದೆ ಇದ್ದರೇನs ಒಳ್ಳೇದಾಗತಿತ್ತು!.... ಬಂದದ್ದರ ದುಷ್ಪರಿಣಾಮ ಇನ್ನ ಏನು ಅನುಭವಿಸಬೇಕಾಗತದೋ ಏನೋ!.... ಇನ್ನೊಂದು ವಿಷಯ: ರತ್ನಾಕರ ನಿಜವಾಗಿ ಸ್ವಾರ್ಥಸಾಧಕ--ದುಷ್ಟ—ಇದ್ದರ, ಆ ಹುಡುಗಿಯ ಮದಿವೀ ಸಲುವಾಗಿ ಇಷ್ಟ್ಯಾಕ ಪ್ರಯತ್ನ ಮಾಡಬೇಕಾಗಿತ್ತು? ಆಕಿಗೆ-ತನಗ ಸಂಬಂಧ ಬಂದು ಈಗ ಬಿಡುಗಡೆ ಆಗಿದ್ದರ, ಆಕೆಯ ಸಲುವಾಗಿ ಈತ ವಿಚಾರವನ್ನರೇ ಯಾಕ ಮಾಡಬೇಕು?.... ಆ ಹುಡುಗಿಯೇ ಆಗಲಿ, ಆಕೆಯ ತಂದೆ-ತಾಯಿಗಳೇ ಆಗಲಿ,—ರತ್ನಾಕರ ವಿಶ್ವಾಸಘಾತ ಮಾಡಿದ್ದರೆ—ಅವನ ಮಾತನ್ನ ನಂಬಿ, ಅವನು ಹುಡುಕಿ ಕೊಟ್ಟ ವರನಿಗೆ ಹೆಣ್ಣುಕೊಡಲಿಕ್ಕೆ

ಯಾಕೆ ಸಿದ್ಧರಾಗಬೇಕು ?.... ಈ ಅನಂತರಾಯರಂತೂ ಆ ಹುಡಿಗಿಯನ್ನ ಬಾಯಿಹಿಡಿಸದಷ್ಟು ಬಣ್ಣಿಸಿ ಹೇಳಿದರು....ರತ್ನಾಕರನ ಸದ್ಗುಣಗಳನ್ನ ತಲೆದೂಗಿ ತಲೆದೂಗಿ ಕೊಂಡಾಡಿದರು !.... ಈ ಮುದುಕನ ಮಾತುಗಳನ್ನ ಕೇಳಿದರ, ಬಹಳ ಸರಳ ಮನಸ್ಸಿನ ಸಹೃದಯ ಮನುಷ್ಯ ಇದ್ದಾನಃ....ಅಂತ ಅನಿಸತಃದ!.... ಇನ್ನೂ ಒಂದು ವಿಷಯ : ರತ್ನಾಕರನ ಸ್ನೇಹ ನನಗ ಎಷ್ಟು ವರ್ಷಗಳದು !.... ಆತನ ಸ್ವಭಾವದ ಸೌಂದರ್ಯಕ್ಕ ನಾನು ಎಷ್ಟು ಸಾರೆ ಶರಣಾಗತನಾಗಿಲ್ಲ ? ಹೀಂಗಿರುವಾಗ ಯಾರೋ ಏನೋ—ಹೆಸರು ಕೂಡ ಇಲ್ಲದೆ—ಬರೆದ ಮೂಕಪತ್ರದೊಳಗಿನ ಮಾತುಗಳಿಗೆ ಬೆಲೆ ಕೊಡಬೇಕೇನು ನಾನು ? ಆ ಪತ್ರ ಬರೆದವರ ದುರುದ್ದೇಶ ಏನೇನಿದೆಯೋ— ಅವರಿಗೇನು ಸ್ವಾರ್ಥ ಸಾಧಿಸಬೇಕಾಗಿದೆಯೋ—ಯಾರಿಗೆ ಗೊತ್ತು ? ಅದೊಂದು ಪತ್ರ-ದಿಂದಲೇ ರತ್ನಾಕರನ ಬೆಟ್ಟದಂಥ ಸಜ್ಜನಿಕೆಯ ವಿಷಯದಲ್ಲಿ ನಾನು ಸಂಶಯ ಪಡಬೇಕೆ ?........"

ಇದ್ದುದಿದ್ದ ಹಾಗೆಯೆ ಅನಂತರಾಯರು ಕೋಣೆಯೊಳಗೆ ಬಂದರು. ರಂಗಣ್ಣ ತಟ್ಟನೆ ಬೆಚ್ಚಿಬಿದ್ದು ಜಾಗೃತನಾಗಿ ಕುಳಿತು, ಮುಗುಳುನಗೆಯಿಂದ ಅವರನ್ನು ಬರಮಾಡಿಕೊಂಡ. ಅನಂತರಾಯರು ಕುಳಿತುಕೊಳ್ಳುತ್ತಿರುವಾಗಲೇ ಕೇಳಿದರು :

" ಪ್ರಯಾಣದಿಂದ ದಣಿವು ಆಗಿದ್ದೀತು. ಸುಡುಗಾಡು ಸರ್ವಿಸ್ ಮೋಟಾರಿನಲ್ಲಿಯ ಪ್ರವಾಸ! ನೀವು ವಿಶ್ರಾಂತೀ ತಗೊಳ್ಳತಿದ್ದಿರಿ ಕಾಣಿಸತಃದ; ನಾನು ಬಂದುಬಿಟ್ಟೆ !"

" ಛೇ ಛೇ ! ವಿಶ್ರಾಂತಿ ಯಾತರದು ! ಶ್ರಮ ಆಗಿದ್ದರ ವಿಶ್ರಾಂತಿ ! ನಮ್ಮ ಪರಿಚಯದ ಡ್ರಾಯ್ವರನೇ ಇದ್ದ. ಒಳ್ಳೇ ಸ್ಥಳಾ ಕೊಟ್ಟು ಆರಾಮಾ-ಗಿಯೇ ಕರಕೊಂಡು ಬಂದ ! "

" ಹಂ ಹಂ ! ನಿನ್ನೆ ರತ್ನಾಕರರಾಯರ ಪತ್ರಾ ತಂದುಕೊಟ್ಟ ಡ್ರಾಯ್ವರನಃ ಏನು ? "

" ಹೌದು ಹೌದು, ಆತನಃ ! "

" ಆವೊತ್ತು ಅಂವ ಸರಿಯಾದ ಸಮಯಕ್ಕ ಪತ್ರಾ ತಂದುಕೊಟ್ಟನಂತ ಬಹಳ ಒಳ್ಳೇಯದಾಯ್ತು ನೋಡ್ರಿ! ಇನ್ನೂ ನಮ್ಮ ಕಡಿಂದನಃ ಸ್ವಲ್ಪ

ವಿಲಂಬ ಆಯ್ತು. ಆತ, ರಾತ್ರಿ ಆದ ಮ್ಯಾಲ ಪತ್ರಾ ತಂದುಕೊಟ್ಟ. ರಾತ್ರೀ ಏನು ಹೋಗೂದಂತ, ನಮ್ಮ ಕುಮುದಾ ಇಂದು ಮುಂಜಾನೆ ಪತ್ರಾ ತಗೊಂಡು ಹೋದಳು. ಏನೋ, ಆ ಹುಡುಗಿಯು ದೈವ ಒಳ್ಳೇದು! ಸರಿಯಾದ ಸಮಯಕ್ಕ ಪತ್ರ ತಲ್ಪಿ, ತನ್ನ ಒಪ್ಪಿಗೀ ವಿಷಯ ತಿಳೀತಂತ ಎಲ್ಲಾ ಸರಿಹೊಯ್ತು! ಇಲ್ಲವಿದ್ದರ ಪೆಟಿಗಿ ಬದಲಾಗಿ ಹೋಗತಿತ್ತು!"

ರಂಗಣ್ಣಾ ಗಾಬರಿಯ ಧ್ವನಿಯಲ್ಲಿ ಕೇಳಿದ:

"ಯಾಕ? ಏನಾಗತಿತ್ತು?"

"ಏನಾಗತಿತ್ತಂತ ಕೇಳತೀರಾ? ಎಲ್ಲಾ ಘಾತ ಆಗಿ ಹೋಗತಿತ್ತು! ನೀಚ ಜನರ ಸಂಗತಿ! ಕಾವೇರಿನ್ನ ನೋಡಲಿಕ್ಕಂತ, ಈ ಮೊದಲೇ ಒಬ್ಬ ವರಾ ಬಂದಿದ್ದನೇನ್ರಿ! ನೋಡಿದಾಗ ಆವೊತ್ತು ಒಪ್ಪಿಗೊಳ್ಳಲಿಲ್ಲ. ಇಂಗ್ಲಿಷ್ ಕಲಿತಿಲ್ಲ—ಸಂಗೀತ ಬರೂದಿಲ್ಲ—ಅಂತ ಏನೇನೋ ದೋಷಾ ತಗದು, ಹಾಂಗs ಹೊಂಟುಹೋದ. ಆ ದಿನಾ ಏನು ಮಜಾ ಆಗಿತ್ತಂತೀರಿ? ನಮ್ಮ ಕುಮುದಾನ ಗೆಳತಿ ಅಲ್ಲs ಕಾವೇರಿ?— ಮತ್ತ ನಮ್ಮ ಮನೀ ಹೆಂಗಸರದೂ ಆ ಗೋಪಾಲರಾಯರ ಹೆಂಡತೀದೂ ದೋಸ್ತೀ ಬಹಳ! ಆ ದಿವಸ, ಆ ವರಾ, ತನ್ನ ಪಳಿಂಕ ಗೆಳೆಯರನ್ನ ಕೂಡಿಕೊಂಡು ಕನ್ಯಾ ನಿರೀಕ್ಷಣಕ್ಕಂತ ಬಂದಾಗ, ಅಲ್ಲಿಗೆ ಹೋದ ನಮ್ಮ ಕುಮುದಾನ್ನ ನೋಡ್ಯಾನೇನ್ರಿ! ಉಡಾಳ ಮಂದೀ ಸಂಗತಿ! ಆ ಮೂರ್ಖ ಏನು ಮಾಡಬೇಕು ಹೇಳ್ರಿ ನೀವು? ಕುಮುದಾನ್ನ ತನಗ ಕೊಡಬೇಕಂತ ಹೇಳಿ, ತನ್ನ ಸ್ನೇಹಿತನೊಬ್ಬನ ಕಡಿಂದ ನನಗ ಪತ್ರಾ ಬರಿಸಬೇಕs? ಎಂಥಾ ಬದ್ಮಾಷ್ ಜನಾ ನೋಡ್ರಿ! ನಾನೂ ಆ ಪತ್ರಕ್ಕ ಉತ್ತರಾ ಕೂಡಾ ಬರೀದೇ ಉಪೇಕ್ಷಾ ಮಾಡಿಬಿಟ್ಟೆ. ಆ ಪತ್ರ ಬಂದ ದಿನಾನೇ ರತ್ನಾಕರರಾಯ ಮೊದಲನೇ ಸಲ ನಮ್ಮ ಮನಿಗೆ ಬಂದದ್ದು. ಮರುದಿನಾನೇ ಅವರು ನಿಮ್ಮ ಕಡೆಗೆ ಬಂದು ಬಿಟ್ಟರು....ಕಾವೇರೀ ಸಲುವಾಗಿ!"

ರಂಗಣ್ಣಾ ನಡುವೆಯೇ ಕೇಳಿದ:

"ರತ್ನಾಕರಗ ಕಾವೇರಿಯ ಪರಿಚಯ ಎಲ್ಲೀದು?"

"ಪರಿಚಯ ಎಲ್ಲೀದರೀ? ಆವೊತ್ತು ಕನ್ಯಾನಿರೀಕ್ಷಣಕ್ಕಂತ ಆ ವರಾ ಬಂದಿದ್ದನಂತ ಹೇಳಿದೆನಲ್ಲಾ; ಅವನದೇನೋ ರತ್ನಾಕರರಾಯರಿಗೆ ಪರಿಚಯ

ಅಂತ;. ಜೋಡಿಗೆ ಪಾಪ, ಅವರನ್ನೂ ಕರಕೊಂಡು ಬಂದಿದ್ದ ! ಮುಂದಿನ ಮಜಾಕೇಳ್ರಿ ಇನ್ನೂ ! ನಾ ಉತ್ತರ ಕೊಡಲಿಲ್ಲ; ಕುಮುದಾನ ಬಗ್ಗೆ ಅವನಿಗೆ ಸಂಪೂರ್ಣ ನಿರಾಶಾ ಆಯ್ತು ! ಮುಂದೆ ಸುಮ್ಮನೆ ಬಿಟ್ಟನಂತೀರೇನು ? ತಿರುಗಿ ಕಾವೇರಿನ್ನ ತನಗ ಕೊಡುವ ಸಲುವಾಗಿ, ಗೋಪಾಲರಾಯರ ಕಡೆ ತನ್ನ ಸ್ನೇಹಿತರನ್ನ ಕಳಿಸಿದನಂತ ! ಪಾಪ, ಮಗಳ ಮದಿವೀ ಸಲುವಾಗಿ ಹಂಬಲಿಸತಾ ಇರುವ ಆ ಮುದುಕ, ಕಾವೇರಿನ್ನ ಆ ವರನಿಗೇ ಕೊಡಲಿಕ್ಕೆ ಸಿದ್ಧ ಆಗಿದ್ದನಂತ; ಆದರ, ಅಷ್ಟರೊಳಗs ರತ್ನಾಕರರಾಯ, ಆ ಹುಡುಗೀ ಸುಶೀಲಸ್ವಭಾವಾ–ಸದ್ಗುಣಾ–ಸೂಕ್ಷ್ಮದೃಷ್ಟಿಯಿಂದ ನೋಡಿಕೊಂಡು, ಆ ಹುಡುಗಿನ್ನ ಒಳ್ಳೆಯ ವರಕ್ಕ ಗಂಟಹಾಕಬೇಕಂತ ಮನಸಿನೊಳಗ ಮಾಡಿಕೊಂಡು, ಅವರಿಗೆ ನಿಮ್ಮ ಹೆಸರು ತಿಳಿಸಿದ್ದ. ಅದಕ್ಕ ಹುಡುಗಿ, ಹುಡುಗೀ ತಾಯಿ-ತಂದಿ ಎಲ್ಲಾರೂ ಒಪ್ಪಿಕೊಂಡಿದ್ದರು. ಆದರೂ ಗೋಪಾಲರಾಯ, ಗಡಿಬಿಡೀ ಮಾಡಿ ಕೆಲಸಾ ಕೆಡಿಸಿಬಿಡೂದರೊಳಗಿದ್ದ. ಆ ತಾಯಿ-ಮಗಳು ಹಟಾ ಹಿಡಿದದ್ದರಿಂದ, ಗೋಪಾಲರಾಯ ನಿರುಪಾಯ ಆಗಿ ಸುಮ್ಮನs ಬಿಟ್ಟನಂತ !"

ರಂಗಣ್ಣನಿಗೆ ಹೃದಯದಲ್ಲಿ ಏನೋ ಒಂದು ಬಗೆಯ ವ್ಯಥೆಯಾದಂತೆ ಅನುಭವವಾಯಿತು. ಗಟ್ಟಿಯಾಗಿ ಉಸಿರೊಂದನ್ನು ಹಾಕಿ ಕೇಳಿದ:

" ಸರಿ ! ಮುಂದೇನಾಯಿತು ? "

" ದುಷ್ಟರ ಸಂಗತಿ — ಅಂತ ಹೇಳಿದೆನಲ್ಲಾ ನಾನು ! ಆ ವರನ ಗೆಳೆಯ, ಗೋಪಾಲರಾಯರಿಗೆ ಒಂದು ಪತ್ರಾ ಬರೆದಾನಂತ—ಅವನ ಮ್ಯಾಲ ಖಟ್ಲೀ ಮಾಡಿದರ, ಹತ್ತುವರ್ಷ ಸಕ್ತಮಜೂರೀ ಶಿಕ್ಷಾ ಆದೀತು ನೋಡ್ರಿ ! ' ನೀವು ನಮ್ಮ ಗೆಳೆಯಗ ಕಾವೇರಿನ್ನ ಕೊಡಲಿಕ್ಕೇ ಬೇಕು. ಕೊಡದಿದ್ದರ, ಆಕೀ ಮದಿವಿ ಎಂದೂ ಯಾರಕೂಡಾನೂ ಆಗದ ಹಾಂಗ ನಾವು ಮಾಡತೀವಿ ! ' ಅಂತ. ಇನ್ನೂ ಏನೇನೋ ಕೆಟ್ಟ ಕೆಟ್ಟ ಮಾತು ಬರೆದಿದ್ದರಂತ ಪತ್ರದೊಳಗ ! ಆ ಪತ್ರ ಬಂದಾಕ್ಷಣಕ್ಕ ಮನಿಯೊಳಗ ಪ್ರಳಯ ! ಅಳೂದು ಕರೆಯೂದು ರಂಬಾಟನೇ ರಂಬಾಟ ! ಪಾಪ, ಆ ಹುಡುಗಿ ಕಾವೇರಿ, ತಂದೆಯ ದುಃಖಾ ನೋಡಿ ತಡಿಯಲಾರದೆ, ಅಂಥಾ ಆ ನೀಚನನ್ನ ಮದಿವಿಮಾಡಿಕೊಳ್ಳಲಿಕ್ಕೇ ಒಪ್ಪಿ, ಆತಗ ಬರೆದು ತಿಳಿಸಲಿಕ್ಕೆ ತಂದೆಗೆ ಹೇಳಿಕೊಂಡಳಂತ ! ಆಗಲೇ

ನಮ್ಮ ಕುಮುದಾ, ರತ್ನಾಕರನ ಪತ್ರಾ ಒಯ್ದು ಕೊಟ್ಟು, ಎಲ್ಲಾ ಸಂಗ್ತೀ ಹೇಳಿದಳಂತ. ಇಂದೇ ಮುಂಜಾನೆ ಅನ್ರಿ ಇದೆಲ್ಲಾ ಆದದ್ದು ! ಪತ್ರಾ ನೋಡಿ ಎಲ್ಲರಿಗೂ ಆನಂದ ಆಯ್ತಂತ ! ಇವೊತ್ತಿನ ದಿನವೇ ಕಾವೇರೀ ಹುಟ್ಟಿದ ದಿವಸ ಏನ್ರಿ ! ನಮ್ಮ ಕುಮುದಾ ಅಲ್ಲೆ ಹುಟ್ಟಿದ ದಿನದ ಸವಿಯೂಟಾ ಹೊಡೆದು ಬಂದಾಳ ! ಪಾಪ, ಕಾವೇರಿ ಬಹಳ ಒಳ್ಳೇ ಹುಡುಗಿ ಏನ್ರಿ ! ನೀವೂ ಕಣ್ಣಾರೆ ನೋಡೇನೋಡ್ತೀರಲಾ ! ”

ರಂಗಣ್ಣನಿಗೆ ಹೃದಯದ ಭಾರವೆಲ್ಲ ಕಡಿಮೆಯಾದಂತೆನಿಸಿತು. ರತ್ನಾಕರನ ವಿಷಯಕವಾದ ಸ್ನೇಹ–ಪ್ರೀತಿಗಳು, ಆತನ ನರನರಗಳಲ್ಲಿಯೂ ಹರಿದಾಡಲು ತೊಡಗಿದುವು. ರತ್ನಾಕರನ ಮಧುರಮೂರ್ತಿ ಆತನ ಒಳ-ಗಣ್ಣೆದುರು- ಬಂದು ನಿಂತಿತು. ಮುಂದೆ ಕುಳಿತಿದ್ದ ಅನಂತರಾಯರನ್ನು ಎದ್ದುಹೋಗಿ ಅಪ್ಪಿಕೊಂಡು ಬಿಡಲೇ—ಎನಿಸುವಷ್ಟು ರಂಗಣ್ಣನ ಮನಸ್ಸು ತವಕಗೊಂಡಿತು. ಆದರೂ ಅದನ್ನೆಲ್ಲ ತಡೆದುಕೊಂಡು ರಂಗಣ್ಣ ನುಡಿದ :

“ ನೋಡ್ರಿ, ಒಂದು ಹೆಣ್ಣಿನ ಮದಿವಿ ಆಗಬೇಕಾದರ, ಎಷ್ಟು ರಗಳೀ ಅನುಭವಿಸಬೇಕಾಗತದ ! ”

ಅನಂತರಾಯರು ಹೇಳಿದರು :

“ ದಿವಸ ಬಹಳ ಕೆಟ್ಟ ಬಂದಾವರೀ ! ಈ ಹೊಸದಿನಕ್ಕ ತಕ್ಕ ಹಾಂಗ ನಾನೂ ನಮ್ಮ ಕುಮುದಾನ್ನ ತರಬೇತು ಮಾಡಬೇಕಂತ ಮಾಡೀನಿ. ಏನೇ ಆಗಲಿ, ಈ ಸಮಾಜದೊಳಗಿನ ಸಾಮಾನ್ಯ ಜನರಿಗಿಂತಾ, ಸುಶಿಕ್ಷಿತ ಜನರ ಸಹವಾಸ ಒಳ್ಳೇದು ! ಅದಕ್ಕ ನಮ್ಮ ಕುಮುದಾನ್ನ ಕಾಲೇಜಿಗೆ ಕಳಿಸಿಬಿಡ-ಬೇಕಂತ ನಾನು ನಿರ್ಣಯಿಸಿಕೊಂಡೀನಿ ! ಆದರ, ಮನಿಯೊಳಗ ಹೆಂಗಸರ ಅಪೇಕ್ಷಾ ಒಂದು ಬ್ಯಾರೇನs ಏನ್ರಿ ! ಕುಮುದಾನ ಮದಿವೀ ಬ್ಯಾಗನs ಮಾಡಿಬಿಡಬೇಕಂತ ಅವರ ಆಶಾ ! ಮಾಡಬೇಕಂದರ ಯೋಗ್ಯ ವರಾ ಒಂದು ವ್ಯಾಳ್ಯಾಕ್ಕ ಸಿಗಬೇಕಲಾ ! ಮತ್ತ ಈ ರತ್ನಾಕರರಾಯ ಏನಂತೀರಿ; ಕಲಿತಾನ, ಎಂ. ಎ. ಇದ್ದಾನ, ಎಲ್ಲಾ ಖರೆ; ಆದರ ಈ ಚಳವಳೀ ಹುಚ್ಚು ತಲಿಯೊಳಗ ಹಾಕಿಕೊಂಡು, ತನ್ನ ಜೀವನಾ ಎಲ್ಲಾ ವ್ಯರ್ಥಮಾಡಿಕೊಂಡ್ಹಾಂಗ ಮಾಡ್ಯಾನ ! ನಾ ಹೀಂಗ ಅಂತೀನಂತ ತಪ್ಪುತಿಳಕೋಬ್ಯಾಡ್ರಿ ನೀವು ! ಯಾಕಂದರ, ನೀವೂ ಚಳವಳಿಯೊಳಗ ಇದ್ದ ಮಂದಿಯೇ ಕಾಣಿಸತೀರಿ ! ”

ವಾತ್ರಿನಲ್ಲಿಯೆ ಎಂಟುವರೆ ಗಂಟೆ ರಾತ್ರಿಯಾಯಿತು. ಕುಮುದಾ ಮೇಲೆ ಬಂದು ಹೇಳಿದಳು :

" ಅಡಿಗಿ ಆಗೇದ; ಊಟಕ್ಕ ಏಳತೀರಲ್ಲಾ ಕಾಕಾ ಇನ್ನ ?"

ಅನಂತರಾಯರು ರಂಗಣ್ಣನ ಮುಖದ ಕಡೆಗೆ ನೋಡಿದರು. ರಂಗಣ್ಣ ಏನೋ ಕಿವಿಗೊಟ್ಟು ಕೇಳುತ್ತಿದ್ದಂತೆ ಕಂಡಿತು. ಆಗ ಅನಂತರಾಯರು ಕೇಳಿದರು:

" ಏನು ? ಏನೋ ಕಿವಿಗೊಟ್ಟು ಕೇಳತಾ ಇದ್ದೀರಲ್ಲಾ ?"

"ಆಂ ? ಬೀದಿಯೊಳಗ ಏನೋ ಗಂಟೆಯ ಸಪ್ಪಳ ಕೇಳಸತದ ಅಲ್ಲs?"

" ಹಾಂ ! ಹೌದು, ಗಂಟೆಯ ಸಪ್ಪಳ ! ಯಾರಾದರೂ ಗಂಟೆಯ ಅಯ್ಯನವರು ಭಿಕ್ಷಕ್ಕ ತಿರುಗಾಡತಿದ್ದಾರು ಬೀದಿಯೊಳಗ !"

ರಂಗಣ್ಣ ಇನ್ನಿಷ್ಟು ಲಕ್ಷ್ಯಕೊಟ್ಟು ಕೇಳಲು ತೊಡಗಿದ. ಗಂಟೆಯ ಸಪ್ಪಳು ಹತ್ತಿರ ಹತ್ತಿರಕ್ಕೇ ಬಂದಂತೆ ಕೇಳಿಸಲು ತೊಡಗಿತು. ರಂಗಣ್ಣನ ಕುತೂಹಲಭಾವವನ್ನು ಕಂಡು, ಕಮುದಾ–ಅನಂತರಾಯರಿಗೆ ಆಶ್ಚರ್ಯ. ಅವರಿಗೇನೂ ತಿಳಿದಾಯಿತು. ಮನೆಯ ಬಾಗಿಲಲ್ಲಿಯೇ ಗಂಟೆಯ ನಾದ-ದೊಂದಿಗೆ ಕೂಗು ಕೇಳಿಸಿತು;

" ಶ್ರೀಶಂಭುಲಿಂಗಾ ! ಮಲ್ಲಿಕಾರ್ಜುನಾ ! ಕೂಡಲಸಂಗಮನಾಥಾ ! ಹರ ಓಂ. ಹರ ಓಂ, ಹರ ಹರ ಹರ !"

ರಂಗಣ್ಣ ಒಮ್ಮೆಲೆ ಮೇಲಕ್ಕೆದ್ದ; ತಂದೆ-ಮಗಳಿಗೆ ಹೇಳಿದ:

" ಸ್ವಲ್ಪ ತಡೆಯಿರಿ, ಈಗಲೆ ಕೆಳಗೆ ಹೋಗಿ ಬರತೀನಿ !"

ರಂಗಣ್ಣ ಆತುರದಿಂದ ದಡದಡನೆ ಪಾವಟಿಗೆಗಳನ್ನಿಳಿದು ಕೆಳಗೆ ಹೋದ. ಕುಮುದಾ ಅನಂತರಾಯರು, ಆಶ್ಚರ್ಯದಿಂದ ಒಬ್ಬರ ಮುಖವನ್ನೊಬ್ಬರು ಮೌನವಾಗಿಯೇ ನೋಡಿದರು. ಊಟಕ್ಕೆ ಕರೆಯಲು ಬಂದ ಕುಮುದಾ ಕುಳಿತಿರಲಿಲ್ಲ; ಟೇಬಲ್ಲಿನ ಬಳಿಯಲ್ಲಿಯೆ ನಿಂತುಕೊಂಡಿದ್ದಳು. ಹಾಗೆಯೇ ನಿಂತುಕೊಂಡು, ಆಶ್ಚರ್ಯಭಾವದಿಂದ, ಟೇಬಲ್ಲಿನ ಮೇಲಿದ್ದ ಟಾಯಿಮ್ಸ್ ಪತ್ರಿಕೆಯನ್ನು, ಹಾಗೊಮ್ಮೆ ಹೀಗೊಮ್ಮೆ ಹೊರಳಾಡಿಸುತ್ತಿಲಿದ್ದಳು. ಅನಂತ ರಾಯರು ಬಾಗಿಲಕಡೆಗೇ ಕಣ್ಣಿಟ್ಟಿದ್ದರು. ಮೂರು-ನಾಲ್ಕು ನಿಮಿಷಗಳಲ್ಲಿಯೇ ರಂಗಣ್ಣ, ಗಂಟೆಯ ಅಯ್ಯನವರೊಬ್ಬರನ್ನು ಬೆನ್ನುಹಚ್ಚಿಕೊಂಡು, ಅಟ್ಟವನ್ನೇರಿ ಬಂದ. ತಂದೆ-ಮಗಳಿಬ್ಬರೂ ಆಶ್ಚರ್ಯದಿಂದ ನೋಡಿದರು.

ಕೋಣೆಯೊಳಗೆ ಬಂದವರೆ ಅಯ್ಯನವರು, ಮೆಲುನಗೆನಗುತ್ತನುಡಿದರು:

" ನಮಸ್ಕಾರ ರಾಯರೇ ! ನಮಸ್ಕಾರ ಕುಮುದಾ !"

ಧ್ವನಿ ರತ್ನಾಕರನದು. ಕುಮುದೆಗೆ ಆಶ್ಚರ್ಯ, ಆನಂದ! ಆನಂತ-ರಾಯರಿಗೆ ಹಿಡಿಸಲಾರದಷ್ಟು ಆಶ್ಚರ್ಯ!

## ೩೦ನೆಯ ಪರಿಚ್ಛೇದ

ಮನೆಯೊಳಗೆ ಬಂದವನೇ ರತ್ನಾಕರ ತನ್ನ ವೇಷವನ್ನು ಬದಲಿಸಲು ತೊಡಗಿದ. ಕೊರಳಲ್ಲಿಯ ರುದ್ರಾಕ್ಷಿಸರ, ತಲೆಯ ಮುಂಡಾಸ, ಕೊರಳ ಮೇಲಿನ ಗಂಟೆಗಳು, ನಡುವಿನಲ್ಲಿದ್ದ ನಂದಿಮುಖ — ಎಲ್ಲವನ್ನೂ ಒಂದೊಂದಾಗಿ ತೆಗೆದು ಜೋಳಿಗೆಯೊಳಗೆ ಹಾಕಿದ. ಆ ಮೇಲೆ ಕಫನಿಯನ್ನು ತೆಗೆದ. ಒಳಗೆ ಖಾದಿಯ ಸೇಹರೂ ಶರ್ಟೂ ಇದ್ದಿತು. ಟಾವೇಲೊಂದನ್ನು ತೆಗೆದುಕೊಂಡು, ಮುಖಕ್ಕೆ ಲೇಪಿಸಿದ ವಿಭೂತಿಯನ್ನು ಒರಸಿಕೊಳ್ಳಲು ತೊಡಗಿದ. ಮಿಕ್ಕ ಮೂವರೂ ಬೆರಗುಗಣ್ಣುಗಳಿಂದ ಆತನ ವೇಷಾಂತರವನ್ನು ನೋಡುತ್ತಲಿದ್ದರು. ಕೆದರಿದ ಕ್ರಾಪಿನ ಕೂದಲುಗಳನ್ನು ಹಾಗೆಯೇ ಕೈಯಿಂದ ಸರಿಪಡಿಸಿಕೊಳ್ಳುತ್ತಿರುವಾಗ ಕುಮುದಾ ಕೇಳಿದಳು :

" ಹಣಿಗೆ ಬೇಕೇನು ?"

ರತ್ನಾಕರ ನಗುತ್ತಲೆ ಹೇಳಿದ :

" ನಮ್ಮ ಸುಡಗಾಡಸಿದ್ದರ ಚೀಲದೊಳಗ, ಬೇಕಾದ ಸಾಮಾನೆಲ್ಲಾ ಸಿಗತಾವ !" ಮಾತಿನ ಕೊನೆಯೊಡನೆಯೆ ರತ್ನಾಕರ ಜೋಳಿಗೆಯೊಳಗಿಂದ ಹಣಿಗೆಯೊಂದನ್ನು ಹೊರಕ್ಕೆ ತೆಗೆದ; ಅಲ್ಲಿಯೇ ಕಪಾಟಿಗಿದ್ದ ಕನ್ನಡಿಯಲ್ಲಿ ನೋಡಿಕೊಳ್ಳುತ್ತ ಕ್ರಾಪನ್ನು ಹಿಕ್ಕಿಕೊಳ್ಳಲು ತೊಡಗಿದ. ಕುಮುದಾ ಕೌತುಕ ತುಂಬಿದ ಕಣ್ಣುಗಳಿಂದ, ಬಿಡದೆ ಅವನನ್ನು ನೋಡುತ್ತಲಿದ್ದಳು. ಗೌರವರ್ಣದ ತುಂಬು ಮುಖ. ವಿಭೂತಿ ಹಚ್ಚಿ ಒರಸಿದುದರಿಂದ, ಅದಕ್ಕೊಂದು ವಿಶಿಷ್ಟವಾದ ಸೌಮ್ಯಸೌಂದರ್ಯ ಬಂದುಬಿಟ್ಟಿದ್ದಿತು. ಹಣಿಗೆಯಿಂದ ಬಾಚಿದರೂ ಸುರುಳಿ-ಸುರುಳಿಯಾಗಿ ನಿಂತ ಮುಂಗುರುಳು, ಆ ಸೌಮ್ಯಸೌಂದರ್ಯಕ್ಕೆ ಹೆಚ್ಚಿನ ಪೋಷಣೆ ಕೊಡುತ್ತಲಿದ್ದಿತು. ರತ್ನಾಕರ ಕನ್ನಡಿಯಲ್ಲಿ ನೋಡಿಕೊಳ್ಳುತ್ತಿರುವಾಗಲೇ, ಒಂದೆರಡು ಸಲ, ಕುಮುದೆ ರತ್ನಾಕರರ ಕಣ್ಣಿನೊಟಗಳು ಕೂಡಿದುವು.

ಕನ್ನಡಿಯಲ್ಲಿ ಮೂಡಿದ ಕುಮುದೆಯ ಬಿಂಬವನ್ನು ರತ್ನಾಕರ ನೋಡಿದ. ಆ ಬಿಂಬ ರತ್ನಾಕರನನ್ನು ನೋಡಿತು. ಕೂಡಲೆ ಇಬ್ಬರ ಕಣ್ಣುಗಳೂ ಅಸ್ಥಿರ-ಗೊಂಡು ನೋಟಗಳನ್ನು ಬದಲಿಸಿದುವು. ಕನ್ನಡಿಯ ಪ್ರಭಾಕ್ಷೇತ್ರದಿಂದ ದೂರ-ದಲ್ಲಿ ಕುಳಿತ ರಂಗಣ್ಣನಿಗೂ ಅನಂತರಾಯರಿಗೂ ಇವರಿಬ್ಬರ ಕಣ್ಣುಗಳಾಡಿದ ಮೌನವಾಣಿಯ ಅರ್ಥ ಸ್ವಲ್ಪವೂ ಆಗುವಂತಿರಲಿಲ್ಲ. ಅವು ಆಡಿದ ಮಾತುಗಳ ಅರ್ಥ, ಕುಮುದಾ–ರತ್ನಾಕರರ ಜಾಗೃತಚಿತ್ತಕ್ಕಾದರೂ ಆಗಿದ್ದಿತೋ ಇಲ್ಲವೋ ಸಂದೇಹದ ವಿಷಯ.

ರತ್ನಾಕರ ಬಂದು ಕುರ್ಚಿಯೊಂದರಲ್ಲಿ ಕುಳಿತುಕೊಂಡ. ರಂಗಣ್ಣ ಆತುರ ಮನಸ್ಕನಾಗಿ ಕೇಳಿದ:

"ಹುಬ್ಬಳ್ಳಿಯ ಯಾತ್ರೆ ಸುಸೂತ್ರವಾಗಿ ಜರುಗಿತೇನು ?"

"ಇಲ್ಲಿಗೆ ಬಂದು ತಲ್ಪಿದ್ದೀನಂದ ಮ್ಯಾಲ, ಸುಸೂತ್ರ ಜರುಗಿದ್ಹಾಂಗs ಸರಿ ! ಮೊನ್ನೆ ಮೋಟಾರಿನಿಂದ ಇಳಿದ ಕೂಡಲೆ, ಇಲ್ಲಿಯ ಪೋಲೀಸರು ನನ್ನ ತಡೆದು ಹಿಡಿದಿದ್ದರು. ಇಂದು ನಾನು ರೇಲ್ವೆಯಿಂದ ಬಂದೆ. ಏನೋ, ನನಗ ದೈವ ಸಹಾಯ ಮಾಡಿತಂತಲೇ ಹೇಳಬೇಕು. ಒಬ್ಬಾಕಿ ಬಂಗಾಲೀ ನಟಿ ಈವೊತ್ತು ನಾನು ಬಂದ ರೇಲ್ವೆಗಾಡಿಯಿಂದಬಂದಳು. ಆಕಿ ಆ ಗಾಡಿಯೊಳಗ ಇದ್ದಾಳಂಬೂದು ಇಲ್ಲೀ ಜನಕ್ಕ ಹ್ಯಾಂಗ ಗೊತ್ತಾಗಿತ್ತೋ ಏನೋ ! ಗಾಡೀ ಬಂದು ಸ್ಟೇಶನಿನೊಳಗ ನಿಲ್ಲೋದs ತಡ; ಪೋಲೀಸರನ್ನ ಮೊದಲಮಾಡಿಕೊಂಡು ಎಲ್ಲಾ ಜನರೂ ಸೆಕಂಡ್‌ಕ್ಲಾಸ್ ಬೋಗೀ ಕಡೆಗೆ ಓಡಿ ಹೋದರು. ನನಗ ಒಳ್ಳೇಸಂಧಿಸಾಧಿಸಿತು. ಗಾಡಿಯಿಂದ ಇಳಿದವನೇ ಮೆಲ್ಲಗೆ ಪಾರಾಗಿ ಹೊರಬಿದ್ದು ಬಂದುಬಿಟ್ಟೆ. ಇಲ್ಲದಿದ್ದರೇನು ಕೇಳತೀ ? ಹೇಳಿಕೇಳಿ ಚಳವಳಿ ಕಾಲ ! ಇಲ್ಲದ ಸಂಶಯದಿಂದ ಪೋಲೀಸರು, ಯಾರು ಬೇಕಾದವರನ್ನ ಹಿಡಿದುಕೂಡಿಸಿಬಿಡತಾರ !"

ಕುಮುದೆಯ ಮುಖದ ಮೇಲೆ ಸಮಾಧಾನದ ಭಾವ ಕುಣಿಯುತ್ತಲಿದ್ದಿತು. ಅನಂತರಾಯರ ಮನಸ್ಸು, ಯಾವ ವಿಚಾರದ ಉಯ್ಯಾಲೆಯಾಡುತ್ತಿದ್ದಿತೋ ಏನೋ ! ಇದುವರೆಗೂ ಸುಮ್ಮನೆ ಕುಳಿತವರು ಒಮ್ಮೆಲೆ ಹೇಳಿದರು :

"ಅಂತೂ ಸರಿಯಾದ ವ್ಯಾಳ್ಯಾಕ್ಕ ಬಂದಿರಿ ನೀವು; ಎಲ್ಲಾರೂ ಕೂಡಿ ಊಟಾಮಾಡಲಿಕ್ಕೆ ಅನುಕೂಲ ಆಯ್ತು. ಇನ್ನೊಂದು ಅರ್ಧಾ ಘಳಿಗಿ ತಡಾ

ಆಗಿದ್ದರ, ನಾವು ಊಟಕ್ಕ ಕೂತು ಮುಗಿಸಿಬಿಡತಿದ್ದಿವಿ! ಯಾಕs ಕುಮುದಾ, ಹೌದಲ್ಲೋ ನಾ ಹೇಳುವ ಮಾತು ? ”

ಕುಮುದಾ ರತ್ನಾಕರನನ್ನು ನೋಡುತ್ತ ಕಿರುನಗೆ ನಕ್ಕುಬಿಟ್ಟಳು. ಮಾತನೇನೂ ಆಡಲಿಲ್ಲ. ಆಗ ಅನಂತರಾಯರೇ ಹೇಳಿದರು :

“ನಡೀರಿ, ಲಗೂನs ಊಟಾ ಮುಗಿಸಿಬಿಡೋಣ! ಗೋಪಾಲರಾಯರಿಗೆ ಹತ್ತುಗಂಟೆಗೆ ಸರಿಯಾಗಿ ಇಲ್ಲಿಗೆ ಬರಬೇಕಂತ ಹೇಳಿಕಳಿಸೀನಿ! ರತ್ನಾಕರ-ರಾಯರೂ ಬಂದುಬಿಟ್ಟರು; ಅನುಕೂಲವೇ ಆಯ್ತು. ಗೋಪಾಲರಾಯರು ಬರುವುದರೊಳಗಾಗಿ, ನಾವೂ ಊಟದ ಕೆಲಸ ತೀರಿಸಿಬಿಡೋಣ!”

ನಿಂತುಕೊಂಡೇ ಇದ್ದ ಕುಮುದಾ, ಆತುರದ ನಡಿಗೆಯಿಂದ ಹೊರಟು-ಬಿಟ್ಟಳು. ಒಂದೆರಡು ನಿಮಿಷಗಳಲ್ಲಿಯೇ ಮೂವರೂ ಕೋಣೆಯಿಂದ ಹೊರಬಿದ್ದು, ಅಟ್ಟದ ಪಾಟಿಗಗಳನ್ನು ಇಳಿಯಲು ತೊಡಗಿದರು.

* * * * *

ಊಟ ತೀರಿಸಿಕೊಂಡು ರತ್ನಾಕರ ರಂಗಣ್ಣ ಅಟ್ಟದ ಕೋಣೆಗೆ ಮರಳಿ-ಬಂದಾಗ, ಗಡಿಯಾರ—ಒಂಬತ್ತು ಹೊಡೆದು ಐವತ್ತು ನಿಮಿಷಗಳಾದುದನ್ನು ತೋರಿಸಿತು. ಬಂದು ತಮ್ಮ ತಮ್ಮ ಆಸನಗಳಲ್ಲಿ ವಿಶ್ರಮಿಸಿದರು. ಆಗ ರತ್ನಾಕರ ಮೆಲುನಗೆಯೊಂದಿಗೆ ಮಾತನ್ನು ಪ್ರಾರಂಭಿಸಿದ :

“ನೋಡು ರಂಗಣ್ಣಾ, ನನ್ನರಾಶಿಕುಂಡಲಿಯೊಳಗ, ಯಾವ ಮನಿಯೊಳಗ ಯಾವ ಗ್ರಹ ಹೊಸತಾಗಿ ಬಂದು ಸೇರೇದೋ ಏನೋ! ಆರೇಳು ದಿವಸ ಆಯ್ತು, ಹಾಂಗs ಸುಗ್ರಾಸದ ಮ್ಯಾಲ ಸುಗ್ರಾಸ ನಡೆದsದ! ಮಧ್ಯಾಹ್ನ ನಮ್ಮ ತಾಯಿ ಒತ್ತಾಯಮಾಡಿ, ಇಷ್ಟಾನ್ನ ವಿಷ್ಟಾನ್ನ ಹಾಕೇ ಹಾಕಿದಳು. ಈಗ ಇಲ್ಲಿಗೆ ಬಂದರ, ನನಗಿಂತಾ ಮೊದಲs ಬಂದು ನನ್ನ ಗ್ರಹ ಕೆಲಸಾಮಾಡಿಬಿಟ್ಟsದ. ನಮ್ಮ ಜನರೊಳಗ ಕೂಡಿ ಇರಬೇಕಾದರ, ಮಿತಾಹಾರದ ವ್ರತಾ ಹಿಡಿದೀ-ನಂದರ ಸಾಧ್ಯವೇ ಇಲ್ಲ ! ”

ರಂಗಣ್ಣ ಸ್ವಾಭಾವಿಕಧ್ವನಿಯಲ್ಲಿ ಹೇಳಿದ :

“ ಜಗತ್ತಂದರ ಹೀಂಗ ಅದ ನೋಡು ! ‘ ಬೇಕು ಬೇಕು, ಅನ್ನುವವರು ಬಾಗಿಲಿಗೆ ಬಂದು ಬೇಡಿದರ, ಯಾರೂ ಒಂದು ತುತ್ತು ಹಾಕೂದಿಲ್ಲ! ಆದರ ‘ ಸಾಕುಸಾಕು ’ ಅಂತ ತಲಿಜಾಡಿಸಿದರೂ ಕೆಲವರಿಗೆ ಒತ್ತಾಯ ಮಾಡಿ

ಹಾಕೊದನ್ನ ಬಿಡೊದಿಲ್ಲ. ನಮ್ಮ ಈ ಹೆಚ್ಚಿನ ಕೂಳು, ಹಸಿದ ಬರಿಹೊಟ್ಟೆಗೆ ಬೀಳತಾ ಇದ್ದರ, ಜಗತ್ತಿನೊಳಗ ಶಾಂತಿ-ಸಮಾಧಾನ ಎಷ್ಟು ಉಂಟಾದೀತು? ಆದರ ಏನು ? ತುಂಬಿದ ಹೊಟ್ಟೆಯೊಳಗs ಮತ್ತೂ ಮತ್ತೂ ತುತ್ತುಗಿಡಿ-ಯೂದು ನಡೆದsದ! ನಮಗ ಸ್ವರಾಜ್ಯ ಬಂದರ, ಮೊದಲು ಇದನ್ನ ಸರಿಪಡಿಸ ಬೇಕಾಗೇದ ನೋಡು ! "

ರತ್ನಾಕರ ನಿರಾಶೆಯ ಧ್ವನಿಯಲ್ಲಿ ಮಾತನಾಡಲು ತೊಡಗಿದ :

" ಸ್ವರಾಜ್ಯ ! ನೋಡು ರಂಗಣ್ಣಾ, ನಮ್ಮ ಸಮಾಜದಲ್ಲಿಯ ಜನರ ಮನಸು-ಹೃದಯಗಳ ಕೊಳಕುಗಳನ್ನs ನೋಡತಾ ಹೋದರ, ಸ್ವರಾಜ್ಯ ಬಂದರೂ ಅದರ ಸದುಪಯೋಗ ಎಷ್ಟರ ಮಟ್ಟಿಗೆ ಆದೀತೋ ಅಂತ ನನಗ ಅನಿಸಲಿಕ್ಕೆ ಹತ್ತೇದ ನೋಡು ! ಸುಸಂಸ್ಕೃತ ಜನರ ಸಮಾಜ ಒದ್ದರ, ಸ್ವರಾಜ್ಯ ಈ ಭೂಲೋಕಕ್ಕs ಸ್ವರ್ಗವನ್ನ ಎಳಕೊಂಡು ಬರಬಹುದು; ಆದರೆ ಅಸಂಸ್ಕೃತ ಜನಜಂಗುಳಿಯಿಂದ ತುಂಬಿದ ನಮ್ಮ ನಾಡಿಗೆ, ಸ್ವರಾಜ್ಯ ಬಂದರೂ, ಈ ಇಂದಿನ ನರಕಜೀವನ ಏನೂ ತಪ್ಪಲಾರದಂತ ತೋರತsದ ! ಅದೇನೋ ಒಂದು ಗಾದೆಯ ಮಾತು ಹೇಳತಾರ ಗೊತ್ತದನೋ ಇಲ್ಲೋ ? ಮಂಗನ ಕೈಯೊಳಗ ಮಾಣಿಕಾ ಕೊಟ್ಟರ, ಅದರ ಬೆಲಿ ಮಂಗನಿಗೆ ಏನು ಗೊತ್ತು ? ಮೊದಲು ನಮ್ಮ ಮಂದಿಯ ಮನಸ್ಸು ಹೃದಯ ಪರಿಶುದ್ಧವಾಗ-ಬೇಕು ನೋಡು ! "

" ಮಹಾತ್ಮರು ಇದೇ ಮಾತನ್ನೇ ಮತ್ತೆ ಮತ್ತೆ ಒತ್ತಿ ಹೇಳತಾ ಇಲ್ಲೇನು ರತ್ನಾಕರ? ನಮ್ಮ ನಮ್ಮ ಸ್ವರಾಜ್ಯ, ನಮ್ಮ ನಮ್ಮ ಸ್ವಾತಂತ್ರ್ಯ— ನಮ್ಮ ಮನಸ್ಸಿನ ಮ್ಯಾಲೇ ಅವಲಂಬಿಸಿಕೊಂಡು ಅವ. ನಮ್ಮ ನಮ್ಮ ಮನ-ಸ್ಸಿನ ವಿಕೃತಿ, ನಮ್ಮನ್ನ ಪರಾಧೀನರನ್ನ ಮಾಡತsದ; ನಮ್ಮನಮ್ಮ ಹೃದ-ಯದ ಸಂಸ್ಕೃತಿ ನಮ್ಮನ್ನ ಸ್ವತಂತ್ರರನ್ನಾಗಿ ಮಾಡತsದ ! "

"ಏನು ವಿಕೃತಿಯೋ, ಏನು ಸಂಸ್ಕೃತಿಯೊ? ನಮ್ಮನಾಡಿನೊಳಗ ಸಂಸ್ಕೃತಿ ಏನು ಕಡಿಮಿ ಆಗೇದ ? ' ಜಗತ್ತಿನೊಳಗೆಲ್ಲಾ ಶ್ರೇಷ್ಠವಾದ ಸನಾತನ ಸಂಸ್ಕೃತಿ ನಮ್ಮದು ! ' ಅಂತ ಕೂಗಿಕೊಳ್ಳುವವರೂ ಹಿಂಡುಹಿಂಡಾಗಿ ಇದ್ದಾರ. ವಿಶ್ವ-ವಿದ್ಯಾಲಯದೊಳಗ ಅಭ್ಯಾಸ ಮಾಡಿ ಎರಡೆರಡು—ಮೂರುಮೂರು ಪದವಿಗಳನ್ನ ಪಡೆದ ಹೊಸಕಾಲದ ಸಂಸ್ಕೃತಿಯವರೂ ಇದ್ದಾರ! ಆದರೆ ಈ

ಎರಡೂ ಜಾತಿಯವರಿಗೂ ನಿಜವಾದ ಮಾನವನ ಆದರ್ಶ ಏನಂಬೂದು ಗೊತ್ತಿದ್ಹಾಂಗ ಕಾಣೂದಿಲ್ಲ! ಸಂಸ್ಕೃತಿಯ ಹೆಸರಿನಿಂದ ಅಹಂಕಾರ ಬೆಳಸಿ ಕೊಳ್ಳುವುದಷ್ಟು ಮಾತ್ರ ಗೊತ್ತದ. ಶ್ರೇಷ್ಠವಾದ ಸನಾತನ ಸಂಸ್ಕೃತಿಯೂ ಈಗ ಬ್ರಿಟಿಷರಿಗೆ ಬಾಗಿ ನಡೀತsದ; ಸಮರ್ಥವಾದ ಭೌತಿಕಸಂಸ್ಕೃತಿಯೂ ಈಗ ಬ್ರಿಟಿಷರ ಕಾಲುನೆಕ್ಕುತಾ ಸುತ್ತಾಡತsದ! ಎಲ್ಲಿ ನೋಡಿದರೂ ಅಧಿಕಾ-ರದ ಪೂಜೆ; ಸಿರಿವಂತಿಕೆಯ ಸೇವೆ! ದಯೆ, ದಾಕ್ಷಿಣ್ಯ, ಸಹಾನುಭೂತಿ, ಸ್ವಜನಪ್ರೀತಿ—ಇವುಗಳಿಗೆ ನಿಲುಗಡೆಯೇ ಇಲ್ಲ! ಹೃದಯಸಂಸ್ಕಾರದ ಸಿರಿವಂತಿಕೆ ಎಷ್ಟಿದ್ದರೂ, ಹಣದ ಸಿರಿವಂತಿಕೆಯಿಲ್ಲದ ಬಡವ ಇಂದು ತನ್ನ ಬದುಕನ್ನ ದುಃಖ-ದುಮ್ಮಾನಗಳ ದಾರಿಯಲ್ಲಿಯೆ ನಡೆಯಿಸಬೇಕಾಗೇದ!"

ರಂಗಣ್ಣ ನಿಟ್ಟುಸಿರೊಂದನ್ನು ಹಾಕಿ ಸುಮ್ಮಗೆ ಕುಳಿತುಕೊಂಡ. ಆಗ ರತ್ನಾಕರ ತನ್ನ ಮಾತನ್ನು ಮುಂದುವರಿಸಿದ :

"ನೋಡು ರಂಗಣ್ಣಾ, ನಮ್ಮ ಸಮಾಜಕ್ಕೆ ಸಮಾಜವೆನ್ನಬೇಕೇ–ಕುರುಡುಕುರಿಗಳ ಮಂದೆಯೆನ್ನಬೇಕೆ? ಹೆಣ್ಣು-ಗಂಡಿನ ಮದುವೆಯಂಥಾ ಹೃದಯ-ಹೃದಯಗಳ ಮಿಲನಸಂಬಂಧವನ್ನು ಕೂಡ, ಮನದೆದುರು ತಂದು ನೋಡುವುದಿಲ್ಲ. ಕೇವಲ ಆರ್ಥಿಕ ದೃಷ್ಟಿಯಿಂದ ಲೆಕ್ಕಾಚಾರ ಹಾಕುವುದು. ಎಂತಹದೋ ಹೆಣ್ಣಿಗೆ ಇನ್ನೆಂತಹದೋ ಗಂಡನ್ನು ಗಂಟುಹಾಕಿಬಿಡುವುದು! ಯಾವುದೋ ಗಂಡಿಗೆ ಯಾವುದೋ ಹೆಣ್ಣನ್ನು ಕೊರಳಿಗೆ ಕಟ್ಟುವುದು! ಆಯಿತು, ಸಾಯುವ ವರೆಗೂ ಒದ್ದಾಡುತ್ತಿರಬೇಕು ಆ ಜೀವದ್ವಂದ್ವ! ನಿಜವಾಗಿ ನನಗ ಅನಿಸುವ ಮಾತಂದರ ನೋಡು ರಂಗಣ್ಣಾ! ದಾಂಪತ್ಯದ ಸವಿಯಾದ ಸಂಬಂಧವು ಹೆಚ್ಚಾಗಿ ಕಂಡು ಬರುವ ಸಮಾಜವೇ ನಿಜವಾದ ಸುಸಂಸ್ಕೃತ ಸಮಾಜ—ಅಂತ ನನಗ ಯಾವಾಗಲೂ ಅನಿಸತsದ! ಅದಕ್ಕs ಕಾವೇರಿನ್ನ ನಿನಗ ಜೊತೆ ಮಾಡಬೇಕಂತ ನನ್ನ ಹಂಬಲು ನೋಡು!"

ರಂಗಣ್ಣ ವಿಷಾದದ ಕಿರುನಗೆ ನಗುತ್ತ ಹೇಳಿದ :

"ನಿನ್ನ ಈ ಹಂಬಲಕ್ಕ ಏನೇನೋ ದುರರ್ಥ ಹಚ್ಚುವ ಜನರೂ ನಮ್ಮ ಸಮಾಜದೊಳಗ ಇದ್ದಾರಂಬೂದು ನಿನಗ ಗೊತ್ತಿಲ್ಲ ಕಾಣಿಸತsದ!"

ಗಾಬರಿಯ ಧ್ವನಿಯಲ್ಲಿ ರತ್ನಾಕರ ಕೇಳಿದ :

" ಅಂದರ ಏನು ? ನನ್ನ ಹಂಬಲಕ್ಕ ಯಾರು ಯಾವ ದುರರ್ಥ ಹಚ್ಚತಾರ ? "

ರಂಗಣ್ಣ ಏನನೋ ಹೇಳಬೇಕೆಂದಿರುವಾಗಲೇ ಅನಂತರಾಯರು ಗೋಪಾಲರಾಯರನ್ನು ಜೊತೆಗೊಂಡು ಅಲ್ಲಿಗೆ ಬಂದರು. ರಂಗಣ್ಣನ ಮಾತು ಬಾಯಲ್ಲಿಯೆ ಉಳಿಯಿತು. ರತ್ನಾಕರನ ಕುತೂಹಲ ಹೃದಯದಲ್ಲಿಯೆ ಮರೆಗೊಂಡಿತು. ಇಬ್ಬರೂ ಎದ್ದು ನಿಂತುಕೊಂಡು, ಬಂದವರನ್ನು ಸ್ವಾಗತಿಸಿದರು. ಅನಂತರಾಯರು ಗೋಪಾಲರಾಯರಿಗೆ ರಂಗಣ್ಣನನ್ನು ತೋರಿಸುತ್ತ ಹೇಳಿದರು :

" ಇವರು ರಂಗರಾಯರು ! ನಿಮಗೆ ಅಳಿಯಂದಿರಾಗುವವರು ! "

ಹಾಗೆಯೆ ರಂಗಣ್ಣನಿಗೆ ಹೇಳಿದರು :

" ಇವರೇ ಕನ್ಯೆಯ ತಂದೆ ಗೋಪಾಲರಾಯರು ! ನಿಮ್ಮ ಭಾವೀ ಮಾವಂದಿರು ! "

ರಂಗಣ್ಣ ಆದರಭಾವದಿಂದ ಕೈಮುಗಿದ. ಗೋಪಾಲರಾಯರು ರಂಗಣ್ಣನನ್ನೊಂದು ಸಲ ನೋಡಿ, ಆ ಮೇಲೆ, ತಮ್ಮ ಕೃತಜ್ಞತೆ ತುಂಬಿದ ಕಣ್ಣುಗಳನ್ನು ರತ್ನಾಕರನ ಕಡೆಗೆ ಹೊರಳಿಸಿದರು. ಆಗ ರತ್ನಾಕರ ನಗೆಯಾಟದ ಧ್ವನಿಯಲ್ಲಿ ಹೇಳಿದ :

" ಮೊದಲು ಕನ್ಯೆ ವರನನ್ನು ನೋಡಿ ಒಪ್ಪಿಕೊಂಡ ಮ್ಯಾಲೇ ಅಲ್ಲವೇ ಅಳಿಯ-ಮಾವತನದ ಸಂಬಂಧ ಹೇಳೂದು ? "

ಅನಂತರಾಯರು ಕೇಳಿದರು :

" ಇದು ಯಾವ ಹೀವಿಾ ಮಾತರೀ ನಿಮ್ಮದು ? ವರಾ ಕನ್ಯಾನ್ನ ನೋಡಿ ಒಪ್ಪಬೇಕೋ ? ಏನು ಕನ್ಯಾನೇ ವರನ್ನ ನೋಡಿ ಒಪ್ಪಬೇಕೋ ?

ಕೂಡಲೇ ರತ್ನಾಕರ ಹೇಳಿದ :

" ಇಬ್ಬರೂ ಒಬ್ಬರನ್ನೊಬ್ಬರು ನೋಡಿ ಒಪ್ಪಿಕೊಳ್ಳಬೇಕು ! "

ಅನಂತರಾಯರು ಮತ್ತೆ ಕೇಳಿದರು :

" ಅಂದ ಮ್ಯಾಲ, ಇವರು ಕನ್ಯಾನ್ನ ನೋಡ್ಯಾರೆಲ್ಲ ? "

ರತ್ನಾಕರ ಹೇಳಿದ :

" ಕನ್ಯಾ ಇವರನ್ನ ನೋಡಲಿಕ್ಕೆ ಬಂದರ, ಕನ್ಯಾನ್ನ ಇವರು ನೋಡೇ ನೋಡತಾರ ! "

ಅನಂತರಾಯರು ಗಟ್ಟಿಯಾಗಿ ನಕ್ಕರು; ಗೋಪಾಲರಾಯರು ಮೆಲ್ಲಗೆ ನಕ್ಕರು; ರಂಗಣ್ಣ ತುಟಿಯಲ್ಲಿಯೆ ನಗುತ್ತಿದ್ದ. ಆಗ ಅನಂತರಾಯರು ನುಡಿದರು :

" ಕನ್ಯಾ ಇಲ್ಲೇ ಬರಬೇಕಂತೀರೇನು ನೀವು ? ನಿಮ್ಮದೆಲ್ಲಾ ವಿರುದ್ಧನs ಕಾಣಿಸತsದಲ್ಲಾ ! ಕನ್ಯಾ ಇಲ್ಲೇ ಬಂದರ, ನಾವು ಅವರಿಗೆ ಚಹಾ-ಫರಾಳ ಕೊಡಬೇಕಾಗತsದ ! ನಾವೇ ಅಲ್ಲಿಗೆ ಹೋದರ, ಇವರು ನಮಗ ಚಹಾ ಫರಾಳ ಕೊಡಬೇಕಾಗತsದ ! ಅಲ್ಲಾ, ನಾ ಅನ್ನೂದಂದರ, ಇಷ್ಟು ವರಗೋಳು ಬಂದು ಬಂದು ಗೋಪಾಲರಾಯರ ಮುನ್ಯಾಗ ಸುಗ್ರಾಸಾ ಹೊಡದು ಹೊಡದು ಹೋಗ್ಯಾರ ! ಈಗ ನೀವರೇ ಅವರನ್ನ ಯಾಕ ಸಡಿಲು ಬಿಡತೀರಿ ? ಕನ್ಯಾ ನೋಡಲಿಕ್ಕೆ ನಾವೇ ಹೋಗೋಣರೀ ! ವರನ ಕಡಿಯುವರಾಗಿ ಗೋಪಾಲ-ರಾಯರ ಮನೆಯೊಳಗಳಷ್ಟು ಸವಿಸವಿ ತಿನಿಸು ತಿಂದುಬರೋಣ ! "

ಈಗ ಗೋಪಾಲರಾಯರೂ ಗಟ್ಟಿಯಾಗಿ ನಕ್ಕುಬಿಟ್ಟರು. ನಗೆ ನಿಲ್ಲಿಸಿ ಹೇಳಿದರು :

" ರಾಯರs, ಆಯ್ತು, ನಿಮ್ಮ ಮಾತಿನಂತೇ ಆಗಲಿ ! ಈಗ ನೀವು ವರನ ಕಡೆಯುವರಾಗಿ ನಮ್ಮ ಮನಿಗೆ ಬರ್ರಿ.... ಕನ್ಯಾ ನೋಡಲಿಕ್ಕೆ. ಮುಂದೆ ನಾವು ವರನ ಕಡೆಯುವರಾಗಿ ನಿಮ್ಮ ಮನೆಗೆ ಕನ್ಯಾ ನೋಡಲಿಕ್ಕೆ ಬರತೀವಿ. ಯಾಕರೀ ರತ್ನಾಕರರಾಯರ ! "

ಗೋಪಾಲರಾಯರು ಮಾರ್ಮಿಕದೃಷ್ಟಿಗಳಿಂದ ರತ್ನಾಕರನನ್ನು ನೋಡಿದರು. ಆಗ ರತ್ನಾಕರನು ತನ್ನ ಸಹಜವಾದ ಮುಖಭಾವದಲ್ಲಿಯೇ ಇದ್ದನು. ಅನಂತರಾಯರಿಗೆ ಗೋಪಾಲರಾಯರ ಮಾತಿನ ಒಳಗುಟ್ಟು ತಿಳಿಯಿತೇನೋ ! ಅವರೂ ಆಶೆಯ ನೋಟಗಳಿಂದ ರತ್ನಾಕರನನ್ನು ನೋಡಿ-ದರು. ಇಬ್ಬರೂ ಒಂದೊಂದು ಬಗೆಯ ನೋಟಗಳಿಂದ ತನ್ನ ಕಡೆಗೆ ನೋಡಲು ತೊಡಗಿದಾಗ, ರತ್ನಾಕರನ ಹೃದಯವನ್ನು ಯಾವ ಭಾವನೆ ಅಲುಗಾಡಿಸಿ-ತೇನೋ; ಅದರ ಅನುಭಾವ ಎದುರಿಗಿದ್ದವರಿಗೆ ಕಾಣಬಾರದೆಂದು ಮುಖ-ವನ್ನು ಪಕ್ಕಕ್ಕೆ ತಿರುಗಿಸಿದ, ಆಗ ಕೋಣೆಯ ಹೊರಬಾಗಿಲಲ್ಲಿ ಬಂದುನಿಂತಿದ್ದ

ಕುಮುದೆಯ ಮುಖ ಕಣ್ಣಿಗೆ ಬಿದ್ದಿತು. ಗೊಂದಲಗೊಂಡ ಮನದಿಂದ ರಂಗಣ್ಣನ ಕಡೆಗೆ ನೋಡಿದ. ಕುಮುದಾ ಒಳಗೆ ಬಂದು ಹೇಳಿದಳು :

"ಗೋಪಾಲಕಾಕಾ, ಅಬಚಿ ಹೇಳ್ಯಾಳ : ನಾಳೆ ಅಲ್ಲಿಗೇ ಊಟಕ್ಕ ಔತಣಾ ಕೊಡಬೇಕಂತ ! "

ಗೋಪಾಲರಾಯರು ಬೆರಗಿನ ಧ್ವನಿಯಲ್ಲಿ ಕೇಳಿದರು :

" ಆಕಿಯೂ ಬಂದುಬಿಟ್ಟಾಳೇನು ? ಎಲ್ಲಿದ್ದಾಳ ? "

" ಕೆಳಗ ಕೂತಾರ; ಯಾಕ ಅವರು ಬರಬಾರದಾಗಿತ್ತೇನು ? "

" ಛೇ ಛೇ ! ಹಾಂಗಲ್ಲಃ ಕುಮುದಾ ! ನಾ ಹೊರಡುವ ಮುಂದ 'ನೀನೂ ಬಾ' ಅಂತ ಕರೆದೆ; ಆದರ, ಆಕಿ ಈಗೇನೂ ನಾ ಒಲ್ಲೆ— ಅಂದಿದ್ದಳು. ಅದಕ್ಕ ಕೇಳಿದೆ. "

ಕುಮುದಾ ನಗು-ನಗುತ್ತ ಹೇಳಿದಳು :

" ಸರಿ ! ಎಂದೂ ಇಲ್ಲದೆ, ಅಬಚಿ ಇಂದ ನಿಮ್ಮ ಜೊತೆಗೂಡಿ ಹೊರಗ ಹೊರಡತಾರಃ ? ನೀವು ಬಂದು ಅಟ್ಟಾ ಏರಿದಿರಿ; ಅವರೂ ಕೆಳಗ ಬಂದರು. ಅದೇ, ಊಟಕ್ಕೊ ಹೇಳಲಿಕ್ಕೆ ನಿಮಗ ನೆನಪು ಕೊಡಲಿಕ್ಕಂತ ನನಗ ಹೇಳಿದರು; ಅದಕ್ಕಃ ನಾ ಇಲ್ಲಿಗೆ ಬಂದೆ ! "

ದಾಕ್ಷಿಣ್ಯಭಾವದವರಾಗಿ ಗೋಪಾಲರಾಯರು ಮಾತನಾಡಿದರು :

" ಕೇಳಿದಿರೇನು ರತ್ನಾಕರರಾವ್ ? ಹೆಣ್ಣುಮಕ್ಕಳದೊಂದು ಸ್ವಭಾವದ ವಿಚಿತ್ರ! ಇಲ್ಲಿಗೆ ಬಂದ ಮ್ಯಾಲೆ ಮಾತಾಡಿಕೊಂಡು, ಏನೋ ನಿರ್ಣಯಿಸಿಕೊಂಡು ನನಗ ಇಲ್ಲಿ ಹೇಳಿಕಳಿಸ್ಯಾರ ! ಒಮ್ಮೆಲೇ ಊಟಕ್ಕ ಹೇಳಿದರ ಬಂದಾರೋ ಇಲ್ಲೋ—ಅಂತ, ನಾವಿಬ್ಬರೂ ಮನಿಯೊಳಗ ವಿಚಾರ ಮಾಡಿದಿವಿ. ನಮ್ಮ ವಿಚಾರ ಬಗೀಹರೀಲಿಲ್ಲ. ನಾ ಹಾಂಗಃ ಹೊರಟು ಬಂದುಬಿಟ್ಟೆ. ಇಲ್ಲಿಗೆ ಬಂದ ಮ್ಯಾಲೆ, ಈ ನಮ್ಮ ತುಂಟಿ—ಕುಮುದಾನೇ ಏನೋ ವಿಚಾರಾ ಬಗೀ ಹರಿಸಿದ್ಹಾಂಗ ಕಾಣಿಸತದ ! ಹೌದೋ ಅಲ್ಲೋ ಕುಮುದಾ ನನ್ನ ಮಾತು ?"

ಕುಮುದಾ ಕಿಲಕಿಲನೆ ನಕ್ಕು ಹೇಳಿದಳು :

" ಹೌದು, ಯಾಕ ಊಟಕ್ಕ ಹೇಳಬಾರದೂ ಅಂತೀನಿ ! ಇಬ್ಬರ ಸ್ವಭಾವ-ಗುಣ-ರೂಪಗಳ ವಿಚಾರ ಗೊತ್ತಿದ್ದವರೇ ಆದರ್ಶದಾಂಪತ್ಯದ

ಆದರ್ಶದಿಂದ ಸಂಬಂಧ ಕೂಡಿಸಿರುವಾಗ, ಈಗ ಒಬ್ಬರನ್ನೊಬ್ಬರು ನೋಡೂ-ದೇನದ ? ಅವರವರ ಸುದೈವವೇ ಈ ಸಂಬಂಧ ಕೂಡಿಸಿ ತಂದsದ ! ಈಗ ನೋಡಿ ಒಪ್ಪಿಗೀ ಕೊಡುವ ಮಾತೇ ಉಳಿದಿಲ್ಲ. ಮದಿವೀ ಮಾತನ್ನೇ ಆಡೂದು !"

ರತ್ನಾಕರ ಪ್ರಸನ್ನದೃಷ್ಟಿಗಳಿಂದ ಕುಮುದೆಯನ್ನು ನೋಡುತ್ತ, ಆಕೆಯ ಮಾತುಗಳನ್ನು ಕೇಳುತ್ತಲಿದ್ದ. ರಂಗಣ್ಣ ರತ್ನಾಕರನ ಮುಖವನ್ನೊಮ್ಮೆ, ಕುಮುದೆಯ ಮುಖವನ್ನೊಮ್ಮೆ ನೋಡುತ್ತಲಿದ್ದ. ಆಗ ಅನಂತರಾಯರು ವಿನಯಭಾವದಿಂದ ಹೇಳಿದರು :

"ದಯಮಾಡಿ ನಾಳೆಗೆ ನೀವು ನಮ್ಮಲ್ಲಿಗೇ ಊಟಕ್ಕೆ ಬರತೀ-ರಲ್ಲೇನು ?"

ಅನಂತರಾಯರು ಹುಡುಗಾಟದ ಧ್ವನಿಯಲ್ಲಿ ನುಡಿದರು :

"ನಾ ಅವರನ್ನ ಕರಕೊಂಡು ಬರತೀನಿ. ಮೊದಲ ನೀವು ಹೇಳ್ರಿ, ಅಡಿಗೀ ಏನೇನು ಮಾಡಿಸುವವರು ಇದ್ದೀರಿ ?"

ವಿನಯಭಾವದಲ್ಲಿಯೆ ಮೆಲುನಗೆ ನಗುತ್ತ ಗೋಪಾಲರಾಯರು ಹೇಳಿದರು :

"ಹೇಳಿಕೇಳಿ ಸುದಾಮನ ಒಕ್ಕಲು ನಾವು ! ನಿಮ್ಮಹಾಂಗೇನು ಲಕ್ಷ್ಮೀಪತಿಗಳೇ ? ನಮ್ಮ ಮನಿಯೊಳಗಿದ್ದದ್ದು ನೀರು-ನುಚ್ಚು....ಶ್ರೀಹರಿ-ಪ್ರಸಾದ !"

ರತ್ನಾಕರ ನಡುವೇ ಮಾತನಾಡಿದ :

"ರಾಯರs, ನೀವು ನನ್ನೊಬ್ಬನನ್ನ ಮಾತ್ರ ಬಿಟ್ಟುಬಿಡ್ರಿ ! ನಾನು ನಿಮ್ಮ ಮನೆಗೆ ಊಟಕ್ಕ ಬರೂದು, ಈಗಿನ ಪ್ರಸಂಗದೊಳಗ ನಿಮಗೂ ಒಳ್ಳೇಯದಲ್ಲ. ನನಗೂ ಒಳ್ಳೆಯದಲ್ಲ ! ರಾಯರು ರಂಗಣ್ಣ ಬರತಾರ. ಅವಶ್ಯ ಕರೆದುಕೊಂಡು ಹೋಗಬಹುದು !"

ರತ್ನಾಕರನ ಮಾತು ಎಲ್ಲರಿಗೂ ಸರಿಯೆನಿಸಿತು. ಗೋಪಾಲರಾಯರು ಮತ್ತೊಮ್ಮೆ ಔತಣಕೊಟ್ಟು ಬೀಳ್ಕೊಂಡು ಮನೆಗೆ ಹೊರಟರು. ಎಲ್ಲರೂ ಮೆಟ್ಟಲನ್ನಿಳಿದು ತಲೆಬಾಗಿಲವರೆಗೆ ಕಳುಹಲು ಹೋದರು. ವೇಣಕ್ಕ, ಬರುವಾಗ ಜೊತೆಗೆ ಬರದಿದ್ದರೂ, ಹೋಗುವಾಗ ಗೋಪಾಲರಾಯರ ಜೊತೆ-

ಜೊತೆಯಲ್ಲಿಯೆ ಹೊರಟರು. ಕೆಳಗಿಳಿದು ಬಂದ ರಂಗಣ್ಣನನ್ನು ವೇಣಕ್ಕ ಕಣ್ಣರಳಿಸಿ ನೋಡಿಯೆ ನೋಡಿದರು. ಹೋಗುವಾಗ ಅವರ ತುಟಿಗಳ ಮೇಲೆ ತೃಪ್ತಿಯ ಮೆಲುನಗೆ ಆಟವಾಡುತ್ತಲಿದ್ದಿತು.

* * * * *

ರತ್ನಾಕರ ರಂಗಣ್ಣ, ಮಲಗಿಕೊಳ್ಳುವ ಸಿದ್ಧತೆಯಲ್ಲಿದ್ದರು. ಆಗ ರತ್ನಾಕರನ ಎದೆಯಲ್ಲಿ ಮರೆಗೊಂಡ ಕುತೂಹಲ ಮತ್ತೆ ತಲೆಯೆತ್ತಿ ನಿಂತಿತು. ಆಗ ಕೇಳಿದ :

"ಆಗಳೇ ನೀನು ಅಂದೆಯಲ್ಲ ರಂಗಣ್ಣಾ! 'ನಿನ್ನ ಈ ಹಂಬಲಕ್ಕೊ ಏನೇನೋ ದುರರ್ಥ ಹಚ್ಚುವ ಜನರೂ ನಮ್ಮ ಸಮಾಜದೊಳಗ ಇದ್ದಾರ....' ಅಂತ! ಆ ವಿಷಯ ಏನದು ? "

"ಇನ್ನೇನೂ ಇಲ್ಲ! ನೀನು ಮುದ್ದಾಪುರದಿಂದ ಹೊರಟು ಬಂದ ದಿನ, ಸಂಜೆಯ ಟಪಾಲಿಗೇ ನನಗೊಂದು ಪತ್ರ ಬಂದಿತ್ತು. ಹೆಸರಿಲ್ಲದ ಪತ್ರ!.... ದುಷ್ಟಜನರು !"

ಕೆಣಕಿದ ಮನದವನಾಗಿ ರತ್ನಾಕರ ಕೇಳಿದ :

"ಹೆಸರಿಲ್ಲದ ಪತ್ರವೆ ? ಏನು ಬರೆದಿತ್ತದ ಆದರೊಳಗ ?"

"ಏನೇನೋ ಬರೆದಿತ್ತದ ಬಿಡು, ಅದನ್ನ ತಗೊಂಡು ಏನು ಮಾಡೂದು? ಆದರ, ಆ ಕಾಗದ ನನ್ನ ಮನಸಿನ ಮ್ಯಾಲ ಕೆಟ್ಟ ಪರಿಣಾಮ ಮಾಡದೇ ಏನೂ ಬಿಡಲಿಲ್ಲ. ಇಲ್ಲಿಗೆ ಬರೂದನ್ನ ನಿಲ್ಲಿಸಿಯೇ ಬಿಡಬೇಕಂತಲೂ ನಿಶ್ಚಯ ಮಾಡಿದ್ದೆ. ಆದರೆ, ಸತ್ಯ ಏನದ ಅಂಬೂದನ್ನ ತಿಳಿದುಕೊಂಡಾದರೂ ಬಿಡೂಣಾಂತ, ಹೊರಟುಬಂದೆ. ನಾ ಬಂದದ್ದು ಒಳ್ಳೆಯದಾಯ್ತು; ಇಲ್ಲ-ದಿದ್ದರ, ಆ ಪತ್ರ ನನ್ನ ನಿನ್ನ ಹತ್ತಿರದ ಸಂಬಂಧಾ ಎಲ್ಲಾ ದೂರಮಾಡಿ-ಬಿಡತಿತ್ತೋ ಏನೋ! ಅದನ್ನೆಲ್ಲಾ ನೆನಪು ಮಾಡಿಕೊಂಡರ, ಈಗ ಸಹಿತ ನನ್ನ ಮೈ-ಮನಸು ಜುಂ ಅಂತಿತ್ತದ ನೋಡು !"

"ಅಂಥಾದು ಏನು ಬರದಿತ್ತದಪಾ ಆ ಪತ್ರದೊಳಗ ? ಎಲ್ಲಿ ಅದ ಅದು?"

"ಈಗ ಅದನ್ನ ತಗೊಂಡು ಏನು ಮಾಡತೀ ಬಿಡು! ಸುಮ್ಮನಿತ ಮನಸಿಗೆ ಸಂತಾಪ ಮಾತ್ರ ಆದೀತು! ಅನಂತರಾಯರು ನನ್ನ ಮನಸಿನ ಕೊಳೆ ಎಲ್ಲಾ ತೊಳೆದುಬಿಟ್ಟರು !"

"ಆ ಪತ್ರಾ ನಾನು ನೋಡಲೇ ಬೇಕು ! ವ್ಯಕ್ತಿಗಳ ಸ್ವಭಾವದ ಅಭ್ಯಾಸ ಮಾಡೂದೊಂದು ನನಗ ಚಟ-ಅಂಬೂದು ನಿನಗ ಗೊತ್ತs ಅದ. ಆ ಪತ್ರ ಎಲ್ಲಿ ಅದ ? ತಾ ಇಲ್ಲಿ, ನೋಡತೀನಿ ಒಮ್ಮೆ !"

"ಅದನ್ನೇನು ಮಾಡತೀ ಬಿಡೋ, ಕೆಲಸ ಮುಗಿದುಹೋಗೇದ ಅದರದು !"

"ಆಹುದಲ್ಲೊ ? ಅದರ ಕೆಲಸ ಮುಗಿದಿದ್ದರ ತೀರಿ ಹೋಯ್ತು; ನನಗ ಅದರಿಂದ ಸಂತಾಪ ಆಗುವ ಕಾರಣವೇ ಇಲ್ಲ ! ಆದರ, ಆ ಪತ್ರಾ ನೋಡುವುದರಿಂದ, ನನ್ನ ಜೀವನಕ್ಕೊಂದು ಹೊಸಾ ಪಾಠ ಏನಾದರೂ ಸಿಗತಿದ್ದರ ನೋಡೋಣ !"

ರಂಗಣ್ಣ ಮೇಲಕ್ಕೆದ್ದ. ಕೈಚೀಲದೊಳಗಿಂದ ಪತ್ರವೊಂದನ್ನು ತೆಗೆದು ರತ್ನಾಕರನ ಕೈಯಲ್ಲಿ ಕೊಟ್ಟ. ರತ್ನಾಕರ ಕುತೂಹಲದಿಂದ ಆದನ್ನು ಬಿಚ್ಚಿ ಬೆಳಕಿಗೆ ಹಿಡಿದು ಓದಲುತೊಡಗಿದ :

"ಶ್ರೀ ಮುದ್ದಾಪುರದ ರಂಗರಾಯರಿಗೆ ನಮಸ್ಕಾರ.

ರಾಯರೇ !

ಎಚ್ಚರ ! ರತ್ನಾಕರ ನಿಮ್ಮನ್ನ ತನ್ನ ಮೋಸದ ಬಲಿಯೊಳಗ ಕೆಡವಲಿಕ್ಕೆ ನಿಮ್ಮ ಕಡಿಗೆ ಬಂದಾನ. ಆದರ, ಸಾತ್ವಿಕ ಸ್ವಭಾವದ ಹಳ್ಳಿಗರಾದ ನಿಮಗ, ಮೊದಲs ಎಚ್ಚರಿಕೀ ಕೊಡಬೇಕಂತ, ಈ ಪತ್ರ ಬರೆದು ಕಳಿಸೀನಿ.

ರತ್ನಾಕರ ನಿಮಗೊಂದು ಹುಡಿಗಿನ್ನ ಗಂಟುಹಾಕಿ, ನಿಮಗ ಮದಿವೀ ಮಾಡಬೇಕಂತ ಬಂದಾನ ! ಆದರ, ಆ ಹುಡುಗಿಯ ಚರಿತ್ರ, ನಮ್ಮ ಪಟ್ಟಣ ದೊಳಗೆಲ್ಲಾ ಜಾಹೀರಾಗಿ ಬಿಟ್ಟsದ. ಮಹಾ ಬದ್‌ಚಾಲೀ ಹೆಣ್ಣದು ! ಅನೇಕ ಗಂಡಸರ ಸಂಬಂಧ ಬಂದು, ಹಡೆದಿದ್ದರೆ ಈಗ ಮೂರು ಮಕ್ಕಳ ತಾಯಿಯೂ ಆಗಬಹುದಾಗಿತ್ತು. ಅದರ ಬಸರು ಭ್ರೂಣಹತ್ಯಾದೊಳಗ ಕೊನಿಗಂಡುವು. ಆ ಹೆಣ್ಣಿನ ಇಂಥಾ ಖ್ಯಾತಿಯ ಮೂಲಕವೇ, ಯಾರೂ ಅದನ್ನ ಮದಿವೀ ಮಾಡಿಕೊಳ್ಳಲಿಕ್ಕೆ ಸಿದ್ಧರಿಲ್ಲ. ನಿಮ್ಮ ಗೆಳೆಯ ರತ್ನಾಕರನಿಗೂ ಆ ಹುಡುಗಿಗೂ ಮೊದಲಿಂದನೂ ಸಂಬಂಧ. ಈಗ ಆ ಹುಡುಗಿನ್ನ ಬಿಟ್ಟು, ಬ್ಯಾರೇ ಶ್ರೀಮಂತರದೊಂದು ಹುಡುಗಿಯ ಬೆನ್ನು ಹತ್ತಿದ್ದರಿಂದ, ಈ ಹುಡುಗಿ ಆತನ ದುಶ್ಚರಿತ್ರ ಎಲ್ಲಾ ಹೇಳಿ, ಜನರೊಳಗ ಅಪಹಾಸ್ಯಕ್ಕ ಗುರೀ

ಮಾಡ್ತ್ಯಾಳಂತ ಹೆದರಿ, ಒಳ್ಳೇ ಮನಿತನಾ ನೋಡಿ ನಿನ್ನ ಮದಿವೀ ಮಾಡಿ-ಕೊಡತೀನಂತ ಆಕಿಗೆ ಆಶ್ವಾಸನಾ ಕೊಟ್ಟ್ಯಾನ. ಅದಕ್ಕಾಗಿಯೇ ನಿಮ್ಮ ಹತ್ತರ ಓಡಿಬಂದಾನ. ರತ್ನಾಕರ ನಿಮ್ಮ ಗೆಳೆಯ–ದೊಡ್ಡ ದೇಶಸೇವಕ–ಅಂಬುವ ಹುಚ್ಚಿನಿಂದ, ನೀವು ಆತನ ಸವಿಮಾತಿನ ಬಲೆಯೊಳಗೆ ಬಿದ್ದ-ಗಿದ್ದೀರಿ ! ಜೋಕೆ ! ಎಚ್ಚರ !!

ನಿಮ್ಮ
ನಿಜವಾದ ಹಿತಚಿಂತಕ”

ರತ್ನಾಕರ ಪತ್ರವನ್ನೋದಿ ಮುಗಿಸಿದ. ಕರುಳಿಗೆ ಸಾವಿರಾರು ಚೇಳು-ಗಳು ಕಡಿದಂತಹ ಸಂಕಟವನ್ನು ಅನುಭವಿಸಲು ತೊಡಗಿದ. ಬಾಯಿಂದ ಮಾತುಗಳನ್ನೇನೂ ಆಡದೆ, ಮಂಕುಪಡೆದವರಂತೆ ಸುಮ್ಮಗೆ ಕುಳಿತುಕೊಂಡ. ಮುಖವು ಕಂದಿ-ಕುಂದಿ ಹೋಗಿದ್ದಿತು. ಕಣ್ಣುಗಳಿಂದ ಕಂಬನಿ ಹೊರಬೀಳ-ಬೇಕೆನ್ನುತ್ತಿದ್ದುವು. ರಂಗಣ್ಣ ತನ್ನ ಸಹಜಸ್ವರದಲ್ಲಿಯೇ ಕೇಳಿದ :

“ ಓದಿದೆಯಾ ರತ್ನಾಕರ ಪತ್ರವನ್ನ ? ದುಷ್ಟ ಜನರು ! ಎಂತೆಂತಹ ರಾಕ್ಷಸರು ಇರುತ್ತಾರೆ ನೋಡು !”

ರತ್ನಾಕರ ಮಾತನೇನೂ ಆಡಲಿಲ್ಲ ದಿಗ್ಗನೆ ಎದ್ದು ಬಂದು, ರಂಗಣ್ಣನ ತೊಡೆಯಮೇಲೆ ತನ್ನ ತಲೆಯನ್ನು-ಮುಖ ಕೆಳಗೆ ಮಾಡಿ-ಚೆಲ್ಲಿ ಬಿದ್ದುಕೊಂಡ; ಬಿಕ್ಕಿ-ಬಿಕ್ಕಿ ಅಳಲು ತೊಡಗಿದ. ರಂಗಣ್ಣ ಆತನ ಮೈಮೇಲೆ ಕೈಯಾಡಿಸುತ್ತ ನುಡಿದ :

“ ಇದೇನು ರತ್ನಾಕರ ? ಇದೇನು ನಿನ್ನ ರೀತಿ ? ಅದಕ್ಕೇ ನಾನು ಆ ಪತ್ರವನ್ನ ನಿನಗೆ ಕೊಡಲಿಕ್ಕೆ ಹಿಂದೆ ಮುಂದೆ ನೋಡಿದೆ. ಈ ವಿಷಯವನ್ನ ನಿನ್ನ ಮುಂದೆ ತೆಗೆಯಲೇ ಬಾರದಂತ ಮಾಡಿದ್ದೆ. ಆದರೂ ಮನಸ್ಸು ನಿಲ್ಲದೆ ತಪ್ಪನ್ನು ಮಾಡಿದೆ !”

ರತ್ನಾಕರ ಅಳುತ್ತಳುತ್ತಲೇ ಹೇಳಲು ತೊಡಗಿದ :

“ ನಾನು ಸಂತಾಪದಿಂದ ಅಳುತ್ತಿಲ್ಲ ರಂಗಣ್ಣಾ !....ಸಂತೋಷದಿಂದ ಅಳುತ್ತಿದ್ದೇನೆ....ಈ ಪತ್ರದ ವಿಷಯವನ್ನ ನೀನು ನಂಬಿ ಬಿಟ್ಟಿದ್ದರೆ ಏನಾಗು-ತ್ತಿತ್ತು ?....ರತ್ನಾಕರ ರಂಗಣ್ಣನನ್ನು ಕಳೆದುಕೊಳ್ಳುತ್ತಿದ್ದ....ಇಷ್ಟೇ ಅಲ್ಲ; ರತ್ನಾಕರ....ಅವನೂ ರಂಗಣ್ಣನಿಗೆ ದುಷ್ಟಪಶುವಾಗಿ ತೋರಿ, ರಂಗಣ್ಣನ

ಸಹೃದಯದಿಂದ ದೂರ ಸಿಡಿದು ಬೀಳುತ್ತಿದ್ದ........ಆದರೆ........ಆದರೆ, ಪರಿಣಾಮ ಹಾಗಾಗಲಿಲ್ಲ !....ರಂಗಣ್ಣನ ಮಾನವತೆ ಹಾಗಾಗಗೊಡಲಿಲ್ಲ!.... ರತ್ನಾಕರ ರಂಗಣ್ಣನವನಾಗಿಯೇ ಉಳಿದ....ಇದು ನನಗೆ ಸಂತೋಷದ ವಿಷಯ....ಸಮಾಧಾನದ ಸಂಗತಿ !"

ರತ್ನಾಕರನು ಅಳುವಿನೊಂದಿಗೇ ಮಾತನಾಡುತ್ತಲಿದ್ದ. ಆಗ ರಂಗಣ್ಣನ ಹೃದಯವೂ ತುಂಬಿಬಂದಿತು. ಕಂಪಿಸುವ ಕಂಠದಿಂದ ಹೇಳಿದ :

"ರಂಗಣ್ಣನೂ ಇನ್ನೂ ಸಾಮಾನ್ಯ ಮನುಷ್ಯ ರತ್ನಾಕರ !....ನೀನು ನನ್ನನ್ನು ಕ್ಷಮಿಸಬೇಕು !....ನಿನ್ನನ್ನು ತಪ್ಪಾಗಿ ಭಾವಿಸದೆ ಇರುವಷ್ಟು ಇನ್ನೂ ನನ್ನ ಹೃದಯ ವಿಶಾಲವಾಗಿಲ್ಲ !....ತಪ್ಪು ಭಾವಿಸಿದೆ....ದೇವರು ದೊಡ್ಡವ.... ಸಕಾಲದಲ್ಲಿ ನನ್ನ ತಪ್ಪನ್ನು ತಿದ್ದಿ ನನ್ನನ್ನು ಕಾಪಾಡಿದ....ಇಲ್ಲದೆ ಇದ್ದರೆ ಖಂಡಿತವಾಗಿಯೂ ನನ್ನ ರತ್ನಾಕರ ನನ್ನಿಂದ ದೂರ....ದೂರವಾಗುತ್ತಿದ್ದ.... ಅನಂತರಾಯರು ದೇವದೂತರಾಗಿ ದೊರೆತು, ಅನಾಹುತವನ್ನು ತಪ್ಪಿಸಿದರು.... ನಾನಿನ್ನೂ ಮನುಷ್ಯ ರತ್ನಾಕರ !....ನನ್ನ ತಪ್ಪನ್ನು ಕ್ಷಮಿಸು !"

ಈ ಭಾವನೆಯ ಹಿಡಿತದಿಂದ ಹೊರಗೆ ಹೊರಡಬೇಕಾದರೆ, ಇಬ್ಬರಿಗೂ ತುಂಬ ಸಮಯಬೇಕಾಯಿತು. ಹೇಗೋ ಏನೋ ಸಮಾಧಾನ ತಂದುಕೊಂಡು, ಇಬ್ಬರೂ ತಂತಮ್ಮ ಹಾಸಿಗೆಯ ಮೇಲೆ ಮಲಗಿಕೊಂಡರು. ರಾತ್ರಿಯ ಎರಡು ಗಂಟೆ ಕಳೆದರೂ, ಇಬ್ಬರೂ ಒಬ್ಬರೊಬ್ಬರ ಬಿಸಿಯುಸಿರು, ನಿಟ್ಟುಸಿರು ಗಳನ್ನು ಆಗಾಗ ಕೇಳುತ್ತಲೆ ಇದ್ದರು. ಯಾರಿಗೆ ಮೊದಲು ನಿದ್ದೆ ಹತ್ತಿ-ತೆಂಬುದು ಇಬ್ಬರಿಗೂ ಗೊತ್ತಾಗಲಿಲ್ಲ.

## ೩೧ನೆಯ ಪರಿಚ್ಛೇದ

ಮರುದಿನ ಬೆಳಗಿನಲ್ಲಿ ಗೋಪಾಲರಾಯರು ಮತ್ತೆ ಬಂದು, ಎಲ್ಲರಿಗೂ ತಮ್ಮಲ್ಲಿ ಊಟಕ್ಕೆ ಬರಲು ಔತಣಕೊಟ್ಟರು. ರತ್ನಾಕರನು ಬರಲು ಶಕ್ಯವಾಗದುದರ ಸಮಂಜಸತೆಯು ತಿಳಿದರೂ, ಆತ ಬಾರದಿರುವುದಕ್ಕಾಗಿ ವಿಷಾದಪಟ್ಟುಕೊಂಡರು. ವೇಣಕ್ಕ ಬಂದು ತುಂಗಮ್ಮನಿಗೂ ಕುಮುದೆಗೂ ಕುಂಕುಮಹಚ್ಚಿ ಊಟಕ್ಕೆ ಬರುವಂತೆ ಪ್ರೀತಿಯಿಂದ ಆಮಂತ್ರಣಕೊಟ್ಟರು. ಅಂದಿನ ಅವರ ಉಲ್ಲಾಸದ ಓಡಾಟ, ನಗೆ ತುಂಬಿದ ಮುಖ ಇವುಗಳನ್ನು

ನೋಡಿದವರಿಗೆ 'ಇವರು ವೇಣಕ್ಕ ಅಹುದೆ?' ಎನ್ನುವಷ್ಟು ಬದಲಾವಣೆ ಕಾಣುತ್ತಿದ್ದಿತು. ತುಂಗಮ್ಮನೊಂದಿಗೆ ಮಾತನಾಡುವಾಗ ಅವರು ಹೇಳಿದರು :

"ರತ್ನಾಕರರಾಯರಿಗೆ ಬರಲಿಕ್ಕೆ ಶಕ್ಯ ಆಗೂದಿಲ್ಲಂತ. ಇನ್ನೇನು ಮಾಡೂದು? ಇಲ್ಲಿಗೇ ಸತ್ಯನಾರಾಯಣನ ಪ್ರಸಾದ ಬಡಿಸಿ ಕಳಿಸಿದರ ಆಯ್ತು!"

ಕುಮುದಾ ನಗುತ್ತ ಕೇಳಿದಳು :

"ಇಂದ ಸತ್ಯನಾರಾಯಣನ ಪೂಜೆಯೂ ಅದs ಏನು ಅಬಚೀ ಹಾಂಗಾದರ? ಚೆಲೋ ಅದ! ಒಂದೇ ಕಲ್ಲಿಗೆ ಎರಡು ಹಣ್ಣು ಕೆಡವಿಕೊಳ್ಳುವ ಹಂಚಿಕೀ. ತಗದೀರಿ ಕಾಣಿಸತsದ. ಅತ್ತ ದೇವರೂ ಪ್ರೀತನಾಗಬೇಕು; ಇತ್ತ ಅಳಿಯದೇವರೂ ಪ್ರೀತರಾಗಬೇಕು!"

ವೇಣಕ್ಕ ಅರಳಿದ ಹೃದಯದಿಂದ ನುಡಿದರು :

"ಏನು ನಗಿಚಾಟಿಕೀ ಮಾಡತೀ ಮಾಡಿ ತೀರಿಸಿಕೊಳ್ಳವ್ವಾ ನೀನು! ಪ್ರೀತಿಯ ಜನರ ನಗಿಚಾಟಿಕಿ ಇಲ್ಲದಿದ್ದರ, ಇಂಥಾ ಮಂಗಲದ ಸಂದರ್ಭ ಭಣಭಣ ಅನಿಸತಾವ! ಈಗ ಹೆಚ್ಚು ಮಾತಾಡಿಕೋತs ನಿಲ್ಲಲಿಕ್ಕೆ ನನಗ ಪುರಸೊತ್ತಿಗೆರೇ ಎಲ್ಲಿ ಅದ? ಮಿಕ್ಕವರು ಹತ್ತುಗಂಟೆಗೆ ಬರವೊಲ್ಲರ್ಯಾಕ; ನೀನು ಮಾತ್ರ ಕುಮುದಾ, ಬ್ಯಾಗನs ನಿನ್ನ ಶೃಂಗಾರಾ ತೀರಿಸಿಕೊಂಡು ಬಂದುಬಿಡು!"

ಎಂದು ಹೇಳಿ ವೇಣಕ್ಕ ಹೊರಟುಬಿಟ್ಟರು, ಅವರು ಹೋಗುವ ವರೆಗೂ ತುಂಗಮ್ಮ ಅವರನ್ನೇ ನೋಡುತ್ತ ನಿಂತಿದ್ದು, ಹೊರಟುಹೋದಮೇಲೆ ನುಡಿದರು :

"ಅಂತೂ ವೇಣಕ್ಕನ ದೈವಕ್ಕ ಕರುಣಾ ಬಂದ್ಹಾಂಗ ಆಯ್ತು. ಪಾಪ, ಕಾವೇರಿಗೆ ಎಂಥಾ ವರಾ ಗಂಟುಬೀಳತsದೊ–ಅಂತ ಅನಿಸಿ ಹೋಗಿತ್ತು. ಹುಡುಗೀ ನಸಿಬ ಒಳ್ಳೇದು. ಇಷ್ಟು ದಿನಾ ಕಷ್ಟಪಟ್ಟರೂ ಚಿಂತಿಯಿಲ್ಲ. ಬಂಗಾರದಂಥಾ ಗಂಡನ ಕೈ ಹಿಡೀತಾಳ!"

"ಇಂಥಾ ಮನಿತನ ಹುಡುಕಬೇಕಾದರ, ಗೋಪಾಲರಾಯರಿಗೆ ಎಲ್ಲಿ ಸಾಧ್ಯ ಆಗತಿತ್ತು ಹೇಳು ಅವ್ವಾ! ಮತ್ತೆ ಅವರು ಕಚೇರಿಯೊಳಗಿನ ಕಾರಕೂನರನ್ನs ಹುಡುಕತs ಕೂಡತಿದ್ದರು. ನಾ ನಿಜಾ ಹೇಳತೀನಿ ನೋಡು

ಆವ್ವಾ, ಮದಿವೀ ಮಾಡಿಕೊಳ್ಳುವ ಹೆಣ್ಣು ಎಂಥಾ ಗಂಡಿನ್ನ ಒಯಸತಿ-ದಂಬೂದು, ಹೆಣ್ಣಿನ ತಾಯಿ-ತಂದಿಗಳಿಗೆ ತಿಳಿಯೂದಿಲ್ಲ. ಬರೇ ಅವರು ಹೊಟ್ಟೀ ಬಟ್ಟೀ ವಿಚಾರ ಒಂದsa ನೋಡತಾರ. ಹೊಟ್ಟಿಗೆ ಬಟ್ಟಿಗೆ ಸಾಕಷ್ಟು ಇದ್ದರ ಆಯ್ತು; ಎಂಥಾ ಕೋತಿಯಂಥಾ ಗಂಡಿಗೂ ಕನ್ಯಾ ಕೊಡಲಿಕ್ಕೆ ಸಿದ್ಧರಾಗತಾರ !"

ತುಂಗಮ್ಮ ಬೆರಗಿನ ಧ್ವನಿಯಲ್ಲಿ ಕೇಳಿದರು :

"ಹೊಟ್ಟಿಗೆ ಬಟ್ಟಿಗೆ ಅಲ್ಲದೆ ಇನ್ನೇನು ನೋಡಬೇಕಂತೀ ಕುಮುದಾ ನೀನು ? ಪ್ರತಿಯೊಬ್ಬ ತಂದೆ-ತಾಯಿಗೂ ತಮ್ಮ ಹೆಣ್ಣುಮಕ್ಕಳು ಉಟ್ಟು ತೊಟ್ಟು ಉಂಡು ಕೊನೆಯ ವರೆಗೂ ಸುಖದಿಂದ ಬದುಕಬೇಕಂತ ಅಪೇಕ್ಷಾ ಇರತೈದ !"

"ಬರೇ ಉಟ್ಟು ತೊಟ್ಟು ಉಂಡು ಬದುಕಿದರ, ಹೆಣ್ಣಿನ ಮನೋರಥ ಎಲ್ಲಾ ಪೂರ್ತಿ ಆದ್ಹಾಂಗೆ ಅಂತೀ ಏನು ಅವ್ವಾ ನೀನು ? ವನವಾಸದೊಳಗಿ-ದ್ದಾಗ ಸೀತಾ, ದ್ರೌಪದಿ, ದಮಯಂತಿ—ಇವರೆಲ್ಲಾ ಏನು ಉಟ್ಟಿರಬಹುದು, ಏನು ತೊಟ್ಟಿರಬಹುದು, ಏನು ಉಂಡಿರಬಹುದು ? ನೀ ದಿನಾ ಪುರಾಣಕ್ಕ ಹೋಗಿ ಕೇಳಿ ಬರತಿರತಿಯಲಾ,ಆ ಋಷಿಪತ್ನಿಯರು—ಅರುಂಧತಿ, ಅನಸೂಯಾ ಲೋಪಾಮುದ್ರಾ ಇವರಿಗೆಲ್ಲಾ, ಅವರ ಗಂಡಂದಿರು ಮುತ್ತು-ರತ್ನದ ಒಡವಿ, ಜರದ ಪೀತಾಂಬರ, ಸವಿಸವಿ ಪಕ್ವಾನ್ನ ಒದಗಿಸತಿದ್ದರಂತೀ ಏನು ? ಉಡಲಿಕ್ಕೆ ನಾರಿನ ಬಟ್ಟಿ; ಸಿಕ್ಕದಿನ ಸಿಕ್ಕಂಥಾ ಊಟ; ಹೀಂಗ ಬದುಕಿಕೊಂಡೇ ಅವರೂ ದೊಡ್ಡವರನಿಸಿಕೊಂಡರು; ಅವರ ಗಂಡಂದಿರೂ ದೊಡ್ಡವರಾಗಲಿಕ್ಕೆ ಅನುಕೂಲ ಮಾಡಿಕೊಟ್ಟರು !"

"ನಿನ್ನ ಮಾತಂದರ ಲೋಕಕ್ಕ ಹೊರತೈ ನೋಡು ಕುಮುದಾ ! ಈಗ ಕಲಿತು ಬಿ. ಎ., ಎಂ. ಎ. ಪಾಸಾದ ಹೆಣ್ಣುಗಳು ಸಹಿತ, ಕಲೆಕ್ಟರನ್ನೆ ಮದಿವೀ ಮಾಡಿಕೊಳ್ಳಬೇಕು—ಮಾಮಲೇದಾರನ್ನ ಮದಿವೀ ಮಾಡಿಕೊಳ್ಳ ಬೇಕು—ಪ್ರೊಫೇಸರನ್ನ ಮದಿವೀ ಮಾಡಿಕೊಳ್ಳಬೇಕು—ಮುನಸೂಫನ್ನ ಮದಿವೀ ಮಾಡಿಕೋಬೇಕು—ಅಂತ ಅಪೇಕ್ಷಾ ಮಾಡತಿರತಾರ ಗೊತ್ತದ ಇಲ್ಲೋ ? ಅವರೆಲ್ಲಾರೂ ಹುಚ್ಚರೇನು ಹಾಂಗಾದರ ? ಜಗತ್ತಿನೊಳಗ ಬದುಕೂದು ಯಾತಕ್ಕವ್ವಾ, ಸುಖ-ಸಮಾಧಾನ ಅನುಭವಿಸಲಿಕ್ಕೆ !"

" ಹೌದು, ಸುಖ-ಸಮಾಧಾನ ಅನುಭವಿಸಲಿಕ್ಕೆ ನಿಜ ! ಆದರ ಅದು ಯಾರಿಗೂ ಸುಲಭರೀತಿಯಿಂದ ಸಿಗೂದಿಲ್ಲಂಬೂದೂ ಅಷ್ಟೇ ನಿಜ ! ಕಲೆಕ್ಟರನ ಹೆಂಡತಿ, ಜಜ್ಜನ ಹೆಂಡತಿ, ಪ್ರೊಫೇಸರನ ಹೆಂಡತಿ—ಇವರೆಲ್ಲಾ ರೂ ವೈಭವದ ಉಡಿಗಿ-ತೊಡಿಗಿಗಳಿಂದ, ತಮ್ಮ ಅಸುಖ-ಅಸಮಾಧಾನಗಳನ್ನ ಮರೆಮಾಡಿ-ಕೊಳ್ಳತಾರ ಮಾತ್ರ ಖರೆ! ಕಾವೇರಿಯನ್ನ ಮದಿವೀ ಮಾಡಿಕೊಳ್ಳಲಿಕ್ಕೆ ಸಿದ್ಧ-ರಾಗಿರುವ ಈ ರಂಗಣ್ಣವರಿಗೆ ಅನ್ನ-ವಸ್ತ್ರದ ಅನುಕೂಲತಾ ಅದ—ಇದೇನೋ ಒಳ್ಳೇ ಸಂಗತೀನಽ ! ಆದರ ಅದನ್ನೆಲ್ಲಾ ಮೀರಿಸುವಂಥಾ ಹೃದಯ ಸಂಸ್ಕಾ-ರದ ದೊಡ್ಡ ಸಂಪತ್ತು ರಂಗಣ್ಣವರಿಗದ. ಇದೊಂದು ಕಾವೇರಿಯ ಭಾಗ್ಯವೇ ಸರಿ! ನಮ್ಮ ಸಮಾಜದೊಳಗ, ಮದುವಿಯಾಗುವ ಹೆಣ್ಣು-ಗಂಡುಗಳಿಗೆ ಈ ಸಂಪತ್ತೊಂದು ಇದ್ದುಬಿಟ್ಟರ, ಇನ್ನುಳಿದ ಯಾವ ಬಡತನ ಅವರನ್ನ ಏನು ಮಾಡತಾವ ? "

ತುಂಗಮ್ಮನಿಗೆ ಕುಮುದೆಯ ಮಾತಿನ ಅರ್ಥ ಪೂರ್ಣವಾಯಿತೋ ಇಲ್ಲವೊ ? ಅತೃಪ್ತಭಾವದವರಾಗಿಯೇ ಕುಮುದೆಯನ್ನು ನೋಡುತ್ತ ಹೇಳಿದರು :

" ಆಯ್ತು, ಕಾವೇರಿ ಒಂದು ದಾರಿಗೆ ಹತ್ತಿದ್ಹಾಂಗ ಆಯ್ತು. ಆಕೀ ಗೆಳತಿ ನೀನು ! ನಿನ್ನ ದೈವಕ್ಕ ಎಂತೆಂಥಾ ಗಂಡ ಸಿಗತಾನೋ ಏನೋ ! "

ಕುಮುದೆಯ ಮುಖ ನಾಚಿಕೆಯಿಂದ ಕೆಂಪೇರಿತು; ಒಂದೆರಡು ನಿಮಿಷ ಆಕೆ ಮಾತನಾಡದೆ ನಿಂತಳು. ಆ ಮೇಲೆ ಹೇಳಿದಳು :

" ಅಲ್ಲಽ ಅವ್ವಾ, ರತ್ನಾಕರರಾಯರು ಊಟಕ್ಕ ಬರೂದಿಲ್ಲ. ಅವರಿಗೆ ಮನೆಯಲ್ಲಿಯೆ ಮಾಡಿ ಹಾಕಬೇಕಾಗತಽದಲ್ಲ ? "

ಅಣಕದ ಧ್ವನಿಯಲ್ಲಿ ತುಂಗಮ್ಮ ಹೇಳಿದರು :

" ಹುಂ, ನೀ ಒಬ್ಬಾಕೇ ನೋಡು ಅವರ ಕಾಳಜೀ ಮಾಡುವಾಕಿ ! ನಮಗೇನು ಅದರ ಚಿಂತಿ ಇಲ್ಲಂತ ತಿಳಿದೀದಿ ಏನು ? ವೇಣಕ್ಕ ಹೇಳ್ಯಾಳ, ಬಡಿಸಿ ಕಳಸೂಣಂತ; ಆದರ ಅದರ ಹಾದೀ ಯಾಕ ನೋಡಿಕೋತಽ ಕೂಡ ಬೇಕವರು ? ನಾ ಮೈತೊಳಕೊಂಡು, ಅಡಿಗೀ ಮಾಡಿ ಅವರಿಗೆ ಊಟಕ್ಕ ಹಾಕೇ ಆ ಕಡೆ ಬರತೀನಿ. ನೀನು ಬ್ಯಾಗನೇಮೈತೊಳಕೊಂಡು ಹೋಗಿಬಿಡು!"

ಕುಮುದಾ ತನ್ನ ಮುಂದಿನ ಕಾರ್ಯಕಲಾಪಗಳಿಗಾಗಿ ತನ್ನ ಕಿರುಮನೆಯೊಳಗೆ ಹೋದಳು. ತುಂಗಮ್ಮ ಅಡಿಗೆಯ ಮನೆಯ ಕಡೆಗೆ ಹೋದರು. ಅಗ್ಗ ತುಂಗಮ್ಮನ ಅಂತರಂಗದಲ್ಲಿದ್ದ ವಿಚಾರ ಇದು :

" ನಮ್ಮ ಕುಮುದಾ ಇನ್ನೂ ಹುಚ್ಚುಹುಡುಗಿ! ಲೋಕದ ಅನುಭವ ಇಲ್ಲದೆ ಏನೇನೋ ಮಾತಾಡತಾಳ! ದೇವರು ಈಕಿಗೆ ಒಳ್ಳೆಯ ಮನಿತನ ಕೂಡಿಸಿಕೊಡಬೇಕು. ನಮ್ಮಪ್ಪಾ, ಸತ್ಯನಾರಾಯಣಾ! ವೇಣಕ್ಕ ಒಂದೇ ಒಂದು ಪೂಜೆ ಮಾಡಿಸಿದರ, ನಾನು ಐದು ಸಾರೆ ಪೂಜೆ ಮಾಡಿಸತೀನಿ ! "

ಈ ವಿಚಾರದಲ್ಲಿರುವಾಗಲೇ ದೇವರ ಕೋಣೆಯ ಹತ್ತಿರದ ಗೋಡೆಯೊಂದರ ಮೇಲೆ ಕುಳಿತ ಹಲ್ಲಿಯೊಂದು 'ಲೊಟ್ ಲೊಟ್ ಲೋಟ್' ಎಂದು ಗಟ್ಟಿಯಾಗಿಯೆ ಲೊಟಲೊಟಿಸಿತು. ತುಂಗಮ್ಮ 'ಕೃಷ್ಣ ಕೃಷ್ಣ ಕೃಷ್ಣ' ಎಂದು ನುಡಿದು, ಹಲ್ಲಿಯ ಧ್ವನಿ ಬರುವತ್ತಕಡೆಗೆ ನೋಡಿದರು. ಒಳ್ಳೆಯ ದಿಕ್ಕಿನ ಹಲ್ಲಿ. ಮನಸ್ಸಿಗೆ ತುಂಬ ಉತ್ಸಾಹವೆನಿಸಿತು. ದೇವರ ಮನೆಯೊಳಗೆ ಹೋಗಿ, ನಂದಾದೀಪಕ್ಕೆ ಎಣ್ಣೆಯನ್ನು ಹಾಕಿ, ಮಕ್ಕನ್ನು ಕಳೆದು, ಬತ್ತಿಯನ್ನು ಮುಂದಕ್ಕೆ ಸರಿಸಿ ಬೆಳಗಿಸಿದರು. ದೇವರಿಗೆ ನಮಸ್ಕಾರ ಮಾಡಿ, ಮತ್ತೆ ಅಡಿಗೆಯ ಮನೆಯನ್ನು ಸೇರಿ ಮನೆವಾರ್ತೆಗೆ ತೊಡಗಿದರು.

* * *

ಎಲ್ಲರೂ ಗೋಪಾಲರಾಯರ ಮನೆಗೆ ಹೊರಟುಹೋಗಿದ್ದಾರೆ. ತಲೆಬಾಗಿಲಿಗೆ ಹೊರಚಿಲಕ ಹಾಕಿ ಕೀಲಿಯನ್ನೂ ಜಡಿಯಲಾಗಿದೆ. ಮನೆಯಲ್ಲಿ ರತ್ನಾಕರನು ಒಬ್ಬನೇ ಒಬ್ಬ. ಊಟ ಮುಗಿಸಿಕೊಂಡು ಕೆಳಗಿನ ಪಡಸಾಲೆಯ ಆರಾಮ ಕುರ್ಚಿಯೊಂದರ ಮೇಲೆ ಬಿದ್ದು ವಿಶ್ರಾಂತಿ ತೆಗೆದುಕೊಳ್ಳುತ್ತಲಿದ್ದಾನೆ. ಕೈಕೊಂಡ ಕಾರ್ಯದಲ್ಲಿ ಕೃತಾರ್ಥನಾದೆನೆಂಬ ಸಮಾಧಾನ ಆತನ ಮೈ-ಮನಗಳಲ್ಲಿ ತುಂಬಿಕೊಂಡಿದೆ. ಹಾಗೆಯೇ ಬಿದ್ದುಕೊಂಡಲ್ಲಿಯೇ ಸುತ್ತಲೂ ಸಹಜದೃಷ್ಟಿಯಿಂದ ನೋಡುತ್ತಿರುವಾಗ, ಎದುರುಗೋಡೆಯ ಮೊಳೆಯೊಂದಕ್ಕೆ ತೂಗುಬಿಟ್ಟ ಛಾಯಾಚಿತ್ರವನ್ನು ನೋಡಿದ. ತಟ್ಟನೆ ಎದ್ದು ಹೋಗಿ ಅದರ ಮುಂದೆ ನಿಂತು ನಿಟ್ಟಿಸಿದ. ಕುಮುದೆಯ ಛಾಯಾಚಿತ್ರವದು. ನಗರದಲ್ಲಿಯ ಸುಪ್ರಸಿದ್ಧವೆನಿಸಿದ 'ಹಂಸ ಸ್ಟೂಡಿಯೋ'ದಲ್ಲಿ ತೆಗೆಸಿದ ಛಾಯಾಚಿತ್ರ. ಹೊಸತಾಗಿಯೆ ತೆಗೆಯಿಸಿದ್ದಾಗಿರಬಹುದು.

ಏಕೆಂದರೆ, ಕುಮುದೆಯ ನವತಾರುಣ್ಯದ ಅಂಗಾಂಗದ ವಿಕಾಸವೆಲ್ಲ ಅದರಲ್ಲಿ ಮೂಡಿನಿಂತಿದ್ದಿತು.

ಛಾಯಾಚಿತ್ರಕಾರನ ಕಲಾತ್ಮಕದೃಷ್ಟಿ ಪ್ರಶಂಸನೀಯವಾದುದು. ಹಿನ್ನೆಲೆಗೆ ಉಚಿತವಾದ ಬನಸಿರಿಯ ಬೆಡಗಿನ ತೆರೆ. ಮುಂದೆ ಕುಮುದಾ ತನ್ನ ನಿತ್ಯದ ವೇಷ-ಭೂಷಣಗಳಲ್ಲಿಯೇ ನಿಂತುಕೊಂಡಿದ್ದಾಳೆ. ಮುಗುಳುನಗೆ ನಸುವೆ ತುಟಿಗಳನ್ನು ಅರಳಿಸಿದೆ. ಕಣ್ಣು ನಸುವೆ ಓರೆಯಾಗಿ ಏನನ್ನೋ ನೋಡುತ್ತಿರುವಂತಿವೆ. ಹಣೆಯನ್ನು ಬಳಸಿದ ಮುಂಗುರುಳು ಮುಖದ ಚೆಲುವನ್ನು ಹೆಚ್ಚಿಸುತ್ತಲಿವೆ. ತಾರಕಾಮಾಲೆಯೊಂದು ಕೊರಳನ್ನು ಅಲಂಕರಿಸಿದೆ. ಬಲಗೈ, ಹತ್ತಿರದ ಕುರ್ಚಿಯ ಹಿಂಬದಿಯ ಆಧಾರವನ್ನು ಪಡೆದಿದೆ. ಎಡಗೈ ಕರವಸ್ತ್ರವೊಂದನ್ನು ಹಿಡಿದುಕೊಂಡು ಇಳಿಬಿದ್ದಿದೆ. ತಿಳುವಾದ ಪತ್ತಲವನ್ನೇ ಉಟ್ಟಿರಬೇಕು. ಛಾಯಾಚಿತ್ರದಲ್ಲಿಯ ನೆರಳು-ಬೆಳಕಿನ ಚಾತುರ್ಯ, ಅಂಗಾಂಗಗಳಿಗೂ ಜೀವ ತುಂಬಿಬಿಟ್ಟಂತೆ ಕಾಣುತ್ತಿದ್ದಿತು. ರತ್ನಾಕರ ಎಡೆಬಿಡದೆ ನೋಟವನ್ನು ನಿಲ್ಲಿಸಿ ನಿಲ್ಲಿಸಿ ಚಿತ್ರವನ್ನು ನೋಡಲು ತೊಡಗಿದ. ಕಳೆಯನ್ನು ಸೂಸುವ ನಗೆಗಣ್ಣುಗಳನ್ನು ನೋಡಿದ; ಕಿರುನಗೆಯನ್ನು ಹರಿಸುವ ತುಟಿಗಳನ್ನು ನೋಡಿದ. ಮುದ್ದಾದ ಗದ್ದವನ್ನು ನೋಡಿದ. ಹಾಗೆಯೆ ನೋಟಗಳನ್ನು ಕೆಳಗಿಳಿಸಿ, ಪುಷ್ಟವಾದ ಎದೆಯನ್ನು ನೋಡಿದ. ಕುಸುರಂಚಿನ ಅರೆದೋಳಿನ ಕುಪ್ಪಸದಿಂದ ಹೊರಕ್ಕೆ ಹೊರಟಿರುವ ದುಂಡುದೋಳುಗಳನ್ನು ನೋಡಿದ. ಕಟಿಪ್ರದೇಶದತ್ತ ಕಣ್ಣು ಹಾಕಿದ. ನಿಂತ ಭಂಗಿಯನ್ನು ನಿಟ್ಟಿಸಿದ. ಆಗ ರತ್ನಾಕರನ ಎದೆ ದಡದಡಿಸುತ್ತಲಿತ್ತು; ಮೈ ಜುಮ್ಮೆದಟ್ಟುತ್ತಲಿತ್ತು. ಎಡಗೈಯಲ್ಲಿ ಹಿಡಿದಿದ್ದ ಕರವಸ್ತ್ರವನ್ನು ನೋಡಿದ; ಗೋಪಾಲರಾಯರ ಮನೆಯಲ್ಲಿ ತನ್ನ ಮೈಮೇಲೆ ಬಿದ್ದ ಕಾಫಿಯನ್ನು ಒರಸಿಕೊಳ್ಳಲಿಕ್ಕೆ ಕುಮುದಾ ಕೊಟ್ಟ ಕರವಸ್ತ್ರದ ನೆನಪಾಯಿತು. ಒಮ್ಮೆದೊಮ್ಮೆಲೆ ಅಲ್ಲಿಂದ ಹೊರಟು ಮೆಟ್ಟಿಲನ್ನೇರಿ, ಅಟ್ಟದ ಮೇಲಿನ ಕೋಣೆಯಲ್ಲಿ ಬಂದ. ಗೂಟಕ್ಕೆ ತಗುಲಿಸಿದ ಜೋಳಿಗೆಯನ್ನು ಕೆಳಗಿಳಿಸಿಕೊಂಡು, ಅದರೊಳಗೆ ಅಚ್ಚುಕಟ್ಟಾಗಿ ಜಾಗ್ರತೆಯಿಂದ ಮಡಿಸಿ ಇಟ್ಟ ಕರವಸ್ತ್ರವನ್ನು ಹೊರಕ್ಕೆ ತೆಗೆದ. ಅದನ್ನು ಕೈಯಲ್ಲಿ ತೆಗೆದುಕೊಂಡು, ಟೇಬಲ್ಲಿನ ಬಳಿಯ ಕುರ್ಚಿಯ ಮೇಲೆ ಕುಳಿತುಕೊಂಡ. ವಸ್ತ್ರವನ್ನು ಬಿಚ್ಚಿ ಟೇಬಲ್ಲಿನ ಮೇಲೆ ಹಾಸಿ ಅದನ್ನೇ ನೋಡಲು ತೊಡಗಿದ. ಮನದಲ್ಲಿ ಏನೇನೋ ಯೋಚನೆಗಳು :

"ಇದನ್ನು ಕುಮುದಾಗ ನಾನು ಆಗಲೆ ಮರಳಿಕೊಡಬೇಕಾಗಿತ್ತು. ಕೊಳೆ ಆದದ್ದರಿಂದ ಸ್ವಚ್ಛ ಮಾಡಿಸಿ ಕಳಿಸಿದರಾಯಿತೆಂಬ ವಿಚಾರದಿಂದ ಆಗ ಕೊಡಲಿಲ್ಲ. ಒಗೆದು ಸ್ವಚ್ಛವಾಗಿ ಬಂದಿತು. ಕಳುಹಬೇಕೆಂದು ಮನಸ್ಸಿನ ಒಂದು ಪದರು ಹೇಳಿದರೆ, ಕಳುಹಲಾಗದೆಂದು ಇನ್ನೊಂದು ಪದರು ಕೂಗಿ, ತನ್ನ ಮಾತಿನಂತೆಯೇ ನಡೆಯಲು ಹಚ್ಚಿತು. ಮನಸ್ಸಿನ ಧರ್ಮ ವಿಲಕ್ಷಣ-ವಾದದ್ದು ! ಕುಮುದಾನಲ್ಲಿ ಸೌಂದರ್ಯವಿರಬಹುದು ! ಈ ಕರವಸ್ತ್ರದಲ್ಲಿ ಹೆಚ್ಚಿನ ಯಾವ ಸೌಂದರ್ಯವಿದೆ ? ಬೆಲೆಕೊಟ್ಟುಕೊಂಡರೆ ಇದಕ್ಕಿಂತ ಹೆಚ್ಚು ಸುಂದರವಾದ ಕರವಸ್ತ್ರ ದೊರೆಯಬಹುದು. ಆದರೆ ನನ್ನ ಮನಸ್ಸು ಇದನ್ನೇ ಏಕೆ ಬಯಸಿತೇನೋ !....

....ಏಕೆ ಬಯಸಿತೆಂಬುದೇನು ? ಮನಸ್ಸಿನ ಗುಣಧರ್ಮವೆಲ್ಲ ಮನುಷ್ಯ ನಿಗೆ ಎಲ್ಲಿ ತಿಳಿದಿದೆ ? ಜಾಗೃತ ಮನಸ್ಸು ಎಷ್ಟೇ ಸಂಯಮದ ಸೋಗು ಹಾಕಿದರೂ, ಸುಪ್ತಮನಸ್ಸಿನ ಬಯಕೆ ಏನೇನಿರುತ್ತವೆಯೋ ಯಾರಿಗೆ ಗೊತ್ತು ? ಮದುವೆಯ ವಿಚಾರ ಬಂದಾಗಲೆಲ್ಲ ನನ್ನ ಕಣ್ಣೆದುರು ಕುಮುದೆಯ ಮೂರ್ತಿಯೇಕೆ ಸುಳಿಯುತ್ತಿರಬೇಕು ? ಕುಮುದಾ ನನ್ನವಳಾದರೆ ! ನನಗೆ ಅವಳನ್ನು ಮದುವೆಮಾಡಿಕೊಳ್ಳಲಿಕ್ಕೆ ಈಗ ಎಲ್ಲಿ ಸಾಧ್ಯವಿದೆ ? ಎಷ್ಟು ದಿನ ಹೀಗೇ ಮುಚ್ಚಿಕೊಂಡು ಇರಲಿಕ್ಕೆ ಸಾಧ್ಯವಾದೀತು ನನಗೆ ? ಬ್ರಿಟಿಷರ ಪೋಲೀಸ್ ಯಂತ್ರ, ಕೋಟಿ ಕೋಟಿ ಕಣ್ಣುಗಳುಳ್ಳದ್ದು. ಇಂದಿಲ್ಲ ನಾಳೆ ನಾನು ಅದರ ಕಣ್ಣಿಗೆ ಬೀಳಲೇಬೇಕು. ಪೋಲೀಸರ ವಶನಾಗಿ ಸೆರೆಮನೆಗೆ ಹೋದರೆ, ತಿರುಗಿ ಬರುವ ದಿನ ಎಂದು ಒದಗುವುದೋ ಏನೋ !— ನಾನು ತಿರುಗಿ ಬರುವ ದಿನಕ್ಕೆ, ಕುಮುದಾ ಮದುವೆ ಮಾಡಿಕೊಂಡು ಮಕ್ಕಳ ತಾಯಿಯೂ ಆಗಿರಬಹುದು...."

ನಿಡಿದಾದ ಉಸಿರೊಂದು ರತ್ನಾಕರನ ಮುಖದಿಂದ ಹೊರಬಿದ್ದಿತು. ಮತ್ತೆ ಯೋಚನೆಯನ್ನು ಬೆಂಬತ್ತಿದ :

"ಆದರೆ ಆಗಲಿ, ಮಕ್ಕಳ ತಾಯಿ ! ಕುಮುದೆಯಂಥ ಎಷ್ಟು ಹೆಣ್ಣು-ಗಳ ಮದುವೆ ಈ ಅವಧಿಯಲ್ಲಿ ನಡೆದುಹೋಗಬಹುದು....ಎಂದಮೇಲೆ ಕುಮುದೆಯದು ಏಕೆ ಆಗಬಾರದು ? ಏಕೆ ಆಗಬಾರದು ? ಆಗಲೇಬೇಕು. ಆದರೆ,...ಕುಮುದೆಗೆ ಒಳ್ಳೆಯ ಗಂಡ ದೊರೆಯಬೇಕು....ಆಕೆಯ ಬದುಕು

ಒಳ್ಳೆಯ ರೀತಿಯಿಂದ ನಡೆಯಬೇಕು....ಆಕೆ ಒಳ್ಳೆಯ ಮಕ್ಕಳ ತಾಯಿ-ಯಾಗಬೇಕು! ಇದನ್ನು ನಾನು ಬರೀ ಹಾರಯಿಸಿದರೆ ಸಾಧ್ಯವಾಗುವುದೆ? ಆಕೆಯ ಮನಸ್ಸು ಏನಿದೆಯೆಂಬುದನ್ನು ವಿಚಾರಮಾಡಿದ್ದೇನೆಯೇ ನಾನು? ಆಕೆ ನನ್ನನ್ನೇ ಬಯಸುತ್ತಿದ್ದರೆ ನಾನೇನು ಮಾಡಬೇಕು? ಏನು ಮಾಡಬೇಕು? ನಾನು ನನ್ನ ಈ ಕಾರ್ಯದಿಂದ ಪರಾಙ್ಮುಖನಾಗಬೇಕೆ? ಪರಾಙ್ಮುಖನಾಗು-ವುದು ಕುಮುದೆಗೆ ಸರಿಯೆನಿಸೀತೆ? ನನ್ನ ಯಾವ ಗುಣಕ್ಕಾಗಿ ಆಕೆ ನನ್ನನ್ನು ಮೆಚ್ಚಿರಬಹುದೋ, ಆ ಗುಣಗಳನ್ನೇ ಕಳೆದುಕೊಳ್ಳುವೆನಲ್ಲವೇ ನಾನು? ಇಂತಹ ಗುರಿಯಿಲ್ಲದ ಗುಣಹೀನನೊಂದಿಗೆ ಆಕೆ ಸಮಾಧಾನದಿಂದ ಬಾಳ-ಬಹುದೆ? ಛೀ! ಎಂದಿಗೂ ಸಾಧ್ಯವಿಲ್ಲ. ನನ್ನ ಕಣ್ಣು ನನ್ನ ಕಾರ್ಯದ ಕಡೆಗಿರಬೇಕು! ಇನ್ನೊಂದು ವಿಚಾರದ ಮೋಹಕ್ಕೆ ನಾನು ಬೀಳಲಾಗದು! ತಪಸ್ವಿಗಳ ತಪಸ್ಸುಗಳಿಗೆ ಅಡ್ಡಬರುವ ಸುರಸುಂದರಿಯರೆಂದರೆ, ಇಂತಹ ಮೋಹಗಳ ಪ್ರತೀಕಗಳೇ ಆಗಿರಬೇಕು. ಮೋಹವನ್ನು ಗೆದ್ದ ತಪಸ್ವಿಗಳೇ ಗುರಿಯನ್ನು ಗಳಿಸಿದರು. ನಾನು ಕೂಡ ಗುರಿಯನ್ನು ಗಳಿಸುವ ತಪಸ್ವಿಯೇ ಆಗಬೇಕು....

....ಸರಿ! ಇದು ನನ್ನ ನಿಶ್ಚಯ! ಈ ಕರವಸ್ತ್ರ ಇನ್ನು ನನ್ನ ಬಳಿಯಲ್ಲಿ ಇರಕೂಡದು. ಇದನ್ನು ಕುಮುದೆಗೆ ಮರಳಿ ಒಪ್ಪಿಸಿಬಿಡಬೇಕು....ಕುಮುದೆಗೆ ನಿಜವಾದ ಹೃದಯಸಂಸ್ಕಾರವಿದ್ದರೆ, ಅವಳೂ ತನ್ನ ಜೀವನದ ಗುರಿಯನ್ನು ಕಂಡುಕೊಂಡಾಳು. ಅದನ್ನು ಗಳಿಸಲು ಮುಂದುವರಿದಾಳು.........”

ಈ ವಿಚಾರದ ಗುಂಗಿನಲ್ಲಿ ಇರುವಾಗಲೇ ಅಟ್ಟದ ಮೆಟ್ಟಿಲನ್ನು ಯಾರೋ ಏರಿಬರುವ ಸಪ್ಪಳು ರತ್ನಾಕರನಿಗೆ ಕೇಳಿಸಿತು. ಆತನು ಎಚ್ಚತ್ತು ಕುಳಿತು ಬಾಗಿಲ ಕಡೆಗೆ ನೋಡಲು ತೊಡಗಿದ; ಡ್ರ್ಯಾಯ್ವರ್ ದತ್ತೋಬಾ, ರಸಬಾಳೆಯ ಗೊನೆಯೊಂದನ್ನು ಹಿಡಿದುಕೊಂಡು, ನಿದಾನವಾಗಿ ಹೆಜ್ಜೆಹಾಕುತ್ತ ಕೋಣೆಯ ಬಾಗಿಲಿಗೆ ಬಂದ. ರತ್ನಾಕರ ಆತುರದಿಂದ ಎದ್ದು ಅವನನ್ನು ಬರಮಾಡಿ-ಕೊಂಡ. ಹಗಲು ಎರಡು ಗಂಟೆಯಾಗಿರಬಹುದು. ದತ್ತೋಬಾ ಗೊನೆ-ಯನ್ನು ಅಲ್ಲಿಯೇ ಕೆಳಗಿರಿಸಿ, ದೂರದ ಕುರ್ಚಿಯೊಂದರ ಮೇಲೆ ಕುಳಿತು, ಮುಖದ ಬೆವರನ್ನು ಒರಸಿಕೊಳ್ಳುತ್ತ ಹೇಳಿದ :

“ಊರಿಂದ ಬಂದವನೇ ಮೊದಲು ನಾನು ಈ ಮನಿಗೇ ಬಂದೆ; ಬಾಗಿಲಿಗೆ ಕೀಲಿ ಇತ್ತು. ಹಾಂಗs ತಿರಿಗಿ ಗೋಪಾಲರಾಯರ ಮನಿಗೆ ಹೋದೆ, ಯಾಕಂದರ, ಬಾಗಿಲಿಗೆ ಕೀಲಿ ಇತ್ತಂದ ಮ್ಯಾಲ, ಎಲ್ಲಾರೂ ಅಲ್ಲೇ ಹೋಗಿರ-ಬಹುದೂ ಅಂತ ನಾ ತಿಳಕೊಂಡೆ ಅಲ್ಲಿ ಹೋದ ಮ್ಯಾಲ ರಂಗಣ್ಣಾವರು ಹೇಳಿದರು : ‘ ಹೀಂಗಿನ ಮಾತು ಹೀಂಗ— ಆ ರಾಯರು ಇಲ್ಲಿಗೆ ಬಂದಿಲ್ಲ–’ ಅಂತ. ಅಲ್ಲಿ ಮಸಿ ಸಣ್ಣದು. ಮನ್ಯಾಗ ಪೂಜಿ-ಪುರಸ್ಕಾರದ ಗದ್ದಲ. ಅದಕ್ಕ ರಂಗಣ್ಣಾವರಿಗೆ ‘ ಆ ಮ್ಯಾಲ ಬಂದು ಬೆಟ್ಟಿ ಆಗತೀನಿ ’ ಅಂತ ಹೇಳಿದೆ. ಆದರ ಅವರು ನನ್ನ ಬಿಡಲಿಲ್ಲ. ಈ ಮನೀ ಸಣ್ಣಬಾಯಿಯವರು ಇದ್ದಾರ ನೋಡ್ರಿ, ಅವರನ್ನ ಕರೆದು ಏನೋ ಹೇಳಿದರು. ಅವರು ಕೀಲಿಕೈ ತಂದು ರಂಗಣ್ಣಾವರ ಕೈಯಾಗ ಕೊಟ್ಟರು: ‘ ನೀ ಅಲ್ಲೇ ಹೋಗು. ಅವರು ಒಬ್ಬರೇ ಒಂಟಿಗರಾಗಿ ಕೂತಿರಬಹುದು ! ’ ಅಂತ ಅಂದರು. ಶಂಕರಣ್ಣಾ ಎರಡು ರಸಬಾಳೀ ಗೊನಿ ಕಳಿಸಿಕೊಟ್ಟಿದ್ದ. ಒಂದು ಅಲ್ಲೇ ಪೂಜಾಕ್ಕಂತ ಕೊಟ್ಟು, ಇನ್ನೊಂದನ್ನ ಇಲ್ಲಿಗೆ ತೊಗೊಂಡು ಬಂದೆ ! ”

“ಆಯ್ತು, ನೀ ಬಂದದ್ದು ಒಳ್ಳೇದs ಆಯ್ತು. ನನಗೂ ಒಬ್ಬನೇ ಒಂಟಿಯಾಗಿ ಕೂತು ಬೇಸರು ಬಂದು ಹೋಗಿತ್ತು. ಇಂದು ಬಸ್ಸು ಲಗೂನs ಬಂದ್ಹಾಂಗ ಕಾಣತದ ! ”

“ ಹಾದ್ಯಾಗ ಹೆಚ್ಚುಹೊತ್ತು ನಿಲ್ಲಿಸೇ ಇಲ್ಲರಿ ಬಸ್ಸು ! ರಂಗಣ್ಣಾವರು ನಿನ್ನೇ ನನಗ ಹೇಳಿದ್ದರು. ಆದಷ್ಟು ಲಗೂನ ಬಂದುಬಿಡಂತ ! ನಾನು ರಂಗಣ್ಣಾವರ ಹೆಣತಿನ್ನ ನೋಡೇ ಬಂದಿನಿರಿ. ಹುಡುಗಿ ಏನ್ರಿ, ಅಪರೂಪ ಹುಡುಗಿ! ಕೊಲ್ಲಾಪುರದ ಮಹಾಲಕ್ಷ್ಮಿ ಆಗ್ಯಾಳ ನೋಡ್ರಿ ! ರಾಯರ, ನೀವಿದೊಂದು ಒಳ್ಳೇ ಕೆಲಸಾ ಮಾಡಿದಿರಿ ನೋಡ್ರಿ! ಏನಾದರ ಏನು ? ರಂಗಣ್ಣಾವರ ಮನಿ ಹಾಳ ಹಾಳ ಅನಿಸತಿತ್ತು! ಮನೀ ಅಂದ ಮ್ಯಾಲ, ಮುತ್ತೈದಿ ಮನ್ಯಾಗ ಇರಲಿಕ್ಕೇ ಬೇಕರಿ ! ”

“ ಆಯ್ತು ಬಿಡು, ಹುಡುಗಿ ನಿನ್ನ ಮನಸಿಗೆ ಬಂದಳs ದತ್ತೋಬಾ ? ”

“ ಬರದs ಏನ್ರೀ ! ಇಷ್ಟು ತಿಳಿದವರಂದರೂ ನಿಮ್ಮ ಮುಂದೀ ಮದಿವೀ ವಿಚಾರಾ ಹೇಳಬ್ಯಾಡ್ರಿ ! ವರದಕ್ಷಿಣೆ—ವರೋಪಚಾರಾ—ಬೀಗಿತ್ತೀಸೀರಿ—ಕಳಸಗಿತ್ತೀ—ಇದs ಮಾತಿನ ಗದ್ದಲ ನಡೀತsದs ಹೊರತು, ಹೆಣ್ಣಿಗೆ

ತಕ್ಕ ಗಂಡು, ಗಂಡಿಗೆ ತಕ್ಕ ಹೆಣ್ಣು ಅವನಿರೋ ಇಲ್ಲೋ ಅಂಬೂದರ ಕಡೆ ಕಣ್ಣs ಹಾಕೂದಿಲ್ಲ. ಹೆಚ್ಚು ವರದಕ್ಷಿಣೀ ಕೊಟ್ಟರ, ಎಂಥಾ ಕಾಳಮ್ಮನ ಮಾರೀ ಕನ್ಯಾ ಸುದ್ಧಾ, ಸುಮ್ಮಗs ಮಾಡಿಕೋತಾರ ನಿಮ್ಮ ಮಂದ್ಯಾಗ! ಜನಮುಕ್ಕ ವರದಕ್ಷಿಣಿ ಬೇಕೋ, ಏನು ಒಳ್ಳೇ ಹೇಣ್ತಿ ಬೇಕೋ ಹೇಳ್ರಿ! ರಂಗಣ್ಣವರs ಅನ್ರಿ–ನೀವು ಅನ್ರಿ–ಎಲ್ಲಾ ಮಾತೂ ವಿಚಾರ ಮಾಡಿದವರು, ಆದಕ್ಕs ವರದಕ್ಷಿಣಿ-ವರೋಪಚಾರದ ಯಾವ ಆಶಾನೂ ಮಾಡದೆ, ಒಳ್ಳೇ ಹೆಣ್ಣಿನ ಕಡೇನs ನೋಡಿದ್ರಿ. ಠೀಕ್ ಆತ ನೋಡ್ರಿ ಇದು! ನನ್ನ ಮನಸಿಗೆ ಬಂತು! ಪಾಪ, ಆ ಬಡವನ ಮಗಳಿಗೆ ಖರ್ಚು-ವೆಚ್ಚ ಇಲ್ಲದೆ ಒಳ್ಳೇ ಮನಿತನ ಸಿಕ್ಕಿತು; ರಂಗಣ್ಣವರಿಗೆ ಮನಸಿನ ತಕ್ಕ ಹೆಣ್ಣು ಸಿಕ್ಕಿತು! ಮದಿವೀ ಅಂದರ ಹೀಂಗಾಗಬೇಕು ನೋಡ್ರಿ!"

ದತ್ತೋಬಾನ ಮದುವೆಯ ವಿಷಯಕವಾದ ಸಹಜಾಭಿಪ್ರಾಯ, ರತ್ನಾಕರನಿಗೆ ಆಶ್ಚರ್ಯ-ಆನಂದಗಳನ್ನು ಉಂಟುಮಾಡಿತು. ಸಮಾಧಾನ ಧ್ವನಿಯಲ್ಲಿಯೇ ಆತ ಹೇಳಿದ :

"ಆಯ್ತು, ಇನ್ನ ಮದಿವೀ ಕೆಲಸ ಒಂದು ಸುಸೂತ್ರ ಮುಗಿದರ ತೀರಿ ಹೋಯ್ತು!"

"ಬಾಳ ದಿನಾ ಬಿಡಬೇಕರೀ ಯಾಕ್ರಿ ಇನ್ನ? ಲಗೂನs ಮದಿವೀ-ಕಾರ್ಯ ಮುಗಿಸಿಬಿಟ್ಟರ ಆತು!"

"ರಂಗಣ್ಣಂದೂ ಇದೇ ವಿಚಾರ ಅದ ದತ್ತೋಬಾ! ಮದಿವಿ ನನ್ನ ಸಮಕ್ಷಮವೇ ಆಗಬೇಕಂತ ಆತನ ಇಚ್ಛಾ ಏನಪಾ! ಆದರ, ನಾನು ಹೀಂಗ ಎಷ್ಟು ದಿನಾ ಅಂತ ಅಡಗಿಕೊಂಡು ಇರಲಿಕ್ಕೆ ಆದೀತು? ಅದಕ್ಕs ನಾಳೆ ಅಮಾಸಿ ಆದ ಮೂರುದಿನಕ್ಕ ಒಳ್ಳೆ ಮದಿವೀ ಮೂಹೂರ್ತ ಅದ—ಅದೇ ಮೂಹೂರ್ತಕ್ಕs ಮದಿವೀಕಾರ್ಯ ಮುಗಿಸಿಬಿಡಬೇಕಂತ ನಮ್ಮ ಇಬ್ಬರದೂ ಅಭಿಪ್ರಾಯ ಆದ. ಈ ಮಾತನ್ನ ಗೋಪಾಲರಾಯರು ಒಪ್ಪಿಕೋಬಹುದು. ಯಾಕಂದರ, ಅವರಿಗೂ ಮಗಳ ಮದಿವೀ ಹೊಣೆಗಾರಿಕೀ ಆದಷ್ಟು ಬ್ಯಾಗನs ಇಳಿಸಿ ಬಿಡಬೇಕಂತ ಆತುರ ಇದ್ದೇ ಇರತದ. ಅದಾಯ್ತು ದತ್ತೋಬಾ, ಹವಾಲ್‌ದಾರ ಹನುಮಂತಪ್ಪನದು ನಿನಗ ಗುರುತು ಅದ ಅಲ್ಲs? ಅವನ ಕೂಡಾ ಕೆಲವು ಸಂಗತಿಗಳನ್ನ ಕುರಿತು ಮಾತಾಡಲೇ ಬೇಕಾಗೇದ. ಆತನಿಗೆ

ನೀನೇ ಭೆಟ್ಟಿ ಆಗಿ, ಗುಟ್ಟಿನಲ್ಲಿ ನನ್ನ ವಿಷಯ ಹೇಳಿ, ಇಂದ ರಾತ್ರಿ ಹತ್ತು ಗಂಟೆಯ ಸುಮಾರಿಗೆ ಇಲ್ಲಿಗೆ ಕರಕೊಂಡು ಬರಬೇಕು. ಇಂದೇನೂ ತಿರಿಗಿ ನೀನು ಹೋಗೂದಿಲ್ಲಲಾ ?"

"ಇಲ್ಲರಿ ! ಇಂದ ನಾ ಇಲ್ಲೇ ಇರತೀನಿ. ನಾಳೆ ಮುಂಜಾನಿಯ ಸಾರಿಗಿ ನಂದು. ನೀವು ಹೇಳಿದ ಕೆಲಸಾ ನಾನು ಮಾಡತೀನಿ. ನೀವು ಕಾಳಜೀ ಬಿಡ್ರಿ ! ಪೋಲೀಸರದೊಂದು ಗೊಂದಲನs ನಡದsದರಿ ! ಒಂದೇ ಒಂದು ಬಸ್ಸೇನೂ ಸುಮ್ಮನs ಬಿಡೂದಿಲ್ಲ. ಇಳಿದ ಮಂದಿನ್ನೆಲ್ಲಾ ಹಿಡಿದು ಹಿಡಿದು, ತಪಾಸ್ ಮಾಡಿ ಬಿಡತಾರ ! ನೀವು ಪಾರಾಗಿ ಬಂದದ್ದು ಹೆಚ್ಚಿನ ಮಾತ್ರೇ ಏನ್ರಿ !"

"ಹೆಚ್ಚಿನ ಮಾತೇ ಏನು? ನೀನೇ ದೇವರಾಗಿ ನಿಂತು ಪಾರುಮಾಡಿಸಿದಿ. ಎಲ್ಲಿಂದ ಸಂಪಾದಿಸಿ ತಂದ್ಯೋ ಏನೋ ಆ ಗಂಟೆಯ ಅಯ್ಯನವರ ವೇಷ-ಭೂಷಣ ! ನನಗ ಬಹಳ ಅನುಕೂಲ ಮಾಡಿಕೊಟ್ಟುವು. ಅದರ ಸಹಾಯ ದಿಂದಲೇ ನಾನು ಹುಬ್ಬಳ್ಳಿಗೆ ಸಹಿತ ಹೋಗಿಬಂದೆ...."

ರತ್ನಾಕರನ ಮಾತು ನಡೆದಿರುವಾಗಲೇ ತುಂಗಮ್ಮ ಮೇಲೆ ಬಂದು ಸ್ನೇಹಸ್ವರದಲ್ಲಿ ಹೇಳಿದರು :

"ಸತ್ಯನಾರಾಯಣನ ಪ್ರಸಾದ ಬಡಿಸಿ ಬಂದsದ. ಈಗ ನಿಮಗ ಊಟಕ್ಕ ಹಾಕಿ ನಾನು ತಿರುಗಿ ಆ ಮನಿಗೆ ಹೋಗಬೇಕು ! ಏಳತೀರೇನು ?"

ರತ್ನಾಕರ ಆತುರದಿಂದ ಕೇಳಿದ :

"ನಿಮ್ಮ ಊಟ ಆಯ್ತು ಹೌದಲ್ಲೋ ?"

"ಇನ್ನೂ ಇಲ್ಲ; ಅಲ್ಲಿ ಗಂಡಸರೆಲ್ಲಾ ರೂ ಊಟಕ್ಕ ಕೂತರು. ಬಿಸಿಬಿಸಿ ಅಡಿಗಿ-ಅಂತ, ವೇಣಕ್ಕ ಇಬ್ಬರ ಕಡಿಂದ, ಎಲ್ಲಾ ಅಡಿಗೀ ಬಡಿಸಿ ಕಳಿಸಿದರು. ನಾನು ನಿಮಗ ಊಟಕ್ಕ ಹಾಕಿಹೋಗಬೇಕಂತ ಬಂದೀನಿ !"

ರತ್ನಾಕರನ ಹೃದಯ ಹಿಗ್ಗಿ ಇಷ್ಟಗಲವಾಯಿತು. ಸವಿಯೂಟದ ಆಶೆಯಿಂದಲ್ಲ; ಹೆಣ್ಣು ಮಕ್ಕಳಲ್ಲಿ ಎಲ್ಲೆಲ್ಲಿಯೂ ಅರಳಿಕೊಂಡಿರುವ ತಾಯ್ತನದ ಕರುಳಿಗಾಗಿ ! ಹೆಚ್ಚಿಗೆ ಮಾತನ್ನೇನೂ ಆಡದೆ, ದತ್ತೋಬನನ್ನೂ ಊಟಕ್ಕೆ ಎಬ್ಬಿಸಿದ ಇಬ್ಬರೂ ಕೂಡಿ ಕೆಳಗೆ ಹೊರಡಲು ಸಿದ್ಧರಾದರು. ಅದನ್ನು ಕಂಡ

ತುಂಗಮ್ಮ ಅವಸರದ ನಡಿಗೆಯಿಂದ ಅಟ್ಟದ ಮೆಟ್ಟಿಲನ್ನು ಇಳಿಯಲು ತೊಡಗಿದರು.

## ೩೨ನೆಯ ಪರಿಚ್ಛೇದ

ಗೋಪಾಲರಾಯರ ಮನೆಗೆ ಊಟಕ್ಕೆ ಹೋದವರೆಲ್ಲ ಮರಳಿ ಮನೆಗೆ ಬರಬೇಕಾದರೆ, ರಾತ್ರಿಯ ಎಂಟುಗಂಟೆಯಾಯಿತು. ನಿಶ್ಚಯದ ಸಂಪ್ರದಾಯವನ್ನು ಕೂಡ ಅಂದೆಯೆ ಮುಗಿಸಿಬಿಟ್ಟಿದ್ದರು ದತ್ತೋಬಾ ಆರುಗಂಟೆಯವರೆಗೂ ರತ್ನಾಕರನ ಜೊತೆಯಲ್ಲಿದ್ದು, ಆ ಮೇಲೆ ತನ್ನ ಕೆಲಸಕ್ಕೆ ಹೊರಟು [redacted]. ಎಲ್ಲರೂ ಬರುವ ವರೆಗೆ ರತ್ನಾಕರ ತನ್ನ ಅಟ್ಟದ ಮೇಲಿನ ಕೋಣೆಯಲ್ಲಿಯೆ ಕುಳಿತುಕೊಂಡಿದ್ದ. ಕೆಳಗಿನ ಮನೆಯಲ್ಲಿ ದೀಪಗಳು ಕೂಡ ಇರಲಿಲ್ಲ. ತುಂಗಮ್ಮ ಮೊದಲು ಬಂದು ತಲೆಬಾಗಿಲನ್ನು ತೆರೆದು, ಮನೆಯನ್ನು ವಿದ್ಯುದ್ದೀಪದಿಂದ ಬೆಳಗಿಸಿದ್ದರು. ಆ ಮೇಲೆ ಅನಂತರಾಯರು, ರಂಗಣ್ಣ, ಕುಮುದಾ ಮೂವರೂ ಕೂಡಿ ಮನೆಗೆ ಬಂದು, ನೇರವಾಗಿ ರತ್ನಾಕರನು ಕುಳಿತಲ್ಲಿಗೇ ನಡೆದುಬಿಟ್ಟರು. ಮೆಟ್ಟಿಲನ್ನು ಹತ್ತುವ ಹೆಜ್ಜೆಗಳ ಸಪ್ಪಳ ಕಿವಿಗೆ ಬೀಳುತ್ತಲೆ, ರತ್ನಾಕರ ಆತುರದಿಂದ ಎದ್ದು ಬಾಗಿಲ ಹೊರಗೆ ಬಂದು ನಿಂತಿದ್ದ. ಮೂವರೂ ಮೇಲೆ ಹತ್ತಿಬಂದರು. ಅನಂತರಾಯರ ಮುಖದ ಮೇಲೆ ಉಲ್ಲಾಸದ ನಗೆ ಕುಣಿಯುತ್ತಿತ್ತು. ರಂಗಣ್ಣನ ಸ್ಥಿತಪ್ರಜ್ಞ ಮುಖಭಾವದಲ್ಲಿಯೂ ಹೊಸ ಕಳೆಯೊಂದು ಮಿರುಗುತ್ತಿತ್ತು. ಕುಮುದೆಯ ಮುಖದಲ್ಲಿ ಮೃದುಹಾಸ್ಯ ಲಾಸ್ಯ ಮಾಡುತ್ತಿದ್ದಿತು. ಮೂವರನ್ನೂ ರತ್ನಾಕರ ಬರಮಾಡಿಕೊಂಡ. ಎಲ್ಲರೂ ತಮ್ಮ ತಮ್ಮ ಆಸನದ ಮೇಲೆ ಕುಳಿತುಕೊಂಡರು. ಆಗ ಅನಂತರಾಯರು ರತ್ನಾಕರನ ಕಡೆಗೆ ನೋಡುತ್ತ ಹೇಳಿದರು :

"ನಿಶ್ಚಯದ ಕೆಲಸಾ ಸಹಿತ ಮುಗಿಸಿಕೊಂಡೇ ಬಂದು ಬಿಟ್ಟೆವಿ. ನೀವು ಅಲ್ಲಿ ಇಲ್ಲದ್ದಕ್ಕ ಎಲ್ಲರಿಗೂ ಬಹಳ ಭಣಭಣ ಅನಿಸಿತು. ಆದರ ಮಾಡೂದೇನು, ನಿರ್ವಾಹನೇ ಇರಲಿಲ್ಲ. ಪಾಪ, ಗೋಪಾಲರಾಯರು ತಮ್ಮ ಯೋಗ್ಯತಾ ಮೀರಿ ಅಡಿಗಿ-ಅಂಬಲಿ ವಿಜೃಂಭಣೆ ಮಾಡಿಸಿದ್ದರು. ಆ ಗಂಡ-ಹೆಂಡತಿಗೆ ಆನಂದ ಅಂದರ, ಹಿಡಿಸಲಾರದಷ್ಟು ಆಗೇದ ನೋಡ್ರಿ! ಯಾಕs ಕುಮುದಾ ಹೌದಲ್ಲೋ ನನ್ನ ಮಾತು ? "

ಕುಮುದಾ ಹೇಳಿದಳು :

“ಯಾಕ ಆಗಬಾರದು ? ಅವರ ಕಲ್ಪನಾಕ್ಕ ವಿಾರಿ ಒಳ್ಳೆಯ ಅಳಿಯ ಸಿಕ್ಕ್ಯಾಂಗ ಆಯ್ತು. ಯಾವುದೂ ಹೆಚ್ಚಿನ ವೆಚ್ಚದ ಭಾರ ಇಲ್ಲ. ಎಲ್ಲಾ ಮನಸಿನ ತಕ್ಕ ಹಾಂಗ ಆದಮ್ಯಾಲ, ಆನಂದ ಯಾಕ ಆಗಬಾರದು ಅವರಿಗೆ ?”

ರತ್ನಾಕರನಿಗಾದ ಹಿಗ್ಗು ಅವನ ಕಣ್ಣುಗಳಲ್ಲಿ ಮೂಡಿತು. ನಗುವ ಕಣ್ಣುಗಳಿಂದ ಅವನು ರಂಗಣ್ಣನ ಮುಖವನ್ನು ನಿಟ್ಟಿಸುತ್ತ ಕೇಳಿದ :

“ ಯಾಕ, ವರರಾಜರಿಗೆ ಕನ್ಯಾರಾಣಿ ಒಪ್ಪಿಗಿಯಾದಳೋ ಇಲ್ಲೊ ?”

ರಂಗಣ್ಣ ನಗು-ನಗುತ್ತ ಹೇಳಿದ:

“ ನಾ ಅದರ ವಿಚಾರವನ್ನೇ ಮಾಡಿಲ್ಲ ರತ್ನಾಕರಾ! [redacted] ನಿನ್ನ ಮನಸ್ಸು ಒಪ್ಪಿಕೊಂಡಾವ ಅಂದ ಮ್ಯಾಲ, ನಾ ಯಾಕ ನನ್ನ ಕಣ್ಣು-ಮನಸಿಗೆ ಕೆಲಸಾ ಕೊಡಬೇಕು ?”

ತುಂಟ ನಗೆ ನಗುತ್ತ ಕುಮುದಾ ನುಡಿದಳು :

“ ನೀವು ಕೆಲಸಾ ಕೊಡಬಾರದಂದರೂ ನಿಮ್ಮ ಕಣ್ಣು ಮನಸು ನಿಮ್ಮ ಮಾತು ಕೇಳಲಿಲ್ಲ ಕಾಣಸತದ; ಕಾವೇರಿ ಕಣ್ಣಿಗೆ ಬಿದ್ದ ಸರತಿಗೊಮ್ಮೆ, ಆಕಿನ್ನ ನೋಡುವ ಕೆಲಸವನ್ನೇ ಮಾಡತಿದ್ದುವು !”

ಎಲ್ಲರೂ ನಕ್ಕರು, ಎಲ್ಲರೊಂದಿಗೆ ರಂಗಣ್ಣನೂ ನಕ್ಕ. ಆ ನಗೆಯಲ್ಲಿ ಉಲ್ಲಾಸ ಸಂತೃಪ್ತಿ ತುಂಬಿ ತುಳುಕುತ್ತಿದ್ದುವು. ರತ್ನಾಕರ ಅದರ ಅರ್ಥ ವನ್ನು ಚೆನ್ನಾಗಿ ಗ್ರಹಿಸಿ, ಸಮಾಧಾನ ಪಟ್ಟ. ಆಗ ರಂಗಣ್ಣ ಮಾತನಾಡಿದ :

“ನಿನ್ನ ಸೂಚನಾ ಎಲ್ಲರಿಗೂ ಒಪ್ಪಿಗೆ ಆಯಿತು ರತ್ನಾಕರ! ನಾ ಎಲ್ಲಾ ಮಾತನ್ನೂ ತಿಳಿಸಿ ಹೇಳಿದೆ. ಔಚಿತ್ಯ ತಿಳಿದುಕೊಂಡು, ಮೊದಲನೆಯ ಮುಹೂರ್ತಕ್ಕs, ಅಂದರ ವೈಶಾಖ ಶುದ್ಧ ತೃತಿಯಾ ದಿವಸs ಲಗ್ನ ಆಗ ಬೇಕಂತ ನಿರ್ಣಯ ಆಗೇದ!”

ರತ್ನಾಕರ ಬೇಸರದ ಧ್ವನಿಯಲ್ಲಿ ಹೇಳಿದ :

“ಇಂದ ಇನ್ನೂ ಚೈತ್ರ ವದ್ಯ ನವಮಿ ! ವೈಶಾಖ ವದ್ಯ ತೃತಿಯಾ ಅಂದರ ಇನ್ನೂ ಹತ್ತು ದಿವಸ! ಅಲ್ಲಿಯ ವರೆಗೆ ನಾನು ಹ್ಯಾಂಗ ಅಡಗಿಕೊಂಡು ವ್ಯಾಳ್ಯಾ ಕಳೀಬೇಕಪ್ಪಾ ರಂಗಣ್ಣಾ !”

“ ಅಡಿಗಿಕೊಂಡು ವ್ಯಾಳ್ಯಾ ಕಳಿಯೂವ್ಯಾಕ ? ಗಂಟೀಕಾಯಕದ ಅಯ್ಯನವರು ಇನ್ನಷ್ಟು ದಿನಾ ಸಂಚಾರ ಮಾಡಿಕೊಂಡು ಬರಲಿ ! ”

ಕುಮುದಾ ಅದೊಂದು ಬಗೆಯ ಆಶೆ-ಸಂಕೋಚಗಳು ಬೆರೆತ ನೋಟದಿಂದ, ರತ್ನಾಕರನ ಕಡೆಗೊಮ್ಮೆ ತಂದೆಯ ಕಡೆಗೊಮ್ಮೆ ನೋಡುತ್ತಲಿದ್ದಳು. ಏನೋ ಮಾತನಾಡಬೇಕೆಂಬ ಸೂಚಕಮುದ್ರೆ ಮುಖದಲ್ಲಿ ಮೂಡಿದ್ದಿತು. ಆಗಲೆ ದತ್ತೋಬಾ ಅಲ್ಲಿಗೆ ಬಂದ; ರತ್ನಾಕರ ತವಕದಿಂದ ಆತನ ಮುಖದ ಕಡೆಗೆ ನೋಡಿದ; ದತ್ತೋಬಾ ಮೆಲ್ಲಗಿನ ಧ್ವನಿಯಲ್ಲಿ ಹೇಳಿದ:

“ ಹನುಮಂತಪ್ಪ ಹವಾಲ್‌ದಾರ ಬೆಟ್ಟಿಯಾಗಿದ್ದ ರಾಯರs ! ಇಂದು ಹತ್ತು ಗಂಟೆಗೆ ಅವನ್ನ ಎಲ್ಲಿಯೋ ಡ್ಯೂಟೀಮ್ಯಾಲ ಹಾಕ್ಯಾರಂತರಿ! ಅದಕ್ಕಾಗಿ [redacted]ಕಾಗತ್ತದಂತ ! ನಾಳಿಗೆ ಬಂದು ಬೆಟ್ಟಿ ಆಗತೇನಂತ ಖಾತ್ರೀ ಹೇಳ್ಯಾನ. ಆದರ ನಿಮಗೊಂದು ಮಾತು ತಿಳಿಸಲಿಕ್ಕೆ ನನಗ ಸೂಚನಾ ಕೊಟ್ಟಾನ !”

ರತ್ನಾಕರ ಆತುರಮನಸ್ಕನಾಗಿ ಕೇಳಿದ :

“ ಅದೇನದು ಮಾತು ? ”

“ ಈ ಊರಾಗ ಗಂಟೆಯ ಅಯ್ಯನವರನ್ನೆಲ್ಲಾ ಹಿಡಿದು ಹಿಡಿದು, ಪೋಲೀಸರು ಜೋರಿನಿಂದ ತಪಾಸ್ ನಡಿಸ್ಯಾರಂತರಿ ! ಹುಬ್ಬಳ್ಳಿಯೊಳಗೂ ಇದು ನಡದದಂತರಿ ! ನಿಮ್ಮ ಆ ವೇಷಾಂತರದ ಸುದ್ದಿ ಪೋಲೀಸರಿಗೆ ಹ್ಯಾಂಗ ಗೊತ್ತಾಗಿ ಹೋಗೇದೋ ಏನೋ ನೋಡ್ರಿ ! ಬಹಳ ಮಾಡಿ ಈ ಸುದ್ದಿ ಹುಬ್ಬಳ್ಳಿಯೊಳಗ ಹಬ್ಬಿ. ಅದು ಇಲ್ಲಿಯ ಪೋಲೀಸರ ಕಿವಿತನಕಾನೂ ಬಂದ್ಹಾಂಗ ಕಾಣತ್ತದ—ಅಂತ ಹನುಮಂತಪ್ಪ ಹೇಳಿದ. ನಿಮಗ ಹುಷಾರೀ ಸೂಚನಾನೂ ಕೊಟ್ಟಾನರಿ ! ”

ರತ್ನಾಕರ ಸುಮ್ಮಗೆ ಕುಳಿತ. ರಂಗಣ್ಣನ ಮನಸ್ಸನ್ನೂ ಬೆರಗು-ಬೆದರಿಕೆಗಳು ಕವಿದುಕೊಂಡುವು. ಅನಂತರಾಯರೂ ಮಂಕುವಡೆದವರಂತೆ ಕುಳಿತುಬಿಟ್ಟರು. ನಿಮಿಷ ತಡೆದು, ರತ್ನಾಕರ ಮೆಲ್ಲಗೆ ಕೇಳಿದ :

“ ಮುಂದೆ ಗತಿಯೇನು ರಂಗಣ್ಣಾ ? ಹತ್ತು ದಿವಸ ಗುಟ್ಟಾಗಿ ಕಳೆಯುವ ಬಗೀ ಹ್ಯಾಂಗ ? ನಮ್ಮ ಜನರೊಳಗ ಗುಟ್ಟು ಕಾಯ್ದುಕೊಳ್ಳುವ ರೂಢಿಯೇ ಇದ್ದಂತಿಲ್ಲ. ಬಹುಶಃ ಈ ಸುದ್ದಿ ನಮ್ಮ ಮಾಮಾನ ಮನಿಯೊಳಗಿಂದಲೇ ಬಹಿರಂಗವಾಗಿ ಹೊರಟು, ಪೋಲೀಸರ ಕಿವಿಗೆ ಬಿದ್ದಿರಬೇಕು. ಆಯ್ತು,

ನಂದೊಂದುಮಾತು ನಡಿಸಿಕೊಡಬೇಕು ರಂಗಣ್ಣಾ ! ನಾನು ಹೊರಟು ಹೋದರೂ, ನೀನು ನಿನ್ನ ಮದಿವಿಯ ಕೆಲಸವನ್ನ ಮುಗಿಸಿಕೊಂಡುಬಿಡಬೇಕು!"

ರಂಗಣ್ಣ ರೋಸಿಕೊಂಡ ಧ್ವನಿಯಲ್ಲಿ ಕೇಳಿದ :

" ನಿನ್ನ ಬಿಟ್ಟು ನಾನು ಮದಿವೀ ಮಾಡಿಕೊಳ್ಳಲೇ ರತ್ನಾಕರ ? ಆ ಮಾತು ಆಗದು ! ಹ್ಯಾಂಗೂ ನಿಶ್ಚಯ ಆಗಿಹೋಗೇದ. ಬೇಕಾದರ, ಈ ಚಳವಳಿಯ ಗೊಂದಲ ಎಲ್ಲಾ ಮುಗಿದ ಮ್ಯಾಲಽ ಮದಿವೀ ಕೆಲಸಾ ಮುಗಿಸ ಬಹುದು ! "

ಕುಮುದೆಯ ಮನಸ್ಸನ್ನು ಒಮ್ಮೆಲೆ ಯಾರೋ ಹಿಂಡಿದಂತಾಯಿತು. ಆಕೆ ದೈನ್ಯದೃಷ್ಟಿಯಿಂದ ತಂದೆಯ ಕಡೆಗೆ ನೋಡುತ್ತ ನಿಟ್ಟುಸಿರನ್ನು ಹಾಕಿದಳು. ಭಾವದಲ್ಲಿ ಎಂತಹದೋ ಬೇಡಿಕೆಯಿದ್ದಿತು. ಅನಂತರಾಯರ ಮನಸ್ಸು ಇದು ವರೆಗೆ ಉಯ್ಯಾಲೆಯಾಡುತ್ತಿತ್ತು. ಕುಮುದೆಯ ದೈನ್ಯದೃಷ್ಟಿ-ನಿಟ್ಟುಸಿರುಗಳನ್ನು ಕಾಣುತ್ತಲೆ, ಆವೇಶಗೊಂಡವರಾಗಿ ಹೇಳಿದರು:

" ಮದಿವೀ ಮುಂದಕ್ಕೆ ಹಾಕುವ ವಿಚಾರ ಮಾತ್ರ ಮಾಡಬ್ಯಾಡ್ರಿ ! ಯಾಕಂದರ, ಶುಭದ ಕೆಲಸ ಶೀಘ್ರವಾಗಿ ಆಗಿಬಿಡಬೇಕು ! ಒಂದು ಲಗ್ನಕ್ಕ ಹದಿನೆಂಟು ವಿಘ್ನ—ಅಂತಾರ ಸುಳ್ಳಲ್ಲ. ಈಗ ನಾವೊಂದು ಮಾತು ಹೆಳ್ತೀನಿ : ಲಗ್ನದ ಕಾರ್ಯ ಮುಗಿಯುವ ತನಕಾ, ರತ್ನಾಕರರಾಯರು ನಮ್ಮ ಮನಿ ಯೊಳಗಽ ಗುಟ್ಟಾಗಿ ಇದ್ದು ಬಿಡಲಿ ! ಅವರು ಹೊರಗ ಎಲ್ಲಿಗೂ ಹೋಗೂದು ಕಾರಣಿಲ್ಲ. ನಾ ಏನು ನಿಮ್ಮ ಕಾಂಗ್ರೆಸ್ಸಿನ ರಾಜಕೀಯ ದೃಷ್ಟಿಯಿಂದ ಈ ಮಾತು ಹೇಳುವದಿಲ್ಲ. ಹೂಡಿದ ಮದಿವಿ ಮುಂದಬೀಳಬಾರದೆಂಬೂ ವಿಚಾರ- ದಿಂದ ಹೇಳತೀನಿ. ರತ್ನಾಕರರಾವ್, ನೀವು ಇಲ್ಲಿ ಇದ್ದ ವರ್ತಮಾನ ಯಾರಿಗೂ ಹತ್ತದ್ಹಾಂಗ ನಾನು ಎಚ್ಚರಿಕೀ ತೊಗೋತೀನಿ ! ಕುಮುದಾಗಂತೂ ಈ ವಿಷಯಕ್ಕ ಹೇಳಲಿಕ್ಕೇ ಬೇಕಾಗಿಲ್ಲ ! ಇಲ್ಲೇ ಇದ್ದುಬಿಡ್ರಿ ನೀವು ! "

ಕುಮುದೆಯ ಮುಖದ ಮೇಲೆ ಒಮ್ಮೆಲೆ ಸಮಾಧಾನದ ಮೆಲುನಗೆ ಮೂಡಿತು. ತಂದೆಯ ಮಾತುಗಳನ್ನು ಕೇಳಿ, ಅವಳ ಕಣ್ಣು ತೇವದಿಂದ ಕೂಡಿದುವು ಆಶೆ-ಕುತೂಹಲಗಳ ದೃಷ್ಟಿಯಿಂದ ಅವಳು ರತ್ನಾಕರನ ಕಡೆಗೆ ನೋಡಲು ತೊಡಗಿದಳು. ರಂಗಣ್ಣನೂ ರತ್ನಾಕರನ ಮುಖದಲ್ಲಿಯೇ

ತನ್ನ ನೋಟವನ್ನು ನಿಲ್ಲಿಸಿದ್ದ. ರತ್ನಾಕರ ಒಮ್ಮೆಲೆ ಅಭಿಮಾನಭಾವದಿಂದ ಹೇಳಿದ:

" ಧನ್ಯರು ನೀವು ರಾಯರೇ! ನನಗ ನಿಮ್ಮ ಹೃದಯದ ಪೂರ್ಣ ಪರಿಚಯ ಆಗಿರಲಿಲ್ಲ. ಆಗಾಗ ನೀವು ಪ್ರಕಟಿಸತಿದ್ದ ವಿಚಾರ-ವಿಧಾನ ಗಳನ್ನ ಕೇಳಿ, ' ಇಂಥವರ ಹೊಟ್ಟೆಯಿಂದ ಕುಮುದಾನಂಥಾ ಹೆಣ್ಣುಮಗಳು ಹ್ಯಾಂಗ ಹುಟ್ಟಿರಬಹುದು ?' ಅಂತ ನಾನು ಅಂದುಕೊಳ್ಳತಿದ್ದೆ. ನಿಮ್ಮ ಸಹೃದಯಕ್ಕ ಸಾವಿರ ನಮಸ್ಕಾರ! ಕುಮುದಾನ ತಂದಿ ಅನಿಸಿಕೊಳ್ಳಲಿಕ್ಕೆ ತಕ್ಕವರಿದ್ದೀರಿ ನೀವು !"

ಕುಮುದಾ ನಗುನಗುತ್ತ ಕೇಳಿದಳು :

" ಇದೇನು ? ಅಯ್ಯನವರ ವೇಷಾ ಹಾಕಲಿಕ್ಕೆ ಸಾಧ್ಯ ಇಲ್ಲಂತ, ಇನ್ನ-ಮ್ಯಾಲ ಭಟ್ಟಂಗಿಯ ವೇಷಾ ಹಾಕುವ ತಯಾರೀ ನಡಿಸೀರೇನು ?"

ರಂಗಣ್ಣಾ ಗಟ್ಟಿಯಾಗಿ ನಕ್ಕುಬಿಟ್ಟ. ದತ್ತೋಬನೂ ನಗೆಯ ತೆರೆ ಹರಿಸಿದ. ಅನಂತರಾಯರು ಏನನೋ ಮಾತನಾಡಬೇಕೆಂದಿರುವಾಗಲೇ ರತ್ನಾಕರ ಮತ್ತೆ ಆವೇಶದ ಧ್ವನಿಯಲ್ಲಿ ನುಡಿದ :

" ನಾನು ಹೊಗಳಿಕೆಗೆ ಹೇಳತಾ ಇಲ್ಲ ರಂಗಣ್ಣಾ! ನಮ್ಮ ಋಷಿಗಳ ವಂಶದ ರಕ್ತದ ಅಂಶ ಇನ್ನೂ ಅಲ್ಲಲ್ಲೇ ಉಳಿದುಕೊಂಡsದ. ಆದರ, ಇಂದಿನ ವಿಕ್ಷಿಪ್ತವಾತಾವರಣ, ಅದರ ಮ್ಯಾಲ ದಟ್ಟವಾದ ಆವರಣ ಹಾಕಿಬಿಟ್ಟsದ. ಆ ಆವರಣ ಹರಿಯಬೇಕಾದರ, ವ್ಯಕ್ತಿಯ ಜೀವನದೊಳಗ ಒಂದು ಕಾವಿನ ಸಂದರ್ಭ ಬರಬೇಕಾಗತsದ! ಆ ಕಾವು ಆವರಣವನ್ನ ಸುಟ್ಟುಬಿಟ್ಟರ, ನಮ್ಮ ಪುರಾತನ ಋಷಿಗಳ ಹೃದಯದ ಪಾವಿತ್ರ್ಯ ಇಂದಿನವರ ಹೃದಯದೊಳಗೂ ಹೊಳಿಯತಾ ಇರೂದು ಕಾಣಿಸತsದ !"

ಅನಂತರಾಯರು ಗಟ್ಟಿಮುಟ್ಟಾಗಿ ಮಾತಾಡಿದರು :

" ನನಗ ಉಳಿದದ್ದೇನೂ ಗೊತ್ತಿಲ್ಲ ನೋಡ್ರಿ ರಂಗರಾವ್ ! ಗೊತ್ತು ಮಾಡಿದ ಮುಹೂರ್ತಕ್ಕ ತಪ್ಪದೆ ಲಗ್ನ ಆಗಬೇಕು; ಲಗ್ನಕ್ಕ ರತ್ನಾಕರ ರಾಯರೂ ಇರಬೇಕು. ಇಷ್ಟೇ ನನ್ನ ಉದ್ದೇಶ! ಅದಕ್ಕs ನಾನೂ ಬಹಳ ವಿಚಾರಮಾಡಿ, ಒಂದು ನಿರ್ಧಾರಕ್ಕ ಬಂದು ಈ ಮಾತು ಹೇಳೇನಿ!

ರತ್ನಾಕರರಾವ್, ನೀವು ಯಾನ ಸಂಕೋಚಪನ್ನೂ ಹಚ್ಚಿಕೋ ಬ್ಯಾಡ್ರಿ! ಹ್ಯಾಂಗೂ ಕುಮುದಾಗ ಸದ್ಯಕ್ಕ ಸಾಲಿಯಿಲ್ಲ, ಕಾಲೇಜು ಇಲ್ಲ, ಮನಿಯೊಳಗs ಇರತಾಳ! ನಿಮ್ಮ ಅನುಕೂಲತಾ ಎಲ್ಲಾ ನೋಡಿಕೋತಾಳ. ನಿಶ್ಚಿಂತಿಯಿಂದ ಇದ್ದು ಬಿಡರಿ!"

ಕುಮುದಾ-ರತ್ನಾಕರರ ಕಣ್ಣುಗಳು ಮೌನಭಾಷೆಯಲ್ಲಿ ಏನನೋ ಮಾತನಾಡಿದುವು. ಆಗಿನ ರತ್ನಾಕರನ ಮೌನ ಸಮ್ಮತಿಯು ದರ್ಶಕವೇ ಆಗಿತ್ತು. ಕುಮುದೆಗೆ ಅದೆಷ್ಟು ಸಂತೋಷವೊ! ಅಲ್ಲಿ ಅದನ್ನು ಪ್ರಕಟಿಸ-ದಿರುವುದಕ್ಕೆ ಅಸಾಧ್ಯವೆನಿಸಿರಬಹುದು; ಒಮ್ಮೆಲೇ ಮೇಲಕ್ಕೆದ್ದು ಸಂಭ್ರಮದ ಅಡಿಗಳನ್ನಿಡುತ್ತ ಕೋಣೆಯಿಂದ ಹೊರಬಿದ್ದಳು. ಅವಳು ಅಟ್ಟವನ್ನಿಳಿಯುವ ಸಪ್ಪುಳ, ಓಟದ ವೇಗವನ್ನು ಸೂಚಿಸುವಂತಹದಾಗಿತ್ತು. ಡ್ರಾಯ್ವರ್ ದತ್ತೋಬನೂ ತಾನಿನ್ನು ಹೊರಡುವೆನೆಂದು ಸೂಚಿಸಿದ; ಆಗ ರಂಗಣ್ಣ ಹೇಳಿದ :

"ನಾನು ನಾಳೆ ನಿನ್ನ ಗಾಡಿಯಿಂದಲೇ ಹೊರಡಬೇಕು. ಗೊತ್ತದ ಇಲ್ಲೋ ದತ್ತೋಬಾ ?"

"ಇಲ್ಲೀದೆಲ್ಲಾ ಕೆಲಸ ಮುಗೀತು ಹೌದಲ್ರಿ! ನಾನು ನಾಳೆ ಬಸ್ಸು ಇದೇ ರಸ್ತೇದಿಂದನs ಹಾಯಿಸಿಕೊಂಡು ಬರತೀನಿ. ಇಲ್ಲೇ ಕೂತು ಬಿಡ್ರಿ, ಆಯ್ತು!"

ಎಂದು ಹೇಳಿ ಎಲ್ಲರಿಗೂ ನಮಸ್ಕಾರ ಮಾಡಿ, ದತ್ತೋಬ ಹೊರಟು ಹೋದ. ಆಗ ರಾತ್ರಿಯ ಊಟದ ವಿಚಾರ ನಡೆಯಿತು. ಹಸಿವೆ ಯಾರಿಗೂ ಇರಲಿಲ್ಲ. ಒಂಬತ್ತುವರೆಗಂಟೆ ರಾತ್ರಿಯಾದುದರಿಂದ, ಔಷಧಿ ತೆಗೆದುಕೊಳ್ಳುವ ವೇಳೆಯಾಯಿತೆಂದು, ಅನಂತರಾಯರೂ ಇಬ್ಬರನ್ನೂ ಬಿಳ್ಕೊಂಡು ಹೊರಟರು. ಆಗ ಕುಮುದಾ, ಕೆಳಗೆ ಗುಣ-ಗುಣಿಸುವ ಹಾಡು ಅನಂತರಾಯರ ಕಿವಿಗೆ ಬಿದ್ದಿತು :

"ಮಾತೃಭೂಮಿ ಜನನಿ ನಿನ್ನ ಚರಣಸೇವೆ ಮಾಡುವ!
ಪರಮ ಹರುಷದಿಂದ ನಿನ್ನ ಸುಖಕೆ ಪ್ರಾಣ ನೀಡುವ!"

## ೩೩ನೆಯ ಪರಿಚ್ಛೇದ

ಬೆಳಗಿನ ಎಂಟುವರೆ ಗಂಟೆಯ ಬಸ್ಸಿನಿಂದ ರಂಗಣ್ಣ ಹೊರಟುಹೋದ. ರತ್ನಾಕರನು ಒಬ್ಬನೆ ಒಂಟಿಗನಾದ. ತನ್ನಿಂದ ಎಲ್ಲಿ ಅನಂತರಾಯರಿಗೆ ತೊಂದರೆಯಾಗುವುದೋ ಎಂದು ಎದೆದುಗುಡ ಅವನಿಗೆ. ಇಷ್ಟು ಅಜ್ಞಾತ ರೀತಿಯಿಂದ ಹೋಗಿಬಂದರೂ, ತನ್ನ ವೇಷಾಂತರದ ವರ್ತಮಾನ ಪೋಲೀಸರಿಗೆ ತಿಳಿದುದು, ಆತನಿಗೆ ಆಶ್ಚರ್ಯವಿಷಾದಗಳನ್ನುಂಟುಮಾಡಿದ್ದಿತು. ರಂಗಣ್ಣನ ಮದುವೆಯ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಬೇಕಾದರೆ, ತಾನು ಏನು ಮಾಡಬೇಕೆಂಬುದು—ಎಷ್ಟು ಯೋಚನೆ ಮಾಡಿದರೂ—ಆತನ ಬಗೆಗೆ ಹರಿಯಲೊಲ್ಲದಾಯಿತು. ಇನ್ನು ಹತ್ತು ದಿನಗಳನ್ನು ತಾನಿಲ್ಲಿ ಕಳೆಯಬೇಕಾಗಿದೆಯೆಂಬುದರ ನೆನಪಂತೂ, ಕ್ಷಣಕ್ಷಣಕ್ಕೂ ಆತನ ಎದೆಯನ್ನು ದಡದಡಿಸುವಂತೆ ಮಾಡುತ್ತಿದ್ದಿತು. ಕುಮುದೆಯ ಸಾಮೀಪ್ಯದ ವಿಚಾರ, ಒಮ್ಮೆ ಆತನಿಗೆ ಸಮಾಧಾನವನ್ನುಂಟು ಮಾಡಿದರೆ, ಇನ್ನೊಮ್ಮೆ ಹೆದರಿಕೆಯನ್ನು ಉಂಟುಮಾಡುತ್ತಿದ್ದಿತು. ಕುಮುದಾ ಆಗಾಗ ಬಂದು ತನ್ನೊಡನೆ ಮಾತನಾಡುತ್ತಿರಬೇಕೆಂದು ಮನಸ್ಸಿನ ಒಂದು ಪದರು ಹಂಬಲಿಸುತ್ತಿಲಿದ್ದರೆ, ಇನ್ನೊಂದು ಯಾವುದೋ ಪದರು, 'ಕುಮುದೆಯಿಂದ ಆದಷ್ಟು ದೂರವಾಗಿರುವುದು ಒಳ್ಳೆಯದು! ' ಎಂದು ಎಚ್ಚರಿಕೆಕೊಡುತ್ತಲಿದ್ದಿತು.'

ರಂಗಣ್ಣ ಹೊರಟುಹೋದ ಮೇಲೆ, ರತ್ನಾಕರನ ಸ್ನಾನದ ಸಿದ್ಧತೆಯನ್ನೆಲ್ಲ ಕುಮುದೆಯೆ ಮಾಡಿದಳು. ಮೇಲೆ ಬಂದು ರತ್ನಾಕರನ ಧೋತರ-ಟಾವೆಲ್ಲುಗಳನ್ನು ತೆಗೆದುಕೊಂಡು ಹೋದಳು. ಸ್ನಾನಮಾಡಲಿಕ್ಕೆಂದು ರತ್ನಾಕರನು ಕೆಳಕ್ಕಿಳಿದು ಬಚ್ಚಲು ಮನೆಗೆ ಹೋದಾಗ, ಕುಮುದಾ ನೀರನ್ನು ತೋಡುತ್ತಲಿದ್ದಳು. ಬಚ್ಚಲ ಹತ್ತಿರದ ಗೊಳಿಗೆ ಟಾವೆಲ್ಲು ಇದ್ದಿತು. ದೂರದಲ್ಲಿ ಇರಿಸಿದ ಮಣೆಯ ಮೇಲೆ, ಅಚ್ಚುಕಟ್ಟಾಗಿ ನಿರಿಗೆಯಿಕ್ಕಿ ಇರಿಸಿದ ಧೋತರವು ಕಂಡಿತು. ಬಚ್ಚಲಿನ ಅಡ್ಡಗೋಡೆಯ ಮೇಲೆ ಬೆಳ್ಳಿಯ ಬಟ್ಟಲಲ್ಲಿ ಕಮ್ಮೆಣ್ಣೆ; ಅಂದವಾದ ಆಸನದ ಮೇಲೆ, ಮೈಗೆ ಹಾಕಿಕೊಳ್ಳುವ ಶ್ರೀಗಂಧದ ಸಾಬೂನು. ನೀರು ತೋಡುವುದು ಮುಗಿಯುವ ತನಕ ರತ್ನಾಕರ ಬಾಗಿಲಲ್ಲಿಯೆ ನಿಂತಿದ್ದ. ಕುಮುದೆಯ ತುಂಬುದೇಹದ ಹಿಂಬದಿ, ವಿವಿಧ ಭಂಗಿಯಲ್ಲಿ ಕಣ್ಣಿಗೆ ಬೀಳುತ್ತಿದ್ದಿತು. ನೀಳವಾದ ಬಿಡುಮುಡಿ,

ಮೊಣಕಾಲ ವರೆಗೆ ಇಳಿಯಬಿದ್ದಿತ್ತು. ಮುಂಡಿಯ ಮೇಲ್ಬದಿಯಲ್ಲಿ ಮುಡಿದ ಬೇಸಗೆಮಲ್ಲಿಗೆಯ ಅರಳುಮೊಗ್ಗೆಯ ಮಾಲೆ, ಸುತ್ತಲೂ ತನ್ನ ಉನ್ಮಾದಕ ಸುಗಂಧವನ್ನು ಸೂಸುತ್ತಿತ್ತು. ಸ್ನಾನ ತೀರಿಸಿ ಉಟ್ಟುಕೊಂಡ ತೆಳುವಾದ ಗುಲಾಬಿಯ ಪತ್ತಲ, ನಿತಂಬಭಾಗದ ಏರಿಳಿತಗಳನ್ನು ಸ್ಪಷ್ಟವಾಗಿ ತೋರಿಸುತ್ತಲಿತ್ತು. ಒಂದೆ ಒಂದು ಕ್ಷಣ ರತ್ನಾಕರ ಇದನ್ನೆಲ್ಲ ನಿಟ್ಟಿಸಿ ನೋಡಿದ. ಕೂಡಲೆ ಬಾಗಿಲಿನ ಪಕ್ಕಕ್ಕೆ ಸರಿದು, ಕುಮುದಾ ತನಗೆ ಕಾಣದಂತೆ ನಿಂತುಕೊಂಡ. ನೀರನ್ನು ತೋಡುವುದಾದ ಮೇಲೆ ಕುಮುದಾ ಹೊರಗೆ ಬಂದು, ರತ್ನಾಕರನನ್ನು ನೋಡಿ ಮೆಲುನಗೆ ನಗುತ್ತ ಹೇಳಿದಳು :

" ಎಣ್ಣೆ, ಸಾಬೂನು ಅಲ್ಲೇ ಅವ. ಹೆಚ್ಚಿಗೆ ನೀರು ಬೇಕಾದರ ಹಂಡೆಯೊಳಗಿಂದ ತೊಗೊಳ್ಳಬಹುದು !"

ರತ್ನಾಕರ ದಾಕ್ಷಿಣ್ಯದ ನಗೆಯನ್ನು ಬೀರಿ, ಸ್ನಾನ ಮಾಡಲು ಒಳಗೆ ಹೋದ. ಸ್ನಾನತೀರಿಸಿಕೊಂಡು, ಹಾಗೆಯೆ ಅಟ್ಟದ ಮೇಲೆ ಹೊರಟ. ತಾನೇನೋ ತಪ್ಪುಮಾಡಿರುವೆನೆಂಬ ಸಂಕೋಚ ಅವನ ಕರುಳನ್ನು ಮಿಡಿಯತೊಡಗಿತ್ತು. ಕೋಣೆಗೆ ಬಂತು ಕ್ರಾಪುಹಿಕ್ಕಿಕೊಳ್ಳುತ್ತಿರುವಾಗಲೇ ಕುಮುದಾ ಮೇಲೆ ಬಂದು ಹೇಳಿದಳು :

" ನಾನು ಹಣಿಗೆ ಕನ್ನಡಿ ಕೆಳಗೆ ಇಟ್ಟಿದ್ದೆ. ನೀವು ಹಾಂಗs ಮ್ಯಾಲ ಹೊರಟು ಬಂದಿರಿ ! ಉಪಾಹಾರ ತೀರಿಸಿಕೊಂಡೇ ಮ್ಯಾಲೆ ಬಂದು ಬಿಟ್ಟಿದ್ದರ ಆಗತಿತ್ತು !"

ರತ್ನಾಕರ ವಿಚಿತ್ರಭಾವ ತುಂಬಿದ ನಗೆಯೊಂದನ್ನು ನಕ್ಕು ಹೇಳಿದ :

" ನಾನು ಕೆಳಗ ಬಹಳ ಹೊತ್ತು ಇರಬಾರದು. ನಿಮ್ಮ ಮನೆಗೂ ಅನೇಕ ಜನರು ಬಂದು ಹೋಗುವವರು.... ಯಾರ ಕಣ್ಣಿಗೂ ನಾನು ಬೀಳ-ಬಾರದು. ಇಷ್ಟೇ ಅಲ್ಲ, ನೀವು ಕೂಡ ಇಲ್ಲಿಗೆ ಆಗಾಗ ಬರಬೇಡಿರಿ ! ನನಗ ಅನಿಸೂದಂದರ, ಈ ಕೋಣೆಯ ಬಾಗಿಲನ್ನು ಇಕ್ಕಿ, ಹೊರಗಿನಿಂದ ಕೀಲಿ ಹಾಕಬೇಕು–ಅಂತ. ಯಾಕಂದರ, ಸದ್ಯದ ಕಾಲದೊಳಗ ಕಾಂಗ್ರೆಸ್ ಜನರ ಸಂಗತಿ ಅಂದರ, ಕಾಲಕೂಟದ ಸಂಗತಿ- ಅನಿಸೂಹಾಂಗ ಆಗೇದ. ನನ್ನಿಂದ ನಿಮಗ ತೊಂದರಿ ಆಗಬಾರದು !"

ಕುಮುದೆಗೆ ರತ್ನಾಕರನ ಮಾತು ಸಮಂಜಸವಾದುದೆನಿಸಿತು. ಅದ-ರೊಂದಿಗೆ ಒಂದು ಬಗೆಯ ಅಸಮಾಧಾನವೂ ಮನಸ್ಸಿನಲ್ಲಿ ತುಂಬಿಕೊಂಡಿತು. ಹೆಚ್ಚಿಗೇನೂ ಮಾತನಾಡದೆ, ಹಾಗೆಯೆ ಮರಳಿಹೋದಳು. ಆಗ ರತ್ನಾಕರ ತನ್ನ ಮನದಲ್ಲಿಯೇ ಯೋಚಿಸಿದ :

" ನಾನು ಹೆದರಿದ್ದು ಯಾರಿಗೆ ? ಪೋಲೀಸರಿಗೋ ಕುಮುದೆಗೋ ?"

ಆರೇಳು ನಿಮಿಷಗಳಲ್ಲಿಯೆ ಕುಮುದಾ, ಉಪ್ಪಿಟ್ಟು ತುಂಬಿದ ತಟ್ಟೆ, ಹಾಲು ತುಂಬಿದ ಲೋಟಾ ತೆಗೆದುಕೊಂಡು ಮತ್ತೆ ಬಂದಳು. ರತ್ನಾಕರನಿಗೆ ಆಗ ಕುಮುದಾ ಒಂದು ಉತ್ಸಾಹದ ಪ್ರತಿಮೆಯಂತೆ ಕಂಡಳು. ನೋಡಬೇ-ಕೆಂಬ ಭಾವನೆಯ ಬಲ ಅನಿವಾರ್ಯವಾದಾಗ, ಅವಳನ್ನು ನೋಡುವನು; ಮತ್ತೆ ಕೂಡಲೆ ನೋಟವನ್ನು ಬೇರೆ ಕಡೆಗೆ ತೊಡಗಿಸುವನು. ಉಪಾಹಾರ ಮುಗಿಯುವ ವರೆಗೂ ಕುಮುದಾ ಅಲ್ಲಿಯೆ ನಿಲ್ಲುವವಳಿದ್ದಳೇನೋ ! ಆದರೆ ಒಮ್ಮೆಲೆ ಆಕೆಗೆ ಅನಂತರಾಯರ ಕೆಮ್ಮಿನ ಶಬ್ದ ಕಿವಿಗೆ ಬಿದ್ದಿತು. ಕೂಡಲೆ ಮಿಂಚಿನ ಗತಿಯಿಂದ ಕೆಳಗಿಳಿದು ಹೋದಳು; ರತ್ನಾಕರ ಆ ರುಚಿ-ಯಾದ ಉಪ್ಪಿಟ್ಟನ್ನು ಚಮಚೆಯಿಂದ ಬಾಯಿಗೆ ಹಾಕಿಕೊಳ್ಳುತ್ತಲೆ ಯೋಚಿಸ ತೊಡಗಿದ :

" ಇದೇನಿದು ನನ್ನ ದೈವದ ಆಟ ! ಇಷ್ಟರಲ್ಲಿಯೇ ನಾನು ಸೆರೆಮನೆ-ಯನ್ನು ಸೇರಿ, ಅಲ್ಲಿಯ ಹಸಿಬಿಸಿ ರೊಟ್ಟಿ, ಹಸಿರಾಣಿಗಳನ್ನು ತಿನ್ನಬೇಕಾಗಿತ್ತು! ರೌದ್ರಭಾವದ ಜೇಲಿನಾಳುಗಳ ಭೀಕರ ಮುಖಮುದ್ರೆಯನ್ನು ನೋಡುತ್ತ ಕಾಲ ಕಳೆಯಬೇಕಾಗಿತ್ತು. ತಗಣಿ-ಚಿಕ್ಕಾಡುಗಳಿಂದ ತುಂಬಿದ ಸೆರೆಮನೆಯ ಒರಟುಗಂಬಳಿಯ ಮೇಲೆ ಮಲಗಿಕೊಳ್ಳಬೇಕಾಗಿತ್ತು ! ನಡುವೆ ಇದೆಲ್ಲಿಯ ಸ್ವರ್ಗಭೋಗ ನನ್ನ ಪಾಲಿಗೆ ಬಂದಿದೆ ? ಇದು ನನ್ನ ಪೂರ್ವಜನ್ಮದ ಯಾವ ಯೋಗಭ್ರಷ್ಟತ್ವದ ಮಧುರಫಲ ? ಈ ಮಧುರಫಲದಿಂದ ಮೈಮರೆತು ನಾನು ಕರ್ತವ್ಯಚ್ಯುತನಾಗುವೆನೋ ಏನು ? ಆದರ್ಶದ ಅವ್ಯಕ್ತ ಸತ್ಯ-ಸೌಂದರ್ಯಗಳಿಗೆ ಸರಿಸಮವಾಗಿಯೇ ಈ ಐಹಿಕದ ವ್ಯಕ್ತ ಸತ್ಯ-ಸೌಂದರ್ಯ ಗಳೂ ಮನಸ್ಸು-ಹೃದಯಗಳನ್ನು ಆಕರ್ಷಿಸಬಲ್ಲವೆಂಬುದರ ಅನುಭವ, ಇದು ವರೆಗೂ ನನಗೆ ಇರಲಿಲ್ಲ. ಇಂತಹ ಐಹಿಕ ಸತ್ಯ-ಸೌಂದರ್ಯಗಳು ಶಾಶ್ವತ-ವಾಗಿ ಇದ್ದುಬಿಟ್ಟರೆ, ಆ ಆದರ್ಶದ ಅವ್ಯಕ್ತ ಸತ್ಯ-ಸೌಂದರ್ಯಗಳನ್ನು

ಮನುಷ್ಯ ಏಕೆ ಬೆನ್ನಟ್ಟಬೇಕು ? ಆದರೆ ಈ ವ್ಯಕ್ತ ಸತ್ಯ-ಸೌಂದರ್ಯಗಳು ಶಾಶ್ವತವೆ ? ಅಲ್ಲ; ಅಲ್ಲ ! ಇವು ಕಾಲಗರ್ಭದಲ್ಲಿ ಅಡಗಿ ಹೋಗುವಂತಹವು. ವರ್ತಮಾನ ಜೀವನದ ಸುಖದೊಂದಿಗೆ ಭವಿಷ್ಯದ ಮರಣದ ದುಃಖವನ್ನೂ ಅನುಭವಿಸಲು ಹಚ್ಚುವಂತಹವು. ಇವು ಕಾಲನ ಸೂತ್ರದ ಗೊಂಬೆಗಳು. ಇವಕ್ಕೆ ಚ್ಯುತಿಯಿದೆ, ನಾಶವಿದೆ, ಪ್ರಲಯವಿದೆ. ಆದರೂ ಎಂತಹ ಮಾನವ-ರನ್ನೂ ತಮ್ಮ ಕಡೆಗೆ ಸೆಳೆದು ಸಿಲ್ಲಿಸಿಕೊಳ್ಳುವಂತಹ ಶಕ್ತಿ ಇವಕ್ಕಿದೆ. ಈ ಉಪ್ಪಿಟ್ಟನ್ನು ತಿನ್ನಬಾರದೆಂದು ಬಿಟ್ಟರೂ, ತಿನ್ನಬೇಕೆಂಬ ಮನದ ಆಶೆಯನ್ನು ಕಡಿಮೆ ಮಾಡಲಿಕ್ಕಾಗುವುದೆ ? ಕುಮುದೆಯನ್ನು ನೋಡಬಾರದೆಂದು ನಾನು ಕಣ್ಣುಮುಚ್ಚಿಕೊಂಡರೂ, ನೋಡಬೇಕೆಂದು ತವಕಿಸುವ ಮನಸ್ಸನ್ನು ಬಿಗಿದು ಹಿಡಿಯಲಿಕ್ಕಾಗುವುದೆ ?...."

ತಿಂಡಿಯನ್ನು ಮುಗಿಸಿ ರತ್ನಾಕರ ಹಾಲನ್ನು ಕುಡಿಯುತ್ತಿದ್ದ. ಕುಮುದಾ ಕೈಯಲ್ಲೊಂದು ಕೀಲಿಯನ್ನು ಹಿಡಿದುಕೊಂಡೇ ಮೇಲೆ ಬಂದು ತೀರ ಮೆಲ್ಲಗೆ ಹೇಳಿದಳು :

" ನೀವು ಮ್ಯಾಲೆ ಬಂದದ್ದೇ ಒಳ್ಳೆಯದಾಯಿತು. ಕೆಳಗ ಕಾಕಾನ ಗುರುತಿನವರು ಯಾರು ಯಾರೋ ನಾಲ್ಕೈದು ಜನರು ಬಂದು ಕೂತು-ಕೊಂಡಾರ. ಅವರೊಳಗ ಒಬ್ಬರು ಪೋಲೀಸ್ ಅಧಿಕಾರಿಗಳೂ ಇದ್ದಾಂಗ ಕಾಣಿಸತದ. ಆದರ ಅವರೆಲ್ಲಾರೂ ಬಂದದ್ದು ಏನೋ ಬ್ಯಾಂಕಿನ ಕೆಲಸದ ಸಲುವಾಗಿ; ಇನ್ನೇನೂ ಇಲ್ಲ ! "

ರತ್ನಾಕರ ಮಾತನೇನೂ ಆಡಲಿಲ್ಲ. ಕುಮುದೆಯ ಕಡೆಗೆ ನೋಡಿ ಮೆಲುನಗೆಯನ್ನು ಮಾತ್ರ ಹರಿಸಿದ. ಕುಮುದಾ ಉಪಾಹಾರದ ತಟ್ಟೆ-ಪಾತ್ರೆಗಳನ್ನು ತೆಗೆದುಕೊಂಡು ಹೇಳಿದಳು :

" ಏನೇ ಇರಲಿ, ನೀವು ಹೇಳಿದಂತೆ, ಕೋಣೆಯ ಹೊರಚಿಲಕ ಹಾಕಿ ಕಿಲಿ ಜಡಿದೇ ಬಿಡತೇನಿ ! " ಎಂದು ನಡೆದು ಹೊರಗೆ ಹೋದಳು. ಬಾಗಿಲಿಗೆ ಬೀಗ ಹಾಕಿದಳು. ಒಳಗೆ ರತ್ನಾಕರ ಸುಮ್ಮಗೆ ಕುಳಿತಿದ್ದ.

* * * * *

ಅನಂತರಾಯರು ತಮ್ಮ ನಿತ್ಯದ ಕೆಲಸಕ್ಕೆ ಬ್ಯಾಂಕಿಗೆ ಹೊರಟು-ಹೋಗಿದ್ದಾರೆ. ಅವರು ಹೊರಟುಹೋದ ಮೇಲೆಯೇ ತಲೆಬಾಗಿಲನ್ನು

ಭದ್ರವಾಗಿ ಇಕ್ಕಿ ರತ್ನಾಕರನ ಊಟವಾಯಿತು. ಊಟವಾದ ಮೇಲೆ ಮತ್ತೆ ಯಥಾಸ್ಥಿತ—ಅಟ್ಟದ ಕೋಣೆಯ ಏಕಾಂತವಾಸ. ವೇಣಕ್ಕ ಬಂದು ಹೇಳಿ ಹೋದುದರಿಂದ, ತುಂಗಮ್ಮ ನಾಲ್ಕುವರೆ ಗಂಟೆಗೆ ಅವರ ಮನೆಗೆ ಹೋಗಬೇಕಾಯಿತು. ತಂದೆ ಐದುವರೆ ಗಂಟೆಗೆ ಬರುವವರಿದ್ದುದರಿಂದ, ಕುಮುದಾ ಮನೆಯಲ್ಲಿಯೆ ಇರಬೇಕಾಯಿತು. ತಾಯಿ ಹೊರಟುಹೋದ ಮೇಲೆ ಕುಮುದಾ, ತಲೆಬಾಗಿಲನ್ನು ಮುಂದೆ ಮಾಡಿಕೊಂಡು, ಪಡಸಾಲೆಯ ಆರಾಮ ಕುರ್ಚಿಯೊಂದರ ಮೇಲೆ ವಿಶ್ರಮಿಸಿದಳು. ಅಟ್ಟದ ಕೋಣೆಯಲ್ಲಿ ರತ್ನಾಕರ ಒಬ್ಬನೇ ಒಬ್ಬ; ಕೆಳಗೆ ಕುಮುದಾ ಒಬ್ಬಳೇ ಒಬ್ಬಳು. ಕುಳಿತಿದ್ದ ಹಾಗೆಯೆ–ಬೆಳಗಿನಲ್ಲಿ ಸ್ನಾನಮಾಡಿದ ಮೇಲೆ ಕೋಣೆಯಲ್ಲಿ ಕ್ರಾಪು ಹಿಕ್ಕಿಕೊಳ್ಳುತ್ತ ನಿಂತ–ರತ್ನಾಕರನ ರೂಪ ಕಣ್ಣೆದುರು ಬಂದು ನಿಂತಿತು. ತೋಳಿಲ್ಲದ ಒಳಅಂಗಿ ಮೈಯಲ್ಲಿ; ಶುಭ್ರವಾದ ಖಾದಿಯ ಧೋತರ ಉಟ್ಟಿದ್ದಾನೆ. ಬಿಳಿಗೆಂಪು ಮೈಬಣ್ಣ. ವ್ಯಾಯಾಮ ಮಾಡಿ ಹುರಿಗೊಂಡ ತೋಳುಗಳು. ಅಗಲವಾದ ಎದೆ. ಸ್ನಾನ ಮಾಡಿದುದರಿಂದ ಹಸನು-ಹಸನಾಗಿ ಕಾಣುವ ತೇಜಸ್ವಿಯಾದ ಮುಖ. ಮುಖದ ಅಂದವನ್ನು ಹೆಚ್ಚಿಸುವ ಕರಿಗುರುಳಿನ ಕ್ರಾಪು. ಹೊಳೆ-ಹೊಳೆಯುವ ಕಣ್ಣುಗಳು. ನೀಳವಾದ ತುದಿಮೂಗು. ತಾಂಬೂಲವನ್ನು ತಿಂದವರಂತಹ ಚೆಂದುಟಿ. ಅದರ ಮೇಲೆ ಗಂಭೀರಭಾವದ ಮೆಲುನಗೆ. ಕುಮುದಾ ಹಗಲುಗನಸಿನ ಈ ರೂಪವನ್ನು ನೋಡಿಯೆ ನೋಡಿದಳು. ಮನದಲ್ಲಿಯೆ ಯೋಚಿಸತೊಡಗಿದಳು :

"ಹೆಂಗುಸಿನ ನಾಚಿಕೆ, ಎಷ್ಟೊಂದು ಅಪ್ರಾಮಾಣಿಕತೆಯ ತೆರೆಯನ್ನು ಹೊದ್ದುಕೊಳ್ಳಲು ಹಚ್ಚುವುದು ! ರತ್ನಾಕರನ ರೂಪವನ್ನು ಕಣ್ಣು ತುಂಬ ನೋಡುವೆನೆಂದರೆ ನೋಡಗೊಡದು. ನಾನು ರಂಗಣ್ಣನೊಂದಿಗೆ ಎಷ್ಟು ಸಲುಗೆಯಿಂದ ವರ್ತಿಸುತ್ತಿದ್ದೆ. ರತ್ನಾಕರನಲ್ಲಿ ಸಲುಗೆಯನ್ನು ತೋರಿಸಲು ನನ್ನ ಮನಸ್ಸು ಏಕೆ ಹಿಂಜರಿಯುತ್ತಲಿದೆ ? ರತ್ನಾಕರನ ವಿಷಯದಲ್ಲಿ ಆತ್ಮೀಯತೆ ಕಡಿಮೆಯಿದೆಯೋ ನನ್ನಲ್ಲಿ ? ಛೇ ಛೇ ! ಅದೆಂದಿಗೂ ಸಾಧ್ಯವಿಲ್ಲ. ಆದರೆ ಆತ್ಮೀಯತೆ, ಬೇರೆ ಬೇರೆ ವ್ಯಕ್ತಿಗಳ ಬಳಿ ಬೇರೆ ಬೇರೆ ವಿಧವಾಗಿ ವರ್ತಿಸಹಚ್ಚುವುದೋ ಏನೋ ! ರಂಗಣ್ಣನೊಂದಿಗೆ ಬೇಕಾದ ಹಾಗೆ ಮಾತನಾಡಿದೆ; ಪರಿಚಯ ಹೆಚ್ಚಿದಂತೆ ನಗೆಯಾಟವಾಡಿದೆ; ಏಡಿಸಿ ನುಡಿದೆ. ಆಗೆಲ್ಲ

ನಾನು ಸಹಜಭಾವದಲ್ಲಿಯೇ ಇರುತ್ತಿದ್ದೆ. ಆದರೆ ರತ್ನಾಕರನೊಂದಿಗೆ ಮಾತನಾಡುವ ಸಂದರ್ಭವೆಂದರೆ, ಇತ್ತೀಚೆಗೆ ಹೃದಯ ಅಸ್ಥಿರವಾಗುತ್ತಿದೆಯೇಕೆ ? ಮೈಯಲ್ಲಿ ನಡುಕ ತಲೆದೋರುವುದೇಕೆ ? ಆದರೂ ಆತ ತೃಪ್ತಿಪಡುವಂತೆ ಆತನ ಪ್ರತಿಯೊಂದು ಕಾರ್ಯದಲ್ಲಿಯೂ ಭಾಗವಹಿಸಬೇಕೆಂದು ನನಗೆ ಎನಿಸುವುದೇಕೆ ? ಆತನ ಸಮೀಪದಲ್ಲಿಯೆ ಇದ್ದು ಆತನ ಸವಿನುಡಿಯನ್ನು ಕೇಳಬೇಕೆಂದು ಎನಿಸುವುದೇಕೆ ? ಇದೆಲ್ಲವೂ ನಾನು ಎಂದೂ ಕಾಣದ ಅನುಭವ ! ಇದರ ಪರಿಣಾಮವನ್ನು ನಾನು ಏನು ಅನುಭವಿಸಬೇಕಾಗುವುದೊ !....

....ಮದುವೆಯೆಂಬ ಮಾತನ್ನು ತಿರಸ್ಕರಿಸುತ್ತಿದ್ದ ನನಗೆ, ಅದೇ 'ಮದುವೆ' ಎಂಬ ಮಾತು ಮೈಯನ್ನು ಏಕೆ ಜುಮ್ಮೆದಟ್ಟಿಸುತ್ತಲಿದೆ ! ಅಂದು ನಮ್ಮ ಸರಸತ್ತೆ 'ನಿನ್ನ ಮನಸಿನೊಳಗಿನ ಮಾತನ್ನ ತಾಯಿಯ ಮುಂದ ಹೇಳತಾ ಇರು' ಎಂದು ಹೇಳಿದರು. ಈಗ ನಾನು ತಾಯಿಯೆದುರು ಏನು ಹೇಳಬೇಕು ? 'ರತ್ನಾಕರನೊಂದಿಗೆ ನನ್ನ ಮದುವೆ ಮಾಡು !' ಎಂದು ಹೇಳಲೆ ? ಅಬ್ಬಾ, ಈ ಮಾತನ್ನು ಬಾಯಿಬಿಚ್ಚಿ ಹೇಗೆ ಹೇಳಬೇಕು ? ಒಂದು ವೇಳೆ ಗಟ್ಟಿ ಮನಸ್ಸುಮಾಡಿ, ನಾಚಿಕೆ-ಸಂಕೋಚಗಳನ್ನ ಬಿಟ್ಟು ಹೇಳಿದೆ; ಹೇಳಿದರೂ ಈ ಮಾತು ಸಾಧ್ಯವಾಗುವುದೆ ? ಸ್ವಾತಂತ್ರ್ಯದ ಹೋರಾಟದಲ್ಲಿ ಸೈನಿಕರಾಗಿ ಕಾದಾಡಿ, ಸೆರೆಮನೆಗೆ ಹೊರಟು ನಿಂತ ಅವರು, ಈಗ ಮದುವೆ ಮಾಡಿಕೊಳ್ಳಲು ಸಿದ್ಧರಾಗುವರೆ ? ಯಾಕೆ ಸಿದ್ಧರಾಗಬಾರದು ? ಸಿದ್ಧರಾಗುವಂತೆ ಮನಸ್ಸನ್ನು ತಿರುಗಿಸಲಿಕ್ಕೆ ಸಾಧ್ಯವಿಲ್ಲವೆ ?....

....ಇಲ್ಲ, ಸಾಧ್ಯವಿಲ್ಲ ! ಈಗ ಮದುವೆಗೆ ಅವರ ಮನಸ್ಸನ್ನು ಒಲಿಸುವುದೆಂದರೆ,ಅವರನ್ನು ಈ ವೀರವೃತ್ತಿಯಿಂದ ಪರಾಙ್ಮುಖರನ್ನಾಗಿ ಮಾಡಬೇಕು. ಎಂದರೆ ಸರಕಾರಕ್ಕೆ ಕ್ಷಮೆ ಬೇಡಲು ಹಚ್ಚಬೇಕು. ಏನು ? ರತ್ನಾಕರ ಹೇಡಿಯಂತೆ ಕ್ಷಮೆ ಬೇಡಬೇಕೆ? ಒಂದು ಹೆಣ್ಣಿನೊಂದಿಗೆ ಇದ್ದು ಬಾಳುವುದಕ್ಕೆ ತಮ್ಮ ವೀರವೃತ್ತಿಯ—ಆದರ್ಶದ ಹೋಳಿಯಾಡಬೇಕೆ ? ಬೇಡ, ಬೇಡ, ಇದನ್ನು ನಾನೆಂದೂ ನೋಡಲಾರೆ! ರತ್ನಾಕರನ ವೀರವೃತ್ತಿ ಕೊನೆಯ ವರೆಗೂ ಬಾಳಿ ಗೆಲವನ್ನು ಪಡೆಯಬೇಕು ! ದೂರದ ಗುರಿಯನ್ನು ಸಾಧಿಸಿ ಜಯಶಾಲಿಯಾಗಬೇಕು. ಅದನ್ನು ನಾನು ಕಣ್ಣಾರೆ ನೋಡಿ ಹಿರಿಹಿರಿ ಹಿಗ್ಗಬೇಕು !....

....ರತ್ನಾಕರನದು ಹೇಡಿಯ ಮುಖವೇ? ಗೆಲವನ್ನು ಗಳಿಸುವ ನಿಶ್ಚಯದ ವೀರನ ಮುಖ! ಅಹುದು, ವೀರನ ಮುಖ! ಮತ್ತೆ ಮತ್ತೆ ಅದನ್ನು ನೋಡಬೇಕೆನಿಸುವುದು. ಈಗ ಮೇಲೆ ಹೋಗಿ, ಕಣ್ಣು ತಣಿಯುವಂತೆ ನೋಡಿಬರಲಿ ?...."

ಕುಮುದಾ ದಿಗ್ಗನೆ ಮೇಲಕ್ಕೆದ್ದಳು. ಮುಂದಡಿಯಿಟ್ಟು ನಡೆದು—ಉತ್ಸಾಹದಿಂದ—ನಾಲ್ಕೈದು ಮೆಟ್ಟಿಲು ಅಟ್ಟದ ಪಾವಟಿಗೆ ಹತ್ತಿದಳು. ಅಲ್ಲಿಯೇ ನಿಂತು ಏನನ್ನೋ ಯೋಚಿಸಿದಳು. ಮತ್ತೆ ಮರಳಿ ಇಳಿದು ಬಂದು, ಮೊದಲಿನ ಕುರ್ಚಿಯ ಮೇಲೆಯೆ ಕುಳಿತಳು; ಯೋಚಿಸತೊಡಗಿದಳು.

"ಈಗ ಕಾರಣವಿಲ್ಲದೆ ಮೇಲೆ ಹೋದರೆ, ರತ್ನಾಕರ ನನ್ನನ್ನು ವಿಪರೀತವಾಗಿ ಭಾವಿಸಬಹುದೇನು ? ಮನೆಯಲ್ಲಿ ನನ್ನ ಹೊರತು ಇನ್ನಾರೂ ಇಲ್ಲವೆಂಬುದು ಅವನಿಗೂ ಗೊತ್ತಿದೆ. ನಾನು ಅವನನ್ನು ನೋಡಲು ಬಯಸುತ್ತಿರುವಂತೆ, ಆತನೂ ನನ್ನನ್ನು ನೋಡಲು ಬಯಸುತ್ತಿರಲಿಕ್ಕಿಲ್ಲವೇನು ? ನಾನು ಸಮೀಪದಲ್ಲಿ ಇರಬೇಕೆಂದು ಆತ ಅಪೇಕ್ಷಿಸುತ್ತಿರಲಿಕ್ಕಿಲ್ಲವೇನು ? ಅಪೇಕ್ಷಿಸುತ್ತಿರಬಹುದು! ಆತನಿಗೂ ನನ್ನಂತೆಯೆ ನಾಚಿಕೆ-ಸಂಕೋಚಗಳು ತಡೆಯುತ್ತಿದ್ದರೆ ? ಅಹುದು, ಹೀಗೆಯೆ ಇರಬಹುದು. ನಾಚಿಕೆ-ಸಂಕೋಚ-ಗಳು ಇಬ್ಬರನ್ನೂ ಹೀಗೆ ತಡೆದುಬಿಟ್ಟರೆ, ಒಬ್ಬರನ್ನೊಬ್ಬರು ಸಮೀಪಿಸುವುದಕ್ಕೆ ಮಾರ್ಗವೇನು ? ನಾನೇ ಗಟ್ಟಿ ಮನಸ್ಸು ಮಾಡಬೇಕು. ಹೇಗೂ ಅಪ್ಪ ಬರಲಿಕ್ಕೆ ಇನ್ನೂ ಅರ್ಧತಾಸು ವಿಲಂಬವಿದೆ. ನಾನು ಮೇಲೆ ಹೋಗಿ, ಆತನನ್ನು ಕಂಡು ಮಾತನಾಡಿಯೆ ಬರಬೇಕು...."

ಮತ್ತೆ ಇದ್ದುದಿದ್ದಂತೆ ಮೇಲಕ್ಕೆ ಎದ್ದಳು. ಅಟ್ಟದ ಪಾವಟಿಗೆಗಳನ್ನು ಏರಲು ತೊಡಗಿದಳು. ಆರೇಳು ಮೆಟ್ಟಿಲುಗಳನ್ನು ಏರಿರಬಹುದು; ಅಷ್ಟರಲ್ಲಿಯೆ ತಲೆಬಾಗಿಲ ಹೊರಗಿನಿಂದ 'ಕುಮುದಾ !....ಕುಮುದಾ !' ಎಂದು ಅನಂತರಾಯರು ಕರೆದ ಕೂಗು ಕೇಳಿಸಿತು. ನಿರಾಶೆಗೊಂಡವಳಾಗಿ ಕುಮುದಾ ಕೆಳಗಿಳಿದಳು. ಬೇಗಬೇಗನೆ ನಡೆದು ಹೋಗಿ ತಲೆಬಾಗಿಲನ್ನು ತೆರೆದಳು. ಅನಂತರಾಯರು ಒಳಗೆ ಬರುತ್ತಿರುವಾಗಲೇ ಮೆಲ್ಲಗೆ ಹೇಳಿದರು :

"ಅವರು ಮನೆಯೊಳಗ ಒಬ್ಬರೇ ಇದ್ದಾರಂತ, ಸ್ವಲ್ಪ ಮೊದಲೇ ಬಂದು ಬಿಟ್ಟೆ !"

೦

ಕುಸುಮಾ ಮಾತನ್ನೇನೂ ಆಡಲಿಲ್ಲ. ಅನಂತರಾಯರು ಮನೆಯೊಳಗೆ ಬಂದು ಆಫೀಸಿನ ಬಟ್ಟೆಗಳನ್ನು ಕಳೆದು ಇಡುತ್ತಿರುವಾಗ ಹೇಳಿದರು :

"ನಾನು ಈಗ ಅಟ್ಟದ ಮೇಲೆ ಹೋಗತೀನಿ ನೀನು ಕಾಫೀ ಮಾಡತೀಯಲ್ಲಾ ?"

ಕುಮುದಾ ಮಾತನೇನೂ ಆಡದೆ, ಬೀಗದ ಕೈಯನ್ನು ತಂದೆಯ ಕೈಯಲ್ಲಿ ಕೊಟ್ಟಳು. ಅನಂತರಾಯರು ಆತುರದ ಹೆಜ್ಜೆಗಳನ್ನು ಹಾಕುತ್ತ ಅಟ್ಟವನ್ನೇರಿಹೋದರು. ಕುಮುದಾ ಸ್ಟೋವ್ ಹೊತ್ತಿಸಲು ನಡುಮನೆಗೆ ಹೋದಳು.

* * *

ಹತ್ತುಗಂಟೆ ರಾತ್ರಿ ಮೀರಿ ಹೋಗಿದೆ. ಹೊರಗಿನಿಂದ ಕೋಣೆಯ ಬಾಗಿಲು ಬಡಿದಂತೆ ಎನಿಸಿದುದರಿಂದ, ಬಿದ್ದುಕೊಂಡಿದ್ದ ರತ್ನಾಕರನು ಎದ್ದು ಬಂದು ಮೆಲ್ಲಗೆ ಕೇಳಿದ :

"ಯಾರು ?"

"ನಾನು !" ಅನಂತರಾಯರ ಧ್ವನಿ.

ರತ್ನಾಕರ ಬಾಗಿಲನ್ನು ತೆರೆದು, ಒಳಗೆ ಬರಮಾಡಿಕೊಂಡ. ಹೆದರಿಕೆಯ ಧ್ವನಿಯಲ್ಲಿ ಅನಂತರಾಯರು ಹೇಳಿದರು :

"ಏನೋ ಘಾತ ಆದ್ಹಾಂಗ ಕಾಣಿಸತsದ !"

ರತ್ನಾಕರನೂ ಬೆದರಿದ ಧ್ವನಿಯಲ್ಲಿ ಕೇಳಿದ :

"ಯಾಕ ? ಏನಾಯ್ತೀಗ ?"

"ಕೆಳಗೆ ಒಬ್ಬರು ಯಾರೋ ಬಂದಾರ ! ಪೋಲೀಸ ಇರಬಹುದೋ ಏನೋ ! ಯಾಕಂದರ, ಆತನ್ನ ಈ ಮೊದಲು ನಾನು ಪೋಲೀಸ್ ಡ್ರೆಸ್ಸಿ-ನೊಳಗ, ಅನೇಕ ಸಾರೆ ನೋಡಿದ್ಹಾಂಗ ಆದ. ಆತಗ ನೀವು ಇಲ್ಲಿ ಇರುವ ವರ್ತಮಾನ ಹ್ಯಾಂಗ ತಿಳದsದೋ ಏನೋ ! ನಿಮ್ಮನ್ನ ಕಂಡುಹೋಗಬೇಕಂತ ಬಂದಾನ !"

"ಆತನ ಹೆಸರು ಕೇಳಿದಿರೇನು ನೀವು ?"

" ಕೇಳಿದೆ. ಹನುಮಂತಪ್ಪ ಅಂತ ಅವನ ಹೆಸರು ! ನಾನು ಆತಗ ಬೇಕಾದಷ್ಟು ಹೇಳಿದೆ; ಇಲ್ಲಿ ನಮ್ಮಲ್ಲಿ ಯಾರೂ ಇಲ್ಲಲ್ಲಂತ ! ಆದರ ಆತ ಕೇಳವೊಲ್ಲ. ' ನನಗ ಗೊತ್ತದರೀ ! ಅವರು ಇಲ್ಲಿ ಇದ್ದಾರಂಬೂದನ್ನ ಡ್ರಾಯ್ವರ್ ದತ್ತೋಬಾ ತಿಳಿಸ್ಯಾನ ! ' ಅಂತ ಒಳ್ಳೇ ವಿಶ್ವಾಸದಿಂದಲೇ ಮಾತಾಡತಾನ. ನನಗೇನೂ ತಿಳಿಯದ್ದಾಂಗ ಆಯ್ತಂತ, ಅವರನ್ನ ಸ್ವಲ್ಪ ಕೂತಿರಲಿಕ್ಕೆ ಹೇಳಿ, ಲಘುಶಂಕೆಗೆ ಹೋಗತೀನಂಬೂ ನೆವ ಹೇಳಿ, ಹಿಂದಿನ ನಿಚ್ಚಣಿಕೀ ಹತ್ತಿ ಇಲ್ಲಿಗೆ ಬಂದೆ !"

ರತ್ನಾಕರ ನಗುತ್ತ ಹೇಳಿದ :

" ಆತನ್ನ ಇಲ್ಲಿಗೆ ಕರಕೊಂಡು ಬರ್ರಿ ! ಘಾತ ಆಗುವ ಪ್ರಸಂಗ ಏನೂ ಇಲ್ಲ. ನಿನ್ನಿನ ದಿವಸವೇ ನಾನು, ಡ್ರಾಯ್ವರ್ ದತ್ತೋಬಾನ ಕಡಿಂದ ಹೇಳಿ ಕಳಿಸಿದ್ದೆ !"

ಅನಂತರಾಯರಿಗೆ ತುಂಬ ಸಮಾಧಾನವಾಯಿತು. ಕೂಡಲೆ ಮುಂದಿನ ಪಾವಟಿಗೆಗಳಿಂದಲೇ ಕೆಳಗಿಳಿದರು; ಹನುಮಂತಪ್ಪನನ್ನು ಅಟ್ಟದ ಮೇಲೆ ಕರೆದುಕೊಂಡು ಹೋದರು. ರತ್ನಾಕರ ಅವನನ್ನು ಆದರದಿಂದ ಬರಮಾಡಿಕೊಂಡು, ಕುರ್ಚಿಯೊಂದರ ಮೇಲೆ ಕುಳ್ಳಿರಿಸಿದ. ಅನಂತರಾಯರಿಗೂ ಕುಳಿತುಕೊಳ್ಳಲು ಬಿನ್ನವಿಸಿದ. ತಾನೂ ಕುಳಿತುಕೊಂಡು ಕೇಳಿದ :

" ಮತ್ತೇನು ವಿಶೇಷ ಸುದ್ದಿ ಹನುಮಂತಪ್ಪಾ ? "

" ಎಲ್ಲಾ ಗೊಂದಲಕ್ಕಿಟ್ಟೈತಿರಿ ರಾಯರ ! ಕಟ್ಟೀ ಇನ್‌ಸ್ಪೆಕ್ಟರ್ ಸಾಹೇಬರನ್ನ ಡಿಗ್ರೇಡ್ ಮಾಡಿ, ಕಲಘಟಿಗೀ ಫೌಜದಾರ್ ಜಾಗಾಕ್ಕ ಹಾಕಿದ ಹುಕುಮು, ನಿನ್ನಿನ ದಿನಾನss ಬಂದೈತಿರಿ ! "

" ಆಂ ? ಡಿಗ್ರೇಡು ಮಾಡಿದರss ? ಅದ್ಯಾಕ ? "

" ಯಾಕಂದರ ಏನ್ರಿ ? ಅವರು ಮುದ್ದಾಪುರಕ್ಕ ನಿಮ್ಮನ್ನ ಹಿಡ-ಕೊಂಡು ಬರಲಿಕ್ಕೆ, ಕೂಡಲೇ ಪೋಲೀಸ್ ಪಾರ್ಟೀ ಕಳಿಸಲಿಲ್ಲ....ಅಂಬೂದು ಮುಖ್ಯ ಅಪರಾಧರಿ ! ಅಲ್ಲದೇ, ಇನ್ನೂ ಏನೇನೋ ಕಸೂರೀ ತಗದಾರ್ರಿ ಅವರ ಮ್ಯಾಲ ! "

" ಸರಿ ! ಪಾಪ, ನನ್ನ ಸಲುವಾಗಿ ಕಟ್ಟೆಯವರು ಆಹುತಿ ಬಿದ್ದಾಂಗ. ಆಯ್ತs ?.... ಆದದ್ದಕ್ಕ ಈಗೇನು ಮಾಡೂದು ? ಆಯ್ತು, ಈಗ ಅವರ ಜಾಗಾಕ್ಕ ಯಾರು ಬರುವವರಿದ್ದಾರ ? "

" ಉಮರ್ ಖಾನ್ ಸಾಹೇಬ್ ಅಂತರಿ ! ಬಹಾಳ ದುಷ್ಟ ಸ್ವಭಾವದವ-ನಂತ ! ಈ ಚಳವಳೀ ಜನರನ್ನ ಕಂಡರ, ಹಾಂಗs ಕೆಂಡಾ ಕಾರತಾನಂತ ! "

ರತ್ನಾಕರ ಗಂಭೀರಭಾವದಿಂದ ನುಡಿದ :

" ಓ, ಅವನs ? ಬೆಳಗಾಂವಿಯೊಳಗ ಸಾಲಿಯ ಹುಡುಗರ ಮ್ಯಾಲ ಲಾಠೀಚಾರ್ಜ ಮೂಡಿಸಿದ ನರವೀರ! ಸರಿ ! ಹಾಂಗಾದರ, ಇನ್ನ ಮ್ಯಾಲ ಬಹಳ ಎಚ್ಚರಿಕಿಯಿಂದ ಇರಬೇಕು—ಅಂದ್ಹಾಂಗ ಆಯ್ತು ! "

" ಇನ್ನೊಂದು ಮಾತರಿ ರಾಯರ ! ಕಟ್ಟೀರಾವ್ ಸಾಹೇಬರು ನಿನ್ನೇ ನನ್ನ ಮುಂದ ಹೇಳಿದರು: ನಿಮ್ಮನ್ನ ಹಿಡಿದುಕೊಟ್ಟವರಿಗೆ ೩೦೦೦ ರೂಪಾಯಿ ಇನಾಮು ಇಟ್ಟದ್ದು, ವರ್ತಮಾನ ಪತ್ರದೊಳಗ ಜಾಹೀರ್ ಮಾಡಬೇಕಂತ, ಐ ಜಿ. ಪಿ ಸಾಹೇಬರ ಕಡಿಂದ ಬರೆದು ಬಂದೈತಂತರಿ ! ಬಹಾಳ ಮಾಡಿ ಅದು ನಾಳಿನ ದಿನಪತ್ರಿಕಿಯೊಳಗ ಛಾಪಿಸಿ ಬಂದೀತರಿ ! "

ಅನಂತರಾಯರು ಗಾಬರಿಗೊಂಡವರಾಗಿ ಕೇಳುತ್ತಿದ್ದರು. ರತ್ನಾಕರ ನಗುತ್ತ-ನಗುತ್ತಲೇ ನುಡಿದ :

" ಆ ಇನಾಮು ಯಾವ ಪುಣ್ಯಾತ್ಮಗ ಸಿಗತsದೋ ನೋಡಬೇಕು. ನಾ ಒಂದು ಮಾತು ಹೇಳತೀನಿ ಕೇಳು ಹನುಮಂತಪ್ಪಾ ! ನಿನಗs ಯಾಕ ಸಿಗಬಾರದು ಆ ಬಹುಮಾನ ? ಹ್ಯಾಂಗೂ ನಾನು ಒಂದಿಲ್ಲೊಂದು ದಿವಸ ಪೋಲೀಸರ ಕೈಯೊಳಗ ಸಿಗೂದೇ ಖರೆ ! "

ಹನುಮಂತಪ್ಪ ಹೇಸಿಕೊಂಡವನಂತೆ ನುಡಿದ :

" ನನಗ ಚಾಷ್ಟೀ ಮಾಡತೀರೇನ್ರಿ ರಾಯರ ? ಉಪಾಸ ಬಿದ್ದು ಸತ್ತೀನು ಹೊರತು,ಹಿಂತಾ ದೇಶದ್ರೋಹದ ಕೆಲಸ ನನ್ನ ಕಡಿಂದ ಆಗಲಿಕ್ಕಿಲ್ಲ. ಯಾವ ಚಾಂಡಾಲಗ ಸಿಗೂದೈತ್ಯೋ ಆ ಇನಾಮು ! "

ರತ್ನಾಕರ ಒಮ್ಮೆಲೆ ಎದ್ದು ಬಂದು ಹನುಮಂತಪ್ಪನನ್ನು ಅಪ್ಪಿಕೊಂಡ. ಆತನ ಕಂಠ ಬಿಗಿದು ಬಂದಿತ್ತು. ಹನುಮಂತಪ್ಪನ ಕೈಯನ್ನು ಕುಲುಕುತ್ತ ಪಶ್ಚಾತ್ತಾಪದ ಧ್ವನಿಯಲ್ಲಿ ಹೇಳಿದ :

" ಕ್ಷಮಿಸು ಹನುಮಂತಪ್ಪಾ ! ಯಾವುದೋ ಭಾವನಾದ ಆವೇಶ-ದೊಳಗ, ಆಡಬಾರದ ಮಾತನ್ನ ನಿನ್ನ ಮುಂದೆ ಆಡಿದೆ. ನೀನು ನನಗ ಮಾಡಿದ ಉಪಕಾರಕ್ಕ ನಾನು ಏನು ಕೊಟ್ಟರ ಅದು ತೀರೀತು ? ಏನೋ ನಿನಗ

ಒಳ್ಳೆಯದಾಗಬೇಕೆಂಬೂ ಪ್ರಾಮಾಣಿಕ ಹುಚ್ಚುತನದಿಂದ ಹಾಗೆ ಮಾತಾಡಿ, ನಿನ್ನ ಮನಸ್ಸು ನೋಯಿಸಿದೆ. ನೀನು ನನಗೇ ಒಳಿತಾಗಿ ಬುದ್ಧಿ ಕಲಿಸಿದಿ. ನನ್ನ ಕ್ಷಮಿಸಬೇಕು ಹನುಮಂತಪ್ಪಾ ! "

" ಕ್ಷಮಿಸೂದೇನು ಬಿಡ್ರಿ ಇದರೊಳಗ ! ನಿಮ್ಮ ದೊಡ್ಡ ಮನಸ್ಸು ನನಗೇನು ಗೊತ್ತು ಇಲ್ಲೇನು ? ಕಟ್ಟೀರಾವ್‌ಸಾಹೇಬರು ಈಗ ಇಲ್ಲಿಂದ ಹೋದವ್ವಂದರ, ನಮಗೊಂದು ದುರ್ದೈವದ ಪ್ರಸಂಗವೇ ಏನ್ರಿ ! "

ಅನಂತರಾಯರು ಹನುಮಂತಪ್ಪನನ್ನು ಆದರಪೂರ್ಣದೃಷ್ಟಿಗಳಿಂದ ನೋಡುತ್ತಿದ್ದರು. ರತ್ನಾಕರ ಹನುಮಂತಪ್ಪ ಇನ್ನೂ ಏನೇನೋ ಮೆಲ್ಲಗೆ ಮಾತನಾಡಿಕೊಂಡರು ಹನ್ನೊಂದುಕಾಲು ಗಂಟೆಯಾದಾಗ, ಹನುಮಂತಪ್ಪ ಹೇಳಿದ :

" ನಾ ಇನ್ನ ಹೊರಡತೀನ್ರಿ ! ಈಗ ಪೋಲೀಸ್ ಕಚೇರಿಗೆ ನಾ ಹೋಗ ಲಿಕ್ಕೇ ಬೇಕಾಗೆಯ್ತರಿ ! "

ಎಂದು ಹೇಳಿ, ರತ್ನಾಕರ—ಅನಂತರಾಯ—ಇಬ್ಬರಿಗೂ ನಮಸ್ಕರಿಸಿ ಎದ್ದುಬಿಟ್ಟ. ರತ್ನಾಕರನೂ ಕೋಣೆಯ ಹೊರತನಕ ಬಂದು ಆತನನ್ನು ಬೀಳ್ಕೊಟ್ಟ. ಅನಂತರಾಯರು ಅವನೊಂದಿಗೆ ಅಟ್ಟವನ್ನಿಳಿದು ಕೆಳಗೆ ಹೋದರು.

## ೩೪ನೆಯ ಪರಿಚ್ಛೇದ

ಇಂದು ವೈಶಾಖ ಶುದ್ಧ ಪ್ರತಿಪದೆ. ಬಳವಂತನ ಮನೆಯಲ್ಲಿ ಅವನ ಎರಡನೆಯ ಮಗುವಿನ ಹುಟ್ಟಿದ ಹಬ್ಬವಾದುದರಿಂದ, ಗೆಳೆಯರೆಲ್ಲರಿಗೆ ಊಟಕ್ಕಾಗಿ ಔತಣಕೊಟ್ಟಿದ್ದ. ಮಂಗಳವಾರ ಎಲ್ಲರಿಗೂ ಬೆಳಗಿನ ಕಚೇರಿ ಯಿದ್ದುದು ಅನುಕೂಲವೇ ಆಗಿತ್ತು. ಕಚೇರಿಯನ್ನು ಮುಗಿಸಿಕೊಂಡು—ಒಬ್ಬೊಬ್ಬರಂತೆ–ಎಲ್ಲ ಗೆಳೆಯರೂ ಬಳವಂತನ ಮನೆಗೆ ಬಂದರು. ಕುಳಿತು-ಕೊಳ್ಳಲಿಕ್ಕೆ ಅಟ್ಟದ ಮೇಲಿನ ಕೋಣೆಯಲ್ಲಿಯೇ ಏರ್ಪಾಡು ಮಾಡಲಾಗಿ-ದ್ದಿತು. ಅಡಿಗೆಯವನು ಬರುವುದಕ್ಕೆ ತಡಮಾಡಿದುದರಿಂದ, ಊಟಕ್ಕೆ ಇನ್ನೂ ತಾಸೆರಡು ತಾಸು ವಿಲಂಬವಿತ್ತು. ಚಿಕ್ಕ ಮನೆಯಾದುದರಿಂದ, ಅಡಿಗೆಯ ಮನೆಯಲ್ಲಿ ಕರಿಯುತ್ತಲಿದ್ದ ಜಿಲೇಬಿಯ ಕಮರುವಾಸನೆಯು ಮನೆಯಲ್ಲೆಲ್ಲ ತುಂಬಿಕೊಂಡಿತ್ತು. ಬಂದ ಗೆಳೆಯರನ್ನೆಲ್ಲ ಸ್ವಾಗತಿಸಿ, ಅಟ್ಟದ

ಕೋಣೆಗೆ ಕರೆದೊಯ್ಯುತ್ತಲಿದ್ದ ಬಳವಂತ. ಬಾಳೆಯುಲೆಗಳನ್ನು ಸರಿಗೊಳಿಸುತ್ತ ಮೊಗಸಾಲೆಯಲ್ಲಿ ಕುಳಿತ ಬಳವಂತನ ಮುಪ್ಪಿನ ತಂದೆ, ಬಂದವರನ್ನೆಲ್ಲ ಕಣ್ಣುಹಿಗ್ಗಿಸಿ ನೋಡಿಯೋ ನೋಡುತ್ತಿದ್ದ; ಮುಖವನ್ನು ಗಂಟುಹಾಕಿ ತನ್ನೊಳಗೆ ತಾನೇ ಏನನೋ ಗೊಣಗುಟ್ಟುತ್ತಲಿದ್ದ. ವೈದಿಕ ಬ್ರಾಹ್ಮಣರಿಗೆ ಯಾರಿಗೂ ಊಟಕ್ಕೆ ಹೇಳದೆ, ಈ ಸಿಗರೇಟು ಸೇದುವ-ಕ್ರಾಪಿನ ತಲೆಯ ಪೋಕರಿಗಳಿಗೇಕೆ ಊಟಕ್ಕೆ ಹೇಳಿದನೆಂಬುದೇ, ಆ ಮುದುಕನ ಮುಖದ ಗಂಟಿಗೂ ಗೊಣಗಾಟಕ್ಕೂ ಕಾರಣವಿರಬೇಕು.

ಕೊನೆಗೆ ಬಂದವನು ಶೀನಪ್ಪ. ಬಳವಂತ ಅವನನ್ನೂ ಅಟ್ಟದ ಕೋಣೆಗೆ ಕರೆದುಕೊಂಡು ಹೋದ. ಕೋಣೆಯಲ್ಲಿ ಕುಳಿತವರೆಲ್ಲರೂ ಗೆಳೆತನದ ಸಲುಗೆಯ ಅಣಕದಿಂದ ಸ್ವಾಗತಿಸಿದರು. ವಿಡಂಬಕ ಧ್ವನಿಯಲ್ಲಿ ರಾಮು-ಭಾವೂ ಕೇಳಿದ :

"ಯಾಕ ಶ್ರೀನಿವಾಸರಾವ್, ಬರಲಿಕ್ಕೆ ತಡಾ ಆಯ್ತು? ಮನಿಗೆ ಹೋಗೇ ಬಂದಿರಿ ಕಾಣತದ ?"

ದತ್ತೂ ಉಪಹಾಸದ ನಗೆ ನಗುತ್ತ ಮಾತನಾಡಿದ :

"ಯಾಕ? ಹೆಂಡ್ತೀ ಮಾರೀ ನೋಡಿ ಬಹಳೊತ್ತು ಆಗಿತ್ತೇನು ?"

ಬಳವಂತ ನಗೆಯಾಟದ ಧ್ವನಿಯಲ್ಲಿ ಹೇಳಿದ :

"ನಿನಗ ಗೊತ್ತಿಲ್ಲ ಕಾಣಿಸತದ ದತ್ತೂ ? ಇತ್ತೀಚೆಗೆ ಶೀನಪ್ಪ ತನ್ನ ಹೆಂಡತೀ ಮಾರೀ ನೋಡೂದು ಬಿಟ್ಟುಬಿಟ್ಟಾನ !"

"ಅದ್ಯಾಕ ?"

"ಅಂದರ, ಅದು ಹೆಂಗಸರ ಮಾರೀ ಹಾಂಗ ಕಾಣಲೇ ಒಲ್ಲದಂತ ಅಂವಗ !"

ರಾಮುಭಾವೂ ಹೇಳಿದ :

"ಅದಕ್ಕೂ ಕಾಣಿಸತದ....ಓಣ್ಯಾಗಿನ ಹೆಂಗಸರ ಮಾರೀನು ನೋಡಿ-ಕೋತು ತಿರಗೂದು !"

ವೆಂಕಣ್ಣ ಬೇಸರದ ನಗೆ ನಗುತ್ತಲೇ ಮಾತನಾಡಿದ :

"ಇರಲಿ ಬಿಡ್ರ್ಯೋ, ಪಾಪ, ಆತನ್ನ ಯಾಕ ಕಾಡಿತೀರಿ? ಮನಿಯೊಳಗ ಹೇಣ್ತಿ—ಅಂತ ಒಬ್ಬಾಕಿ ಇದ್ದಾಳಂತ, ಅಂವ ಮನೀ ಮಾಡಿಕೊಂಡಾದರೂ

ಇದ್ದಾನ. ಪಾಪ, ರೂಪದಿಂದ ಹ್ಯಾಂಗಽ ಇದ್ದರೂ, ಆಕಿ ಶಿನಪ್ಪನ ಕೂಡ ಎಷ್ಟು ಪ್ರೀತಿಯಿಂದ ನಡಕೋತಾಳಂಬೂದು ನಿಮಗ ಗೊತ್ತಿಲ್ಲ !"

ದತ್ತೂ ಕೇಳಿದ :

"ಅಕಿ ಶೀನಪ್ಪನ ಜೋಡಿ ಪ್ರೀತಿಯಿಂದ ನಡಕೋತಿರಬಹುದು; ಆದರ ಶೀನಪ್ಪ ಆಕೀ ಜೋಡಿ ಪ್ರೀತಿಯಿಂದ ನಡಕೊಳತಾನೇನು ? "

ವೆಂಕಣ್ಣ ಹೇಳಿದ :

"ನಡಕೊಳ್ಳದಿದ್ದರ ಸಂಸಾರ ಹ್ಯಾಂಗ ಸಾಗೀತು ನೋಡು ! ನೀನು ನಿನ್ನ ಆ ಏಳು ಮಕ್ಕಳ ತಾಯಿಯಾಗೂಡ ಪ್ರೀತಿಯಿಂದ ನಡಕೋತೀ ಇಲ್ಲೋ ? ಮುಖಾ ಒಂದಿಷ್ಟು ನೆಟ್ಟಗಿದ್ದೀತು, ವರ್ಷಕ್ಕೊಂದು ಮಕ್ಕಳನ್ನ ಹಡೀತಿದ್ದಾಳು! ವ್ಯಾಳ್ಯಕ್ಕ ಸರಿಯಾಗಿ ಅನ್ನಾ-ಝುಣಕಾ ಮಾಡಿ ಹಾಕಲಿಕ್ಕೆ ಬರೂದಿಲ್ಲಪಾ ! ಒಂದು ದಿನಾ ಇವರ ಮನಿಗೆ ಊಟಕ್ಕ ಹೋಗಿದ್ದೆ ಬಳವಂತಾ ! ಅನ್ನ ಝುಣಕದ್ಹಾಂಗ ಅಳ್ಳಕ ಆಗಿತ್ತು; ಝುಣಕ ಅನ್ನದ್ಹಾಂಗ ಗಟ್ಟಿ ಆಗಿತ್ತು. ಈ ದತ್ತೂ ಮಗಾ, ಏನೂ ತುಟಿ ಮಿಟಕಿಸದೆ, ಅಂಥಾದನ್ನಽ ಹೊಡದೇ ಹೊಡದ!"

ಎಲ್ಲರೂ ಮಾಳಿಗೆ ಹಾರಿಬೀಳುವಂತೆ ನಕ್ಕುಬಿಟ್ಟರು. ಆಗ ರಾಮಭಾವು ಕೇಳಿದ :

"ಅಂದರ ಶೀನಪ್ಪನ ಹೆಂಡತಿ ಅಡಿಗೀ ಚೆಲೋ ಮಾಡತಾಳಂತೀಯೇನು ವೆಂಕಣ್ಣಾ ? "

"ಯಾವುದು ಬೇಕು ಅದನ್ನ ಹೇಳು ! ಅನ್ನಪೂರ್ಣಾದೇವೀ ಹಾಂಗ ಅಡಿಗೀ ಮಾಡತಾಳ. ಆಕಿ ಮಾಡಿದ ಸಾರು ನೀ ಇನ್ನೂ ತಿಂದಿಲ್ಲ ಕಾಣತಽದ ರಾಮಭಾವೂ ? ಒಮ್ಮೆ ತಿಂದವರು ಕಡಿತನಕಾ ಅದನ್ನಽ ನೆನಸಿರಬೇಕು ! ನಮ್ಮ ಶೀನಪ್ಪ, ಆಕೀ ರೂಪಕ್ಕ ಮೆಚ್ಚದೇ ಹೋದರೂ, ಆಕೀ ಸಾರಿಗಾಗಿ ಮೆಚ್ಚಿ ಪ್ರೀತಿಮಾಡತಾನ. ಹೌದಲ್ಲೋ ಶೀನಪ್ಪಾ ? "

ಶೀನಪ್ಪ ಬಾಯಿಬಿಚ್ಚಿದ :

"ಬಾಯಿ ಅದಽ ಅಂತ ಏನಾರೇ ಭಕಾಸತಾರ, ತೀರಿಹೋಯ್ತು ! ಹೆಂಡರ ರೂಪಾ ತೊಳಕೊಂಡು ಕುಡಿಯೂದದ ಏನು ಮಕ್ಕಳರ್‍ಯಾ ? ನಮ್ಮ ಹೆಣ್ಣುಮಕ್ಕಳು ಬೀಸೂಮುಂದ ಹಾಡತಿರತಾರ ಗೊತ್ತದ ಇಲ್ಲೋ ?....

'ಸೀರಲದ ಹಣ್ಣು ಅತಿಕಪ್ಪು ಅಣ್ಣಯ್ಯ, ತಿಂದುನೋಡಿದರ ರುಚಿಭಾಳೋ!' ಅಂತ!"

ರಾಮುಭಾವು ನಗುತ್ತ ನುಡಿದ :

"ಈ ಹಾಡನ್ನ ನಿನ್ನ ಹೆಂಡತಿ ದಿನಾ ಹಾಡತಿರಬಹುದು ಯಾಕ? ಆಕೀ ಆ ಹಾಡು ಕೇಳಿಕೇಳೇ ನೀನು ಆಕಿನ್ನ ರುಚಿನೂಡಿಕೊಂಡೀದೀ ಕಾಣಸ-ತದ!"

ಮತ್ತೆ ನಗೆಯ ಹೊಳೆ ಹರಿಯಿತು. ನಗೆ ನಿಂತ ಬಳಿಕ ಆಗ ಶೀನಪ್ಪ ಹೇಳಿದ :

"ಇನ್ನೂ ಊಟ ಬಹಳ ಹೊತ್ತು ಕಾಣಿಸತದ ಬಳವಂತಾ! ನನ-ಗಂತೂ ಬಹಳ ಹಸಿವಿ ಆಗೇದ ನೋಡಪಾ!"

ಬಳವಂತ ಕೇಳಿದ :

"ಹಾಂಗಾದರ ಚಹಾ ಮಾಡಿಸಲೇನು?"

ಶೀನಪ್ಪ ಹೇಳಿದ :

"ಏನು ಮಾಡಿಸತೀಯೋ ಮಾಡಿಸು! ಕಚೇರಿ ಬಿಟ್ಟಕೂಡಲೆ, ನನಗ ಹಸಿವಿ ಆಗಿತ್ತಂತ, ಮನಿಗೆ ಹೋಗಿ ಏನಾದರೂ ತಿಂದು ಬರಬೇಕಂತ ಹೋದೆ. ಆದರ, ಪುರೋಹಿತರ ಗಂಗಾಬಾಯಿ, ಆಕಿನ್ನ ಗೋಪಾಲರಾಯರ ಮನಿಗೆ ಕರಕೊಂಡು ಹೋಗಿಬಿಟ್ಟಾರ. ನಾ ಮನಿಗೆ ಬಂದು ಹೋಗತೀನಂಬೂದು ಗೊತ್ತಿದ್ದರ, ಆಕೆಯೇನೂ ಹೋಗತಿದ್ದಿಲ್ಲ. ಆದರ, ನಾನು ಸಂಜೀತನಕಾ ಮನಿಗೆ ಬರೂದಿಲ್ಲಂತ ಹೇಳಿಯೆ ಕಚೇರಿಗೆ ಹೋಗಿದ್ದೆ."

ದತ್ತೂ ಕುತೂಹಲದಿಂದ ಕೇಳಿದ :

"ಅದಾಯ್ತಪಾ! ಪುರೋಹಿತರ ಗಂಗಾಬಾಯಿ, ಗೋಪಾಲರಾಯರ ಮನಿಗ್ಯಾಕ ಕರಕೊಂಡು ಹೋಗ್ಯಾರ ನಿನ್ನ ಹೆಂಡತಿನ್ನ!"

"ಏನೋ ಅಪಾ, ಅವರ ಮನ್ಯಾಗ ಮದಿವಿಗಾಗಿ ಶಾಂವಿಗಿ-ಪಾಂವಿಗಿ ಮಾಡಬೇಕಾಗಿತ್ತಂತ! ನಮ್ಮ ಶಂಖಿಣೀ ಶಾಂವಿಗೀ ಮಾಡೋದರೊಳಗ ಎಕ್ಸ್‌ಪರ್ಟ್‌! ಅದಕ್ಕ ಗಂಗಾಬಾಯಿ ಬಹಾಳ ಆಗ್ರಹ ಮಾಡಿ ಹೇಳಿದ್ದರಂತ. ಮತ್ತ ಇಕಿಗೂ ಇಂಥಾ ಸಾರ್ವಜನಿಕ ಕೆಲಸದ ಹುರುಪು ಬಹಳ!"

ಬಳವಂತ ಕುತೂಹಲಗೊಂಡು ಆಶ್ಚರ್ಯಧ್ವನಿಯಲ್ಲಿ ಕೇಳಿದ :

“ ಮದಿವಿಗಾಗಿ ಶಾಂವಿಗೆ ? ಅಂದರ, ಗೋಪಾಲರಾಯರ ಮಗಳ ಮದಿವಿ ಗೊತ್ತಾತೇನು ? ”

ನಿರುತ್ಸಾಹದ ಧ್ವನಿಯಲ್ಲಿಯೇ ಶೀನಪ್ಪ ನುಡಿದ :

“ ಗಂಗಾಬಾಯೇ ಹೇಳತಿದ್ದರಪಾ ! ಈಗ ನಾಲ್ಕೈದು ದಿನಗಳ ಹಿಂದ ಗೋಪಾಲರಾಯರ ಮನಿಗೆ ಅವರು ಸತ್ಯನಾರಾಯಣದ ಊಟಕ್ಕ ಹೇಳಿದ್ದ-ರಂತ. ಅಂದೆಯೇ ಸಂಜೀಕಡೆ ನಿಶ್ಚಯದಕಾರ್ಯನೂ ಮುಗಿದುಬಿಟ್ಟsದಂತ!”

ಬಳವಂತ ಇನ್ನಿಷ್ಟು ಆತುರದಿಂದ ಕೇಳಿದ :

“ ಅಂದರ ? ವರಾ ಎಲ್ಲೀದು ? ”

ಶೀನಪ್ಪ ಅರ್ಥಪೂರ್ಣದೃಷ್ಟಿಯಿಂದ ವೆಂಕಣ್ಣನ ಕಡೆಗೆ ನೋಡಿ, ಸುಮ್ಮನೆ ಕುಳಿತ. ವೆಂಕಣ್ಣ ಗಾಬರಿಯ ನೋಟಗಳಿಂದ ಶೀನಪ್ಪನನ್ನೇ ನೋಡುತ್ತಿದ್ದ. ಬಳವಂತ ಮತ್ತೆ ಕೇಳಿದ :

“ ಯಾಕೋ ಶೀನಪ್ಪಾ ? ಸುಮ್ಮಗ್ಯಾಕ ಯಾಕ ಕೂತಿ ? ವರಾ ಯಾವ ಊರಿನದಂತ ?”

ಒಣಗಿದ ಕಂಠದಲ್ಲಿಯೇ ಶೀನಪ್ಪ ಹೇಳತೊಡಗಿದ :

“ ನೋಡು ಬಳವಂತಾ, ಇದರ ವಿಷಯಕ್ಕ ಇಲ್ಲಿ ಯಾವುದೂ ಮಾತು ಆಡಬಾರದಂತ ಮನಸಿನೊಳಗ ಮಾಡಿಕೊಂಡಿದ್ದೆ. ಆದರ, ಹ್ಯಾಂಗೋ ಏನೋ ಅದು ಹೊರಬಿದ್ದುಬಿಟ್ಟಿತು. ಸುಮ್ಮನ್ಯಾಕ ಈ ಮಾತು ತಗದು ವೆಂಕಣ್ಣನ್ನ ಅಸಮಾಧಾನದೊಳಗ ನೂಕಬಾರದೂ ಅಂತ ಇಚ್ಛಾ ಇತ್ತು ! ಆದರ ತಪ್ಪಿ ನನ್ನ ಬಾಯಿಂದ ಮಾತು ಹೊರಬಿದ್ದು ಹೋಯ್ತು ! ”

ಬಳವಂತ ಸಂತಾಪಧ್ವನಿಯಿಂದ ನುಡಿದ :

“ ಹೇಡಿತನದ ಮಾತು ಆಡಬ್ಯಾಡ ನೀನು ಶೀನಪ್ಪಾ! ವೆಂಕಣ್ಣ ಒಬ್ಬನೇ ಯಾಕ ಅಸಮಾಧಾನದೊಳಗ ಬೀಳತಾನ ? ನನಗೇನು ಅಸಮಾ-ಧಾನ ಆಗೂದಿಲ್ಲೇನು ? ಅಸಮಾಧಾನ ಅಷ್ಟೇ ಯಾಕ ? ಆ ಗೋಪಾಲ-ರಾಯನ ಮ್ಯಾಲಿನ ಸಂತಾಪದಿಂದ, ನನ್ನ ಮೈ ಉರಿದುಬೀಳತsದ ಉರಿದು!”

ಶೀನಪ್ಪ ಹೇಳಿದ :

“ ಇನ್ನೇನು ಮಾಡೋದು ಬಿಡು! ಕೆಲಸ ಮುಗಿದು ಹೋಗೇದ ! ಮೊದಲ ನಮ್ಮ ಕಡಿಂದ್ಲನ ತಪ್ಪು ಆಗೇದ. ಮೊದಲೇ ವೆಂಕಣ್ಣ ಒಪ್ಪಿ-

ಕೊಂಡು ಬಿಟ್ಟಿದ್ದರ, ಇಷ್ಟೊತ್ತಿಗೇ ವೆಂಕಣ್ಣಾಗ ಕಾವೇರೀ ತೋಳಿನ ತಲಿಗಿಂಬು ಸಿಗತಿತ್ತು ! ”

ಬಳವಂತ ಸಿಡಿನುಡಿಯಿಂದಲಿ ನುಡಿದ :

“ ಈಗರೇ ಆ ತಲಿಗಿಂಬು ಹೋಗತದ ಹ್ಯಾಂಗ ? ಆ ತಲಿಗಿಂಬನ್ನ ಹ್ಯಾಂಗಾದರೂ ಮಾಡಿ ವೆಂಕಣ್ಣಾನಿಗೇ ಸಿಗೂಹಾಂಗ ಮಾಡಬೇಕು ನಾವೆಲ್ಲರೂ ಕೂಡಿ ! ”

ಶೀನಪ್ಪ ಬೇಸರದ ಧ್ವನಿಯಲ್ಲಿ ಹೇಳಿದ :

“ ಹೋಗಲಿ ಬಿಡೋ ಬಳವಂತಾ ! ಇನ್ನ ಮ್ಯಾಲ ಸಿಟ್ಟಿಗೆದ್ದು ಮಾಡಾಂವ ಏನು ನೀನು ? ಎಲ್ಲದಕ್ಕೂ ದೈವದ ಸಂಕಲ್ಪ ಬೇಕು ನೋಡು ! ದೈವದ ಸಂಕಲ್ಪ ಇದ್ದಿಲ್ಲಂತೇ ವೆಂಕಣ್ಣಾಗ ಅಂಥಾ ದುರ್ಬುದ್ಧಿ ಹುಟ್ಟಿತು. ಮಳೀ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ. ಇತ್ತ ಮಳೀ ನೀರೂ ಹೋಯ್ತು; ಅತ್ತ ಮಂಜು ಮಂಜಾ ಆಯ್ತು ! ಇದರೊಳಗ ಗೋಪಾಲರಾಯರದು ಏನೂ ತಪ್ಪು ಇಲ್ಲ. ಮಗಳನ್ನ ಕೊಡಬೇಕಂಬೂ ಅಪೇಕ್ಷಾದಿಂದನ ಮನಿತನಕಾ ನಮ್ಮನ್ನ ಕರೆಸಿದ್ದರು ಕನ್ಯಾ ನೋಡಲಿಕ್ಕೆ !”

ಬಳವಂತ ಹೇಳಿದ :

“ ನೀ ಇಲ್ಲದ ಪಲ್ಲಾ ಬಿಚ್ಚಬ್ಯಾಡ ಶೀನಪ್ಪಾ ! ಹೆಂಡ್ತೀ ವಸೀಲಿಯಿಂದ ನಿನಗೂ ಮಡಿವೀ ಊಟ ಸಿಗತದಂತ ಹೀಂಗ ಮಾತಾಡಲಿಕ್ಕೆ ಹತ್ತೀದಿ ಕಾಣಿಸತದ ! ನಾ ಕೇಳತೀನಿ : ವರಾ ಎಲ್ಲೀದೂ ಅಂತ; ಅದನ್ನೇನೂ ನೀನು ಹೇಳಲೇ ಒಲ್ಲಿ ! ರತ್ನಾಕರ ಸೂಚಿಸಿದ ಆ ರಂಗಣ್ಣಾನಂತೂ ಕಾವೇರಿನ್ನ ಮಾಡಿಕೊಳ್ಳಲಿಕ್ಕೆ ಶಕ್ಯ ಇಲ್ಲ ! ”

ಶೀನಪ್ಪ ಆವೇಶದ ಧ್ವನಿಯಲ್ಲಿ ನುಡಿದ :

“ ಶಕ್ಯ ಯಾಕ ಇಲ್ಲ ? ವೆಂಕಣ್ಣಾಗ ನಾಳೆಯ ದಿವಸ ಅಣ್ಣಾನ ಲಗ್ನದ ಆಮಂತ್ರಣ ಬಂದ ಮ್ಯಾಲ ನಿನಗ ಗೊತ್ತಾಗತದ....ಶಕ್ಯ ಅದನೋ ಇಲ್ಲೋ ಅಂಬೂದು ? ”

ಬಳವಂತ ಆಶ್ಚರ್ಯದ ಆಧಿಕ್ಯದಿಂದ ಕೇಳಿದ :

“ ಅಂದರ ? ರಂಗಣ್ಣಾ ಒಪ್ಪಿಗೊಂಡನಂತೇನು.... ಆ ಹುಡುಗಿನ್ನ ಮಾಡಿಕೊಳಲಿಕ್ಕೆ ? ”

" ಒಪ್ಪಿಕೊಂಡದ್ದಿಷ್ಟೇ ಯಾಕ ? ನಾಡದಿನ ದಿವಸ ಮುಂಜಾನೆ ಹತ್ತುವರೆಗೆ ಅಕ್ಷತಾ ಬೀಳತಾವಂತ ! ನಿಶ್ಚಯದ ದಿನಾನೇ ಮದಿವೀ ಮುಹೂರ್ತ ಕೂಡ ನಿಶ್ಚಯಿಸಿಬಿಟ್ಟಾರಂತ ! "

ಬಳವಂತ ದಿಂಗುಹಿಡಿದು ಸುಮ್ಮಗೆ ಕುಳಿತುಬಿಟ್ಟ. ಕಳೆಗೆಟ್ಟ ಮುಖದ ವೆಂಕಣ್ಣ ಮೆಲ್ಲಗೆ ಮೇಲಕ್ಕೆದ್ದು ಒಣಗಿದ ಕಂಠದಲ್ಲಿಯೇ ಹೇಳಿದ :

" ಈಗ ಇಲ್ಲೇ ಹೋಗಿ ಸಿಗರೇಟು ತರತೀನಪ ಬಳವಂತಾ ! ಐದು ಮಿನೀಟಿನೊಳಗ ಬಂದು ಬಿಡತೀನಿ ! "

ವೆಂಕಣ್ಣ ಹೇಳಿದ ಮಾತಿನ ಕಡೆಗೆ ಬಳವಂತನ ಲಕ್ಷ್ಯವಿದ್ದಿತೋ ಇಲ್ಲವೋ ! ಹಾಗೆಯೇ ಮುಂದುವರಿದು ಅಟ್ಟವನ್ನಿಳಿದು, ವೆಂಕಣ್ಣ ಮನೆಯಿಂದ ಹೊರಬಿದ್ದ. ಬಳವಂತ ಮನದಲ್ಲಿ ಏನೋ ಎಣಿಕೆಹಾಕಲು ತೊಡಗಿದ್ದ. ಮುಖವು ನೆತ್ತರೇರಿ ಕೆಂಪಗಾಗಿತ್ತು. ಮುಸುಗುಡುತ್ತಿತ್ತು. ಒಮ್ಮೆಲೆ ಸಿಡಿ-ನುಡಿಯಲ್ಲಿ ಉದ್ಗಾರ ತೆಗೆದ :

" ರತ್ನಾಕರನ ಕೈವಾಡವಿಲ್ಲದೆ ಇದೆಲ್ಲಾ ಆಗೂದು ಶಕ್ಯವೇ ಇಲ್ಲ ! ಹೇಡಿ ಪೋಲೀಸರು ! ಒಬ್ಬ ಸಾಮಾನ್ಯ ಮನುಷ್ಯನ್ನ ಹುಡುಕಿ ಹಿಡಿಯಲಿಕ್ಕೆ ಸಾಮರ್ಥ್ಯ ಇಲ್ಲ ಇವರಿಗೆ ! "

ಕೂಡಲೇ ದತ್ತೂ ಹೇಳಿದ :

" ಅದಕ್ಕಂತಽ ಕಟ್ಟೇ ಇನ್‌ಸ್ಪೆಕ್ಟರ ಹಣೇಬರ ಏನಾಗೇದ ಗೊತ್ತದ ಇಲ್ಲೊ ? ಡಿಗ್ರೇಡ್ ಮಾಡಿ, ಕಲಘಟಗಿಗೆ ಫೌಜದಾರನ್ನ ಮಾಡಿ ಹಾಕ್ಯಾರ! ಆತ ರಜಾ ಬೇಡಿದರ, ರಜಾ ಸುದ್ಧಾ ಮಂಜೂರಾಗಲಿಲ್ಲಂತ. ಈಗ ಅವನ ಜಾಗಾಕ್ಕ ಬಂದಾನ ನೋಡು ಉಮರಖಾನ ! ಹುಲೀ ಇದ್ದಾಂಗ ಇದ್ದಾನ. ಈ ಚಳವಳೀ ಜನಕ್ಕಂತೂ ಅಂವ ಅಂದರ, ಒಂದು ಸೈತಾನ ಇದ್ದಾಂಗ— ಅಂತಾರ ಮಂದೆಲ್ಲಾ ! "

ಮತ್ತೆ ಬಳವಂತ ಸುಮ್ಮಗೆ ಕುಳಿತುಕೊಂಡು ಏನನೋ ಧ್ಯಾನಿಸ-ತೊಡಗಿದ; ಆಗ ರಾಮಭಾವೂ ಹೇಳಿದ :

" ಈಗ ನೀನು ಹೀಂಗ ಕೂತು ಏನು ಮಾಡುವವ ಬಳವಂತಾ ! ಪಾಪ ಶೀನಪ್ಪಗ ಹಸಿವಿ ಆಗೇದಂತ. ಏನಾದರೂ ತಿಂಸೂ ವ್ಯವಸ್ಥಾ ಮಾಡು. ಹುಂ, ಏಳು ! "

ಬಳವಂತ ಏಳಲಾರದೆ ಎದ್ದು ಕೆಳಗೆ ಹೋದ. ಆಗ ಪಶ್ಚಾತ್ತಾಪದ ಧ್ವನಿಯಲ್ಲಿ ಶೀನಪ್ಪ ನುಡಿದ :

"ಅದಕ್ಕs ನಾನು, ಇಂದು ಈ ವಿಷಯ ಮಾತಾಡಬಾರದಂತs ಮಾಡಿದ್ದೆ. ಮಾತಿನ ಪ್ರಸಂಗ ಬಂದು, ತಿಳೀಲಾರದ್ಹಾಂಗ ನನ್ನ ಬಾಯಿಂದ ಹೊರಬಿದ್ದು ಬಿಟ್ಟಿತು. ನಾನು ಇಲ್ಲಿಗೆ ಬರೂದು ಬಿಟ್ಟಿದ್ದರನs ಒಳ್ಳೇದಿತ್ತು!"

ದತ್ತೂ ಹೇಳಿದ :

"ಈಗೇನಾತು ಬಿಡೋ! ಆದರ ಆಗತsದ ಮದಿವಿ! ದೇಶದೊಳಗ ಬ್ಯಾರೇ ಕನ್ಯಾನs ಇಲ್ಲೇನು? ಇನ್ನೊಂದು ಹುಡಿಗಿನ್ನ ನೋಡಿದರ ಆಯ್ತು ವೆಂಕಣ್ಣಾಗ! ಗೋಪಾಲರಾಯರ ಮಗಳೇ ಅಂಬೂ ಹಟಾ ಆದರೂ ಯಾಕ ಹಿಡೀಬೇಕು ನಾವು!"

ಶೀನಪ್ಪ ಮರುಕದ ಧ್ವನಿಯಲ್ಲಿ ಹೇಳಿದ :

"ಇಲ್ಲೋ. ಬಳವಂತನ ಸ್ವಭಾವ ಸ್ವಲ್ಪ ಹಟದ್ದು ಅಂಬೂದು ನಿನಗ ಗೊತ್ತಿಲ್ಲೇನು? ತನ್ನ ಮನಸಿನ್ಹಾಂಗs ಎಲ್ಲಾ ಕೆಲಸ ನಡೀಬೇಕು—ಅಂತ ಅನ್ನುವವ ಆತ! ಏನೋ, ನಿಶ್ಚಯ ಆಗಿಬಿಟ್ಟsದ! ಕಲ್ಯಾಣದ ಕೆಲಸ! ಸುಸೂತ್ರ ಆಗಿ ಹೋಗವೊಲ್ಲದ್ಯಾಕ - ಅಂತ ನನ್ನ ಅಭಿಪ್ರಾಯ!"

ರಾಮಭಾವು—ಇದುವರೆಗೂ ಸುಮ್ಮಗಿದ್ದವನು—ಈಗ ಹೇಳಿದ :

"ಈಗ ಇಂಥಾ ಮಾತು ನೀನು ಏನೂ ಆಡಬ್ಯಾಡ ಶೀನಪ್ಪಾ! ಬಾಯಿ ಮುಚ್ಚಿಕೊಂಡು ಸುಮ್ಮನಿದ್ದು ಬಿಡು! ಹಟಾ ಸಾಧಿಸಿಕೊಳ್ಳದಿದ್ದರ, ಮನುಷ್ಯರಿಗೆ ಮನುಷ್ಯರು ಅಂತ ಯಾಕ ಅನ್ನಬೇಕು ಹೇಳು! ಆ ದೇಶಭಕ್ತ ನೋಡು, ಹ್ಯಾಂಗ ತನ್ನ ಹಟ ಸಾಧಿಕೊಂಡ?"

ಶೀನಪ್ಪ ಮಾತನೇನೂ ಆಡಲಿಲ್ಲ. ಮಂಕುಕವಿದಂತೆ ಸುಮ್ಮನೆ ಕುಳಿತುಬಿಟ್ಟ. ಬಳವಂತನ ಹೆಂಡತಿ, ಚಹದ ಕಿಟ್ಲಿ, ಕಪ್ಪು-ಬಸಿ ತುಂಬಿದ ತಟ್ಟಿ— ಹಿಡಿದುಕೊಂಡು ಮೇಲೆ ಬಂದಳು; ತಂದುವನ್ನೆಲ್ಲ ಕೆಳಗಿಟ್ಟು ಹೇಳಿದಳು :

"ಅವರು, ಏನೋ ಸಾಮಾನು ಬೇಕಾಗೇದಂತ ಪ್ಯಾಟಿಗೆ ಹೋದರು. ನಿಮಗೆಲ್ಲಾ ಚಹಾ ತೊಗೊಳ್ಳಲಿಕ್ಕೆ ಹೇಳ್ಯಾರ!"

ಬಳವಂತನ ಹೆಂಡತಿ ಕೆಳಗೆ ಹೊರಟುಹೋದಳು. ಸಿಗರೇಟು ತರಲು ಹೋದ ವೆಂಕಣ್ಣ, ಹದಿನೈದು ನಿಮಿಷವಾದರೂ ಬಂದಿರಲಿಲ್ಲ. ಮತ್ತೆ ಸ್ವಲ್ಪ ಕಾಲ ದಾರಿ ನೋಡಿ, ಚಹಾ ತಣ್ಣಗಾಗಿ ಹೋಗುವುದೆಂದು ಎಲ್ಲರೂ ಕುಡಿದು, ಏನೋ ಬೇರೆ ವಿಷಯ ಮಾತನಾಡುತ್ತ ಕುಳಿತರು.

ಎರಡು ಗಂಟೆಯಾದರೂ ವೆಂಕಣ್ಣನೂ ಇಲ್ಲ; ಬಳವಂತನೂ ಇಲ್ಲ. ಮುಂದೆ ಐದಾರು ನಿಮಿಷಗಳಲ್ಲಿಯೇ ಬಳವಂತ ಮೇಲೆ ಹತ್ತಿಬಂದ; ಊಟಕ್ಕೆ ಎಲ್ಲರನ್ನೂ ಎಬ್ಬಿಸಿದ. ಆಗ ರಾಮಭಾವೂ ಕುತೂಹಲದಿಂದ ಕೇಳಿದ :

“ವೆಂಕಣ್ಣ ಎಲ್ಲಿ ಕೆಳಗಽ ಕೂತುಕೊಂಡಾನೇನು ?”

ಬಳವಂತ ಶುಷ್ಕಸ್ವರದಲ್ಲಿಯೆ ಹೇಳಿದ :

“ಆತನ್ನ ಹುಡುಕಲಿಕ್ಕಂತಽ ಇಷ್ಟೊತ್ತನಕಾ ತಿರಿಗ್ಯಾಡಿ ಬಂದೆ. ಬಾಡಿಗೀ ಸಾಯ್ಕಲ್ಲು ತೊಗೊಂಡು ಸಾಧನಕೇರಿಗೆ ಹೋಗಿ, ಆತನ ಕೋಣೀ ಸಹಿತ ನೋಡಿಬಂದೆ. ಎಲ್ಲಿ ಮಾಯೀ ಆಗಿಬಿಟ್ಟಾನೋ ಏನೋ, ಹುಡುಕಿ ಹುಡುಕಿ ಬ್ಯಾಸತ್ತು ಬಂದೆ !”

ಯಾರೂ ಒಂದೂ ಮಾತನಾಡದೆ ಕೆಳಗೆ ಇಳಿದು, ಕೈಕಾಲು ತೊಳೆದು-ಕೊಂಡು, ಎಲೆಗಳ ಮೇಲೆ ಬಂದು ಕುಳಿತರು. ಆಗ ಬಾಳೆಯೆಲೆ ಸರಿಮಾಡುತ್ತ ಕುಳಿತ ಬಳವಂತನ ತಂದೆ, ಈಗ ಎಲೆಯ ಮುಂದೆ ಕುಳಿತು, ಸಿಟ್ಟಿನಿಂದ ತನ್ನೊಳಗೆ ತಾನೇ ಏನನ್ನೋ ಗೊಣಗುತ್ತಲಿದ್ದ. ಕಣ್ಣು ಕ್ರೋಧದಿಂದ ಕೆಂಪಗಾಗಿದ್ದುವೊ, ಮನೆಯಲ್ಲಿಯ ಹೊಗೆಯಿಂದ ಕೆಂಪಗಾಗಿದ್ದುವೊ !

ಊಟ ಪ್ರಾರಂಭವಾಯಿತು. ಒಬ್ಬರ ಬಾಯಿಂದಲೂ ಮಾತು ಹೊರ-ಡುತ್ತಿರಲಿಲ್ಲ ಎಲ್ಲರೂ ಮೌನಿಗಳಾಗಿಯೇ ಊಟ ನಡೆಯಿಸಿದ್ದರು. ಮುದುಕರು ಮಾತ್ರ ಹೊಟ್ಟೆ ತುಂಬುತ್ತ ಹೋದಂತೆ, ಆಗಾಗ ‘ಗೋವಿಂದ, ಗೋವಿಂದ !’ ಎಂದು ನಾಮಸ್ಮರಣೆಯನ್ನು ಮಾಡುತ್ತಲಿದ್ದರು. ಊಟದ ಕಾಲದಲ್ಲಿ ಬಳವಂತ ತಲೆಯಲ್ಲಿ ಏನೇನೋ ಲೆಕ್ಕವನ್ನು ಹಾಕುತ್ತಲೇ ಇದ್ದ. ಆ ಲೆಕ್ಕದಲ್ಲಿ ಯಾರು ಏನು, ಹೇಗೆ, ಎಷ್ಟು—ಉಂಡರೆಂಬ ಲೆಕ್ಕವೇ ಅವನಿಗಿರಲಿಲ್ಲ.

## ೩೫ನೆಯ ಪರಿಚ್ಛೇದ

ಇಂದು ಗೋಪಾಲರಾಯರಲ್ಲಿ ಮದುವೆಯ ಸಮಾರಾಧನೆ. ಅನಂತ-ರಾಯರ ಮನೆಯವರಿಗೆಲ್ಲ ಅಲ್ಲಿಯೇ ಊಟದ ಔತಣವಿದ್ದಿತೆಂದು ಬೇರೆಯಾಗಿ

ಹೇಳಬೇಕೆ ? ಕುಮುದಾ, ನಾಳೆಯ ದಿನ ಮದುಮಗಳಿಗೂ ಮದುಮಗನಿಗೂ ಒಪ್ಪಿಸಬೇಕಾದ ಉಡುಗರೆ ಯಾವ ಬಗೆಯದಿರಬೇಕೆಂಬುದನ್ನು ಕುರಿತು ಯೋಚನೆಯಲ್ಲಿದ್ದಳು. ತಂದೆಯನ್ನು ಕೇಳಿದರೆ 'ಅದನ್ನು ನಿರ್ಣಯಿಸುವವಳು ನೀನೇ !' ಎಂದು ಹೇಳಿದರು. ತಾಯಿಯನ್ನು ಕೇಳಿದರೆ, 'ನನಗೇನು ಗೊತ್ತದ ಕುಮುದಾ ಅದೆಲ್ಲಾ ! ನೀವೆಲ್ಲಾ ಹೊಸಾ ಕಾಲದ ಮಂದಿ. ಈ ಕಾಲಕ್ಕ ತಕ್ಕಂಥಾ ಉಡುಗೋರೀ ಏನು ಕೊಡಬೇಕೋ ನೀನೇ ನೋಡವ್ವಾ !' ಎಂದಳು. 'ರತ್ನಾಕರನನ್ನು ಕೇಳಬೇಕು' ಎಂದೆನಿಸಿತು ಕುಮುದೆಗೆ. ಆದರೆ ವಿಶೇಷಕಾರಣವಿಲ್ಲದೆ ತಾನಲ್ಲಿಗೆ ಹೋಗುವುದು ಹೇಗೆ ? ಎಂದು ಸಂಕೋಚಪಟ್ಟುಕೊಂಡು, ಸುಮ್ಮನೆ ಇದ್ದಳು. ಆಗಲೇ ತಾಯಿ ಕರೆದು ಹೇಳಿದಳು :

"ಹಾಲು ಫಲಾಹಾರ ಮ್ಯಾಲ ಕೊಟ್ಟು ಬರತೀಯಾ ಕುಮುದಾ ?"

ಕುಮುದೆಗೆ ನೆಸವೂ ಒಂದು ಸಿಕ್ಕಂತಾಯಿತು. ಹಾಲು-ಉಪಾಹಾರಗಳನ್ನು ತೆಗೆದುಕೊಂಡು ಅಟ್ಟದ ಕೋಣೆಗೆ ಹೋದಳು. ಮದುವೆಯ ಮನೆಗೆ ಹೋಗಬೇಕಾಗಿದ್ದ ಕುಮುದಾ, ನಿತ್ಯಕ್ಕಿಂತ ವಿಶೇಷರೀತಿಯಿಂದ ಉಡಿಗೆ-ತೊಡಿಗೆ ಮಾಡಿಕೊಂಡಿದ್ದಳು. ಗೋಪಾಲರಾಯರ ಮದುವೆಯ ಮನೆಯ ಉತ್ಸಾಹ, ಇಲ್ಲಿಯವರೆಗೂ ಹರಡಿಕೊಂಡು, ಕುಮುದೆಯ ಹೃದಯದಲ್ಲಿಯೂ ತುಂಬಿಕೊಂಡಿದ್ದಿತು ಎಂತಲೇ ಆಗ ಅವಳು ವಿದ್ಯುಲ್ಲತೆಯ ಚಪಲತೆಯನ್ನು ಪಡೆದಿದ್ದಳು. ಬಾಗಿಲು ತೆಗೆದು ಒಳಗೆ ಬಂದೊಡನೆಯೆ, ಕುಮುದೆ ಮುಡಿಯಲ್ಲಿ ಮುಡಿದ ಮಲ್ಲಿಗೆ ಮಾಲೆಯ ಕಂಪು, ಕೋಣೆಯಲ್ಲೆಲ್ಲ ತುಂಬಿಬಿಟ್ಟಿತು. ರತ್ನಾಕರ ಶೃಂಗಾರದ ಸೂತ್ರಗೊಂಬೆಯಂತಿರುವ ಕುಮುದೆಯನ್ನು ನೋಡಿದ. ಆಗಲೆ ಮಲ್ಲಿಗೆಯ ಬಲ್ಗಂಪು ಮೂಗಿನಲ್ಲಿ ತುಂಬಿ ಎದೆಯನ್ನು 'ಝುಲ್' ಎನ್ನಿಸಿತು. ಕುಮುದಾ ಟೇಬಲ್ಲಿನ ಹತ್ತಿರಕ್ಕೆ ಬಂದು ಹಾಲು, ಉಪಾಹಾರದ ತಟ್ಟೆಗಳನ್ನಿಟ್ಟು ಹೇಳಿದಳು :

"ಈವೊತ್ತು ನೀವು ಒಂಟಿಗರಾಗಿಯೆ ವ್ಯಾಳ್ಯಾ ಕಳೀಬೇಕಾಗತದ ! ನಾವೆಲ್ಲಾರೂ ಮದಿವೀ ಮನಿಗೆ ಹೋಗತೀವಿ !"

ರತ್ನಾಕರ ಮೆಲುನಗೆ ನಗುತ್ತ ಹೇಳಿದ :

" ದೈವಶಾಲಿಗಳಿದ್ದೀರಿ ನೀವು ! ದೇಶದ ಸ್ವಾತಂತ್ರ್ಯದ ಸಲುವಾಗಿ ಬ್ರಿಟಿಶರ ಕೂಡ ಹೋರಾಟ ಹೂಡಿದ ನಾನು, ಈಗ ಈ ಪಾರತಂತ್ರ್ಯದ ಪಂಜರದೊಳಗ ಸಿಕ್ಕು ಒದ್ದಾಡಬೇಕಾಗೇದ ! ಆದರ ದೇಶದ ಪಾರ-ತಂತ್ರ್ಯದ ಕಲ್ಪನಾ ಸ್ವಲ್ಪವೂ ಇರದ ನಮ್ಮ ಜನರು. ಬ್ರಿಟಿಷರ ಪಾರತಂತ್ರ್ಯದ ಪಂಜರದೊಳಗೂ ಸ್ವತಂತ್ರರಂತೆ ಸುಖದಿಂದ ಬೇಕಾದ್ಹಾಂಗ ತಿರುಗಾಡತಾರ !"

ಕುಮುದಾ ಹೇಳಿದಳು :

" ಸ್ವಾತಂತ್ರ್ಯದ ಸೌಖ್ಯ ಪಂಜರದ ಹಕ್ಕಿಗಳಿಗೆ ಏನು ಗೊತ್ತು ? ಗೊತ್ತಿರುವ ಹಕ್ಕಿ ಮಾತ್ರ, ಪಂಜರದೊಳಗ ಬೇಕಾದಷ್ಟು ಸುಖಸಾಧನಗಳು ಇದ್ದರೂ, ಅದನ್ನ ಬಿಟ್ಟು ಬಿಟ್ಟು, ಪಂಜರಾ ಒಡಿದು ಹೊರಬೀಳಲಿಕ್ಕೆ ಧಡ-ಪಡಿಸತಿರತದ. ಮೈಯಿ-ಮುಖ ನೊವಾದರೂ ತನ್ನ ಧಡಪಡಿಕೀ ಬಿಡೂದಿಲ್ಲ !"

ತಿಂಡಿಯನ್ನು ಬಾಯಲ್ಲಿ ಹಾಕಿಕೊಳ್ಳುತ್ತಲೇ ರತ್ನಾಕರ ಕೇಳಿದ :

" ಹಾಂಗಾದರ ನೋಡ್ರಿ ! ನಿಮಗ ಯಾವ ಅವಸ್ಥಾ ಒಳ್ಳೇದನಿಸತದ? ಪಂಜರದೊಳಗ ಸುರಕ್ಷಿತ ಇದ್ದು, ಹಾಕಿದ ಹಣ್ಣು-ಹಂಪಲಗಳನ್ನ ತಿಂದು ಸುಖಪಡುವ ಹಕ್ಕಿಯದೋ ? ಏನು ಸ್ವತಂತ್ರರೀತಿಯಿಂದ ವಾತಾವರಣ ದೊಳಗ ಹಾರಾಡಿ, ತಾನೇ ಸಂಪಾದಿಸಿದ ಕಳಿವಣ್ಣು ತಿಂದು ಸುಖಿಸುವ ಸಾಹಸೀ ಹಕ್ಕಿಯದೋ ?"

ಕುಮುದಾ ಸಲುಗೆಯ ನಗೆನಗುತ್ತ ನುಡಿದಳು :

" ಈಗ ಈ ವಿಷಯ ನಾನೇನೂ ಹೇಳಲಾರೆ ! ನೀವು ಒಂದು ವಿಷಯ ದೊಳಗ ನನಗ ಸಲಹೆ ಕೊಡಬೇಕಾಗೇದ !"

" ಏನು ? ಯಾವ ವಿಷಯದೊಳಗ ?"

" ನಾಳೆಯ ದಿವಸ ಮದುಮಗಳಿಗೆ ಮದುಮಗನಿಗೆ ಉಡುಗರೆ ಒಪ್ಪಿಸಬೇಕಾಗೇದ. ಏನುಕೊಡಬೇಕಂತೀರಿ ?"

" ಓ ! ಇದಕ್ಕಾಗಿ ನನ್ನ ಸಲಹೆ ಯಾತಕ್ಕ ಬೇಕಾಗೇದ ? ಕಾವೇರಿ ಗೊಂದು ನೂಲುವ ರಾಟೀ ಕೊಡ್ರಿ; ರಂಗಣ್ಣಾಗ ಒಂದು ಗಂಟು ಹಂಜೀ ಕೊಡ್ರಿ !"

ಕುಮುದೆಗೆ ನಗೆಬಂದಿತು. ಗಟ್ಟಿಯಾಗಿ ನಕ್ಕುಬಿಟ್ಟಳು. ಆ ನಗೆ-

ಮೊಗವನ್ನು ರತ್ನಾಕರನ ಕಣ್ಣುಗಳು ನುಂಗಿಬಿಡುವಂತೆ ನೋಡುತ್ತಲಿದ್ದುವು. ಕುಮುದಾ ನಗೆಯುನ್ನು ನಿಲ್ಲಿಸಿ ಕೇಳಿದಳು :

" ನೀವು ಬರೀ ನಗಿಚಾಟಿಕೀ ಮಾಡಬ್ಯಾಡ್ರಿ ! ನಿಜವಾಗಿಯೂ ನನಗ ತಿಳೀದ್ಹಾಂಗಾಗೇದ; ಏನು ಕೊಡಬೇಕಂತೀರಿ ?"

" ನೋಡ್ರಿ, ನನಗ ಎಂದೂ ಯಾರಿಗೂ ಉಡುಗರೆ ಕೊಟ್ಟು ಗೊತ್ತಿಲ್ಲ; ತೊಗೊಂಡುಗೊತ್ತಿಲ್ಲ. ಏನು ಕೊಡಬೇಕಂತ ನಾ ಹೇಳಲಿ ? ಉಡುಗೊರೆ- ಯೆಂದರ ಪ್ರೀತಿಯದೊಂದು ಪ್ರತೀಕ. ನಿಜವಾದ ಪ್ರೀತಿಯೇ ಕೊಡಲಿಕ್ಕೆ ಇದ್ದಮ್ಯಾಲ, ಈ ಭೌತಿಕ ಪ್ರತೀಕಕ್ಕ ಏನು ಮಹತ್ತ್ವ ಅದ ಹೇಳ್ರಿ ! ನಮ್ಮ ಜನರೊಳಗಿನ ಈ ಉಡುಗೋರೀ ಹುಚ್ಚಾಟಾ ನಾನೂ ನೋಡೀನಿ. ಬಹಳ ಜನರು ಇದನ್ನೊಂದು ವ್ಯವಹಾರ—ಅಂದರ ವ್ಯಾಪಾರಕ್ಕ ಇಳಿಸಿ ಬಿಟ್ಟಾರ ! ಹತ್ತು ಕೊಟ್ಟರ, ಹದಿನೈದಾದರೂ ತಿರುಗಿ ಬರತಾವ ! ಅಂಬೂ ಲಾಭದ ದೃಷ್ಟಿಯಿಂದ ಉಡುಗೊರೆ ಮಾಡುವ ಜನರೇ ಬಹಳ ಇರತಾರ. ಅಂಥಾ ಮಂದಿಗೆ ಆ ಲಾಭ ಸಿಕ್ಕೊಸಿಗತದ. ಸಂಪ್ರದಾಯಕ್ಕ ಕಟ್ಟುಬಿದ್ದು ಸಾಲಾ ಸೂಲಾ ಮಾಡಿ ಉಡುಗೋರಿ ಸಲ್ಲಿಸುವ ಬಡಜನರೂ ಇರತಾರ. ಆದರ ಅಂಥಾ ಜನರಿಗೆ ಆದ ಸಾಲ ಮಾತ್ರ ಖರೆ; ಮದಿವೀ ಮನಿಯೊಳಗ, ಪ್ರೀತಿ ಯಿಂದ ಕೊಡುವ ಒಂದು ಕಪ್ಪು ಚಹಾ ಸಹಿತ ಸಿಗೂದಿಲ್ಲ. ನಾ ಈಗ ಹೇಳಿದ್ದಂದರ, ನಮ್ಮ ನಮ್ಮ ಸಮಾಜದೊಳಗಿರುವ ಉಡುಗೊರಿಯ ಕುರುಡು ರೂಢಿಯ ವಿಚಾರ. ಈಗ ನಿಮ್ಮ ಮಾತು ಬೇರೆ. ಕಾವೇರಿಗೆ ನಿಮಗ ಸ್ನೇಹ ಬಹಳ. ಸ್ನೇಹದ ಬೆಲೆಗೆ ಸಮಾನವಾಗಿ ಯಾವ ಒಡವಿ ನಿಂತೀತು ?"

ಕುಮುದಾ ಮೆಲ್ಲಗೆ ನುಡಿದಳು :

" ನಿಮ್ಮ ಮಾತು ನಿಜ ! ಈಗ ಶಿಷ್ಟಾಚಾರಾ ಅಂತಲೇ ನಾವು ಉಡು ಗೊರೆ ಕೊಡಬೇಕು !"

" ಸರಿ ! ಹಾಂಗಾದರ ಇದರೊಳಗ ವಿಚಾರ ಮಾಡೂದೇನದ ? ನಿಮ್ಮ ಮನಸ್ಸಿಗೆ ಒಪ್ಪಿಗೆ ಎನಿಸಿದ್ದನ್ನ, ಕೊಟ್ಟುಬಿಡಿರಿ ! ಇನ್ನೊಂದು ಮಾತಂದರ, ಕಾವೇರಿ ನಿಮ್ಮ ಗೆಳತಿಯಾದರೂ, ನೀವು ಗಂಡಿನ ಕಡೆಯುವರಾಗಿ ಇರ- ಬೇಕಾಗತದ. ಪಾಪ, ರಂಗಣ್ಣಾಗ ಅಕ್ಕ ಇಲ್ಲ, ತಂಗಿ ಇಲ್ಲ !"

ಕುಮುದಾ ಅಂತಃಕರಣದಿಂದ ಹೇಳಿದಳು :

" ಅವರಿಗೆ ಅಕ್ಕ ಇಲ್ಲ–ತಂಗಿ ಇಲ್ಲ ! ಆದರಂತೇ ನನಗ ಅಣ್ಣಾ ಇಲ್ಲ–ತಮ್ಮ ಇಲ್ಲ ! ಈ ಮದಿವಿಯೊಳಗ ನಾನೇ ಕಳಸಗಿತ್ತಿಯಾಗಿ ರಂಗಣ್ಣನ ತಂಗಿಯಾಗಿ ಬಿಡತೀನಿ !"

" ನಿಮ್ಮಂಥಾ ತಂಗಿ ಸಿಕ್ಕರ, ರಂಗಣ್ಣಾ ಎಷ್ಟು ಸಂತೋಷ ಪಡತಾನೋ ಏನೋ !"

" ರಂಗಣ್ಣಾ ನನ್ನ ತಂಗಿ ಅಂತ ಒಪ್ಪಿಕೊಂಡರ, ನನಗೂ ತುಂಬಾ ಆನಂದ ಆಗತದ ! ಕಾವೇರಿನ್ನ ನಾನು ಇಂದಿನಿಂದ 'ಅತಿಗೀ' ಅಂತ ಕರೆಯುಲಿಕ್ಕೆ ಪ್ರಾರಂಭಮಾಡತೀನಿ !"

" ಛೇ ಛೇ, ಹಾಂಗ ಮಾತ್ರ ಮಾಡಬ್ಯಾಡ್ರಿ ! ಯಾಕಂದರ, ಅತಿಗಿ-ನಾದಿನಿ, ಆದರಂತೇ ಅತ್ತಿ-ಸೊಸಿ—ಈ ಶಬ್ದದ್ವಂದ್ವದೊಳಗ ಎಂಥಾ ದುಃಶಕ್ತಿ ತುಂಬೇದೋ ಏನೋ ! ಈ ಶಬ್ದದ ಕೂಡಾನೇ ಈರ್ಷ್ಯಾ–ದ್ವೇಷ-ಅಸೂಯಾ ಬಂದೇ ಬಿಡತಾವ !"

ಕುಮುದಾ ರತ್ನಾಕರನ ಮುಖವನ್ನು ಕೌತುಕದಿಂದ ನೋಡುತ್ತ ಮತ್ತೆ ನಕ್ಕು ನುಡಿದಳು :

" ನಿಮ್ಮ ಈ ಮಾತು ನಿಜಾ ಇದ್ದರ, ಕಾವೇರಿನ್ನ ನಾನು ' ಅತಿಗೀ ' ಅಂತೇನೂ ಕರೆಯೂದಿಲ್ಲ. ಆಕಿ ನನ್ನ ಗೆಳತಿಯಾಗಿಯೇ ಇರಲಿ ಕಡೆತನಕಾ!"

ರತ್ನಾಕರನೂ ಗಟ್ಟಿಯಾಗಿ ನಕ್ಕುಬಿಟ್ಟ. ಸ್ತ್ರೀ ಸಹಜವಾದ ಮುಗ್ಧತೆ ಕುಮುದೆಯಲ್ಲಿಯೂ ಇದ್ದುದನ್ನು ಕಂಡು ಸಮಾಧಾನ ಪಟ್ಟ. ಇನ್ನೂ ಸ್ವಲ್ಪ ಹೊತ್ತು, ಕುಮುದಾ ಇಲ್ಲಿಯೆ ಇದ್ದುಬಿಡಲಿ—ಎಂದು ರತ್ನಾಕರನಿಗೆ ಎನಿಸುತ್ತಿತ್ತು. ಕುಮುದೆಗೂ ಹಾಗೆಯೆ ಎನಿಸುತ್ತಿರಬಹುದು. ಆಕೆ ಮತ್ತೆ ಕೇಳಿದಳು :

" ಇಂದು ನಾಲ್ಕುಗಂಟೆಗೇ ಗಂಡಿನ ಬೀಗರು ಬಂದುಬಿಡತಾರ ಹೌದಲ್ಲೋ ?"

" ಹೌದು, ಸ್ಪೆಶಲ್ ಮೋಟಾರ್ ಮಾಡಿಕೊಂಡೇ ಬಂದು ಬಿಡತೀವಿ–ಅಂತ ತಿಳಿಸ್ಯಾರ ! ಆದರ ಒಂದು ಲೋಕಾಚಾರದ ವಿಷಯ ನನ್ನ ತಲಿ ತಿನ್ನಲಿಕ್ಕೆ ಹತ್ತೇದ. ಏನೇ ಆದರೂ ವೆಂಕಣ್ಣಾ ರಂಗಣ್ಣನಿಗೆ ಒಡಹುಟ್ಟಿದ ತಮ್ಮ. ಆತಗ ಮದುವಿಗೆ ಔತಣಾ ಕೊಡಬೇಕಾಗತದೋ ಏನೋ ! ರಂಗಣ್ಣಾ ಆತಗ

ಲಗ್ನಪತ್ರ ಕಳಿಸಿರಬಹುದು. ಆದರೂ ಪ್ರತ್ಯಕ್ಷ ಕಂಡು ಕರಕೊಂಡು ಬರಬೇಕಂತ ರಂಗಣ್ಣ ಅಂದುಬಿಟ್ಟರ....ಏನು ಮಾಡಬೇಕು ? "

ಕುಮುದಾ ಬೇಸರದ ಧ್ವನಿಯಲ್ಲಿ ನುಡಿದಳು :

" ಅಂಥಾ ಅಣ್ಣಾಗ ಇಂಥಾ ತಮ್ಮ ! ಮಾವಿನ ಮರದ ಮಡಿಯೊಳಗಽ ಜಾಲಿಯ ಮರ ಹುಟ್ಟಿದ್ಹಾಂಗ ! "

"ಜನರು ಆ ವೈಷಮ್ಯ ನೋಡೂದಿಲ್ಲ. ಅಣ್ಣಾ-ತಮ್ಮ ಅಂಬೂದನ್ನಷ್ಟಽ ನೋಡತಾರ! ನೀತಿವಂತರು ಜನರ ನಿಂದಾಕ್ಕ ಬೆದರಬೇಕಾಗತ್ಽದ! ಮುಳ್ಳಿದ್ದರೂ,ಜಾಲಿಯ ಮರಕ್ಕೂ ನಿರ್ವಾಹ ಇಲ್ಲದೆ ತಕ್ಕೆಬೀಳಬೇಕಾಗತ್ಽದ!"

''ನನಗ ಏಷ್ಟೋ ಸಲ ಈ ನೀತಿಯ ಅರ್ಥವೇ ಆಗುವುದಿಲ್ಲ. ಆಪ್ತತ್ವ ಸ್ನೇಹ ಬೆಳೆಯಬೇಕಾದದ್ದು ಹೃದಯ-ಹೃದಯಗಳ ಸಂಬಂಧದಿಂದ; ಅಂಥಾ ಹೃದಯ ಸಂಬಂಧ ಇಲ್ಲದೇ ಇರುವ ಈ ಸಾಂಪ್ರದಾಯಿಕ ಆಪ್ತತ್ವ-ಗೆಳೆತನ ಯಾಕ ಉಳಿಯಬೇಕೋ, ನನಗ ತಿಳಿಯದ್ಹಾಂಗ ಆಗೇದ! "

ರತ್ನಾಕರ ನಗುತ್ತ ಹೇಳಿದ :

''ನೀವು ಆಡತಾ ಇರೂದು ಆದರ್ಶದ ದೇವಲೋಕದ ಮಾತು ! ಆದರ ಈ ವ್ಯವಹಾರದ ಮರ್ತ್ಯಲೋಕದೊಳಗ, ಮೊದಲಿಂದಲೂ ಇದೇರೀತಿ ನಡಕೊಂಡು ಬಂದ್ಹಾಂಗ ಕಾಣಿಸತ್ಽದ ! ನಿಮಗ ಇನ್ನೂ ಲೋಕದ ಸಂಬಂಧ ಹೆಚ್ಚಾಗಿ ಬಂದಿಲ್ಲ. ಮುದ್ದುಮಾಡುವ ತಾಯಿ, ಅಂತಃಕರಣದ ತಂದಿ, ಅರಳಿದ ಸ್ನೇಹದ ಕಾವೇರಿ, ಪ್ರೀತಿಯ ಪುತ್ತಳಿ ವೇಣಕ್ಕ ಇವರದಷ್ಟೇ ಸಂಬಂಧ ಬಂದ್ಽದ! ನಾಳೆ ನೀವೂ ಮದಿವೀ ಮಾಡಿಕೊಂಡು ಗಂಡ, ಅತ್ತೆ, ಮಾವ, ಭಾವ, ಅತ್ತಿಗಿ, ನಾದಿನಿ, ಮೈದುನ–ಈ ಆಪ್ತಭಾವದ ತೊಡಕಿನೊಳಗ ಸಿಕ್ಕಿಕೊಂಡಿರಂದರ, ಲೋಕದೊಳಗ ಹೃದಯದ ಭಾಗ ಎಷ್ಟು, ವ್ಯವಹಾರ ಬುದ್ಧಿಯ ಭಾಗ ಎಷ್ಟು....ಅಂಬೂದು ತಾನೇ ಗೊತ್ತಾಗತ್ಽದ !"

ಕುಮುದಾ ಗಾಬರಿಗೊಂಡ ಮುದ್ರೆಯಿಂದ, ಒಂದೆ ಸವನೇ ರತ್ನಾಕರ-ನನ್ನು ನೋಡುತ್ತಲಿದ್ದಳು. ಅವಳಿಗೆ ಅದೇನೋ ರತ್ನಾಕರ ತನ್ನನ್ನು ದೂರಕ್ಕೆ ನೂಕುತ್ತಲಿದ್ದಾನೆನ್ನುವಂತೆ ಕಂಡಿತು. ಹೃದಯ ಕಂಪಿಸಿತು. ಮುಖದ

ನಗೆಯು ಮರೆಯಾಯಿತು. ಕೆಳಗೆ ಮುಖಮಾಡಿಕೊಂಡೇ ಟೇಬಲ್ಲಿನ ಮೇಲಿನ ತಟ್ಟೆ-ಪಾತ್ರೆಗಳನ್ನು ತೆಗೆದುಕೊಳ್ಳುತ್ತಿರುವಾಗ, ಕುಮುದೆಯ ಬಲಗೈ ರತ್ನಾಕರನಿಗೆ ತಗುಲಿತು. ಮುಡಿಯಲ್ಲಿಯ ಮಲ್ಲಿಗೆಯ ಕಂಪು ಘಮ್ಮೆಂದು ಆತನ ಮೂಗಿನಲ್ಲಿ ತುಂಬಿಕೊಂಡಿತು. ಉಟ್ಟ ಹೊಸಪತ್ತಲ, ತೊಟ್ಟ ರೇಶ್ಮೆಯ ಕುಪ್ಪಸಗಳ ಬೆಡಗು, ರತ್ನಾಕರನ ಕಣ್ಮನಗಳನ್ನು ಸೆಳೆಯಿತು. ಕಂಪಿಸುವ ಎದೆಯಿಂದ ಅವನೂ ಸುಮ್ಮಗೆ ಕುಳಿತುಬಿಟ್ಟಿದ್ದ. ಕುಮುದಾ ಜಡವಾದ ಅಡಿಗಳನ್ನಿಡುತ್ತ ಹೊರಟು ನಡೆದಳು.

ಆಗ ರತ್ನಾಕರನು ಒಮ್ಮೆಲೆ ಕರೆದ:

"ಕುಮುದಾ !"

ತಟ್ಟನೆ ಕುಮುದಾ ತಿರುಗಿನಿಂತು ಕೇಳಿದಳು:

"ಏನು ?"

"ನಾನು 'ಕುಮುದಾ' ಎಂದು ಕರೆದೆ. ಸಿಟ್ಟು ಬರಲಿಲ್ಲ ಹೌದಲ್ಲೊ ?"

ಏನು ಮಾತನಾಡಬೇಕೆಂಬುದು ತಿಳಿಯದೆ, ಕುಮುದಾ ಕಿರುನಗೆ ನಕ್ಕಳು. ರತ್ನಾಕರ ಹೇಳಲು ತೊಡಗಿದ:

"ಕುಮುದಾ, ನೀನಿಂದು ರಂಗಣ್ಣನ ತಂಗಿಯಾಗುವಾಕಿ ! ಅದಕ್ಕಾಗಿ 'ನೀವು ನೀವು' ಅಂತ ಸನ್ಮಾನವಾಚಕ ಶಬ್ದಗಳಿಂದ ಮಾತಾಡೂದು, ಯಾಕೋ ನನಗ ಸರಿ ಅನಿಸವೊಲ್ಲದು. ಒಬ್ಬರಿಂದೊಬ್ಬರು ಬಹಳ ದೂರ ಇದ್ದಾಂಗ ಅನಿಸತ್ತದ. ಅದಕ್ಕs ನಾನು ಇನ್ನ ಮ್ಯಾಲ 'ಕುಮುದಾ' ಅಂತ ಕರೀತೀನಿ; ಏಕವಚನದೊಳಗs ಮಾತಾಡತೀನಿ ! ಆಗಬಹುದೇನು ?"

"ಹೀಂಗ ಎಂದೋ ಆಗಬೇಕಾಗಿತ್ತು. ಈಗ ರಂಗಣ್ಣನ ಪುಣ್ಯದಿಂದ ಪ್ರಾರಂಭ ಆಯ್ತು. ನನಗೊಂದು ದೊಡ್ಡ ಸಂಪತ್ತು ಸಿಕ್ಕಷ್ಟು ಆನಂದ !"

ರತ್ನಾಕರ ಮತ್ತೆ ಕೂಗಿದ:

"ಕುಮುದಾ !"

ಕುಮುದಾ ನಗುತ್ತ ನುಡಿದಳು:

"ಇಲ್ಲಿಯೇ ಮುಂದೆ ನಿಂತಿದ್ದಾಳೆ.... ಕುಮುದಾ !"

“ಹಾಂಗಲ್ಲ ಕುಮುದಾ! ‘ಕುಮುದಾ’ ಎಂದು ಕರೆಯುವುದಕ್ಕೆ ರೂಢಿ-ಮಾಡಿಕೊಳ್ಳಬೇಕಾಗೇದ. ಮನದ ಸಂಕೋಚ ಕಡಿಮಿ ಮಾಡಿಕೊಳ್ಳ-ಬೇಕಾಗೇದ!”

ಕುಮುದೆಯ ಮುಖದಲ್ಲಿ ಮತ್ತೆ ನಗೆಯ ಪ್ರಸನ್ನತೆ ಕಂಡಿತು. ನಾಚಿಕೆ ಮುಖದ ಚೆಂಬಣ್ಣವನ್ನು ಹೆಚ್ಚಿಸಿತು. ಉತ್ಸಾಹದ ಪ್ರತುಮೆಯಾಗಿ, ಅಟ್ಟ-ವನ್ನಿಳಿದು ಕೆಳಗೆ ಹೋದಳು.

## ೩೬ನೆಯ ಪರಿಚ್ಛೇದ

ರಂಗಣ್ಣನ ಮದುವೆಯ ನಿಬ್ಬಣದ ಸ್ಪೆಶಲ್‌ಬಸ್ಸು, ಹಗಲು ನಾಲ್ಕುವರೆ ಗಂಟೆಗೆ ಸರಿಯಾಗಿ ನಗರವನ್ನು ತಲ್ಪಿತು. ಅನಂತರಾಯ-ಗೋಪಾಲರಾಯರು ಪುರೋಹಿತರು, ನಿಯಮಿತ ಸ್ಥಳದಲ್ಲಿ ನಿಬ್ಬಣದ ಜನರನ್ನು ಎದುರುಗೊಂಡು ಸ್ವಾಗತಿಸಿ, ಅವರಿಗಾಗಿಯೇ ಗೊತ್ತುಮಾಡಿದ ಮನೆಗೆ ಕರೆದುಕೊಂಡುಬಂದರು. ದತ್ತೋಬನದೇ ಬಸ್ಸು. ಬಂದವರಲ್ಲಿ ರಂಗಣ್ಣನ ಆಪ್ತರ ಬಳಗ ಹೆಚ್ಚಾಗಿರಲಿಲ್ಲ. ಹೆಂಗುಸರೆಂದರೆ ರಂಗಣ್ಣನ ಕಕ್ಕಿ, ರಂಗಣ್ಣನ ದಾಯಾದಿಗಳಲ್ಲಿಯ ಒಬ್ಬ ಹಿರಿಯ ಮುತ್ತೈದೆ, ಕೆಲಸದ ಒಕ್ಕಲುಗಿತ್ತಿಯೊಬ್ಬಾಕೆ. ಗಂಡಸರ ಬಳಗ ಮಾತ್ರ ಹೆಚ್ಚಾಗಿದ್ದಿತು. ರಂಗಣ್ಣನಂತೂ ಸರಿಯೇ ಸರಿ. ಖಾದಿಯಂಗಡಿಯ ಶಂಕರಣ್ಣ, ಮುದ್ದಾಪುರದ ಹಿರಿಯ ತಿಮ್ಮರಡ್ಡಿ, ನಿಂಗಪ್ಪ, ರಾಜೇಸಾಹೇಬ, ಬೇರೆ ಮೂರು-ನಾಲ್ಕು ಜನ ಹಳ್ಳಿಯ ತರುಣರು—ಹೀಗೆ ಎಂಟು-ಹತ್ತು ಜನರಿದ್ದರು. ಡ್ರಾಯವ್ಹರ್ ದತ್ತೋಬಾನೂ ನಿಬ್ಬಣದವರಲ್ಲಿಯೇ ಒಬ್ಬ.

ಬಂದ ಬೀಯಗರಿಗೆಲ್ಲ ಅವರವರ ಇಷ್ಟದಂತೆ, ಶೈತ್ಯೋಪಚಾರ ಉಷ್ಣೋಪಚಾರ ನಡೆದುವು. ಎಲ್ಲ ಆದರೋಪಚಾರಗಳನ್ನು ಮುಗಿಸಿ ಗೋಪಾಲರಾಯರು, ಅವರ ಜೊತೆಗಾರರು, ರಂಗಣ್ಣನನ್ನು ಬೀಳ್ಕೊಂಡು ಹೊರಟುಹೋದರು. ಬಳಿಕ ಕೆಲವು ನಿಮಿಷಗಳು ಕಳೆದಿರಬಹುದು. ಚಿಕ್ಕಮ್ಮ ರಂಗಣ್ಣನ ಬಳಿಗೆ ಬಂದು ಹೇಳಿದರು :

“ವೆಂಕಣ್ಣಗ ಹೇಳಿ ಕಳಿಸಬೇಕಪ್ಪಾ ರಂಗಣ್ಣಾ! ಆತ ಎಲ್ಲಿ ಇರತಾನ? ಲಗೂನs ಬಂದು ಬಿಡಲಿ! ಈಗಲೇ ಯಾರನ್ನಾದರೂ ಕಳಿಸಿಕೊಡು!”

ರಂಗಣ್ಣ ಮಾತನೇನೂ ಆಡದೆ ಯೋಚನೆಯಲ್ಲಿ ಕುಳಿತುಬಿಟ್ಟ. ಆಗ ಚಿಕ್ಕಮ್ಮ ಮತ್ತೆ ಹೇಳಿದರು :

"ಆತನ್ನ ಬಿಟ್ಟರ, ನಿನಗ ಸಮೀಪದ ಬಂಧುಗಳು ಅಂತ ಯಾರು ಇದ್ದಾರ ಹೇಳು ! ಆತನ ಸ್ವಭಾವ ಹ್ಯಾಂಗs ಇರವೊಲ್ಲದ್ಯಾಕ; ಬೆನ್ನಿಗೆ ಬಿದ್ದ ತಮ್ಮ ಸುಳ್ಳೇನು ? "

"ಬೆನ್ನಿಗೆ ಬಿದ್ದ ತಮ್ಮ !" ಎಂದು ಉದ್ಗಾರ ತೆಗೆದು, ರಂಗಣ್ಣ ದೀರ್ಘವಾಗಿ ಬಿಸಿಯುಸಿರೊಂದನ್ನು ಹಾಕಿದ. ಆ ಮೇಲೆ ಶಂಕರಣ್ಣನನ್ನು ಕರೆದು ಹೇಳಿದ :

"ಚಿಕ್ಕಮ್ಮ ಏನಂತಾರ ಕೇಳಿದೇನು ಶಂಕರಣ್ಣಾ ! ವೆಂಕಣ್ಣನ್ನ ಕರಿಸಬೇಕಂತಾರ ಈಗಲೇ !"

"ಅವರು ಬರಲಿ, ಬಿಡಲಿ ! ಮದಿವೆಯೆಂದ ಮ್ಯಾಲ, ಕರಿಯೂ ಮಾತನ್ನ ಮುಟ್ಟಿಸೂದು ನಮ್ಮ ಕರ್ತವ್ಯ ! ಬೇಕಾದರ ನಾನು, ದತ್ತೋಬಾ ಕೂಡಿ ಹೋಗಿಬರತೀವಿ !"

ಜಡವಾದ ಧ್ವನಿಯಲ್ಲಿಯೇ ರಂಗಣ್ಣ ಹೇಳಿದ :

"ಆಯ್ತು ! ಈ ಸಂಪ್ರದಾಯದ ಜಾಲದೊಳಗಿಂದ ಪಾರಾಗಲಿಕ್ಕೆ, ನಮ್ಮ ಸಮಾಜದೊಳಗ ಸಾಧ್ಯವೆ ಇಲ್ಲ. ಆಗಲಿ, ನೀನು-ದತ್ತೋಬಾ ಹೋಗಿ ಕರೆದುಕೊಂಡು ಬರ್ರಿ ! ಈಗ ಆತ ಕೋರ್ಟಿನೊಳಗೇ ಇರಬಹುದು. ಮೋಟಾರು ತೊಗೊಂಡೇ ಅಲ್ಲಿಗೆ ಹೋಗಿಬಂದು ಬಿಡ್ರಿ !"

ಶಂಕರಣ್ಣ ದತ್ತೋಬನನ್ನು ಕರೆದುಕೊಂಡು ಹೊರಟುಬಿಟ್ಟ. ರಂಗಣ್ಣ "ಈಗ ಇಲ್ಲೇ ಸ್ವಲ್ಪ ಹೊರಗೆ ಹೋಗಿ ಬರ್ತೇನs !" ಎಂದು ಎಲ್ಲರಿಗೂ ಹೇಳಿ ಅನಂತರಾಯರ ಮನೆಯ ಕಡೆಗೆ ಹೊರಟ.

* * * * *

ರತ್ನಾಕರ ಕೋಣೆಯಲ್ಲಿ ಒಬ್ಬನೆ ಕುಳಿತುಕೊಂಡು, ನಾಳೆಯ ಮದುವೆಯ ಚಿತ್ರವನ್ನು ಕಣ್ಣೆದುರು ತಂದುಕೊಂಡು ನೋಡುತ್ತಲಿದ್ದ. ಅದರೊಂದಿಗೆ ತಲೆಯಲ್ಲಿ ವಿಚಾರಪ್ರವಾಹ ನಡೆದಿದ್ದಿತು :

"ಗಂಡುಸೇ ಆಗಲಿ, ಹೆಂಗುಸೇ ಆಗಲಿ, ಒಂಟಿಗನಾಗಿ ಬಾಳುವುದೆಂದರೆ ಅದು ಅಪೂರ್ಣಜೀವನ ! ಒಂದೇ ಗಾಲಿಯ ರಥವಿದ್ದಂತೆ! ಗಂಡು-ಹೆಣ್ಣಿನ ಜೊತೆಯ ಬಾಳೇ ಪೂರ್ಣಜೀವನ. ಗಂಡು ಹೆಣ್ಣಿನ ಸುಖಕ್ಕಾಗಿ, ಹೆಣ್ಣು ಗಂಡಿನ ಸುಖಕ್ಕಾಗಿ, ತನ್ನ ಜೀವನದ ಆಹುತಿಯನ್ನು ಬೇಳುತ್ತಿರಬೇಕು !

ದಾಂಪತ್ಯಜೀವನವೆಂದರೆ ಇದೊಂದು ಆನಂದಯಜ್ಞ. ಆಹುತಿ ಹೆಚ್ಚು ಹೆಚ್ಚಾದಂತೆ, ಆನಂದದ ಅಭಿವೃದ್ಧಿಯಾಗುವುದು. ಪರಸ್ಪರ ಜೀವನಹೋಮ ವಿಲ್ಲದೆ ಹೋದರೆ, ಆ ದಾಂಪತ್ಯ ಬರೀ ಕಾಳ್ಗಿಚ್ಚಾಗಿ ಪರಿಣಮಿಸುವುದು. ಧರ್ಮದಲ್ಲಿಯೂ ಅರ್ಥದಲ್ಲಿಯೂ ಕಾಮದಲ್ಲಿಯೂ ಗಂಡು-ಹೆಣ್ಣು ಒಬ್ಬರ ನ್ನೊಬ್ಬರು ಅನುಸರಿಸಿಯೇ ನಡೆಯಬೇಕು. ಧರ್ಮ-ಅರ್ಥಗಳನ್ನು ಬಿಟ್ಟು ದಂಪತಿಗಳು, ಬರೀ ಕಾಮದ ಕೈಗೊಂಬೆಗಳಾದರೂ ತಮ್ಮ ಜೀವನವನ್ನು ತಾವೇ ಹೊಳಿಯಾಡಿದಂತೆ ಆದೀತು! ಗಂಡು-ಹೆಣ್ಣಿನ ಮದುವೆಯೆಂದರೆ, ಅದೊಂದು ಕಾಮವ್ಯವಹಾರದ ಕರಾರುನಾಮೆಯಲ್ಲ; ಅಪೂರ್ಣ ಜೀವನದ ಅತೃಪ್ತಿಯನ್ನು ಪೂರ್ಣಜೀವನದಿಂದ ಕಳೆದುಬಿಡುವ ಯೋಗಸಾಧನ! ಈ ರಹಸ್ಯವನ್ನು ತಿಳಿದುಕೊಳ್ಳದೆ ಹೋದರೆ, ಮದುವೆ ಮದುವೆಯೆನ್ನಿಸಿಕೊಳ್ಳ ಲಾರದು; ಜೀವನದಲ್ಲಿ ಸುಖ-ಸಮಾಧಾನಗಳೂ ಸಿಕ್ಕಲಾರವು.

....ನಾಳೆಯ ದಿನ ರಂಗಣ್ಣನ ಜೊತೆಯಿಂದ ಕಾವೇರಿಯ ಜೀವನ ಪೂರ್ಣವಾಗುವುದು; ಕಾವೇರಿಯ ಜೊತೆಯಿಂದ ರಂಗಣ್ಣನ ಜೀವನ ಪೂರ್ಣವಾಗುವುದು. ಇಬ್ಬರೂ ಜೊತೆಗೂಡಿ ವೈಯಕ್ತಿಕ ವಿಕಾಸಕ್ಕೂ ಸಮಾಜ ಸೇವಾಕಾರ್ಯಕ್ಕೂ ಸಾಮರಸ್ಯದಿಂದ ತೊಡಗಿದರೆ, ಅದೆಷ್ಟು ಒಳ್ಳೆಯದಾದೀತು?....

....ರಂಗಣ್ಣನ ಜೀವನ ಪೂರ್ಣವಾಯಿತು. ನಾನು ನನ್ನ ಈ ಅಪೂರ್ಣ ಜೀವನವನ್ನು ಎಷ್ಟು ಕಾಲದ ವರೆಗೆ ಕಳೆಯಬೇಕಾಗುವುದೋ! ಕುಮುದೆ-ಯಂಥವಳ ಜೊತೆಯಿಂದ ನಾನು ನನ್ನ ಜೀವನವನ್ನು ಪೂರ್ಣಗೊಳಿಸಿಕೊಳ್ಳ-ಬಹುದು! ಕುಮುದೆಯೂ ನನ್ನೊಂದಿಗೆ ಯಜ್ಞಜೀವನ ನಡೆಯಿಸಲಿಕ್ಕೆ ಸಿದ್ಧಳಿರಬಹುದು! ಆದರೆ, ನಮ್ಮ ಸಮಾಜದಲ್ಲಿ ವ್ಯಕ್ತಿಗೆ ಇರುವ ಸ್ವಾತಂತ್ರ್ಯ ಎಷ್ಟು? ಅದರಲ್ಲಿಯೂ ಹೆಣ್ಣಿಗೆ ಇರುವ ಸ್ವಾತಂತ್ರ್ಯ ಎಂತಹದು? ತಂದೆ, ತಾಯಿ, ಬಂಧು, ಬಳಗ - ಎಲ್ಲರೂ ತಮ್ಮ ತಮ್ಮ ವ್ಯಾವಹಾರಿಕ ಅಭಿರುಚಿ-ಗನುಸಾರವಾಗಿ, ಹೆಣ್ಣಿನ ಬಾಳನ್ನು ತಿದ್ದಲಿಕ್ಕೆ ಸಿದ್ಧರಾಗಿ ನಿಂತಿರುವರು....

....ನಾಳೆಯ ದಿನ ರಂಗಣ್ಣ,ಕಾವೇರಿಯ ಕೈಯನ್ನು ಹಿಡಿಯುವ. ಅಬ್ಬಾ! ಆಕೆಗೆ ಎಂತಹ ಆನಂದವಾಗಬಹುದು? ನಾಳೆಯ ದಿನವೇ ನನಗೂ ಕುಮುದೆಯ ಕೈಯನ್ನು ಹಿಡಿಯುವ ಯೋಗ ಒದಗಿದ್ದರೆ! 'ಒದಗಿದ್ದರೆ!'

ಕಲ್ಪನಾಸಾಮ್ರಾಜ್ಯದಲ್ಲಿಯು ಹುಚ್ಚು ವಿಚಾರವಿದು. ಒದಗುವ ಯೋಗ ಎಲ್ಲಿದೆಯೀಗ? ನನ್ನನ್ನು ಸರಕಾರದ ಸೆರೆಮನೆ ಕರೆಯುತ್ತಲಿದೆ....

....ನಾನು ಸೆರೆಮನೆಗೆ ಹೋಗಲೇ ಬೇಕು! ಇಷ್ಟು ದಿನ ತಡೆದದ್ದೇ ಸತ್ಯಾಗ್ರಹ ತತ್ತ್ವಕ್ಕೆ ತಪ್ಪಿ ನಡೆದಂತಾಯಿತೇನೋ! ಆದರೆ ನಾನು ನಿಜವಾಗಿ ಸತ್ಯಾಗ್ರಹಿಯಾಗಿದ್ದೇನೆಯೆ? ನನಗೆ ದೇಶದ ಸ್ವಾತಂತ್ರ್ಯ ಬೇಕಾಗಿದೆಯೆಂದು, ಅನಿವಾರ್ಯವಾಗಿ ಈ ಸತ್ಯಾಗ್ರಹದ ದಾರಿಯಲ್ಲಿ ನಡೆದಿದ್ದೇನೆ. ಆದರೆ ಈ ದಾರಿ ನನ್ನ ಜೀವನದ ಆದರ್ಶವನ್ನು ಸಾಧಿಸಲಿಕ್ಕೆ ಕೂಡಲೆ ಅವಕಾಶವನ್ನೇನೂ ಕಲ್ಪಿಸಿಕೊಡುವಂತೆ ಕಾಣುವುದಿಲ್ಲ.... ಈ ಅವಧಿಯಲ್ಲಿ ಕುಮುದೆಯ ನೆನಪು ನನ್ನ ಮನಸ್ಸಿನಿಂದ ಅಳಿಸಿ ಹೋಗುವಂತೆಯೂ ಕಾಣುವುದಿಲ್ಲ! ಕುಮುದೆ ಇನ್ನೊಬ್ಬರವಳಾಗಿ ಹೋದರೆ....! ಆಂ? ಇನ್ನೊಬ್ಬರವಳಾಗಿ ಹೋದರೆ, ಆಗಲೂ ಆಕೆಯ ನೆನಪು ಅಳಿಸಿ ಹೋಗದೇನು? ಅಳಿಸಿಹೋಗಲಿಕ್ಕಿಲ್ಲವೆ? ಅಳಿಸದೆ ಹಾಗೆಯೇ ನಿಂತರೆ, ಆ ನೆನಪು ನನ್ನ ಜೀವನಕ್ಕೆ ವಿಷವಾಗಿ ಪರಿಣಮಿಸಬಹುದು! ಅಹುದು, ಯೋಗವು ತಪ್ಪಿದರೆ, ಅಮೃತವೂ ವಿಷವಾಗುವುದು...."

ಇದ್ದು ದಿದ್ದ ಹಾಗೆಯೆ ರಂಗಣ್ಣ ಒಳಗೆ ಬಂದ. ಸ್ವಾಗತ-ಕುಶಲಗೋಷ್ಠಿಗಳು ನಡೆದ ಮೇಲೆ ರಂಗಣ್ಣ ಕೇಳಿದ :

"ನೀನು ಈ ಕೋಣೀ ಬಿಡೂದಿಲ್ಲೇನು? ಹ್ಯಾಂಗೂ ಬ್ಯಾರೇ ಮನಿಯೊಳಗ ನಮ್ಮನ್ನ ಇಳಿಸ್ಯಾರ! ಅಲ್ಲಿಗೇ ಬಂದುಬಿಡು ನೀನೂ! ಮದುವೆ ಮುಗಿಸಿಕೊಂಡು ನಾವೆಲ್ಲರೂ ಕೂಡಿ, ಮುದ್ದಾಪುರಕ್ಕ ಹೋಗಿಬಿಡೋಣ! ಅಲ್ಲಿ ನಾಲ್ಕು ದಿನ ಇದ್ದು ವಿಶ್ರಾಂತಿ ತೆಗೆದುಕೊ! ಆ ಮ್ಯಾಲ ಮುಂದಿನ ವಿಚಾರ ಮುಂದ!"

ನಿಮಿಷಕಾಲ ಸುಮ್ಮನೆ ಕುಳಿತಿದ್ದು ರತ್ನಾಕರ ಹೇಳಿದ :

"ನಿನ್ನ ತಲಿಯ ಮ್ಯಾಲ ಅಕ್ಕೀಕಾಳು ಬಿದ್ದದ್ದನ್ನ ನಾನು ನೋಡಿ ಬಿಟ್ಟೆನೆಂದರೆ, ಕೈಕೊಂಡ ಒಂದು ಕಾರ್ಯ ಕೊನೆಗಂಡ್ಹಾಂಗ ಆಯ್ತು—ಅಂತ ಸಮಾಧಾನ ನನಗ! ರಾತ್ರಿಯಾಗಲಿ, ಸಾ ನಿಮ್ಮ ಬಿಡಾರಕ್ಕs ಬಂದು ಬಿಡತೀನಿ. ಕುಮುದಾ ನಿನ್ನ ತಂಗಿ ಆಗಿ, ಕಳಸಗಿತ್ತೀ ಕಾರ್ಯ ನಿರ್ವಹಿಸಲಿಕ್ಕೆ ಸಿದ್ಧಳಿದ್ದಾಳ. ತಿಳೀತೇನು?"

"ತುಂಬಾ ಸಂತೋಷ! ನನ್ನದೊಂದು ದೊಡ್ಡ ಚಿಂತಿ ತಪ್ಪಿತು. ಮದುಮಗ ಆಗಿ ನಾನು ಹ್ಯಾಂಗ ವಡಕೋಬೇಕಂಬೂದು ನನಗ ಗೊತ್ತೇ

ಇಲ್ಲ. ಅದಕ್ಕ ಆಗಾಗs, ನನ್ನ ಎದಿ ದಡದಡಿಸತಿತ್ತು. ಆಯ್ತು, ಕುಮುದಾ ದೇವಿ ಹತ್ತರಿರತಾರಂದ ಮ್ಯಾಲ, ನನಗ ಧೈರ್ಯ ಬಂದ್ಹಾಂಗ ಆಯ್ತು !"

"ಕುಮುದಾದೇವಿ–ಅಂತ ಬಹುವಚನದಿಂದ ಕರಿಯು ಬ್ಯಾಡ ರಂಗಣ್ಣಾ! ಆಕಿ ನಿನ್ನ ತಂಗಿ ! ನಿನ್ನ ತಂಗಿ ಆಗಲಿಕ್ಕೆ ಒಪ್ಪಿಕೊಂಡಾಳಂತs ನಾನೂ ಆಕಿನ್ನ 'ಕುಮುದಾ' ಅಂತs ಕರೀತೀನಿ; ನೀನೂ ಕುಮುದಾ ಅಂತs ಕರಿ !"

ರಂಗಣ್ಣ, ಗಂಭೀರವಾಗಿಯೇ ಆದರೂ ನಗೆಮಾತನ್ನಾಡಿದ :

"ಯಾಕ ? ನನ್ನ ಕಡಿಂದ ಬೀಗತನ ಮಾಡಿಸಿಕೊಳ್ಳೊ ಅಪೇಕ್ಷಾದ ಪ್ರಸ್ತಾವನಾ ಏನಿದು ?"

"ಆ ಪ್ರಸಂಗ ಬಂದಾಗ ನೋಡೋಣಂತೇಳು ! ಈಗೇನೂ ಅದರ ಹೆದರಿಕಿ ಇಲ್ಲಲಾ !" ರಂಗಣ್ಣ ನಕ್ಕು ಬಿಟ್ಟ. ಆ ಮೇಲೆ ರತ್ನಾಕರನಿಗೆ ಬರಲಿಕ್ಕೆ ಮತ್ತೊಮ್ಮೆ ಸೂಚನೆ ಕೊಟ್ಟು ಬಿಡಾರಕ್ಕೆ ಹೊರಟ.

* * * * *

ರಂಗಣ್ಣ ಮರಳಿ ಬರುವುದರಲ್ಲಿಯೇ ದತ್ತೋಬಾ, ಶಂಕರಣ್ಣ, ತಿರುಗಿ ಬಂದಿದ್ದರು. ಬಂದಕೂಡಲೆ ಶಂಕರಣ್ಣ ಹೇಳಿದ :

"ವೆಂಕಣ್ಣ ನಮಗ ಸಿಗಲೇ ಇಲ್ಲರಿ ! ಮೊದಲು ಕೋರ್ಟಿಗೇ ಹೋಗಿ ತಪಾಸ್ ಮಾಡಿದಿವಿ. ಈಗ ಮೂರು ದಿವಸದಿಂದ ಆತ ಕೆಲಸಕ್ಕs ಬಂದಿಲ್ಲಂತ. ಎಂಟು ದಿವಸದ ರಜಾ ಕೇಳಿದ ರಿಪೋರ್ಟು ಮಾತ್ರ ಟಪಾಲಿನಿಂದ ಆಫೀಸಿಗೆ ಬಂದsದಂತ. ಮುಂದ ಹಾಂಗs ನಾವು, ಆತನ ಕೋಣಿಗೆ ಹೋಗಿ ಚೌಕಸಿ ಮಾಡಿದಿವಿ. ನಾಲ್ಕು ದಿನದಿಂದ ಅವರ ಕೋಣೆಗೆ ಕೀಲೀನs ಹಾಕೇದಂತ ಅಕ್ಕ-ಪಕ್ಕದವರು ಹೇಳಿದರು; ಎಲ್ಲಿಗೆ ಹೋಗ್ಯಾನೋ ಏನೋ !"

ರಂಗಣ್ಣ ಕೇಳಿ, ಮುಖ ಮುದುರಿಸಿ ಸುಮ್ಮಗಾದ. ಚಿಕ್ಕಮ್ಮನಿಗೆ ಈ ವಿಷಯ ತಿಳಿದಾಗ, ಅವರು ತುಂಬ ಹಳಹಳಿಸಿದರು :

"ಎಲ್ಲಿ ಹೋಗೇದೋ ಏನೋ ! ಇರೂದೊಂದು ತಮ್ಮ ; ಅಣ್ಣನ ಮದಿವಿಗೆ ಇರಬಾರದಂದರ, ಎಂಥಾ ದೈವ ನೋಡು !"

ಆಗ ದತ್ತೋಬಾ ಹೇಳಿದ :

"ಎಂಥಾ ತಮ್ಮ ಬಿಡ್ರೀ ಕಾಕೂಬಾಯಿಾ! ತಮ್ಮಾ ಅಂದ ಮ್ಯಾಲ, ತಮ್ಮನ ಹಾಂಗ ನಡಕೋ ಬೇಕು! ಮನಶಾ ಆಗಿ, ಇಲ್ಲದ್ದs ಮಂಗ್ಯಾತನಾ ಮಾಡಿದರ, ತೋರಿಸಲಿಕ್ಕೆ ಮಾರಿ ಒಂದು ಬೇಕಲ್ರಿ!"

ಚಿಕ್ಕಮ್ಮನಿಗೆ ಯಾವ ಹೆಚ್ಚಿನ ಸಂಗತಿಯೂ ಗೊತ್ತಿರಲಿಲ್ಲ. ಮತ್ತೆ ಅವರು ಮರುಕದ ಮಾತನ್ನು ಆಡಿದರು:

"ಅಂವೇನು ಮಂಗ್ಯಾತನಾ ಮಾಡ್ಯಾನೋ ದತ್ತೋಬಾ! ಹುಡುಗ-ಬುದ್ಧಿ ಇನ್ನೂ! ತಿಳವಳಿಕಿ ಕಡಿಮಿ!"

ರಂಗಣ್ಣ ಕಣ್ಣುಸನ್ನೆ ಮಾಡಿದುದರಿಂದ, ದತ್ತೋಬಾ ಅಷ್ಟಕ್ಕೇ ಮಾತನ್ನು ನಿಲ್ಲಿಸಿ ತನ್ನ ಕೆಲಸಕ್ಕೆ ಹೊರಟುಹೋದ. ಮುದುಕಿ ಮಾತ್ರ ಕಂಡವರೆಲ್ಲರ ಮುಂದೆ, ವೆಂಕಣ್ಣನ ಬಗ್ಗೆ ಕಳವಳದ ಮಾತುಗಳನ್ನು ಆಡಿಯೇ ಆಡುತ್ತಲಿದ್ದರು. ಕುಮುದಾ ಅಲ್ಲಿಗೆ ಬಂದ ಮೇಲೆ, ರಂಗಣ್ಣ ಚಿಕ್ಕಮ್ಮನಿಗೆ ಅವಳ ಪರಿಚಯ ಮಾಡಿಕೊಟ್ಟು ಹೇಳಿದ:

"ಹಳೆಯ ತಮ್ಮ ಬಾರದಿದ್ದರೂ ಈ ಹೊಸಾ ತಂಗಿ ಬಂದಾಳ ನೋಡು ಚಿಕ್ಕಮ್ಮಾ! ಈಕೀ ವಿಷಯ ನಿನಗ ಊರೊಳಗ ಹೇಳಿದ್ದೆನಲ್ಲಾ!"

ಕುಮುದೆಯನ್ನು ಚಿಕ್ಕಮ್ಮ ದಿಟ್ಟಿಸಿ ನೋಡುತ್ತಿರುವಾಗಲೇ, ಅವಳು ಆದರದಿಂದ ನಮಸ್ಕರಿಸಿದಳು:

ಚಿಕ್ಕಮ್ಮ ಪ್ರೀತಿಯಿಂದ ಆಶೀರ್ವದಿಸಿದರು:

"ಯಥೇಷ್ಟ ಆಯುಷ್ಯವಂತಿಯಾಗು, ಭಾಗ್ಯವಂತಿಯಾಗು! ಒಳ್ಳೆಯ ಗಂಡನ ಕೈ ಹಿಡಿದು ಎಂಟು ಮಕ್ಕಳ ತಾಯಾಗು!"

ಕುಮುದಾ ಆಶೀರ್ವಾದದ ಕೊನೆಯ ಮಾತುಗಳನ್ನು ಕೇಳಿ ನಕ್ಕು ಬಿಟ್ಟಳು. ರಂಗಣ್ಣ ಮೆಲುನಗೆ ನಗುತ್ತ ಹೇಳಿದ:

"ಎಂಟು ಮಕ್ಕಳ ತಾಯಾಗು ಅಂತ ಹೇಳಿದ್ದಕ್ಕ ಗಾಬರ್‍ಯಾಗೂ ಕಾರಣೇನಿಲ್ಲ! ಈ ಹರಕಿ ನಿಜಾ ಆದರ, ಮೊದಲನೆಯ 'ಭಾಗ್ಯವಂತಿ ಆಗು' ಅಂಬೂ ಹರಕೀನೂ ನಿಜಾ ಆಗಲಿಕ್ಕೇ ಬೇಕು! ಭಾಗ್ಯವಂತಿಯೆಂದ ಮ್ಯಾಲ, ಎಂಟs ಮಕ್ಕಳ್ಯಾಕ, ಹದಿನೆಂಟು ಮಕ್ಕಳಾದರೂ ತಾಯಿಂದಿರಿಗೆ ಬ್ಯಾಸರಾಗೂದಿಲ್ಲ!"

ಕುಮುದೆ ಅಂತರಂಗದಲ್ಲಿ ಏನು ಕಂಡಳೇನೋ ! ನಾಚಿಕೆ ಮುಖವನ್ನು ಆವರಿಸಿತು. ಕಿರುನಗೆ ನಗುತ್ತ ತನ್ನ ತಲೆಯನ್ನು ತಗ್ಗಿಸಿದಳು. ಚಿಕ್ಕಮ್ಮ ಅವಳ ಕೈಹಿಡಿದು ಒಳಗೆ ಕರೆದುಕೊಂಡು ಹೋದರು. ವೆಂಕಣ್ಣನ ವಿಷಯಕವಾದ ಮರುಕದ ಮಾತನ್ನು, ಆ ಮೇಲೆ ಚಿಕ್ಕಮ್ಮನ ಮುಖದಿಂದ ಯಾರೂ ಕೇಳಬೇಕಾಗಲಿಲ್ಲ. ರಾತ್ರಿ ರತ್ನಾಕರನು ಬಂದ ಮೇಲಂತೂ ಚಿಕ್ಕಮ್ಮನ ಮುಖದಲ್ಲಿ ಉತ್ಸಾಹ ತುಂಬಿತುಳುಕಲು ತೊಡಗಿತು.

*  *  *

ಮದುವೆಯಲ್ಲಿ ಸಾಂಪ್ರದಾಯಿಕ ಆಚಾರಗಳಿಗೆ ಮಹತ್ತ್ವಕೊಡಲಾಗದೆಂದು ಪರಸ್ಪರರು ಮಾತನಾಡಿಕೊಂಡು ನಿರ್ಣಯಿಸಿದ್ದರು. ಎಂತಲೇ ಆಡಂಬರದ ಸೀಮಾಂತಪೂಜನ ನಡೆಯಲಿಲ್ಲ. ಊಟವಾಯಿತಾದರೂ ‘ ರುಕ್ಕೋತದೂಟ ’ ಎಂಬ ಹೆಸರಿನಿಂದ ನಡೆಯಲಿಲ್ಲ. ಇದೆಲ್ಲ ಎರಡೂ ಪಕ್ಷದಲ್ಲಿಯ ಹಿರಿಯ ಹೆಣ್ಣುಮಕ್ಕಳಿಗೆ ಭಣಭಣವೆನಿಸಿತು. ಇದರ ಸತ್ಪರಿಣಾಮವಾಗಿ, ಎಲ್ಲರಿಗೂ ರಾತ್ರಿಯಲ್ಲಿ ತೃಪ್ತಿಕರವಾದ ನಿದ್ರೆಯಾಯಿತು. ನಿದಾನವಾಗಿ ಬೆಳಗಿನಲ್ಲೆದ್ದು, ಮುಂದಿನ ವಿಧಿ-ವಿಧಾನಗಳನ್ನು ನೆರವೇರಿಸಲು ಎಲ್ಲರಿಗೂ ಉತ್ಸಾಹವೆನಿಸಿತು.

ವರನ ಮನೆಯಲ್ಲಿ ಪುಣ್ಯಾಹವಾಚನಕಾರ್ಯ ನಡೆದಾಗ, ವೈದಿಕರು ಅನೇಕರು ಕೂಡಿದ್ದರು. ಈ ವೈದಿಕ ವೃಂದದಲ್ಲಿಯೇ ಬಗಲುಕಸೆಯಂಗಿಯನ್ನು ತೊಟ್ಟುಕೊಂಡು, ತಲೆಗೆ ಜರದ ಶಾಲು ಸುತ್ತಿಕೊಂಡ ತರುಣ ವೈದಿಕರೊಬ್ಬರು ಎದ್ದು ಕಾಣುತ್ತಿದ್ದರು. ಹಣೆಯ ಮೇಲೆ ಸ್ಫುಟವಾದ ನಾಮಮುದ್ರೆಗಳಿದ್ದುವು. ಕೊರಳಲ್ಲಿ ಹಾಕಿದ ತುಲಸೀ ಮಣಿಮಾಲೆಯ ಭಾಗ ಸ್ವಲ್ಪ ಕಾಣುತ್ತಲಿದ್ದಿತು. ಗಂಭೀರಭಾವದಲ್ಲಿಯೇ ಕುಳಿತಿದ್ದರಾದರೂ, ರಂಗಣ್ಣ ಅವರ ಕಡೆಗೆ ನೋಡಿದಾಗ, ಕಿರುನಗೆ ನಗುತ್ತಲಿದ್ದರು. ರಂಗಣ್ಣನೂ ಮುಖದಲ್ಲಿ ಮೆಲುನಗೆ ಹರಿಸುತ್ತಿದ್ದ.

ಆರತಿಯನ್ನು ತೆಗೆದುಕೊಂಡು ಬಂದ ಕುಮುದಾ, ರಂಗಣ್ಣನಿಗೆ ಆರತಿಯನ್ನು ಮಾಡಿದಳು. ಸಾಂಪ್ರದಾಯಿಕ ಸೀರೆ-ಕುಪ್ಪಸಗಳನ್ನುಟ್ಟು ತೊಟ್ಟು ಹೊಸ ವೇಷದಲ್ಲಿ ತೋರುವ ಕುಮುದೆಯನ್ನು, ಆ ಶಾಲುಸುತ್ತಿದ ತರುಣ ವೈದಿಕ, ಕಣ್ಣಲುಗಿಸದೆ ನೋಡಲು ತೊಡಗಿದ್ದ. ಆರತಿ ಮಾಡಿ, ಪಕ್ಕಕ್ಕೆ

ಸರಿದು ನಿಂತ ಕುಮುದಾ, ಸಹಜವಾಗಿ ಸುತ್ತುಮುತ್ತಲೂ ನೋಡುತ್ತಿರು-ವಾಗ, ವೈದಿಕವೃಂದದಲ್ಲಿ ಕುಳಿತ ತರುಣಶಾಸ್ತ್ರಿಯನ್ನು ನೋಡಿದಳು. ತಡೆದುಕೊಳ್ಳದಂತಹ ನಗೆ ಬಂದುದರಿಂದ, ಸೆರಗಿನಿಂದ ಮುಖ ಮುಚ್ಚಿ-ಕೊಂಡು, ಗಡಿಬಿಡಿಯ ನಡಿಗೆಯಿಂದ ಒಳಗೆ ಹೊರಟುಹೋದಳು. ಮತ್ತೊಂದು ಸಲ ಆರತಿಗೆಂದು ಕರೆದಾಗ, ಕುಮುದಾ ಬಾರದೆ, ಇನ್ನೊಬ್ಬಾಕೆ ಯಾರೋ ಮುತ್ತೈದೆ ಬಂದರು. ಅವರು ಬಂದುದನ್ನು ಕಂಡ ತರುಣ ವೈದಿಕ, ತನ್ನ ಕುತೂಹಲ ದೃಷ್ಟಿಗಳನ್ನು ರಂಗಣ್ಣನ ಕಡೆಗೆ ತಿರುಗಿಸಿದ. ಸಂಯಮಿ-ಯಾದ ರಂಗಣ್ಣ, ಬಂದ ಹುಚ್ಚುನಗೆಯನ್ನು ತಡೆದುಹಿಡಿದ.

ವೈದಿಕವೃಂದದಲ್ಲಿಯ ಪ್ರತಿಯೊಬ್ಬನೂ ಈ ಅಪರಿಚಿತ ವೈದಿಕನ ಕಡೆಗೆ ಆಶ್ಚರ್ಯದ ದೃಷ್ಟಿಗಳನ್ನು ಬೀರುವನು. ಒಬ್ಬರೊಬ್ಬರಲ್ಲಿ ಕಿವಿ-ಮಾತುಗಳೂ ನಡೆಯುವುವು. ಪುಣ್ಯಾಹವಾಚನ ಮುಗಿಸಿಕೊಂಡು, ರಂಗಣ್ಣ ಬ್ರಾಹ್ಮಣ ವೃಂದಕ್ಕೆ ನಮಸ್ಕಾರ ಮಾಡಲು ಬಂದ; ಎಲ್ಲರಿಗೂ ನಮಸ್ಕಾರ ಮಾಡಿ, ಕೊನೆಗೆ ‘ ನಮಸ್ಕಾರ ಪುರೋಹಿತರೇ ! ’ ಎಂದು ತರುಣವೈದಿಕ-ರಿಗೆ ನಮಸ್ಕಾರ ಮಾಡಿದ. ಕೂಡಿದವರಲ್ಲಿಯ ಒಬ್ಬ ಹಿರಿಯ ಆಚಾರ್ಯರು ಕೇಳಿದರು :

“ ಇವರು ನಿಮ್ಮ ಪುರೋಹಿತರೇನು ರಾಯರs ! ”

ರಂಗಣ್ಣ ಗಂಭೀರಭಾವದಲ್ಲಿಯೆ ಹೇಳಿದ :

“ ಹೌದು, ಇವರು ನಮ್ಮ ಪುರೋಹಿತರು ! ಆದರೆ ವೈದಿಕವೃತ್ತಿಯ-ನ್ನೇನೂ ಇವರು ಮಾಡತಿರೂದಿಲ್ಲ ! ಉಡುಪಿಯ ಸಂಸ್ಕೃತ ಕಾಲೇಜಿನೊಳಗ, ನ್ಯಾಯಶಾಸ್ತ್ರದ ಅಧ್ಯಾಪಕರಾಗಿ ಇಪ್ಪಾರ ! ”

ಪ್ರಶ್ನೆ ಕೇಳಿದ ಹಿರಿಯ ಆಚಾರ್ಯರು, ಆದರದಿಂದ ನಮಸ್ಕಾರ ಮಾಡಿದರು. ತರುಣ ಶಾಸ್ತ್ರಿಗಳೂ ವಿನಯದಿಂದ ಪ್ರತಿನಮಸ್ಕಾರ ಮಾಡಿದರು.

ದಕ್ಷಿಣೆ-ತಾಂಬೂಲಾದಿಗಳಾದ ಮೇಲೆ—ವೈದಿಕವೃಂದ ಹೊರಟು-ಹೋಯಿತು- ತರುಣಶಾಸ್ತ್ರಿಗಳೊಬ್ಬರೇ ಉಳಿದರು. ಆಗ ರಂಗಣ್ಣ ಕುಮುದೆಯನ್ನು ಕೂಗಿ ಕರೆದ. ಕುಮುದಾ ಏನು ಕೆಲಸವೋ ಎಂದು ಹೊರಗೆ ಬಂದಳು. ರಂಗಣ್ಣ ಆಕೆಗೆ ಹೇಳಿದ :

"ಹುಂ, ಈಗ ನೀನು ಈ ನಟರಾಜನನ್ನು ನೋಡು ! ಹೊಟ್ಟೆ ತುಂಬಾ ನಗು !"

ಕುಮುದಾ ನಗುನಗುತ್ತಲೇ ಹೇಳಿದಳು :

"ಪಾತ್ರದ ವೇಷ-ಭೂಷಣ ಒಳ್ಳೇ ಸಾಧಿಸೇದ ! "

ರತ್ನಾಕರ ಕೂಡಲೆ ನುಡಿದ :

"ಈ ಮದಿವೀ ನಾಟಕದೊಳಗ, ನನ್ನದು ಈ ಪುರೋಹಿತ ಶಾಸ್ತ್ರಿಯ ಪಾತ್ರ ! ನಿನ್ನದು ಕಳಸಗಿತ್ತಿಯ ಪಾತ್ರ ! ರಂಗಣ್ಣನದು ವರನ ಪಾತ್ರ ! ಕಾವೇರಿಯುದು ವಧುವಿನ ಪಾತ್ರ ! ಎಲ್ಲರೂ ಪಾತ್ರಧಾರಿಗಳೇ !"

ಅದೇಕೋ, ಕುಮುದೆಯ ಸಹಜಹಾಸ್ಯದ ಪ್ರವಾಹ ಮಂದವಾಯಿತು. ಮಂದವಾಗುತ್ತ ಮಂದವಾಗುತ್ತ ನಿಂತೂ ಹೋಯಿತು. ಮುಖದಲ್ಲಿ ಒಂದು ಬಗೆಯ ಕಳವಳ ಸುಳಿದಾಡಿತು.

* * *

ಗೋಪಾಲರಾಯರು ಮನೆಯ ಮುಂದೆ, ಇದ್ದುದರಲ್ಲಿಯೆ ಇಂಬಾಗುವಂತೆ ಮಂಟಪ ಹಾಕಿಸಿದ್ದಾರೆ. ವಾದ್ಯವಾದನಕಾರರು ಒಂದೆಡೆಗೆ ಕುಳಿತುಕೊಂಡಿದ್ದಾರೆ. ಮಂಟಪದಲ್ಲಿ ಹಾಸಿದ ಗುಡಾರಗಳು, ಆಮಂತ್ರಿತ ಜನರಿಂದ ತುಂಬಿಕೊಂಡಿವೆ ವೈದಿಕರ ತಂಡವು ಮದುವೆಯ ಉತ್ಸಾಹವನ್ನು ಮುಖದಲ್ಲಿ ಮೂಡಿಸಿಕೊಂಡು ಕುಳಿತಿದೆ. ಮನೆಯ ಒಳಗಡೆಗೆ ಹೆಂಗುಸುರು-ಹುಡುಗರ ಗೊಂದಲವೇ ಗೊಂದಲ ! ಮಂಟಪದ ಮಧ್ಯದಲ್ಲಿ ಮದುವೆಯ ಹಸೆಜಗುಲಿ, ಮಂಗಲಕರವಾದ ಚಿಹ್ನೆಗಳಿಂದ ಮಿರುಗುತ್ತಲಿದೆ. ವಾದ್ಯವೈಭವಗಳ ಆಡಂಬರವಿಲ್ಲದೆ, ವರಪಕ್ಷದ ಬೀಗರು ಮಂಟಪದೊಳಗೆ ಬಂದರು. ಪುರೋಹಿತರು ರಂಗಣ್ಣನನ್ನು ಕರೆದುಕೊಂಡು ಬಂದು ಜಗುಲಿಯ ಮೇಲೆ ಕೂಡಿಸಿದರು. ವರಪೂಜೆಯ ವಿಧಾನ ಮುಗಿಯಿತು. ಪುರೋಹಿತರ ಸೂಚನೆಯ ಮೇರೆಗೆ, ಕನ್ಯೆ ಹೊರಗೆ ಬಂದಳು. ಅಂತಃಪಟ ರಂಗಣ್ಣನನ್ನು ಮರೆಮಾಡಿದ್ದಿತಾದರೂ, ಕಾವೇರಿ ನಾಚಿಕೆಯಿಂದ ತಲೆಬಾಗಿಸಿಕೊಂಡು, ರಂಗಣ್ಣನಿಗೆ ಎದುರಾಗಿ, ಅಂತಃಪಟದ ಈಚೆಯ ಬದಿಗೆ ನಿಂತಳು.

ಹತ್ತುಗಂಟೆ ಇಪ್ಪತ್ತುನಾಲ್ಕು ನಿಮಿಷಕ್ಕೆ ಲಗ್ನಸಮಯ. ಗಡಿಯಾರದಲ್ಲಿ ಹತ್ತು ಹೊಡೆದು ಇಪ್ಪತ್ತು ನಿಮಿಷಗಳಾಗಿದ್ದುವು. ಪುರೋಹಿತರು ಮಂಗಲಾಷ್ಟಕವನ್ನು ಪ್ರಾರಂಭಿಸಿದರು. ಒಂದು ಶ್ಲೋಕ ಮುಗಿದು

‘ ಸುಮುಹೂರ್ತೇ ಸಾವಧಾನ ’ ಆಯಿತು. ಇನ್ನೊಂದು ಶ್ಲೋಕ ಪ್ರಾರಂಭ-ವಾಯಿತು. ಆಗಲೇ ಶಂಕರಣ್ಣ, ಹೊರಗಿನಿಂದ ಗಡಿಬಿಡಿಯ ನಡಿಗೆಯಲ್ಲಿ ಒಳಗೆ ಬಂದ. ತರುಣ ವೈದಿಕನ ಬಳಿಗೆ ಹೋಗಿ, ಗಾಬರಿಯ ಮುಖಮುದ್ರೆ-ಯಿಂದ ಏನೋ ಕಿವಿಮಾತನಾಡಿದ. ತರುಣವೈದಿಕ ‘ ಗೊಂದಲ ಮಾಡ-ಬೇಡ !’ ಎಂಬ ಅರ್ಥದ ಕೈಸನ್ನೆ ಮಾಡಿ, ಮೆಲ್ಲಗೆ ಮೇಲಕ್ಕೆದ್ದ. ಅಂತಃಪಟದ ಮರೆಯಲ್ಲಿದ್ದ ರಂಗಣ್ಣನಿಗೆ ಇದಾವುದೂ ಕಾಣುತ್ತಿರಲಿಲ್ಲ. ಅವನಾಗ ಕಾವೇರಿಯ ಮುಖವನ್ನು ಕಾಣಬೇಕೆಂಬ ತವಕದಲ್ಲಿರಬಹುದು. ಪುರೋ-ಹಿತರ ಮಂಗಲಾಷ್ಟಕ ಉಚ್ಚಕಂಠದಲ್ಲಿ ನಡೆದಿದ್ದಿತು. ತರುಣ ಶಾಸ್ತ್ರಿಗಳು ಮಂಟಪದ ಹೊರಗೆ ನಡೆದರು. ವಧೂವರರನ್ನು ನೋಡಬೇಕೆಂಬ ಕುತೂಹಲ ದಲ್ಲಿದ್ದ ಎಲ್ಲ ಜನರೂ ಹಸೆಜಗುಲಿಯ ಕಡೆಗೇ ನೋಡುತ್ತಲಿದ್ದುದದರಿಂದ, ಈ ತರುಣ ಶಾಸ್ತ್ರಿ ಹೊರಗೆ ಹೊರಟುದರ ಕಡೆಗೆ ಯಾರ ಲಕ್ಷ್ಯವೂ ಇರಲಿಲ್ಲ-ವೆಂದು ತೋರುವುದು. ಗೋಪಾಲರಾಯರು, ವೇಣಕ್ಕ ಆನಂದದಿಂದ ಮೈಮರೆತು ಹೋಗಿದ್ದರು. ಕುಮುದೆ, ಒಳಗೆ ಹೆಂಗುಸರ ಬಳಗದಲ್ಲಿ ಹೋಗಿ ಸೇರಿಕೊಂಡಿದ್ದಳು. ಪುರೋಹಿತರು ಮತ್ತೆ ‘ ಸುಮುಹೂರ್ತೇ ಸಾವಧಾನ !” ಎಂದು ಹೇಳಿ, ಮತ್ತೊಂದು ಶ್ಲೋಕವನ್ನು ಪ್ರಾರಂಭಿಸಿದರು.

ಹೊರಗೆ ಹೋದ ತರುಣ ಶಾಸ್ತ್ರಿಗಳು ಮರಳಿ ಒಳಗೆ ಬರಲೇ ಇಲ್ಲ ! ಮಂಟಪದಲ್ಲಿ ಡ್ರೈವರ್ ದತ್ತೋಬಾನೂ ಕಾಣುತ್ತಿರಲಿಲ್ಲ; ಶಂಕರಣ್ಣನೂ ಕಾಣುತ್ತಿರಲಿಲ್ಲ.

ನಾಲ್ಕನೆಯ ಸಲ ‘ ಸುಮುಹೂರ್ತೇ ಸಾವಧಾನ ’ ಆಯಿತು. ವಧೂ-ವರರ ತಲೆಯ ಮೇಲೆ ಎಲ್ಲರೂ ಮಂಗಲಾಕ್ಷತೆಗಳನ್ನು ಸುರಿಸಿದರು. ಅಂತಃಪಟ ಸರಿಯಿತು. ವಧೂವರರ ಮುಖ ಕಿರುನಗೆಯಿಂದ ಕೂಡಿದ್ದಿತು. ಒಬ್ಬರೊ-ಬ್ಬರು ತಲೆಯ ಮೇಲೆ ಶೇಷಾಕ್ಷತೆಗಳನ್ನು ತಳಿದರು. ವಧುವು ವರನ ಕೊರ-ಳಿಗೆ ಹೂಮಾಲೆ ಹಾಕಿದಳು. ವರನು ವಧುವಿನ ಕೊರಳಿಗೆ ಹೂಮಾಲೆ ಹಾಕಿದ. ಇಬ್ಬರೂ ಜೊತೆಗೂಡಿ ಕುಳಿತರು. ಪುರೋಹಿತರು ಮಂತ್ರಗಳನ್ನು ಹೇಳಲು ತೊಡಗಿದರು. ದಕ್ಷಿಣೆ, ತಾಂಬೂಲ, ಪನ್ನೀರು, ಕಮ್ಮೆಣ್ಣೆಗಳನ್ನು ಕೊಡುವ ಗೊಂದಲ ನಡೆಯಿತು. ಬಂದಿದ್ದ ಆಮಂತ್ರಿತರು ಮರಳಿ ಹೊರಡಲು ತೊಡಗಿದರು.

ಮಂಟಪದ ಹೊರಗೆ ಏನೋ ಗದ್ದಲ ಕೇಳಿಸಿತು. ಮನೆಗೆ ಹೊರಡಲು ಎದ್ದವರು, ಮುಂದೆ ಹೋಗಲಾರದೆ ನಿಂತಲ್ಲಿಯೆ ನಿಂತುಬಿಟ್ಟರು. ಪುರೋಹಿತರು ಮಂತ್ರವನ್ನು ನಡೆಯಿಸಿಯೇ ಇದ್ದರು. ಅವರು ಹೇಳಿದ ತಂತ್ರಗಳನ್ನು ನೆರವೇರಿಸುವುದರಲ್ಲಿ ರಂಗಣ್ಣ ತನ್ಮಯನಾಗಿದ್ದ.

ಮಂಟಪದಲ್ಲಿ ಅಲ್ಲಲ್ಲಿ ಗುಜುಗುಜು ಎದ್ದಿತು:

"ಪೋಲೀಸರ ಗುಂಪು!" "ಯಾರನ್ನೋ ಹಿಡಿದು ಒಯ್ದರು!" "ಸ್ವತಃ ಪೋಲೀಸ್ ಇನಸ್ಪೆಕ್ಟರೇ ಬಂದಿದ್ದ!" "ಆ ಶಾಲುಸುತ್ತಿದ ಶಾಸ್ತ್ರಿಗಳನ್ನೇ ಹಿಡಕೊಂಡು ಹೋದರಂತ!"

ಮಂಟಪದಲ್ಲಿದ್ದ ಗುಜುಗುಜು, ಗದ್ದಲವಾಗಿ ಪರಿಣಮಿಸಿತು. ಪುರೋಹಿತರು ಮಂತ್ರವನ್ನು ನಿಲ್ಲಿಸಿದರು. ರಂಗಣ್ಣ ಗದ್ದಲವೇನೆಂದು ಕೇಳಿದ; ಯಾವನೋ ಒಬ್ಬ ಗಾಬರಿಯ ಸ್ವರದಲ್ಲಿ ಹೇಳಿದ:

"ಆಗ ಇಲ್ಲಿಂದ ಹೊರಗ ಹೋದರಲ್ಲಾ, ಶಾಲು ಸುತ್ತಿಕೊಂಡ ಶಾಸ್ತ್ರಿಗಳು! ಅವರನ್ನ ಪೋಲೀಸರು ಬಂದು ಹಿಡಕೊಂಡು ಹೋದರಂತ!"

"ಏನು?" ಎಂದು ಗಾಬರಿಗೊಂಡವನಾಗಿ, ಕುಳಿತಿದ್ದ ಹಾಗೆಯೇ ರಂಗಣ್ಣ ಮೇಲಕ್ಕೆದ್ದ. ರಭಸದಿಂದ ಹೆಜ್ಜೆಗಳನ್ನು ಇಕ್ಕುತ್ತ ಮಂಟಪದ ಹೊರಗೆ ಹೊರಟು ನಡೆದ. ಕಾವೇರಿಗೆ ತಾನೇನು ಮಾಡಬೇಕೆಂಬುದೇ ತಿಳಿಯದಂತಾಯಿತು. ಕಂಗೆಟ್ಟಂತೆ, ಮುಖ ತಗ್ಗಿಸಿ ಕುಳಿತಲ್ಲಿಯೇ ಕುಳಿತುಬಿಟ್ಟಿದ್ದಳು.

ಹೆಂಗುಸರ ಗುಂಪಿನಲ್ಲಿಯೂ ಈ ಸುದ್ದಿ ಹಬ್ಬಿತು. ವೇಣಕ್ಕ, ತುಂಗಮ್ಮ ಮುಂಗಾಣದೆ ನಿಂತುಬಿಟ್ಟರು. ಮುತ್ತೈದೆಯರಿಗೆ ಉಡಿಯನ್ನು ತುಂಬುತ್ತಲಿದ್ದ ಕುಮುದಾ, ಇದ್ದುದಿದ್ದ ಹಾಗೆಯೇ ಕೈಯಲ್ಲಿದ್ದುದನ್ನು ಕೆಳಗಿಟ್ಟು ಹೊರಗೆ ಓಡಿಬಂದಳು. ಹಸೆಜಗುಲಿಯ ಮೇಲೆ ರಂಗಣ್ಣ ಕಾಣಲಿಲ್ಲ. ಪುರೋಹಿತರೂ ಕಾಣಲಿಲ್ಲ. ಕಾವೇರಿ ದೈನ್ಯದೃಷ್ಟಿಗಳಿಂದ ಕುಮುದೆಯನ್ನು ನೋಡಿದಳು. ಕಣ್ಣಿಂದ ಕಂಬನಿಗಳು ಇಳಿದುವು. ಸಂಭ್ರಾಂತಭಾವದಿಂದ ಕುಮುದಾ ಮುಂದೆ ಸಾಗಿದಳು. ದಾರಿಯಲ್ಲಿ ಯಾರು ನಿಂತಿದ್ದಾರೆಂಬ ಪರಿವೆ ಕೂಡ ಅವಳಿಗೆ ಇದ್ದಂತಿರಲಿಲ್ಲ. ಬಿರುಗಾಳಿಯಂತೆ ಹೊರಗೆ ಬಂದಳು. ಜನರು ಗುಂಪು ಗುಂಪಾಗಿ ಅಲ್ಲಲ್ಲಿ ನಿಂತಿದ್ದರು; ಆದರೆ ರಂಗಣ್ಣ ಎಲ್ಲಿಯೂ ಕಾಣಲಿಲ್ಲ. ಏನು ಮಾಡಬೇಕೆಂಬುದು ತಿಳಿಯದೆ, ಸುಮ್ಮನೆ ನಿಂತುಕೊಂಡು-

ಇರುವಾಗ, ಶಂಕರಣ್ಣಾ ರಂಗಣ್ಣಾನ ಕೈಯನ್ನು ಹಿಡಿದುಕೊಂಡು, ಎಳೆದುಕೊಂಡು ಬಂದಂತೆ ಬಂದ. ಮಂಟಪದ ಹೊರಗೆ ನಿಂತಿದ್ದ ಕುಮುದಾ, ರಂಗಣ್ಣಾನ ಆವೇಶ ತುಂಬಿದ ಮುಖವನ್ನು ನೋಡಿದಳು. ರಂಗಣ್ಣಾ ಅವಳ ಮಂಕುಕವಿದ ಮುಖವನ್ನು ನೋಡಿದ. ಇಬ್ಬರೂ ಮೌನವಾಗಿಯೇ ಇದ್ದರು. ಶಂಕರಣ್ಣಾ ರಂಗಣ್ಣಾನನ್ನು ಕರೆದುಕೊಂಡು ಬಂದು ಮಂಟಪದಲ್ಲಿ ಕುಳ್ಳಿರಿಸಿ ಹೇಳಿದ :

" ನೋಡ್ರಿ, ನನಗ ಒಂಬತ್ತುವರಿಗಂಟೆಯ ಸುಮಾರಿಗೇ ಈ ಸುದ್ದಿ ಕಿವಿಗೆ ಬಿದ್ದಿತ್ತು : ಪೋಲೀಸರು ಮದಿವೀ ಮಂಟಪಕ್ಕs ಮುತ್ತಿಗೀ ಹಾಕ-ಬೇಕಂತ ನಿರ್ಣಯ ಮಾಡ್ಯಾರ—ಅಂತ! ದತ್ತೋಬಾನs ಈ ಸುದ್ದೀ ತಂದಾಂವ. ಎಲ್ಲಾ ಜನರೂ ಮದಿವೀ ಉತ್ಸಾಹದೊಳಗ ಇರುವಾಗ, ರಸಭಂಗ ಮಾಡಬಾರದಂತ, ಈ ಸುದ್ದೀ ನಾನು ಯಾರ ಮುಂದೂ ಹೇಳಿರಲಿಲ್ಲ. ಇದೇ ಕಾರಣದ ಸಲುವಾಗಿಯೇ ನಾನು, ದತ್ತೋಬಾ, ನಿಮ್ಮ ಜೋಡಿ ಈ ಮನಿಗೆ ಬರಲಿಲ್ಲ. ನೀವು ಹೊರಟಾಗ ದತ್ತೋಬಾ ಮನಿಯೊಳಗ ಇರಲಿಲ್ಲ. ನೀವು ಇಲ್ಲಿಗೆ ಬಂದು ಮುಟ್ಟಿರಬಹುದು; ಅಂವ ಬಂದು ಹೇಳಿದ : 'ಪೋಲೀಸ್ ಪಾರ್ಟೀ ಹೊರಬಿದ್ದsದ!' ಅಂತ. ಕೂಡಲೇ ನಾನು ಓಡತs ಓಡತs ಬಂದು, ರತ್ನಾಕರರಾಯರ ಒಬ್ಬರ ಕಿವಿಯೊಳಗs ಈ ಸುದ್ದೀ ಹೇಳಿದೆ. ಪುರೋಹಿತರ ಮಂಗಲಾಷ್ಟಕದ ಗದ್ದಲ ನಡಿದಿತ್ತು. ರಾಯರು ನನ್ನ ಮಾತು ಕೇಳಿದವರೇ, ಇಲ್ಲಿಂದ ಎದ್ದೇ ಬಿಟ್ಟರು. ಅರ್ಧಾ ಫರ್ಲಾಂಗು ಹೊರಗೆ ಹೋಗಿರ ಬಹುದು; ಪೋಲೀಸರ ಲಾರಿ, ಸಾಹೇಬರ ಮೋಟಾರು ಬಂದೇ ಬಿಟ್ಟುವು. ಮುಂದೆ ಬರುವ ಸಾಹೇಬರ ಮೋಟರ್ ಕಾರನ್ನ ಅವರೇ ಕೈಮಾಡಿ ನಿಲ್ಲಿಸಿ-ದರು; ಇಂಗ್ಲಿಷಿನೊಳಗ ಅವರಿಗೆ ಹೇಳಿದರು :

' ನಿಮಗ ಬೇಕಾಗಿರುವ ರತ್ನಾಕರ ನಾನೇ! ನನ್ನ ನೀವು ಬೇಕಾ-ದ್ಹಾಂಗ ಹಿಡಕೊಂಡು ಹೋಗಬಹುದು!' ಸಾಹೇಬರು ಕ್ರೋಧದಿಂದ ಅವರನ್ನ ದುರುದುರು ನೋಡಿದರು; ಮಾತನೇನೂ ಆಡದೆ, 'ಪೋಲೀಸ್' ಅಂತ ಕೂಗಿದರು. ಲಾರಿಯೊಳಗಿದ್ದ ಆರೇಳು ಜನ ಪೋಲೀಸರು ಕೆಳಗ ಇಳಿದು ಬಂದರು. ಸಾಹೇಬರು ಅವರಿಗೆ ಹಿಂದುಸ್ತಾನೀ ಭಾಷೆಯೊಳಗ ಹೇಳಿದರು :

" ಈತನ್ನ ನಿಮ್ಮ ಸ್ವಾಧೀನಕ್ಕ ತಗೊಂಡು ಆಫೀಸಿಗೆ ನಡೀರಿ!"

ರಂಗಣ್ಣ ಕುಮುದಾ ಸುಮ್ಮನೆ ಕುಳಿತುಕೊಂಡು ಕೇಳುತ್ತಲಿದ್ದರು. ರಂಗಣ್ಣನ ಮುಖ ಕೆಂಪಗಾಗಿತ್ತು; ಕುಮುದಿನಿಯ ಕಣ್ಣಿಂದ ಕಂಬನಿಗಳು ಇಳಿಯುತ್ತಿದ್ದುವು. ಶಂಕರಣ್ಣ ಮುಂದುವರಿಸಿದ :

"ಪೋಲೀಸರು ಲಾರಿಯೊಳಗ ಹಾಕಿಕೊಂಡು ರತ್ನಾಕರರಾಯರನ್ನ ತಕ್ಕೊಂಡು ಹೊರಟುಬಿಟ್ಟರು. ನಮ್ಮ ಪರಿಚಯ ಕೂಡಾ ತಮಗಿಲ್ಲದವರಂತೆ ರತ್ನಾಕರರಾಯರು ನಟಿಸಿದರು. ಲಾರಿ ಹೊರಟುಹೋಯಿತು. ದತ್ತೋಬಾ ಮುಂದೆ ಹೋಗಿ ಸಾಹೇಬರಿಗೆ ಸಲಾಂ ಹೊಡೆದ. ಸಾಹೇಬರು ಆತನ್ನ ಕೇಳಿದರು :

'ಯಾಕ ? ಇಂದ ಸರ್ವಿಸ್ ಮ್ಯಾಲ ಹೋಗಿಲ್ಲೇನು ದತ್ತೋಬಾ ?'

'ಇಲ್ಲ ಸಾಹೇಬ್, ಒಂದು ಸ್ಪೇಶಲ್ ಡ್ಯೂಟೀ ಮ್ಯಾಲ ಬಂದೀನಿ. ಮುದ್ದಾಪುರದಿಂದ ಈ ಊರಿಗೆ ಒಂದು ಮ್ಯಾರೆಜ್ ಪಾರ್ಟಿ ಬರೂದಿತ್ತು ! ಅದನ್ನ ಸ್ಪೇಶಲ್ ಬಸ್ಸಿನೊಳಗ ತಗೊಂಡು ಬಂದೀನ್ರಿ !'

'ಹೀಂಗೇನು ? ಎಂದದ ಮ್ಯಾರೇಜು ?'

'ಇಂದನರೀ ! ಇದೇ ಈಗ ಅಕ್ಕೀಕಾಳು ಬಿದ್ದೂ ! ಅದನ್ನ ಮುಗಿಸಿ-ಕೊಂಡು, ಹಾಂಗನ ಇಲ್ಲಿ ಚಹಾ ಕುಡದು ಹೋಗೂಣಂತ, ನಾನೂ ಇವರೂ ಬಂದಿವಿ ! ನಿಮ್ಮ ಕಾರು ನಿಂತ್ಹಾಂಗ ಕಂಡಿತಂತ ನಾವೂ ಇಲ್ಲಿ ತಡೆದು ನಿಂತಿವಿ! ಈಗ ಹಿಡಿದಿರಲ್ಲಾ ಇವರು—ಯಾರ್ರಿ ಇವರು ?'

'ಇವರನ ? ದೊಡ್ಡ ದೇಶಭಕ್ತರಪಾ ಇವರು ! ಪೋಲೀಸರ ಕಣ್ಣಿಗೆ ಇಂಗುಹಚ್ಚಿ ಈಗ ೧೫ ದಿವಸದಿಂದ ಟಂಗು ತಿನಿಸಲಿಕ್ಕೆ ಹತ್ತಿದ್ದರು. ಮುದ್ದಾಪುರದಿಂದ ಬಂದ ನಿಬ್ಬಣದ ಜೋಡೀ ಇದ್ದಾರಂತ ನಮಗ ಸುದ್ದಿ ಹತ್ತಿತಂತ, ಈಗ ಭರತೀ ಮಂಟಪದೊಳಗ ಹೋಗಿ ಮುತ್ತಿಗೀ ಹಾಕಬೇಕಂತ ಹೊರಟಿದ್ದಿವಿ ! ಆದರ ಯಾಕೋ–ಆಸಾಮಿ, ತಾನಾಗೇ ಕೈಗೆ ಸಿಕ್ಕಿ-ಬಿಟ್ಟಿತಲಾ !'

ಸಾಹೇಬರ ಮಾತು ಕೇಳಿದ ಕೂಡಲೆ ದತ್ತೋಬಾ ಹೇಳಿದ :

'ಮುದ್ದಾಪುರದಿಂದ ಬಂದ ನಿಬ್ಬಣದ ಜೋಡಿ ಏನಿರತಾರ್ರೀ ಸಾಹೇ-ಬರ ! ನಿಬ್ಬಣಾ ಕರಕೊಂಡು ಬಂದಂವ ನಾನು ! ನಿಬ್ಬಣದವರ ಜೋಡೀ, ನಿಬ್ಬಣದ ಮನ್ಯಾಗನ ನಾ ಇಳಕೊಂಡೀನಿ ! ಯಾರೋ ನಿಮಗ ಸುಳ್ಳು

ಇನ್‌ಫರ್ಮೇಶನ್ ಕೊಟ್ಟಾರ ನೋಡ್ರಿ! ಇನ್ನೇನು—ಈಗೇನು ಮದಿವೀ ಮಾಡಿಕೊಳ್ಳಲಿಕ್ಕೆ ಬಂದಾರಲ್ಲ—ಈ ರಂಗಣ್ಣಾವರು, ರತ್ನಾಕರರಾಯರು ಇವರೊಳಗ ಗೆಳೆತನ ಇದ್ದದ್ದು ಖರೆ! ಆದರ ರಂಗಣ್ಣಾವರು ಈ ಸತ್ಯಾಗ್ರಹ ಪತ್ಯಾಗ್ರಹ ಮಾಡವರಲ್ಲ! ಹಳ್ಳೀ ಸುಧಾರಿಸೂ ಕೆಲಸಾ ಕೈಕೊಂಡು ಹೊರಟಾರ!'

'ಹೀಂಗೇನು? ಏನರೇ ಆಗಲಿ. ಆಸಾಮಿ ನಮ್ಮ ಕೈಗೆ ಸಿಕ್ಕಿತು. ಥ್ಯಾಂಕ್ಸ್ ದತ್ತೋಬಾ! ನಿನ್ನಿಂದ ನಮಗ ಬಹಾಳ ಉಪಯೋಗ ಆಯ್ತು! ಇಲ್ಲದಿದ್ದರ, ಪಾಪ! ಆ ಮ್ಯಾರೇಜ್ ಪಾರ್ಟಿಗೆ ನಮ್ಮಿಂದ ತೊಂದರಿ ಆಗತಿತ್ತು!' ಅಂತ ಹೇಳಿ ಸಾಹೇಬರು ಕಾರು ತಿರುಗಿಸಿಕೊಂಡು ಆಫೀಸಿಗೆ ಹೊರಟು ಹೋದರು"

ರಂಗಣ್ಣ ದೀರ್ಘವಾಗಿ ನಿಟ್ಟುಸಿರನ್ನು ಹಾಕಿದ. ಆಗಲೇ ದೀನವದನದಿಂದ ಗೋಪಾಲರಾಯರೂ, ಹಿರಿಯತನದ ಮುಖಮುದ್ರೆಯಿಂದ ಅನಂತರಾಯರೂ ಅಲ್ಲಿಗೆ ಬಂದರು. ಅನಂತರಾಯರು ಸಲುಗೆಯ ದನಿಯಲ್ಲಿ ಹೇಳಿದರು :

"ಆಗಬೇಕಾದದ್ದು ಆಗಿ ಹೋಯ್ತು. ಇದೊಂದು ದಿವಸ ದಾಟಿ ಹೋಗಿದ್ದರ ಒಳ್ಳೇದಾಗತಿತ್ತು ಖರೇ! ಬೆರಕೀ ಪೋಲೀಸರು ಹ್ಯಾಂಗ ತಪಾಸ್ ಹಚ್ಚ್ಯಾರೋ ಏನೋ ನೋಡ್ರಿ! ರತ್ನಾಕರರಾಯರೂ ಬಹಳ ಬುದ್ಧಿವಂತರು! ಹ್ಯಾಂಗ ಗದ್ದಲಾ ಏನೂ ಮಾಡದೆ, ಮಂಟಪದೊಳಗಿಂದ ಹೊರಬಿದ್ದು ಹೋಗ್ಯಾರ ನೋಡ್ರಿ! ಆಯ್ತು, ಇನ್ನೇನು ಮಾಡೂದದ? ಮದಿವೀ ಕೆಲಸ! ಮುಂದಿನ ವಿಧಿ-ವಿಧಾನ ಎಲ್ಲಾ ನಡೀಬೇಕು! ಇನ್ನ ಏಳ್ರಿ! ಹೀಂಗs ಕೂತರ ಹೊತ್ತಾಗತದ!"

ಅನಂತರಾಯರ ಮಾತಿನ ಔಚಿತ್ಯವನ್ನರಿತು, ರಂಗಣ್ಣ ಎದ್ದು, ಹಸೆಜಗುಲಿಯ ಕಡೆಗೆ ಹೋದ. ಮಣೆಯ ಮೇಲೆ ಕುಳಿತುಕೊಂಡ. ಕಾವೇರಿಯೂ ಮತ್ತೆ ಬಂದು ಕುಳಿತುಕೊಂಡಳು. ಪುರೋಹಿತರು ವಿವಾಹಹೋಮವನ್ನು ಪ್ರಾರಂಭಿಸಿದರು. ಅಸ್ಖಲಿತ ಮಂತ್ರೋಚ್ಚಾರಣೆ ಪುರೋಹಿತರದು. ಕಾವೇರಿ ಆಗಾಗ ಕಳ್ಳನೋಟಗಳಿಂದ ರಂಗಣ್ಣನ ಗಂಭೀರಮುದ್ರೆಯ ಮುಖವನ್ನು ನಿಟ್ಟಿಸುತ್ತಿದ್ದಳು. ಇಂತಹ ಒಳ್ಳೆಯ ಪತಿ ದೊರೆತಿರುವನೆಂದು ಮನದ ಒಂದು

ಭಾಗ ಸಮಾಧಾನ ಪಡುತ್ತಲಿದ್ದರೆ, ಇಷ್ಟೆಲ್ಲ ಉಪಕಾರಮಾಡಿದ ರತ್ನಾಕರ ನನ್ನು ಆಗಲಬೇಕಾಯಿತಲ್ಲ—ಎಂದು ಇನ್ನೊಂದು ಭಾಗ ಅಸಮಾಧಾನದ ನಿಟ್ಟುಸಿರು ಚೆಲ್ಲುತ್ತಿತ್ತು. ಹೋಮದ ಕಾರ್ಯಕ್ರಮ ನಡೆದಿದ್ದಿತು.

ಕುಮುದೆಗೆ ರತ್ನಾಕರನ ಸುದ್ದಿಯನ್ನು ಇನ್ನಿಷ್ಟು ಕೇಳಬೇಕೆಂದು ಅಪೇಕ್ಷೆ. ಶಂಕರಣ್ಣನಿಂದ ಮತ್ತೆ ಮತ್ತೆ ಅದೇ ಸುದ್ದಿಯನ್ನು ಹೇಳಿಸಿ ಕೇಳುತ್ತಲಿದ್ದಳು. ಶಂಕರಣ್ಣ ಕೊನೆಗೆ ಹೇಳಿದ :

" ನಿಮಗs-ನಿಮ್ಮ ಕೈಯೊಳಗs—ಕೊಡಬೇಕಂತ, ರತ್ನಾಕರರಾಯರು ಒಂದು ಪದಾರ್ಥಾ ನನ್ನ ಕಡೆಗೆ ಕೊಟ್ಟಾರ ! ಹಾದಿಯೊಳಗ ಹೋಗತs ಹೋಗತs ಇರುವಾಗs ಗಡಬಡಿಯಿಂದ ಕೊಟ್ಟರು !"

ಕುತೂಹಲದಿಂದ ಕುಮುದಾ ಕೇಳಿದಳು :

" ಅದೇನು ಪದಾರ್ಥ ?"

ಶಂಕರಣ್ಣ ಜೇಬಿನೊಳಗಿಂದ ಒಂದು ಕರವಸ್ತ್ರವನ್ನು ತೆಗೆದು ಕುಮುದೆಯ ಮುಂದೆ ಇಟ್ಟ. ಇಡುವಾಗಲೇ ಹೇಳಿದ :

" ಈ ಕರವಸ್ತ್ರ ನಿಮ್ಮದs ಅಂತ ಅಲ್ರಿ ! ಇದನ್ನೇನೋ ಅವರಿಗೆ ನೀವು ಕೊಟ್ಟಿದ್ದಿರಂತ ! ' ಜೇಲಿನ ಜೀವನದೊಳಗ, ಇದರದೇನೂ ಉಪಯೋಗ ಆಗೂದಿಲ್ಲ ! ಆದಕ್ಕ, ಸದ್ಯ ಅವರದು ಅವರಿಗೆ ಮುಟ್ಟಿಸಿಬಿಡು ! ಅವರ ಹತ್ತರವೇ ಇದು ಇದ್ದು ಬಿಡಲಿ !' ಅಂತ ಹೇಳಿ, ಇದನ್ನ ನನ್ನ ಕಡೆ ಕೊಟ್ಟರರಿ !"

ಕುಮುದೆಯ ಕಂಠ ಒಮ್ಮೆಲೆ ಬಿಗಿದು ಬಂದಿತು. ಅವಳಿಗೆ ಗಟ್ಟಿಯಾಗಿ ಅತ್ತುಬಿಡಬೇಕೆನಿಸಿತು. ಈ ಮಂಟಪದಿಂದ ದೂರ—ಬಹುದೂರ—ಎಲ್ಲಿಗಾದರೂ ಹೊರಟುಹೋಗಬೇಕೆಂಬ ವಿಚಾರ ಮೂಡಿತು. ಆಗಲೇ ಪುರೋಹಿತರು ಹೇಳಿದರು :

" ಗಂಡಿನ ಕಡೆಯ ಕಳಸಗಿತ್ತಿನ್ನ ಕರೀರಿ !"

ವೇಣಕ್ಕ ಕರೆದರು :

"ಕುಮುದಾ ! ಕುಮುದಾ !"

ಬಂದ ದುಃಖವನ್ನು ನುಂಗಿಕೊಂಡು ಕುಮುದಾ, ಹಸೆಜಗುಲಿಯ ಬಳಿ ಹೋದಳು. ಪುರೋಹಿತರು ವಧೂವರರಿಗೆ ಆರತಿಮಾಡುವಂತೆ ಹೇಳಿದರು. ಕಾವೇರಿಯ ತಂಗಿಯೊಂದಿಗೆ ಕುಮುದಾ ಆರತಿಯನ್ನು ತೆಗೆದುಕೊಂಡಳು. ತಾಸೇ-ಬಜಂತ್ರಿ ಮೊರೆಯತೊಡಗಿದುವು. ಮುತ್ತೈದೆಯರಿಬ್ಬರು, ಜೊತೆ-ಗೂಡಿ ಆರತಿಯ ಹಾಡು ಹೇಳಲು ತೊಡಗಿದರು :

"ರಂಗಧಾಮನ ನೋಡಿರೇ—ಜಯ-ಮಂಗಲಾರತಿ ಪಾಡಿರೇ !
ಮಂಗಲಾಂಗಿ ರಾಧಾರಮಣಿಯ ಸುಖ-
ಸಂಗಮಗೊಂಡಿಹ ನೋಡಿರೆ !
ರಂಗಧಾಮನ ನೋಡಿರೇ—ಜಯ-ಮಂಗಲಾರತಿ ಪಾಡಿರೆ ! "

ಕುಮುದಾ, ಕಾವೇರಿ-ರಂಗಣ್ಣರಿಗೆ ಆರತಿಬೆಳಗುತ್ತಿದ್ದಳು. ರಂಗಣ್ಣ ದೈನ್ಯದಷ್ಟಿಗಳಿಂದ ಕುಮುದೆಯನ್ನು ನಿಟ್ಟಿಸುತ್ತಲಿದ್ದ.

ಓಂ ಶಾಂತಿಃ ಶಾಂತಿಃ ಶಾಂತಿಃ !

# 'ಆನಂದಕಂದ'ರ ಬೇರೆ ಗ್ರಂಥಗಳು

### ಕವನಸಂಕಲನ

ಮುದ್ದಣನಮಾತು
ಅರುಣೋದಯ
ವಿರಹಿಣಿ
ಒಡನಾಡಿ
ಕಾರಹುಣ್ಣಿವೆ

### ಕಥಾಸಂಕಲನಗಳು

ಬಡತನದಬಾಳು
ಸಂಸಾರ ಚಿತ್ರ
ನಮ್ಮ ಬದುಕು
ಮಾತನಾಡುವ ಕಲ್ಲು

### ಕಾದಂಬರಿಗಳು

ಸುದರ್ಶನ
ರಾಜಯೋಗಿ
ಅಶಾಂತಿಪರ್ವ
ಕುಮುದಾ (ಬರಲಿದೆ)

### ಇತರ

ಬೆಳವಡಿ ಮಲ್ಲಮ್ಮ (ನಾಟಕ ಸಂಕಲನ)
ಭಾಗೀರಥಿ (ಸಂಗೀತರೂಪಕ)
ಬೆಂದ ಹೃದಯ (ಸಾಮಾಜಿಕ ರೂಪಕ ಸಂಕಲನ)
ಕರ್ನಾಟಕ ಜನಜೀವನ (ಸಂಸ್ಕೃತಿ ಸಂಶೋಧನ ಗ್ರಂಥ)
ಭಾವಗೀತ (ಭಕ್ತಿಗೀತ ಸಂಕಲನ)
ಶ್ರೀಬಸವಣ್ಣನವರು (ಮಕ್ಕಳಿಗಾಗಿ ಚರಿತ್ರ)
ಹಳ್ಳಿಗರ ಹಾಡುಗಳು (ವಿಮರ್ಶಾತ್ಮಕ ಪ್ರಬಂಧ)

## ಬೇಗನೆ ಪ್ರಕಟವಾಗಲಿರುವ ಗ್ರಂಥಗಳು

ಸಾಮಾಜಿಕನ ಸಂವಚನ (ವಿಚಾರತರಂಗಿಣಿ)
ಜಾನಪದ ಸಾಹಿತ್ಯಮಂಥನ (ವಿಮರ್ಶಾ ಪ್ರಬಂಧಗಳು)
ಸಾಹಿತ್ಯವಿಮರ್ಶೆ (ಪ್ರಬಂಧ ಸಂಕಲನ)
ಸಮಾಜದರ್ಶನ (ಸಾಮಾಜಿಕ ಪ್ರಬಂಧ ಸಂಕಲನ)
ಹೃದಯವೀಣೆ (ಗೀತ ಸಂಕಲನ)